THE BOOK WAS DRENCHED

TEXT PROBLEM WITHIN THE BOOK ONLY

UNIVERSAL LIBRARY
OU_198955
UNIVERSAL LIBRARY

OUP—881—5-8-74—15,000

OSMANIA UNIVERSITY LIBRARY

Call No K83 K9A3 Accession No K 4097

Author

Title

This book should be returned on or before the date last marked below

19 MAR 1987

7 OCT 1983

19 JAN 1993

ಶ್ರೀಮತಿ

# ಶ್ರೀಮತಿ

( ಕಾದಂಬರಿ )

ಆನಂದ್ ಬ್ರದರ್ಸ್
ಬೆಂಗಳೂರು-೨.

ಮೊದಲನೆಯ ಮುದ್ರಣ :   ಆಗಸ್ಟ್ ೧೯೫೨

[All Rights Reserved By the Author]

ಬೆಲೆ :   ೪—೧೨—೦

ಮುದ್ರಣಕಾರರು :

ವಿ. ರಾಮಯ್ಯ ಮತ್ತು ಸೋದರರು

ಶ್ರೀ ಸತ್ಯನಾರಾಯಣ ಪ್ರೆಸ್

೬೩, ಗೌಡನಪೇಟೆ   : :   ಬೆಂಗಳೂರು ೨.

# ಮುನ್ನುಡಿ

ಕನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿ ಉಳಿಯುವ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿಯೂ ಒಂದು ಕನ್ನಡ ಸಾಹಿತ್ಯದ ಸ್ವತಂತ್ರ ಜಾಡು ಹುಡುಕಿ ಕನ್ನಡದ ವೈಶಿಷ್ಟ್ಯವನ್ನು ಕಾಪಾಡುವ ಉದ್ಯಮದಲ್ಲಿ ಕಾದಂಬರಿ ಮಾಡಿರುವ ಸೇವೆ ಗಮನಾರ್ಹವಾದುದು. ಜನತೆಯ ಲಕ್ಷ್ಯವನ್ನು ಕನ್ನಡದತ್ತ ಹೆಚ್ಚುಹೆಚ್ಚಾಗಿ ಸೆಳೆಯುತ್ತಿರುವುದು ಕಾದಂಬರಿಯೇ ಎಂದು ಧಾರಾಳವಾಗಿ ಹೇಳಬಹುದು.

ಈ ದಶಕದಲ್ಲಿ ಕನ್ನಡದ ಕಾದಂಬರಿ ಸಾಧಿಸಿರುವ ಪ್ರಗತಿ ಉಳಿದ ಭಾರತ ಭಾಷಾ ಪ್ರಾಂತ್ಯಗಳ ಪ್ರಗತಿಗೆ ಯಾವ - ವಿಧದಲ್ಲಿಯೂ ಕಡಿಮೆಯಾದುದಲ್ಲ. ಕೆಲವು ಭಾಷಾ ಪ್ರಾಂತ್ಯಗಳ ಕಾದಂಬರಿ ಸಾಹಿತ್ಯದಲ್ಲಿ ಕಂಡು ಬರುವ ಕ್ರಿಯಾ ಸಿದ್ಧಿಗಿಂತಲೂ ಹೆಚ್ಚಿನ ಕ್ರಿಯಾಸಿದ್ಧಿ ಕನ್ನಡದಲ್ಲಿ ಕಂಡುಬರುತ್ತಿದೆಯೆಂದು ಬಹುಭಾಷಾವಿಶಾರದರ ಅಭಿಪ್ರಾಯವಾಗಿದೆ. ಕಾದಂಬರಿಯ ಪ್ರಗತಿ ಸಣ್ಣ ಕಥೆ, ಪ್ರಬಂಧ, ಹರಟೆ, ಭಾವಗೀತೆಗಳ ಪ್ರಗತಿಯನ್ನು ಕುಂಠಿತ ಗೊಳಿಸಿರುವ ವಿಷಯವೂ ನಮ್ಮ ಲಕ್ಷ್ಯದಿಂದ ಮರೆಯಾಗಬಾರದು. ಇದಕ್ಕೆ ಓದುಗರ, ಪ್ರಕಾಶಕರ, ಸಾಹಿತಿಗಳ ಅಭಿರುಚಿಯೇ ಕಾರಣ.

ಕಾದಂಬರಿಯ ಗುರಿಯೇನು? - ಅದು ನಿರ್ದೇಶಿಸುತ್ತಿರುವ ಗುರಿ ಯೋಗ್ಯವಾದುದೆ ಎಂಬ ಪ್ರಶ್ನೆ ಇಂದು ಹಲವರ ಮನಸ್ಸನ್ನು ಕಲಕಿದೆ.

ಕಥಾನಿರೂಪಣೆಯೇ ಕಾದಂಬರಿಯ ಉದ್ದೇಶ ಎಂದು **ಸಾಮರ್ ಸೆಟ್ ಮಾಮ್** ಹೇಳಿದ್ದಾನೆ; ಇತಿಹಾಸದ ಸಜೀವಚಿತ್ರಣವೇ ಕಾದಂಬರಿಯ ಉದ್ದೇಶವೆಂದು **ಟಾಲಸ್ಟಾಯಿನ** ಅಭಿಮತ, ಮನಸ್ಸಿನ ಆಗುಹೋಗುಗಳನ್ನು ಬಗೆಬಗೆಯ ವ್ಯಾಪಾರವನ್ನು ಚಿತ್ರಿಸುವುದು ಕಾದಂಬರಿಯ ಕೆಲಸವೆಂದು **ಸ್ಟೆಂಡ್ಹಾಲ್** ಅಭಿಪ್ರಾಯಪಟ್ಟಿದ್ದಾನೆ; ಚಿತ್ರಫಲಕದ ಮೇಲೆ ಮೂಡುವ ಚಿತ್ರಗಳ ಸಂಗ್ರಹಣವೇ ಕಾದಂಬರಿಯೆಂದು **ಜೇಮ್ಸ್ ಜಾಯ್ಸ್**

ತಿಳಿಸುತ್ತಾನೆ, ರಾಷ್ಟ್ರೋದ್ಯಮದ ವಾಹಕ ಕಾದಂಬರಿಯೆಂದು ಆಧುನಿಕ ರಷ್ಯಾ ಕಾದಂಬರಿಕಾರರ ನಿರ್ಣಯ. ಬೇರೆಬೇರೆ ಸಂಪ್ರದಾಯದವರು ತಮ್ಮ ಮಾರ್ಗವೇ ಸರಿಯೆಂದು ಸ್ಥಾಪಿಸಲು ಪ್ರಯತ್ನಿಸಿದ್ದಾರೆ. ಮಾನವನ ನಿರ್ಹೇತುಕ ಜೀವನವನ್ನು ಚಿತ್ರಿಸುವ **ಸಾರ್ತ್ರೆ – ಸಂಪ್ರದಾಯವೂ** ಆಶಾವಾದಿತನವನ್ನು ಎತ್ತಿಹಿಡಿಯುವ **ಅಪ್ಟನ್ ಸಿಂಕ್ಲೇರ್ ಸಂಪ್ರದಾಯವೂ** ಹೋರಾಟ ನಡೆಸುತ್ತಿವೆ.

**ಈ** ಭಿನ್ನಭಿನ್ನ ಮನೋಭಾವದ, ವಾದ ವಿವಾದದ ಸುಳಿಗೆ ಸಿಕ್ಕಿ ಭಾರತೀಯ ಕಾದಂಬರಿಕಾರ ಸಂಧಿಗ್ಧಮನಸ್ಕನಾಗಿದ್ದಾನೆಂದರೆ ತಪ್ಪಾಗಲಾರದು.

ಕಾದಂಬರಿ ಸುಸಂಸ್ಕೃತ ವಿಹಾರಸಾಧನವೆಂದು ಒಪ್ಪಿಕೊಳ್ಳುವುದಕ್ಕೆ ನಾವು ಸಂಕೋಚಪಡಬೇಕಾಗಿಲ್ಲ. ಕಥಾವಸ್ತು ಹಾಗೂ ನಿರೂಪಣೆಯೇ ಕಾದಂಬರಿಯ ಜೀವಜೀವಾಳ. ವಸ್ತು, ತಂತ್ರ ಹಾಲು ಸಕ್ಕರೆಯಂತೆ ಬೆರೆತು ಕೊಳ್ಳಬೇಕು; ರಾಗ - ರಸದಂತೆ ಮೇಳವಿಸಬೇಕು. ಸತ್ಯಾರ್ಥನಿರೂಪಣೆ ಮಾಡುವಾಗ ಅದು ಇತಿಹಾಸವೂ ಆಗುತ್ತದೆ, ಸತ್ಯಾರ್ಥದ ಮನೋಭಾವ ವನ್ನು ಬಿಡಿಸಿಹೇಳುವಾಗ ಮನಃಶಾಸ್ತ್ರವೂ ಆಗುತ್ತದೆ. ಸಾರ್ತ್ರೆಯ ನಿರಾಶಾ ವಾದ, ರಷ್ಯಾ ಕಾದಂಬರಿಕಾರರ 'ಸರ್ಕಾರದ ಬ್ಲೂ - ಬುಕ್' ವಾದ ಮಾತ್ರ ಕಾದಂಬರಿಯ ಕಲಾಕ್ಷೇತ್ರಕ್ಕೆ ಆಗಂತುಕರಾಗುತ್ತವೆ. ಬಾಳಿನಲ್ಲಿ ಹುದುಗಿರುವ ಜೀವಾಣುವನ್ನರಸಿ ಅದನ್ನು ಸೂಕ್ಷ್ಮಗ್ರಾಹಕ ಯಂತ್ರದ ಮೂಲಕ ಲೋಕಕ್ಕೆ ತೋರಿಸುವುದೇ ಪ್ರತಿಯೊಬ್ಬ ಕಲಾವಿದನ ಕರ್ತವ್ಯವಾಗಿರುವಾಗ ಸಾರ್ತ್ರೆಯ ನಿರಾಶಾವಾದವನ್ನೊಪ್ಪಿಕೊಳ್ಳುವುದು ಕಲಾದ್ರೋಹವಾಗುತ್ತದೆ. ಕಲಾವಿದ ನಾದ ಕಾದಂಬರಿಕಾರ ರಾಷ್ಟ್ರಿಕನೂ ಹೌದು - ಅಂತರ - ರಾಷ್ಟ್ರಿಕನೂ ಹೌದು. ರಾಷ್ಟ್ರಚೈತನ್ಯದ ಪ್ರಚೋದನೆಗೆ ಅವನ ಕಲೆ ಮೀಸಲಾಗಬೇಕು. ಆದರೆ ಅವನ ಅಭಿಮಾನ ಅಂಧಶ್ರದ್ಧೆಯ ಪ್ರತೀಕವಾಗಬಾರದು. ತತ್ತ್ವಕ್ಕೆ ಕಲೆ ಯನ್ನು ತೊಡಿಸುವ ದರ್ಜಿಯಲ್ಲ ಕಲಾವಿದ. ಅವನ ಕೃತಿಯಲ್ಲಿ ಪ್ರಾಧಾನ್ಯ ಕಲೆಗೆ - ತತ್ತ್ವ ಗೌಣಸ್ಥಾನದಲ್ಲಿರಬೇಕು. ತತ್ತ್ವಪ್ರಸಾರಕ್ಕೆ ಅವನು ಕಲೆಯನ್ನು ಪಯೋಗಿಸಿಕೊಳ್ಳಬಾರದೆಂದಲ್ಲ, ತತ್ತ್ವಪ್ರಸಾರಕ್ಕಾಗಿಯೇ ಅವನು ಕಲೆ

ಯನ್ನು ಪಯೋಗಿಕೊಳ್ಳಬಾರದು. ಕಲೆ, ತತ್ತ್ವ ಒಂದಕ್ಕೊಂದು ಹೂವು - ಪರಿಮಳದಂತೆ ಹೊಂದಿಕೊಳ್ಳಬೇಕು.

ಕಲೆ, ತತ್ತ್ವದ ಮಧುರ ಸಮ್ಮಿಳನವನ್ನು ಸಾಧಿಸಲು ನನ್ನ ಕಾದಂಬರಿಗಳು ಪ್ರಯತ್ನಿಸಿವೆ. ಆ ಪ್ರಯತ್ನ '**ಶ್ರೀಮತಿ**'ಯಲ್ಲಿ ಒಂದು ವಿಶಿಷ್ಟರೂಪ ತಳೆದಿರುವುದನ್ನು ಓದುಗರು ಕಾಣಬಹುದು.

ಪ್ರಾಚೀನ ಇತಿಹಾಸ ಹೇಗೆ ಕಾದಂಬರಿಗೆ ವಸ್ತುವಾಗಬಲ್ಲುದೋ ಹಾಗೆಯೇ ಅರ್ವಾಚೀನ ಇತಿಹಾಸವೂ ವಸ್ತುವಾಗಬಲ್ಲುದು. '**ಶ್ರೀಮತಿ**' ಯಲ್ಲಿ ನಮ್ಮ ರಾಷ್ಟ್ರದ ಅರ್ವಾಚೀನ ಇತಿಹಾಸದ ಒಂದು ಮುಖ್ಯ ಪುಟದ ಕಡೆಗೆ ಓದುಗರ ಲಕ್ಷ್ಯ ಸೆಳೆದಿದ್ದೇನೆ. ಪೂರ್ವ - ಪಶ್ಚಿಮಗಳಿಂದ ಬರುತ್ತಿರುವ ಹೊಸ ಹೊಸ ರಾಜಕೀಯ ಸಿದ್ಧಾಂತಗಳು, ಅವುಗಳನ್ನು ಕಾರ್ಯೋನ್ಮುಖ ಮಾಡುತ್ತಿರುವ ರೀತಿನೀತಿಗಳೂ ನಮ್ಮ ಮುಂದೆ ರುದ್ರಲಾಸ್ಯವಾಡುತ್ತಿವೆ. ಎರಡು ಶತಮಾನಗಳ ದಾಸ್ಯ ನೀಗಿಕೊಂಡು ನಾವು ಉಸಿರು ಪಡೆಯುವಷ್ಟರಲ್ಲಿ ಈ ನಾಡನ್ನು ಮತ್ತೆ ರಾಜಕೀಯ ದಾಸ್ಯ, ಆರ್ಥಿಕ ದಾಸ್ಯ, ವಿಚಾರ ದಾಸ್ಯದಲ್ಲಿ ಕೆಡವಬೇಕೆಂದು ಎರಡು ಮಹಾರಾಷ್ಟ್ರಗಳು ಹವಣಿಸುತ್ತಿವೆ. ಕೆಲವು ರಾಷ್ಟ್ರಿಕರೇ ಇವುಗಳಿಗೆ ಸ್ವಾಗತಬಯಸುತ್ತಿದ್ದಾರೆ. ಭಾರತವನ್ನು ಸಂಪೂರ್ಣವಾಗಿ ಕಡೆಗಾಣಿಸಿ ಪರರಾಷ್ಟ್ರಗಳ ಭಟ್ಟಂಗಿಸ್ತುತಿಯಲ್ಲಿ ರಾಜಕೀಯ ಪಕ್ಷವೊಂದು ತೊಡಗಿರುವುದೂ ನಮಗೆ ಸುಪರಿಚಿತವಾಗಿದೆ.

ಭಾರತಜೀವನ ಇಂದು ಅಂತರ - ರಾಷ್ಟ್ರೀಯ ಜೀವನದಲ್ಲಿ ಹಾಸು ಹೊಕ್ಕಾಗಿ ಹೊಂದಿಕೊಂಡಿದೆ. ಅಮೆರಿಕಾ, ರಷ್ಯಾ, ಇಂಗ್ಲೆಂಡ್, ಫ್ರಾನ್ಸ್ ಜೀವನವೂ ಅಂತರ - ರಾಷ್ಟ್ರೀಯ ಜೀವನದೊಂದಿಗೆ ಬೆರೆತುಕೊಂಡಿದೆ. ಅಮೆರಿಕ, ರಷ್ಯಾ, ಫ್ರಾನ್ಸ್, ಇಂಗ್ಲೆಂಡ್ ಈ ಕಾರಣಕ್ಕಾಗಿ ತಮ್ಮ ವ್ಯಕ್ತಿತ್ವವನ್ನು ನೀಗಿಕೊಂಡು ಪರರಾಜ್ಯಕಾರಣದ ಪ್ರಭಾವಕ್ಕೆ ತಮ್ಮನ್ನು ಅರ್ಪಿಸಿಕೊಂಡಿಲ್ಲ. ನಮ್ಮ ನೆಲೆಯನ್ನು, ಬೆಲೆಯನ್ನು ಅರ್ಥಮಾಡಿಕೊಳ್ಳದ ಅಂತರ - ರಾಷ್ಟ್ರೀಯತೆ ಮರೀಚಿಕೆ. ಹೊರಗಿನವರ ಪ್ರಭಾವಕ್ಕೆ ಸಿಲುಕಿ ನಾವು ಭಾರತವನ್ನು ಬಲಿಕೊಡಬಾರದೆಂಬುದೇ '**ಶ್ರೀಮತಿ**' ಕಾದಂಬರಿಯ ಸಂದೇಶ.

ಈ ಕೃತಿ ಬೆಳಕಿಗೆ ಬರಲು ನೆರವಾದ ಮೆಸರ್ಸ್ ಆನಂದ್ ಬ್ರದರ್ಸ್, ಪ್ರಕಾಶಕರಿಗೂ, ಮುಖಚಿತ್ರ ಬರೆದುಕೊಟ್ಟಿರುವ ಕಲಾವಿದ ಶ್ರೀ ರಮೇಶ್ ಅವರಿಗೂ, ಅಂದವಾಗಿ ಮುದ್ರಿಸಿರುವ ಸತ್ಯನಾರಾಯಣ ಮುದ್ರಣಾಲಯದ ಒಡೆಯರಾದ ಶ್ರೀ ವಿ. ರಾಮಯ್ಯನವರಿಗೂ ನನ್ನ ನೆನಕೆ ಸಲ್ಲುತ್ತದೆ.

"ಅನ್ನಪೂರ್ಣ"
ವಿಶ್ವೇಶ್ವರಪುರಂ.
ಬೆಂಗಳೂರು-೪.
೩೧-೮-೧೯೫೨.

# ಶ್ರೀಮತಿ

# ಶ್ರೀಮಂತಿ

೧

ಘಟಿಕೋತ್ಸವ ಮುಗಿದು ಅರ್ಧಗಂಟೆಯಾಗಿತ್ತು. ಸ್ಥಾನಪತಿಗಳು, ಉಪಸ್ಥಾನಪತಿಗಳು, ಮಾನ್ಯ ಅತಿಥಿಗಳು, ವಿಶ್ವವಿದ್ಯಾನಿಲಯದ ಅಧಿಕಾರಿಗಳು, ಸ್ನಾತಕರಿಗೆ ಉಪದೇಶಮಾಡಿದ ಸಭ್ಯಗೃಹಸ್ಥರು ಎಲ್ಲರೂ ಜಗನ್ಮೋಹನ ಬಂಗಲೆ ಬಿಟ್ಟಿದ್ದರು. ವಿದ್ಯಾರ್ಥಿ ವಿದ್ಯಾರ್ಥಿನಿಯರ ತಂಡಗಳು ಆ ಸ್ಥಳ ಬಿಡುವುದನ್ನೇ ನಿರೀಕ್ಷಿಸುತ್ತ ಬಂಗಲೆಯ ಆಳುಗಳು ಆಕಳಿಸುತ್ತಿದ್ದರು. ಪರಸ್ಪರ ಪ್ರಶಂಸೆ, ಮುಂದಿನ ನಿಯೋಜನೆಗಳನ್ನು ಮಾತನಾಡುತ್ತ ವಿದ್ಯಾರ್ಥಿಗಳು ಬಂಗಲೆಯ ಒಳಗೆ, ಹೊರಗೆ ಗುಂಪುಗುಂಪಾಗಿ ನಿಂತಿದ್ದರು. ವಿದ್ಯಾರ್ಥಿಗಳ ಉತ್ಸಾಹಪೂರಿತ ಓಡಾಟದಲ್ಲಿ ಅವರ ಗೌನುಗಳು ಕರಿಹಕ್ಕಿಗಳ ರೆಕ್ಕೆಗಳಂತೆ ಹಾರಾಡುತ್ತಿದ್ದವು.

ವಿದ್ಯಾರ್ಥಿನಿಯರ ಒಂದು ಗುಂಪು ಸುನಂದೆಯನ್ನು ಸುತ್ತುಗಟ್ಟಿತ್ತು. ಬಿ. ಎ. ಆನರ್ಸ್ ಪರೀಕ್ಷೆಯಲ್ಲಿ ಸುನಂದೆಗೆ ಫಸ್ಟ್‌ಕ್ಲಾಸ್ ಬರುತ್ತದೆಂದು ಎಲ್ಲರೂ ನಿರೀಕ್ಷಿಸಿದ್ದರು. ಅವಳ ಬದಲು ಮೀರಿ ಪುಷ್ಪಂಗೆ ಫಸ್ಟ್‌ಕ್ಲಾಸ್ ಬಂದಿತ್ತು. ತನಗೆ ಫಸ್ಟ್‌ಕ್ಲಾಸ್ ಸಿಕ್ಕಿದ್ದರೆ ಸುನಂದ ಎಷ್ಟು ಸಂತೋಷವಾಗಿರುತ್ತಿದ್ದಳೋ ತನ್ನ ಗೆಳತಿಗೆ ಸಿಕ್ಕಿದ್ದಕ್ಕೂ ಅಷ್ಟೇ ಸಂತೋಷ ತಳೆದಿದ್ದಳು.

ಕಾಲೇಜಿನಲ್ಲಿ ಸುನಂದಾ, ಪುಷ್ಪಂ, ಶಾಂತಾ, ರಾಜಮಣಿ ಇವರ ಗುಂಪು ಪ್ರಸಿದ್ಧವಾಗಿತ್ತು. ಸುನಂದಾ ಒಳ್ಳೆಯ ಡಿಬೇಟರ್ ಎಂದು ಹೆಸರಾಗಿದ್ದಳು, ಪುಷ್ಪಂ ಕರ್ತವ್ಯದಕ್ಷತೆ ಗಂಡಸರನ್ನು ನಾಚಿಸುತ್ತಿತ್ತು; ಶಾಂತಾ ಚೆನ್ನಾಗಿ ವೀಣೆ ನುಡಿಸುತ್ತಿದ್ದಳು, ರಾಜಮಣಿ ಹಾಡುತ್ತಿದ್ದಳು. ಕಾಲೇಜಿನ ವಾದ್ಯಗೋಷ್ಠಿಯ ಕೀರ್ತಿಗೆ ಶಾಂತಾ, ರಾಜಮಣಿಯರೇ ಕಾರಣರಾಗಿದ್ದರು. ಇತರ ವಿದ್ಯಾರ್ಥಿನಿಯರು ಮುಸುಕಿದ ಅಸೂಯೆಯಿಂದ

ಇವರನ್ನು 'ದಿ ಡಿಸ್ಟಿಂಗ್ವಿಷ್ಡ್ ಫೋರ್' (The Distinguished Four) ಎಂದು ಕರೆಯುತ್ತಿದ್ದರು.

ಗೆಳತಿಯರಿಂದ ಪಾರಾಗಿ ಮನೆ ಸೇರಿದರೆ ಸಾಕಲ್ಲಾ ಎಂದು ಸುನಂದಾ ಯೋಚಿಸಿದಳು. ಇಂಥ ಮಹೋತ್ಸವದ ದಿನದ ನೆನಪು ಉಳಿಯುವಂತೆ ಎಲ್ಲರೂ ಜತೆಯಲ್ಲಿ ಕುಳಿತು ಫೋಟೋ ತೆಗೆಸಬೇಕೆಂಬ ಸಲಹೆ ರಾಜಮಣಿ ಯಿಂದ ಬಂದಿತು. ಪುಷ್ಪಂ, ಶಾಂತಾ ಅವಳ ಸಲಹೆಯನ್ನು ಅನುಮೋದಿಸಿ ದರು. ಸುನಂದೆಯ ಮೌನ ಕಂಡು ಪುಷ್ಪಂ

"ನಡೆಯಿರಿ, ಈಗಲೇ ಸ್ಟುಡಿಯೋಗೆ ಹೋಗಿಬರೋಣ."

"ಹೊತ್ತಾಯಿತಲ್ರೀ. ಅಮ್ಮ ಕಾದಿರುತ್ತಾರೆ."

"ಸ್ಟುಡಿಯೋ ಹತ್ತಿರದಲ್ಲೇ ಇದೆ. ಅಲ್ಲಿ ಬಹಳ ಹೊತ್ತೇನೂ ಆಗುವು ದಿಲ್ಲ."

"ನಿಮಗೆ ಯಾವದಾದರೂ ಸ್ಟುಡಿಯೋ ಗುರುತೇನ್ರೀ?"

ಎಂದು ಶಾಂತಾ ಕೇಳಿದಳು.

"ವೀನಸ್ ಸ್ಟುಡಿಯೋ ಗುರುತಿದೆ. ಮೊನ್ನೆ ನಮ್ಮ ಸಂಬಂಧಿ ಗಳೊಬ್ಬರ ಮನೆಯ ಲಗ್ನದಲ್ಲಿ ಅವರೇ ಫೋಟೋ ತೆಗೆದರು."

ಪುಷ್ಪಂ ಎಲ್ಲರನ್ನೂ ವೀನಸ್ ಸ್ಟುಡಿಯೋಗೆ ಕರೆದೊಯ್ದಳು. ನೂತನ ಪದವೀಧರರು ಸ್ಟುಡಿಯೋಗೆ ಮುತ್ತಿಗೆ ಹಾಕಿದ್ದರು. ಸ್ಟುಡಿಯೋ ಯಜಮಾನ ಗೆಳತಿಯರ ಫೋಟೋ ವ್ಯವಸ್ಥೆ ಕೂಡಲೆ ಮಾಡಿದ.

ಪುಷ್ಪಂ, ಸುನಂದಾ ಕುಳಿತುಕೊಳ್ಳಬೇಕೆಂದೂ ಶಾಂತಾ, ರಾಜಮಣಿ ನಿಂತುಕೊಳ್ಳಬೇಕೆಂದೂ ನಿರ್ಧಾರವಾಯಿತು.

ಫೋಟೋ ಕಾರ್ಯಕ್ರಮ ಮುಗಿಯುವ ವೇಳೆಗೆ ಒಂದು ಗಂಟೆ ಯಾಗಿತ್ತು. ಸಂಜೆಗೆ ಎಲ್ಲರೂ ಸುನಂದೆಯ ಮನೆಯಲ್ಲಿ ಸೇರುವುದೆಂದು ನಿಶ್ಚಯಿಸಿ ಗೆಳತಿಯರು ಗೃಹಾಭಿಮುಖರಾದರು.

ಇಂದಿರಮ್ಮನವರು ಮಗಳ ಬರುವನ್ನು ಎದುರು ನೋಡುತ್ತಿದ್ದರು. ಅವಳು ಬಂದಕೂಡಲೆ,

"ಯಾಕಮ್ಮ ಇಷ್ಟು ಹೊತ್ತು?"

"ಎಲ್ಲರೂ ಫೋಟೋ ತೆಗೆಸಬೇಕೆಂದು ಗಲಾಟೆ ಹಚ್ಚಿದರು. ಸ್ಟುಡಿಯೋಗೆ ಹೋಗಿ ಬರಬೇಕಾಯಿತು."

"ಒಳ್ಳೆಯದಾಯಿತು. ನಿನಗೊಂದು ಟೆಲಿಗ್ರಾಂ ಬಂದಿದೆ ಸುನಂದಾ"

"ಟೆಲಿಗ್ರಾಮೇ ?"

ತಾಯಿ ತಂದುಕೊಟ್ಟ ಟೆಲಿಗ್ರಾಂ ಸುನಂದಾ ಒಡೆದು ನೋಡಿದಳು.

"ದೇವರು ಒಳ್ಳೆಯದು ಮಾಡಲಿ. ಬರಲಾಗದಿದ್ದುದಕ್ಕೆ ವಿಷಾದಿಸುತ್ತೇನೆ. ನಿನ್ನ ಬರುವನ್ನು ಎದುರು ನೋಡುತ್ತಿದ್ದೇನೆ"

—ಸುಂದರ.

ಸುನಂದೆಯ ಕಣ್ಣಲ್ಲಿ ಹನಿಗೂಡಿದುದನ್ನು ಕಂಡು ಇಂದಿರಮ್ಮನವರು ಗಾಬರಿಯಾಗಿ

"ಏನಾಯಿತೇ ಸುನಂದಾ, ಯಾರದು ಟೆಲಿಗ್ರಾಂ" ಎಂದು ಕೇಳಿದರು.

"ಅವರದೇಮ್ಮ."

ಎಂದು ಟೆಲಿಗ್ರಾಮಿನ ತಾತ್ಪರ್ಯ ತಾಯಿಗೆ ತಿಳಿಸಿದಳು.

"ಸದ್ಯ ದೇವರ ದಯದಿಂದ ಚೆನ್ನಾಗಿದ್ದಾರಲ್ಲಾ. ಅದಕ್ಕೆ ಕಣ್ಣೀರು ಹಾಕಬೇಕೇ - ಹುಚ್ಚಿ."

"ಇವತ್ತು ಕಾನ್‌ವೊಕೇಷನ್ ಹಾಲಿನಲ್ಲಿ ಎಲ್ಲರೂ ಇದ್ದರು. ಅವರು ಇರಲಿಲ್ಲ."

ಇಂದಿರಮ್ಮನವರು ನಕ್ಕು

"ಏಳು ಊಟಮಾಡು, ಹೊತ್ತಾಯಿತು. ನಿನ್ನ ಸ್ನೇಹಿತೆಯರು ಬಂದುಬಿಡುತ್ತಾರೆ."

ಮಗಳು ಬಿ.ಎ. ಆನರ್ಸ್ ಡಿಗ್ರಿ ತೆಗೆದುಕೊಂಡುದು ಇಂದಿರಮ್ಮನವರಿಗೆ ಪರಮ ಸಂತೋಷವನ್ನುಂಟುಮಾಡಿತ್ತು. ಪತಿಯ ನಿಧನಾನಂತರ ಇಂದಿರಮ್ಮನವರು ಹಲವಾರು ಸಂಕಷ್ಟಗಳನ್ನನುಭವಿಸಿ ಹಣ್ಣಾಗಿದ್ದರು. ದೊಡ್ಡಮಗಳು ಜಾನಕಿಯ ಸಂಸಾರದ ದಾರುಣಕಥೆ ಅವರನ್ನು ಅರೆಜೀವ ಕೊರೆಜೀವ ಮಾಡಿತ್ತು. ಮನೆಯ ಸಮಸ್ತ ಜವಾಬುದಾರಿಯನ್ನು ಹೊತ್ತುಕೊಂಡು, ತಾಯಿ, ತಂಗಿಯರ ಯೋಗಕ್ಷೇಮ ನೋಡಿಕೊಳ್ಳಬೇಕಾಗಿದ್ದ ಹಿರಿಯಮಗ ಚಂದ್ರಶೇಖರ ಇಂಗ್ಲೆಂಡು, ಅಮೇರಿಕಾಗಳಲ್ಲಿ ಅಲೆದಾಡುತ್ತಿದ್ದ. ಇಂದಿರಮ್ಮ

ನವರ ಆಶೆಯ ಗೋಪುರಗಳೆಲ್ಲಾ ನೆಲಕ್ಕುರುಳಿದರೂ ಅವರು ನಿರಾಶಾವಾದಿ ಗಳಾಗಿರಲಿಲ್ಲ. ಸುನಂದೆಯ ಜೀವನವಿಕಾಸ ಅವರ ಆಸಕ್ತಿಯ ಶುಷ್ಕಕಾಷ್ಠ ವನ್ನು ಕೊನರಿಸಿತ್ತು.

ಸುನಂದೆ ಪದವಿ ಪಡೆದ ಸಂಭ್ರಮದ ಗೌರವಾರ್ಥವಾಗಿ ಮನೆಯಲ್ಲಿ ಪಾಯಿಸದ ಅಡಿಗೆ ಮಾಡಿದ್ದರು. ಇಬ್ಬರು ಮಕ್ಕಳನ್ನೂ ಕೂಡಿಸಿ ಬಡಿಸಿ ದರು. ಸುನಂದೆ ಅಕ್ಕನನ್ನು ನೋಡಿ

"ವಿಮಲಾ ಊಟವಾಯಿತೇ ?" ಎಂದು ಕೇಳಿದಳು.

"ಆಯಿತು. ಎಲ್ಲೋ ಆಟಕ್ಕೆ ಹೋಗಿದ್ದಾಳೆ"

"ಜಗದೀಶ. ..."

"ಕಾನ್ವೋಕೇಷನ್‌ಗೆ ಹೋಗುತ್ತೇನೆಂದು ಹೇಳಿಹೋದ. ಅಲ್ಲಿ ನಿನ್ನ ಕಣ್ಣಿಗೆ ಬೀಳಲಿಲ್ಲವೇ ?"

"ಆ ಜನಜಂಗುಳಿಯಲ್ಲಿ ಹೇಗಮ್ಮ ಕಾಣಬೇಕು, ಬಂದಿರಬಹುದು. ಊಟಮಾಡಿ ಹೋದನೇ ?"

"ಅವನಿಗೆ ಮನೆಯೂಟ ಏಕೆ ಬೇಕಮ್ಮ. ಅವನ ಸ್ನೇಹಿತರು ಎಲ್ಲ ಪುಣ್ಯಪುರುಷಾರ್ಥ ತೀರಿಸುತ್ತಾರೆಂದು ಕಾಣುತ್ತದೆ."

ಊಟಮುಂದುವರಿದು ಪಾಯಸದ ಸರದಿ ಬಂತು. ಇಂದಿರಮ್ಮನವರು ಪಾಯಿಸ ತುಂಬಿದ ಎರಡು ಬಟ್ಟಲನ್ನು ತಂದು ಸುನಂದೆ, ಜಾನಕಿಯ ಎಲೆಯ ಮುಂದಿಟ್ಟರು. ಪಾಯಿಸ ರುಚಿ ನೋಡುತ್ತ ಸುನಂದೆಯ ಕಣ್ಣಲ್ಲಿ ನೀರು ಮಿಡಿಯಿತು.

"ನಿನಗೆ ಸ್ವಲ್ಪವೂ ಬುದ್ಧಿಯಿಲ್ಲ ಕಣೆ ಸುನಂದಾ" ಎಂದು ಜಾನಕಿ ನುಡಿದಳು.

"ಏಕಕ್ಕಾ ?"

"ಏಕೆ ಕಣ್ಣೀರು ಹಾಕುತ್ತಿರುವೆ ಹೇಳು ?"

"ಏಕೋ ಕಾಣೆ - ಕಣ್ಣಲ್ಲಿ ನೀರು ಬಂತು."

"ಕಾರಣ ನೀನೂ ಬಲ್ಲೆ - ನಾನೂ ಬಲ್ಲೆ. ಇವತ್ತು ನಿಮ್ಮ ಯಜ ಮಾನರು ಬರಲಿಲ್ಲವೆಂದು ನಿನಗೆ ವ್ಯಥೆ."

"ಅವರು ಬೆಳಿಗ್ಗೆ ಗಾಡಿಗೆ ಬಂದು ಮಧ್ಯಾಹ್ನ ಹೋಗಿದ್ದರೂ ಆಗಿತ್ತು."

"ಏನೋ ಕೆಲಸವೋ ಕಾರ್ಯವೋ ಇರಬಹುದು. ಇಲ್ಲದಿದ್ದರೆ ಬರದೆ ಇರುತ್ತಿದ್ದರೇನೇ ?"

ಎಂದು ಇಂದಿರಮ್ಮನವರು ಅಕ್ಕತಂಗಿಯರ ಮಧ್ಯೆ ಬಾಯಿಹಾಕಿ ನುಡಿದರು.

"ನೀನು ಅವರನ್ನು ವಹಿಸಿಕೊಳ್ಳಬೇಡಮ್ಮ. ಈ ಗಂಡಸರ ಹಣೇ ಬರಹವೇ ಇಷ್ಟು. ಕೈಹಿಡಿದ ಹೆಂಡತಿಯರೂಂದ್ರೆ ಕಾಲಿನ ಕಸದ ಸಮಾನ."

ಎಂದು ಜಾನಕಿ ಕಟುವಾಗಿ ನುಡಿದಳು. ಜಾನಕಿಯ ಮಾತಿಗೆ ಪ್ರತಿ ಹೇಳಿದರೆ ವಿನಾಕಾರಣ ಅಪಶಬ್ದಗಳು ಹೊರಬೀಳಬಹುದೆಂದು ಹೆದರಿ ಇಂದಿರಮ್ಮನವರು

"ನಿನ್ನ ಸ್ನೇಹಿತರು ಎಷ್ಟು ಹೊತ್ತಿಗೆ ಬರುತ್ತಾರೆಯೇ ಸುನೂ ?"

"ನಾಲ್ಕು ಗಂಟೆಗೆ ಬರಬಹುದಮ್ಮ."

"ತಿಂಡಿ ಏನು ಮಾಡಲಿ ?"

"ಏನು ತೋರುತ್ತೋ ಮಾಡಮ್ಮ."

"ಪಾಯಿಸ ಇಟ್ಟಿರುತ್ತೇನೆ. ಜತೆಗೆ ಕೇಸರಿಭಾತ್, ಬೋಂಡ, ಹಣ್ಣು ಸಾಕೋ ?"

"ಕಾಫಿ !"

"ಕಾಫಿ ಇಲ್ಲದಿದ್ದರಾಗುತ್ತದೆಯೇ ? ಅದರ ಮೇಲೇ ನಿಮ್ಮ ಜೀವ. ನೀವು ಓದುವುದೂ ಸಾಕು - ಈ ಕಾಫಿ ಕಾಸಿ ನಿಮಗೆ ಹುಯ್ಯುವುದೂ ಸಾಕು. ಮಂತ್ರಕ್ಕಿಂತ ಉಗುಳು ಹೆಚ್ಚು ಎಂದಹಾಗೆ ನಿಮ್ಮ ಓದಿಗಿಂತ, ಕಾಫಿ ಕುಡಿಯೋದೇ ಹೆಚ್ಚು."

"ಪುಷ್ಪನೆದುರಿಗೆ ಈ ಮಾತು ನೀನಾಡಿದ್ದರೆ ಅವಳು ವ್ಯಾಖ್ಯಕ್ಕೆ ಬಂದು ಬಿಡುತ್ತಿದ್ದಳು."

"ನೀನೇನು ಕಮ್ಮಿ."

"ಸರಿ ಅವಳ ಮುಂದೆ ನಾವೆಲ್ಲಾ ಮಕ್ಕಳು. ನಮ್ಮ ಕಾಲೇಜ್ ಕ್ಯಾಂಟೀನಿಗೆ 'ಪುಷ್ಪ ಕ್ಯಾಂಟೀನ್' ಎಂದು ನಾಮಕರಣ ಮಾಡಿದ್ದೇವೆ.

ಪೌಡರ್ ಹಾಲಿನ ಕಾಫಿ ಕುಡಿಸಿ ಕುಡಿಸಿ ಉಡುಪಿ ವ್ಯಾಸರಾಯ ಓಮಕಿ ಹೋದ."

"ನಿನ್ನ ಯಜಮಾನರು ಇನ್ನೇನು ಬರೆದಿದ್ದಾರೆ ಸುನೂ" ಎಂದು ತಟಕ್ಕನೆ ಜಾನಕಮ್ಮ ಕೇಳಿದಳು.

"ಯಾವಾಗ ಬರುತ್ತೀ ಎಂದು ಬರೆದಿದ್ದಾರೆ."

"ನೀನೇ ಹೋಗಬೇಕಂತೇನು ? ಅವರೇ ಬಂದು ಕರೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲವೇನೋ ?"

ಸುನಂದ ಅಕ್ಕನ ಪ್ರಶ್ನೆಗೆ ಉತ್ತರಕೊಡದೆ ಊಟ ಮುಗಿಸಿಯೆದ್ದಳು. ಇಂದಿರಮ್ಮ ಮಗಳ ಹಿಂದೆಯೇ ಅವಳ ರೂಮಿಗೆ ಹೋದರು. ಸುನಂದ ಅಳುವುದಕ್ಕಾರಂಭಿಸಲು ಇಂದಿರಮ್ಮನವರು ಮಗಳ ಮೈದಡವಿ

"ಜಾನಕಿ ವಿಷಯ ಗೊತ್ತೇಯಿದೆಯಮ್ಮ. ಅವಳು ಆಡಿದ ಮಾತಿಗೆಲ್ಲಾ ಕಣ್ಣೀರು ಹಾಕಿದರೆ ಕೊನೆಮೊದಲೆಲ್ಲಿ ಹೇಳು.''

"ಅವರ ವಿಷಯ ಬಂದಾಗಲೆಲ್ಲಾ ಅಕ್ಕ ಹೀಗೇ ಮಾಡುತ್ತಾಳೆ."

"ಅವರ ವಿಷಯವೇಕೆ - ಯಾರ ವಿಷಯ ಬಂದರೂ ಹೀಗೇ ಅವಳ ಮಾತು. ಯಜಮಾನರಿಗೆ ಕಾಗದ ಬರೆದು ಅವರನ್ನೇ ಬಂದು ಕರೆದುಕೊಂಡು ಹೋಗಿ ಎಂದು ತಿಳಿಸು."

"ಹಾಗೇ ಆಗಲಿ. ಬರೆಯುತ್ತೇನೆ ''

"ಕಣ್ಣು ಒರಸಿಕೊಂಡು ತಲೆಬಾಚಿಕೋ. ನಿನ್ನ ಸ್ನೇಹಿತೆಯರು ಬರುವ ಹೊತ್ತಾಯಿತು. ಮನೆಯ ಮಾತು ಬೀದಿರಂಪ, ಹಾದಿರಂಪವಾಗಬಾರದು.''

"ನೀನು ಊಟಮಾಡು ಹೋಗಮ್ಮ''

"ನೀನು ಸಮಾಧಾನವಾಗಿರುತ್ತೇನೆಂದರೆ ನನ್ನ ಗಂಟಲಲ್ಲಿ ಅನ್ನ ಇಳಿಯುತ್ತದೆ.''

"ಸಮಾಧಾನವಾಗಿರುತ್ತೇನೆ, ಹೋಗಿ ಊಟಮಾಡು.''

ತಾಯಿ ಊಟಕ್ಕೆ ಹೋಗಲು ಸುನಂದ ತನ್ನ ರೂಮು ಸ್ವಚ್ಛಮಾಡಿ, ಗೆಳತಿಯರು ಕೂಡಲು ಎಡೆಮಾಡಿದಳು.

ಜಗದೀಶ ಮನೆಗೆ ಬಂದುದು ಅವನ ಸಿಳ್ಳಿನಿಂದ ಗೊತ್ತಾಗುತ್ತಿತ್ತು. ಬಂದವನು ನೇರವಾಗಿ ಸುನಂದೆಯ ರೂಮಿಗೆ ಬಂದು

"ಇದೇನು ಚಿಕ್ಕಮ್ಮ ಇಷ್ಟೊಂದು ಅಚ್ಚುಗಟ್ಟು. ಚಿಕ್ಕಪ್ಪನವರ ಸವಾರಿ ದಯಮಾಡಿಸುತ್ತೇನು ?"

"ತಮ್ಮ ಸವಾರಿ ಇಷ್ಟುಹೊತ್ತು ಎಲ್ಲಿಗೆ ದಯಮಾಡಿಸಿತ್ತು ?"

"ನಿನ್ನ ಕಾನ್‌ವೊಕೇಷನ್ ಗೌರವಾರ್ಥವಾಗಿ ನನ್ನ ಸ್ನೇಹಿತರು ನನಗೆ ಪಾರ್ಟಿ ಕೊಟ್ಟರು."

"ನೀನೋ ನಿನ್ನ ಪಾರ್ಟಿಯೋ ? ಊಟವಾಯಿತೇನೋ ?"

"ಆಯಿತು ಚಿಕ್ಕಮ್ಮ - ಖಂಡಿತವಾಗಿ ಆಯಿತು."

"ಒಳಗೆ ಹೋಗಿ ಅಮ್ಮನಿಗೆ ಹೇಳು. ಮಾರ್ಕೆಟ್‌ಗೆ ಹೋಗಿ ಸ್ವಲ್ಪ ಹಣ್ಣು, ಹೂವು ತರಬೇಕು. ನನ್ನ ಸ್ನೇಹಿತೆಯರು ಬರುತ್ತಾರೆ."

"ಸ್ನೇಹಿತೆಯರೇ ಬರುವುದು !"

ಜಗದೀಶ ಕೊಂಕುಮೋರೆ ಮಾಡಿದ. ಸುನಂದ ಹುಸಿಮುನಿಸಿನಿಂದ ಅವನನ್ನು ಹೊರಗಟ್ಟಿದಳು.

ನಾಲ್ಕು ಗಂಟೆಗೆ ಮುಂಚಿತವಾಗಿಯೇ ಪುಷ್ಪ ಬಂದಳು. ಅವಳ ಹಿಂದೆಯೇ ಶಾಂತಾ, ರಾಜಮಣಿ ಬಂದರು.

ಪುಷ್ಪನ ಕಣ್ಣು ಗೋಡೆಯ ಮೇಲಿದ್ದ ಸುನಂದ, ಅವಳ ಯಜಮಾನರ ಭಾವಚಿತ್ರದ ಕಡೆ ಹೋಯಿತು. ಚಿತ್ರಕ್ಕೆ ಅಲಂಕೃತವಾಗಿದ್ದ ಹೂವು ಕಂಡು

"ನಿಮ್ಮ ಜನ ಗಂಡನಪೂಜೆ ವರ್ಷಕ್ಕೊಂದೇ ದಿನ ಮಾಡುತ್ತಾರಂತೆ. ಇವತ್ತು ಗಂಡನ ಪೂಜೆಯ ದಿನವೇನು ?"

"ಭೀಮನ ಅಮಾವಾಸ್ಯೆ ಇನ್ನೂ ಬಹಳ ದೂರ ಇದೆ ಕಣ್ರೀ ಪುಷ್ಪಾ"

ಎಂದು ಶಾಂತಾ ಉತ್ತರಿಸಿದಳು.

"ನಮ್ಮ ಸುನಂದನಿಗೆ ನಿತ್ಯ ಭೀಮನ ಅಮಾವಾಸ್ಯೆ ಎಂದು ಕಾಣುತ್ತದೆ."

ಅವಳ ಕುಹಕನುಡಿಗೆ ಸುನಂದೆಯ ಮುಖ ಕೆಂಪೇರಿತು. ತನ್ನ ದುಮ್ಮಾನ ತೋರಗೊಡದೆ ನಸುನಗುತ್ತಾ

"ನಿಮಗೂ ಮದುವೆಯಾಗಲಿ ತಡೆಯಿರಿ. ದಿನಕ್ಕೆ ಎರಡು ಸಲ ನೀವು ಭೀಮನವಮಾವಾಸ್ಯೆ ಮಾಡುತ್ತೀರಿ"

ಎಂದಳು. ಶಾಂತಾ, ರಾಜಮಣಿ ಗೊಳ್ಳೆಂದು ನಕ್ಕರು. ಪುಷ್ಪ ವಿಶೇಷ ಗಾಂಭೀರ್ಯ ಪ್ರದರ್ಶಿಸುತ್ತಾ

"ನಿಮ್ಮದು ಮೆಜಾರಿಟಿ - ನಾನು ಮೈನಾರಿಟಿಯಲ್ಲಿದ್ದೇನೆ. ನಿಮ್ಮ ಹಾಗೆ ನಾನು ಮದುವೆಮಾಡಿಕೊಂಡು ಗಂಡನ ಅಡಿಯಾಳಾದರೆ ತಾನೇ ಮಾತು ?"

"ಮದುವೆಮಾಡಿಕೊಂಡಾಕ್ಷಣ ಗಂಡನ ಅಡಿಯಾಳಾಗಬೇಕೇನು ?" ಎಂದು ಸುನಂದ ಕೇಳಿದಳು.

"ನಿಮ್ಮ ಸಮಾಜವೇ ಹಾಗಿದೆಯಲ್ರೀ. ನಮ್ಮಲ್ಲಿ ಸಮಾನ ಹಕ್ಕುಗಳಿವೆ. ವಿಧುರನಿಗೆ ಪುನರ್ವಿವಾಹದ ಹಕ್ಕಿರುವ ಹಾಗೆ ವಿಧವೆಗೂ ಇದೆ."

"ಹೋಗಲಿ ಬಿಡ್ರಿ. ಸಂತೋಷದ ದಿವಸ ವಿಧುರ ವಿಧವೆ ಮಾತು ಏಕೆ ?" ಎಂದು ರಾಜಮಣಿ ಬೇಸರ ಸೂಚಿಸಿದಳು.

"ನಿಮ್ಮಲ್ಲಿ ದಾಂಪತ್ಯವಿಚ್ಛೇದನ ಹಕ್ಕಿದೆ. ಪುನರ್ವಿವಾಹದ ಅನುಕೂಲವಿದೆ. ಆದರೆ ದಂಪತಿಗಳಲ್ಲಿ ಅನ್ಯೋನ್ಯವಿಲ್ಲದಿರುತ್ತದೆಯೇನು ಪುಷ್ಪಾ. ಅವರೂ ಮನುಷ್ಯರಲ್ಲವೇ ?" ಎಂದು ಶಾಂತಾ ಕೇಳಿದಳು.

"ಸುಲಿಗೆಗೆ ಅವಕಾಶವಾಗದಂಥ ಅನ್ಯೋನ್ಯವಿರುತ್ತದೆ. ನಮ್ಮಲ್ಲಿ ಗಂಡ ಹೆಂಡತಿ ಇಬ್ಬರೂ ಸಂಪಾದಿಸುತ್ತಾರೆ. ಇಬ್ಬರೂ ಸ್ವತಂತ್ರರಾಗಿರುತ್ತಾರೆ."

"ನನ್ನನ್ನು ಪೂರ್ವಕಾಲದ ಪುಟ್ಟಿ ಎಂದು ನೀವು ಹಾಸ್ಯಮಾಡಿದರೂ ಚಿಂತೆಯಿಲ್ಲ. ನಿಮ್ಮ ಸ್ವಾತಂತ್ರ್ಯಭಾವನೆ ನನಗೆ ಅರ್ಥವಾಗುವುದಿಲ್ಲ. ಜೀವನ ನನ್ನ ಕಣ್ಣಿಗೆ ಗಡಿಯಾರದ ಯಂತ್ರ ಇದ್ದಹಾಗೆ. ಅದರ ಒಳಗೆ ಹಲವಾರು ಚಕ್ರಗಳಿರುತ್ತವೆ. ಒಂದೊಂದೂ ಸ್ವತಂತ್ರ. ಆದರೆ ಆ ಚಕ್ರಗಳು ತಮ್ಮ ಸ್ವಾತಂತ್ರ್ಯಭಾವನೆಯನ್ನಡಗಿಸಿಕೊಂಡು ಇತರ ಚಕ್ರಗಳೊಂದಿಗೆ ಸುತ್ತುವುದರಿಂದ ಗಡಿಯಾರ ನಡೆಯುತ್ತದೆ. ನಾನು ಸ್ವತಂತ್ರ - ನನಗೆ ಬೇರೆಯವರ ಸಂಪರ್ಕ ಬೇಡ ಎಂದು ಒಂದು ಚಕ್ರ ಕುಳಿತರೂ ಗಡಿಯಾರ ನಿಂತುಹೋಗುತ್ತದೆ."

"ನೀವು ಕಾಲೇಜಿನಲ್ಲಿ ಓದಿದ್ದು ನಿಸ್ಸಾರ್ಥಕ ಕಣ್ರೀ ಶಾಂತಾ."

"ಕಾಲೇಜಿನಲ್ಲಿ ಓದಿದವರೆಲ್ಲಾ ಇಬ್ಸನ್ನನ ನೋರಾಗಳಾಗಬೇಕೇನು?"

"ಆಗಬಾರದು. ಸೀತಾ, ಸಾವಿತ್ರಿ, ದಮಯಂತಿಯರಾಗಬೇಕು."

"ಅದು ಅಷ್ಟು ಸುಲಭವಲ್ರೀ ಪುಷ್ಪ. ಗಂಡನ ಮೇಲೆ ಕೋಪಿಸಿಕೊಂಡು ನೋರಾನಂತೆ ಮನೆಬಿಟ್ಟು ಹೋಗುವುದು ಸುಲಭ - ಹನ್ನೆರಡು ವರ್ಷ ಸೆರೆಯಲ್ಲಿದ್ದರೂ ಗಂಡನಿಗಾಗಿ ತಪಿಸುವುದು ಕಷ್ಟ. ಗಂಡನ ಸುಖದಲ್ಲಿ, ಅಭ್ಯುದಯದಲ್ಲಿ, ವೈಭವದಲ್ಲಿ ಭಾಗವಹಿಸುವುದು ಸುಲಭ - ಅವನ ಕಷ್ಟದಲ್ಲಿ, ಅವನತಿಯಲ್ಲಿ, ಬಡತನದಲ್ಲಿ ಭಾಗಿಯಾಗುವುದು ಕಷ್ಟ. ಸುಖವನ್ನನುಭವಿಸುವ ದಿಟ್ಟತನದಿಂದಲೇ ಕಷ್ಟವನ್ನೂ ಅನುಭವಿಸುವುದನ್ನು ಕಲಿಸಲು ನಮ್ಮ ಧರ್ಮ, ಸಂಪ್ರದಾಯ ಪ್ರಯತ್ನಪಟ್ಟಿವೆ."

"ನಿಮ್ಮ ದೃಷ್ಟಿಯಲ್ಲಿ ಪುರಾಣಯುಗಕ್ಕಿಂತ ಪ್ರಪಂಚ ಮುಂದಕ್ಕೆ ಹೋಗಿಯೇ ಇಲ್ಲ."

"ಏನು ಹೋಗಿದೆಯೋ - ಎಲ್ಲಿ ಹೋಗಿದೆಯೋ ನಾನಂತೂ ಕಾಣೆನಮ್ಮ."

ಪುಷ್ಪ, ಶಾಂತಾ ಇವರ ಸಂವಾದ ವಿಕೋಪಕ್ಕೆ ಹೋಗಿ ಘರ್ಷಣೆಗೆ ಅವಕಾಶವಾಗಬಹುದೆಂದು ಭಾವಿಸಿ ರಾಜಮಣಿ

"ಇವತ್ತು ಯಾವದಾದರೂ ಸಿನೀಮಾಕ್ಕೆ ಹೋಗೋಣ" ಎಂದಳು.

"ಒಳ್ಳೆಯ ಸಲಹೆ. ಅಲ್ಲಿಗೆ ಇವತ್ತು ನಮ್ಮ ಕಾರ್ಯಕ್ರಮ ಸಮರ್ಪಕವಾಗಿ ಕೊನೆಗಂಡಂತಾಗುತ್ತದೆ. ಚಾಮುಂಡೇಶ್ವರಿಯಲ್ಲಿ ಕಾನನ್ ಮಾಡಿರುವ 'ಡಾಕ್ಟರ್' ಚಿತ್ರವಿದೆ, ಹೋಗೋಣ"

ಎಂದು ಸುನಂದಾ ಅನುಮೋದನೆಯನ್ನಿತ್ತಳು.

"ನಾನು ಅದನ್ನು ನೋಡಿದ್ದೇನಮ್ಮ. ವುಡ್‌ಲ್ಯಾಂಡಿನಲ್ಲಿ ಮೆಹತಾಬ್ ಮಾಡಿರುವ 'ಚಿತ್ರಲೇಖ' ನಡೆಯುತ್ತಿದೆ. ಅದಕ್ಕೆ ಹೋಗೋಣ" ಎಂದು ಪುಷ್ಪ ಸೂಚಿಸಿದಳು.

"ಸಿನೀಮಾಕ್ಕೆ ಹೋಗಲೇಬೇಕೇ?"

ಶಾಂತಾ ಕೇಳಿದ ಪ್ರಶ್ನೆಗೆ ಎಲ್ಲರೂ ಅವಳ ಮುಖ ನೋಡಿದರು. ಸುನಂದಾ ಅವಳನ್ನು ಒಲಿಸಲು

"ಹೋಗೋಣ್ರೀ - ಇವತ್ತೊಂದು ದಿವಸ - ನಾಳೆಯಿಂದ ನಮ್ಮ ದಾರಿಗಳೇ ಬೇರೆಯಾಗುತ್ತವೆ.

"ಅದಕ್ಕೇ ನಾನು ಸಿನೀಮಾ ಬೇಡವೆಂದುದು. ಮನೆಯಲ್ಲಿಯೇ ಸುಖವಾಗಿ ಹರಟೆ ಹೊಡೆದರೆ ಚೆನ್ನಾಗಿರುತ್ತದೆ."

"ಶಾಂತಾ ಹೇಳುವುದೂ ನಿಜ ಕಣ್ರೀ . . ಸಿನೀಮಾ ಇದ್ದೇ ಇದೆ" ಎಂದು ರಾಜಮಣಿ ಅನುಮೋದಿಸಿದಳು. ಎಲ್ಲರೂ ಅಭಿಪ್ರಾಯ ಬದಲಿಸಬೇಕಾಗಿ ಬಂತು. ಶಾಂತಾ ಸೂಚನೆಯಂತೆ ಮನೆಯಲ್ಲಿ ಕುಳಿತು ಹರಟೆ ಹೊಡೆಯುವುದೆಂದು ನಿಶ್ಚಯವಾಯಿತು.

"ಅದಕ್ಕೆ ನನ್ನದು ಒಂದು ಕಂಡಿಷನ್ ಶಾಂತಾ" ಎಂದು ಸುನಂದ ಹೇಳಿದಳು.

"ಏನ್ರೀ ನಿಮ್ಮ ಕಂಡಿಷನ್.'

"ನೀವು ವೀಣೆ ನುಡಿಸಬೇಕು, ರಾಜಮಣಿ ಹಾಡಬೇಕು."

"ವೀಣೆ ಇಲ್ಲವಲ್ಲಾ !"

"ನಾನು ತರಿಸಿಕೊಡುತ್ತೇನೆ."

"ರಾಜಮಣಿ ಹಾಡಲಿ. ಇವತ್ತು ನನ್ನ ವೀಣಾವಾದನ ಬೇಡ್ರೀ. ವೀಣೆ ಮುಟ್ಟಿ ಎಷ್ಟೋ ದಿವಸಗಳಾದವು."

"ವೀಣೆ ಲಕ್ಷ್ಮೀನಾರಣಪ್ಪನವರ ಶಿಷ್ಯರಾಗಿ ನೀವೇ ಹೀಗೆ ಹೇಳಿದರೆ ಗುರುಗಳಿಗೆ ಅಪಮಾನವಮಾಡಿದಂತಾಗುತ್ತದೆ. ಕಾಫಿ ತಂದುಕೊಡುತ್ತೇನೆ."

"ಬರೀ ಕಾಫಿಯೇನ್ರೀ - ಫೀಸ್ಟ್ ಇಲ್ಲವೇನು ?" ಎಂದು ಪುಷ್ಪ ಕೇಳಿದಳು.

"ಕಾಫಿ ಜತೆಗೆ ಏನಾದರೂ ತಿಂಡಿ ಅಮ್ಮ ಮಾಡಿರಬಹುದು" ಎಂದನ್ನುತ್ತಾ ಸುನಂದ ಒಳಗೆ ಜಾರಿದಳು.

ಜಗದೀಶನ ಸಹಾಯದಿಂದ ಸುನಂದ ತಿಂಡಿತಟ್ಟೆಗಳನ್ನು ತಂದು ಗೆಳತಿಯರ ಮುಂದಿಟ್ಟಳು. ಇಂದಿರಮ್ಮನವರೇ ಕಾಫಿಯ ಲೋಟಗಳನ್ನು ತಂದಿಟ್ಟು ಎಲ್ಲರಿಗೂ ಉಪಚಾರ ಹೇಳಿದರು.

ಪುಷ್ಪಂ ಬೋಂಡ ಕೈಗೆತ್ತಿಕೊಂಡು ಮೆಲ್ಲುತ್ತಾ

"ನಿಮ್ಮ ಸಿಸ್ಟರ್ ಬರುವುದಿಲ್ಲವೇನು ?"

"ಇಲ್ಲ - ಅವರಿಗೆ ಮೈಯಲ್ಲಿ ಸರಿಯಾಗಿಲ್ಲ."

"ಯಾವಾಗ ಕೇಳಿದರೂ ಹೀಗೇ ಹೇಳುತ್ತೀರಲ್ರೀ . . ನಮ್ಮ ಜತೆ ಸೇರ ಬಾರದೆಂದು ಅವರ ಸಂಕಲ್ಪವೇನು ?"

"ಹಾಗೇನಿಲ್ಲ" ಎಂದು ಮಾತು ಮರೆಸಲು ಶಾಂತನ ಕಡೆ ತಿರುಗಿ

"ವೀಣೆ ಬಂದಿದೆ ಕಣ್ರೀ. ಈಗ ನೀವು ತಪ್ಪಿಸಿಕೊಳ್ಳುವ ಹಾಗಿಲ್ಲ" ಎಂದಳು. ಶಾಂತ ನಸುನಗುತ್ತಾ

"ಆಗಲಮ್ಮ - ನನ್ನ ಪರೀಕ್ಷೆ ಮಾಡುತ್ತಿರುವಿರಿ - ದೇವರೇ ಗತಿ."

ಉಪಾಹಾರ ಸೇವನೆ ಮುಗಿಯುತ್ತ ಬಂದಿತ್ತು. ಪುಷ್ಪಂ ನಿರ್ದಾಕ್ಷಿಣ್ಯ ವಾಗಿ ಮೂರು ನಾಲ್ಕು ಕಪ್ಪು ಕಾಫಿ ಮುಗಿಸಿ ತೃಪ್ತಿ ವ್ಯಕ್ತಪಡಿಸಿದಳು.

ಕಾಫಿ ತಿಂಡಿಯ, ತಟ್ಟೆ ಲೋಟಗಳನ್ನು ಸುನಂದ ಹೊರಗೆ ಸಾಗಿಸಿ, ಕೈಯಲ್ಲಿ ವೀಳೆಯದೆಲೆ ತಟ್ಟೆ ಹಿಡಿದುಬಂದಳು ಜಗದೀಶ ವೀಣೆಯನ್ನು ತಂದು ಕೋಣೆಯಲ್ಲಿಟ್ಟ.

ಗೆಳತಿಯರು ಬಾಯಿಗೆ ಅಡಿಕೆಹಾಕಿಕೊಂಡು ವೀಳೆಯದೆಲೆಗೆ ಸುಣ್ಣ ಹಚ್ಚತೊಡಗಿದರು. ಪುಷ್ಪಂ ವೀಳೆಯದೆಲೆಗೆ ಕೈ ನೀಡದಿದ್ದುದನ್ನು ಕಂಡು ರಾಜಮಣಿ

"ಏಕೆ ಪುಷ್ಪಂ, ನೀವು ಎಲೆ ಹಾಕಿಕೊಳ್ಳುವುದಿಲ್ಲವೇ ?"

"ಅವರು ಹಾಗೆಲ್ಲಿ ಹಾಕಿಕೊಳ್ಳುತ್ತಾರಮ್ಮಾ ?" ಎಂದು ಶಾಂತಾ ಕೆಣಕಿದಳು.

"ಹಾಗಂದರೆ . . . "

"ಅವರ ಯಜಮಾನರು ಮಡಿಸಿಕೊಟ್ಟರೇ ಅವರು ಹಾಕಿಕೊಳ್ಳು ವುದು ?"

"ಗಂಡ ಹೆಂಡತಿಗೆ ಎಲೆ ಮಡಿಸಿಕೊಡುವುದು ಯಾವ ಸಂಪ್ರದಾಯ ಶಾಂತಾ ! "

"ಅದು ಇಬ್ಸನ್ ಸಂಪ್ರದಾಯ."

ಪುಷ್ಪಂ ಮುಖ ಕೆಂಪೇರಿತು. ಅಸಮಾಧಾನ ವ್ಯಕ್ತಪಡಿಸಿದರೆ ಮಾತು ಬೆಳೆದು ಪರಿಹಾಸ್ಯಕ್ಕೆ ಪುಟಗೊಟ್ಟಂತಾಗುತ್ತದೆಯೆಂದು ಅವಳೂ ನಕ್ಕು ಸುಮ್ಮ ನಾದಳು.

ಸುನಂದ ಮೆಲ್ಲನೆ "ಶಾಂತಾ - ವೀಣೆ ಬಂದಿದೆ" ಎಂದಳು.

ಶಾಂತಾ ಕೈಗೆ ವೀಣೆ ತೆಗೆದುಕೊಂಡು ಶ್ರುತಿಮಾಡಿಕೊಂಡಳು. ಅವಳು ವೀಣೆಯ ಮೇಲೆ ಹಾಕಿದ ಮೀಟು ಕೇಳಿ ಇಂದಿರಮ್ಮನವರು ಬಂದು ಬಾಗಿಲಾಚೆ ಕುಳಿತುಕೊಂಡರು.

ಶಾಂತಾ ನುಡಿಸಲು ಸಿದ್ಧಳಾಗಿ ರಾಜಮಣಿಯ ಕಡೆ ತಿರುಗಿ

"ಯಾವ ಕೀರ್ತನೆ ಹಾಡುತ್ತೀರ್ರೀ ?" ಎಂದಳು.

ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆಂದು ಗ್ರಹಿಸಿದ ರಾಜಮಣಿ ಗಂಟಲು ಸರಿಮಾಡಿಕೊಂಡು ಮಧ್ಯಮಾವತಿ ರಾಗದಲ್ಲಿ 'ವಿನಾಯಕುನಿ' ಕೀರ್ತನೆ ಹಾಡಲಾರಂಭಿಸಿದಳು. ವೀಣೆಯ ಸುಮಧುರನಾದವೈಖರಿಗೆ ರಾಜಮಣಿಯ ಮಂಜುಳಶಾರೀರ ಸೊಗಸಾಗಿ ಹೊಂದಿಕೊಂಡಿತು.

ನಾಲ್ಕಾರು ಕೀರ್ತನೆಗಳಾದ ಮೇಲೆ ಶಾಂತಾ "ಸಾಕೇ ?" ಎಂದು ಕೇಳಿದಳು.

ಹೊಸಲಿನಾಚೆ ಕುಳಿತಿದ್ದ ಇಂದಿರಮ್ಮನವರು "ಎರಡು ದೇವರನಾಮ ನುಡಿಸೇ ತಾಯಿ" ಎಂದರು.

ಹಾಡುವುದಕ್ಕೆ ಹಿಂದೆಗೆಯುತ್ತಿದ್ದ ರಾಜಮಣಿ ಎರಡು ದೇವರನಾಮಗಳಿಗೇ ತೃಪ್ತಳಾಗಲಿಲ್ಲ. ನಾಲ್ಕು ದೇವರನಾಮಗಳಾದುವು, ಎರಡು ಮರಾಠಾ ಭಜನೆಯಾಯಿತು.

ಶಾಂತಾ ವೀಣೆಯನ್ನು ಕೆಳಗಿಳಿಸುತ್ತಾ

"ಹೊತ್ತು ಎಷ್ಟಾಯಿತೋ ?"

"ಹೊತ್ತು ಹೋದುದು ಗೊತ್ತೇ ಆಗಲಿಲ್ರೀ"

ಎಂದು ಸುನಂದ ಉಪಚಾರ ಹೇಳಿದಳು.

"ಇನ್ನು ಹೊರಡಲು ಅಪ್ಪಣೆ ಕೊಡುವಿರಾ ?"

ಎಂದು ರಾಜಮಣಿ ಕೇಳಿದಳು.

ಸುನಂದಾ ಒಳಗೆದ್ದು ಹೋಗಿ. ಕುಂಕುಮದ ಭರಣಿ ತಂದು ಎಲ್ಲರ ಹಣೆಗಿಟ್ಟು ಮುಡಿಯಲು ಹೂವಿತ್ತು, ಫಲ ತಾಂಬೂಲವಿತ್ತಳು. ಸಿರೆತ್ತದೆ ಪುಷ್ಪಂ ಕೂಡ ಹಣೆಗಿಡಿಸಿಕೊಂಡದ್ದನ್ನು ಕಂಡು ಶಾಂತಾ

"ಇದೇನ್ರೀ ಅನ್ಯಾಯ, ಪುಷ್ಪಂ ಜಾತಿ ಕೆಡಿಸುತ್ತಿದ್ದೀರಿ?"

ಎಂದು ಕೇಳಿದಳು ಪುಷ್ಪಂ ಮುಖ ಕೋಪದಿಂದ ಗಂಟಿಕ್ಕಿತು. ಅವಳು ಸಂಯಮ ತಂದುಕೊಂಡು

"ರೋಮಿನಲ್ಲಿದ್ದಾಗ ರೋಮನರಂತಿರಬೇಕಮ್ಮಾ" ಎಂದಳು.

ಗೆಳತಿಯರು ಹೊರಡಲು ಎದ್ದು ನಿಂತರು. ರಾಜಮಣಿ ಮೆಲ್ಲನೆ

"ನಿಮ್ಮದು ಯಾವಾಗ ಪ್ರಯಾಣ ಸುನಂದಾ?"

"ಗೊತ್ತಿಲ್ಲಮ್ಮ, ಎರಡು ಮೂರು ದಿವಸ ಕಳೆದು ಹೊರಡುತ್ತೇನೆ."

"ಹೋಗುವ ಮೊದಲು ನಮ್ಮ ಮನೆಗೆ ಬಂದು ಹೋಗುತ್ತೀರಿ ತಾನೇ!'

"ಬರದೇ - ನಿಮಗೆ ಹೇಳದೇ ಹೋಗುತ್ತೇನೆಯೇ?"

'ಬಯ್, ಬಯ್' ಹೇಳಿ ಎಲ್ಲರೂ ಅಲ್ಲಿಂದ ಹೊರಟರು.

ಗೆಳತಿಯರು ಇದ್ದಷ್ಟು ಕಾಲ ಮನಸ್ಸಿನಿಂದ ಮರೆಯಾಗಿದ್ದ ನಿರ್ವಿಣ್ಣತೆ ಸುನಂದೆಯ ಮನಸ್ಸನ್ನು ಮುತ್ತಿತು. ಇಂದಿರಮ್ಮನವರು ಬಂದು ಮಗಳನ್ನು ಊಟಕ್ಕೆಬ್ಬಿಸಿದರು

"ನನಗೆ ಹಸಿವಿಲ್ಲಮ್ಮ, ಊಟ ಬೇಕಿಲ್ಲ."

"ಸೇರಿದಷ್ಟು ಮಾಡುವೆಯಂತೆ ಏಳು - ಹುಚ್ಚಿ! ಇಷ್ಟು ಸಣ್ಣ ವಿಷಯಕ್ಕೆ ನೀನು ಮನಸ್ಸಿಗೆ ಇಷ್ಟೊಂದು ವ್ಯಥೆ ತಂದುಕೊಂಡರೆ ನಾಳೆ ಸಂಸಾರ ಮಾಡುವುದು ಹೇಗೆ ಹೇಳು?"

ತಾಯಿಯ ಜತೆ ಸುನಂದ ಚರ್ಚಿಸಲು ಇಚ್ಛಿಪಡಲಿಲ್ಲ. ಮರು ಮಾತಾಡದೆ ಎದ್ದು ಹೋಗಿ ಎಲೆಯ ಮುಂದೆ ಕುಳಿತು ಊಟದ ಶಾಸ್ತ್ರ ಮುಗಿಸಿ ತನ್ನ ರೂಮು ಸೇರಿ ವಿಚಾರಪರವಶಳಾದಳು.

ಆಲಸ್ಯದಿಂದ ಹಾಸಿಗೆ ಉರುಳಿಸಿದಳು. ಸುಕ್ಕಾಗಿದ್ದ ಮಗ್ಗಲಾಸಿಗೆಯನ್ನು ಸರಿಪಡಿಸುವುದಕ್ಕೂ ಬೇಸರ. ದೀಪ ತುಂಬಿ ಹಾಸಿಗೆಯ ಮೇಲೆ ಕುಳಿತಳು. ಅನೈಚ್ಛಿಕವಾಗಿ ಅವಳ ಕೈ ಹಾಸಿಗೆಯನ್ನು ನೇವರಿಸಿತು. ದುಃಖ ತುಂಬಿ ಬಂತು. ದಿಂಬಿನ ಮೇಲೆ ತಲೆಯಿಟ್ಟು ಕಣ್ಣೀರು ಸುರಿಸಿದಳು. 'ಇವತ್ತು ಅವರು ಬರಬಾರದಾಗಿತ್ತೇ?' ಎಂದು ಸುನಂದೆಯ ಮನಸ್ಸು ಮೊರೆಯಿಟ್ಟಿತು. ಗಟ್ಟಿಯಾಗಿ ಅತ್ತು ದುಃಖಭಾರವನ್ನು ಅವಳು ಕಡಿಮೆಮಾಡಿಕೊಳ್ಳುವಂತಿರ

ಲಿಲ್ಲ. ತಾಯಿಗೆ ತಿಳಿದು, ಅವರು ಬಂದು ಎಲ್ಲಿ ವಿಚಾರಿಸುವರೋ ಎಂಬ ಭಯ.

ದುಃಖ ಅಳುವಿನ ಗಡಿ ದಾಟಿತು. ಸುನಂದೆ ಹಾಸಿಗೆಯ ಮೇಲೆ ಪವಡಿಸಿ, ತಲೆಯ ಕೆಳಗೆ ಅಂಗೈಕೊಟ್ಟು ವಿಚಾರಮಾಡತೊಡಗಿದಳು.

'ನನಗಿಂತ ಅವರ ವ್ಯಾಸಂಗ - ಲ್ಯಾಬರೇಟರಿ (Laboratory) ದೊಡ್ಡ ದಾಯಿತೇ ?'

ಈ ಪ್ರಶ್ನೆ ಸತತವಾಗಿ ಸುನಂದೆಯ ಮನಸ್ಸಿನಲ್ಲೇಳುತ್ತಿತ್ತು. ಉತ್ತರ ಪಡೆಯದೆ ಪ್ರಶ್ನೆ ಹುಟ್ಟಿದಲ್ಲಿಯೇ ಸಾಯುತ್ತಿತ್ತು

ಸುನಂದೆಯ ನೆನಪು ಮೂರು ವರ್ಷಗಳ ಹಿಂದಕ್ಕೆ ಹೋಯಿತು. ಅದೇ ಅವಳು ಇಂಟರ್‌ಮೀಡಿಯೇಟ್ ಕ್ಲಾಸಿನಲ್ಲಿ ತೇರ್ಗಡೆಹೊಂದಿದ್ದಳು. ಮದುವೆ ಯಾಗಿ ಆರೇ ತಿಂಗಳಾಗಿತ್ತು. ಬೇಸಿಗೆಯ ರಜದಲ್ಲಿ ಪ್ರಸ್ಥದ ಶಾಸ್ತ್ರವೂ ಆಯಿತು. 'ಗಂಡನ ಮನೆಯಲ್ಲಿ ಎರಡು ತಿಂಗಳು ವಾಸವಾಯಿತು.

'ಓದಿದ್ದು ಸಾಕು - ಮಗಳು ಸಂಸಾರಮಾಡಿಕೊಂಡಿರಲಿ' ಎಂದು ಇಂದಿ ರಮ್ಮನವರು ಸ್ಪಷ್ಟವಾಗಿ ಹೇಳಿದ್ದರು.

ಇಂದಿರಮ್ಮನವರು ಹಾಗೆ ಹೇಳುವುದಕ್ಕೆ ಕಾರಣವಿಲ್ಲದಿರಲಿಲ್ಲ.

ಇಂದಿರಮ್ಮನವರ ಯಜಮಾನರು ಪಟ್ಟಾಭಿರಾಮಯ್ಯ ಪೋಲೀಸ್ ಖಾತೆಯಲ್ಲಿದ್ದರೂ ಹಣ ಗಳಿಸಲಿಲ್ಲ. ಅವರ ಸಹೋದ್ಯೋಗಿಗಳು, ಮೇಲಿನ ಅಧಿಕಾರಿಗಳು ಏಕಕಂಠರಾಗಿ 'ನಿಮಗೆ ಪೋಲೀಸ್ ಖಾತೆ ವೈಗೂಡಿ ಬರಲಿಲ್ಲ' ಎಂದು ಹೇಳುತ್ತಿದ್ದರು. ಪಟ್ಟಾಭಿರಾಮಯ್ಯನವರಿಗೂ ಆ ಮಾತು ಅಕ್ಷರಶಃ ನಿಜವೆನಿಸಿತ್ತು. ಪಟ್ಟಾಭಿರಾಮಯ್ಯನವರ ಸತ್ಯಸಂಧತೆ ಇಡಿಯ ಖಾತೆಗೇ ತೊಂದರೆಕೊಡುತ್ತಿತ್ತು. ತಾವಾಗಿಯೇ ಲಂಚಕ್ಕೆ ಕೈಯೊಡ್ಡುವ ಮಾತು ಹಾಗಿರಲಿ - ಮಾಮೂಲನ್ನು ಕೂಡ ಅವರು ಸ್ವೀಕರಿಸುತ್ತಿರಲಿಲ್ಲ. ಖಾತೆಯಲ್ಲಿ ಇಪ್ಪತ್ತು ವರ್ಷ ದುಡಿದಮೇಲೆ ಪಟ್ಟಾಭಿರಾಮಯ್ಯನವರಿಗೆ ಅಸಿಸ್ಟೆಂಟ್ ಸೂಪ ರಿಂಟೆಂಡ್ ಹುದ್ದೆ ಸಿಕ್ಕಿತು.

ಪಟ್ಟಾಭಿರಾಮಯ್ಯನವರ ಸಂಸ್ಕೃತಿಗೆ ಅವರ ಪರಂಪರೆಯೂ ಕಾರಣ ವಾಗಿತ್ತು. ಅವರದು ಚೆನ್ನಾಗಿ ಬಾಳಿ ಬದುಕಿದ ಮನೆ, ಹತ್ತಾರು ಜನಕ್ಕೆ

ಧಾರಾಳವಾಗಿ ಅನ್ನವಿಟ್ಟ ವಂಶ. ಹಿರಿಯರಿಗಿದ್ದ ಅನುಕೂಲವಿರದಿದ್ದರೂ ಹೃದಯವೈಶಾಲ್ಯ ಪಟ್ಟಾಭಿರಾಮಯ್ಯನವರಲ್ಲಿ ರಕ್ತಗತವಾಗಿ ಬಂದಿತ್ತು.

ಸಾಹಿತ್ಯ, ಸಂಗೀತಪ್ರಿಯರಾದ ಪಟ್ಟಾಭಿರಾಮಯ್ಯನವರು ಅವುಗಳಿಗೆ ಹಣವ್ಯಯಮಾಡಲು ಹಿಂದೆಮುಂದೆ ನೋಡುತ್ತಿರಲಿಲ್ಲ. ಖೂನಿ ಮೊಕದ್ದಮೆಯ ತನಿಖೆ ಮುಗಿಸಿಕೊಂಡು ಬಂದು ಫಿರ್ಲೀಪ್ತರಾಗಿ 'ಜೈಮಿನಿ ಭಾರತ' ಹಿಡಿದು ಕೂಡುತ್ತಿದ್ದರು.

ಮಕ್ಕಳಿಗೆ ತಾವು ಆಸ್ತಿಯಿಡುವುದಿಲ್ಲವೆಂದು ಪಟ್ಟಾಭಿರಾಮಯ್ಯನವರಿಗೆ ಗೊತ್ತಿತ್ತು. ತಮ್ಮ ಶಕ್ತಿಮೀರಿ ಅವರಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದು ನಿರ್ಧರಿಸಿದರು. ಜಾನಕಿಯ ಬಗ್ಗೆ ಅವರು ಯೋಚಿಸಲು ಕಾರಣವಿರಲಿಲ್ಲ. ಮದುವೆಯಾಗಿ ಅವಳು ಗಂಡನ ಮನೆಯಲ್ಲಿದ್ದಳು.

ದೊಡ್ಡ ಮಗ - ಚಂದ್ರಶೇಖರ ಡಿಗ್ರಿ ತೆಗೆದುಕೊಂಡ. ಆ ವೇಳೆಗೆ ಪಟ್ಟಾಭಿರಾಮಯ್ಯನವರಿಗೆ ರಿಟೈರ್ ಆಯಿತು. ಇದ್ದ ಒಬ್ಬನೇ ಮಗನ ಭವಿಷ್ಯತ್ತು ಚೆನ್ನಾಗಬೇಕೆಂಬ ಹಂಬಲ ಅವರಲ್ಲಿ ಉತ್ಕಟವಾಯಿತು. ನಾಲ್ವರು ಗೆಳೆಯರು, ಅಭಿಮಾನಿಗಳಲ್ಲಿ ಚರ್ಚೆಮಾಡಿ, ಎರಡು ವರ್ಷಕಾಲ ಮಗನನ್ನು ಆಕ್ಸ್‌ಫರ್ಡ್‌ನಲ್ಲಿಟ್ಟು ಓದಿಸಲು ನಿಶ್ಚಯಿಸಿದರು.

ಯಜಮಾನರ ನಿರ್ಧಾರ ಕೇಳಿ ಇಂದಿರಮ್ಮನವರಿಗೆ ಸಿಡಿಲು ಬಡಿದಂತಾಯಿತು.

"ಇದೇನೊಂದ್ರೆ ನಿಮ್ಮ ಹುಚ್ಚು?"

"ಹುಚ್ಚೇನು ಬಂತೇ?"

"ನಾವು ಅಂದರೇನು, ಮಗನನ್ನು ಲಂಡನ್ನಿಗೆ ಕಳಿಸೋಕಾಂದ್ರೇನು? ಸಾಲಸೋಲಮಾಡಿ ಅವನನ್ನು ಲಂಡನ್ನಿಗೆ ಕಳಿಸಿದರೆ ಸುನಂದೆ ಗತಿಯೇನು? ಅವಳಿಗಿನ್ನೂ ಮದುವೆಯಾಗಬೇಕು."

"ಸಾಲ ಮಾಡುವುದಿಲ್ಲ - ಸುನಂದೆಯನ್ನೂ ಚೆನ್ನಾಗಿ ಓದಿಸಬೇಕೆಂದು ಮಾಡಿದ್ದೇನೆ."

"ದುಡ್ಡು . . . ?"

"ಮನಸ್ಸಿದ್ದಲ್ಲಿ ಮಾರ್ಗವಿದ್ದೇ ಇರುತ್ತದೆ."

"ಮನಸ್ಸಿದೆ - ಆದರೆ ಮಾರ್ಗ?"

"ನನ್ನ ಪೆನ್‌ಷನ್ ಕಮ್ಯೂಟ್ (commute) ಮಾಡಿಕೊಂಡರೆ ನಾಲ್ಕೈದು ಸಾವಿರ ರೂಪಾಯಿ ಸಿಕ್ಕುತ್ತದೆ, ಉಳಿದಷ್ಟಕ್ಕೆ ಹೇಗೋ ಮಾಡಿದ ರಾಯಿತು."

ಗಂಡನ ನಿರ್ಧಾರದ ಮುಂದೆ ತಮ್ಮ ಪ್ರತಿಘೋಷ ನಿಲ್ಲುವುದಿಲ್ಲವೆಂದು ಇಂದಿರಮ್ಮನವರು ತಿಳಿದು ಸುಮ್ಮನಾದರು. ಆದರೆ ಈ ವ್ಯವಸ್ಥೆ ಅವರಿಗೆ ಸ್ವಲ್ಪವೂ ತೃಪ್ತಿಯನ್ನುಂಟುಮಾಡಲಿಲ್ಲ.

"ನಾಳೆ ನಮ್ಮ ಚಂದ್ರಶೇಖರ ಎಂ.ಎ , ಪಿ ಎಚ್ ಡಿ. ಮಾಡಿಕೊಂಡು ಬಂದರೆ ಅವನಿಗೆ ಕಾಲೇಜಿನಲ್ಲಿ ಪ್ರೊಫೆಸರ್‌ಷಿಪ್ ಖಂಡಿತ." ಎರಡು ವರ್ಷ ನಮಗೆ ಸ್ವಲ್ಪ ಕಷ್ಟವಾಗುತ್ತದೆ. ಆದರೇನು ? ನಮ್ಮ ಮಕ್ಕಳಿಗಾಗಿ ನಾವು ಕಷ್ಟಪಡದೆ ಇನ್ನು ಯಾರು ಕಷ್ಟಪಡಬೇಕು."

ಚಂದ್ರಶೇಖರ ಆಕ್ಸ್‌ಫರ್ಡ್ ಶಿಕ್ಷಣ ಪಡೆದು ಬಂದು ತಾಯಿತಂಗಿಯರ ಪೋಷಣೆ ನಿರ್ವಹಿಸಲಿ ಎಂಬುದು ಪಟ್ಟಾಭಿರಾಮಯ್ಯನವರ ಆಕಾಂಕ್ಷೆಯಾಗಿತ್ತು. ತಮ್ಮ ಕಾಲ ಮುಗಿಯುತ್ತ ಬಂದಿದ್ದುದನ್ನು ಗ್ರಹಿಸಿದ ಪಟ್ಟಾಭಿರಾಮಯ್ಯನವರು ಮಗನಿಗಾಗಿ ಆ ಮಹಾತ್ಯಾಗಕ್ಕೆ ಸಿದ್ಧರಾಗಿದ್ದರು.

ಚಂದ್ರಶೇಖರ ಮೊದಲಿನಿಂದಲೂ ತಂದೆಯ ಕಣ್-ಅಸುವಾಗಿದ್ದ. ಅವನ ಸುಂದರವದನ, ವಿಶಾಲನೇತ್ರಗಳು, ಗುಂಗುರು ಕೂದಲು, ತುಸು ದೊಡ್ಡದಾದರೂ ನಸುನೀಳವಾಗಿದ್ದ ಮೂಗು, ಚಾಣಾಕ್ಷಬುದ್ಧಿ ಪಟ್ಟಾಭಿರಾಮಯ್ಯನವರ ಹೃದಯದಲ್ಲಿ ಹೆಮ್ಮೆಯ ತರಂಗಗಳನ್ನೆಬ್ಬಿಸುತ್ತಿತ್ತು. ಮಗ ಒಂದೊಂದು ಕ್ಲಾಸಿನಲ್ಲಿ ತೇರ್ಗಡೆ ಹೊಂದಿದಾಗಲೂ ಮಹಾಸಮಾರಾಧನೆ ಮಾಡಿಸಿ ತಮ್ಮ ನಿಷ್ಕಲ್ಮಷ ಪ್ರೇಮವನ್ನು ನಿರ್ಲಜ್ಜೆಯಿಂದ ಸಾರುತ್ತಿದ್ದರು.

ಮಗ ಆಕ್ಸ್‌ಫರ್ಡಿಗೆ ಪ್ರಯಾಣ ಬೆಳಸಿದ ಒಂದು ವರ್ಷದಲ್ಲಿ ಮತ್ತೊಂದು ದೊಡ್ಡ ಖರ್ಚಿನ ಪ್ರಸಂಗ ಪಟ್ಟಾಭಿರಾಮಯ್ಯನವರಿಗೆ ಒದಗಿತು. ಸುನಂದೆಯ ಮದುವೆ ಇದ್ದಕ್ಕಿದ್ದಂತೆ ನಿಶ್ಚಯವಾಯಿತು.

"ಚಂದ್ರಶೇಖರ ಇಂಗ್ಲೆಂಡಿನಿಂದ ಹಿಂದಿರುಗುವವರೆಗೆ ತಡೆಯಬೇಕೆಂದು ಬೀಗರಿಗೆ ಹೇಳಿಕೊಳ್ಳಬೇಕು"

"ಅವರು ಒಪ್ಪದಿದ್ದರೆ . . . ಈಗಲೇ ಮದುವೆಯಾಗಬೇಕೆಂದು ಅವರು ಸೂಚಿಸಿದುದನ್ನು ಮರೆತಿರೇನು ?"

"ಒಪ್ಪದಿದ್ದರೆ ಬಿಡಲಿ. ಸುನಂದನಿಗೆ ಬೇರೆ ವರ ಹುಡುಕಿದರಾಯಿತು."

"ವರಗಳು ಬೀದಿಯಲ್ಲಿ ಬಿದ್ದಿರುತ್ತವೆಯೋ? ಇದೇಕೆ ಹೀಗೆ ಮಾತಾಡುವಿರಿ. ಅಣಿಯಾದ ಕಡೆ ಬಾಂಧವ್ಯ ಒದಗಿರುವಾಗ ಅದನ್ನು ಬಿಟ್ಟುಕೊಟ್ಟು ಬೇರೆ ಹುಡುಕುವುದು ವಿವೇಕದ ಲಕ್ಷಣವೇ? ಅವರನ್ನು ಸುನಂದಾ ಮೆಚ್ಚಿಕೊಂಡಿದ್ದಾಳೆಂಬುದನ್ನು ಮರೆಯಬೇಡಿ. ನಾವೇ ನಮ್ಮ ಹುಡುಗಿಯ ತಲೆಯ ಮೇಲೆ ಕಲ್ಲು ಎತ್ತಿ ಹಾಕಬಾರದು?"

"ಒಪ್ಪಿದೆ. ನನ್ನ ಏನು ಮಾಡೂಂತ ಹೇಳುತ್ತೀ?"

"ನಾನು ಮೊದಲೇ ಹೇಳಿದೆ: ಮಗನನ್ನು ಇಂಗ್ಲೆಂಡಿಗೆ ಕಳಿಸುವ ಉತ್ಸಾಹದಲ್ಲಿ ನಿಮ್ಮ ಕಿವಿಯ ಮೇಲೆ ನನ್ನ ಮಾತು ಬೀಳಲಿಲ್ಲ."

"ಆದದ್ದೆಲ್ಲಾ ಒಳ್ಳೆಯದಕ್ಕೇ ಆಯಿತು. ಅದನ್ನು ಕಟ್ಟಿಕೊಂಡು ಏನು ಮಾಡುವುದು ಹೇಳು?"

"ಶತಾಯಗತಾಯ ಸುನಂದೆಯ ಮದುವೆ ಮಾಡಿಬಿಡಬೇಕು.'

"ನನ್ನದೇನೂ ಅಭ್ಯಂತರವಿಲ್ಲ. ದುಡ್ಡು . . ."

"ನಾನೊಂದು ಮಾತು ಹೇಳುತ್ತೇನೆ - ಕೇಳುತ್ತೀರೋ?".

"ಹೇಳು."

"ನನಗೆ ಒಳ್ಳೆಯ ಕಾಲದಲ್ಲಿ ಒಡವೆಗಳನ್ನು ಮಾಡಿಸಿಕೊಟ್ಟಿರುವಿರಿ. ನಾವು ಕೊಂಡಾಗ ಸವರ್ಣ ಬೆಲೆ ಹದಿಮೂರು ರೂಪಾಯಿತ್ತು, ಈಗ ಎಂಭತ್ತೈದಾಗಿದೆ. ನನ್ನ ಒಡವೆಗಳನ್ನು ತೆಗೆದುಕೊಳ್ಳಿ. ಚಿನ್ನದ ಒಡವೆಗಳ ಹಾಗೇ ಕಾಣುವ ನಕಲಿ ಒಡವೆಗಳು ಬಂದಿವೆ. ಅವುಗಳನ್ನು ಧರಿಸಿ ನಾನು ಕಾಲ ತಳ್ಳುತ್ತೇನೆ."

ಇಂದಿರಮ್ಮನವರ ಸಲಹೆ ಕೇಳಿ ಪಟ್ಟಾಭಿರಾಮಯ್ಯನವರು ಅವಾಕ್ಕಾದರು. ಆದರೆ ಅದನ್ನು ಕೇಳದೆ ನಿರ್ವಾಹವೇ ಇರಲಿಲ್ಲ. ಅವರ ಮನಸ್ಸನ್ನು ಒಂದು ಚಿಂತಾಕೀಟ ಕೊರೆಯಲಾರಂಭಿಸಿತು.

"ಇದ್ದುದನ್ನೆಲ್ಲಾ ಹೀಗೆ ಖರ್ಚುಮಾಡಿಬಿಟ್ಟರೆ ನಾಳೆ ಇಂದಿರೆಯ ಗತಿಯೇನು?"

ಮರುಕ್ಷಣವೇ ಮನಸ್ಸು ಸಮಾಧಾನ ಹೇಳಿತು. "ಚಂದ್ರಶೇಖರ

ಹಿಂದಿರುಗುವುದಿಲ್ಲವೇ ? ತನ್ನ ತಾಯಿ, ತಂಗಿಯರ ಯೋಗಕ್ಷೇಮ ಅವನು ನೋಡಿಕೊಳ್ಳುತ್ತಾನೆ ”

ಪಟ್ಟಾಭಿರಾಮಯ್ಯನವರು ಹೆಚ್ಚು ವಿಚಾರಮಾಡದೆ ಇಂದಿರಮ್ಮನವರ ಸಲಹೆಯನ್ನೊಪ್ಪಿಕೊಂಡರು. ಸುನಂದೆಯ ಮದುವೆಯೂ ಆಗಿಹೋಯಿತು. ಹೆಂಡತಿಗಾದ ಅನ್ಯಾಯ ಪಟ್ಟಾಭಿರಾಮಯ್ಯನವರ ಕರುಳನ್ನು ಒಳಗೇ ಕತ್ತರಿಸುತ್ತಿತ್ತು. ಎಲ್ಲ ದುಃಖ, ಸಮಸ್ಯೆಗಳೂ ಚಂದ್ರಶೇಖರ ಹಿಂದಿರುಗಿದ ಕೂಡಲೆ ಪರಿಹಾರವಾಗುವವೆಂದು ಅವರು ದೃಢವಾಗಿ ನಂಬಿದ್ದರು

ಮಗನಿಂದ ಕಾಗದ ಬಂದ ದಿನ ಪಟ್ಟಾಭಿರಾಮಯ್ಯನವರಿಗೆ ಮಹೋತ್ಸವ. ಕಾಗದವನ್ನು ತಾವು ಹತ್ತಾರು ಸಲ ಓದಿಕೊಳ್ಳಬೇಕು, ಅಭಿಮಾನದಿಂದ ಹೆಂಡತಿಗೆ ಹತ್ತಾರುಸಲ ಓದಿಹೇಳಬೇಕು. ಇಷ್ಟಕ್ಕೇ ಪಟ್ಟಾಭಿರಾಮಯ್ಯನವರಿಗೆ ತೃಪ್ತಿಯಾಗುತ್ತಿರಲಿಲ್ಲ. ಸಂಜೆ ಪೇಟೆಕಡೆ ಹೋದಾಗ ಕಿಸೆಯಲ್ಲಿ ಕಾಗದ ಇರಲೇಬೇಕು. ಯಾರಾದರೂ ಲೋಕಾಭಿರಾಮವಾಗಿ 'ನಿಮ್ಮ ಮಕ್ಕಳು ಚೆನ್ನಾಗಿದ್ದಾರೆಯೇ ?' ಎಂದು ಕೇಳಿದರೆ ಸಾಕು. ಪಟ್ಟಾಭಿರಾಮಯ್ಯನವರು ಸಾವಕಾಶವಾಗಿ ಅವರಿಗೆ ಮಗನ ಮೇಲೆ ಉಪನ್ಯಾಸಮಾಡಿ, ಪತ್ರವನ್ನು ಮೆಲ್ಲನೆ ಕಿಸೆಯಿಂದ ತೆಗೆದು ಓದುತ್ತಿದ್ದರು ಗಂಡನ ಅವಿವೇಕ, ಅತಿಮೋಹ ಕಂಡು ಇಂದಿರಮ್ಮನವರು ಬೇಸರಗೊಳ್ಳುತ್ತಿದ್ದರು. ಆದರೆ ಗಂಡನ ಮನನ್ನು ನೋಯಿಸುವುದಕ್ಕೆ ಇಂದಿರಮ್ಮನವರಿಗೆ ಧೈರ್ಯವಾಗುತ್ತಿರಲಿಲ್ಲ.

ನಿಂತರೆ ಕುಳಿತರೆ ಪಟ್ಟಾಭಿರಾಮಯ್ಯನವರಿಗೆ ಮಗನ ಧ್ಯಾನ, ಚಿಂತೆ ಒಂದೊಂದು ಸಂಜೆ ಹೊರಗೆ ಹೋಗದೆ ಮನೆಯಲ್ಲಿಯೇ ಕೂಡುತ್ತಿದ್ದರು. ಇಂದಿರಮ್ಮ ಬಂದು ಹರಟೆಗೆ ಜತೆಯಲ್ಲಿ ಕೂಡುತ್ತಿದ್ದರು.

“ಇವತ್ತೇಕೋ ಚಂದ್ರೂ ಕಾಗದವೇ ಬರಲಿಲ್ಲ ನೋಡು ”

“ಕಾಗದ ಬಂದು ಮೂರೇ ದಿವಸವಾಯಿತಲ್ಲಾಂದ್ರೆ. ನಿತ್ಯ ಬರೆಯುವುದಕ್ಕೆ ಅವನಿಗೆ ಪುರಸತ್ತಿರುತ್ತದೆಯೇ ?”

“ನಿಜ . ನೀನು ಹೇಳುವುದು ನಿಜ. ನನ್ನ ಬುದ್ಧಿಗೆ ಮಂಕು ಕವಿಯುತ್ತಿದೆ. ಚಂದ್ರೂ ಎಷ್ಟು ಬೆಳದಿದ್ದಾನೆಯೋ ಏನೋ ?”

“ಒಂದು ವರ್ಷಕ್ಕೆ ಎಷ್ಟು ಬೆಳೆಯಬಹುದು ಹೇಳಿ . . . ಅವನನ್ನು ಒಬ್ಬೊಂಟಿಗನಾಗಿ ಲಂಡನ್ನಿಗೆ ಕಳಿಸಬಾರದಾಗಿತ್ತೇನೋ ಎನ್ನಿಸುತ್ತದೆ.”

"ಜತೆಯಲ್ಲಿ ಯಾರನ್ನು ಕಳಿಸಬೇಕಾಗಿತ್ತು?"

"ಜತೆಮಾಡಿ ಕಳಿಸಬೇಕೆಂದಲ್ಲ. ವಿಲಾಯಿತಿಗೆ ಕಳಿಸುವುದರ ಮುಂಚೆ ಮದುವೆ ಮಾಡಿಬಿಡಬೇಕಾಗಿತ್ತು. ದೂರ ದೇಶ - ಹೊಸ ಹೊಸ ಪರಿಚಯಗಳು - ಯಾವ ಹೊತ್ತಿನಲ್ಲಿ ಏನಾಗುತ್ತದೆಯೋ ಹೇಳುವವರು ಯಾರು?"

"ನನ್ನ ಮಗ ಅಂಥವನಲ್ಲ ಕಣೇ."

ಮಗನ ಪಕ್ಷ ವಹಿಸಿ ವಕೀಲಿ ಮಾಡುವಾಗ ಪಟ್ಟಾಭಿರಾಮಯ್ಯನವರ ಹೃದಯ ಉಬ್ಬುತ್ತಿತ್ತು. ಗಂಡ ಎಷ್ಟೇ ಸಮಾಧಾನಮಾಡಲಿ ಇಂದಿರಮ್ಮನವರಿಗೆ ಒಳಗಿನ ತೊಳಲಾಟ ಪರಿಹಾರವಾಗುತ್ತಿರಲಿಲ್ಲ.

ಚಂದ್ರಶೇಖರನಿಂದ ಬರುತ್ತಿದ್ದ ಕಾಗದಗಳ ಸಂಖ್ಯೆ ಕಡಿಮೆಯಾಗುತ್ತ ಬಂತು. 'ಪರೀಕ್ಷೆಯ ಕಾಲ' ಎಂದು ಒಂದು ಸಲ ಕಾರಣಕೊಟ್ಟಿದ್ದ. ಪಟ್ಟಾಭಿರಾಮಯ್ಯನವರು ಮಗನ ಪರೀಕ್ಷೆ ಮುಗಿಯುವ ದಿನ ಕಾಯುತ್ತ ಅವನ ಕಾಗದವನ್ನು ಚಾತಕಪಕ್ಷಿಯಂತೆ ನಿರೀಕ್ಷಿಸುತ್ತಿದ್ದರು.

ಮಗನ ಕಾಗದ ಬಂದಕೂಡಲೆ ಹೆಂಡತಿಯನ್ನು ಕರೆದು ಅವರೆದುರಿಗೆ ಓದುವುದು ಪಟ್ಟಾಭಿರಾಮಯ್ಯನವರ ಅಭ್ಯಾಸವಾಗಿತ್ತು ಒಂದು ದಿನ ಕಾಗದ ನೋಡಿಕೊಂಡು ಸುಮ್ಮನಾದರು ಅಡಿಗೆಯ ಮನೆಯಲ್ಲಿದ್ದ ಇಂದಿರಮ್ಮನವರಿಗೆ ಅಂಚೆಯಾಳು ಬಂದು ಹೋದುದು ಗೊತ್ತಾಗಲೂ ಇಲ್ಲ. ಮಾರನೆಯ ದಿನದವರೆಗೆ ಪಟ್ಟಾಭಿರಾಮಯ್ಯನವರಿಗೆ ಸ್ವಲ್ಪವೂ ವ್ಯವಧಾನವಿರಲಿಲ್ಲ.

ಮಧ್ಯಾನ್ಹದ ಊಟ ಮುಗಿದಮೇಲೆ ಹೆಂಡತಿಯನ್ನು ಕರೆದು

"ನಿನಗೆ ಹೇಳುವುದು ಮರೆತುಬಿಟ್ಟೆ ಇಂದಿರಾ - ನಿನ್ನೆ ಚಂದ್ರೂ ಕಾಗದ ಬಂದಿತ್ತು."

"ಏನೋ ಬಹಳ ಸಡಗರದಲ್ಲಿ ಓಡಿಯಾಡುತ್ತಿದ್ದಿರಿ. ಹೇಗಿದ್ದಾನಂತೆ?"

"ಆರೋಗ್ಯವಾಗಿದ್ದಾನೆ. ಅಲ್ಲಿ ಚಳಿಗಾಲ ಆರಂಭವಾಗಿದೆಯಂತೆ. ಕೆಲವು ಉಣ್ಣೆಯ ಬಟ್ಟೆಗಳು ಬೇಕೆಂದು ಬರೆದಿದ್ದ."

"ದುಡ್ಡು ಬೇಕೂಂತ ಬರೆದಿದ್ದ ಎಂದು ಸ್ಪಷ್ಟವಾಗಿ ಹೇಳಿ."

"ದುಡ್ಡುಕೊಡದೆ ಬಟ್ಟೆ ಕೊಡುವುದಕ್ಕೆ ಲಂಡನ್ನಿನಲ್ಲಿ ನಮ್ಮ ಚಿಕ್ಕಪ್ಪ ಅಂಗಡಿ ಇಟ್ಟಿದ್ದಾನೆಯೇ?"

"ಎಷ್ಟು ಕಳಿಸಿದಿರಿ?"

"ಒಂದೇ ಸಾವಿರ."

"ಕೈಯಲ್ಲಿ ಬಿಡಿಗಾಸೂ ಇರಲಿಲ್ಲವಲ್ಲಾಂದ್ರೆ - ಏನು ಮಾಡಿದಿರಿ ?"

"ಸೊಸೈಟಿಯಲ್ಲಿ ಸಾಲಕೊಟ್ಟರು."

"ಹೀಗಾದರೆ ಪೂರೈಸುವುದು ಹೇಗೆ ?"

"ಲಂಡನ್ನಿನ ಚಳಿಯೆಂದರೆ ಏನೂಂತ ತಿಳ್ಕೊಂಡಿದ್ದೀ ? ಎಷ್ಟೋ ಜನ ಚಳಿ ತಡೆಯಲಾರದೆ ಸತ್ತುಹೋಗುತ್ತಾರೆ. ಚಂದ್ರೂ ಆರೋಗ್ಯವಾಗಿ ಊರಿಗೆ ಬಂದುಬಿಟ್ಟರೆ ಸಾಕು."

"ಈ ವರ್ಷ ಸುನಂದಾ ಜೂನಿಯರ್ ಇಂಟರಿಂದ ಸೀನಿಯರಿಗೆ ಹೋಗುತ್ತಾಳೆ. ಫೀಸೂ ಹೆಚ್ಚುಮಾಡಿದ್ದಾರಂತೆ."

"ಇದೊಂದು ವರ್ಷ ಹೇಗಾದರೂ ಮಾಡಿ ಓದಿಸೋಣ. ಮುಂದೆ ಅವಳುಂಟು - ಅವಳಣ್ಣ ಉಂಟು."

"ಮದುವೆಯಾದ ಹುಡುಗಿ. ಅದಕ್ಕೊಂದು ಹೊಸ ಸೀರೆ ಕೂಡ ತೆಗೆಸಿಕೊಟ್ಟಿಲ್ಲವಲ್ಲಾಂದ್ರೆ."

"ಬಲ್ಲೆ - ಏನು ಮಾಡುವುದು ಹೇಳು ಈ ವರ್ಷ ಹೇಗಾದರೂ ತಳ್ಳಿಬಿಟ್ಟರೆ ಚಂದ್ರೂ ಬಂದುಬಿಡುತ್ತಾನೆ."

ಚಂದ್ರಶೇಖರನ ಕಾಗದಗಳು ಮತ್ತಷ್ಟು ವಿಳಂಬವಾಗುತ್ತ ಬಂದಿತು. ಅದಕ್ಕೂ ಪಟ್ಟಾಭಿರಾಮಯ್ಯನವರು ಸಮಾಧಾನ ಹೇಳಿಕೊಳ್ಳುತ್ತಿದ್ದರು

"ಚಂದ್ರೂ ಈ ಸಲ ಫಸ್ಟ್-ಇನ್-ಫಸ್ಟ್ ಕ್ಲಾಸ್ ಬರುತ್ತಾನೆ ಕಣೇ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಓದುತ್ತಾ ಇದ್ದಾನೆ. ನಾನು ಬೊಂಬಾಯಿ ತನಕ ಹೋಗಿ ಅವನನ್ನು ಜತೆಯಲ್ಲಿ ಕರೆದುಕೊಂಡು ಬರುತ್ತೇನೆ."

"ಹಾಗೇ ಮಾಡುವಿರಂತೆ"

ಎಂದು ಇಂದಿರಮ್ಮನವರು ಹೇಳುತ್ತಿದ್ದರು. ಗಂಡನ ಆಸೆ, ನಿರೀಕ್ಷೆ, ಕನಸು ಒಮ್ಮೊಮ್ಮೆ ಇಂದಿರಮ್ಮನವರಿಗೆ ಭಯವನ್ನುಂಟುಮಾಡುತ್ತಿದ್ದವು ಕಂಡ ಕಂಡ ದೇವರಿಗೆ ಕೈಮುಗಿದು ಹರಕೆ ಹೊರುತ್ತಿದ್ದರು.

ಪಟ್ಟಾಭಿರಾಮಯ್ಯನವರು ಎರಡು ವರ್ಷಗಳಿಂದ ನಿರೀಕ್ಷಿಸುತ್ತಿದ್ದ ಸುದಿನ ಸಮೀಪಗತವಾಯಿತು. ಚಂದ್ರಶೇಖರ ತಪ್ಪದೆ ಕಾಗದ ಬರೆಯುತ್ತಿದ್ದ. ಆದರೆ ಒಂದು ಕಾಗದದಲ್ಲಿಯೂ ತಾನು ಹಿಂದಿರುಗುವ ಪ್ರಸ್ತಾಪಮಾಡಿರಲಿಲ್ಲ.

ಪಟ್ಟಾಭಿರಾಮಯ್ಯನವರು ಆ ವಿಷಯ ಸೂಚಿಸಿದಾಗಲೂ ಸಮರ್ಪಕವಾದ ಉತ್ತರ ಬರಲಿಲ್ಲ.

ಪಟ್ಟಾಭಿರಾಮಯ್ಯನವರ ಮನಸ್ಸು ಘಾವತಿಗೊಂಡಿತು. ಕೂಡಲೆ ಒಂದು ಕೇಬಲ್‌ಗ್ರ್ಯಾಂ ಕಳಿಸಿ 'ಯಾವಾಗ ಹಿಂದಿರುಗುವೆ - ತಿಳಿಸು' ಎಂದು ಕೇಳಿದರು. ಎರಡು ವಾರಗಳ ತರುವಾಯ ಚಂದ್ರಶೇಖರನಿಂದ ಒಂದು ಏರ್ ಮೇಲ್ ಪತ್ರ ಬಂತು. ಆ ಕಾಗದ ನೋಡಿ ಪಟ್ಟಾಭಿರಾಮಯ್ಯನವರು ಭೂಮಿ ಗಿಳಿದುಹೋದರು.

**"ತೀರ್ಥರೂಪರವರ ಸನ್ನಿಧಿಗೆ. ಅನೇಕ ನಮಸ್ಕಾರಗಳು.**

**ನೀವು ಮೇಲಿಂದ ಮೇಲೆ ಬರೆದ ಕಾಗದಗಳು, ಕೇಬಲ್‌ಗ್ರ್ಯಾಂ ತಲುಪಿ ದವು. ಪರೀಕ್ಷೆ ಮುಗಿದಕೂಡಲೆ ಊರಿಗೆ ಹಿಂದಿರುಗಬೇಕೆಂದು ನಿರ್ಧರಿಸಿದ್ದೆ. ಆದರೆ ನನ್ನ ಸಹಪಾಠಿಗಳೊಬ್ಬರ ತಂದೆ ಅಮೇರಿಕಾದಲ್ಲಿ ಸೆಕ್ಯೂರಿಟಿ ಕೌನ್ಸಿಲ್ ನಲ್ಲಿ ಬಹಳ ದೊಡ್ಡ ಕೆಲಸದಲ್ಲಿದ್ದಾರೆ. ನನ್ನನ್ನು ಅಮೇರಿಕಾಕ್ಕೆ ಕರೆದೊಯ್ದು ತಂದೆಯವರ ಪರಿಚಯಮಾಡಿಕೊಡಬೇಕೆಂದು ಗೆಳೆಯರು ಬಹಳ ಉತ್ಸಾಹಿ ಗಳಾಗಿದ್ದಾರೆ. ಈ ಪರಿಚಯದಿಂದ ನನ್ನ ಭವಿಷ್ಯ ಬಹಳ ಸುಧಾರಿಸುತ್ತದೆ. ನಿಮಗೆ ಈ ಕಾಗದ ತಲುಪುವ ವೇಳೆಗೆ ನಾನು ಅಮೇರಿಕಾ ಮುಟ್ಟಿರುತ್ತೇನೆ. ಅಲ್ಲಿಂದ ನಿಮಗೆ ಕಾಗದ ಬರೆಯುತ್ತೇನೆ. ಊರಿಗೆ ನಾನು ಬೇಗ ಬರಬೇಕೆಂದು ಒತ್ತಾಯ ಮಾಡಬೇಡಿ. ವಿಲಾಯಿತಿ ನನಗೆ ಬಹಳ ಚೆನ್ನಾಗಿ ಒಗ್ಗಿದೆ. ಇಲ್ಲಿನ ಜನ ನನ್ನ ಬಗ್ಗೆ ಬಹಳ ವಿಶ್ವಾಸವಾಗಿದ್ದಾರೆ. ಮಾತೃಶ್ರೀಯವರಿಗೆ ನಮಸ್ಕಾರ ತಿಳಿಸಿ. ಜಾನಕಿ, ಸುನಂದನಿಗ ನನ್ನ ವಿಶ್ವಾಸ ತಿಳಿಸಿ.**

**ಇಂತು " ಚಂದ್ರಶೇಖರ. "**

ತೊಡೆಯ ಮೇಲೆ ಬಿದ್ದಿದ್ದ ಕಾಗದದ ಮೇಲೆ ಪಟ್ಟಾಭಿರಾಮಯ್ಯನವರ ಕಣ್ಣುಗಳಿಂದ ತೊಟತೊಟನೆ ಹನಿಗಳುದುರಿದವು. ಇಂದಿರಮ್ಮ ಗಾಬರಿಯಾಗಿ ಓಡಿಬಂದರು. ಕಾಗದದ ತಾತ್ಪರ್ಯ ಅವರಿಗೆ ಬಿಡಿಸಿ ಹೇಳುವ ವೇಳೆಗೆ ಪಟ್ಟಾಭಿರಾಮಯ್ಯನವರಿಗೆ ಸಾಕುಸಾಕಾಗಿಹೋಯಿತು

"ಅಮೇರಿಕಾದಲ್ಲಿ ಎಷ್ಟು ದಿವಸ ಇರುತ್ತಾನಂತೆ ?"

'ಗೊತ್ತಿಲ್ಲ' ಎನ್ನುವಂತೆ ಪಟ್ಟಾಭಿರಾಮಯ್ಯನವರು ತಲೆಯಲ್ಲಾಡಿಸಿ ದರು.

"ಮಗ ದೊಡ್ಡವನಾದಾಂವ್ರೆ!"

"ಬಹಳ ದೊಡ್ಡವನಾದ."

"ಊರಿಗೆ ಹಿಂದಿರುಗುವ ಇಚ್ಛೆಯೇ ಅವನಿಗಿರುವಂತಿಲ್ಲ. ಅಲ್ಲಿನ ಜನ ಅವನ ಬಗ್ಗೆ ಬಹಳ ವಿಶ್ವಾಸ ತಳೆದಿದ್ದಾರಂತೆ! ವಿಲಾಯಿತಿ ಚೆನ್ನಾಗಿ ಒಗ್ಗಿದೆಯಂತೆ!!"

"ಇಂದಿರಾ, ನಿನ್ನ ಮಾತು ಕೇಳದೆ ನಾನು ಅವಿವೇಕಿಯಾದೆ. ಈ ಮಗ ನಿಮ್ಮನ್ನು ಉದ್ಧಾರಮಾಡುತ್ತಾನೆಂದು ಭಾವಿಸಿ ನಿಮ್ಮ ಕೈಗೆ ಚಿಪ್ಪು ಕೊಟ್ಟೆ - ನಾನು ಪಾಪಿ - ಪಾಪಿ."

"ಛೆ! ಬಿಟ್ಟೆತು ಎನ್ನಿ! ಎಂಥಾ ಮಾತಾಡುತ್ತಿರುವಿರಿ. ನಮಗೆ ಏತಕ್ಕೆ ಕಡಿಮೆಮಾಡಿರುವಿರಿ?" - ಆರು ತಿಂಗಳೋ ವರ್ಷವೋ ಬಿಟ್ಟು ಚಂದ್ರು ಬಂದೇ ಬರುತ್ತಾನೆ. ತನ್ನ ಸ್ಥಳ, ಮನೆ, ತಾಯಿ, ತಂದೆ, ಅಕ್ಕ, ತಂಗಿ ಬಿಟ್ಟು ಯಾವದೋ ದೇಶದಲ್ಲಿರುವುದಕ್ಕೆ ಅವನೇನು ಮೂರ್ಖನೇ?"

"ಬರುತ್ತಾನೆ - ಬರುತ್ತಾನೆ - ಅವನು ಬಂದಾಗ, ಬೊಂಬಾಯಿವರೆಗೆ ಹೋಗಿ ಕರೆದುಕೊಂಡು ಬರುವುದಕ್ಕೆ ನಾನಿರುವುದಿಲ್ಲ."

ಗಂಡನ ಮಾತು ಕೇಳಿ ಇಂದಿರಮ್ಮನವರು ಝುಂಝುರಿಸಿಹೋದರು.

ಕೈತುಂಬ ಕೆಲಸ, ಮೈತುಂಬ ಜವಾಬ್ದಾರಿ ಇಂದಿರಮ್ಮನವರಿಗಿತ್ತು. ಯಜಮಾನರ ನಿರ್ವಿಣ್ಣತೆ ಅವರ ಜೀವನವನ್ನು ಕೊರೆಯುತ್ತ ಬಂದಿತು. ಪಟ್ಟಾಭಿರಾಮಯ್ಯನವರು ಮಗನ ವಿಷಯ ಹೆಚ್ಚು ಮಾತನಾಡುವುದನ್ನು ಬಿಟ್ಟುಬಿಟ್ಟರು.

ಚಂದ್ರಶೇಖರ ಸ್ಯಾನ್‌ಫ್ರಾನ್ಸಿಸ್ಕೋಯಿಂದ ತಂದೆಗೆ ಒಂದು ಏರ್ ಮೇಲ್ ಕಾರ್ಡು ಬರೆದಿದ್ದ. ಹೆಚ್ಚೇನೂ ವಿವರಗಳಿರಲಿಲ್ಲ. ಒಂದೇ ಪಂಕ್ತಿ. 'ಆರೋಗ್ಯವಾಗಿದ್ದೇನೆ' - ಜತೆಯಲ್ಲಿ ತನ್ನ ಫ್ರಿಸ್ಕೋ ವಿಳಾಸ ತಿಳಿಸಿದ್ದ.

ಅಂದೇ ಪಟ್ಟಾಭಿರಾಮಯ್ಯನವರು ಮಗನಿಗೆ ಮಾರುತ್ತರ ಬರೆದು ತಮ್ಮ ಹೃದಯ ತೋಡಿಕೊಂಡರು.

"ಚಿ|| ಚಂದ್ರನಿಗೆ - ಅನೇಕ ಆಶೀರ್ವಾದಗಳು,

ನಿನ್ನ ಕಾರ್ಡು ಕೈಸೇರಿತು. ಅಮೇರಿಕೆಯಿಂದ ನೀನು ವಿಶದವಾಗಿ ಬರೆಯುವೆಯೆಂದು ನಿರೀಕ್ಷಿಸುತ್ತಿದ್ದೆ. ಪ್ರಾಯಶಃ ನಿನಗೆ ಪುರಸತ್ತಾಗಲಿಲ್ಲವೇನೋ?

ನೀನು ಎಲ್ಲಿರುವೆ - ಏನು ಮಾಡುತ್ತಿರುವೆ - ನಿನ್ನ ಯೋಗಕ್ಷೇಮ ನೋಡಿಕೊಳ್ಳುತ್ತಿರುವವರು ಯಾರು ಒಂದೂ ನನಗೆ ಗೊತ್ತಿಲ್ಲ ಸಾವಿರಾರು ಮೈಲಿಗಳಾಚೆ ಇರುವ ನಿನ್ನ ವೃದ್ಧ ತಂದೆ - ತಾಯಿ ಸದಾ ನಿನ್ನ ಧ್ಯಾನ ದಲ್ಲಿರುತ್ತಾರೆಂಬುದನ್ನು ಮರೆಯಬೇಡ.

ಕಳೆದ ತಿಂಗಳು ನೀನು ಊರಿಗೆ ಬಂದುಬಿಡುವೆಯೆಂಬ ಆಸೆಯಿಂದ ಈ ಎರಡು ವರ್ಷ ತಳ್ಳಿಕೊಂಡು ಬಂದೆ ಒಂದೊಂದು ದಿನವೂ ಒಂದೊಂದು ಯುಗವಾಗಿತ್ತು. ನನ್ನ ಕಡೆಗಾಲದಲ್ಲಿ ನೀನು ನನ್ನ ಬಳಿಯಿರಬೇಕೆಂದು ನಾನು ಬಯಸುವುದು ತಪ್ಪೇ?

ನೀನು ಯಾವಾಗ ಹಿಂದಿರುಗುವೆಯೆಂಬುದು ಖಚಿತವಾಗಿ ಗೊತ್ತಿಲ್ಲ ಸದ್ಯಕ್ಕೆ ನೀನು ಹಿಂದಿರುಗುವ ಸಂಭವವಿದೆಯೆಂದು ನನಗನಿಸುವುದಿಲ್ಲ. ಇದು ವರೆಗೆ ನಾನು ನಿನಗೆ ತಿಳಿಯಹೇಳದಿರುವ, ಬರೆಯದಿರುವ ಒಂದೆರಡು ವಿಷಯ ಗಳನ್ನು ತಿಳಿಸಬೇಕಾಗಿದೆ. ಅಪ್ರಿಯವಾದ ವಿಷಯಗಳನ್ನು ಬರೆದೆನೆಂದು ಅಸಮಾಧಾನಪಟ್ಟುಕೊಳ್ಳಬೇಡ. ದಯೆಯಿಟ್ಟು ಈ ಕಾಗದವನ್ನು ಶಾಂತ ವಾಗಿ ನಾಲ್ಕು ಸಲ ಓದಿ ನಿನ್ನ ಅಂತರಾತ್ಮ ಹೇಗೆ ಹೇಳುವುದೋ ಹಾಗೆ ಮಾಡು.

ನಿನ್ನನ್ನು ಆಕ್ಸ್‌ಫರ್ಡಿಗೆ ಕಳಿಸಲು ಹಣಕ್ಕೆ ನಾನೇನು ಮಾಡಿದೆ ಬಲ್ಲೆಯಾ? ನನ್ನ ಪೆನ್‌ಷನ್ ಹಣ ಕಮ್ಯೂಟ್ ಮಾಡಿಕೊಂಡೆ. ಈಗ ನನ್ನ ಕೈಗೆ ಬರುತ್ತಿರುವುದು ಎಂಭತ್ತು ರೂಪಾಯಿ, ಇದರಲ್ಲಿ ನಾನು ಸಂಸಾರ ಮಾಡುತ್ತಿದ್ದೇನೆ. ನಿಮ್ಮ ತಾಯಿಯ ಒಡವೆಗಳನ್ನು ಮಾರಿ ಸುನಂದೆಯ ಮದುವೆ ಮಾಡಿಯಾಯಿತು. ನೀನು ಮಧ್ಯೆಮಧ್ಯೆ ಹಣಕ್ಕೆ ಬರೆಯುತ್ತಿದ್ದೆ ನಾನು ಕಳಿಸುತ್ತಿದ್ದೆ. ನಿಮ್ಮ ತಾಯಿಗೆ ಕೂಡ ಕೆಲವು ಸಲ ಹೇಳುತ್ತಿರಲಿಲ್ಲ. ಅದರ ಸಾಲ ಎರಡೂವರೆ ಸಾವಿರ ಸೊಸೈಟಿಯಲ್ಲಿ ಕೂತಿದೆ.

ನಾನು ಶ್ರೀಮಂತನಲ್ಲವೆಂಬುದು ನಿನಗೆ ತಿಳಿದಿದೆ. ನನ್ನ ತೀರ್ಥ ರೂಪರು ನನಗೆ ಲಕ್ಷಾಂತರ ರೂಪಾಯಿ ಆಸ್ತಿ ಬಿಡಲಿಲ್ಲ ಆದರೆ ಅವರು ನನಗೆ ಬಹಳ ದೊಡ್ಡ ಆಸ್ತಿ ಬಿಟ್ಟುಹೋದರು, - ಅದೇ ಅವರ ದಿವ್ಯವಾದ ಹೆಸರು, ಪರಿಶುದ್ಧ ಜೀವನಾದರ್ಶ. ನಾನು ಪೋಲೀಸ್ ಡಿಪಾರ್ಟಮೆಂಟಿ ನಲ್ಲಿದ್ದರೂ ನನ್ನ ಶೀಲವನ್ನು ಕಾಯ್ದು, ನನ್ನನ್ನ ಒಬ್ಬ ಮನುಷ್ಯನನ್ನಾಗಿ

ಉಳಿಸಿದುದು ಅವರ ನಿರ್ಮಲ ಜೀವನಾದರ್ಶ. ನಾನೂ ಇತರರ ಹಾಗೆ ಲಂಚ, ರುಸುವತ್ತುಗಳಿಗೆ ಕೈಚಾಚಿ ಸಾವಿರಾರು ರೂಪಾಯಿ ಆಸ್ತಿ ಮಾಡಬಹುದಾಗಿತ್ತು. ಆದರೆ ಪರರ ಎಂಜಲಿಗೆ ನಾಲಿಗೆ ಚಾಚಲಿಲ್ಲ. ನಿನಗೆ ಆಸ್ತಿ ಬಿಡುವುದಕ್ಕಿಂತ ಒಳ್ಳೆಯ ಹೆಸರು ಬಿಡುವುದು ಯೋಗ್ಯವೆನಿಸಿತು. ಇಂದು ನಾನು ಲೋಕದ ಮುಂದೆ, ಭಗವಂತನ ಮುಂದೆ ಧೈರ್ಯವಾಗಿ ತಲೆಯೆತ್ತಿಕೊಂಡು ನಿಲ್ಲಬಲ್ಲೆ. ನನ್ನ ಮಗ - ಮೊಮ್ಮಗ - ಅವರ ಮಕ್ಕಳು ಹಾಗೇ ನಿಲ್ಲಬೇಕೆಂದು ನನ್ನ ಆಸೆ. ನೀನು ದೊಡ್ಡ ಹೆಸರು ಗಳಿಸಿಕೊಂಡು, ದೊಡ್ಡ ಪದವಿ ಪಡೆದುಕೊಂಡು ಬಂದ ಮೇಲೂ ನಾಚಬೇಕಾಗಿಲ್ಲ. ನಿನ್ನ ತಂದೆ ಪೋಲೀಸ್ ಇಲಾಖೆಯ ಸಣ್ಣ ನೌಕರನಾಗಿದ್ದರೂ - ಗೌರವಸ್ಥನಾಗಿದ್ದನೆಂಬುದನ್ನು ನೆನಪಿನಲ್ಲಿಡು.

ನೀನು ನಿನ್ನ ತಾಯಿಯನ್ನು ಸರಿಯಾಗಿ ಅರ್ಥಮಾಡಿಕೊಂಡಿರುವೆ ಎಂದು ನನಗನ್ನಿಸುತ್ತಿಲ್ಲ. ಅವಳ ನೆರವು, ತ್ಯಾಗ, ಉದಾತ್ತದೃಷ್ಟಿಯ ಸಹಾಯ ನನಗಿಲ್ಲದಿದ್ದರೆ ನಾನು ನನ್ನ ಶೀಲವನ್ನು ಕಾಪಾಡಿಕೊಳ್ಳುವುದು ದುಸ್ಸಾಧ್ಯವಾಗುತ್ತಿತ್ತು. ಒಂದು ದೃಷ್ಟಾಂತ ಹೇಳುತ್ತೇನೆ ಕೇಳು - ಈಗ್ಗೆ ಬಹಳ ದಿವಸಗಳ ಹಿಂದಿನ ಮಾತು. ನನಗೆ ಮದುವೆಯಾಗಿ ಮೂರು ನಾಲ್ಕು ವರ್ಷವಾಗಿತ್ತು. ಮಧುಗಿರಿಯಲ್ಲಿ ಪೋಲೀಸ್ ಸಬ್ ಇನ್ಸ್ಪೆಕ್ಟರಾಗಿದ್ದೆ. ಮಾಸ್ತಿಯಲ್ಲಿ ಒಂದು ಖೂನಿ ನಡೆಯಿತು. ತನಿಖೆಗೆ ನಾನೇ ಹೋಗಿದ್ದೆ. ಪ್ರಬಲರಾದ ಇಬ್ಬರು ಗೌಡರ ಮನೆತನದ ವ್ಯಾಜ್ಯ - ಪ್ರತೀಕಾರಕ್ಕಾಗಿ ಖೂನಿ ನಡೆದಿತ್ತು. ಆಪಾದಿತನ ಕಡೆಯವರು ಬಂದು ನನಗೆ ಮೂರು ಸಾವಿರ ರೂಪಾಯಿ ಲಂಚ ನೀಡಿದರು. ಕ್ಷಣಕಾಲ ನನ್ನ ಮನಸ್ಸೂ ವಿಲೋಭನೆಗೊಳಗಾಯಿತು. ಮದುವೆಯಾದಾರಭ್ಯ ನನ್ನ ಹೆಂಡತಿಗೆ ಒಂದು ಒಡವೆ ನಾನು ಮಾಡಿಸಿಕೊಟ್ಟಿರಲಿಲ್ಲ. ಅನಾಯಾಸವಾಗಿ ಮೂರು ಸಾವಿರ ರೂಪಾಯಿ ಕೈಗೆ ಬಂದರೆ ಇಂದಿರೆಗೆ ಬೇಕಾದಷ್ಟು ಒಡವೆ ಮಾಡಿಸಬಹುದು ಎಂದುಕೊಂಡೆ. ಒಂದು ದಿನ ಇಂದಿರೆಯನ್ನು ಕೇಳಿದೆ.

'ಇಂದೂ, ನಾಲ್ಕೆಳೆ ಸರ ಮಾಡಿಸಿದರೆ ನಿನ್ನ ಕುತ್ತಿಗೆಗೆ ಒಪ್ಪುವುದಲ್ಲವೇ ?'

ಸ್ತ್ರೀ ಸಹಜವಾದ ಸಂತೋಷ, ಕುತೂಹಲದಿಂದ 'ಮಾಡಿಸುವಿರಾ' ಎಂದಳು.

'ಹೂ - ಸರ ಮಾತ್ರವೇ ಅಲ್ಲ. ನಿನ್ನ ಕೈಯಲ್ಲಿ ಒಂದೇ ಜತೆ ಬಳೆಯಿದೆ. ಅದರ ಜತೆಗೆ ಕೆಂಪಿನ ಬಳೆ ಮಾಡಿಸಬೇಕೆಂದಿದ್ದೇನೆ'

ಅರಳಿದ್ದ ಅವಳ ಮುಖ ತಕ್ಷಣ ಮುದುಡಿಕೊಂಡಿತು-

'ಇಷ್ಟು ಮಾಡಿಸುವುದಕ್ಕೆ ಸಾವಿರಾರು ರೂಪಾಯಿ ಬೇಕು'

'ಹೂ! ಬೇಕು'

'ದುಡ್ಡೆಲ್ಲಿಂದ ತರುವಿರಿ?'

ಮಾಸ್ತಿಯ ಖಾಸಿ ಮೊಕದ್ದಮೆಯನ್ನು ಅವಳಿಗೆ ವಿವರಿಸಿದೆ. ಅವಳ ಮುಖ ಕಪ್ಪಿಟ್ಟಿತು. ಹುಬ್ಬು ಗಂಟು ಹಾಕಿಕೊಂಡು

ನನಗೆ ಒಡವೆ ಬೇಡ' ಎಂದಳು.

ತಪ್ಪಿತಸ್ಥನಂತೆ ಬೆವರಲಾರಂಭಿಸಿ ನಾನು

'ಮೂರು ಸಾವಿರ ದಿನವೂ ಮನೆಯ ಬಾಗಿಲಿಗೆ ಬಂದು ಬೀಳುವುದಿಲ್ಲ ಇಂದೂ. ತಾನಾಗಿ ಬಂದಿರುವ ಲಕ್ಷ್ಮಿಯನ್ನು ದೂಡಬಾರದು.'

'ಇದೆಂಥ ಲಕ್ಷ್ಮಿ - ದರಿದ್ರಲಕ್ಷ್ಮಿ. ಪಾಪದ ಹಣ ಈ ಹೊಸಿಲೊಳಗೆ ಬರಬೇಕಾದ ಅಗತ್ಯವಿಲ್ಲ. ಸತ್ತು ಸ್ವರ್ಗದಲ್ಲಿರುವ ಮಾವನವರ ಆತ್ಮಕ್ಕೆ ನೀವು ಅಪಚಾರಮಾಡಬೇಡಿ. ಕಷ್ಟವೋ ಸುಖವೋ ಮರ್ಯಾದೆಯಾಗಿ ಜೀವನ ಮಾಡೋಣ. ದೇವರು ಕೊಟ್ಟಷ್ಟರಲ್ಲಿ ತೃಪ್ತಿಪಟ್ಟುಕೊಳ್ಳೋಣ. ನಾಲ್ಕು ಒಡವೆ ನಾನು ಹೆಚ್ಚಾಗಿ ಹಾಕಿಕೊಂಡು ಮೆರೆಯದಿದ್ದರೆ ಪ್ರಪಂಚ ಮುಳುಗಿ ಹೋಗುತ್ತದೆಯೇ. ನಾಳೆ ನಮ್ಮ ಜತೆ ಬರುವುದು ನಮ್ಮ ಪುಣ್ಯದ ಫಲವೇ ವಿನಾ ಒಡವೆ ವಸ್ತುಗಳಲ್ಲ'

ಎಂದು ಹೇಳಿ ನನ್ನನ್ನು ದೇವರ ಮುಂದೆ ಎಳೆದೊಯ್ದು 'ಎಂದೆಂದಿಗೂ ಪಾಪದ ಹಣ ಮುಟ್ಟುವುದಿಲ್ಲ' ಎಂದು ಪ್ರಮಾಣಮಾಡಿಸಿದಳು. ತಂದೆಯ ಜತೆಗೆ, ಹೆಂಡತಿಯೂ ನನ್ನ ಗುರುವಾದಳು.

ಇಂದು ನಾನು ನನ್ನ ಗೃಹಲಕ್ಷ್ಮಿಯ ಮೇಲೆ ಹೆಚ್ಚಿನ ಜವಾಬ್ದಾರಿ ಹೊರೆಸಿ, ಸಾಲ ಹೇರಿ ಕಣ್ಣು ಮುಚ್ಚಿಕೊಳ್ಳಬೇಕಾಗಿದೆ.

ನಾನು ನಿನಗೆ ದೊಡ್ಡ ಉಪಕಾರಮಾಡಿರುವೆನೆಂದು ಹೇಳಿಕೊಳ್ಳುವುದಕ್ಕೆ ಈ ಮಾತುಗಳನ್ನು ಬರೆಯುತ್ತಿಲ್ಲ. ನೀನು ಮನೆಯ ಹಿರಿಯಮಗ - ಮನೆಯ ಯಜಮಾನ. ಕರ್ತವ್ಯದ ಕಡೆಗೆ ನಿನ್ನ ಲಕ್ಷ್ಯ ಬೀಳಲಿ ಎಂದು ಬರೆಯು ತ್ತಿದ್ದೇನೆ.

ಚಂದ್ರೂ - ನಾನು ಹಿಂದೆ ಬಾಳಿದಷ್ಟು ದಿನ ಮುಂದೆ ಬಾಳಲಾರೆ. ನನ್ನ ವೃದ್ಧಾಪ್ಯದಲ್ಲಿ ನನ್ನ ಮಗ ಹತ್ತಿರವಿರಬೇಕೆಂದು ನಾನು ಬಯಸುವುದು ತಪ್ಪೇ ? ನೀನು ಬರುತ್ತೇನೆಂದು ಬರೆದರೆ ಸಾಕು . ಅದೇ ನನಗೆ ಸಂಜೀವನ ವಾಗುತ್ತದೆ. ಬಾ ಚಂದ್ರೂ - ಬೇಗ ಬಾ !

ಇಂತು ನಿನ್ನ ಒಲವಿನ ತಂದೆ 'ಪಟ್ಟಾಭಿರಾಮಯ್ಯ.'

ಪಟ್ಟಾಭಿರಾಮಯ್ಯನವರು ಚಿಂತೆಗೆ ಮನತೆತ್ತು ಸುಮ್ಮನೆ ಕೂಡುವಂತಿರ ಲಿಲ್ಲ. ಅದೇ ವೈಶಾಖಮಾಸದಲ್ಲಿ ಸುನಂದೆಯು ಪ್ರಸ್ತ ನಿಶ್ಚಯವಾಗಿತ್ತು. ಅದರ ವ್ಯವಸ್ಥೆಗೆ - ಹಣ ಹೊಂದಿಸುವುದಕ್ಕೆ - ಅವರು ಎದ್ದು ಓಡಿಯಾಡ ಬೇಕಾಗಿತ್ತು.

ಪ್ರಸ್ತದ ಶುಭಕಾರ್ಯ ಮುಗಿಸಿಕೊಂಡು ಸುಂದರ ಹೆಂಡತಿಯನ್ನು ಬೆಂಗಳೂರಿಗೆ ಕರೆದುಕೊಂಡು ಹೋದ.

ಸುನಂದೆ ತನ್ನ ಮನೆಯ ವ್ಯವಸ್ಥೆ ನೋಡಿಕೊಳ್ಳುವ ನೂತನ ಉತ್ಸಾಹ ದಲ್ಲಿ ಸ್ವಲ್ಪಕಾಲ ತೌರುಮನೆಯ ತಾಪತ್ರಯ ಮರೆತಿದ್ದಳು.

ಜೂನ್ ತಿಂಗಳಲ್ಲಿ ಸುನಂದೆಯು ಪರೀಕ್ಷೆಯ ಫಲಿತಾಂಶ ಹೊರಬಿತ್ತು. ಸುನಂದಾ ಫಸ್ಟ್‌ಕ್ಲಾಸಿನಲ್ಲಿ ತೇರ್ಗಡೆ ಹೊಂದಿದ್ದಳು. ಹೆಂಡತಿಯ ವಿಜಯ ಸುಂದರನಿಗೆ ಪರಮಾನಂದವನ್ನುಂಟುಮಾಡಿತು. ಸುನಂದ ಸಾಕಷ್ಟು ವಿಜ ಯೋತ್ಸಾಹ ವ್ಯಕ್ತಪಡಿಸದಿದ್ದುದನ್ನು ಕಂಡು ಸುಂದರನಿಗೆ ಕ್ಲೇಶವುಂಟಾ ಯಿತು.

"ಏಕೆ ಸುನೂ - ನಿನಗೆ ತೇರ್ಗಡೆಯಾಗಬಾರದಾಗಿತ್ತೇನು ?"

"ಹೂ ! ಒಂದು ರೀತಿಯಲ್ಲಿ ... ..."

"ಮನಸ್ಸಿನಲ್ಲೇನಿದೆ ಸ್ಪಷ್ಟವಾಗಿ ಹೇಳು."

"ತೇರ್ಗಡೆಯಾದರೇನು ಮುಂದೆ ಓದುವುದಂತೂ ಸಾಧ್ಯವಿಲ್ಲ."

"ಏಕೆ ಸಾಧ್ಯವಿಲ್ಲ ?"

"ಓದು ಇಲ್ಲಿಗೇ ಸಾಕೇಂ ... ಇಲ್ಲಿಗೆ ನಾನು ಬಂದ ಮೇಲೆ ಓದಿನ ಯೋಚನೆಯಿಟ್ ... ವ್ರೂ ಇಲ್ಲ."

"ಒಂದು ವೇಳೆ - ನೀನು ... ಎಹುದು ಎಂದು ನಾನು ಹೇಳುವರೆ ಓದಲು ಸಿದ್ಧಳಾಗಿರುವೆಯಾ ?

"ಓದಬಹುದೇ ?"

"ಏಕಾಗಬಾರದು ?"

ಪುನಃ ಸುನಂದೆಯ ಮನಸ್ಸು ನಿರಾಳಗೊಂಡಿತು. ಅವಳ ಹೃದಯದ ಭಾವನೆ ಮುಖದ ಮೇಲೆ ಅಚ್ಚೊತ್ತಿದಂತೆ ಮೂಡಿತ್ತು.

"ಇನ್ನೂ ಏನು ಚಿಂತೆ ? ಹೇಳಬಾರದೇ ?"

"ಹೋಗಲಿ ಬಿಡಿ - ಆ ಮಾತು ಬೇಡ. ನನಗೆ ಮುಂದೆ ಓದೂ ಬೇಕಿಲ್ಲ. ನಾನು ಡಿಗ್ರಿ ತೆಗೆದುಕೊಂಡು ಯಾವ ರಾಜ್ಯ ಆಳಬೇಕಾಗಿದೆ."

"ರಾಜ್ಯವಾಳುವುದಕ್ಕಲ್ಲ ಡಿಗ್ರಿ ತೆಗೆದುಕೊಳ್ಳುವುದು. ನಿನಗೆ ಓದಲು ಮನಸ್ಸಿರುವಾಗ ಓದಬೇಕು. ತಂದೆ ಓದಿಸದಿದ್ದರೆ ಚಿಂತೆಯಿಲ್ಲ - ನಾನು ಓದಿಸುತ್ತೇನೆ."

"ನಾನು ಆನರ್ಸ್ ಕೋರ್ಸ್ ತೆಗೆದುಕೊಂಡರೆ ಮೂರು ವರ್ಷವಾಗುತ್ತದೆ. ನೀವು ಒಬ್ಬರೇ ಇರಬೇಕಲ್ಲ."

"ಶನಿವಾರ ಭಾನುವಾರ ಬರುತ್ತೇನೆ. ರಜೆಯನ್ನೆಲ್ಲಾ ಮೈಸೂರಿನಲ್ಲೇ ಕಳೆಯುತ್ತೇನೆ."

"ಸುಮ್ಮನೆ ಎರಡು ಕಡೆಯೂ ಖರ್ಚು."

"ನನ್ನ ಸ್ವಂತ ಖರ್ಚೇನಿದೆ ಹೇಳು. ಡಿ.ಎ. ಸೇರಿ ಕೈಗೆ ನೂರ ತೊಂಬತ್ತು ರೂಪಾಯಿ ಬರುತ್ತದೆ. ಮನೆಬಾಡಿಗೆ ಮೂವತ್ತು ಹೋದರೆ ನೂರ ಅರವತ್ತು ಉಳಿಯುತ್ತದೆ. ನಿನಗೆ ಎಂಭತ್ತು ಕಳಿಸಿಕೊಡುತ್ತೇನೆ."

ಸುನಂದೆಯ ಹೃದಯ ಕೃತಜ್ಞತೆಯಿಂದ ತುಂಬಿತು. ಅವಳ ಬಾಯಲ್ಲಿ ಮಾತು ಹೊರಡಲಿಲ್ಲ.

ಸುಂದರನೇ ಸುನಂದೆಯನ್ನು ಮೈಸೂರಿಗೆ ಕರೆತಂದುಬಿಟ್ಟ. ಅವಳು ಕಾಲೇಜ್ ಸೇರಿ ವಿದ್ಯಾಭ್ಯಾಸ ಮುಂದುವರಿಸಿದಳು.

ಸುನಂದೆ ವ್ಯ ... ರಮ್ಮನವರಿಗೆ ಹೊಸ ಜೀವ ಬಂದಂತಾಯಿತು. ... ಕೆಡುತ್ತ ಬಂದಿದ್ದು ಚಿಂತೆಗೆ ಕಾರಣವಾಗಿತ್ತು. ಜಾ ... ತ್ಯದ ಬಗ್ಗೆ ಒಡಕು ಸುದ್ದಿಗಳು ಮೈಸೂರು ಮುಟ್ಟಲಾರಂಭಿಸಿದ್ದುವು. ಆ ಸುದ್ದಿಗಳು ಯಜಮಾನರ ಕಿವಿಗೆ ಬೀಳದಂತೆ ಮಾಡಲು ಇಂದಿರಮ್ಮನವರು ಸಾಹಸಮಾಡುತ್ತಿದ್ದರು. ಅವರ ಸಾಹಸ ಸಾರ್ಥಕವಾಗಲಿಲ್ಲ. ಪಟ್ಟಾಭಿರಾಮಯ್ಯನವರ ಯೋಗಕ್ಷೇಮ ವಿಚಾರಿಸಿಕೊಂಡು ಹೋಗಲು ಚಾಮರಾಜನಗರದಿಂದ ಬರುತ್ತಿದ್ದವರು ಸೂಕ್ಷ್ಮವಾಗಿ ಸುದ್ದಿ ಮುಟ್ಟಿಸುತ್ತಿದ್ದರು. ಹೆಂಡತಿ ಕೊರಗುತ್ತಾಳಲ್ಲಾ ಎಂದು ಪಟ್ಟಾಭಿರಾಮಯ್ಯನವರು ಸುದ್ದಿಗಳನ್ನು ತಮ್ಮಲ್ಲಿಯೇ ಅಡಗಿಸಿಕೊಳ್ಳಲೆತ್ನಿಸುತ್ತಿದ್ದರು. ಆದರೊಮ್ಮೊಮ್ಮೆ ಮನಸ್ಸಿನ ಪರಿಮಿತಿಯನ್ನು ಭೇದಿಸಿಕೊಂಡು ದುಃಖ ಉಕ್ಕಿ ಬಿಡುತ್ತಿತ್ತು. ತೀರ ತಡೆಯದಾದಾಗ

"ಜಾನಕಿ ಗತಿಯೇನು ಇಂದಿರಾ ?"

"ನಮ್ಮ ಕೈಯಲ್ಲೇನಿದೆ ಹೇಳಿ. ಭಗವಂತ ಹೇಗೆ ಮಾಡಿಸಿದರೆ ಹಾಗಾಗಲಿ."

"ಅವಳ ವಿಚಾರ ಯೋಚನೆ ಮಾಡಬೇಕಾದದ್ದಿಲ್ಲವೆಂದು ನಾನು ನಿಶ್ಚಿಂತನಾಗಿದ್ದೆ-"

"ಈಗಲೂ ನೀವು ನಿಶ್ಚಿಂತರಾಗಿರಬೇಕು."

"ಎಲ್ಲಾ ಜವಾಬ್ದಾರಿ ನಿನ್ನೊಬ್ಬಳ ತಲೆಯ ಮೇಲೆ ಹಾಕಲೇ ? ಚಂದ್ರೂ ಬಂದುಬಿಟ್ಟಿದ್ದರೆ ನನಗೆ ಯೋಚನೆ ಇರುತ್ತಿರಲಿಲ್ಲ.".

".ಬಂದೇ ಬರುತ್ತಾನೆ-"

"ಜಾನಕಿ ಗಂಡ ತುಂಬ ಯೋಗ್ಯ ಎಂದಿದ್ದೆ."

"ಅವರು ಯೋಗ್ಯರೇ - ಆದರೆ ಇದೊಂದೇ ಕೊರತೆ."

"ಸಾವಿರ ಚಿತ್ತಾರ ಒಂದು ಮಸಿ ನುಂಗಿತು ಎಂದ ಹಾಗೆ ಇದೊಂದು ಸಾಲದೇ ?"

"ಗಂಡ ಹೆಂಡಿರ ಜಗಳ ನಾವು ಮನಸ್ಸಿಗೆ ತಂದುಕೊಳ್ಳಬಾರದು. ಅವರ ವೈಮನಸ್ಯ ತಾನೇತಾನಾಗಿ ಬಗೆಹರಿಯುತ್ತದೆ. ಮೂರನೆಯವರು ಕೈಹಾಕಿದರೆ ಮಾತ್ರ ಕೆಟ್ಟುಹೋಗುತ್ತದೆ-"

"ನಿಜ. ನೀನು ಹೇಳುವುದು ನಿಜ."

ಅಳಿಯನ ಗುಣವಿಮರ್ಶೆಯ ಮಾತನ್ನು ಪಟ್ಟಾಭಿರಾಮಯ್ಯನವರು ಅಲ್ಲಿಗೇ ಮುಗಿಸಿದರೂ ಅವರ ಸ್ಮೃತಿಪಟಲದಿಂದ ಅಳಿಯನ ಚಿತ್ರ ಅಳಿಸಿ ಹೋಗಲಿಲ್ಲ. ರಂಗಣ್ಣನ ಹುಂಬತನ, ಸುಂದರನ ಸುಸಂಸ್ಕೃತಿ ಕತ್ತಲೆ ಬೆಳಕಿನಂತೆ ಎದುರಿಗೆ ನಿಂತವು.

ಪಟ್ಟಾಭಿರಾಮಯ್ಯನವರು ಸುಂದರನ ಬಗ್ಗೆ ಹೆಚ್ಚು ವಿಶ್ವಾಸ ತಳೆಯುವುದಕ್ಕೆ ಅವನ ಗುಣವಲ್ಲದೆ ಅವರಿಗೆ ಸುನಂದೆಯ ಮೇಲಿದ್ದ ವಿಶೇಷ ಮಮತೆಯೂ ಕಾರಣವಾಗಿತ್ತು.

ಸುಂದರ ಮೈಸೂರಿಗೆ ಬಂದಾಗ ಯಾವ ಕಾರ್ಪಣ್ಯವನ್ನೂ ತೋರದೆ ಹೆಚ್ಚಿನ ವೇಳೆಯನ್ನು ಮಾವನವರ ಜತೆ ಕಳೆಯುತ್ತಿದ್ದ. ಅವನು ಪ್ರಾವೀಣ್ಯ ಪಡೆದಿದ್ದ ವೈಜ್ಞಾನಿಕ ವಿಷಯಗಳಲ್ಲಿ ಅವರಿಗೆ ಆಸಕ್ತಿಯಿರಲಿಲ್ಲ. ಆದರೆ ತನ್ನೊಲವಿನ ವಿಷಯವನ್ನೇ ಎಲ್ಲರ ತಲೆಯ ಮೇಲೆ ಹೇರಿ ಅವರಿಗೆ ಬೇಸರವನ್ನುಂಟುಮಾಡುವ ಚಟ ಸುಂದರನಿಗಿರಲಿಲ್ಲ. ಅನಂತ ಆಸಕ್ತಿ, ವಿಶಾಲ ಅಭಿರುಚಿಗಳೇ ಸುಂದರನ ಸಂಸ್ಕೃತಿಯ ಲಕ್ಷಣಗಳಾಗಿದ್ದವು. ಭೌತಶಾಸ್ತ್ರ ಅವನ ಒಲವಿನ ವಿಷಯವಾಗಿದ್ದರೂ ಇತರ ವಿಷಯಗಳ ಮೇಲೆ ಅವನಿಗೆ ತಿರಸ್ಕಾರವಿರಲಿಲ್ಲ. ಸಾಹಿತ್ಯ, ಲಲಿತಕಲೆಗಳು, ರಾಜಕಾರಣವನ್ನೂ ಅವನು ವಿಜ್ಞಾನವನ್ನು ಪ್ರೀತಿಸುವಷ್ಟೇ ಪ್ರೀತಿಸುತ್ತಿದ್ದ.

ಪಟ್ಟಾಭಿರಾಮಯ್ಯನವರಿಗೂ, ಸುಂದರನಿಗೂ ಹಾರ್ದಿಕವಿಶ್ವಾಸ ಬೆಳೆಯುವುದಕ್ಕೆ ಅವನ 'ಕೇಳ್ಮೆಶಕ್ತಿ'ಯೇ ಮೂಲಕಾರಣ. ಪಟ್ಟಾಭಿರಾಮಯ್ಯನವರ ಅನುಭವ, ಜೀವನದ ಕಷ್ಟಸುಖ, ಸೇವಾವೃತ್ತಿಯ ಇತಿಹಾಸ, ಅವರ ಮೇಲಾಧಿಕಾರಿಗಳು, ಸೇವಕವರ್ಗ ಇವರ ವಿಚಾರ, ಅವರ ಗೆಳೆಯರ ವಿಷಯಗಳನ್ನು ತುಂಬಿದಾಸ್ಥೆಯಿಂದ ಅವನು ಕೇಳುತ್ತಿದ್ದ.

ಯಾವ ವಿಷಯ ಆರಂಭಿಸಿದರೂ ಪಟ್ಟಾಭಿರಾಮಯ್ಯನವರು ಕೊನೆಗೆ ಬಂದು ನಿಲ್ಲುತ್ತಿದ್ದುದು ತಮ್ಮ ಮಗ ಚಂದ್ರಶೇಖರನ ವಿಷಯಕ್ಕೆ. ಅವನ ವಿಷಯ ಹೇಳಿದ್ದನ್ನೇ ಹೇಳುತ್ತಿದ್ದರು. ಅವನು ಆಡುತ್ತಿದ್ದ ಮಾತುಗಳು, ಆಟಪಾಟಗಳನ್ನು ಚಾಚೂ ತಪ್ಪದೆ ವರ್ಣಿಸುತ್ತಿದ್ದರು. ಚಂದ್ರಶೇಖರನ

ರೂಪ, ಗುಣ, ಬುದ್ಧಿಶಕ್ತಿ, ವಿವೇಕದ ಪ್ರತಿಯೊಂದು ರೇಖೆಯನ್ನೂ ಪಟ್ಟಾಭಿ ರಾಮಯ್ಯನವರು ಬಿಡಿಸಿ ಬಿಡಿಸಿ ವರ್ಣಿಸುತ್ತಿದ್ದರು.

ಸುಂದರ ಸ್ವಲ್ಪವೂ ಬೇಸರಪಟ್ಟುಕೊಳ್ಳದೆ ಕೇಳುತ್ತಿದ್ದ. ಪಟ್ಟಾಭಿ ರಾಮಯ್ಯನವರ ಉತ್ಸಾಹ ಉಕ್ಕೇರಿ ಅವರ ವರ್ಣನೆ ಕಾವ್ಯದ ಮಟ್ಟಕ್ಕೇರಿ ದಾಗ ಸುಂದರನೂ ಒಂದು ಸವಿಮಾತು ಆಡುತ್ತಿದ್ದ. ತಮ್ಮ ಸಂತೋಷದಲ್ಲಿ ಸುಂದರ ಭಾಗಿಯಾಗುತ್ತಿದ್ದುದನ್ನು ಕಂಡು ಪಟ್ಟಾಭಿರಾಮಯ್ಯನವರು ಮತ್ತಷ್ಟು ಹರ್ಷಗೊಳ್ಳುತ್ತಿದ್ದರು.

ಪಟ್ಟಾಭಿರಾಮಯ್ಯನವರು ಚಂದ್ರಶೇಖರನ ಪ್ರತಿಯೊಂದು ಕಾಗದ ವನ್ನೂ ಸುಂದರನ ಕೈಗಿತ್ತು ಹಲವುಬಾರಿ ಓದಿಸುತ್ತಿದ್ದರು. ತಂದೆಯ ಹೃದಯ ದಲ್ಲಿ ತುಂಬಿದ್ದ ಈ ಅಂಧಪ್ರೇಮವನ್ನು ಕಂಡು ಸುಂದರನಿಗೆ ಒಮ್ಮೊಮ್ಮೆ ವ್ಯಾಕುಲವಾಗುತ್ತಿತ್ತು. ಪ್ರಕೃತಿ ತಂದೊಡ್ಡಿದ್ದ ಮಾಯಾಜಾಲಕ್ಕೆ ಅವನು ಬೆಕ್ಕಸ ಬೆರಗಾಗಿದ್ದ.

ಗಂಡನ ತಾಳ್ಮೆ, ಸಹನಶಕ್ತಿಯನ್ನು ಕಂಡು ಸುನಂದೆ ಆಶ್ಚರ್ಯಪಡು ತ್ತಿದ್ದಳು.

"ನೀವು ಕೇಳಿದಷ್ಟೂ ಅವರ ಉತ್ಸಾಹ ಏರುತ್ತದೆ!"

"ಹೌದು! ಕೇಳಬಾರದು ಎನ್ನುವೆಯೇನು?"

"ಛೆ! ಛೆ! ಮಾವ ಅಳಿಯ ಇಷ್ಟು ಅನ್ಯೋನ್ಯವಾಗಿರುವುದನ್ನು ಕಂಡು ನಾನು ಅಸೂಯೆಪಡುತ್ತೇನೆಯೇ? ಹೇಳಿದ್ದನ್ನೇ ಹೇಳಿ ಅವರು ನಿಮಗೆಲ್ಲಿ ಬೇಸರವನ್ನುಂಟುಮಾಡುವರೋ ಎಂದು ಯೋಚಿಸುತ್ತಿದ್ದೆ."

"ಅವರು ಹೇಳುವ ವಿಷಯದಲ್ಲಿ ನನಗೆ ಆಸಕ್ತಿಯಿರುವಾಗ ಬೇಸರ ಹೇಗಾಗುತ್ತದೆ?"

"ಬೇಸರಪಟ್ಟುಕೊಳ್ಳದಿರುವುದು ನಿಮ್ಮ ದೊಡ್ಡಗುಣ ನಿಜವಾಗಿ ಹೇಳ ಬೇಕೆಂದರೆ ಅವರ 'ಚಂದ್ರ ಪುರಾಣ' ಕೇಳಿ ಕೇಳಿ ನಮಗೇ ಬೇಸರವಾಗಿದೆ."

"ಬೇಸರಪಟ್ಟುಕೊಳ್ಳಬಾರದು ಸುನೂ. ನಿಮ್ಮ ತಂದೆಗೆ ಜೀವನದಲ್ಲಿ ಯಾವ ಸೌಖ್ಯ ಉಳಿದಿದೆ ಹೇಳು. ಮಗನ ಧ್ಯಾನಮಾಡುತ್ತಾ, ಅವನ ಗುಣವರ್ಣನೆ ಮಾಡುತ್ತಿದ್ದರೆ ಅವರ ಜೀವ ಹಗುರವಾಗುತ್ತದೆ. ಇದರಿಂದ ಯಾರಿಗೂ ತೊಂದರೆಯಿಲ್ಲ – ನಷ್ಟವಿಲ್ಲ. ಬಿಡಿಕಾಸು ಖರ್ಚುಮಾಡದೆ ಒಂದು

ಪ್ರಾಣಿಗೆ ಇಷ್ಟು ಸುಲಭವಾಗಿ ಸೌಖ್ಯಕೊಡುವುದು ನಮ್ಮ ಕೈಯಲ್ಲಿದ್ದರೆ ನಾವೇಕೆ ಕಾರ್ಪಣ್ಯ ತೋರಿಸಬೇಕು."

ಪತಿಯ ಮನಸ್ಸಿನ ಪಕ್ವತೆ ಕಂಡು ಮೂಬೆರಗಾದ ಸುನಂದಾ ಮರು ಮಾತಾಡಲಿಲ್ಲ. ಸುಂದರನ ಬಗ್ಗೆ ಅವಳ ವಿಶ್ವಾಸ ಇಮ್ಮಡಿಸಿತು.

ಸುಂದರ ಕಳುಹಿಸುತ್ತಿದ್ದ ಹಣದಲ್ಲಿ ಅರ್ಧಭಾಗ ಸುನಂದೆ ತಾಯಿಯ ಕೈಯಲ್ಲಿ ಹಾಕುತ್ತಿದ್ದಳು. ಮಗಳಿಂದ ಹಣ ಸ್ವೀಕರಿಸುವಾಗ ಇಂದಿರಮ್ಮನವರ ಕೈ ಬೆಂದುಹೋಗುತ್ತಿತ್ತು.

ಕಾಲೇಜಿನ ಹೊಸ ವರ್ಷ ಒಳ್ಳೆಯ ಹುರುಪಿನಿಂದ ಆರಂಭವಾಯಿತು. ಸುನಂದೆಯ ಉತ್ಸಾಹವೇ ಉತ್ಸಾಹ!

ಅಂಚೆಯಾಳು ಬಂದು ಪಟ್ಟಾಭಿರಾಮಯ್ಯನವರ ಹೆಸರು ಹಿಡಿದು ಕೂಗಿದಾಗ ಅವರೇ ಎದ್ದು ಓಡಿಹೋಗಿ, ಅವನಿತ್ತ ಸೀಲಿ ಲಕೋಟೆಯನ್ನು ತಗೆದುಕೊಂಡರು. ಸಂತೋಷದ ಉದ್ವೇಗದಲ್ಲಿ ಅವರ ಕೈ ಥರಥರನೆ ನಡುಗುತ್ತಿತ್ತು.

"ಇಂದಿರಾ, ಇಂದಿರಾ" ಎಂದು ಕೂಗಿದರು.

ಇಂದಿರಮ್ಮನವರು ಗಾಬರಿಯಾಗಿ ಓಡಿಬಂದರು. ಪಟ್ಟಾಭಿರಾಮಯ್ಯ ನವರು ಉತ್ಸಾಹದಿಂದ

"ಚಂದ್ರೂ ಕಾಗದ ಬಂದಿದೆ ಕಣೇ. ನನ್ನ ಕನ್ನಡಕ ಎಲ್ಲಿದೆ ನೋಡು"

ಎಂದರು. ಇಂದಿರಮ್ಮ, ಸುನಂದಾ ಇಬ್ಬರೂ ಕನ್ನಡಕ ಹುಡುಕಿದರು. ಅದು ಸಿಕ್ಕದಿರಲು ಇಂದಿರಮ್ಮನವರು

"ಸುನಂದೆಯ ಕೈಯಲ್ಲಿ ಕಾಗದ ಕೊಡಿ. ಅವಳು ಓದಿ ಹೇಳುತ್ತಾಳೆ"

ಎಂದರು. ಸುನಂದೆ ಕಾಗದವನ್ನು ಕೈಗೆ ತೆಗೆದುಕೊಂಡು ಓದಲಾರಂಭಿಸಿ ದಳು:

"ತೀರ್ಥರೂಪರವರ ಸನ್ನಿಧಿಗೆ. ಅನೇಕ ನಮಸ್ಕಾರಗಳು,

ನಿಮ್ಮ ಕಾಗದ ಬಂದು ತಲುಪಿತು. ನೀವು ಸೂಚಿಸಿದಂತೆ ಅದನ್ನು ಸಾವ ಕಾಶವಾಗಿ ಹಲವು ಸಲ ಓದಿದೆ. ನಿಮ್ಮ ಬರವಣಿಗೆ ನನಗೆ ಪರಮಾಶ್ಚರ್ಯ ವನ್ನುಂಟುಮಾಡಿತು. ಹಣದ ಬಗ್ಗೆ ನೀವು ಮಾಡಿರುವ ಪ್ರಸ್ತಾಪ ನೋಡಿ ವಿಷಾದವಾಯಿತು. ನೀವು ನನಗೆ ಕೊಟ್ಟಿರುವ ಹಣಕ್ಕೆ ನಾನು ಅರ್ಹನಲ್ಲವೆಂದು ಭಾವಿಸುವುದಾದರೆ ಅದನ್ನು ನಾನು ಹಿಂದಿರುಗಿಸಲು ಸಿದ್ಧನಾಗಿದ್ದೇನೆ.

ನನ್ನ ಕೆಲಸಕಾರ್ಯ ಬಿಟ್ಟು ನಾನು ಸದ್ಯಕ್ಕೆ ಬರಲು ಸಾಧ್ಯವಿಲ್ಲ. ನನ್ನ ಭವಿಷ್ಯ ಅಮೇರಿಕಾದಲ್ಲಿದೆ. ಹಿಂದೂಸ್ಥಾನಕ್ಕೆ ಬಂದು ಬಡ ಸ್ಕೂಲ್ ಮಾಸ್ಟರಾಗಿ ಬಾಳ್ವೆಮಾಡುವುದು ನನಗೆ ಸಾಧ್ಯವಿಲ್ಲ. ನನ್ನ ಸ್ಥಿತಿಗತಿ ಸುಧಾರಿಸಿದ ಮೇಲೆ-ಇನ್ನು ಒಂದೆರಡು ವರ್ಷಗಳ ತರುವಾಯ – ಬರುತ್ತೇನೆ. ಅನವಶ್ಯಕವಾಗಿ ಮೇಲಿಂದ ಮೇಲೆ 'ಬಾ-ಬಾ' ಎಂದು ನೀವು ಬರೆಯಬೇಡಿ.

ಇನ್ನೊಂದು ವಿಷಯ. ನೀವು ನನ್ನ ಕಾಗದಗಳನ್ನು ಊರಿಗೆಲ್ಲಾ ಪ್ರದರ್ಶನ ಮಾಡುವಿರೆಂದು ತಿಳಿದುಬಂತು. ಅಲ್ಲಿಂದ ಬಂದವರೊಬ್ಬರು ನಿಮ್ಮ ಹುಚ್ಚಾಟ ವನ್ನು ಚಿತ್ರವತ್ತಾಗಿ ಬಣ್ಣಿಸಿ ಹಾಸ್ಯಮಾಡಿದರು. ನನಗೆ ತಲೆ ತಗ್ಗಿಸುವಂತಾ ಯಿತು. ಇನ್ನು ಮುಂದಾದರೂ ಇಂಥ ಅವಿವೇಕ ನಿಲ್ಲಿಸಿ.

ನಿಮ್ಮ "

ಕಾಗದವನ್ನೋದುತ್ತಿದ್ದ ಸುನಂದೆಯ ಕಣ್ಣು ಮಂಜಾಯಿತು. ಮುಂದೆ ಕಾಗದವನ್ನೋದಲಾರದೆ ಅದನ್ನ ನೆಲದ ಮೇಲೆ ಒಗೆದು ಹೊರಟುಹೋದಳು.

ಇಂದಿರಮ್ಮನವರ, ಮೆಲ್ಲನೆ ಕಾಗದವನ್ನೆತ್ತಿಕೊಂಡು ಮಡಿಸಿ ಒಂದೆಡೆ ಯಿಟ್ಟರು. ಕಣ್ಣೆವೆ ದಾಟಿಕೊಂಡು ಹೊರಗೆ ಧುಮುಕಲು ಧಾವಿಸುತ್ತಿದ್ದ ಕಣ್ಣೀರಿಗೆ ಇಂದಿರಮ್ಮನವರು ತಮ್ಮ ಚಿತ್ತಬಲದಿಂದ ಅಣೆಕಟ್ಟು ಕಟ್ಟಿದರು.

ಪಟ್ಟಾಭಿರಾಮಯ್ಯನವರು ಸ್ತಂಭೀಭೂತರಾಗಿದ್ದರು. ಮೂರು ನಿಮಿಷ ದಲ್ಲಿ ಅವರ ಮುಖದ ಮೇಲೆ ಮುಪ್ಪಡಸಿತ್ತು.

ಇಂದಿರಮ್ಮನವರು ಏನಾದರೂ ಮಾತು ಆಡಲೇಬೇಕಾಗಿತ್ತು. ಏನಾಡ ಬೇಕೆಂದು ಯೋಚಿಸಿ ಯೋಚಿಸಿ ಬಗೆಹರಿಯದೆ

"ಚಂದ್ರೂಗೆ ಏನುತ್ತರ ಬರೆಯುವಿರಿ ?"

ಪಟ್ಟಾಭಿರಾಮಯ್ಯನವರು ಹೆಂಡತಿಯ ನೋಟವಲ್ಲ ನೋಟವಿಟ್ಟು

"ನಾನು ಅವಿವೇಕಿ - ನನ್ನ ಹುಚ್ಚಾಟ ನನ್ನ ಮಗನ ಮರ್ಯಾದೆ ಹಾಳುಮಾಡಿದೆ - ನಾನು ಲೋಭಿ - ನನ್ನ ಹಣ ನನ್ನ ಮುಖದ ಮೇಲೆ ಎಸೆಯಲು ಚಂದ್ರೂ ಸಿದ್ಧನಾಗಿದ್ದಾನೆ - ನಾನು - ನಾನು . . .'

ಎಂದು ಹೇಳುತ್ತಾ ಸ್ಮೃತಿತಪ್ಪಿ ಬಿದ್ದುಬಿಟ್ಟರು.

ರೋಗಿಯನ್ನು ಪರೀಕ್ಷಿಸಿದ ಡಾಕ್ಟರು ಗಂಭೀರವದನರಾದರು. ಅವರ ಬಾಯಿಂದ ಏನು ಹೊರಡುವುದೋ ಎಂದು ತಾಯಿಮಗಳಿಬ್ಬರೂ ಕಾತುರ ರಾದರು.

"ಪಾರ್ಶ್ವವಾಯು! ಈ ಸಾರೆಯ ಹೊಡೆತ ಬಲವಾಗಿಲ್ಲ. ಪ್ರಾಣಕ್ಕೆ ಅಪಾಯವಿಲ್ಲ. ಆದರೆ ಬಹಳ ಎಚ್ಚರಿಕೆಯಿಂದಿರಬೇಕು."

"ಕೈಕಾಲು ಸ್ವಾಧೀನಕ್ಕೆ ಬರುವುದಿಲ್ಲವೇ?"

"ಬರುತ್ತದೆ - ಬಹಳ ದಿವಸ ಹಿಡಿಯುತ್ತದೆ. ರೋಗಿಗೆ ಸ್ವಲ್ಪವೂ ಉದ್ವೇಗವಾಗದಂತೆ ನೋಡಿಕೊಳ್ಳಬೇಕು. ಎರಡನೆಯ ಹೊಡೆತ ಪ್ರಾಣಾಪಾಯ ಮಾಡಬಹುದು"

ಯಜಮಾನರು ಉದ್ವೇಗದ ಮೂರ್ತಿಗಳಾಗಿದ್ದರು, ಅವರಿಗೆ ಉದ್ವೇಗವಾಗದಂತೆ ನೋಡಿಕೊಳ್ಳುವುದು ಹೇಗೆಂಬುದೇ ಇಂದಿರಮ್ಮನವರಿಗೆ ದೊಡ್ಡ ಸಮಸ್ಯೆಯಾಯಿತು.

ತಂದೆಯ ಕಾಹಿಲೆ ಸುದ್ದಿ ಕೇಳಿಯೂ ಜಾನಕಮ್ಮ ಬರಲಾಗಲಿಲ್ಲ. ಅವಳ ಯಜಮಾನರು ಹೋಗಲು ಅಡ್ಡಿಮಾಡಿದರು.

ಮಾವನವರ ಕಾಹಿಲೆಯ ಸುದ್ದಿ ತಿಳಿದೊಡನೆಯೇ ಸುಂದರ ಧಾವಿಸಿ ಬಂದು ಹೆಂಡತಿಗೂ, ಅತ್ತೆಗೂ ಸಮಾಧಾನ ಹೇಳಿದ. ಅದೇ ಕಾಲೇಜ್ ಬಾಗಿಲು ತೆಗೆದಿದ್ದುದರಿಂದ ಅವನು ಹೆಚ್ಚು ದಿನ ನಿಲ್ಲುವ ಹಾಗಿರಲಿಲ್ಲ.

"ಅಷ್ಟು ಚೆನ್ನಾಗಿದ್ದವರು ಹೀಗಾಗಲು ಕಾರಣವೇನು?"

ಎಂದು ಸುಂದರ ಹೆಂಡತಿಯನ್ನು ಕೇಳಿದ.

ಸತ್ಯಸಂಗತಿ ಗಂಡನಿಗೆ ಹೇಳುವುದು ಸಾಧ್ಯವಿರಲಿಲ್ಲ, ಸುಳ್ಳು ಹೇಳುವುದಕ್ಕೆ ಸುನಂದೆಯ ಮನಸ್ಸು ಒಡಂಬಡಲಿಲ್ಲ.

"ಅಣ್ಣನಿಗಾಗಿ ನಿರೀಕ್ಷಿಸುತ್ತಿದ್ದರು."

"ಅವರು ಏನು ಬರೆದರು?"

"ಸದ್ಯಕ್ಕೆ ಬರಲಾಗುವುದಿಲ್ಲವೆಂದು ಬರೆದರು."

ಇಷ್ಟೇ ಕಾರಣವಿರಲಾರದು - ಇನ್ನೂ ಏನೋ ಇರಬೇಕು ಎಂದು ಸುಂದರನ ಮನಸ್ಸಿಗೆ ಭಾಸವಾಯಿತು. ಅದನ್ನು ಕೆದಕಿ ತಿಳಿದುಕೊಳ್ಳುವ ಪ್ರಯತ್ನ ಅವನು ಮಾಡಲಿಲ್ಲ.

ಬೆಂಗಳೂರಿಗೆ ಹೊರಡುವ ಮುನ್ನ ಹೆಂಡತಿಯ ಕೈಗೆ ಒಂದು ಕಟ್ಟು ನೋಟು ಕೊಟ್ಟು

"ಔಷಧೋಪಚಾರದ ಖರ್ಚಿಗೆ ಉಪಯೋಗಿಸಿಕೋ. ಇನ್ನೂ ಬೇಕಾದರೆ ನನಗೆ ಬರಿ. ನಾನು ದುಡ್ಡು ಕೊಟ್ಟು ಹೋದುದಕ್ಕೆ ಬೇಸರಪಟ್ಟುಕೊಳ್ಳಬಾರದೆಂದು ಅತ್ತೆಮ್ಮನವರಿಗೆ ತಿಳಿಸು. ನಾನೂ ಅವರ ಮಗನೇ. ಅವರ ಕಷ್ಟಸುಖದಲ್ಲಿ ನನಗೂ ಭಾಗವಿದೆ."

ಸುನಂದೆಯ ಕಣ್ಣಲ್ಲಿ ನೀರುಕ್ಕಿ ಬಂತು. ಗಂಡನನ್ನಪ್ಪಿ 'ನನ್ನ ದೇವರೇ' ಎಂದಳು.

ಸುಂದರ ಊರಿಗೆ ಹೋದಮೇಲೆ ಇಂದಿರಮ್ಮನವರು ಮಗಳಿಗೆ

"ಅವರು ಹೊರಡುವ ಮೊದಲು ಒಂದು ವಾಯಿನ ಕೂಡ ಮಾಡಿ ಬಡಿಸಲಿಲ್ಲ. ನನ್ನ ಬುದ್ಧಿಗೆ ಮಂಕು ಕವಿದಿದೆ. ನೀನಾದರೂ ಮಾಡಿ ಬಡಿಸಬಾರದಾಗಿತ್ತೇ ?"

"ಏನೂ ಚಿಂತೆಯಿಲ್ಲಮ್ಮ. ಈಗ ನಮ್ಮ ಮನಸ್ಸಿನಲ್ಲಿ ಎಷ್ಟು ಸಂತೋಷ ತುಂಬಿದೆಯೆಂದು ಅವರಿಗೆ ಚೆನ್ನಾಗಿ ಗೊತ್ತು."

ಕೆಲವು ದಿವಸಗಳು ಕಳೆದ ಮೇಲೆ ಡಾಕ್ಟರು ಒಂದು ದಿನ ಹಣ ಕೇಳಿದಾಗ ಅವರಿಗೆ ಹಣ ಕೊಟ್ಟು, ಉಳಿದ ಹಣವನ್ನು ಸುನಂದ ತಾಯಿಯ ಕೈಯಲ್ಲಿಟ್ಟಳು. ಇಂದಿರಮ್ಮನವರು ಮಗಳ ಮುಖ ನೋಡಿ

"ನಿನ್ನ ಎಳೆಯ ಸಂಸಾರಕ್ಕೆ ನನ್ನ ಕಷ್ಟಕಾರ್ಪಣ್ಯ ಗಂಟುಬಿತ್ತು"

"ನಿನಗೆ ಒಂದು ಮಾತು ಹೇಳಬೇಕೆಂದು ಅವರು ತಿಳಿಸಿದ್ದರು. ಹೇಳಲೇ ?"

"ಹೇಳಮ್ಮ."

"... ನಾನು ದುಡ್ಡು ಕೊಟ್ಟು ಹೋದುದಕ್ಕೆ ಬೇಸರಪಟ್ಟುಕೊಳ್ಳಬಾರದೆಂದು ಅತ್ತೆಮ್ಮನವರಿಗೆ ತಿಳಿಸು. ನಾನು ಅವರ ಮಗನೇ - ಅವರ ಕಷ್ಟಸುಖದಲ್ಲಿ ನನಗೂ ಭಾಗವಿದೆ."

"ನಿಜ ಸುನಂದ. ಯಾವದೋ ಜನ್ಮದಲ್ಲಿ ಅವರು ನನ್ನ ಮಗನಾಗಿದ್ದರೆಂದು ಕಾಣುತ್ತದೆ" ಎಂದು ಹೇಳಿದರು.

ನಾಲ್ಕು ತಿಂಗಳ ಸತತ ಚಿಕಿತ್ಸೆಯಾದ ತರುವಾಯ ಪಟ್ಟಾಭಿರಾಮಯ್ಯನವರು ತೊದಲಿಕೊಂಡು ಮಾತನಾಡಲಾರಂಭಿಸಿದರು. ಕೈಕಾಲುಗಳನ್ನು

ಸ್ವಲ್ಪ ಅತ್ತಿತ್ತ ಚಲಿಸಲೂ ಸಾಧ್ಯವಾಯಿತು. ತಮ್ಮ ರೋಗಿಯಲ್ಲಿ ಕಂಡು ಬಂದ ಸುಧಾರಣೆ ನೋಡಿ ಡಾಕ್ಟರು ಹೆಮ್ಮೆಗೊಂಡರು.

"ಹಾಸಿಗೆ ಬಿಟ್ಟಿದ್ದು ನಾಲ್ಕು ಮೈಲಿ ಓಡಿಬರಲು ಮನಸ್ಸಾಗುತ್ತದೆಯೇ ಸರ್."

ಪಟ್ಟಾಭಿರಾಮಯ್ಯನವರು ಬಹು ಪ್ರಯಾಸದಿಂದ

"ಎಲ್ಲಾ ನಿಮ್ಮ ದಯೆ - ಭಗವಂತನ ಕರುಣೆ" ಎಂದರು.

"ನಿಮ್ಮ ಮನೋಬಲ ಅದ್ಭುತ ಸರ್. ಬೇರೆಯವರಿಗೆ ಇಷ್ಟು ಗುಣ ವಾಗಬೇಕಿದ್ದರೆ ಒಂದು - ಒಂದೂವರೆ ವರ್ಷ ಹಿಡಿಯುತ್ತಿತ್ತು."

ಪಟ್ಟಾಭಿರಾಮಯ್ಯನವರು ತಮ್ಮ ದುರ್ಬಲ ಶಿರುನೇತ್ರಗಳನ್ನು ದೈನ್ಯ ದಿಂದ ಅತ್ತಿತ್ತ ಹೊರಳಾಡಿಸಿ, ಇಂದಿರಮ್ಮನವರ ಕಡೆ ನೋಡಿದರು. ಇಂದಿರಮ್ಮ ಕತ್ತು ತಗ್ಗಿಸಿ ನಿಂತರು. 'ರೋಗಕ್ಕೆ ಬಲಿಯಾಗಿ ಹೆಂಡತಿ ಮಕ್ಕಳನ್ನು ನಿರ್ಗತಿಕರನ್ನಾಗಿ ಮಾಡಬಾರದು' ಎಂದು ಯಜಮಾನರು ಮೃತ್ಯುವಿನೊಂದಿಗೆ ನಡೆಸುತ್ತಿದ್ದ ಹೋರಾಟವನ್ನು ಇಂದಿರಮ್ಮನವರು ಚೆನ್ನಾಗಿ ತಿಳಿದಿದ್ದರು.

'ಭಗವಂತ, ನನ್ನ ಮಾಂಗಲ್ಯ ಉಳಿಸಿಕೊಡು'

ಎನ್ನುವ ಮೊರೆ ಇಂದಿರಮ್ಮನವರ ಹೃದಯದಲ್ಲಿ ಸತತವಾಗಿ ನೆಲಸಿತು.

ಪಟ್ಟಾಭಿರಾಮಯ್ಯನವರೆದ್ದು ಸ್ವಲ್ಪ ತಿರುಗಾಡುವಂತಾಗಲು ಮತ್ತೆ ಕೆಲವು ತಿಂಗಳು ಬೇಕಾಯಿತು. ನಾಲಗೆಯ ತೊದಲೂ ಕಡಿಮೆಯಾಗುತ್ತ ಬಂತು. ಕೋಲೂರಿಕೊಂಡು ಮೆಲ್ಲನೆ ಮನೆಯಲ್ಲಿ ಅವರೇ ಓಡಿಯಾಡು ತ್ತಿದ್ದರು. ಭಗವಂತನಿಗೆ ತಮ್ಮ ಮೊರೆ ಮುಟ್ಟಿತೆಂದು ಇಂದಿರಮ್ಮನವರು ಸಂತೋಷಿಸಿದರು.

ಕೈಕಾಲುಗಳಿಗೆ ಸ್ವಲ್ಪ ಚೇತನ ಬಂದಕೂಡಲೆ ಪಟ್ಟಾಭಿರಾಮಯ್ಯ ನವರು ಒಂದು ನೋಟ್ ಪುಸ್ತಕ ಹಿಡಿದು, ಸದಾ ಅದರಲ್ಲಿ ಏನಾದರೂ ಗುರುತು ಹಾಕುತ್ತಲೇ ಇದ್ದರು. ಅದನ್ನು ಕಂಡ ಇಂದಿರಮ್ಮ ಒಂದು ದಿನ

"ಈಗಲೇ ನೀವು ಕೆಲಸಕಾರ್ಯ ಮಾಡುವಹಾಗಿಲ್ಲ. ತೆಪ್ಪಗಿರ ಬಾರದೇ ? ಸುಮ್ಮನೆ ಆಯಾಸಮಾಡಿಕೊಳ್ಳುತ್ತಿರುವಿರಿ."

"ಇಲ್ಲ ಇಂದಿರಾ - ಆಯಾಸಮಾಡಿಕೊಳ್ಳುವುದಿಲ್ಲ. ನೀನು ದುಃಖ ಪಡಬೇಡ-"

ಹೆಂಡತಿಯನ್ನು ದಿಟ್ಟಿಸಿ ನೋಡುತ್ತಿದ್ದ ಪಟ್ಟಾಭಿರಾಮಯ್ಯನವರಿಗೆ ಕರುಳು ಕಿತ್ತು ಬರುವಂತಾಯಿತು. ಹತ್ತೇ ತಿಂಗಳಲ್ಲಿ ಇಂದಿರಮ್ಮನವರ ಗುರುತೇ ಬದಲಾಯಿಸಿತು. ತಲೆಗೂದಲು ಅರ್ಧ ನರೆತಿತ್ತು ಕಣ್ಣುಗಳು ಗುಣಿಬಿದ್ದಿದ್ದವು. ಮುಖ ಸುಕ್ಕಾಗುವುದಕ್ಕೆ ಆರಂಭಿಸಿತ್ತು. ಹೃದಯ ಒಡೆದು ಹೋಗುತ್ತಿದ್ದರೂ ಇಂದಿರಮ್ಮನವರು ಗಂಡನಿಗೆ ತಮ್ಮ ದುಃಖ ತೋರಗೊಡುತ್ತಿರಲಿಲ್ಲ.

ಪಟ್ಟಾಭಿರಾಮಯ್ಯನವರು ಹೆಂಡತಿಯನ್ನು ಹತ್ತಿರ ಕರೆದು ಪಕ್ಕದಲ್ಲಿ ಕೂಡಿಸಿಕೊಂಡು

"ಇಂದಿರಾ, ನಾನೂ ನೀನೂ ಚೆನ್ನಾಗಿಯೇ ಬಾಳ್ವೆ ಮಾಡಿದೆವಲ್ಲವೇ ?"

"ಏಕೆ ಹಾಗೆ ಕೇಳುವಿರಿ ? ಅದರಲ್ಲಿ ಸಂದೇಹವೇನಿದೆ ?"

"ನಾನು ಚಿಕ್ಕವನಾಗಿದ್ದಾಗ ಒಂದೊಂದು ಸಲ ವಿಚಾರಮಾಡುತ್ತಿದ್ದೆ– ಈಗ ನನಗೆ ತಾರುಣ್ಯ, ಇಂದಿರೆಗೂ ತಾರುಣ್ಯ ಅವಳು ಸುಂದರಿ. ನಾಳೆ ನನಗೆ ವೃದ್ಧಾಪ್ಯ ಬಂದಾಗ, ಇಂದಿರಾ ಅಜ್ಜಿ, ಮುತ್ತಜ್ಜಿಯಾಗಿ ಮುಪ್ಪಿನ ಮುದುಕಿಯಾದಾಗ ನಾನು ಹೀಗೇ ಅವಳನ್ನು ಪ್ರೀತಿಸುತ್ತೇನೆಯೋ ? "

"ನಿರ್ಣಯ."

"ನಿರ್ಣಯ . ಹಾಗೆ ಪ್ರೀತಿಸುತ್ತಿಲ್ಲ. ಅದು ಪ್ರೇಮ ಹೌದೋ ಅಲ್ಲವೋ ಎಂದು ಸಂದೇಹಪಡುತ್ತಿದ್ದೇನೆ. ಅದೊಂದು ಬಗೆಯ ಮೋಹಾಕರ್ಷಣೆ - ದೇಹಾಕರ್ಷಣೆ. ಈಗ ಪ್ರೇಮದ ಸ್ವರೂಪ ನನಗೆ ಅರ್ಥವಾಗುತ್ತಿದೆ- ಇಷ್ಟೊಂದು ಕಷ್ಟ - ನನ್ನ ಜತೆಯಲ್ಲಿ - ನನಗಾಗಿ ಅನುಭವಿಸಿದೆ. ನಿನ್ನನ್ನು ನಾನು ನಿರ್ಗತಿಕಳನ್ನಾಗಿ ಮಾಡಿದೆ. ಒಂದು ದಿನ ನೀನು ಅಯ್ಯೋ ಎನ್ನಲಿಲ್ಲ. ಗಂಡ ಬಡವ - ದುರ್ಬಲ - ರೋಗಿ ಎಂದು ತಿರಸ್ಕಾರ ಮಾಡಲಿಲ್ಲ ನಮ್ಮ ಮನೆಯ ಕಷ್ಟಕಾರ್ಪಣ್ಯ ಒಬ್ಬರ ಕಣ್ಣಿಗೆ ಬೀಳಿಸಲಿಲ್ಲ."

"ನೀವು ಹೀಗೆ ಮಾತನಾಡಬೇಡಿ - ನಾನು ಕೇಳಲಾರೆ."

"ದಯೆಯಿಟ್ಟು ಕೇಳು ಇಂದಿರಾ. ನಿನ್ನೆದುರಿಗೆ ಆಡದಿದ್ದರೆ ನನ್ನ ಹೃದಯ ಬಿರಿದುಹೋಗುತ್ತದೆ. - ಮಗ ಮನೆಗೆ ಚಿನ್ನದ ಕಳಶ ಹಾಕಿಸುತ್ತಾನೆಂದು ನಿನ್ನ ಕೈಗೆ ಭಿಕ್ಷಾಪಾತ್ರೆ ಕೊಟ್ಟೆ - ಇಲ್ಲಿ ನೋಡು, ಇನ್ನೊಂದು ಮಾತು -

ಅಮಂಗಳ ನುಡಿಯುತ್ತಿದ್ದೇನೆಂದು ಕೋಪಿಸಿಕೊಳ್ಳಬೇಡ. ನನ್ನ ಕಾಹಿಲೆ ಎಂಥದು ಎಂಬುದನ್ನು ನಾನು ಬಲ್ಲೆ. ಹಿಂದೆ ಆದಂತೆ ಇನ್ನೊಮ್ಮೆ ಆದರೆ ನಾನು ಬದುಕುವ . . . "

"ಅಯ್ಯೋ! ಹಾಗನ್ನಬೇಡೀಂದ್ರೆ - ನಿಮ್ಮ ದಮ್ಮಯ್ಯ."

"ನಿನ್ನನ್ನು ಬಿಟ್ಟು ಹೋಗಬೇಕೆಂದು ನಾನು ಖಂಡಿತವಾಗಿ ಬಯಸುತ್ತಿಲ್ಲ ಇಂದಿರಾ. ಸಾವಿನ ಜತೆಯಲ್ಲಿ ಹೋರಾಡಿ ಈ ದೇಹ ಉಳಿಸಿಕೊಂಡಿದ್ದೇನೆ. ಆದರೆ ಯಾವ ಹೊತ್ತಿಗೆ ಏನಾಗುವುದೋ ಹೇಳಬಲ್ಲವರು ಯಾರು? ಈ ನೋಟ್ ಪುಸ್ತಕದಲ್ಲಿ ನನ್ನ ಸಮಸ್ತ ಆಸ್ತಿಯ ವಿವರ, ಸಾಲದ ವಿವರ ಬರೆದಿದ್ದೇನೆ. ಜೋಪಾನವಾಗಿಟ್ಟುಕೋ."

"ನನಗೆ ಬೇಡೀಯಂದ್ರೆ. ನಿಮ್ಮ ಪುಸ್ತಕ ನಿಮ್ಮ ಬಳಿಯಲ್ಲಿಯೇ ಇರಲಿ."

"ಹುಚ್ಚಿ - ನನ್ನ ಮಾತು ಕೇಳಿ, ಈ ಪುಸ್ತಕ ಭದ್ರವಾಗಿಟ್ಟುಕೋ - ನಾನು ಪೂರ್ಣಗುಣ ಹೊಂದಿದ ಮೇಲೆ ಪುನಃ ನನಗೇ ಕೊಡುವೆಯಂತೆ."

ಸುನಂದ ಮನೆಗೆ ಬಂದುದನ್ನು ಕಂಡು ಇಂದಿರಮ್ಮನವರು ಕಣ್ಣೊರಸಿಕೊಂಡು ಒಳಕ್ಕೆ ಎದ್ದುಹೋದರು.

ಕೆಲವು ದಿವಸಗಳ ತರುವಾಯ ಅಂಚೆಯಾಳು ಒಂದು ಲಕೋಟೆ ತಂದಿತ್ತ. ಸುನಂದ ಮನೆಯಲ್ಲಿದ್ದುದರಿಂದ ತಾನೇ ಲಕೋಟೆಯನ್ನು ತೆಗೆದುಕೊಂಡು ಒಡೆದು ನೋಡಿದಳು. ಅಣ್ಣನ ಕಾಗದ - ಅದರಲ್ಲಿದ್ದ ಸಂತೋಷದ ಸುದ್ದಿ ನೋಡಿ ಅವಳ ಮನಸ್ಸು ಪ್ರಫುಲ್ಲವಾಯಿತು. ತನ್ನಂತೆಯೇ ತಂದೆಗೂ ಸಂತೋಷವಾಗುವುದೆಂದು ಭಾವಿಸಿಕೊಂಡು ತಂದೆಯ ಬಳಿಗೆ ಧಾವಿಸಿ ಹೋದಳು.

ಮಗಳ ಉತ್ಸಾಹ ಕಂಡು ಪಟ್ಟಾಭಿರಾಮಯ್ಯನವರು ಅವಳು ಯಾವದೋ ಸಂತೋಷದ ಒಸಗೆ ತಂದಿದ್ದಾಳೆಂದು ಗ್ರಹಿಸಿದರು.

"ಯಾರದೇಮ್ಮ ಕಾಗದ"

ಎಂದು ಇಂದಿರಮ್ಮನವರು ಕೇಳಿದರು.

"ಅಣ್ಣ ಬರುತ್ತಾನಂತೆ!"

"ಹಾ"

ಎಂದು ಪಟ್ಟಾಭಿರಾಮಯ್ಯನವರು ಮಲಗಿದ್ದವರು ಎದ್ದು ಕುಳಿತು
"ಕಾಗದ ಓದು" ಎಂದರು

**'. . . ನನಗೆ ಯುನೆಸ್ಕೊ (Unesco) ಸಂಸ್ಥೆಯಲ್ಲಿ ಒಳ್ಳೆಯ ಕೆಲಸ ಸಿಕ್ಕಿದೆ. ಭಾರತ ಪ್ರವಾಸಮಾಡಲು ಇಲ್ಲಿಂದ ಹೊರಡಲಿರುವ ಅಮೇರಿಕನ್ ಗೋಷ್ಠಿಯೊಂದಿಗೆ ನನ್ನನ್ನು ಕಳುಹಿಸಿಕೊಡುವರಿದ್ದಾರೆ. ಪ್ರಾಯಶಃ ಜುಲೈ, ಆಗಸ್ಟ್ ತಿಂಗಳಲ್ಲಿ ನಾನು ಬರುತ್ತೇನೆ.'**

ಕಾಗದದ ಓದು ಮುಗಿಯಲು ಪಟ್ಟಾಭಿರಾಮಯ್ಯನವರ ಮುಖ ಇಳಿಬಿತ್ತು- ಉಕ್ಕಿ ಬರುತ್ತಿದ್ದ ದುಃಖವನ್ನು ಸಹಿಸಿಕೊಳ್ಳುತ್ತಾ

"ಪ್ರವಾಸಿಗಳ ಜತೆ ಬರುತ್ತಾನೆ - ಪ್ರವಾಸಿಗಳ ಜತೆ ಓದವಕ್ಕೆ ಹೋಗುತ್ತಾನೆ"

ಎಂದು ನುಡಿದು ಪುನಃ ಮಲಗಿಬಿಟ್ಟರು.

ಅದೇ ಅವರ ಮೃತ್ಯುಶಯ್ಯೆಯಾಯಿತು. ಸಂಜೆಯೊಳಗಾಗಿ ಎಡಭಾಗಕ್ಕೆ ಮತ್ತೆ ಪಾರ್ಶ್ವವಾಯು ಹೊಡೆಯಿತು. ಡಾಕ್ಟರು ಬರುವುದರೊಳಗಾಗಿ ಪಟ್ಟಾಭಿರಾಮಯ್ಯನವರು ತಮ್ಮ ಇಹಲೋಕಯಾತ್ರೆ ಮುಗಿಸಿಬಿಟ್ಟಿದ್ದರು

ಸುನಂದೆಯ ಎಕ್ಸ್‌ಪ್ರೆಸ್ ಟೆಲಿಗ್ರಾಂ ತಲುಪಿದಕೂಡಲೆ ಸುಂದರ ಹೊರಡುವ ವ್ಯವಸ್ಥೆಮಾಡಲಾರಂಭಿಸಿದ. ರಾತ್ರಿ ಹತ್ತೂವರೆ ವರೆಗೆ ರೈಲು ಇರಲಿಲ್ಲ. ಕೊನೆಯ ಬಸ್ಸೂ ಹೊರಟುಬಿಟ್ಟಿತ್ತು ಅವನ ಆತುರ, ಧಾವಂತ ಕಂಡ ಬಸ್ ಸ್ಟಾಂಡಿನ ಪೋಲೀಸ್ ಸಬ್ ಇನ್ಸ್‌ಪೆಕ್ಟರ್

"ರಾತ್ರಿ ರೈಲಿನಲ್ಲೇ ಹೋಗಬೇಕು ಸರ್. ಬೇರೆ ಮಾರ್ಗವೇ ಇಲ್ಲ"

ಎಂದು ಹೇಳಿದ. ವಿಧಿಯಿಲ್ಲದೆ ತಾನು ಹೊರಡಬೇಕಾದ ಕಾರಣವನ್ನು ಸುಂದರ ವಿವರಿಸಿದಾಗ ಸಬ್ ಇನ್ಸ್‌ಪೆಕ್ಟರ್ ಕುತೂಹಲದಿಂದ

"ಯಾರು ಸರ್, ಅವರು"

ಎಂದು ಕೇಳಿದ. ಸುಂದರ ತನ್ನ ಮಾವನವರ ಹೆಸರು ಹೇಳಿದಾಗ ಸಬ್ ಇನ್ಸ್‌ಪೆಕ್ಟರ್ ಕಣ್ಣಲ್ಲಿ ನೀರು ತಂದುಕೊಂಡು

"ಕೆಲವು ಕಾಲ ನಾನೂ ಅವರ ಕೈಕೆಳಗೆ ದುಡಿದಿದ್ದೇನೆ ಸರ್. ನಾನು ಹೆಡ್ ಕಾನ್‌ಸ್ಟೇಬಲ್ ಆಗಿದ್ದೆ ಕೋಲಾರದಲ್ಲಿ - ಅವರು ಸಬ್ ಇನ್ಸ್‌ಪೆಕ್ಟರ್

ಆಗಿದ್ದರು. ಧರ್ಮರಾಯ ನಮ್ಮನ್ನು ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ತಡೀರಿ ಸರ್ - ನೀವು ಸ್ವಲ್ಪ ಇಲ್ಲಿಯೇ ಕುಳಿತುಕೊಳ್ಳಿ "

ಎಂದು ಹೇಳಿ ಕೈಗೆ ಫೋನ್ ತೆಗೆದು ಯಾರ ಸಂಗಡಲೋ ಮಾತನಾಡಿ

"ಇನ್ನು ಒಂದು ಗಂಟೆಯಲ್ಲಿ ಇಲ್ಲಿಂದ ಒಂದು ಲಾರಿ ಮೈಸೂರಿಗೆ ಹೋಗತ್ತೆ. ಅದರಲ್ಲಿ ಹೋಗುವಿರೇನು ?"

"ಯಾವದರಲ್ಲಿ ಬೇಕಾದರೂ ಹೋಗವುದಕ್ಕೆ ಸಿದ್ಧನಾಗಿದ್ದೇನೆ."

"ಇಲ್ಲೇ ಕೂಡಿ - ಲಾರಿ ಇಲ್ಲಿಗೇ ಬರುತ್ತದೆ" ಎಂದು ಹೇಳಿದ.

"ನಿಮ್ಮ ಉಪಕಾರ ನಾನು ಮರೆಯಲಾರೆ ಸಬ್-ಇನ್ಸ್‌ಪೆಕ್ಟರೇ. ನಿಮ್ಮ ಹೆಸರು ಹೇಳಲೇ ಇಲ್ಲವಲ್ಲಾ."

"ನನ್ನ ಹೆಸರು ಬಸಪ್ಪ ಸರ್. ಇದೆಲ್ಲಾ ಏನು ಸರ್. ನಿಮ್ಮ ಮಾವ ನವರು ನನಗೆ ಮಾಡಿರುವ ಉಪಕಾರಕ್ಕೆ ನಾನೇನು ಪ್ರತ್ಯುಪಕಾರ ಮಾಡ ಬಲ್ಲೆ. ಅವರ ಹೆಸರು ಹೇಳಿ ನಾನು ಮನೆಯಲ್ಲಿ ದೀಪ ಹಚ್ಚುತ್ತಿದ್ದೇನೆ."

ಸುಂದರ ಹೇಗೂ ಒಂದು ಗಂಟೆ ಕಳೆಯಬೇಕಾಗಿತ್ತು.

"ನಿಮಗೆ ಅವರೇನು ಉಪಕಾರ ಮಾಡಿದರು ಬಸಪ್ಪನವರೇ ?"

"ನಮ್ಮ ಡಿ ಎಸ್.ಪಿ. ಒಬ್ಬರಿದ್ದರು ಸರ್. ಅವರೂ ಲಿಂಗಾಯುತರು. ನಾನು ಅವರ ಮನೆಗೆ ಹೋಗಿ ಆಗಾಗ್ಗೆ ಏನಾದರೂ ಕೆಲಸಮಾಡಿಕೊಟ್ಟು ಬರುತ್ತಿದ್ದೆ. ಡಿ. ಎಸ್. ಪಿ. ಸಾಹೇಬರು ನನ್ನ ವಿಷಯದಲ್ಲಿ ವಿಶ್ವಾಸ ವಾಗಿದ್ದಾರೆಂದು ನನ್ನ ತಲೆ ತಿರುಗಿತು. ಅವಕಾಶ ಸಿಕ್ಕಿದ ಕಡೆ ಲಂಚ ಹೊಡೆಯುವುದಕ್ಕೆ ಆರಂಭಮಾಡಿದೆ. ಸಬ್ ಇನ್‌ಸ್ಪೆಕ್ಟರು - ನಿಮ್ಮ ಮಾವ ನವರು ಅನೇಕ ಸಲ ಎಚ್ಚರಿಕೆ ಕೊಟ್ಟರು. ಡಿ.ಎಸ್.ಪಿ- ಸಾಹೇಬರ ಬೆಂಬಲ ವಿರುವಾಗ ಯಾರೇನು ಮಾಡಬಲ್ಲರು ಎನ್ನುವ ಅಹಂಕಾರ ನನ್ನ ವ್ಯಾಪಿ ಸಿತ್ತು. ಒಂದು ಸಲ ಮಾಲೂರಿನಲ್ಲಿ ಒಂದು ದರೋಡೆ ಪ್ರಕರಣ ನಡೆಯಿತು. ಖಾಕಿ ದಿರ್ಸಿನ ಮದಾಂಧತೆ, ಜತೆಗೆ ಹಣದಾಸೆಯಿಂದ ನಾನು ಮೂರು ನಾಲ್ಕು ಜನ ಆಪಾದಿತರನ್ನು ಬಲಿಹಾಕಿಬಿಟ್ಟೆ. ನನ್ನ ದುರದೃಷ್ಟಕ್ಕೆ ಅವರು ನಿರಪರಾಧಿಗಳಾಗಿದ್ದರು. ಮೇಲಿನ ತನಕ ದೂರು ಹೋಗಿ ನನ್ನ ಡಿಸ್‌ಮಿಸ್ ಮಾಡಲು ನಿರ್ಧಾರವಾಯಿತು. ಡಿ.ಎಸ್.ಪಿ. ಸಾಹೇಬರು ಮನೆಗೆ ಕಾಲಿಡಲು ಅವಕಾಶ ಕೊಡಲಿಲ್ಲ. ಇನ್ಸ್‌ಪೆಕ್ಟರಿಗೆ ನನ್ನ ಮೇಲೆ ಮೊದಲಿಂದಲೂ ಒಂದು

ಕಣ್ಣೀತ್ತು - ಅವರೂ ಕೈಬಿಟ್ಟರು. ನನಗೆ ದಿಕ್ಕೇ ತೋರಲಿಲ್ಲ. ಸಬ್ ಇನ್ಸ್‌ಪೆಕ್ಟರ್ ಬಗ್ಗೆ ಎಲ್ಲರಿಗೂ ಗೌರವವಿತ್ತು. ಅವರನ್ನು ಹಿಡಿದರೆ ನಾನು ಪಾರಾಗಬಹುದೆಂದು ಭಾವಿಸಿ ಅವರ ಮನೆಗೆ ಹೋದೆ. ಅವರ ಹೆಂಡತಿ - ಮಹಾತಾಯಿ - ನಿಮ್ಮ ಅತ್ತೆಮ್ಮನವರು ಎಲ್ಲಾ ಸಾವಧಾನವಾಗಿ ಕೇಳಿ 'ಬಸಪ್ಪ - ನಿನಗೆಷ್ಟು ಮಕ್ಕಳು' ಎಂದರು. 'ಇಬ್ಬರು ಮಕ್ಕಳು, ಜತೆಗೆ ನನ್ನ ಅವ್ವ, ಅಕ್ಕ, ಅಕ್ಕನ ನಾಲ್ಕು ಜನ ಮಕ್ಕಳು - ನಮ್ಮದು ಹತ್ತು ಜನದ ಸಂಸಾರ' ಎಂದು ಹೇಳಿದೆ. 'ಇರಲಿ ಹೋಗು - ದೇವರಿದ್ದಾನೆ' ಎಂದು ಅಭಯಕೊಟ್ಟರು. ಮಾರನೆಯ ದಿನ ಸಬ್ ಇನ್ಸ್‌ಪೆಕ್ಟರು 'ಬಸಪ್ಪ, ಬೆಳಿಗ್ಗೆ ಹತ್ತು ಗಂಟೆಗೆ ಡಿ ಎಸ್. ಪಿ. ಸಾಹೇಬರ ಬಂಗ್ಲೆಯಲ್ಲಿರುತ್ತೇನೆ. ನೀನು ನಿನ್ನ ಹೆಂಡತಿ, ಮಕ್ಕಳು, ತಾಯಿ, ಅಕ್ಕ, ಅಕ್ಕನ ಮಕ್ಕಳು ಎಲ್ಲರನ್ನೂ ಕರೆದುಕೊಂಡು ಬಾ' ಎಂದು ಹೇಳಿದರು. ಅವರು ಹೇಳಿದಂತೆ ಬೆಳಿಗ್ಗೆ ಹತ್ತು ಗಂಟೆಗೆ ಎಲ್ಲರನ್ನೂ ಕರೆದುಕೊಂಡು ಡಿ.ಎಸ್ ಪಿ. ಸಾಹೇಬರ ಬಂಗ್ಲೆ ಮಗ್ಗುಲಲ್ಲಿದ್ದ ಮರದ ಕೆಳಗೆ ಕಾದಿದ್ದೆ. ಅರ್ಧ ಗಂಟೆಯಾಗಿರಬಹುದು. ಸಬ್ ಇನ್ಸ್‌ಪೆಕ್ಟರೂ, ಸಾಹೇಬರೂ ಮಾತನಾಡಿಕೊಂಡು ಹೊರಗೆ ಬಂದರು. ಸಬ್ ಇನ್ಸ್‌ಪೆಕ್ಟರು ಕಣ್ಣುಸಂಜ್ಞೆಮಾಡಲು, ನಾನು ಎಲ್ಲರೊಂದಿಗೆ ದೊಡ್ಡ ಸಾಹೇಬರಿಗೆ ಅಡ್ಡಬಿದ್ದೆ. ಅವರು ಹುಬ್ಬು ಗಂಟುಹಾಕಿಕೊಂಡು

'ಇದೇನ್ರೀ ಪಟ್ಟಾಭಿರಾಮಯ್ಯನವರೇ' ಎಂದರು.

'ಬಡವ ಸರ್. ದೊಡ್ಡ ಸಂಸಾರವಂದಿಗ. ಮುರ್ಠಾಳ ಕೆಲಸ ಮಾಡಿದ್ದಾನೆ. ಈ ಸಾರಿ ಇವನನ್ನು ಕ್ಷಮಿಸಿ ಕಾಪಾಡಬೇಕು.'

'ಇವನನ್ನು ಕ್ಷಮಿಸೋದೇ! ಎಲ್ಲಿಯಾದರೂ ಉಂಟೇ! ಪಕ್ಕಾ ಬದ್ಮಾಷ್. ಇವನ ಚಮಡ ಸುಲಿಸಿದರೂ ಪಾಪ ಬರುವುದಿಲ್ಲ.'

'ಅವನ ತಪ್ಪಿಗೆ ಶಿಕ್ಷೆಯಾಗಬೇಕಾದದ್ದು ನ್ಯಾಯ ಸ್ವಾಮಿ. ಆದರೆ ಅವನ ಸಂಸಾರಕ್ಕೇಕೆ ಶಿಕ್ಷೆಯಾಗಬೇಕು. ಈ ಮುರ್ಠಾಳನ ಅವಿವೇಕದಿಂದ ಇಷ್ಟು ಜನ ಹೊಟ್ಟೆಗಿಲ್ಲದೆ ಸಾಯಬೇಕೇ?'

ಹೀಗೆ ವಾದ ನಡೆಯಿತು. ದೊಡ್ಡ ಸಾಹೇಬರು ಜಪ್ಪಯ್ಯ ಎನ್ನಲಿಲ್ಲ. ಕೊನೆಗೆ ಸಬ್ ಇನ್ಸ್‌ಪೆಕ್ಟರು

'ನೀವು ಇವನನ್ನು ಕ್ಷಮಿಸಿ ಕಾಪಾಡ.ಪವರೆಗೆ ನಾನು ಅನ್ನ ನೀರು ಮುಟ್ಟುವುದಿಲ್ಲ ಸರ್'

ಎಂದು ಗಟ್ಟಿಯಾಗಿ ದೊಡ್ಡಸಾಹೇಬರ ಎರಡು ಕಾಲುಗಳನ್ನೂ ಹಿಡಿದು ಕೊಂಡರು. ನಾನು ಭೂಮಿಗಿಳಿದು ಹೋದೆ. ದೊಡ್ಡ ಸಾಹೇಬರು ಸಬ್ ಇನ್ಸ್‌ಪೆಕ್ಟರ್ ಅವರನ್ನು ಕೈಹಿಡಿದೆತ್ತಿ 'ನಿಮ್ಮ ಮಾತು ತೆಗೆದುಹಾಕಲಾರೆ ಹೋಗಿ - ನೀವು ಹೇಳಿದ ಹಾಗೇ ಮಾಡುತ್ತೇನೆ' ಎಂದು ನುಡಿದು ಒಳಗೆ ಹೋಗಿಬಿಟ್ಟರು. ಸಬ್ ಇನ್ಸ್‌ಪೆಕ್ಟರವರು ಇನ್ನು ಲಂಚ ರುಷುವತ್ತು ಮುಟ್ಟು ವುದಿಲ್ಲವೆಂದು ನನ್ನ ಕೈಯಲ್ಲಿ ಲಿಂಗ ಮುಟ್ಟಿ ಪ್ರಮಾಣಮಾಡಿಸಿದರು. ಅಂದು ಅವರೂ, ಆ ಮಹಾತಾಯಿ ನನ್ನ ಕೈಹಿಡಿದು ಕಾಪಾಡದಿದ್ದರೆ ನನ್ನ ಗತಿಯೇನಾಗಿ ಹೋಗುತ್ತಿತ್ತೋ."

ಈ ವೇಳೆಗೆ ಲಾರಿ ಬಂದ ಶಬ್ದವಾಯಿತು. ಬಸಪ್ಪ ಒಬ್ಬ ಕಾನ್ ಸ್ಟೇಬಲ್ ಕರೆದು ಅವನ ಕಿವಿಯಲ್ಲಿ ಏನೋ ಹೇಳಿ ಗಟ್ಟಿಯಾಗಿ 'ಡ್ರೈವರನ್ನು ಒಳಕ್ಕೆ ಕರಿ' ಎಂದರು ಡ್ರೈವರು ಒಳಕ್ಕೆ ಬರುತ್ತಲೇ

"ಏಕಯ್ಯಾ ಇಷ್ಟು ಹೊತ್ತು?" ಎಂದು ಪ್ರಶ್ನೆಮಾಡಿದರು.

"ಕಾರ್‌ಬರೇಟರ್ ತಂಟೆಮಾಡುತ್ತಿತ್ತು ಸರಿಮಾಡಿಕೊಂಡು ಹೊರಡ ಬೇಕಾಯಿತು ಸ್ವಾಮಿ"

"ಸರಿಹೋಯಿತೋ? ದಾರಿಯಲ್ಲೇನಾದರೂ ಕೈಕೊಡುತ್ತದೋ?"

"ಎಲ್ಲಾ ಸರಿಹೋಗಿದೆ ನೀವು ಬರ್ತೀರಾ ಸ್ವಾಮಿ."

"ಇಲ್ಲ - ಇವರು ನಮ್ಮ ಸ್ನೇಹಿತರು, ಬರುತ್ತಾರೆ. ಮೈಸೂರಿಗೆ ಬೇಗ ಕರೆದುಕೊಂಡು ಹೋಗಬೇಕು. ಈಗ ಆರು ಗಂಟೆ - ಒಂಭತ್ತು ಗಂಟೆಗೆ ಮೈಸೂರು ಸೇರಬಲ್ಲೆಯಾ?"

"ಒಂಭತ್ತಕ್ಕೆ ಹೋಗಬಲ್ಲೆ ಎಂದು ಹೇಳಲಾರೆ - ಹತ್ತು ಗಂಟೆಗಂತೂ ಸೇರುತ್ತೇನೆ."

"ಸ್ವಾಮಿಯವರು ಎಲ್ಲಿ ಹೇಳುತ್ತಾರೆ ಅಲ್ಲಿ ಇಳಿಸು."

ಕಾನ್‌ಸ್ಟೇಬಲ್ ಹೋಟೆಲ್ ಮಾಣಿಯ ಕೈಯಲ್ಲಿ ತಿಂಡಿ ಕಾಫಿ ತೆಗೆಸಿ ಕೊಂಡು ಬಂದ. ಬಸಪ್ಪನವರು ಬಿಡದೆ ಬಲವಂತಮಾಡಿ ಸುಂದರನಿಗೆ ಉಪ ಹಾರ ಮಾಡಿಸಿದರು.

"ನಿಮ್ಮ ಹೆಸರೇನು ಸ್ವಾಮಿ - ಹೇಳಲೇ ಇಲ್ಲವಲ್ಲಾ."

"ನನ್ನ ಹೆಸರು ಸುಂದರರಾವ್ ಅಂತ. ಇಲ್ಲೀ ಕಾಲೇಜಿನಲ್ಲಿ ಮೇಷ್ಟ್ರಾಗಿದ್ದೇನೆ."

"ನನ್ನಿಂದ ಇನ್ನೇನಾದರೂ ಆಗಬೇಕಾಗಿದ್ದರೆ ಹೇಳಿ ಸ್ವಾಮಿ."

"ಇನ್ನೇನೂ ಇಲ್ಲ ಬಸಪ್ಪನವರೇ - ಒಳ್ಳೆಯ ಸಮಯದಲ್ಲಿ ನೀವು ಸಹಾಯಮಾಡಿದಿರಿ. ಡ್ರೈವರಿಗೆ ಏನು ಕೊಡಬೇಕು ?"

"ಏನೂ ಕೊಡಬೇಡಿ. ಅವನು ನಿತ್ಯ ಮೈಸೂರಿಗೆ ಹೋಗಿ ಬರುತ್ತಾನೆ."

ಬಸಪ್ಪನವರು ಸುಂದರನನ್ನು ಲಾರಿಯಲ್ಲಿ ಕೂಡಿಸಿ, ಡ್ರೈವರನ್ನು ಎಚ್ಚರಿಸಿ ಕಳಿಸಿಕೊಟ್ಟರು.

ಸುಂದರ ಮೈಸೂರಿಗೆ ಹೋಗುತ್ತಿದ್ದ ಕಾರಣ ತಿಳಿದಮೇಲೆ ಡ್ರೈವರ್ ಲಾರಿಯನ್ನು ಫುಲ್‌ಸ್ಪೀಡಿನಲ್ಲಿ ಓಡಿಸಿದ. ಹೊತ್ತು ಕಳೆಯುವುದಕ್ಕೆ ದಾರಿಯಲ್ಲಿ ಸುಂದರ ಡ್ರೈವರೊಂದಿಗೆ ಮಾತಿಗಾರಂಭಿಸಿದ.

"ಈ ಸಬ್ ಇನ್‌ಸ್ಪೆಕ್ಟರ್ ಹೇಗಯ್ಯಾ ?"

"ಬಹಳ ಒಳ್ಳೆಯವರು ಸರ್. ಪೋಲೀಸ್ ಖಾತೆಯಲ್ಲಿಯೇ ಇಂಥ ಮನುಷ್ಯ ಸಿಕ್ಕುವುದಿಲ್ಲ. ಇವತ್ತು ಒಂದು ಲಕ್ಷ ರೂಪಾಯಿ ಲಂಚ ಕೊಡಲಿ ಕಣ್ಣೆತ್ತಿ ನೋಡುವುದಿಲ್ಲ."

ಪಟ್ಟಾಭಿರಾಮಯ್ಯನವರ ಪ್ರಭಾವ ಫಲಕಾರಿಯಾಗಿದ್ದುದನ್ನು ಕಂಡು ಸುಂದರನಿಗೆ ಅತ್ಯಾನಂದವಾಯಿತು.

ಡ್ರೈವರ್ ಲಾರಿಯನ್ನು ಒಂಭತ್ತೂವರೆ ಗಂಟೆಯ ಸುಮಾರಿಗೆ ಮೈಸೂರಿಗೆ ತಂದ. ಸುಂದರ ಡ್ರೈವರ್ ಕೈಗೆ ಎರಡು ರೂಪಾಯಿ ಹಾಕಿ ಕೆಳಗಿಳಿದ.

ಸುನಂದಾ ಅವನನ್ನು ನಿರೀಕ್ಷಿಸುತ್ತಿದ್ದಂತೆ ಕಂಡುಬಂದಿತು. ಅವಳೇ ಬಂದು ಸ್ವಾಗತ ಬಯಸಿದಳು. ಸುನಂದೆಯ ಕಣ್ಣುಗಳೆರಡೂ ಅತ್ತು ಅತ್ತು ಕಾದ ಕಬ್ಬಿಣದಂತಾಗಿತ್ತು. ಸುಂದರನಿಗೆ ದುಃಖ ತಡೆಯಲಾಗಲಿಲ್ಲ.

ಇಬ್ಬರೂ ಸುಧಾರಿಸಿಕೊಂಡು ಮಾತನಾಡುವ ಸ್ಥಿತಿಗೆ ಬರಬೇಕಾದರೆ ಅರ್ಧ ಗಂಟೆ ಬೇಕಾಯಿತು.

"ಇಷ್ಟು ಬೇಗ ಏನಾಯಿತು ?"

"ಎರಡನೆಯ ಅಟ್ಯಾಕ್ (attack)"

"ಕಾರಣ ?"

"ಅಣ್ಣ ಬರುತ್ತೇನೆಂದು ಕಾಗದ ಬರೆದಿದ್ದಾರೆ. ಅವನ್ನು ಕೇಳಿದ ಸ್ವಲ್ಪ ಹೊತ್ತಿನಲ್ಲೇ . . ."

"ಸುಮ್ಮನೆ ದುಃಖಿಸಿ ಏನು ಪ್ರಯೋಜನ ಸುನೂ. ಹೋದ ವಸ್ತು ಮರಳಿ ಬರುವುದಿಲ್ಲ. ಇನ್ನು ಮುಂದಿನ ವ್ಯವಸ್ಥೆ ನೋಡಿಕೊಳ್ಳಬೇಕು."

"ಅಮ್ಮ . . . ಅವರನ್ನು ಕಳಿಸುವುದಿಲ್ಲವೆಂದು ಹಟಮಾಡುತ್ತಿದ್ದಾಳೆ."

ಸುನಂದೆಯ ಜತೆಯಲ್ಲಿ ಸುಂದರ ಒಳಗೆ ಹೋದ. ಕೊಠಡಿಯ ಒಂದು ಕಡೆ ಜಾನಕಿ, ಅವಳ ಮಕ್ಕಳು ಅಳುತ್ತ ನಿಂತಿದ್ದರು. ಯಜಮಾನರ ಕಳೇಬರದ ಮೇಲೆ ತಮ್ಮ ಬಲಗೈಯಿಟ್ಟುಕೊಂಡು ಇಂದಿರಮ್ಮನವರು ಎಡಗೈಯಿಂದ ಸೆರಗಿನಲ್ಲಿ ಮುಖ ಮುಚ್ಚಿಕೊಂಡು ಕುಳಿತಿದ್ದರು.

ಯಾರೋ ಬಂದ ಸಪ್ಪಳವಾಗಲು ಕತ್ತೆತ್ತಿ ನೋಡಿದರು. ಸುಂದರ ಕಳೇಬರದ ಬಳಿಗೆ ಬಂದು ಮಾವನವರ ಪಾದಗಳನ್ನು ಕಣ್ಣಿಗೊತ್ತಿಕೊಂಡು, ಅತ್ತೆಮ್ಮನವರಿಗೆ ಸ್ವಲ್ಪದೂರದಲ್ಲಿ ಬಂದು ಕುಳಿತ.

ಬೇಟೆಗೆ ಸಿಕ್ಕಿದ ಜಿಂಕೆಯಂತೆ ಇಂದಿರಮ್ಮನವರು ಅಳಿಯನನ್ನೊಮ್ಮೆ ಆರ್ತತೆಯಿಂದ ನೋಡಿದರು. ಅವರ ಕಣ್ಣಲ್ಲಿ ಕೋಡಿ ಒಂದೇ ಸಮನೆ ಹರಿಯುತ್ತಿತ್ತು.

ಒಣಗುತ್ತಿದ್ದ ಗಂಟಲನ್ನು ಸರಿಮಾಡಿಕೊಂಡು ಸುಂದರ ಮೆಲ್ಲನೆ

"ನೀವು ಧೈರ್ಯ ತಂದುಕೊಳ್ಳಬೇಕು. ಹೀಗೆ ದುಃಖಿಸುತ್ತ ಕುಳಿತರೆ ಚಿಕ್ಕವರಿಗೆ ಯಾರು ಸಮಾಧಾನ ಹೇಳಬೇಕು. ನೀವು ಜ್ಞಾನಿಗಳು - ನಿಮಗೆ ನಾನು ಹೇಳಬೇಕಾದದ್ದೇನಿದೆ. ನಿಮ್ಮ ಎದುರಿಗಿರುವುದು ಮಣ್ಣಿನ ಬೊಂಬೆ. ಅದಕ್ಕಾಗಿ ನೀವು . . ."

"ಅಲ್ಲಪ್ಪ - ಅಲ್ಲ - ನನ್ನ ಸ್ವಾಮಿ - ನನ್ನ ದೇವರು . ನನ್ನ ಸರ್ವಸ್ವ"

ಎಂದು ಚೀರಿ ಕಳೇಬರದ ಮೇಲೆ ಬಿದ್ದರು. ಸುಂದರ ಮೆಲ್ಲನೆದ್ದು ಹೊರಗೆ ಬಂದು ಸುನಂದೆಗೆ

"ಅವರ ಹೊಟ್ಟೆಯಲ್ಲಿ ಎಷ್ಟು ದುಃಖವಿದೆ ಅಷ್ಟೂ ತೋಡಿಕೊಂಡು ಬಿಡಲಿ. ಯಾರೂ ತಡೆಯಬೇಡಿ - ಮುಂದಿನ ವ್ಯವಸ್ಥೆ ಬೇಗಗ್ಗೆ ಮಾಡಿದ

ರಾಯಿತು. ಮಹಾರಾಯ - ಹೇಗೆ ಮಲಗಿದ್ದಾರೆ. ಇದೇ ನಿದ್ದೆ ಬಂದಿದೆ ಯೇನೋ ಎನ್ನುವ ಹಾಗೆ . . ."

ಸುಂದರನ ಕೊರಳುಬ್ಬಿ ಬಂತು. ಮುಂದಕ್ಕೆ ಮಾತು ಹೊರಡಲಿಲ್ಲ.

ಮಾರನೆಯ ಬೆಳಿಗ್ಗೆ ಸುಂದರನೇ ನಿಂತುಕೊಂಡು ದಹನ ಸಂಸ್ಕಾರ ಮಾಡಿಸಿದ. ಕಾಲೇಜಿಗೆ ರಜಕ್ಕೆ ಬರೆದುಹಾಕಿ ಮೈಸೂರಿನಲ್ಲಿ ನಿಂತು, ವೈಕುಂಠ ಸಮಾರಾಧನೆಯವರೆಗೆ ಎಲ್ಲ ಕ್ರಿಯೆಗಳನ್ನೂ ವಿಧ್ಯುಕ್ತವಾಗಿ ನೆರವೇರಿಸಿದ.

ವೈಕುಂಠ ಸಮಾರಾಧನೆಯಾದ ಮಾರನೆಯ ದಿನ ಸುನಂದೆ ಸುಂದರನ ಕೈಗೆ ಒಂದು ನೋಟ್ ಬುಕ್, ಕೆಲವು ಕಾಗದಪತ್ರಗಳನ್ನು ತಂದಿತ್ತಳು. ಸುಂದರ ಅವುಗಳನ್ನು ನೋಡಿ

"ಸುನೂ - ನಿಮ್ಮ ತಂದೆ ಎಂಟು ಸಾವಿರ ಇನ್‌ಷ್ಯೂರೆನ್ಸ್ ಮಾಡಿದ್ದಾರೆ."

"ಸಾಲ ಎಷ್ಟಿದೆ ನೋಡಿ."

"ಬಡ್ಡಿ ಸೇರಿ ನಾಲ್ಕೂವರೆ ಸಾವಿರ, ನೊಸ್ಸೈಟಿಗೆ ಕೊಡಬೇಕಾದದ್ದು ಎಂದು ಬರೆದಿದ್ದಾರೆ."

"ಇನ್‌ಷ್ಯೂರೆನ್ಸ್ ಹಣ ತೆಗೆದುಕೊಂಡು ಸಾಲ ತೀರಿಸಿಬಿಡಬೇಕು."

"ನಾನು ಹೋಗುವ ಮೊದಲು ಅಪ್ಲಿಕೇಷನ್ ಸಿದ್ಧಪಡಿಸುತ್ತೇನೆ. ನಿಮ್ಮ ತಾಯಿಯ ರುಜು ಮಾಡಿಸಿಕೊಡು. ಓರಿಯಂಟಲ್ ಕಂಪೆನಿಯಲ್ಲಿ ಐದು ಸಾವಿರ, ಗೌರ್ನಮೆಂಟ್ ಇನ್‌ಷ್ಯೂರೆನ್ಸ್ ಕಂಪೆನಿಯಲ್ಲಿ ಮೂರು ಸಾವಿರ – ಎರಡನ್ನೂ ನಾನು ವಸೂಲುಮಾಡಿ ತಂದುಕೊಡುತ್ತೇನೆ."

"ಇನ್ನೂ ಏನಾದರೂ ಸಾಲವಿದೆಯೇ ನೋಡಿ."

"ಏನೂ ಇಲ್ಲ. ನಿಮ್ಮ ತಾಯಿ ಇನ್ನೇನು ಹೇಳಿದರು ?"

"ಔಟ್‌ಹೌಸಿನಲ್ಲಿ ನಾವಿದ್ದುಕೊಂಡು, ಈ ಮನೆ ಬಾಡಿಗೆ ಕೊಡಬೇಕೆಂದಿದ್ದಾರೆ."

"ಅವರನ್ನು ಇಲ್ಲಿ ಬಿಟ್ಟು ಹೋಗುವುದಕ್ಕೇ ನನಗೆ ಮನಸ್ಸಿಲ್ಲ. ಎಲ್ಲರೂ ಬೆಂಗಳೂರಿಗೇ ಹೋಗಿಬಿಡಬಹುದಾಗಿತ್ತು - ಆದರೆ ನಿನ್ನ ಪರೀಕ್ಷೆ ಮುಗಿಯಬೇಕಲ್ಲ,"

ಪ್ರತಿಯೊಂದು ಮಾತು, ಕೃತಿಯಲ್ಲಿಯೂ ಗಂಡ ತೋರುತ್ತಿದ್ದ ಹಿರಿಮೆ ಕಂಡು ಸುನಂದ ಅಪ್ರತಿಭಳಾದಳು.

"ನೀವು ಈ ಮನೆ ಅಳಿಯನಲ್ಲ. ಅಮ್ಮ ಹೇಳಿದಂತೆ ಯಾವದೋ ಜನ್ಮದಲ್ಲಿ ಮಗನಾಗಿದ್ದಿರಬೇಕು."

"ನಾನು ತಾಯಿಯನ್ನೇ ಕಾಣೆ ಸುನೂ. ಹತ್ತು ದಿವಸದ ಮಗುವಾಗಿದ್ದಾಗಲೇ ಅವರು ತೀರಿಕೊಂಡರಂತೆ. ನಿಮ್ಮ ತಾಯಿಯನ್ನು ನೋಡಿದಾಗಲೇ ನನ್ನ ಮನಸ್ಸು ಅವರನ್ನು ತಾಯಿಯೆಂದು ಒಪ್ಪಿಕೊಂಡಿತು ನನ್ನ ಹಾಗೆ ಎಷ್ಟು ಜನ ಇದ್ದಾರೆಂದು ನೀನರಿಯೆ"

ಎಂದು ಬಸಪ್ಪನ ವೃತ್ತಾಂತವನ್ನು ವಿವರಿಸಿದ.

ಸುಂದರ ಹೆಚ್ಚುದಿನ ನಿಲ್ಲಲು ಸಾಧ್ಯವಿರಲಿಲ್ಲ. ರಜಾ ಹೆಚ್ಚಿಸಿಕೊಳ್ಳುವುದು ಅಪಾಯಕರವಾಗಿತ್ತು, ಅಮುಂಗಳ ಕಾರ್ಯಗಳಿಗೆ ಬಂದವರು ಹೊರಡುವ ಮುನ್ನ ಅಪ್ಪಣೆ ಪಡೆಯುವಂತೆಯೂ ಇರಲಿಲ್ಲ

ಸುಂದರ ಊರಿಗೆ ಹಿಂದಿರುಗಿದ ಮೇಲೆ ಸುನಂದೆಯ ಗೆಳತಿಯರು ಪುಷ್ಪಂ, ರಾಜಮಣಿ, ಶಾಂತಾ ದಿನವೂ ಬಂದು ಅವಳನ್ನು ಸಂತೈಸುತ್ತಿದ್ದರು.

ತಂದೆಯ ಸಾವು ಸಂಚಯನಕ್ಕೆ ಬಂದ ಜಾನಕಮ್ಮ ತಂದೆಯ ಮನೆಯಲ್ಲಿಯೇ ಮಕ್ಕಳೊಂದಿಗೆ ನಿಂತಳು. 'ಆ ಗಂಡನ ಮನೆಗೆ ಪುನಃ ಕಾಲಿಡುವುದಿಲ್ಲ' ಎಂದು ಶಪಥಮಾಡಿಯೇ ನಿಂತಿದ್ದಳು. ಪತಿವಿಯೋಗದ ದುಃಖ, ಮಗನ ಅವಿವೇಕ ವರ್ತನೆಯ ಜತೆಗೆ ಇಂದಿರಮ್ಮನವರು ಜಾನಕಿಯ ಸಮಸ್ಯೆಯನ್ನೂ ಸಹಿಸಿಕೊಳ್ಳಬೇಕಾಯಿತು.

೨

ಪುಟ್ಟೋ ಪಂಡಿತರು ವೈದ್ಯವೃತ್ತಿ ಮಾಡಿದುದು ಕೆಲವೇ ವರ್ಷಗಳು. ಆದರೆ ಆ ಅಲ್ಪಾವಧಿಯಲ್ಲಿಯೇ ಸಾಕಷ್ಟು ಆಸ್ತಿ ಕೀರ್ತಿ ಎರಡನ್ನೂ ಗಳಿಸಿದರು. ಚಾಮರಾಜನಗರದಲ್ಲಿ ಸ್ವಂತ ಮನೆ ಮಾಡಿಕೊಂಡರು. ವೈದ್ಯವೃತ್ತಿಯನ್ನು ಪಂಡಿತರು ಬಿಡುವುದಕ್ಕೆ ಒಂದು ವಿಚಿತ್ರ ಕಾರಣವಿತ್ತು.

ಪಂಡಿತರ ಹಸ್ತಗುಣದ ಪ್ರಭಾವವೋ, ಹೃದಯಗುಣದ ಪ್ರಭಾವವೋ ಅವರು ಹಿಡಿದ ಕೇಸುಗಳು ಸುಮುಖವಾಗುತ್ತಿದ್ದವು. ಪಂಡಿತರ ಕೈಸೋಂಕಿ

ವರೆ ಸತ್ತವನು ಕೂಡ ಎದ್ದು ಕೂಡುತ್ತಾನೆ ಎಂಬ ಪ್ರತೀತಿ ಬೆಳೆಯಿತು. ಚಾಮರಾಜನಗರ, ನಂಜನಗೂಡು, ಮೈಸೂರುಗಳಲ್ಲಿ ಮಾತ್ರವಲ್ಲದೆ ಪಂಡಿತರು ಕೊಳ್ಳೇಗಾಲ, ಕೊಯಮುತ್ತೂರು, ಸೇಲಂ, ಈರೋಡ್ ಮೊದಲಾದ ಊರುಗಳಲ್ಲಿಯೂ ತಮ್ಮ ಖ್ಯಾತಿ ಬೆಳಸಿಕೊಂಡಿದ್ದರು. ಅವರಿಗೆ ವೈದ್ಯವೃತ್ತಿಯಿಂದ ಕೈತುಂಬ ಹಣ ಸಿಕ್ಕುತ್ತಿದ್ದರೂ, ಹಣಕ್ಕಾಗಿಯೇ ವೃತ್ತಿಯನ್ನವರು ಅವಲಂಬಿಸಿರಲಿಲ್ಲ. ಒಬ್ಬ ರೋಗಿಯ ಚಿಕಿತ್ಸೆ ಒಪ್ಪಿಕೊಂಡರೆ ಅವನಿಗೆ ಗುಣವಾಗುವವರೆಗೂ ಪಂಡಿತರಿಗೆ ಸ್ವಲ್ಪವೂ ನೆಮ್ಮದಿಯಿರುತ್ತಿರಲಿಲ್ಲ. ಚಿಕಿತ್ಸೆಯ ಜತೆಯಲ್ಲಿ ಪೂಜೆ, ವ್ರತಮಾಡಿ ರೋಗಿಯನ್ನು ಗುಣಪಡಿಸುತ್ತಿದ್ದರು.

ಇಷ್ಟೊಂದು ಅಂತಃಕರಣ ಪಂಡಿತರಿಗೆ ಒಗ್ಗಿ ಬರಲಿಲ್ಲ. ರೋಗಿಗಳ ಎಲ್ಲ ಕಾಹಿಲೆಗಳನ್ನೂ ತಾವೇ ಮಾನಸಿಕವಾಗಿ ಅನುಭವಿಸಿ ಅನುಭವಿಸಿ ಅವರಿಗೆ ಸಾಕಾಗಿತ್ತು. ಹದಿನೈದು ವರ್ಷಕಾಲ ವೃತ್ತಿ ಸಾಂಗವಾಗಿ ನಡೆದಿತ್ತು. ಮನೆಯ ಮಕ್ಕಳಲ್ಲಿ ಯಾರಾದರೂ ಈ ವೃತ್ತಿಯನ್ನವಲಂಬಿಸಲಿ ಎಂದು ಪಂಡಿತರ ಮನಸ್ಸಿನಲ್ಲಿ ಮಹದಾಕಾಂಕ್ಷೆ. ಇಬ್ಬರು ಮಕ್ಕಳಿಗೂ ವೈದ್ಯದ ಮೇಲೆ ಅಭಿರುಚಿಯಿರಲಿಲ್ಲ. ಬಲವಂತವಾಗಿ ಅವರನ್ನು ಈ ವೃತ್ತಿಗೆ ತಳ್ಳಿ ಅವರ ಜೀವನ ಹಾಳುಮಾಡುವುದಲ್ಲದೆ, ಅವರನ್ನು ನಂಬಿ ಬರುವ ರೋಗಿಗಳ ನಾಶಕ್ಕೂ ಹೊಣೆಗಾರರಾಗಲು ಪಂಡಿತರು ಇಷ್ಟಪಡಲಿಲ್ಲ,

ಒಂದು ಬೆಳಿಗ್ಗೆ ಎದ್ದವರೇ ಸ್ನಾನ, ಸಂಧ್ಯಾವಂದನೆ ಮುಗಿಸಿ ಶ್ರೀಕಂಠೇಶ್ವರನ ದೇವಾಲಯಕ್ಕೆ ಹೋಗಿ ರುದ್ರಾಭಿಷೇಕ ಮಾಡಿಸಿ ಭಗವಂತನ ಮುಂದೆ ಕೈಜೋಡಿಸಿ ನಿಂತರು. ಪಂಡಿತರಿಗೂ ಭಗವಂತನಿಗೂ ನಡೆದ ಸಂಭಾಷಣೆ ಇತರರಿಗೆ ಕೇಳಿಸಲಿಲ್ಲ. ಆದರೆ ಪಂಡಿತರ ಸಮಸ್ಯೆ ಪರಿಹಾರವಾಗಿತ್ತೆಂಬುದು ಅವರ ಮುಖದಲ್ಲಿ ಸೂಸುತ್ತಿತ್ತು.

ಅಂದೇ ಪಂಡಿತರು ನಂಜನಗೂಡಿನ ಶ್ರೀಕಂಠಯ್ಯನವರಿಗೆ ಹೇಳಿ ಕಳುಹಿಸಿ ಅವರನ್ನು ಬರಮಾಡಿಕೊಂಡರು. ಶ್ರೀಕಂಠಯ್ಯನವರ ತಂದೆ ರಾಮಾಶಾಸ್ತ್ರಿಗಳಲ್ಲಿ ಪಂಡಿತರಿಗೆ ವೈದ್ಯವಾರವಾಗಿತ್ತು. ತಮ್ಮ ವೈದ್ಯಕೀಯ ಆಸ್ತಿಗೆ ಗುರುಪುತ್ರನೇ ಯೋಗ್ಯ ಉತ್ತರಾಧಿಕಾರಿಯೆಂದು ಪಂಡಿತರು ನಿಶ್ಚಯಿಸಿದರು.

ಒಳ್ಳೆಯ ಮುಹೂರ್ತ ನಿಶ್ಚಯಿಸಿ, ಊರಿನ ಸಮಸ್ತರ ಸಮ್ಮುಖದಲ್ಲಿ ತಮ್ಮ ವೈದ್ಯಕೀಯ ಉಪಕರಣಗಳು, ಔಷಧಗಳು, ಬೆಲೆಬಾಳುವ ಕುಪ್ಪಿ

ಪಾತ್ರೆಗಳು, ಭಸ್ಮಗಳು, ತಾಳೀಗರಿಯ ಹಸ್ತಪ್ರತಿಗಳು - ಇವುಗಳ ಜತೆಗೆ ಕೆಕ್ಕೇರಿಮಗ್ಗದ ಒಂದು ಜತೆ ರೇಷ್ಮೆ ಪಂಚೆ, ಒಂದು ಜತೆ ಶಾಲು ಇರಿಸಿ ದಾನಮಾಡಿ ವೃತ್ತಿಗೆ ಕೈಮುಗಿದುಬಿಟ್ಟರು. ರಾಜಯೋಗ್ಯವಾದ ಊಟ ಸಂತರ್ಪಣೆಯೂ ಆಯಿತು.

ಪಂಡಿತರ ವಿಚಿತ್ರ ನಡೆವಳಿಕೆ ಸಾವಿರಾರು ಜನಗಳಿಗೆ ಆಶ್ಚರ್ಯ, ಕೋಪವನ್ನುಂಟುಮಾಡಿದರೂ ಪಂಡಿತರಿಗೆ ಅನುಪಮ ಶಾಂತಿ, ಸೌಖ್ಯ ವನ್ನಿತ್ತಿತು. ವೃತ್ತಿ ಬಿಟ್ಟ ತರುವಾಯ ತಮ್ಮ ಆಸ್ತಿ ರೂಢಿಸಿಕೊಂಡು, ತೋಟದ ಕೆಲಸ ಮಾಡಿಕೊಂಡು, ತೃಪ್ತಿಯ ಶಾಂತಬಾಳನ್ನು ಬಾಳಲಾ ರಂಭಿಸಿದರು.

ಇದೇ ಸಮಯಕ್ಕೆ ಅವರ ಹಿರಿಯ ಮಗ ರಂಗಣ್ಣ ಮೈಸೂರಿನಲ್ಲಿ ಎಸ್.ಎಸ್.ಎಲ್.ಸಿ. ಪಾಸು ಮಾಡಿಕೊಂಡು ಬಂದು ಊರು ಸೇರಿದ. ರಜಾ ಮುಗಿದ ಮೇಲೆ ಮಗ ಮೈಸೂರಿಗೆ ಹಿಂದಿರುಗಿ ಹೋಗಿ ವಿದ್ಯಾಭ್ಯಾಸ ಮುಂದು ವರಿಸಬಹುದೆಂದು ಪಂಡಿತರು ಭಾವಿಸಿದ್ದರು. ರಂಗಣ್ಣ ತಾನು ಮುಂದೆ ಓದುವು ದಿಲ್ಲವೆಂದೂ ಊರಿನಲ್ಲಿಯೇ ಇದ್ದುಕೊಂಡು ತಂದೆಗೆ ನೆರವಾಗುವುದಾಗಿಯೂ ತಿಳಿಸಿದ. ಮಗ ಮನೆ ಸೇರಿಕೊಂಡು ನಿಷ್ಕಾರಣವಾಗಿ ಕಾಲಕ್ಷಯ ಮಾಡು ವುದು ಪಂಡಿತರಿಗೆ ಬೇಡವಾಗಿದ್ದರೂ ಅವನನ್ನು ಬಲವಂತಮಾಡಿ ಮೈಸೂರಿಗೆ ಅಟ್ಟುವ ಪ್ರಯತ್ನಮಾಡಲಿಲ್ಲ.

ರಂಗಣ್ಣ ಊರಿನಲ್ಲಿ ನಿಂತುದು ತಂದೆಗೆ ನಿಜವಾಗಿಯೂ ದೊಡ್ಡ ಸಹಾಯ ವಾಯಿತು. ರಂಗಣ್ಣ ಸ್ವಲ್ಪ 'ಆಡಾತೀಡಾ' ಬೆಳೆದಿದ್ದ, ನಾಲ್ಕು ಆಳು ಮಾಡುವ ಕೆಲಸ ಒಬ್ಬನೇ ನಿರ್ವಹಿಸುತ್ತಿದ್ದ. ಎರಡು ಮೂರು ವರ್ಷಗಳಲ್ಲಿ ತೋಟದ ಕೆಲಸದ ಸಮಸ್ತ ಜವಾಬ್ದಾರಿಯೂ ಅವನ ಮೇಲೇ ಬಿತ್ತು. ಅವನ ಮುಂದೆ ಮೈಗಳ್ಳತನ ತೋರಿಸುವುದಕ್ಕೆ ಆಳುಗಳು ಹೆದರುತ್ತಿದ್ದರು.

ತೋಟದ ಕೆಲಸ ಮುಗಿಸಿಕೊಂಡು ಬಂದು ರಂಗಣ್ಣ ತನ್ನ ಗೆಳೆಯರ ಬಳಗದೊಂದಿಗೆ ಇಸ್ಪೀಟಿಗೆ ಕೂಡುತ್ತಿದ್ದ. ಅವನಿಗೆ ಜೀವನದಲ್ಲಿದ್ದ ಎರಡು ಆಸಕ್ತಿಗಳೆಂದರೆ, ಇಸ್ಪೀಟ್ ಆಡುವುದು, ಕಂಠಪೂರ್ತಿ ಹೊಡೆಯುವುದು

ರಂಗಣ್ಣನ ಊಟತಿಂಡಿಯ ವಿತರಣೆ ಊರಿನಲ್ಲಿ ಮನೆಮಾತಾಯಿತು. ಒಂದು ಸೇರು ರವೆಯ ಉಪ್ಪಿಟ್ಟು, ಒಂದು ಸಲಕ್ಕೆ ಮುಗಿಸುವುದು ಅವನಿಗೆ

ದೊಡ್ಡ ವಿಷಯವಾಗಿರಲಿಲ್ಲ. ಒಂದು ಸಲ ಲಾಯರ್ ಶಾಮರಾಯರ ಮನೆಯ ಮದುವೆಯಲ್ಲಿ ಪೈಪೋಟಿ ಬಿತ್ತು. ಊಟಕ್ಕೆ ಕುಳಿತಿದ್ದವರಲ್ಲಿ ಎರಡು ಪಕ್ಷವಾಯಿತು. ಒಂದು ಪಕ್ಷ ಪುರೋಹಿತ ಸುಬ್ಬಾಭಟ್ಟನ ಭಾಗವಹಿಸಿ 'ಪಾಪ! ರಂಗಣ್ಣಾ ಏನು ತಿಂದಾನು, ಸುಬ್ಬಾಭಟ್ಟ ಸೊಗಸಾಗಿ ಊಟಮಾಡಿ ಮೇಲೆ ಇಪ್ಪತ್ತು ಲಾಡು ತಿನ್ನಬಲ್ಲ' ಎಂದು ಹೇಳಿತು. ರಂಗಣ್ಣನ ಅಭಿಮಾನಿಗಳು ಅಷ್ಟು ಬೇಗ ಸೋಲನ್ನೊಪ್ಪಿಕೊಳ್ಳಲು ಸಿದ್ಧರಾಗಿರಲಿಲ್ಲ 'ರಂಗಣ್ಣಾ ಊಟ ಮುಗಿದ ಮೇಲೆ ಮೂವತ್ತು ಲಾಡು ತಿನ್ನಬಲ್ಲ' ಎಂದರು. ಈವರೆಗೆ ತೆಪ್ಪಗೆ, ಮಜ್ಜಿಗೆ ಹುಳಿಯಲ್ಲದ್ದಿದ ಆಂಬೊಡೆ ಮುಗಿಸುತ್ತಿದ್ದ ಭಟ್ಟ 'ಆಹಾ! ತಿನ್ನಬಲ್ಲ - ಅವನ ತಲೆ!' ಎಂದು ಮೂದಲಿಸಿದ. ರಂಗಣ್ಣನ ಆತ್ಮಾಭಿಮಾನಕ್ಕೆ ಬಲವಾದ ಧಕ್ಕೆ ತಗುಲಿತು. ಕಣ್ಣುಗಳಿಂದ ಕಿಡಿಕಾರುತ್ತ 'ಏ ಭಟ್ಟ- ಎಷ್ಟು ತಿನ್ನಬಲ್ಲೆಯೊ ನೀನು-ನೀನು ಎಷ್ಟು ಲಾಡು ತಿನ್ನುತ್ತೀಯೋ ಅದರ ಮೇಲೆ ಹತ್ತು ಲಾಡು ನಾನು ತಿನ್ನಬಲ್ಲೆ' ಎಂದು ರಂಗಣ್ಣ ಹೇಳಿದ. ಭಟ್ಟ ಬೆದರಿಕೆಗೆ ಜಗ್ಗುವ ಆಸಾಮಿಯಾಗಿರಲಿಲ್ಲ. ರಂಗಣ್ಣನ ಪಣವನ್ನು ಒಪ್ಪಿಕೊಂಡ. ಶಾಮರಾಯರು ಲಾಡು ಒದಗಿಸುವ ಜವಾಬ್ದಾರಿ ಹೊತ್ತರು

ಊಟ ಮುಗಿದ ಮೇಲೆ ತಾಂಬೂಲಕ್ಕೆ ಎಲ್ಲರೂ ಕುಳಿತರು ಭಟ್ಟ-ರಂಗಣ್ಣನ ಲಾಡು ಸ್ಪರ್ಧೆ ನೋಡುವುದಕ್ಕೆ ಮದುವೆ ಮನೆಯವರೆಲ್ಲಾ ಸೇರಿದರು. ಶಾಮರಾಯರು ನೂರು ಲಾಡುಗಳ ಒಂದು ಬುಟ್ಟಿ ತರಿಸಿ ಕೋಣೆಯಲ್ಲಿಡಿಸಿದರು.

ಸ್ಪರ್ಧೆಗೆ ಆರಂಭವಾಯಿತು. ರಂಗಣ್ಣನ ಸ್ನೇಹಿತ ಅನಂತ ಇಬ್ಬರಿಗೂ ಹತ್ತು ಹತ್ತು ಲಾಡು ಕೊಟ್ಟು 'ಆರಂಭಿಸಿ' ಎಂದು ಹೇಳಿದ. ಮೊದಲನೆಯ ಸರ್ತಿ ಮುಗಿಯಿತು. ಎರಡನೆಯ ಸರ್ತಿಯ ಹಂಚಿಕೆಯಾಯಿತು. ರಂಗಣ್ಣ ಸುಲಭವಾಗಿ ತಿಂದು ಮುಗಿಸಿದ. ಭಟ್ಟ ಸ್ವಲ್ಪ ಎದೆ ನೀವಿಕೊಂಡು ತಿಂದು ಮುಗಿಸಿದ. ಮೂರನೆಯ ಸರ್ತಿಯ ಹಂಚಿಕೆಯಾಯಿತು. ನಾಲ್ಕು ಲಾಡು ತಿನ್ನುವಷ್ಟರಲ್ಲಿ ಭಟ್ಟನಿಗೆ ಸಾಕುಸಾಕಾಗಿ ಹೋಯಿತು. ಅದುವರೆಗೆ ತಿಂದಿದ್ದ ಲಾಡುಗಳೂ ಗಂಟಲಿಗೆ ಬರಲಾರಂಭಿಸಿದವು. ರಂಗಣ್ಣ ತನ್ನಲ್ಲಿದ್ದ ಮೂರನೆಯ ಸರ್ತಿಯ ಹತ್ತು ಲಾಡುಗಳನ್ನೂ ಮುಗಿಸಿ ಮೇಲೆ ಐದು ಲಾಡು ತಿಂದು ಮುಗಿಸಿದ. ಭಟ್ಟನ ಲೆಕ್ಕ ಇಪ್ಪತ್ತು ನಾಲ್ಕಕ್ಕೂ ರಂಗಣ್ಣನ ಲೆಕ್ಕ ಮೂವತ್ತೈ

ದಕ್ಕೂ ನಿಂತಿತು. ಭಟ್ಟ ರಂಗಣ್ಣನಿಗೆ ಸಾಷ್ಟಾಂಗ ನಮಸ್ಕಾರ ಹಾಕಿ ತನ್ನ ಸೋಲನ್ನೊಪ್ಪಿಕೊಂಡ.

ಇದರ ಪರಿಣಾಮವಾಗಿ ಭಟ್ಟ ಅಜೀರ್ಣ ರೋಗದಿಂದ ನರಳಿ ಮೂರುವಾರ ಚಿಕಿತ್ಸೆ ಮಾಡಿಸಿಕೊಂಡು ಬದುಕಿಕೊಳ್ಳಲೇಬೇಕೆಂದು ಹಟತೊಟ್ಟು ಬದುಕಿಕೊಂಡ, ರಂಗಣ್ಣನ ದೈತ್ಯದೇಹ ಅಲುಗಾಡಲಿಲ್ಲ. ಅಂದಿನಿಂದ ಊರಿನವರು ಯಾರೂ ರಂಗಣ್ಣನ ಮೇಲೆ ಸ್ಪರ್ಧೆಗೆ ನಿಲ್ಲುತ್ತಿರಲಿಲ್ಲ. ಅವನನ್ನು ಕಂಡರೆ ಒಂದು ಬಗೆಯ ಆಶ್ಚರ್ಯ, ಭಯ, ಭಕ್ತಿ ವ್ಯಕ್ತಪಡಿಸಲಾರಂಭಿಸಿದರು.

ಕೆಲವು ವರ್ಷಗಳು ಕಳೆದ ಮೇಲೆ ಪಂಡಿತರ ಎರಡನೆಯ ಮಗ ಸಂಜೀವ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕಟ್ಟಿದ ರಂಗಣ್ಣ ವಯಸ್ಕನಾಗಿದ್ದುದರಿಂದ ಅವನ ಮದುವೆ ಮುಗಿಸಿಬಿಡಬೇಕೆಂದು ಪಂಡಿತರು ಕನ್ಯಾನ್ವೇಷಣೆ ಮಾಡಲಾರಂಭಿಸಿದರು.

ಪಟ್ಟಾಭಿರಾಮಯ್ಯನವರಿಗೆ ಅಕ್ಕೀಹೆಬ್ಬಾಳಿನಿಂದ ಚಾಮರಾಜನಗರಕ್ಕೆ ವರ್ಗವಾಯಿತು. ಅವರ ದೊಡ್ಡಮಗಳು ಜಾನಕಿ ಮದುವೆಗೆ ಸಿದ್ಧಳಾಗಿದ್ದಳು.

ಪಂಡಿತರ ಹತ್ತಿರ ಮದುವೆಯ ಪ್ರಸ್ತಾಪ ಮಾಡುವುದಕ್ಕೆ ಪಟ್ಟಾಭಿರಾಮಯ್ಯನವರಿಗೆ ತಡವಾಗಲಿಲ್ಲ. ಉಭಯ ಮಿತ್ರರು ಸಹಾಯಮಾಡಿ ಸಂಬಂಧ ಸಾಧಿಸಿದರು. ಅದೇ ವರ್ಷ ಚೈತ್ರಮಾಸದಲ್ಲಿ ರಂಗಣ್ಣ, ಜಾನಕಿಯ ವಿವಾಹ ವಿಜೃಂಭಣೆಯಿಂದ ನೆರವೇರಿತು.

ಮೂರು ವರ್ಷದ ಒಳಗಾಗಿಯೇ ಪಟ್ಟಾಭಿರಾಮಯ್ಯನವರಿಗೆ ಚಾಮರಾಜನಗರದಿಂದ ಕೋಲಾರಕ್ಕೆ ವರ್ಗವಾಯಿತು. ತಾವು ಚಾಮರಾಜನಗರ ಬಿಡುವ ಮುನ್ನ ಮಗಳ ನಿಷೇಕಪ್ರಸ್ತ ಶಾಸ್ತ್ರ ಮುಗಿಸಿ, ಅವಳನ್ನು ಗಂಡನ ಮನೆಯಲ್ಲಿಯೇ ಬಿಟ್ಟು ತಾವು ಸಂಸಾರ ಸಮೇತ ಕೋಲಾರಕ್ಕೆ ಪ್ರಯಾಣ ಬೆಳಸಿದರು.

ಜಾನಕಿ ಪಂಡಿತರ ಮನೆ ಸೇರಿದ ಮೇಲೆ ಅವರ ಮನೆಯಲ್ಲಿ ಬೆಳದಿಂಗಳು ಮೂಡಿದಂತಾಯಿತು. ಪಂಡಿತರ ಮನೆಗೆ ಹೆಣ್ಣಿನ ಮಧುರಸ್ಪರ್ಶ ತಪ್ಪಿ ಹತ್ತು ವರ್ಷಗಳಾಗಿದ್ದವು. ಹೆಂಡತಿ ತೀರಿಕೊಂಡ ಮೇಲೆ ಪಂಡಿತರು ಪುನರ್ವಿವಾಹದ ಯೋಚನೆಮಾಡದೆ, ಮಕ್ಕಳ ಅಭ್ಯುದಯದ ಕಡೆಗೆ ಲಕ್ಷ್ಯ

ಕೊಟ್ಟರು. ಜಾನಕಿ ಪಂಡಿತರ ಭಾಗಕ್ಕೆ ಸೊಸೆಯೂ ಆದಳು, ಮಗಳೂ ಆದಳು.

ಪಂಡಿತರ ನಿರ್ಮಲಸಂತೋಷ ಚಿರಸ್ಥಾಯಿಯಾಗಿ ಉಳಿಯಲಿಲ್ಲ. ರಂಗಣ್ಣನ ಸ್ವಭಾವ, ಅವನ ಸಿಡುಕು, ಅವನ ಶೀಘ್ರಕೋಪ ಪಂಡಿತರಿಗೆ ಯೋಚನೆಗೆ ಕಾರಣವಾಯಿತು. ಸಂಜೀವ ಮುಗ್ಧ, ಹಾಲುಹಸುಳೆ ರಂಗಣ್ಣನ ಕೈಗೆ ಸಂಜೀವ ಬಿದ್ದರೆ ಏನು ಗತಿ ಎನ್ನುವ ಯೋಚನೆ ಪಂಡಿತರನ್ನು ಪ್ರಬಲವಾಗಿ ಕಾಡಲಾರಂಭಿಸಿತು. ತಾವು ಕಣ್ಣುಮುಚ್ಚಿಕೊಳ್ಳುವುದರೊಳಗಾಗಿ ಸಂಜೀವನಿಗೆ ಮದುವೆಮಾಡಿ, ಅವನ ಸಂಸಾರಕ್ಕೆ ಸ್ವತಂತ್ರವ್ಯವಸ್ಥೆ ಮಾಡಬೇಕೆಂದು ನಿಶ್ಚಯಿಸಿಕೊಂಡರು.

ಜಾನಕಿ ಮಾವನಮನೆ ಸೇರಿದ ಎರಡು ವರ್ಷಗಳಲ್ಲಿ ಗಂಡು ಮಗುವನ್ನು ಪ್ರಸವಿಸಿದಳು. ಮೊಮ್ಮಗನ ಲಾಲನೆ ಪಾಲನೆಯಲ್ಲಿ ಪಂಡಿತರು ಲೋಕವನ್ನೇ ಮರೆತುಬಿಟ್ಟರು.

ಮೊಮ್ಮಗನಿಗೆ ಜಗದೀಶನೆಂದು ಹೆಸರಿಟ್ಟವರೂ ಪಂಡಿತರೇ. ತಮ್ಮ ಮೊಮ್ಮಗ ಜಗದೀಶನಾಗಬೇಕೆಂದು ಅವರ ಆಕಾಂಕ್ಷೆಯಾಗಿತ್ತು. ಪಂಡಿತರು ಮೊಮ್ಮಗನ ಜತೆ ಆಡುತ್ತ ಗಂಟೆಗಟ್ಟಳೆ ಕುಳಿತುಬಿಡುತ್ತಿದ್ದರು. ರೂಮಿನೊಳಗೆ ಅಕಸ್ಮಾತ್ತಾಗಿ ಬಂದ ರಂಗಣ್ಣ ಹೆಂಡತಿಯನ್ನು ಕರೆದು ಪಂಡಿತರ 'ಬಾಲಕ್ರೀಡೆ' ತೋರಿಸುತ್ತಿದ್ದ

ಪುತ್ರೋತ್ಸವ ರಂಗಣ್ಣನಲ್ಲಿಯೂ ಸ್ವಲ್ಪ ಮಾರ್ಪಾಟುಮಾಡಿತ್ತು. ಗಟ್ಟಿ ಮನಸ್ಸುಮಾಡಿಕೊಂಡು ಆಡುತ್ತಿದ್ದ ಇಸ್ಪೇಟ್ ಆಟವನ್ನು ಅರ್ಧಕ್ಕೆ ಬಿಟ್ಟಿದ್ದ ಅವನು ಒಂಭತ್ತು ಹತ್ತು ಗಂಟೆಯ ವೇಳೆಗೆ ಮನೆಗೆ ಬರಲಾರಂಭಿಸಿದ. ಮಗನನ್ನೆತ್ತಿಕೊಂಡು ಮುದ್ದಾಡುತ್ತಿದ್ದ. ರಂಗಣ್ಣನ ವಿಷಯದಲ್ಲಿ ತಮಗಿದ್ದ ಅಭಿಪ್ರಾಯವನ್ನೇ ಪಂಡಿತರು ಬದಲಾಯಿಸಿಕೊಳ್ಳಲಾರಂಭಿಸಿದರು.

ಚೊಚ್ಚಲು ಬಾಣಂತನ ಜಾನಕಿಯನ್ನು ದುರ್ಬಲಳನ್ನಾಗಿ ಮಾಡಿತ್ತು. ಪಂಡಿತರು ನಂಜನಗೂಡಿನಿಂದ ಶ್ರೀಕಂಠ ಪಂಡಿತರನ್ನು ಬರಮಾಡಿಕೊಂಡು ಅವರ ಕೈಯಲ್ಲಿ ಜಾನಕಿಗೆ ಔಷಧೋಪಚಾರ ಮಾಡಿಸಿದರು. ಜಾನಕಿಯ ಮನಸ್ಸಿಗೆ ಗೆಲುವಿಲ್ಲದುದನ್ನು ಕಂಡು ಪಂಡಿತರಿಗೆ ತುಂಬ ವಿಷಾದವಾಯಿತು. ಮಗನನ್ನು ಒಂದು ದಿನ ಕರೆದು

"ಯಾಕೋ ರಂಗಣ್ಣ ಜಾನಕಿ ಹಾಗಿದ್ದಾಳೆ?" ಎಂದು ಕೇಳಿದರು.

"ಹೇಗಿದ್ದಾಳೆ? ಈಗ ಆರೋಗ್ಯವಾಗಿದ್ದಾಳಲ್ಲಾ!"

"ಆರೋಗ್ಯವಾಗಿದ್ದಾಳೆ. ದೇಹದಲ್ಲಿ ಆರೋಗ್ಯವಿರಬೇಕಾದರೆ ಮನಸ್ಸಿನಲ್ಲಿಯೂ ಆರೋಗ್ಯವಿರಬೇಕು. ಲೇಹ್ಯ, ಗುಟಿಕಾ, ಕಷಾಯಗಳಿಂದ ರೋಗಿಗಳಿಗೆ ಗುಣವಾಗುವ ಹಾಗಿದ್ದರೆ ಗಂದಿಗೆ ಅಂಗಡಿಯವರೆಲ್ಲಾ ವೈದ್ಯರಾಗುತ್ತಿದ್ದರು. ಅವಳ ಯೋಗಕ್ಷೇಮ ನೀನು ವಿಚಾರಿಸುತ್ತೀಯೋ ಇಲ್ಲವೋ?"

"ವಿಚಾರಿಸದೆ ಇರುತ್ತೇನೆಯೇ?"

"ಏನು ವಿಚಾರಿಸಿದ್ದೀಯೋ! ಅವಳ ಮನಸ್ಸಿಗೆ ಸ್ವಲ್ಪವೂ ನೆಮ್ಮದಿಯಿಲ್ಲ. ಇನ್ನೂ ಹಸೀ ಬಾಣಂತಿ. ಈಗ ಮನಸ್ಸಿಗೆ ಏನಾದರೂ ದುಃಖ ತಂದುಕೊಂಡರೆ ನಾಳೆ ಪರಿಣಾಮ ವಿಪರೀತವಾಗಬಹುದು. ಅವಳಿಗೆ ಬೇಸರವಾಗಿದ್ದರೆ ನಾಲ್ಕು ದಿವಸ ಮೈಸೂರಿಗೋ ಬೆಂಗಳೂರಿಗೋ ಕರೆದುಕೊಂಡು ಹೋಗಿ ಬಾ."

"ಬಾಳೆಯ ಗೊನೆಗಳು ಹಣ್ಣಿಗೆ ತಿರುಗುತ್ತಿವೆ. ಈಗ ನಾನು ತೋಟ ಬಿಟ್ಟುಹೋದರೆ ಫಸಲು ಫೈಸಲ್ ಆಗಿಹೋಗುತ್ತದೆ"

"ಹೋಗಲಿ - ಅವಳನ್ನು ನಾಲ್ಕು ದಿವಸ ತೌರುಮನೆಗಾದರೂ ಕಳಿಸಿಕೊಡು."

"ಆಗಲಿ ಕೇಳಿ ನೋಡುತ್ತೇನೆ. ಅವಳು ಹೋಗುತ್ತೇನೆಂದರೆ ಕರೆದುಕೊಂಡು ಹೋಗಿ ಬಿಟ್ಟು ಬರುತ್ತೇನೆ."

ಮಾರನೆಯ ದಿನ ರಂಗಣ್ಣನೇ ಪಂಡಿತರ ಹತ್ತಿರ ಬಂದು 'ಜಾನಕಿಯನ್ನು ಕೇಳಿದೆ. ನಾನೆಲ್ಲಿಗೂ ಹೋಗುವುದಿಲ್ಲ ಎಂದು ಅವಳು ಹೇಳಿದಳು' ಎಂದು ಹೇಳಿದ. ತಂದೆ, ಮಗನ ಮಧ್ಯೆ ಆದ ಮಾತುಕತೆ ಜಾನಕಿಗೆ ಗೊತ್ತಾಗಲಿಲ್ಲ

ಜಗದೀಶನಿಗೆ ಒಂಭತ್ತು ತಿಂಗಳು ತುಂಬುವಷ್ಟರಲ್ಲಿ ಜಾನಕಿ ಪುನಃ ಗರ್ಭ ತಳೆದಳು. ಆ ಸುದ್ದಿ ಕೇಳಿದ ಮೇಲೆ ಪಂಡಿತರ ಚಿಂತೆ ಹೆಚ್ಚಾಯಿತು. ಈ ಬಾರಿ ಜಾನಕಿ ಮೈಕಳೆದು ಬದುಕಿಬಂದರೆ ಅವಳಿಗೆ ಪುನರ್ಜನ್ಮವೆಂಬುದು ಪಂಡಿತರಿಗೆ ಚೆನ್ನಾಗಿ ಗೊತ್ತಿತ್ತು. ಗೃಹಸ್ಥಧರ್ಮದ ನೀತಿ ನಿಯಮಗಳನ್ನು ಬಲ್ಲ ಪಂಡಿತರಿಗೆ ಪರಿಸ್ಥಿತಿಯನ್ನು ಎದುರಿಸುವ ಬಗೆ

ತಿಳಿಯದಾಯಿತು. 'ಬಲವಂತದಿಂದ ಜಾನಕಿಯನ್ನು ತೌರುಮನೆಗೆ ಕಳಿಸಿ ಕೊಟ್ಟರೆ ರಂಗಣ್ಣನಿಗೆ ಅಸಮಾಧಾನವಾಗಬಹುದು. ಈ ಅಸಮಾಧಾನ ಬೆಳೆದು ಬಲಿತು ದಂಪತಿಗಳ ಅನ್ಯೋನ್ಯತೆಗೇ ಭಂಗತರಬಹುದು' ಎಂದು ಹೆದರಿದರು. ತಮ್ಮ ಮನೋವ್ಯಗ್ರತೆಗೆ ಪರಿಹಾರ ಕಾಣದೆ ಸಂಜೀವನನ್ನು ನೋಡಿಕೊಂಡು ಬರುವ ನೆಪಮಾಡಿಕೊಂಡು ಪಂಡಿತರು ಮೈಸೂರಿಗೆ ಪ್ರಯಾಣ ಬೆಳಸಿದರು.

ಸಂಜೀವನನ್ನು ನೋಡುವುದಕ್ಕಿಂತ ಹೆಚ್ಚಾಗಿ ಅವಸಿಗೆ ಮೈಸೂರಿನಲ್ಲಿ ಮನೆ ಕೊಳ್ಳುವುದು ಪಂಡಿತರಿಗೆ ಮುಖ್ಯವಾಗಿತ್ತು. ಮಿತ್ರರೊಬ್ಬರು ಮನೆ ಮಾರುಕ ನಾಗಪ್ಪನ ಪರಿಚಯಮಾಡಿಸಿದರು ಪಂಡಿತರು ನಾಗಪ್ಪನೊಂದಿಗೆ ಮೈಸೂರಿನಲ್ಲಿ ಮಾರಾಟಕ್ಕಿದ್ದ ಮನೆಗಳನ್ನು ಪರಿಶೀಲಿಸುತ್ತ ಬಂದರು. ಜಯ ನಗರ, ಕೃಷ್ಣಮೂರ್ತಿಪುರ, ಚಾಮುಂಡಿ ಬಡಾವಣೆ, ಆನೆಕರೋಟಿ, ಸೀತಾ ವಿಲಾಸ ಅಗ್ರಹಾರದ ಮನೆಗಳು ಯಾವವೂ ಪಂಡಿತರ ಮನಸ್ಸಿಗೆ ಬರಲಿಲ್ಲ. ಸಂಜೀವನಿಗೆ ಅವು ತೃಪ್ತಿ ಕೊಡಲಿಲ್ಲ. ಕೊನೆಯದಾಗಿ ನಾಗಪ್ಪ ಪಂಡಿತರಿಗೆ ಒಂಟಿಕೊಪ್ಪಲಿನಲ್ಲಿನ್ನ ಒಂದು ಮನೆ ತೋರಿಸಿದ ಅಚ್ಚ ಕಾನ್‌ಕ್ರೀಟ್ ಕಟ್ಟಡ. ಮುಂದೆ ವಿಶಾಲವಾದ ಆವರಣ. ಔಟ್‌ಹೌಸಿನ ಭಾಗ ಮಾತ್ರ ಕಟ್ಟಿ ಮುಂದೆ ಮನೆ ಕಟ್ಟಲನುಕೂಲಿಸುವಂತೆ ಜಾಗ ಬಿಡಲಾಗಿತ್ತು. ಆರು ರೂಮುಗಳು - ಒಂದು ಗಾಡಿಯಖಾನೆ. ಸಂಜೀವ ಮನೆಯನ್ನು ಮೆಚ್ಚಿ ಕೊಂಡ. ಮನೆಯ ಮಾಲಿಕರು ಹನ್ನೆರಡು ಸಾವಿರ ಕೇಳುತ್ತಿರುವುದಾಗಿ ನಾಗಪ್ಪ ತಿಳಿಸಿದ. ಪಂಡಿತರು ವ್ಯಾಪಾರಮಾಡಿ ಮನೆಯ ಧಾರಣೆ ಹತ್ತು ಸಾವಿರ, ನಾಗಪ್ಪನ ಕಮಿಷನ್ ಐದು ನೂರು ಎಂದು ಸೂಚಿಸಿದರು. ಪಂಡಿ ತರು ಕೇಳಿದ ಬೆಲೆಗೆ ನಾಗಪ್ಪ ಮನೆಯನ್ನು ಕುದುರಿಸಿದ. ಪಂಡಿತರು ಕಾಗದ ಪತ್ರಗಳನ್ನು ಸಂಜೀವನ ಹೆಸರಿಗೇ ಮಾಡಿ, ಮನೆಗೆ ಬರುತ್ತಿದ್ದ ಎಪ್ಪತ್ತೈದು ರೂಪಾಯಿ ಬಾಡಿಗೆ ಹಣವನ್ನು ಸಂಜೀವನಿಗೆ ಕೊಡಬೇಕೆಂದು ಬಾಡಿಗೆಯಿದ್ದವ ರಿಗೆ ತಿಳಿಸಿ ಊರಿಗೆ ಹಿಂದಿರುಗಿದರು.

ಊರಿಗೆ ಬಂದಕೂಡಲೆ ತಾವು ಮೈಸೂರಿನಲ್ಲಿ ಮಾಡಿಕೊಂಡು ಬಂದ ಕೆಲಸವನ್ನು ಪಂಡಿತರು ರಂಗಣ್ಣನಿಗೆ ತಿಳಿಸಲಿಲ್ಲ. ನಾಲ್ಕು ದಿನಗಳ ತರುವಾಯ ಒಂದು ದಿನ ಊಟಕ್ಕೆ ಕುಳಿತಿದ್ದಾಗ ಲೋಕಾಭಿರಾಮವಾಗಿ ಮಾತನಾಡುತ್ತ

ತಿಳಿಸಿದರು. ರಂಗಣ್ಣನಿಗೆ ಮುಂದೆ ಊಟನಾಗಲಿಲ್ಲ. ರಂಗಣ್ಣನಿಗೆ ಸಮಾಧಾನ ಹೇಳಿ ಅವನ ಮನ ಒಲಿಸಿಕೊಳ್ಳುವ ಪ್ರಯತ್ನವನ್ನು ಪಂಡಿತರು ಮಾಡಲಿಲ್ಲ. ರಂಗಣ್ಣ ಹೆಂಡತಿಯ ಮೇಲೆ ರೇಗಿ, ಮಗನ ಮೇಲೆ ಚೀರಾಡಿ ತೃಪ್ತಿಪಟ್ಟು ಕೊಳ್ಳಬೇಕಾಯಿತು.

ರಂಗಣ್ಣನ ಮನಸ್ಸಿನಲ್ಲಿ ಹೊಗೆಯಾಡುತ್ತಿದ್ದ ಕೋಪಾಗ್ನಿ ಸಂಜೀವ ಬೇಸಿಗೆಯ ರಜೆಗೆ ಊರಿಗೆ ಬಂದಾಗ ಪ್ರಜ್ವಲಿಸಿತು. ಸಂಜೀವನ ಬಾಳು, ಬದುಕು ಅಸಹನೀಯವಾಗುವಂತೆ ಮಾಡಲು ರಂಗಣ್ಣ ನಿರ್ಧರಿಸಿದ. ಅವನ ಕುಹಕ, ಕೊಂಕು, ಕಟುಮಾತುಗಳನ್ನು ಕೇಳಿ ಕೇಳಿ ಸಂಜೀವನಿಗೆ ಮಾತ್ರ ವಲ್ಲದೆ ಜಾನಕಿಗೂ ಬೇಸರವಾಯಿತು. ಮೈದುನನ ಪರವಾಗಿ ಒಂದು ಒಳ್ಳೆಯ ಮಾತನಾಡಿದ ಅಪರಾಧಕ್ಕೆ ಜಾನಕಿ ಗಂಡನಿಂದ ಏಟು ತಿನ್ನಬೇಕಾಯಿತು.

ಸಂಜೀವ ರಜ ಮುಗಿಯುವವರೆಗೆ ಊರಿನಲ್ಲಿ ನಿಲ್ಲಲಿಲ್ಲ. ಅಭ್ಯಾಸದ ನೆಪಮಾಡಿಕೊಂಡು ಮೈಸೂರಿಗೆ ಹಿಂದಿರುಗಿದ.

ಇನ್ನು ತಾವು ತಾಟಸ್ಥ್ಯನೀತಿಯನ್ನನುಸರಿಸುವುದು ಅಪಾಯಕರವೆಂದು ಪಂಡಿತರು ತಿಳಿದುಕೊಂಡರು. ನಂಜನಗೂಡಿಗೆ ಹೋಗಿ ತಮ್ಮ ಪರಿಚಯದ ಲಾಯರ್ ಸೋಮಶೇಖರರಾಯರನ್ನು ಸಲಹೆ ಕೇಳಿ ತಮ್ಮ ಸ್ಥಿರ, ಚರ ಸ್ವತ್ತು ಗಳ ವಿಭಾಗಮಾಡಿ ವಿಲ್ಲು ಬರೆದರು. ಪಂಡಿತರ ಮನೋಭಾವ ಸೋಮ ಶೇಖರರಾಯರಿಗೆ ಅರ್ಥವಾಗಲಿಲ್ಲ. ಲಾಯರ ಸಂದಿಗ್ಧಸ್ಥಿತಿ ಕಂಡು ಪಂಡಿತರೇ

"ಏಕೆ ಸ್ವಾಮಿ - ಸುಮ್ಮನೆ ಕುಳಿತುಕೊಂಡು ಬಿಟ್ಟಿರಿ" ಎಂದು ಕೇಳಿದರು.

"ನಿಮ್ಮ ಉದ್ದೇಶ ಅರ್ಥವಾಗಲಿಲ್ಲ."

"ಮಕ್ಕಳು ವಯಸ್ಸಿಗೆ ಬಂದ ಅವರಿಗೆ ಸೇರಬೇಕಾದ ಆಸ್ತಿಯನ್ನು ಹಿರಿಯರು ಹಂಚಿಕೊಟ್ಟು, ಅವರ ಅಭ್ಯುದಯ ನೋಡಿ ಸಂತೋಷಿಸ ಬೇಕಾದುದು ಕರ್ತವ್ಯ."

"ಸಂಜೀವನ ಓದೇ ಮುಗಿದಿಲ್ಲ."

"ಅವನು ಮುಗಿಸುವವರೆಗೆ ನಾನು ಬದುಕಿರುವುದೇ ಸಂದೇಹ."

"ನಿಮಗೆಲ್ಲೋ ಹುಚ್ಚು. ವಯಸ್ಸಾಗಿದ್ದರೇನು - ಹೇಗಿದ್ದೀರಿ ನೋಡಿ."

"ಬಿದಿರು ಹೊರಗೆ ಬಲು ಚೆಂದ - ಒಳಗೆ ಬರೀ ಟೊಳ್ಳು ಸೋಮಶೇಖರ ರಾಯರೇ."

"ಆಸ್ತಿವಿಭಾಗದ ಬಗ್ಗೆ ನೀವು ಇಷ್ಟು ಆತುರಪಡುವ ಕಾರಣವಿಲ್ಲವೆಂದು ನನಗನಿಸುತ್ತದೆ.

"ಎಲ್ಲಾ ವಿಷಯ ನಿಮಗೆ ಗೊತ್ತಿಲ್ಲ ಸ್ವಾಮಿ. ರಂಗಣ್ಣನನ್ನು ಬಲ್ಲಿ ರಷ್ಟೆ!"

"ಬಲ್ಲೆ."

"ಅವನು ಘಾತುಕ, ಕೈಗೆ ಸಿಕ್ಕಿದ್ದನ್ನು ಅವನು ನುಂಗಬೇಕು. ಸಂಜೀವ ನನ್ನು ಅವನ ಕೈಗೆ ಹೇಗೆ ಹಾಕಿಹೋಗಲಿ ಹೇಳಿ."

"ಸಂಜೀವನಿಗೆ ಇನ್ನೂ ಮದುವೆಯಾಗಬೇಕು"

"ಬದುಕಿದ್ದರೆ ನಾನು ಮಾಡುತ್ತೇನೆ. ಇಲ್ಲದಿದ್ದರೆ ಆ ಜವಾಬ್ದಾರಿ ನಿಮ್ಮ ಕೊರಳಿಗೆ ಕಟ್ಟುತ್ತೇನೆ. ನನ್ನ ವಿಲ್ಲಿಗೆ ನೀವೇ ಎಕ್ಸಿಕ್ಯೂಟರ್ ಅಭ್ಯಂತರವಿಲ್ಲವಷ್ಟೇ?"

"ನಿಮಗಾಗಿ ನಾನು ಏನು ಬೇಕಾದರೂ ಮಾಡಲು ಸಿದ್ಧವಾಗಿದ್ದೇನೆ ಪಂಡಿತರೇ"

ಎಂದು ಸೋಮಶೇಖರರಾಯರು ಭರವಸೆಯಿತ್ತರು.

ಪಂಡಿತರು ಭವಿಷ್ಯಜ್ಞಾನಿಗಳಾಗಿದ್ದರೆಂದು ಕಾಣುತ್ತದೆ. ವರ್ಷ ತುಂಬು ವುದರೊಳಗಾಗಿ ಹಾಸಿಗೆ ಹಿಡಿದು ಮಲಗಿದರು. ಸಾಮಾನ್ಯ ಚಳಿ, ಜ್ವರ. ಸಂಜೀವನೂ ಮೈಸೂರಿನಿಂದ ಬಂದ ಶ್ರೀಕಂಠ ಪಂಡಿತರೇ ಚಿಕಿತ್ಸೆಮಾಡಲು ಬಂದರು.

ಶನಿವಾರ ಸಂಜೆ ಪುಟ್ಟೂ ಪಂಡಿತರು ಆಳು ಕಳುಹಿಸಿ ನಂಜನಗೂಡಿನಿಂದ ಸೋಮಶೇಖರರಾಯರನ್ನು ಬರಮಾಡಿಕೊಂಡರು. ಅವರೆದುರಿಗೆ ತಮ್ಮಿಬ್ಬರು ಮಕ್ಕಳನ್ನೂ ಹತ್ತಿರ ಕರೆದು

"ರಂಗಣ್ಣಾ, ಸಂಜೀವ, ಆಸ್ತಿ ವಿಷಯದಲ್ಲಿ ಯಾವದು ಸೂಕ್ತವೋ ಅದನ್ನು ಮಾಡಿ ವಿಲ್ ಬರೆದು ಸೋಮಶೇಖರರಾಯರ ಹತ್ತಿರ ಕೊಟ್ಟಿದ್ದೇನೆ. ನೀವಿಬ್ಬರೂ ಅದನ್ನು ಅಂಗೀಕರಿಸಬೇಕು. ಯಾವ ಕಾರಣಕ್ಕೂ ಕೋರ್ಟು ಕಛೇರಿ ಹತ್ತಿ ನನ್ನ ಮಾನ ಬಯಲಿಗೆಳೆಯಬಾರದು" ಎಂದರು.

ತಂದೆಯ ಮಾತು ಕೇಳಿ ಸಂಜೀವ ದುಃಖಿಸುತ್ತ ಕುಳಿತ. ರಂಗಣ್ಣನ ಮುಖದಲ್ಲಿ ಗಾಢವಾದ ಚಿಂತೆ ಗೆರೆಹೊಡೆಯಿತು.

"ವಿಲ್ ಪ್ರತಿಭಟಿಸುವುದಿಲ್ಲವೆಂದು ನನ್ನ ಮುಟ್ಟಿ ಪ್ರಮಾಣಮಾಡಿ"

ಎಂದು ಪಂಡಿತರು ಮಕ್ಕಳಿಗೆ ಆಜ್ಞೆ ವಿಧಿಸಿದರು. ಸಂಜೀವ ತಂದೆ ಪಾದ ಮುಟ್ಟಿ ಪ್ರಮಾಣ ಮಾಡಿದ, ರಂಗಣ್ಣ ಅವನನ್ನನುಸರಿಸಿದ.

ಪಂಡಿತರ ಜೀವ ಹಾಗೂ ಹೀಗೂ ಬೆಳಿಗ್ಗೆಯವರೆಗೆ ತುಯ್ಯಲಾಡಿತು. ಭಾನುವಾರ ಬೆಳಿಗ್ಗೆ ಮಗನ ಸಹಾಯಪಡೆದು ಸ್ನಾನಮಾಡಿ ಸಂಧ್ಯಾವಂದನೆಗೆ ಕುಳಿತರು. ಸಾವಿರ ಗಾಯತ್ರಿ ಜಪಮಾಡಿ ಏಳಬೇಕೆಂದೇ ಅವರ ಸಂಕಲ್ಪ. ಸಾವಿರ ಮುಟ್ಟುವವರೆಗೆ ಗಾಯತ್ರಿದೇವಿ ಪಂಡಿತರನ್ನ ಬಿಡಲಿಲ್ಲ. ಆ ಮಧ್ಯೆಯೇ ಅವರು ತಾಯಿಯ ಪಾದ ಸೇರಿದರು.

ಶ್ರೀಕಂಠಪಂಡಿತರೂ, ಸೋಮಶೇಖರರಾಯರೂ ಅಶೌಚ ಕಳೆಯುವ ವರೆಗೆ ಚಾಮರಾಜನಗರದಲ್ಲಿಯೇ ನಿಲ್ಲಬೇಕಾಯಿತು. ಸಂಜೀವನನ್ನು ಸಂತೈಸುವ ಹೊಣೆ ಬೇರೆ ಸೋಮಶೇಖರರಾಯರ ಮೇಲೆ ಬಿದ್ದಿತ್ತು.

ಕರ್ಮಾಂತರ ಮುಗಿದ ಮೇಲೆ ಸೋಮಶೇಖರರಾಯರು ರಂಗಣ್ಣ, ಸಂಜೀವ, ಶ್ರೀಕಂಠಪಂಡಿತರೆದುರಿಗೆ 'ವಿಲ್' ಓದಿದರು. 'ಅದನ್ನ ಕೇಳಿ ರಂಗಣ್ಣ ಕಿಡಿಕಿಡಿಯಾದ ತಂದೆಯ ವಿಷಯ ರಂಗಣ್ಣ ಆಡಿದ ಅವಾಚ್ಯ ಶಬ್ದಗಳನ್ನ ಕೇಳಿ ಸಂಜೀವನೂ ರೇಗಿದ ಅವರಿಬ್ಬರನ್ನೂ ಸಮಾಧಾನ ಪಡಿಸಬೇಕಾದರೆ ಸೋಮಶೇಖರರಾಯರಿಗೆ ಸಾಕುಸಾಕಾಗಿ ಹೋಯಿತು.

"ಈ ವಿಲ್ ನಾನು ಒಪ್ಪಿಕೊಳ್ಳುವುದಿಲ್ಲ. ಪ್ರತಿಭಟಿಸುತ್ತೇನೆ"

ಎಂದು ರಂಗಣ್ಣ ಘರ್ಜಿಸಿದ. ಶ್ರೀಕಂಠಪಂಡಿತರು ಮೆಲ್ಲನೆ ಅವನಿಗೆ ಪ್ರಮಾಣವಚನದ ನೆನಪುಮಾಡಿಕೊಟ್ಟರು. ರಂಗಣ್ಣನ ಆಟೋಪ ನೋಡಲಾರದೆ ಜಾನಕಿ ಹೊರಬಂದು

"ಮಹಾರಾಯರು ನಮಗೇನು ಕಡಿಮೆಮಾಡಿದ್ದಾರೆ - ಏಕೆ ಹೀಗೆ ನೀವು ರೇಗಾಡುತ್ತೀರಿ" ಎಂದು ಕೇಳಿದಳು.

"ಗಂಡಸರ ಮಾತಿಗೆ ನಿನ್ನ ಯಾರು ಕರೆದವರು ?"

"ಯಾರೂ ಕರೆಯಲಿಲ್ಲ ನೀವೇ ಕರೆದಿರಿ. ಮಹಾನುಭಾವರ ಬಗ್ಗೆ ನೀವು ಆಡಿದ ಮಾತುಗಳನ್ನ ಕೇಳಿ ಸಹಿಸುವುದು ನನಗೆ ಸಾಧ್ಯವಾಗಲಿಲ್ಲ. ಅವರಿಗೆ

ನೀವು ಹೇಗೆ ಮಗನೋ ಹಾಗೆ ನಿಮ್ಮ ತಮ್ಮನೂ ಮಗನಲ್ಲವೇ ? ಆಸ್ತಿಯನ್ನು ಎಷ್ಟು ವಿಶರಣೆಯಿಂದ ಅವರು ಹಂಚಿದ್ದಾರೆ ನೋಡಿ - ಅವರ ವಿಚಾರ ನೀವು ಕೆಟ್ಟಮಾತು ಆಡಬೇಡೀಂದ್ರೆ"

ಎಂದು ಹೇಳಿದಳು. ರಂಗಣ್ಣನ ಸೊಲ್ಲು ಅಡಗಿಹೋಯಿತು. ಶ್ರೀಕಂಠ ಪಂಡಿತರು ಸುಮ್ಮನಿರದೆ

"ಚೆನ್ನಾಗಿ ಹೇಳಿದೆ ಕಣೇ ತಾಯಿ" ಎಂದು ಜಾನಕಿಯನ್ನು ಪ್ರಶಂಸಿದರು.

ಅವರ ಪ್ರಶಂಸೆಯ ಫಲವಾಗಿ ಜಾನಕಿ ನಾಲ್ಕು ಏಟು ಹೆಚ್ಚಾಗಿ ತಿನ್ನ ಬೇಕಾಯಿತು.

ಸೋಮಶೇಖರರಾಯರು ಎಲ್ಲಿಗೆ ರಂಗಣ್ಣ, ಸಂಜೀವರ ಸಹಿಮಾಡಿಸಿ ಕೊಂಡು ಊರಿಗೆ ಹೋದರು. ಸಂಜೀವ ಮೈಸೂರಿಗೆ ಹೊರಡಲು ಅಣಿಯಾದ.

ಅವನು ಊರಿಗೆ ಹೊರಡುವುದನ್ನು ತಿಳಿದೇ ಉದ್ದೇಶಪೂರ್ವಕವಾಗಿ ರಂಗಣ್ಣ ತೋಟದ ಕಡೆ ಹೊರಟುಹೋಗಿದ್ದ. ಆಳಿನ ಕೈಯಲ್ಲಿ ಸಾಮಾನನ್ನು ಸ್ಟೇಷನ್ನಿಗೆ ಕಳುಹಿಸಿ ಸಂಜೀವ ಅತ್ತಿಗೆಯ ಅಪ್ಪಣೆ ಪಡೆಯಲು ಬಂದ.

ಮೈದುನನನ್ನು ನೋಡಿ ಜಾನಕಿಗೆ ದುಃಖ ಉಮ್ಮಳಿಸಿ ಬಂತು. ಸಂಜೀವ ಜಾನಕಿಯ ಪಾದಮುಟ್ಟಿ ನಮಸ್ಕರಿಸಿದ.

"ರಜಾ ಬರುತ್ತಲೇ ಬಾಪ್ಪ" ಎಂದಳು.

"ಇನ್ನು ಏಕೆ ಬರಲಿ ಅತ್ತಿಗೆ. ನನಗೆ ಇರುವ ಒಬ್ಬ ಅಣ್ಣನಿಗೆ ನಾನು ಶತ್ರುವಾದೆ. ಆಸ್ತಿಯ ಪಾಲು ನನಗೆ ಕೊಡಿ ಎಂದು ನಾನು ಖಂಡಿತವಾಗಿ ತಂದೆಯವರನ್ನು ಕೇಳಲಿಲ್ಲ ಅತ್ತಿಗೆ."

"ನಾನು ಬಲ್ಲೆ ಸಂಜೀವ. ನಿಮ್ಮ ಅಣ್ಣನವರ ಸ್ವಭಾವ ತಿಳಿದೇ ಮಾವ ನವರು ಹೀಗೆ ಮಾಡಿದರು. ಅವರು ಮಾಡಿದುದು ನೇರವೇ ಆಯಿತು."

"ಈಗಲೂ ನನ್ನ ಭಾಗದ ಆಸ್ತಿಯನ್ನು ಅಣ್ಣನ ಹೆಸರಿಗೆ ಬರೆದು ಕೊಡಲು ನಾನು ಸಿದ್ಧವಾಗಿದ್ದೇನೆ ಅತ್ತಿಗೆ."

"ಸುಮ್ಮನಿರು ಸಂಜೀವ, ನೀನು ಹುಡುಗ. ಲೋಕದ ಕಷ್ಟಸುಖ ತಿಳಿಯದ ಹಾಲುಹಸುಳೆ. ಮಾವನವರು ಮಾಡಿರುವುದೇ ಸರಿ."

"ಅಣ್ಣನಿಗೆ ಹೇಳಿ ಕಾಗದ ಬರೆಸುವಿರಾ ?"

"ಹೇಳುತ್ತೇನೆ. ಅವರು ಬರೆಯದಿದ್ದರೆ ನಾನೇನು ಮಾಡಲಿ ?"

"ಅವನನ್ನು ನೋಡದೆ ಹೋಗಬೇಕಲ್ಲಾ ಎಂದು ಮನಸ್ಸಿಗೆ ತುಂಬ ವ್ಯಥೆಯಾಗಿದೆ."

"ರಜಕ್ಕೆ ಬಾಪ್ಪ, ಅವರ ಕೋಪ ತಾನೆ ಎಷ್ಟು ದಿನವಿರಲು ಸಾಧ್ಯ ?"

"ಅಣ್ಣಾ ಬಂದು ಕರೆಯುವವರೆಗೆ ನಾನು ಬರುವುದಿಲ್ಲ ಅತ್ತಿಗೆ."

"ಜಗದೀಶ, ವಿಮಲ ಇವರನ್ನು ನೋಡುವುದಕ್ಕೂ ಬರುವುದಿಲ್ಲವೇ ?"

ತಾಯಿಯ ಮಾತಿಗೆ ಧ್ವನಿಕೊಟ್ಟಂತೆ ವಿಮಲ ಬಂದು ಎತ್ತಿಕೊಳ್ಳೆಂದು ತೋಳು ಚಾಚಿದಳು. ಸಂಜೀವ ಅವಳನ್ನೆತ್ತಿಕೊಂಡು ಪದೇಪದೇ ಮುದ್ದಿಸಿದ. ಅವನ ಕಣ್ಣಲ್ಲಿ ಧಾರೆಧಾರೆಯಾಗಿ ನೀರು ಹರಿಯುತ್ತಿದ್ದುದನ್ನು ಕಂಡು

"ಯಾಕೆ ಪ್ಪಪ್ಪ - ಅತ್ತೆ" ಎಂದು ವಿಮಲಾ ಕೇಳಿದಳು.

ಸಂಜೀವನಿಂದ ಉತ್ತರ ಬರಲಿಲ್ಲ. ತಾಯಿಯ ಕಣ್ಣಲ್ಲಿಯೂ ನೀರು ಬರುತ್ತಿದ್ದುದನ್ನು ಕಂಡು ವಿಮಲಾ

"ಅಪ್ಪ ಬಯ್ದು ಹೊಡ್ದು ಮಾಡಿದ್ನಾ"

ಎಂದು ಕೇಳಿದಳು. ಜಾನಕಿ ಕೋಪ ಪ್ರಕಟಿಸುತ್ತಾ

"ಸಾಕು, ಆಡಿಕೋ ಹೋಗೇ - ಹುಚ್ಚು ಗೈನೆ" ಎಂದಳು

ರೈಲಿನ ಸೀಟಿ ಕೇಳಿ ಬಂತು. ಸಂಜೀವ ಮೆಲ್ಲನೆ ವಿಮಲೆಯನ್ನು ಕೆಳಗಿಳಿಸಿ

"ಬರ್‍ತೀನಿ ಅತ್ತಿಗೆ. ರಂಗಣ್ಣಾ ಎಷ್ಟಾದರೂ ನನಗಿಂತ ದೊಡ್ಡವನು. ಅವನು ಒಂದು ಮಾತು ಅಂದರೇನಂತೆ"

ಎಂದು ಹೇಳಿ ರೈಲ್ವೆಸ್ಟೇಷನ್ ಕಡೆಗೆ ಓಡಿದ.

ರೈಲು ಹೊರಟ ಸ್ವಲ್ಪ ಹೊತ್ತಿನೊಳಗಾಗಿ ರಂಗಣ್ಣಾ ಮನೆಗೆ ಬಂದ. ಯಜಮಾನರ ತನಿಖೆ ಆರಂಭವಾಗುವುದೆಂದು ಜಾನಕಿಗೆ ಚೆನ್ನಾಗಿ ಗೊತ್ತಿತ್ತು. ಆದರವರು ಇಷ್ಟು ಬೇಗ ಮನೆಗೆ ಬರುತ್ತಾರೆಂದು ಅವಳು ನಿರೀಕ್ಷಿಸಿರಲಿಲ್ಲ. ಉಪಕರಣೆ ತೊಳೆಯುವ ನೆಪಮಾಡಿಕೊಂಡು ಜಾನಕಿ ಭಾವೀಕಟ್ಟೆ ಬಳಿಗೆ ಹೋದಳು.

ರಂಗಣ್ಣಾ ತೊಟ್ಟಿಯಲ್ಲಿ ಕುಳಿತುಕೊಂಡು ವಿಮಲನ ಸಂಗಡ ಹೆಂಡತಿಗೆ ಹೇಳಿಕಳಿಸಿದ. ಜಾನಕಿ ಮುಖ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಬಂದು

ಮಹಾಪರಾಧಿನಿಯಂತೆ ಎದುರಿಗೆ ನಿಂತಳು. ರಂಗಣ್ಣ ಮಾತನಾಡಲಿಲ್ಲ. ಜಾನಕಿಯೇ ಮೆಲ್ಲನೆ

"ಬಾರೆಂದು ಹೇಳಿಕಳಿಸಿದರಂತೆ!"

"ಹೌದು ಹೇಳಿ ಕಳಿಸಿದೆ. ಮಹಾರಾಣಿ ನೀನು - ಪಾಲಿಗಮಾಡಿಕೊಂಡು ನಿನ್ನ ಕರೆದುಕೊಂಡು ಬರುವುದಕ್ಕೆ ಒಂದು ಸಿಬ್ಬಂದಿ ಇಡಬೇಕು."

"ಉಪಕರಣೆ ಹಾಗೇ ಬಿದ್ದಿತ್ತು."

"ನನ್ನ ಮುಂದೆ ಬಡಿವಾರವಾಡಬೇಡ . . . ಸಂಜೀವ ಹೋದನೋ?"

"ಹೋದ. ನಿಮಗೆ ಹೇಳಿಹೋಗಬೇಕೂಂತ ಬಹಳ ಹೊತ್ತು ದಾರಿ ನೋಡಿದ."

"ನನಗೆ ಹೇಳಿ ಹೋಗುವುದೇನಿತ್ತು? ನಿನಗೆ ಹೇಳಿ ಹೋದನೋ ಇಲ್ಲವೋ ಅಷ್ಟೇ ಸಾಕು."

"ಆಗುವುದು ಆಯಿತಲ್ಲಾ! ಇನ್ನೇಕೆ ವೃಥಾ ವೈಷಮ್ಯ."

"ನನಗೆ ಉಪದೇಶಮಾಡುತ್ತಾ ಇದ್ದೀಯೇನು?"

"ಅಷ್ಟು ಯೋಗ್ಯತೆ ನನಗಿಲ್ಲ. ಅಣ್ಣತಮ್ಮಂದಿರು ಅನ್ಯೋನ್ಯವಾಗಿ-ಬೇಕೆಂಬುದು ನಿಮಗೆ ತಿಳಿಯದ ವಿಷಯವಲ್ಲ."

"ಅವನೆಂಥ ತಮ್ಮ - ನಾನೆಂಥ ಅಣ್ಣ!!"

"ಮಾವನವರು ನಮಗೆ ಯಾವದಕ್ಕೆ ಕಡಿಮೆಮಾಡಿದ್ದಾರೆ."

"ಯಾವದಕ್ಕೂ ಕಡಿಮೆಮಾಡಿಲ್ಲ. ಮೈಸೂರಿನಲ್ಲಿ ಸಂಜೀವ ಮೆರೆಯಬೇಕು, ಈ ಸ್ಮಶಾನದಲ್ಲಿ ನಾನು ಸಾಯಬೇಕು."

"ನಿಮ್ಮ ಬಾಳೆಯ ತೋಟ, ತೆಂಗಿನ ತೋಟ ಸ್ಮಶಾನವೇ?"

"ಹೆಗಲು ಮುರಿಯಾ ದುಡಿಯೋನಿಗೆ ಅದರ ಕಷ್ಟ ಗೊತ್ತು. ಕೂತು ತಿನ್ನೋ ನಿಮಗೇನು ಗೊತ್ತಾಗುತ್ತೆ. ನೋಡಿದವರ ಕಣ್ಣಲ್ಲಿ ಇದೊಂದು ಘನವಾದ ಆಸ್ತಿ. ಬೆಳಿಗ್ಗೆಯಿಂದ ಸಂಜೆಯವರೆಗೆ ರಟ್ಟೆ ಮುರಿದುಕೊಳ್ಳುವವನಿಗೆ ನೇಣು."

"ಕಷ್ಟ ಇದೆ - ಇಲ್ಲವೆಂದು ನಾನು ಹೇಳಲಿಲ್ಲ"

"ವಯಸ್ಸಾದರೆ ವಿವೇಕವಿರೋದಿಲ್ಲವೆನ್ನುವುದು ನಿಜ. ಮುಳ್ಳಿ ಸಂಜೀವ,

ತಪ್ಪು ಮಾಡಿದಾಗ ನನಗೆ ವಗ ಹಾಕಿದವರಲ್ಲಾ ಎಂದು ಯೋಚನೆ ಮಾಡು ತ್ತಿದ್ದೇನೆ."

"ಸರಿ - ನಿಮಗೆ ಸದಾಕಾಲವೂ ಅದೇ ಧ್ಯಾನ. ಭಗವಂತ ಕೊಟ್ಟಿರು ವುದರಲ್ಲಿ ತೃಪ್ತಿಪಟ್ಟುಕೊಂಡು ಸಂತೋಷವಾಗಿರುವುದು ನಿಮ್ಮ ಜಾಯ ಮಾನಕ್ಕೇ ಬರಲಿಲ್ಲ. ನನ್ನ ಅಡಿಗೆ ಕೆಲಸ ಮುಗಿದಿಲ್ಲ - ಬೇಕಾದರೆ ಕಾಫಿ ಮಾಡಿಕೊಡುತ್ತೇನೆ. ಕುಡಿದು ನಿಮ್ಮ ಕೆಲಸದ ಮೇಲೆ ಹೋಗಿ ಬನ್ನಿ."

ಎಂದವಳೇ ಒಳಕ್ಕೆ ಹೊರಟು ಹೋದಳು. ರಂಗಣ್ಣ ಇಂಗು ತಿಂದ ಮಂಗನಂತೆ ಕುಳಿತ. ಜಾನಕಿ ತಂದು ಕೊಟ್ಟ ಕಾಫಿ ಕುಡಿದು ಉಸಿರೆತ್ತದೆ ತೋಟದ ಕಡೆ ಹೊರಟು ಹೋದ.

ಪ್ರತಿಯೊಂದು ಸಲ ವಾದವೆದ್ದಾಗಲೂ ಹೀಗೇ ಸುಖಪರ್ಯವಸಾಯಿ ಯಾಗುತ್ತಿರಲಿಲ್ಲ. ಜಾನಕಿ ಎಷ್ಟೇ ತೂಕಮಾಡಿ ಮಾಡಿ ಮಾತಾಡಿದರೂ, ಯಾವುದೋ ಮಾತು ರಂಗಣ್ಣನನ್ನು ಕೆರಳಿಸಿಬಿಡುತ್ತಿತ್ತು. ಅವನ ಗಂಟಲು ತಾರಶ್ರುತಿಗೇರುತ್ತಿತ್ತು. ಮಾತಿ ಬಯ್‌ಗಳ ಸುರಿಮಳೆಯಾಗುತ್ತಿತ್ತು. ರಂಗಣ್ಣ ಹೆಂಡತಿಯ ತವರುಮನೆಯವರ ಹೆಸರನ್ನೆತ್ತಿಕೊಂಡು ಬಯ್ಯುತ್ತಿದ್ದ. ಆಗ ಜಾನಕಿ ಪ್ರತಿಭಟಿಸುತ್ತಿದ್ದಳು. ತನ್ನ ಆತ್ಮಗೌರವ ಕಾಪಾಡಿಕೊಳ್ಳಲು ರಂಗಣ್ಣನಿಗೆ ಬಲಪ್ರಯೋಗದ ಮಾರ್ಗ ಇಷ್ಟೇ ಇರುತ್ತಿತ್ತು. ಹೆಂಡತಿಯನ್ನು ಹಿಡಿದುಕೊಂಡು ದನ ಬಡಿದ ಹಾಗೆ ಬಡಿಯುತ್ತಿದ್ದ. ಅವಳ ಕಣ್ಣೀರ ಕೋಡಿ ಅವನ ಕೋಪಾಗ್ನಿಯನ್ನಾರಿಸುತ್ತಿತ್ತು. ಬಾಯಿಗೆ ಬಂದಂತೆ ಬಯ್ದುಕೊಂಡು, ಹೆಗಲ ಮೇಲೊಂದು ಟವಲೆಳೆದುಕೊಂಡು ಹೊರಟು ಹೋಗುತ್ತಿದ್ದ.

ಆದರೆ ಊಟದ ಹೊತ್ತಿಗೆ ಸರಿಯಾಗಿ ಎಲ್ಲಿದ್ದರೂ ರಂಗಣ್ಣ ಧಾವಿಸುತ್ತಿದ್ದ. ಅವನು ನಿತ್ಯ ಊಟಕ್ಕೆ ಕೂಡುವ ಸ್ಥಳದಲ್ಲಿ ಜಾನಕಿ ತಟ್ಟೆಹಾಕಿ, ಚೆಂಬು ಲೋಟ ಇಟ್ಟಿರುತ್ತಿದ್ದಳು. ಅಡಿಗೆ ಚೆನ್ನಾಗಿಲ್ಲದಿದ್ದರೆ ಜಾನಕಿಯ ಗ್ರಹಚಾರ ಬಿಡುಗಡೆಯಾಗುತ್ತಿತ್ತು. ಅಡಿಗೆ ಚೆನ್ನಾಗಿದ್ದರೂ ಅವಳಿಗೆ ಕಷ್ಟ ತಪ್ಪುತ್ತಿರಲಿಲ್ಲ. ಬರಬರುತ್ತ ಗಂಡನ ಕೋಪತಾಪ, ಬಯ್‌ಗಳು, ಹೊಡೆತ - ಎಲ್ಲವೂ ಜಾನಕಿಗೆ ಚೆನ್ನಾಗಿ ಅಭ್ಯಾಸವಾಗಿ ಅವುಗಳಿಗೆ ಅವಳು ಬೆಲೆ ಕೊಡುವುದನ್ನೇ ಬಿಟ್ಟು ಬಿಟ್ಟಳು. ಆದರೆ ಗಂಡನ ನಲ್ಮೆ, ವಿಶ್ವಾಸ ಅವಳಿಗೆ ಅಂಜಿಕೆಯನ್ನುಂಟು

ಮಾಡುತ್ತಿತ್ತು. ಗಂಡನಿಗೆ ತೃಪ್ತಿಯಾಗುವಂತೆ ಅಡಿಗೆಮಾಡಿ ಊಟಕಿಕ್ಕುವುದೂ ಅವಳಿಗೆ 'ಕುತ್ತು' ಆಗುತ್ತ ಬಂತು.

೩

ಅಕ್ಕ, ತಂಗಿಯರಿಗೆ ಮೊದಲನಿಂದಲೂ ಕೂಡಿಬರಲಿಲ್ಲ. ತಂದೆ ತನ್ನನ್ನು ಪ್ರೀತಿಸುವುದಕ್ಕಿಂತಲೂ ಹೆಚ್ಚಾಗಿ ಸುನಂದೆಯನ್ನು ಪ್ರೀತಿಸುತ್ತಾರೆಯೆನ್ನುವ ಕಾರಣವನ್ನು ಜಾನಕಿ ಮರೆಯಲು ಸಾಧ್ಯವಾಗಿರಲಿಲ್ಲ. ತಂದೆ ತೀರಿಕೊಂಡ ಮೇಲೂ ಅವಳ ಮನಸ್ಸಿನ ಕಿನಿಸು ಮಾಯವಾಗಿರಲಿಲ್ಲ. ಸುನಂದೆ ಗಂಡನಿಗಾಗಿ ಹಾತೊರೆಯುತ್ತಿದ್ದುದು, ಅವನ ಧ್ಯಾನದಲ್ಲಿಯೇ ನಿಮಗ್ನಳಾಗಿರುತ್ತಿದ್ದುದೂ, ಅವನು ಬಂದಾಗ ಅವಳ ಪಂಚೇಂದ್ರಿಯಗಳೂ ಜಾಗ್ರತವಾಗಿ ಅವನನ್ನು ತುಂಬಿಕೊಳ್ಳುತ್ತಿದ್ದುದೂ ಜಾನಕಿ ಹೃದಯವನ್ನು ಕಡೆಯುತ್ತಿದ್ದವು. ತಾಯಿ ಕೂಡ ಸುನಂದೆಯನ್ನೇ ಪ್ರಿತಿಸುತ್ತಾರೆಂದು ಅವಳು ಅಸಮಾಧಾನಗೊಂಡಿದ್ದಳು.

ಸಂಸಾರ ನಿರ್ವಾಹಣಕ್ಕೆ ಸುನಂದೆಯ ಪತಿ ಹಣಕೊಡುವುದಕ್ಕಾರಂಭ ಮಾಡಿದ ಮೇಲಂತೂ ಅವಳ ಅಸೂಯೆ, ಅಸಮಾಧಾನ ಮುಗಿಲು ಮುಟ್ಟಿಕ್ಕೇರಿತು. ತನ್ನ ಗಂಡನ ಕೈತುಂಬ ಹಣವಿದ್ದರೂ ತಾನು ತೌರುಮನೆಯಲ್ಲಿ ತಂಗಿಯ ಆಶ್ರಯದಲ್ಲಿ ಬಾಳಬೇಕಾಯಿತಲ್ಲಾ ಎಂಬ ಕೊರಗು ಕೋಪದ ರೂಪ ತಾಳಿತ್ತು.

ತೌರುಮನೆಗೆ ಹೋದ ಹೆಂಡತಿಯ ದಾರಿ ನೋಡಿ ನೋಡಿ ರಂಗಣ್ಣ ಬೇಸತ್ತ. ಅವನ ಕಾಗದವೊಂದಕ್ಕೂ ಮಾರುತ್ತರ ಬರಲಿಲ್ಲ. 'ಬನ್ನಿ' ಎಂದು ಹೆಂಡತಿಯ ಕೈಲಿ ಹೇಳಿಸಿಕೊಳ್ಳದೆ ಅವಳ ತೌರುಮನೆಗೆ ಹೋಗಿ ಕರೆದುಕೊಂಡು ಬರುವುದು ತನಗೆ ಗೌರವವಲ್ಲ ಎಂಬ ಭಾವನೆಯೂ ಅವನನ್ನು ಕಾಡುತ್ತಿತ್ತು.

ಎಲ್ಲಕ್ಕೂ ಹೆಚ್ಚಾಗಿ ರಂಗಣ್ಣನಿಗೆ ಊಟಕ್ಕೆ ತುಂಬ ತೊಂದರೆಯಾಗಿತ್ತು. ಬೆಳಗಾಗ ಎದ್ದು ತಾನೇ ಒಲೆ ಉರಿಮಾಡಿಕೊಂಡು ಸ್ನಾನಕ್ಕೆ ನೀರು ಕಾಸಿಕೊಳ್ಳಬೇಕಾಗಿತ್ತು. ಕಾಫಿ ಒಲೆ ಹಚ್ಚಿ ಕಾಫಿ ಮಾಡಿಕೊಳ್ಳಬೇಕಾಗಿತ್ತು. ಹೆಂಡತಿ ಮಾಡಿ ಬಡಿಸುತ್ತಿದ್ದ ರುಚಿರುಚಿಯಾದ ಅಡಿಗೆಯನ್ನು ಅವನ ಜಿಹ್ವೆ ಬಯಸತೊಡಗಿತು.

ಒಂದು ದಿನ ಬೆಳಿಗ್ಗೆ ರಂಗಣ್ಣಾ ಒಲೆ ಹೊತ್ತಿಸುತ್ತ ಹೊಗೆಯೊಂದಿಗೆ ಹೋರಾಟ ನಡೆಸುತ್ತಿದ್ದ.

ಅನಂತ ಬಂದವನೇ ನಿಂತುಕೊಂಡು ಸ್ವಲ್ಪಹೊತ್ತು ನೋಡಿ ರಂಗಣ್ಣಾ ನನ್ನು ಮಾತನಾಡಿಸಿದ

"ಏನೋ ಇದು ಅವಸ್ಥೆ."

"ಪಿಂಡ ಬೇಯಿಸಿಕೊಳ್ಳುತ್ತಿದ್ದೀನಯ್ಯಾ."

"ಶ್ರೀಮತಿಯವರು ಬರುವುದು ಯಾವಾಗ ?'

"ಹೊಲೆ . . . . ಅವಳಿಲ್ಲಿ ಬರುತ್ತಾಳೆ ಹೇಳು. ಹೊಲೆ ಊದಿ ಊದಿ ನನ್ನ ಕಣ್ಣು ಇಂಗಿ ಹೋದ ಮೇಲೆ ಬರುತ್ತಾಳೇನೋ ?"

"ನೀನು ಕೆಟ್ಟಮಾತು ಆಡೋವನ್ನ ಯಾವಾಗ ಬಿಡುತ್ತೀಯೋ ರಂಗಣ್ಣಾ."

"ನಾಲ್ಕು ಹೆಗಲು ಸಿದ್ಧವಾಗುತ್ತಲ್ಲಾ ಆವಾಗ."

"ಇರಲಿ - ಬಾ. ಇವತ್ತಿನಿಂದ ನಮ್ಮ ಮನೆಯಲ್ಲಿ ಊಟಕ್ಕೆ ಏರ್ಪಾಟು ಮಾಡಿದ್ದೀನಿ - ನಿನ್ನ ಕರೆದುಕೊಂಡು ಹೋಗಲೆಂದೇ ಬಂದೆ.'

ರಂಗಣ್ಣಾ ಒಂದು ಚೆಂಬು ನೀರು ತೆಗೆದುಕೊಂಡು ಒಲೆಯೊಳಗೆ ಸುರಿದು ಎದ್ದು ಹೊರಗೆ ಬಂದ.

ರಂಗಣ್ಣಾನಿಗಿದ್ದ ಒಬ್ಬನೇ ಆಪ್ತಮಿತ್ರ ಅನಂತ. ಅವನಿಗೂ ರಂಗಣ್ಣಾನ 'ದೂರ್ವಾಸ ಕೋಪ' ಬೇಸರ ಬರಿಸುತ್ತಿದ್ದರೂ ಔದಾರ್ಯದಿಂದ ಸಹಿಸಿ ಕೊಳ್ಳುತ್ತಿದ್ದ.

"ನಿನ್ನ ಪಾಡು ನೋಡಿದರೆ ನಿಜವಾಗಿ ನನಗೆ ನಗುಬರುತ್ತದೆ ರಂಗಣ್ಣಾ."

"ಊರೆಲ್ಲಾ ನಗುತ್ತಿರುವಾಗ ನೀನೇಕೆ ಸುಮ್ಮನಿರಬೇಕು. ನೀನೂ ನಕ್ಕುಬಿಡು."

"ಇದೇನು ನಿನ್ನ ಅವಸ್ಥೆ."

"ಯಾವದು ?"

"ಯಾವದು ಎನ್ನುವುದನ್ನು ತಿಳಿಸಿದರೆ ಮರೆಮಾಚದೆ ಉತ್ತರ ಹೇಳು ವೆಯೋ ?"

"ನಿನ್ನ ಹತ್ತಿರ ನಾನು ಯಾವದನ್ನು ಬೈಚಿಟ್ಟಿದ್ದೇನೆ ಅನಂತೂ."

"ಜಾನಕಮ್ಮನ್ನ ಬರಹೇಳಿ ನಿಜವಾಗಿ ಕಾಗದ ಬರೆದೆಯಾ?"

"ಒಂದಲ್ಲಯ್ಯ - ಹತ್ತು ಕಾಗದ ಬರೆದಿದ್ದೇನೆ.'

"ಉತ್ತರವೇನು ಬಂತು?'

"ಉತ್ತರವೇ ಇಲ್ಲ"

"ಅವರಿಗೂ ನಿನಗೂ ಏನಾದರೂ ಅಸಮಾಧಾನಕ್ಕೆ ಕಾರಣ ವಾಯಿತೇ?"

"ಏನೂ ಇಲ್ಲವಲ್ಲ.'

"ಹಾಗಾದರೆ . . . ."

"ಹೆಂಗಸರು ಮನಸ್ಸು ಭಗವಂತನಿಗೇ ಗೊತ್ತಾಗಬೇಕು."

'ನೀನೇ ಮೈಸೂರಿಗೆ ಹೋಗಿ ಏಕೆ ನೋಡಿಕೊಂಡು, ಜತೆಯಲ್ಲಿ ಕರೆದು ಕೊಂಡು ಬರಬಾರದು"

"ಅವಳು ಅಟ್ಟದ ಮೇಲೆ ಕುಳಿತುಕೊಂಡು ದಿಮಾಕುಮಾಡುತ್ತಿದ್ದರ. ನಾನು ಅವಳ ಕಾಲಿನ ಮೇಲೆ ಬಿದ್ದು ಕರೆದುಕೊಂಡು ಬರಬೇಕೇ?"

"ಗಂಡ ಹೆಂಡಿರಲ್ಲಿ ಕಾಲಿಗೆ ಬೀಳುವುದು, ಕೈ ಮುಗಿಯುವುದು ಯಾವ ದೊಡ್ಡಮಾತು ರಂಗಣ್ಣ. ಗಂಡನಿಗೆ ತನ್ನ ಮೇಲೆ ಎಷ್ಟು ಪ್ರೀತಿ ಇದೆ ಎಂದು ತೋರಿಸಿಕೊಳ್ಳಲು ಹೆಣ್ಣು ಬಯಸುತ್ತದೆ. ಪ್ರಾಯಶಃ ಅದಕ್ಕಾಗಿಯೇ ಜಾನಕಮ್ಮ ತೌರುಮನೆಯಲ್ಲಿ ಕುಳಿತಿರಬಹುದು."

"ಹಾಗೇಂತೀಯಾ ಅನಂತೂ.'

"ಎದುರಿಗೆ ನೀನು ಹೋಗಿ ನಿನ್ನ ಕಮಲವದನ ತೋರಿಸಿದ ಕೂಡಲೆ ಜಾನಕಮ್ಮ ಬರದೇ ಇರುತ್ತಾರೆಯೇ?"

"ಅವಳು ಒಳ್ಳೆಯವಳು ಕಣೋ. ನಾನೇ ಶುದ್ಧ ಪೆದ್ದ . . . . ಮಗ. ಅವಳನ್ನು ದನ ಬಡಿವ ಹಾಗೆ ಒಡೆಯುತ್ತಿದ್ದೆ."

"ನೀನೂ ಒಳ್ಳೆಯವನೇ ರಂಗಣ್ಣ - ಆದರೆ ಮುಂಗೋಪಿ."

"ಈಗ ನನ್ನ ಏನು ಮಾಡೂಂತಿ"

"ಏನೂ ಇಲ್ಲ. ಮೈಸೂರಿಗೆ ಹೋಗಿ, ನಾಲ್ಕು ಒಳ್ಳೆಯ ಮಾತನಾಡಿ ಕರೆದುಕೊಂಡು ಬಾ."

"ನೀನೂ ಜತೆಯಲ್ಲಿ ಬರುತ್ತೀಯಾ?"

"ಗಂಡ ಹೆಂಡತಿ ಜಗಳ ಪರಿಹರಿಸುವುದಕ್ಕೆ ಮೂರನೆಯವರು ಏಕೋ ರಂಗಣ್ಣಾ. ಎರಡು ಮಕ್ಕಳ ತಂದೆಯಾಗಿ ಅವಿವೇಕದ ಮಾತು ಆಡುತ್ತೀಯಪ್ಪಾ"!

"ನೀನು ಬರುವ ಹಾಗಿದ್ದರೆ ಹೊರಡುತ್ತೇನಪ್ಪಾ."

ಅನಂತ ಒಪ್ಪಿಕೊಳ್ಳದೆ ನಿರ್ವಾಹವೇ ಇರಲಿಲ್ಲ.

ಅಂದು ಮಂಗಳವಾರವಾಗಿತ್ತು. ದಿನ ಒಳ್ಳೆಯದಲ್ಲ. ಬುಧವಾರ ರಂಗಣ್ಣನ ಸಾಲದ ಬಾಕಿ ಹರಿಸಲು ಪಟೇಲ್ ಸಿದ್ದೇಗೌಡ ಬರುವವನಿದ್ದ. ಗುರುವಾರ. ದಿನವೂ ಪ್ರಶಸ್ತವಾಗಿತ್ತು. ಅಂದೇ ಮೈಸೂರಿಗೆ ಪ್ರಯಾಣ ಬೆಳಸುವುದೆಂದು ಇಬ್ಬರೂ ನಿಶ್ಚಯಿಸಿದರು.

ಈ ಮಾತಯಾತ್ರೆ ಫಲಕಾರಿಯಾಗುವುದೆಂದು ಅನಂತ ನಿರೀಕ್ಷಿಸಿದಂತೆ ರಂಗಣ್ಣ ನಿರೀಕ್ಷಿಸಿರಲಿಲ್ಲ ಹಲವು ಸಂದೇಹಗಳು ಅವನ ಮನಸ್ಸನ್ನು ಕಾಡುತ್ತಿದ್ದವು.

ಮೈಸೂರಿನಲ್ಲಿ ರಂಗಣ್ಣ ನೇರವಾಗಿ ಮಾವನಮನೆಗೆ ಹೋಗದೆ ಮಾಡರ್ನ್ ಹಿಂದೂ ಹೋಟೆಲಿನ ಕಡೆ ಹೊರಟಿದ್ದು ಕಂಡು ಅನಂತನಿಗೆ ಆಶ್ಚರ್ಯವೇ ಆಯಿತು.

"ಈಗ ನಾವು ಅಲ್ಲಿಗೆ ಹೋದರೆ ಅವರು ಅಡಿಗೆ ಆರಂಭಿಸಬೇಕಾಗುತ್ತದೆ ಅನಂತೂ. ಹೋಟೆಲಿನಲ್ಲಿ ಊಟ ಮುಗಿಸಿಕೊಂಡು, ಹೋಗೋಣ."

"ಆಗಬಹುದು. ನಿನ್ನ ತಮ್ಮನ ಮನೆ ಇಲ್ಲೇ ಇರುವಾಗ ಹೋಟೆಲಿಗೆ ಯಾಕೆ ಹೋಗಬೇಕು ಎಂದು ಯೋಚಿಸುತ್ತಿದ್ದೆ."

ರಂಗಣ್ಣ ಕ್ಷಣಕಾಲ ಅನಂತನನ್ನು ದಿಟ್ಟಿಸಿನೋಡಿ

"ನಿನಗೇನು ತಲೆಕೆಟ್ಟಿದೆಯೋ ? ಆ ಸಂಬಂಧ ತೊರೆದು ಹೋದದ್ದು ಗೊತ್ತಿದ್ದೂ ಹೀಗೆ ಮಾತನಾಡುವೆಯಲ್ಲಾ !"

"ನಿನ್ನ ತಮ್ಮನ ಮನೆಗೆ ಹೋಗುವುದು ಬೇಡವೆಂದರೆ ಬೇಡ. ಆದರೆ ಸಂಬಂಧ ತೊರೆದುಹೋಗುವ ಮಾತು ಸುಳ್ಳು."

ಅನಂತನೊಂದಿಗೆ ಈ ವಿಷಯ ಚರ್ಚೆಮಾಡುವುದರಿಂದ ಯಾವ ಲಾಭವೂ ಇಲ್ಲವೆಂದು ರಂಗಣ್ಣ ಸುಮ್ಮನಾದ.

ಸುಮಾರು ಮೂರು ಮೂರು ಗಂಟೆಯ ವೇಳೆಗೆ ರಂಗಣ್ಣ ಅನಂತ ನೊಂದಿಗೆ ಮಾವನ ಮನೆಗೆ ಹೋದ ಅಲ್ಲಿ ಅವನಿಗೆ ಸ್ವಾಗತ ಬಯಸಿದಳು ಸುನಂದಾ. ತೊಟ್ಟಿಯಲ್ಲಿ ಕುಳಿತು

"ಎಲ್ಲರೂ ಆರೋಗ್ಯವೇ" ಎಂದು ಕೇಳಿದ.

"ಆರೋಗ್ಯ, ನೀವು ಬರುವ ವಿಷಯ ತಿಳಿಸಲೇ ಇಲ್ಲಾ ಭಾವಯ್ಯ."

"ಮೈಸೂರಿನಲ್ಲಿ ಸ್ವಲ್ಪ ಕೋರ್ಟು ಕೆಲಸವಿತ್ತು. ಇದ್ದಕ್ಕಿದ್ದಂತೆ ಹೊರಟು ಬಿಡಬೇಕಾಯಿತು. ಜಗದೀಶ, ವಿಮಲಾ ಎಲ್ಲಿ ?"

"ಸ್ಕೂಲಿಗೆ ಹೋಗಿದ್ದಾರೆ"

ಸುನಂದಾ ಕಾಫಿ ತರಲು ಒಳಕ್ಕೆ ಹೋದಳು ಇಂದಿರಮ್ಮನವರು ಬಾಗಿಲು ಮರೆಯಲ್ಲಿ ನಿಂತು

"ಕ್ಷೇಮವೇ" ಎಂದು ಕೇಳಿದರು.

"ಇವತ್ತಿನವರೆಗೆ . . . . ಜಾನಕಿಯಿಂದ ಕಾಗದ ಕೂಡ ಬರಲಿಲ್ಲ."

ಇಂದಿರಮ್ಮನವರು ಉತ್ತರ ಹೇಳಲಿಲ್ಲ.

ಸುನಂದಾ ತಂದಿಟ್ಟ ಕಾಫಿ ಮುಗಿಸಿ ರಂಗಣ್ಣ ಮೆಲ್ಲನೆ

"ನಿಮ್ಮಕ್ಕ ಎಲ್ಲಿ ಸುನಂದಾ ?" ಎಂದು ಕೇಳಿದ.

"ಒಳಗೆ ಬನ್ನಿ ಭಾವಯ್ಯ"

ಎಂದು ಸುನಂದ ರಂಗಣ್ಣನನ್ನು ಜಾನಕಿಯ ರೂಮಿಗೆ ಕರೆದೊಯ್ದು ಕುಳ್ಳಿರಿಸಿದಳು.

ಒಳಗೆ ಪಿಸಪಿಸ ಮಾತು ನಡೆದಿತ್ತು ರಂಗಣ್ಣ ಆಕ್ಷೇಪಿಸುತ್ತಿದ್ದ ಮಾತು ತೀರ ಅಸ್ಪಷ್ಟವಾಗಿತ್ತು. ಇಂದಿರಮ್ಮನವರು ಮುಗಿಲನ್ನು ಅಂಗಲಾಚು ತ್ತಿದ್ದಂತಿತ್ತು. ಹತ್ತು ಹದಿನೈದು ನಿಮಿಷ ಕಳೆದಿರಬಹುದು. ಜಾನಕಿ ಬಂದು ಬಾಗಿಲ ಬಳಿ ನಿಂತಳು.

ಜಾನಕಿಗೂ ರಂಗಣ್ಣನಿಗೂ ಮಿಂಚಿನವೇಗದಲ್ಲಿ ಮಾತು ನಡೆದಿತ್ತು. ನಾಲ್ಕು ನಿಮಿಷ ಕಳೆಯುವುದರೊಳಗೆ ರಂಗಣ್ಣ ಉದ್ವಿಗ್ನನಾಗಿ ಎದ್ದು ಹೊರಗೆ ಬಂದು

"ನಡೀ ಅನಂತ" ಎಂದು ಹೇಳಿದ.

ಇಬ್ಬರೂ ಸ್ವಲ್ಪದೂರ ನಡೆದ ಮೇಲೆ ಅನಂತ

"ಏನಾಯಿತು ರಂಗಣ್ಣಾ" ಎಂದು ಕೇಳಿದ.

ದುಃಖದ ಕಟ್ಟೆಯೊಡೆದಂತಾಯಿತು. ರಂಗಣ್ಣಾ ಸಹಾಯಹೀನ ಬಾಲಕಿಯಂತೆ ರೋಧಿಸಲಾರಂಭಿಸಿದ. ಅನಂತ ಅವನಿಗೆ ಸಮಾಧಾನ ಹೇಳಿ ಪಕ್ಕದಲ್ಲಿದ್ದ ತೋಟಕ್ಕೆ ಕರೆದೊಯ್ದು ಕುಳ್ಳಿರಿಸಿಕೊಂಡು

"ಸಮಾಧಾನಮಾಡಿಕೋ ರಂಗಣ್ಣಾ. ಏನಾಯಿತು ಹೇಳು."

"ಏನಾಯಿತೂಂತ ಹೇಳಲಿ ಅನಂತೂ. ಅನಿಸ್ಸು . . . ಖಂಡಿತವಾಗಿ ಬರುವುದಿಲ್ಲವೆಂದು ಹೇಳಿದಳು."

"ಬರುವುದಿಲ್ಲ! ಹಾಗಂದರೇನಯ್ಯ?"

"ನನ್ನ ಜತೆ ಸಂಸಾರಮಾಡುವುದಕ್ಕೆ ಸಾಧ್ಯವಿಲ್ಲವಂತೆ - ನಾನು ಶುದ್ಧ ಅಯೋಗ್ಯನಂತೆ - ಭಿಕ್ಷವಾದರೂ ಬೇಡುತ್ತಾಳಂತೆ - ನನ್ನ ಮನೆಗೆ ಕಾಲಿಡುವುದಿಲ್ಲವಂತೆ!"

"ನೀನು ಯದ್ವಾತದ್ವಾ ಮಾತನಾಡಿದೆಯೆಂದು ಕಾಣುತ್ತದೆ.'

"ಇಲ್ಲವಪ್ಪಾ. ಕಾಲಿಗೆ ಬಿದ್ದೇ ಕೇಳಿಕೊಂಡೆ"

"ನಿಮ್ಮ ದಾಂಪತ್ಯಕ್ಕೆ ಯಾವ ಸಿಡಿಲುಬಡಿಯಿತು ರಂಗಣ್ಣಾ. ಇಷ್ಟು ವೈಮನಸ್ಯ ಬರಬೇಕಾದರೆ ಕಾರಣವೂ ಪ್ರಬಲವಾಗಿಯೇ ಇರಬೇಕು. ಜಾನಕಮ್ಮನವರ ಮನಸ್ಸು ಕೆಡುವುದಕ್ಕೆ ಏನಾಯಿತು?"

ಅನಂತನಿಗೆ ಏನು ಉತ್ತರಕೊಡಬೇಕೆಂಬುದು ರಂಗಣ್ಣನಿಗೆ ಹೊಳೆಯಲಿಲ್ಲ ಕ್ಷಣಕಾಲ ಆಲೋಚಿಸಿ

"ನಾನು ಹೊಡೆದು ಒಡೆದೂ ಮಾಡುತ್ತಿದ್ದೆ. ಅದನ್ನೇ ಅವಳು ಮನಸ್ಸಿನಲ್ಲಿಟ್ಟುಕೊಂಡಿದ್ದಾಳೆ."

"ಇನ್ನು ಮೇಲೆ ಹಾಗೆ ಮಾಡುವುದಿಲ್ಲ ಎಂದು ಹೇಳಬೇಕಾಗಿತ್ತು."

"ಹೇಳದೆ ಇರುತ್ತೇನೆಯೇ?"

ನಿಜವಾದ ಕಾರಣವನ್ನು ರಂಗಣ್ಣಾ ಮರೆಮಾಚುತ್ತಿದ್ದಾನೆಂಬುದು ಅನಂತನ ಮನಸ್ಸಿಗೆ ಖಚಿತವಾಯಿತು. ಅವನ ದಾಂಪತ್ಯರಹಸ್ಯವನ್ನು ಕೆದಕಿನೋಡುವುದು ಯೋಗ್ಯವಲ್ಲವೆಂದು ಅವನು ತೆಪ್ಪಗಾದ.

"ಸಂಜೆ ಗಾಡೀಗೆ ನಾನು ಊರಿಗೆ ಹೊರಟುಬಿಡುತ್ತೇನೆ ಅನಂತೂ. ನೀನು . . . . "

"ಬಂದ ಕೆಲಸ ಆಗುಮಾಡಿಕೊಳ್ಳದೆ ಹಿಂದಿರುಗುವುದು ನನಗೆ ಸರಿಯೆನಿಸುವುದಿಲ್ಲ."

"ಕೆಲಸ ಹಾಳಾಯ್ತು. ಕೆಲಸಕ್ಕೆ ಬಾರದ ಹೆಂಗಸಿಗೇ ಇಷ್ಟು ಪ್ರತಿಷ್ಟೆಯಿರುವಾಗ ನನಗೆಷ್ಟಿರಬೇಕು. ಇನ್ನು ಅವಳಾಗಿಯೇ ಬರುತ್ತೇನೆಂದರೂ ನಾನು ಮನೆ ಸೇರಿಸುವುದಿಲ್ಲ."

"ಮಕ್ಕಳ ಗತಿ ?"

"ಅವರು ಬರುತ್ತೇನೆಂದರೆ ಬೇಡವೆನ್ನುವುದಿಲ್ಲ. ತಾಯಿಗೇ ಜೋತು ಬೀಳುವ ಹಾಗಿದ್ದರೆ ಅದೂ ಒಳ್ಳೆಯದೇ."

ಎಂದು ಎದ್ದ. ಅನಂತ ಸ್ಟೇಷನ್‌ವರೆಗೆ ರಂಗಣ್ಣನ ಜತೆ ನಡೆದು

"ನೀನು ಹೋಗು ರಂಗಣ್ಣ. ನಾನು ಎರಡುದಿನ ಬಿಟ್ಟು ಬರುತ್ತೇನೆ. ಹೇಗೂ ಮೈಸೂರಿಗೆ ಬಂದದ್ದಾಗಿದೆ. ನನ್ನ ಕೆಲಸ ಸ್ವಲ್ಪ ಇದೆ. ಅದನ್ನು ಮುಗಿಸಿಕೊಂಡೇ ಬರುತ್ತೇನೆ"

ಎಂದು ಹೇಳಿ ರಂಗಣ್ಣನನ್ನು ಗಾಡಿಯಲ್ಲಿ ಕೂಡಿಸಿದ.

ರೈಲು ಹೊರಟಮೇಲೆ ಅನಂತ ಒಂದು ಗಾಡಿ ಗೊತ್ತುಮಾಡಿಕೊಂಡು ನೇರವಾಗಿ ಒಂಟಿಕೊಪ್ಪಲಿಗೆ ಬಂದು ಇಳಿದ.

ಸಂಜೀವನ ಮನೆಯ ಬಾಗಿಲು ಹಾಕಿತ್ತು. ಬೀಗಮುದ್ರೆ ಬಿದ್ದಿರಲಿಲ್ಲ. ಅನಂತ ಬಾಗಿಲು ತಟ್ಟಿದ. ಒಳಗಿನಿಂದ ಸಂಜೀವನೇ ಹೊರಬಿದ್ದ

"ಓಹೋ! ಅನಂತಯ್ಯನವರೇ - ತಡೀರಿ ಬಂದೆ"

ಎಂದು ಸಂಜೀವ ಒಳಗೆ ಹೋಗಿ ತನ್ನ ಅತಿಥಿಯನ್ನು ಕಳಿಸಿಕೊಟ್ಟು ಅನಂತನನ್ನು ಒಳಗೆ ಬರಮಾಡಿಕೊಂಡ. ಸಂಜೀವನ ಮನೆಯಿಂದ ಹೊರಬಿದ್ದ ಅತಿಥಿ ಏಕಾಂಗಿಯಾದ ಸ್ತ್ರೀಯೆಂಬುದನ್ನು ಅನಂತ ಗಮನಿಸದಿರಲಿಲ್ಲ.

"ಯಾವಾಗ ಬಂದಿರಿ ಅನಂತಯ್ಯನವರೇ."

"ಮಧ್ಯಾಹ್ನ ಬಂದೆನಪ್ಪಾ."

"ಕ್ಷೇಮವಷ್ಟೆ. ಅಣ್ಣ ಚೆನ್ನಾಗಿದ್ದಾನೆಯೇ ?"

"ಅವನೂ ಬಂದಿದ್ದ."

"ಈಗೆಲ್ಲಿದ್ದಾನೆ."

"ಸಂಜೆ ಗಾಡಿಗೆ ಊರಿಗೆ ಹೋದ."

“ಮೈಸೂರಿಗೆ ಬಂದೂ ಇಲ್ಲಿಗೆ ಬರದೆಹೋದನೇ? ನೀವಾದರೂ ಅವನನ್ನು ಕರೆತರಬೇಕಾಗಿತ್ತು.”

“ನಾನು ಹೇಳಿದೆ. ನಿಮ್ಮಣ್ಣನ ಸ್ವಭಾವ ನಿನಗೆ ಗೊತ್ತಿಲ್ಲವೇ? ನನ್ನ ಮಾತೂ ದುರ್ಲಕ್ಷಿಸಿ ಹೊರಟುಹೋದ.”

ಸಂಜೀವನ ನಿಟ್ಟುಸಿರ್ಗರೆದು

“ವಿಶ್ವಾಸವಿಟ್ಟುಕೊಂಡು ನೀವಾದರೂ ಬಂದಿರಲ್ಲ ಅಷ್ಟೇ ಸಾಕು”

“ನಾನು ಸುಮ್ಮನೆ ಬಂದಿಲ್ಲ ಸಂಜೀವ. ಕಾರ್ಯಾರ್ಥಿಯಾಗಿ ಬಂದಿದ್ದೇನೆ. ನಿನ್ನಿಂದ ಒಂದು ದೊಡ್ಡ ಕೆಲಸ ಆಗಬೇಕಾಗಿದೆ.”

“ನನ್ನಿಂದಲೇ - ಹೇಳಿ”

“ನಿಮ್ಮ ಅಣ್ಣ, ಅತ್ತಿಗೆ ಸಂಸಾರ ಸೇರಮಾಡುವುದು ನಿನ್ನ ಜವಾಬ್ದಾರಿ.’

“ಅನಂತಯ್ಯನವರೇ, ನೀವೇನು ಹೇಳುತ್ತಿರುವಿರಿ. ನಮ್ಮಣ್ಣನ ಯಾವದೇ ವ್ಯವಹಾರಕ್ಕಾದರೂ ನಾನು ಕೈಹಾಕಲು ಸಾಧ್ಯವೇ?’’

‘‘ಕಷ್ಟವೆಂಬುದನ್ನು ನಾನೂ ಬಲ್ಲೆ. ಆದರೆ ನೀನೀಗ ಹಿಂದೆಗೆದರೆ ಕೆಲಸ ಕೆಟ್ಟುಹೋಗುತ್ತದೆ.”

“ನನ್ನಿಂದೇನಾಗಬೇಕು ಸ್ಪಷ್ಟವಾಗಿ ತಿಳಿಸಿ - ಮುಂದೆ ಯೋಚನೆ ಮಾಡಿದರಾಯಿತು.”

“ಶತಾಯು ಗತಾಯ ಈ ಕೆಲಸ ಸಾಧಿಸುತ್ತೇನೆಂದು ನೀನು ಮಾತು ಕೊಟ್ಟರೆ ಹೇಳುತ್ತೇನೆ.”

“ನನ್ನ ಅಣ್ಣನ ಸಂಸಾರ ಚೆನ್ನಾಗಿರಬೇಕೆಂದು ನಾನು ಬಯಸುವುದಿಲ್ಲವೇ? ಶಕ್ತಿಮೀರಿ ಪ್ರಯತ್ನಿಸುತ್ತೇನೆ - ಫಲಾಫಲಗಳಿಗೆ ನಾನು ಹೇಗೆ ಹೊಣೆ?”

“ಅದು ಸರಿ.”

“ನಿಮ್ಮಣ್ಣ ಎಷ್ಟೇ ಕಾಗದ ಬರೆದರೂ ನಿಮ್ಮ ಅತ್ತಿಗೆ ಉತ್ತರವೇ ಬರೆಯಲಿಲ್ಲ. ಊರಿಗೆ ಕರೆದುಕೊಂಡು ಹೋಗಬೇಕೆಂದು ನಿಮ್ಮ ಅಣ್ಣ ಇವತ್ತು ನನ್ನ ಜತೆ ಬಂದ. ಗಂಡ ಹೆಂಡತಿಗೆ ಮಾತುಕತೆಯೂ ಆಯಿತು.”

“ಅವರೇನು ಹೇಳಿದರು?”

"ಏನುಮಾಡಿದರೂ ನಾನು ನಿಮ್ಮ ಜತೆಬಂದು ಸಂಸಾರಮಾಡುವದಿಲ್ಲ ವೆಂದು ಹೇಳಿದರಂತೆ!"

"ಆ! ಹಾಗೆ ಹೇಳಿದರೇ !! ಕಾರಣ ?"

"ಅದೇ ಚಿದಂಬರರಹಸ್ಯವಾಗಿದೆ. ನಿಮ್ಮ ಅಣ್ಣನೂ ಆ ವಿಷಯ ಬಾಯಿ ಬಿಡಲೊಲ್ಲ."

"ಈಗ ನಾನೇನು ಮಾಡಬೇಕು ಸ್ವಾಮಿ."

"ನಿಮ್ಮ ಅತ್ತಿಗೆಯ ಜತೆ ಮಾತನಾಡಿ ಅವರನ್ನು ಚಾಮರಾಜನಗರಕ್ಕೆ ಕಳಿಸಿಕೊಡುವ ಭಾರ ನಿನ್ನದು."

"ನಾಳೆಯೇ ಅವರನ್ನು ಕಂಡು ಮಾತನಾಡುತ್ತೇನೆ."

ಅನಂತನ ಮನಸ್ಸಿನಲ್ಲಿ ಆಸೆಯುಂಕುರಿಸಿತು.

ಸಂಜೀವ ಒಳಗೆ ಹೋಗಿ ಬಂದು

"ಏಳಿ ಸ್ವಾಮಿ. ಊಟ ಮಾಡಿ ಕುಳಿತುಕೊಳ್ಳೋಣ" ಎಂದ.

ಅನಂತ ಆಶ್ಚರ್ಯದಿಂದ ಅವನ ಕಡೆ ದಿಟ್ಟಿಸಿನೋಡಿ.

"ಅಡಿಗೆ ಯಾರಯ್ಯಾ ಮಾಡಿದರು."

"ಉಡುಪಿ ಮಾವ."

ಇಬ್ಬರೂ ತಾವೇ ಬಡಿಸಿಕೊಂಡು ಊಟ ಮುಗಿಸಿದರು. ಸಂಜೀವ ಹೋಟಿಲ್-ಬೀಡಾ ಅನಂತಯ್ಯನ ಕೈಗಿತ್ತ. ಅನಂತಯ್ಯ ಬಾಯಿಗೆ ಬೀಡ ಹಾಕಿಕೊಂಡು

"ಇನ್ನೂ ಎಷ್ಟು ದಿವಸವಪ್ಪಾ ಈ ಉಡುಪಿ ಮಾವನ ಸುಗ್ರಾಸ ಭೋಜನ"

"ಅವನ ಅನ್ನದ ಋಣ ತೀರುವವರೆಗೆ."

"ಅದು ತೀರುವುದು ಯಾವಾಗ ?"

"ನಿಮ್ಮಗಳಿಗೆಲ್ಲಾ ದಯೆ ಬಂದಾಗ."

"ನೀನು ಹೂ ಅನ್ನು ಸಂಜೀವ, ನಾಳೆ ವೈಶಾಖದಲ್ಲಿ ಲಗ್ನ ಇಡಿಸಿ ಬಿಡುತ್ತೇನೆ."

"ವಧುವೇ ಇಲ್ಲದೆ ಲಗ್ನ ಮಾಡಿಸುವಿರಾ ?"

"ವಧುಗಳಿಗೇನೂ ಬರವಿಲ್ಲಯ್ಯಾ. ನೀನು ಹೂ ಅಂದರೆ ಸಾಕು."

"ಈ ವರ್ಷ ಕಳೆಯಲಿ - ಮುಂದೆ ಇದ್ದೇ ಇದೆಯಲ್ಲಾ."

"ಸಂಜೀವ, ನಿಮ್ಮ ಮನೆ ಋಣ ಬಹಳ ತಿಂದಿದ್ದೀನಪ್ಪಾ. ಮಹಾರಾಯರು ನಿಮ್ಮ ತಂದೆ ಬದುಕಿರೋವರೆಗೂ ತಿಂಗಳಿಗೆ ಇಪ್ಪತ್ತು ದಿವಸ ನನ್ನ ಊಟ ನಿಮ್ಮ ಮನೆಯಲ್ಲಿ ಕಳೆದು ಹೋಗುತ್ತಿತ್ತು."

"ಅದೆಲ್ಲಾ ಲೋಕಾರೂಢಿ. ನಮ್ಮದೇನು ಹೆಚ್ಚುಗಾರಿಕೆ ಅನಂತಯ್ಯನವರೇ."

"ಹಾಗಲ್ಲಪ್ಪಾ. ಕಾಲ ಬಹಳ ನಾಜೂಕಾಗುತ್ತಿದೆ ಎಂಜಲು ಕೈಯಲ್ಲಿ ಕಾಗೆ ಓಡಿಸುವುದಕ್ಕೆ ಜನ ಹಿಂಜರಿಯುತ್ತಾರೆ. ನಿನ್ನ - ನಿನ್ನ ಅಣ್ಣನ ಯೋಗಕ್ಷೇಮ ನನಗೂ ಸೇರಿದ್ದು ಅನ್ನೋದಿಕ್ಕೆ ಈ ಮಾತು ಹೇಳಿದೆ."

"ಅದರಲ್ಲಿ ಸಂದೇಹವೇನು ? ಮನಸ್ಸಿನಲ್ಲಿ ಏನೋ ಇಟ್ಟುಕೊಂಡು ಸುತ್ತಿ ಸುತ್ತಿ ಮಾತನಾಡುತ್ತಿರುವಿರಿ. ಸ್ಪಷ್ಟವಾಗಿ ಹೇಳಿಬಿಡಿ."

'ನಿನಗೆ ಅಸಮಾಧಾನವಾಗುವುದಿಲ್ಲವಲ್ಲಾ."

ಸಂಜೀವ ನಕ್ಕುಬಿಟ್ಟ.

ತಾನು ಗಂಭೀರವಾಗಿ ಪ್ರತಿಪಾದಿಸುತ್ತಿದ್ದ ವಿಷಯವನ್ನು ಸಂಜೀವ ಲಘುವಾಗಿ ತೆಗೆದುಕೊಂಡುದಕ್ಕೆ ಅನಂತಯ್ಯನಿಗೆ ಆಶ್ಚರ್ಯವಾಯಿತು.

"ಈಗ ಇಲ್ಲಿಂದ ಹೋದವಳು ಯಾರಿರಬಹುದು ಎಂದು ಯೋಚಿಸುತ್ತಿರುವಿರಲ್ಲವೇ ಅನಂತಯ್ಯನವರೇ."

"ಆಕೆ ಯಾರು ?"

"ನನ್ನ ಕ್ಲಾಸ್ ಮೇಟ್. ಪಾಠದ ವಿಷಯ ಚರ್ಚೆಮಾಡಲು ಆಕೆ ಆಗಾಗ್ಗೆ ಇಲ್ಲಿಗೆ ಬರುತ್ತಾಳೆ."

"ನಮ್ಮ ಜನದ ಹಾಗೆ ಕಾಣಲಿಲ್ಲ."

"ನಮ್ಮ ಜನವಲ್ಲ - ಕ್ರಿಶ್ಚಿಯನ್."

"ಕಿರಿಸ್ತಾನರವಳೇ !"

"ಕ್ರಿಶ್ಚಿಯನ್ ಜನರ ಜತೆ ಮಾತನಾಡುವುದೂ ತಪ್ಪೇನು ?"

"ಹಾಗೇನಿಲ್ಲ - ಲೋಕದ ಕಡೆ ನೋಡಬೇಕಪ್ಪ. ನೀನು ವಯಸ್ಸಾದ ತರುಣ - ಅವಳು ವಯಸ್ಸಾದ ತರುಣಿ. ನಿನ್ನ ರೂಮಿಗೆ ಅವಳು ಬಂದು ಹೋಗುವುದನ್ನು ಜನ ಕಂಡರೆ ಬಾಯಿಗೆ ಬಂದಂತೆ ಆಡಿಕೊಳ್ಳುತ್ತಾರೆ."

"ಆಡಿಕೊಳ್ಳುವವರ ಬಾಯಿಗೆ ಬಟ್ಟೆ ಕಟ್ಟಲಾಗುವುದೇ ?"

"ಆಗುವುದಿಲ್ಲ ಸರಿ ನಿಷ್ಕಾರಣವಾಗಿ ಅದಕ್ಕೆ ಅವಕಾಶವೇತಕ್ಕೆ ಕೊಡಬೇಕು."

"ನನ್ನ ಮನಸ್ಸಿನಲ್ಲಿ ಪಾಪದ ಚಿಂತೆಯಿಲ್ಲದಿರುವಾಗ ನಾನೇತಕ್ಕೆ ಹೆದರಬೇಕು ?"

"ಜನ ಅಷ್ಟೆಲ್ಲಾ ವಿಚಾರಮಾಡುವುದಿಲ್ಲ ಸಂಜೀವ ಎತ್ತು ಈತು ಎಂದರೆ ಕೊಟ್ಟಿಗೆಯಲ್ಲಿ ಕಟ್ಟು ಎಂಬ ಹಾಗೆ ಮಾಡುತ್ತಾರೆ"

ವಾದ ಬೆಳಸಿ ಸುಖವಿಲ್ಲವೆಂದುಕೊಂಡು ಸಂಜೀವ ಸುಮ್ಮನಾದ.

"ನಿಮ್ಮ ಅತ್ತಿಗೆಯನ್ನು ಬೆಳಿಗ್ಗೆ ನೋಡಿಕೊಂಡು ಬರುವೆಯಾ ?"

"ಜತೆಯಲ್ಲಿ ನೀವೂ ಬನ್ನಿ."

"ನಾನೇತಕ್ಕೆ ಬರಬೇಕು. ನಾನು ಇಲ್ಲಿಯೇ ನಿನಗೆ ಕಾದಿರುತ್ತೇನೆ. ನೀನೇ ಹೋಗಿ ಬಾ."

ಬೆಳಿಗ್ಗೆ ಬೇಗನೆದ್ದು ಸಂಜೀವನೇ ಸ್ನಾನಕ್ಕೆ ನೀರು ಕಾಸಿ ಕಾಫಿ ಸಿದ್ಧ ಮಾಡಿದ. ಎಂಟೂವರೆಯ ಮೇಲೆ - ರಾಹುಕಾಲ ಕಳೆದು ಹೋಗಲು ಅನಂತಯ್ಯ ಅವನನ್ನು ಬೀಳ್ಕೊಟ್ಟ

ಸಂಜೀವ ಬಂದಾಗ ಅವನಿಗೆ ಸ್ವಾಗತ ಬಯಸಿದವಳು ಸುನಂದಾ. ನಸುನಗುತ್ತಾ

"ಈಚೆಗೆ ಬಹಳ ಅಪರೂಪವಾಗಿಬಿಟ್ಟಿರಿ" ಎಂದಳು.

"ಕೈತುಂಬ ಕೆಲಸ. ಈ ಕಡೆ ಬರಲಾಗಲಿಲ್ಲ"

"ಪುಷ್ಪನನ್ನು ಕಂಡಿದ್ದಿರಾ ?"

"ನಿನ್ನೆ ಬಂದಿದ್ದಳು. ಅದೇ ಹೊತ್ತಿಗೆ ಅಣ್ಣಾನ ಸ್ನೇಹಿತರು ಅನಂತಯ್ಯನವರೂ ಬಂದರು."

"ಪಾಠಿಸವಾಲಾಯಿತೋ ?"

"ಸಂಕ್ಷೇಪವಾಗಿ ಆಯಿತು. ನಾನೆಲ್ಲಿ ಕ್ರಿಶ್ಚಿಯನ್ ಹುಡುಗಿಯನ್ನು ಮದುವೆಯಾಗಿ ಬಿಡುವೆನೋ ಎಂದು ಅನಂತಯ್ಯನವರು ಹೆದರಿದರು."

ಸುನಂದ ಗಹಗಹಿಸಿ ನಕ್ಕು

"ಆಗಲಿ ಬಿಡಿ. ಅಂತರ - ಜಾತೀಯ ವಿವಾಹ ಈಗ ಪ್ರಸಾರಕ್ಕೆ ಬರುತ್ತಿದೆಯಲ್ಲಾ."

"ನಾನು ಮದುವೆ ವಿಷಯ ಮಾತನಾಡುವುದಕ್ಕೆ ಬಂದಿಲ್ಲ ನಮ್ಮ ಅತ್ತಿಗೆಯನ್ನು ನೋಡಿಕೊಂಡು ಹೋಗೋಣವೆಂದು ಬಂದೆ."

"ನೀರು ಹಾಕಿಕೊಳ್ಳುತ್ತಿದ್ದಾಳೆ. ಕುಳಿತುಕೊಳ್ಳಿ, ಬರುತ್ತಾಳೆ. ನಿನ್ನೆ ಭಾವಯ್ಯ, ಅನಂತಯ್ಯನವರು ಬಂದಿದ್ದರು."

"ತಿಳಿಯಿತು. ಅತ್ತಿಗೆಮ್ಮ ಚಾಮರಾಜನಗರಕ್ಕೆ ಹೋಗುವುದಿಲ್ಲವೆಂದರಂತೆ!"

"ಹೂ! ಅಕ್ಕನಿಗೂ ಭಾವಯ್ಯನಿಗೂ ಬಿರುಸಾಗಿಯೇ ಮಾತುಕತೆಯಾಯಿತು."

"ಹೀಗೆ ಅವರು ಹಟ ಹಿಡಿಯುವುದರ ಕಾರಣ ನಿಮಗೆ ಗೊತ್ತಿದೆಯೋ?"

"ಕಾರಣ ತಿಳಿಯಬೇಕೆಂದು ನಾನೂ ನನ್ನ ತಾಯಿ ಪ್ರಯತ್ನಿಸಿದೆವು. ಆ ವಿಷಯ ಕೇಳಬೇಡಿ ಎಂದು ಅಕ್ಕ ಖಂಡಿತವಾಗಿ ಹೇಳಿದಳು."

"ಹೇಗಾದರೂ ಮಾಡಿ ಈ ವಿರಸ ಪರಿಹರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ."

"ನಿಸ್ಸಂದೇಹವಾಗಿ. ನೀವು ಅಕ್ಕನೊಂದಿಗೆ ಮಾತನಾಡಿ."

ಜಾನಕಮ್ಮ ತೈಲಾಭ್ಯಂಜನ ಮುಗಿಸಿಕೊಂಡು ಒದ್ದೆಯ ತಲೆಯನ್ನು ಒರಸಿಕೊಳ್ಳುತ್ತಲೇ ಬಂದಳು.

"ಇಷ್ಟು ದಿವಸದ ಮೇಲಾದರೂ ಅತ್ತಿಗೆ ಜ್ಞಾಪಕ ಬಂತೇ ಸಂಜೀವ."

"ನಾನು ಮರೆತಿದ್ದರೆ ತಾನೆ ಜ್ಞಾಪಕಮಾಡಿಕೊಳ್ಳುವುದು."

"ನೀನು ಬಂದು ಬಹಳ ಹೊತ್ತಾಯಿತೇ?"

"ಸ್ವಲ್ಪ ಹೊತ್ತಾಯಿತು. ನಿನ್ನೆ ಅಣ್ಣಾ ಬಂದಿದ್ದನಂತೆ!"

"ಹೂ! ಬಂದಿದ್ದರು. ನಿನ್ನ ಮನೆಗೆ ಬಂದಿದ್ದರೇನು?"

"ಅವನು ಬರಲಿಲ್ಲ. ಅನಂತಯ್ಯ ಬಂದಿದ್ದರು ಎಲ್ಲಾ ವಿಷಯ ತಿಳಿಸಿದರು. ಚಾಮರಾಜನಗರಕ್ಕೆ ಯಾವಾಗ ಪ್ರಯಾಣ ಬೆಳಸುವಿರಿ?"

ಜಾನಕಿ ಉತ್ತರ ಕೊಡಲಿಲ್ಲ. ಅವಳ ಮುಖ ಗಂಭೀರವಾಯಿತು.

ಚಿತ್ರಫಲಕದ ಮೇಲೆ ಹಿಂದಿನ ಅನುಭವಗಳ ಚಿತ್ರ ಮೂಡಿತು ಅವಳ. ಕಣ್ಣಂಚಿನಲ್ಲಿ ಹನಿಯೂರಿತು.

"ಈ ವಿಷಯ ನಿಮಗೆ ಅಷ್ಟು ಪ್ರಿಯವಾದುದಲ್ಲವೆಂಬುದನ್ನು ಬಲ್ಲೆ."

"ತಿಳಿದೂ ತಿಳಿದೂ ಕೇಳುವೆಯಲ್ಲಾ !"

"ಅಣ್ಣನ ಸ್ವಭಾವವೆಂಥದೆಂಬುದನ್ನು ಇಬ್ಬರೂ ಬಲ್ಲೆವು. ತನ್ನ ಕೋಪ ತನ್ನ ದವಡೆಗೇ ಮೂಲವೆಂಬುದನ್ನು ಅವನು ಅರಿಯ."

"ಅವರ ಕೈಯಲ್ಲಿ ನೀನೇನು ಕಡಿಮೆ ಅನುಭವಿಸಲಿಲ್ಲ ಸಂಜೀವ."

"ಮಾತು ಬಂತು, ಮಾತು ಹೋಯಿತು - ಅದನ್ನು ನಾನು ಮನಸ್ಸಿನಲ್ಲಿಟ್ಟುಕೊಂಡಿಲ್ಲ."

"ಅದು ನಿನ್ನ ದೊಡ್ಡ ಗುಣವನ್ನೇ ತೋರಿಸುತ್ತದೆ."

"ನಿನ್ನೆ ಅಣ್ಣನಿಗೆ ಏನು ಹೇಳಿದಿರಿ ?"

"ಖಂಡಿತವಾಗಿ ಚಾಮರಾಜನಗರಕ್ಕೆ ಬರುವುದಿಲ್ಲವೆಂದು ತಿಳಿಸಿದೆ."

"ನಾನು ಹುಡುಗ, ಅನನುಭವಿ. ನಿಮಗೆ ಬುದ್ಧಿ ಹೇಳುವಷ್ಟು ಸಮರ್ಥನಲ್ಲ. ಆದರೂ ಒಂದು ಮಾತು ಹೇಳಲು ಧೈರ್ಯಮಾಡಿದ್ದೇನೆ.'

"ಏನದು ಹೇಳು."

"ಗಂಡ ಹೆಂಡಿರಲ್ಲಿ ವೈಮನಸ್ಯ ಹುಟ್ಟುವುದೂ, ಸರಿಹೋಗುವುದೂ ಸ್ವಾಭಾವಿಕವಲ್ಲವೇ ? ಗಂಡ ಒಮ್ಮೆ ಸೋಲಬೇಕು - ಹೆಂಡತಿ ಒಮ್ಮೆ ಸೋಲಬೇಕು. ಈಗ ರಂಗಣ್ಣನೇ ಸೋತು ನಿಮ್ಮನ್ನು ಪ್ರಾರ್ಥಿಸಿಕೊಂಡಿರುವಾಗ ನೀವು ಹಟ ಹಿಡಿಯುವುದು ನ್ಯಾಯವೇ ?"

"ಲೋಕಾಚಾರದಂತೆ ನ್ಯಾಯವಲ್ಲ. ಸೀತಾ, ಸಾವಿತ್ರಿ, ದಮಯಂತಿ ಮೊದಲಾದ ಆದರ್ಶಮಹಿಳೆಯರು ನನ್ನ ಹಾಗೆ ಮಾಡುತ್ತಿರಲಿಲ್ಲ. ಆದರೆ ನಾನು ಆದರ್ಶಮಹಿಳೆಯಲ್ಲ. ನಾನು ಸಾಮಾನ್ಯ ಮಾನವ ಪ್ರಾಣಿ. ಕಷ್ಟ ಬಂದಾಗ ನೊಂದುಕೊಳ್ಳುತ್ತೇನೆ - ಸುಖ ಬಂದಾಗ ಹಿಗ್ಗುತ್ತೇನೆ."

"ಪ್ರಯತ್ನಶೀಲತೆ ಮಾನವನ ಮುಖ್ಯ ಲಕ್ಷಣವಲ್ಲವೇ ?"

"ಅದಕ್ಕೂ ಒಂದು ಮಿತಿಯಿದೆ."

"ಮಿತಿ ಈಗ ಮೀರಿಹೋಗಿದೆಯೋ ?"

"ನನ್ನ ಮನಸ್ಸನ್ನು ಕಲ್ಲುಮಾಡಿದ ಕಾರಣ ಪ್ರಬಲವಾದುದಾಗಿಯೇ ಇರಬೇಕಲ್ಲವೇ ?"

"ನಿಮ್ಮ ಮೇಲೆ ನಾನು ದೋಷಾರೋಪಣೆ ಮಾಡುತ್ತಿಲ್ಲ. ರಂಗಣ್ಣ ಮುಂಗೋಪಿ, ದುಡುಕು. ಅವನನ್ನು ನೀವಲ್ಲದೆ ಇನ್ನು ಯಾರು ದಾರಿಗೆ ತರಲು ಸಾಧ್ಯ ?"

"ಬ್ರಹ್ಮನಿಗೂ ಸಾಧ್ಯವಿಲ್ಲ."

"ಮಕ್ಕಳ ಗತಿಯೇನು ?"

"ಅವರ ಹಣೆಯಲ್ಲಿ ಏನು ಬರೆದಿದೆಯೋ ಅದೇ ಆಗುತ್ತದೆ."

ಮನಸ್ಸಿನ ನೋವು ಸಂಜೀವನ ಮುಖದ ಮೇಲೆ ಸ್ಪಷ್ಟವಾಗಿ ಮೂಡಿದುದನ್ನು ಜಾನಕಮ್ಮ ಕಂಡುಕೊಂಡು'

"ನಾನೆಷ್ಟು ಕೆಟ್ಟವಳು ಎಂದೆನಿಸುವುದೇ ?"

"ಏಕೆ ಹಾಗೆನ್ನುವಿರಿ ಅತ್ತಿಗೆ. ನಿಮ್ಮನ್ನು ಆಕ್ಷೇಪಿಸಲು ನನಗೆ ಸಾಧ್ಯವೇ ?"

''ಮಕ್ಕಳನ್ನು ಬೀದಿಪಾಲು ಮಾಡುವುದಿಲ್ಲ. ರಟ್ಟೆಮುರಿಯ ದುಡಿದು ಅವರನ್ನು ಸಾಕುತ್ತೇನೆ.''

''ಜಗದೀಶ ನನ್ನ ಜತೆಯಲ್ಲಿರಬಹುದು.''

''ಈಗ ಬೇಡ. ನಮ್ಮ ಯಜಮಾನರು ನಿನ್ನ ಹರಿದು ತಿಂದುಬಿಟ್ಟಾರು.''

''ನಿಮ್ಮಿಬ್ಬರ ವೈಮನಸ್ಯದ ಕಾರಣವೇನೆಂದು ಕೇಳಬಹುದೇ ?''

''ಅದೊಂದು ಪ್ರಶ್ನೆಗೆ ನಾನು ಉತ್ತರಕೊಡಲಾರೆ ಸಂಜೀವ, ಕ್ಷಮಿಸು.''

ಜಾನಕಮ್ಮನ ಕಣ್ಣುತುಂಬ ನೀರು ತುಂಬಿಕೊಂಡಿತು. ಅಲ್ಲಿ ಕೂಡಲಾಗದೆ ಒಳಗೆ ಎದ್ದುಹೋದಳು. ಸಂಜೀವನೂ ಕಣ್ಣೀರ್ಗರೆಯುತ್ತಿದ್ದುದನ್ನು ಕಂಡು ಸುನಂದೆಗೆ ವ್ಯಾಕುಲವಾಯಿತು.

''ಅಕ್ಕನ ಮನಸ್ಸು ಇಷ್ಟು ಕಲ್ಲಾಗಬಹುದೆಂದು ನಾನೆಣಿಸಿರಲಿಲ್ಲ.''

''ದಯೆಯಿಟ್ಟು ಅವರನ್ನು ಆಕ್ಷೇಪಿಸಬೇಡಿ. ಒಂದು ಹುಲುಪ್ರಾಣಿಗೂ ಅವರು ಹಿಂಸೆ ಬಗೆಯುವರಲ್ಲ.''

''ಹೆಣ್ಣಾಗಿ ಹುಟ್ಟಿದವಳು ಸ್ವಲ್ಪ ಓರ್ಬಿಕೊಂಡು ಹೋಗಬೇಕು.''

''ಓರ್ಬಿಕೊಂಡು ಹೋಗಲಾಗದ ಸ್ಥಿತಿ ಹೆಣ್ಣಿಗೂ ಬರುತ್ತದೆ.''

"ನೀವೂ ಅತ್ತಿಗೆಯ ಪರ ವಾದಮಾಡಿದರೆ ನಿಮ್ಮಣ್ಣನ ಪರ ವಾದ ಮಾಡುವವರು ಯಾರು?"

"ಅವನು ಅಸಹಾಯಶೂರ - ಅವನಿಗೆ ಯಾರ ನೆರವೂ ಬೇಕಿಲ್ಲ."

"ನಿಮ್ಮ ಪ್ರಯತ್ನ ಬಿಡಬಾರದು. ಹೇಗಾದರೂ ಈ ಸಂಸಾರ ಉಳಿಸುವ ಪ್ರಯತ್ನಮಾಡಬೇಕು."

"ಮಾಡದೆ ಉಂಟೇ? ಅತ್ತಿಗೆ ಮನಸ್ಸಿಗೆ ನೋವಾಗದಂತೆ ಅವರನ್ನು ಒಪ್ಪಿಸುವುದು ನಿಮ್ಮ ಭಾರ."

"ನನ್ನ ಶಕ್ತಿಮೀರಿ ಪ್ರಯತ್ನಿಸುತ್ತೇನೆ."

ಎಂದು ಹೇಳಿದಳು. ಸಂಜೀವ ಹೊರಡಲನುವಾದುದನ್ನು ಕಂಡು

"ನಿಮಗೆ ಕಾಫಿ ಕೂಡ ಕೊಡಲಿಲ್ಲ. ಸ್ವಲ್ಪ ಕುಳಿತುಕೊಳ್ಳಿ.

"ಈಗೇನೂ ಬೇಡಿ. ಇನ್ನೊಮ್ಮೆ ಬರುತ್ತೇನೆ."

ಎಂದು ಹೇಳಿ ಬೈಸಿಕಲ್ ಹತ್ತಿ ಹೊರಟುಬಿಟ್ಟ.

ಸಂಜೀವ ಒಪ್ಪಿಸಿದ ವರದಿ ಕೇಳಿ ಅನಂತಯ್ಯ ಅವಾಕ್ಕಾದ.

"ಈಗೇನು ಮಾಡುವುದು ಸಂಜೀವ."

"ಹುಣ್ಣು ಮಾಗಲೆಂದು ಬಿಡುವುದೇ ಜಾಣತನ."

"ನಿಮ್ಮಣ್ಣ ಬೇರೆ ಮದುವೆ ಮಾಡಿಕೊಂಡರೆ!"

"ಇನ್ನೊಂದು ನಿರಪರಾಧಿ ಕನ್ಯೆಯ ಮೇಲೆ ಅವನು ಕಲ್ಲು ಎತ್ತಿ ಹಾಕ ದಂತೆ ನೋಡಿಕೊಳ್ಳಬೇಕಾದುದು ನಿಮ್ಮ ಜವಾಬ್ದಾರಿ."

ಅನಂತಯ್ಯ ಹೆಚ್ಚು ಕಾಲ ಮೈಸೂರಿನಲ್ಲಿ ನಿಲ್ಲಲಿಲ್ಲ. ಊಟ ಮುಗಿಸಿ ಕೊಂಡು ಚಾಮರಾಜನಗರಕ್ಕೆ ಬಸ್ಸಿನಲ್ಲಿ ಪ್ರಯಾಣ ಬೆಳಸಿದ.

ಜಾನಕಮ್ಮ ಊಟದ ಶಾಸ್ತ್ರ ಮಾಡಿ ಎದ್ದುಬಿಟ್ಟಳು. ಹಳೆಯ ಅನುಭವವೆಲ್ಲಾ ಮರುಕಳಿಸಿದಂತಾಗಿತ್ತು. ಒಂದು ಚಾಪೆ ಹಾಸಿಕೊಂಡು ಕಣ್ಣೀರು ಸುರಿಸುತ್ತ ಮಲಗಿಬಿಟ್ಟಳು.

ಸುನಂದೆ ಮೆಲ್ಲನೆ ಅಕ್ಕನ ಪಕ್ಕದಲ್ಲಿ ಬಂದು ಕುಳಿತಳು. ಯಾವುದೋ ಅವ್ಯಕ್ತ ಸಹಾನುಭೂತಿ ಸುನಂದೆಯ ಮನಸ್ಸನ್ನು ಮುತ್ತಿತ್ತು. ಜಾನಕಿಯ ಮನಸ್ಸೂ ಕನಿಕರವನ್ನು ಪೇಕ್ಷಿಸುತ್ತಿತ್ತು. ಸುನಂದೆ ಅಕ್ಕನ ತಲೆ ನೇವರಿಸಿ

"ಅಳಬೇಡ ಅಕ್ಕ. ನೀರು ಹಾಕಿಕೊಂಡಿದ್ದೀ. ಮೈ ನಂಜಾದೀತು."

ಜಾನಕಮ್ಮನಿಗೆ ದುಃಖ ಉಮ್ಮಳಿಸಿ ಬಂತು. ಬಿಕ್ಕಿಬಿಕ್ಕಿ ಅತ್ತುಬಿಟ್ಟಳು.

''ಮನಸ್ಸಿನಲ್ಲಿರುವುದನ್ನು ಹೇಳಿಕೊಂಡುಬಿಟ್ಟರೆ ಹಗುರವಾಗುತ್ತದೆ.''

''ಏನೆಂದು ಹೇಳಿಕೊಳ್ಳಲಿ ಸುನಂದಾ.''

''ಭಾವ ತುಂಬ ಹೊಡೆಯುತ್ತಿದ್ದರೆ ?''

''ಅದು ನಿತ್ಯ ರಾಮಾಯಣ. ಅವರ ಬಿರುಸು ಮಾತುಗಳು, ಹೊಡೆತ ಬಡೆತಗಳಿಗೆ ನನ್ನ ಮೈ ಜಡ್ಡು ಬಿದ್ದುಹೋಗಿವೆ. ನಾನು ಅವುಗಳನ್ನು ಲಕ್ಷಿಸುತ್ತಲೂ ಇರಲಿಲ್ಲ''

ಸಮಸ್ಯೆ ಮತ್ತಷ್ಟು ಗಂಭೀರವಾಯಿತು.

''ಇನ್ನೇತಕ್ಕೆ ವಿರಸ ಹುಟ್ಟಿತು.''

''ಯಾರಲ್ಲಿಯೂ ಹೇಳುವುದಿಲ್ಲವೆಂದು ನೀನು ಮಾತುಕೊಡಬೇಕು''

''ಆಗಲಿ - ಹೇಳುವುದಿಲ್ಲ.''

''ಅಮ್ಮನಿಗೂ ಹೇಳಕೂಡದು.''

''ಅವಳಿಗೂ ಹೇಳುವುದಿಲ್ಲ.''

ಜಾನಕಮ್ಮ ಎದ್ದು ಕುಳಿತುಕೊಂಡು ಹಾರಾಡುತ್ತಿದ್ದ ತಲೆಗೂದಲನ್ನು ಗಂಟುಕಟ್ಟಿದಳು. ಅವಳ ಮುಖ ಗಂಭೀರವಾಯಿತು.

''ಗಂಡನೊಂದಿಗೆ ನೀನು ಕಳೆದ ಮೊದಲನೆಯ ರಾತ್ರಿಗೂ ನಾನು ಕಳೆದ ಮೊದಲನೆಯ ರಾತ್ರಿಗೂ ತುಂಬ ವ್ಯತ್ಯಾಸವಿದೆ.''

''ಏನದು ?''

''ಅದಕ್ಕೆ ಮುಂಚೆ ನಿನಗೂ ನಿನ್ನ ಗಂಡನಿಗೂ ಬಳಕೆ ಬೆಳೆದಿತ್ತು. ಇಬ್ಬರೂ ಜತೆಯಲ್ಲಿ ಕುಳಿತು ಮಾತನಾಡುತ್ತಿದ್ದಿರಿ - ವಾಕಿಂಗ್ ಹೋಗುತ್ತಿದ್ದಿರಿ - ಸಿನೀಮಾಕ್ಕೆ ಹೋಗುತ್ತಿದ್ದಿರಿ. ನಿಮ್ಮಿಬ್ಬರಿಗೂ ವಯಸ್ಸೂ ಆಗಿತ್ತು.''

''ಹೌದು. ಅದು ನಿಜ.''

''ನೀನೂ ಓದಿದವಳು. ಅವರೂ ಓದಿದವರು. ಚರ್ಚೆಮಾಡಿ ಒಬ್ಬರ ಮನಸ್ಸನ್ನು ಒಬ್ಬರು ಅರ್ಥಮಾಡಿಕೊಳ್ಳಬಲ್ಲವರಾಗಿದ್ದಿರಿ.''

''ಹೌದು.''

''ನನ್ನ ಯಜಮಾನರಿಗೆ ವಿದ್ಯದ ಗಂಧವಿಲ್ಲ. ನನ್ನ ವಿದ್ಯಾಭ್ಯಾಸವೂ ಆರಂಭದಲ್ಲಿಯೇ ಮುಕ್ತಾಯವನ್ನು ಕಂಡಿತು. ಪ್ರಸ್ತದ ರಾತ್ರಿಯ ಮೊದಲು ನಾನು ಗಂಡನ ಮುಖ ನೋಡಿದ್ದುದು ಮೂರೇ ಸಲ. ಅಂದು ಅಮ್ಮನೇನೋ ಕೆಲವು ಸೂಚನೆಗಳನ್ನಿತ್ತು ಧೈರ್ಯ ಹೇಳಿದ್ದಳು. ರಾತ್ರಿಯನ್ನಂತೂ ಕಳೆದೆ. ಅಂದಿನ ಅನುಭವ ನೆನಸಿಕೊಂಡರೆ ಇಂದಿಗೂ ಮೈಮೇಲೆ ಮುಳ್ಳೇಳುತ್ತದೆ. ಕ್ರಮಕ್ರಮೇಣ ಭಯ ತೊಲಗಿತು. ನಾವಿಬ್ಬರೂ ಎಲ್ಲರಂತೆ ಸಂಸಾರ ಮಾಡಿ ಕೊಂಡೂ ಇದ್ದೆವು. ಮಾವನವರು ಬದುಕಿರುವವರೆಗೆ ಯಾವ ತೊಂದರೆಯೂ ಇರಲಿಲ್ಲ. ಅವರು ಕಣ್ಣು ಮುಚ್ಚಿಕೊಂಡಮೇಲೆ ನನ್ನ ಯಜಮಾನರ ನಿಜರೂಪ ಬಯಲಿಗೆ ಬಿತ್ತು.''

''ಏನಾಯಿತು ?''

''ಆ ಹೊಲಸುಕಥೆಯನ್ನು ಕೇಳಲೇಕೆ ಬಯಸುವೆ ?''

''ಕೇಳದಿದ್ದರೆ ಪರಿಸ್ಥಿತಿ ಅರ್ಥವಾಗುವುದು ಹೇಗೆ ?''

''ಯಜಮಾನರಿಗೆ ತೃಪ್ತಿಯೇ ಇರುತ್ತಿರಲಿಲ್ಲ. ತೋಟದಕಡೆ ಹಾಗೆ ಹೋಗಿ ಹೀಗೆ ಬರುತ್ತಿದ್ದರು. ಮನೆಗೆ ಬಂದೊಡನೆಯೇ ನನ್ನನ್ನು ಕರೆಯು ತ್ತಿದ್ದರು. ನಾನು ಅನುಮಾನಿಸಿದರೆ ಮೈಮುರಿಯ ಬಡಿಯುತ್ತಿದ್ದರು. ಒಂದೊಂದು ದಿನ ಅವರ ಬಳಿಗೆ ಎಂಟು ಹತ್ತು ಸಲ ಹೋಗಬೇಕಾಗುತ್ತಿತ್ತು. ಅದನ್ನೂ ಸಹಿಸಿಕೊಳ್ಳುತ್ತಿದ್ದೆ. ವಿಮಲಾ ಇನ್ನೂ ಒಂದು ವರ್ಷದ ಮಗು. ಜಗದೀಶನಿಗೆ ನಾಲ್ಕು ತುಂಬುವುದರಲ್ಲಿತ್ತು. ಆಗ ನನ್ನ ಯಜಮಾನರಿಗೆ ಹೊಸರೋಗ ಕಾಣಿಸಿಕೊಂಡಿತು.''

''ರೋಗ! ಯಾವ ರೋಗ!!''

''ಬಹಳ ಜನ ಕಂಡು ಕೇಳರಿಯದ ರೋಗ. ಅವರ ಮುಂದೆ ನಾನು ಮನೆಯಲ್ಲಿ ವಿವಸ್ತ್ರಳಾಗಿರಬೇಕೆಂದು ಬಯಸುತ್ತಿದ್ದರ. ಅವರೂ ವಿವಸ್ತ್ರ ರಾಗುತ್ತಿದ್ದರು. ನನ್ನ ಸೀರೆ ಕುಪ್ಪಸಗಳನ್ನು ಮುಚ್ಚಿಡುತ್ತಿದ್ದರು. ಎಷ್ಟೋ ದಿನ ನಾನು ಮಗ್ಗಲುಹಾಸಿಗೆಯನ್ನೋ ಶಾಲನ್ನೋ ಉಟ್ಟುಕೊಂಡು ಮಾನ ಉಳಿಸಿಕೊಳ್ಳುತ್ತಿದ್ದೆ. ಈ ವಿಷಯದಲ್ಲಿ ಅವರಿಗೆ ಬೇಕಾದಷ್ಟು ವಿವೇಕ ಹೇಳಿದೆ. ನನ್ನ ವೈಮೂಳೆಗಳೆಲ್ಲಾ ಪುಡಿಪುಡಿಯಾದವು. ಅವರಿಗೆ ಬುದ್ಧಿ

ಮಾತ್ರ ಬರಲಿಲ್ಲ. ಅವರ ವಿಚಿತ್ರ ಉನ್ಮಾದಕ್ಕೆ ಹೊಂದಿಕೊಂಡು ಬಾಳುವುದು ನನಗೆ ಅಶಕ್ಯವಾಯಿತು. ಇಲ್ಲಿಗೆ ಬಂದೆ. ಅದೇ ಬಾಳಿಗೆ ಹೋಗು ಎಂದರೆ ಹೇಗೆ ಹೋಗಲಿ. ಅದಕ್ಕಿಂತ ಕೆರೆಯೋ ಭಾವಿಯೋ ಹುಡುಕಿಕೊಳ್ಳುವುದು ಲೇಸು.''

ಅಕ್ಕನ ನುಡಿಕೇಳಿ ಸುನಂದ ಅವಾಕ್ಕಾದಳು. ಅವಳ ಮುಖ ಕಂಗೆಟ್ಟಿತು. ತುಟಿಯ ಮೇಲಿನ ಪ್ರವ ಆರಿಹೋಯಿತು. ಭೂತಗ್ರಸ್ತಳಂತೆ ಕುಳಿತ ತಂಗಿಯನ್ನು ನೋಡಿ ಜಾನಕಮ್ಮ

''ಏಕೆ ಹೀಗೆ ಕುಳಿತೆ ಸುನಂದಾ'' ಎಂದು ಕೇಳಿದಳು.

''ಯೋಚನೆಮಾಡುತ್ತಿದ್ದೆ''

''ಏನು ಯೋಚನೆ. ನಿನ್ನದು ಇದೇ ಚಿಗುರುತ್ತಿರುವ ಸಂಸಾರ. ಈ ಹಾಳು ಕಥೆ ಮರೆತು ನೆಮ್ಮದಿಯಾಗಿರು. ಈ ಕಥೆ ನಿನಗೆ ಹೇಳುವುದಕ್ಕೆ ನಾನೇಕೆ ಹಿಂಜರಿದೆಯೆನ್ನುವುದು ಈಗ ತಿಳಿಯಿತಲ್ಲವೇ ?''

''ನಿನ್ನ ವಿಷಯ ನಾನು ತುಂಬ ತಪ್ಪುತಿಳಿದುಕೊಂಡಿದ್ದೆ ಕ್ಷಮಿಸು ಅಕ್ಕಾ. ನಿನ್ನ ಮೈದುನ ಇಟ್ಟುಕೊಂಡಿರುವ ಭಕ್ತಿ ನೋಡಿ ನನಗೆ ನಾಚಿಕೆಯಾಯಿತು.''

''ಸಂಜೀವ ಚಿನ್ನದಂಥ ಹುಡುಗ. ಅವನ ಬಾಳನ್ನೂ ಮಣ್ಣುಗೂಡಿಸಲು ನನ್ನ ಯಜಮಾನರು ಪ್ರಯತ್ನಿಸಿದರು. ಮಾವನವರ ಜಾಣ್ಮೆ ಅವನನ್ನು ರಕ್ಷಿಸಿತು.''

''ಬೆಂಗಳೂರಿಗೆ ನನ್ನ ಜತೆ ನೀನೇಕೆ ಬರಬಾರದು.''

''ನನ್ನ ಅನಿಷ್ಟಕರ್ಮ ನಿನ್ನ ಬೆನ್ನು ಹತ್ತಬೇಕೇ? ನಾನು ಬಂದರೆ ಇಲ್ಲಿ ಅಮ್ಮನ ಜತೆಗಾರು ?''

ಸುನಂದೆಯ ಬಾಯಲ್ಲಿ ಹೆಚ್ಚು ಮಾತು ಹೊರಡಲಿಲ್ಲ. ಅರೆಮೂಕಳಂತೆ ಕುಳಿತುಬಿಟ್ಟಳು. ಜಾನಕಮ್ಮ ಹೇಳಿದ ಪ್ರತಿಯೊಂದು ಮಾತೂ ಅವಳ ಕಿವಿಯಲ್ಲಿ ಗಂಟೆಯಂತೆ ಬಾರಿಸುತ್ತಿತ್ತು. 'ಇದು ಜೀವನವೇ' ಎಂದುಕೊಳ್ಳುವ ಕೊಮ್ಮೆ. ಅಲ್ಲಕಲ್ಲೋಲವಾಗಿದ್ದ ತನ್ನ ಮನಸ್ಸಿನ ಸ್ಥಿತಿ ಅಕ್ಕನಿಗೆ ಅರಿವಾಗಬಾರದೆಂದು ಪ್ರಯತ್ನಿಸತೊಡಗಿದಳು.

೪

ಸುಂದರರಾಯನ ವಿದ್ಯಾಚರಿತ್ರೆ ಪ್ರಶಂಸನೀಯವಾಗಿತ್ತು. ಲೋವರ್ ಸೆಕೆಂಡರಿ ಪರೀಕ್ಷೆ ಮೊದಲುಗೊಂಡು ಎಂ.ಎಸ್‌ಸಿ ವರೆಗೆ ಅವನಿಗೆ ಸೋಲಾಗಿರಲಿಲ್ಲ. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವುದಷ್ಟೇ ಅವನ ಗುರಿಯಾಗಿರಲಿಲ್ಲ. ರಸಾಯನಶಾಸ್ತ್ರದ (Chemistry) ಮೇಲೆ ಸುಂದರರಾಯನಿಗೆ ಮೊದಲಿನಿಂದಲೂ ಅಭಿರುಚಿ. ಆ ವಿಷಯದಲ್ಲಿ ಅವನಿಗಿದ್ದ ಪರಿಣಿತಮತಿ ಕಂಡು ಅವನ ಪ್ರೊಫೆಸರುಗಳು ಬೆರಗಾಗಿದ್ದರು.

ಸುಂದರರಾಯನ ಜೀವನದ ಮೇಲೆ ವಿಶೇಷ ಪರಿಣಾಮವನ್ನುಂಟು ಮಾಡಿದ ಗ್ರಂಥ ಈವಾ ಕ್ಯೂರಿ ಬರೆದ ಮ್ಯಾಡಾಂಕ್ಯೂರಿಯ ಜೀವನ ಚರಿತ್ರೆ ಸುಂದರನಿಗೆ ಇಂಟರ್ ಕ್ಲಾಸಿನಲ್ಲಿ ಪಠ್ಯ ಪುಸ್ತಕವಾಗಿದ್ದ ಆ ಗ್ರಂಥ ಅವನ ವಿಚಾರಸರಣಿಯನ್ನು ಜೀವನದ ಧ್ಯೇಯವನ್ನು ರೂಪಿಸಿತ್ತು. ನೂರೆಂಟು ಅಡ್ಡಿ ಆತಂಕಗಳು ಬಂದರೂ ಅಂಜದೆ ಅಳುಕದೆ, ಸ್ವಂತ ಪ್ರಯೋಗಶಾಲೆ (Laboratory) ಕಟ್ಟಿಕೊಂಡು, ಕ್ಯೂರಿ ದಂಪತಿಗಳು ಅನೇಕ ವರ್ಷ ಸತತವಾಗಿ ಶ್ರಮಪಟ್ಟು ರೇಡಿಯಂ ಶೋಧಮಾಡಿ ಲೋಕಕ್ಕೇ ಮಹೋಪಕಾರ ಮಾಡಿದ ದಿವ್ಯಚರಿತ್ರೆ ಅವನ ಹೃತ್ಪಟಲದ ಮೇಲೆ ಚಿತ್ರಿತವಾಯಿತು. 'ಸುಮ್ಮನೆ ಬದುಕಿ, ಹೊಟ್ಟೆಹೊರೆಕೊಂಡು, ಒಂದು ದಿನ ಪ್ರಾಣಬಿಟ್ಟರೆ ಏನು ಸಾರ್ಥಕ. ಶಾಶ್ವತವಾದ ಯಾವದಾದರೂ ಕೆಲಸ ಮಾಡಿ ಲೋಕೋಪಕಾರಮಾಡಬೇಕು' ಎಂಬ ನಿರ್ಧಾರ ಅವನ ಮನಸ್ಸಿನಲ್ಲಿ ಮೂಡಿತು. ಲೀವೆನ್ ಹೋಕ್, ಸ್ಫಲಾನ್‌ಜನಿ, ಪಾಶ್ಚ್ಯೂರ್, ಕೋಷ್, ರೂ ಮತ್ತು ಬೆಹ್‌ರಿಂಗ್, ಮೆಚ್‌ನಿಕಾಫ್, ಥಿಯೋಬಾಲ್ಡ್‌ಸ್ಮಿತ್, ಬ್ರೂಸ್, ರಾಸ್, ವಾಲ್ಟರ್ ರೀಡ್, ಎರ್‌ಲಿಕ್ ಮೊದಲಾದ ವಿಜ್ಞಾನಿಗಳ ಜೀವನಚರಿತ್ರೆ, ಸಾಧನಯೋಗ ಅವನಿಗೆ ವೇದೋಪನಿಷತ್ತುಗಳಾದವು.

ಮಗನ ಉತ್ಸಾಹ, ವಿದ್ಯಾಭಿಮಾನ, ಸೇವಾಕಾಂಕ್ಷೆಗೆ ಪುಟಗೊಟ್ಟವರು ಅವನ ತಂದೆ ಹರಿಯಪ್ಪನವರು. ಮಗ ಸ್ವಂತ ಪ್ರಯೋಗಶಾಲೆ ಬೇಕೆಂದು ಕೇಳಿದಾಗ ತಂದೆ ಇಲ್ಲವೆನ್ನಲಿಲ್ಲ. ಮನೆಯ ಆವರಣದಲ್ಲಿದ್ದ ಗಾಡಿಖಾನೆಯೇ

ಪ್ರಯೋಗಶಾಲೆಯಾಯಿತು. ಅದಕ್ಕೆ ಅವಶ್ಯಕವಾದ ಯಂತ್ರ ಸಾಮಗ್ರಿಗಳು ಗಾಜಿನ ಸಾಮಾನುಗಳನ್ನು ಸಂಗ್ರಹಿಸಿಕೊಂಡುದೂ ಆಯಿತು.

ಸರ್ಕಾರದ ಕಾರಕೂನರಾಗಿ ಕೆಲಸಕ್ಕೆ ಸೇರಿದ ಹರಿಯಪ್ಪನವರು ಅಂಡರ್ ಸೆಕ್ರೆಟರಿ ಹುದ್ದೆಯವರೆಗೇರಿ ನಿವೃತ್ತರಾದರು. ಉದ್ಯೋಗಾವಧಿಯಲ್ಲಿ ಹರಿಯಪ್ಪನವರು ಅಧಿಕಧನ ಸಂಗ್ರಹಮಾಡದಿದ್ದರೂ ಮಿತವ್ಯಯದಿಂದ ಸುಖಜೀವನಕ್ಕೆ ಸಾಕಾಗುವಷ್ಟನ್ನು ಗಳಿಸಿದ್ದರು. ಬಸವನಗುಡಿಯಲ್ಲಿ ಬಂಗಲೆ, ಇನ್ಷ್ಯೂರೆನ್ಸ್ ಹಣ, ಕೈಯಲ್ಲಿದ್ದ ಸ್ವಲ್ಪ ನಗದು ಹಣವನ್ನು ಮಗನಿಗೆ ಬಿಟ್ಟುಹೋಗಿದ್ದರು. ಸುಂದರನಿಗೆ ಸೋದರ ಸೋದರಿಯರು ಯಾರೂ ಇರಲಿಲ್ಲವಾದ್ದರಿಂದ ತಂದೆ ಬಿಟ್ಟುಹೋದ ಆಸ್ತಿ ಅವನಿಗೆ ದೊಡ್ಡ ಸಂಪತ್ತೇ ಆಯಿತು. ಸುಂದರನ ತಾಯಿ ಅವನ ಆರನೆಯ ವಯಸ್ಸಿನಲ್ಲಿ ತೀರಿಕೊಂಡುದರಿಂದ ಅವರ ನೆನಪೂ ಸ್ಪಷ್ಟವಾಗಿರಲಿಲ್ಲ. ಹರಿಯಪ್ಪನವರು ಎರಡನೆಯ ಮದುವೆಮಾಡಿಕೊಳ್ಳುವ ಹವ್ಯಾಸಕ್ಕೆ ಬೀಳಲಿಲ್ಲ. ಹೆಂಡತಿ ಹೋದಕೂಡಲೆ ಕೆಲಸದಿಂದ ನಿವೃತ್ತಿಪಡೆದು ಮಗನ ಲಾಲನೆಪಾಲನೆಯಲ್ಲಿ ಮಗ್ನರಾದರು.

ತನ್ನ ವ್ಯಾಸಂಗ, ಪ್ರಯೋಗಶಾಲೆಯನ್ನುಳಿದ ಪ್ರಪಂಚದ ಪರಿಚಯ ಮಾಡಿಕೊಳ್ಳಲು ಸುಂದರ ಪ್ರಯತ್ನಿಸಲಿಲ್ಲ. ಆಟವಲ್ಲಂತೂ ಸುಂದರನಿಗೆ ಅಭಿರುಚಿಯೇ ಇಲ್ಲ. ಜಯರಾಮನ ಭರ್ತ್ಸನೆ ಕೂಡ ಸುಂದರನನ್ನು ಆಟದ ಬಯಲಿಗೆಳೆಯಲಾಗಲಿಲ್ಲ. ಬೇಸರವಾದರೆ ಸುಂದರ ಜೇಬಿನಲ್ಲಿ ಕೊಳಲು ಹಾಕಿಕೊಂಡು ಲಾಲ್‌ಬಾಗಿನಾಚೆಗೋ, ಅರಮನೆಯ ಸೇಬಿನತೋಟದ ಕಡೆಗೋ ಹೋಗಿ, ಅಲ್ಲಿ ಕುಳಿತು, ತುಟಿ ನೋವು ಬರುವವರೆಗೆ ಕೊಳಲೂದಿ ಬರುತ್ತಿದ್ದ.

ಕೊಳಲು ಅಭ್ಯಾಸ ಸುಂದರನಿಗೆ ಪ್ರಾಸಂಗಿಕವಾಗಿ ಒದಗಿ ಬಂದಿತ್ತು. ಹರಿಯಪ್ಪನವರೂ ಕೊಳಲು ವಿದ್ವಾನ್ ನರಸಿಂಗರಾಯರೂ ತುಂಬ ಗೆಳೆಯರಾಗಿದ್ದರು. ನರಸಿಂಗರಾಯರ ಮನೆಗೆ ಹೋಗುವಾಗ ಹರಿಯಪ್ಪನವರು ಆಗಾಗ್ಗೆ ಮಗನನ್ನು ಜತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ನರಸಿಂಗರಾಯರ ಕೊಳಲುವಾದನ ಕೇಳಿ ಕೇಳಿ ತಾನೂ ಕೊಳಲು ನುಡಿಸಬೇಕೆಂಬ ಆಕಾಂಕ್ಷೆ ಸುಂದರನಲ್ಲಿ ಹುಟ್ಟಿತು. ತಂದೆಗೆ ತಿಳಿಸದೆ ತಾನೇ ಹೋಗಿ ಒಂದು ಕೊಳಲು ಕೊಂಡು ತಂದ. ನರಸಿಂಗರಾಯರು ನುಡಿಸಿದುದನ್ನು ತನ್ನ ಕೊಳಲಲ್ಲಿ ತರಲು ಯತ್ನಿಸಲಾರಂಭಿಸಿದ. ಒಂದು ದಿನ ಸುಂದರನ ಕಳ್ಳತನ

ಬಯಲಿಗೆ ಬಿತ್ತು. ಹರಿಯಪ್ಪನವರನ್ನು ಕಾಣಬಂದ ನರಸಿಂಗರಾಯರು ಕೊಳಲಿನ ಧ್ವನಿಕೇಳಿ ಹೊರಗೇ ಆಲೈಸುತ್ತ ನಿಂತರು. ತಮ್ಮ ನುಡಿಕೆಯನ್ನನುಕರಿಸುತ್ತಿದ್ದವರು ಯಾರೆಂದು ತಿಳಿಯಲು ಕುತೂಹಲವಾಯಿತು. ಒಳಗೆ ಬಂದು ನೋಡುತ್ತಾರೆ - ಸುಂದರ! ಸಿಕ್ಕಿಬಿದ್ದ ಕಳ್ಳನಂತೆ ಸುಂದರ ಮುಜುಗರಪಟ್ಟುಕೊಂಡ. ನರಸಿಂಗರಾಯರು ಸುಂದರನ ಬಳಿಗೆ ಬಂದು ಅವನ ತಲೆ ನೇವರಿಸುತ್ತ

"ಕೊಳಲುವಾದನ ಕಂಡರೆ ನಿನಗಿಷ್ಟು ಪ್ರೇಮವೇ" ಎಂದು ಕೇಳಿದರು. ಸುಂದರ ನಾಚಿಕೊಂಡು

"ನಿಮ್ಮ ಕೊಳಲುವಾದನ ಕಂಡರೆ ನನಗೆ ಹುಚ್ಚು ಸರ್."

"ಕೊಳಲು ಕಲಿಯಬೇಕೆಂದು ಆಸೆಯಾಗುತ್ತದೆಯೇ ?"

"ಆಗುತ್ತದೆ. ಅಣ್ಣಾ ಏನನ್ನುವರೊ ಎಂದು ಭಯ."

"ಅವರೇಕೆ ಆಕ್ಷೇಪಿಸುತ್ತಾರೆ."

"ಓದುಬಿಟ್ಟು ಕೊಳಲು ಕಲಿಯುವುದಕ್ಕೆ ಹೊರಟ ಎಂದು ಅವರು ಬಯ್ಯಬಹುದು."

"ಓದಿಗೆ ವಿಘ್ನವಾಗದಂತೆ ಕೊಳಲು ಕಲಿಯಬಲ್ಲೆಯಾ ?"

"ಕಲಿಯಬಲ್ಲೆ ಸರ್. ನನಗೆ ಹೇಳಿಕೊಡುವವರು ಯಾರು ?"

"ನಾನು ಹೇಳಿಕೊಡುತ್ತೇನೆ. ನಿನಗೆ ನಾದಕಟ್ಟಿದೆ. ಶಾಸ್ತ್ರಬಲಬೇಕು, ಸಾಧನೆಬೇಕು. ಎಲ್ಲಾ ವಾದ್ಯಗಳಿಗಿಂತ ಕೊಳಲು ಕಷ್ಟ."

"ನಾನು ಕಷ್ಟಪಡಲು ಹಿಂಜರಿಯುವುದಿಲ್ಲ ಸರ್."

"ವಿದ್ಯೆ ಕಲಿಸಲು ನಾನೂ ಹಿಂಜರಿಯುವುದಿಲ್ಲ ಮಗೂ"

ಎಂದು ನರಸಿಂಗರಾಯರು ಹೇಳಿದುದನ್ನು ಕೇಳಿ ಸುಂದರನ ಸಂತೋಷಕ್ಕೆ ಕೊನೆಮೊದಲಿಲ್ಲವಾಯಿತು. ನರಸಿಂಗರಾಯರಿಗೆ ವಿನಯದಿಂದ

"ಒಂದು ಪ್ರಾರ್ಥನೆ ಸರ್."

"ಹೇಳು ಸುಂದರ್."

"ಈ ವಿಷಯ ನನ್ನ ತಂದೆಯವರಿಗೆ ತಿಳಿಸಕೂಡದು."

"ಅವರೇನೂ ಬಯ್ಯುವುದಿಲ್ಲಪ್ಪ. ಹೆದರಬೇಡ."

"ಅದಕ್ಕಲ್ಲ ಸರ್. ನಾನು ಚೆನ್ನಾಗಿ ಕಲಿತು ಅವರಿಗೆ ಆಶ್ಚರ್ಯ ವನ್ನುಂಟುಮಾಡಬೇಕೆಂದಿದ್ದೇನೆ."

"ಹಾಗಾದರೆ ಆಗಬಹುದು."

ಎಂದು ಒಪ್ಪಿಕೊಂಡರು. ಪಾಠವೂ ಕ್ರಮವಾಗಿ ಸಾಗಿತು. ಶಿಷ್ಯನ ಶ್ರದ್ಧಾಭಕ್ತಿ ಕಂಡು ನರಸಿಂಗರಾಯರು ಮೆಚ್ಚಿಕೊಂಡರು. ಎರಡು ವರ್ಷ ಮುಗಿಯುವುದರೊಳಗೆ ನರಸಿಂಗರಾಯರು ಕೈಲಾಸವಾಸಿಗಳಾದರು. ಸುಂದರ ಕೊಳಲು ಅಭ್ಯಾಸಬಿಡಲಿಲ್ಲವಾದರೂ ಬೇರೆಯವರಲ್ಲಿ ಮುಂದುವರಿಸಲು ಇಚ್ಛೆ ಪಡಲಿಲ್ಲ.

ನರಸಿಂಗರಾಯರ ಮರಣ ಹರಿಯಪ್ಪನವರ ಅವಸಾನಕ್ಕೆ ಪೀಠಿಕ ಹಾಕಿತು. ಗೆಳೆಯನ ದಹನಸಂಸ್ಕಾರ ಮುಗಿಸಿಕೊಂಡುಬಂದು ಹರಿಯಪ್ಪ ನವರು ಮಗನಿಗೆ

"ನನ್ನ ಕಾಲವೂ ಮುಗಿಯುತ್ತ ಬಂತೆಂದು ಕಾಣುತ್ತದೆ ಸುಂದರೂ. ನರಸಿಂಗರಾಯನದು ನನ್ನದು ಬೇರೆ ಬೇರೆ ದೇಹ - ಆದರೆ ಆತ್ಮ ಒಂದೇ."

ಎಂದರು. ಸಾವಿನ ನೆಳಲು ಬಿದ್ದೆಡೆ ಜನ ಇಂಥ ವೈರಾಗ್ಯದ ಮಾತು ಗಳನ್ನಾಡುವುದು ಸ್ವಾಭಾವಿಕವಾಗಿದ್ದುದರಿಂದ ಸುಂದರ ತಂದೆಯ ಮಾತಿಗೆ ಹೆಚ್ಚು ಬೆಲೆಕೊಡಲಿಲ್ಲ. ಆದರೆ ವರ್ಷ ತುಂಬುವುದರೊಳಗೆ ಹರಿಯಪ್ಪ ನವರೂ ತಮ್ಮ ಗೆಳೆಯನ ಹಾದಿ ಹಿಡಿದರು.

ಹರಿಯಪ್ಪನವರು ಬದುಕಿದ್ದಾಗಲೇ ಸುನಂದೆಯನ್ನು ಸುಂದರನಿಗೆ ತಂದುಕೊಳ್ಳುವುದೆಂದು ನಿಶ್ಚಯಿಸಿದ್ದರು. ಜಾತಕಾನುಕೂಲವೂ ಆಗಿತ್ತು. ಪೂರ್ವಭಾವಿ ಮಾತುಕತೆಗಳೂ ಮುಗಿದಿದ್ದವು. ಸುಂದರ ತಂದೆಯ ನಿರ್ಣಯ ವನ್ನು ಬದಲಾಯಿಸಲಿಲ್ಲ. ಅವನು ಬಿ.ಎಸ್‌ಸಿ ಮೊದಲನೆಯ ವರ್ಷದಲ್ಲಿ ವ್ಯಾಸಂಗಮಾಡುತ್ತಿದ್ದಾಗ ವಿವಾಹವಿಧಿಯೂ ಪೂರೈಸಿತು.

ಸುಂದರನ ಮನಸ್ಸು ಸಂಪೂರ್ಣವಾಗಿ ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ತೇರ್ಗಡೆಯಾಗುವುದರ ಕಡೆಗಿತ್ತು. ಅವನಿಗೆ ರ್‍ಯಾಂಕ್ (Rank) ಬರುವು ದರಲ್ಲಿ ಯಾವ ಸಂದೇಹವೂ ಇಲ್ಲವೆಂದು ಇಡಿಯ ಕಾಲೇಜೇ ನಂಬಿತ್ತು. ಲ್ಯಾಬೋರೆಟರಿ ಆಳು ಗಫೂರ್ ಕೂಡ ಸುಂದರನಿಗೆ ರ್‍ಯಾಂಕ್ ಬರುವುದೆಂದೂ ಮುಂದೆ ಅವನು ಅದೇ ಕಾಲೇಜಿನಲ್ಲಿ ಉಪಾಧ್ಯಾಯನಾಗುವನೆಂದೂ ನಂಬಿದ್ದ.

ಪ್ರೊಫೆಸರ್ ನಾಯಿಡು ಅವರು ಮೊದಲಿನಿಂದಲೂ ಸುಂದರನಲ್ಲಿ ವಿಶ್ವಾಸ ತಳೆದಿದ್ದುದರಿಂದ ರ್‍ಯಾಂಕಿನ ಪ್ರಶ್ನೆ ನಿರ್ಣಯವಾದ ಹಾಗೆಯೇ ಇತ್ತು.

ಪರೀಕ್ಷೆಯೂ ಆಯಿತು. ಬೇಸಿಗೆಯ ರಜಾ ಕಳೆದಮೇಲೆ ಫಲಿತಾಂಶವೂ ಹೊರಬಿತ್ತು. ಸುಂದರನಿಗೆ ಎರಡನೆಯ ರ್‍ಯಾಂಕ್ ದೊರೆತಿತ್ತು, ಅವನ ಸಹಪಾಠಿ ಜಯರಾಮ್‌ಗೆ ಮೊದಲನೆಯ ರ್‍ಯಾಂಕ್ ದೊರೆತಿತ್ತು.

ಎಲ್ಲರಿಗೂ ಪರಮಾಶ್ಚರ್ಯವಾಯಿತು. ಗಫೂರ್‌ನಂತೂ

"ಇದರಲ್ಲಿ ಇನ್‌ಸಾಫ್ ಇಲ್ಲ ಸಾಮಿ" ಎಂದು ಸ್ಪಷ್ಟವಾಗಿ ಹೇಳಿಯೇ ಬಿಟ್ಟ.

ನಾಪಾಸಾಗಿದ್ದರೆ ಸುಂದರನಿಗೆಷ್ಟು ಬೇಸರವಾಗುತ್ತಿತ್ತೋ ಅಷ್ಟೇ ಬೇಸರ ಈ ಎರಡನೆಯ ರ್‍ಯಾಂಕ್ ಬರಿಸಿತ್ತು. ಜಯರಾಮ್ ಪಾಸಾಗುವುದೇ ದುಸ್ತರ ವಾಗಿದ್ದಾಗ ಮೊದಲನೆಯ ರಾಂಕ್ ಬಂದುದಂತೂ ಸುಂದರನಿಗೆ ದೊಡ್ಡ ಸಮಸ್ಯೆಯಾಗಿತ್ತು. ಒಂದುದಿನ ಸುಂದರನನ್ನು ಕಾಣಲು ಬಂದ ಗಫೂರ್ ಈ ಸಮಸ್ಯೆಯನ್ನು ಬಿಡಿಸಿದ.

"ನೀವು ಯೋಚ್ನೆಮಾಡ್ಬೇಡಿ ಸರ್ಕಾರ್. ಜಯರಾಮ್ ಏನೇ ಮಾಡಿದರೂ ನಿಮ್ಮ ದರ್ಜೆಗೆ ಬರಲಾರು."

"ಜಯರಾಮ್ ಮೇಲೆ ನನಗೆ ಹೊಟ್ಟೆಯ ಕಿಚ್ಚಿಲ್ಲ ಗಫೂರ್. ಆದರೆ ನಾನು ಅವನಿಗಿಂತ ಕಡೆಯಾದೆನಲ್ಲಾ ಎಂದು ವ್ಯಥೆ."

"ಇದರಲ್ಲಿ ನ್ಯಾಯ ಇಲ್ಲ ಸರ್ಕಾರ್. ದಗಲ್ಬಾಜಿ ನಡೆದಿದೆ."

"ಏನಾಗಿದೆ ಗಫೂರ್."

"ನಾಯಿಡು ಪ್ರೊಫೆಸರು ಜಯರಾಮ್ ಅವರನ್ನು ದಾಮಾದ್ (ಅಳಿಯ) ಮಾಡಿಕೊಳ್ತಾರೆ ಸರ್ಕಾರ್. ಅದಕ್ಕೆ ನಿಮಗೆ ಬಿಸ್ಮಿಲ್ಲಾ ಮಾಡಿ ರೋದು."

"ದೊಡ್ಡವರ ಮೇಲೆ ಇಲ್ಲದ್ದು ಸಲ್ಲದ್ದು ಹೇಳಬಾರದು ಗಫೂರ್."

"ಸರ್ಕಾರ್, ನಾನು ಕುಕ್ ಸಾಹೇಬರ ಕಾಲದಿಂದ ಈ ಕಾಲೇಜಿನಲ್ಲಿ ದ್ದೇನೆ. ಎಷ್ಟೋ ಪ್ರೊಫೆಸರುಗಳು ಬಂದು ಹೋದದ್ದನ್ನು ಕಂಡಿದ್ದೇನೆ ನಾಯಿಡು ಪ್ರೊಫೆಸರ್ ವಿಷಯ ಚೆನ್ನಾಗಿ ತಿಳಿದುಕೊಂಡೇ ಈ ಮಾತಾಡಿದೆ ಸರ್ಕಾರ್. ಮಾಫ್ ಮಾಡಿ."

ಗಫೂರ್ ಮಾತು ಸುಳ್ಳಾಗಲಿಲ್ಲ. ಅದೇ ವರ್ಷ ಜಯರಾಮ್‌ಗೆ ಕಾಲೇಜಿನ ಲೆಕ್ಚರರ್ ಪದವಿಯೂ ಸಿಕ್ಕಿತು, ನಾಯಿಡು ಪ್ರೊಫೆಸರ್ ಮಗಳೊಂದಿಗೆ ಲಗ್ನವೂ ಆಯಿತು.

ಪ್ರೊ. ನಾಯಿಡು ಸುಂದರನನ್ನು ಕರೆಸಿ

"ಇನ್ನೊಂದು ಲೆಕ್ಚರರ್‌ಷಿಪ್ ಖಾಲಿ ಇದೆ. ನೀನು ಅಪ್ಲಿಕೇಷನ್ ಹಾಕಿದರೆ ಕೆಲಸ ನಿನಗೆ ಕೊಡಿಸುತ್ತೇನೆ" ಎಂದರು.

ನಾಲ್ಕು ಜನ ಹಿತೈಷಿಗಳ ಸಲಹೆಯಂತೆ ಸುಂದರ ಅಪ್ಲಿಕೇಷನ್ ಹಾಕಿದ. ಪ್ರೊಫೆಸರ್ ನಾಯಿಡು ಅವರೇ ಪೈನ್‌ಛಾನ್ಸಲರನ್ನು ಕಂಡು ಅವನಿಗೆ ಕೆಲಸ ಕೊಡಿಸಿದರು.

ಸುಂದರ ಕೆಲಸ ನಂಬಿ ಕೂಡಲಿಲ್ಲ. ಹಗಲಿರುಳೂ ತನ್ನ ಶೋಧಗಳ ಕಡೆ ಗಮನವಿತ್ತ. ಗಫೂರನ ಪ್ರೋತ್ಸಾಹದಿಂದ ಅವನು ತನ್ನ ಶೋಧಗಳನ್ನು ಕಲ್ಕತ್ತ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದ.

ಕಲ್ಕತ್ತ ವಿಶ್ವವಿದ್ಯಾನಿಲಯದಲ್ಲಿ ನಾಯಿಡು ಪ್ರೊಫೆಸರು ಇರಲಿಲ್ಲವಾದ್ದರಿಂದ ಸುಂದರನಿಗೆ ಮೊದಲನೆಯ ತರಗತಿಯ ಎಂ.ಎಸ್‌ಸಿ ಡಿಗ್ರಿ ದೊರಕಿತು.

ಜಯರಾಮ್ ಸ್ಥಾನಕ್ಕೆಲ್ಲಿ ಚ್ಯುತಿಬರುವುದೋ ಎಂದು ಹೆದರಿ ನಾಯಿಡು ಪ್ರೊಫೆಸರು ತಾವೇ ನಡೆಸಿದ ಶೋಧವನ್ನು ಅವನ ಹೆಸರಿನಲ್ಲಿ ಮದರಾಸಿಗೆ ಕಳಿಸಿಕೊಟ್ಟು ಅವನಿಗೂ ಒಂದು ಎಂ.ಎಸ್‌ಸಿ ದೊರಕಿಸಿಕೊಟ್ಟರು.

ಸುಂದರ ತಲೆಯೆತ್ತದಂತೆ ಮಾಡಲು ನಾಯಿಡು ಪ್ರೊಫೆಸರು ಕಂಕಣ ಬದ್ಧರಾದರು. ಕಾಲೇಜ್ ವೇಳೆ ಬಿಟ್ಟು ಉಳಿದ ಕಾಲದಲ್ಲಿ ಲ್ಯಾಬೊರೇಟರಿ ತೆಗೆದಿರಕೂಡದು ಎಂದು ಆಜ್ಞೆ ವಿಧಿಸಿದರು. ಸುಂದರ ತನ್ನ ಸ್ವಂತ ಲ್ಯಾಬೊರೇಟರಿಯನ್ನೇ ಸುಧಾರಿಸಿ ಅದರ ಮೇಲೆ ಸಾವಿರಾರು ರೂಪಾಯಿ ಸುರಿದು ತನ್ನ ಶೋಧಗಳನ್ನು ಮುಂದುವರಿಸುತ್ತ ಬಂದ.

ಕಾಲೇಜಿನಲ್ಲಿಯೂ ಸುಂದರನಿಗೆ ಕಿರುಕುಳವಾರಂಭವಾಯಿತು. ಕಾಲೇಜಿನಲ್ಲಿ ಸುಂದರನಿಗೆ ಕೆಲಸ ದೊರಕಿಸಿಕೊಟ್ಟುದು ಅಪರಾಧವಾಯಿತೆಂದು ಪ್ರೊ. ನಾಯಿಡು ಭಾವಿಸಿಕೊಂಡು ಅದಕ್ಕೆ ಹಲವು ಬಗೆಯಲ್ಲಿ ಪ್ರತಿಕ್ರಿಯೆ

ಯನ್ನಾಚರಿಸಲಾರಂಭಿಸಿದರು ಪರೀಕ್ಷಕರ ಸ್ಥಾನ (Examiner's Posts) ಗಳೆಲ್ಲಾ ಜಯರಾಮ್ ಪಾಲಾಗುತ್ತ ಬಂದವು.

ತನ್ನ ಪಾಠ ಪ್ರವಚನಗಳಿಂದ ಸುಂದರ ವಿದ್ಯಾರ್ಥಿಗಳ ಗೌರವವನ್ನು ದೊರಕಿಸಿಕೊಂಡಿದ್ದನೇ ವಿನಾ ವಿಶ್ವಾಸವನ್ನು ಗಳಿಸಿಕೊಂಡಿರಲಿಲ್ಲ. ಕೆಮಿಸ್ಟ್ರಿ ಲೆಕ್ಚರರ್ ಶುದ್ಧ ಕ್ರ್ಯಾಕ್ (Crack) ಎಂಬ ಪ್ರತೀತಿ ಇಡಿಯ ಕಾಲೇಜಿನಲ್ಲಿ ವ್ಯಾಪಿಸಿತ್ತು.

ಕ್ಲಾಸ್ ರೂಮಿನಲ್ಲಿ ತನಗಿಲ್ಲದ ಸ್ಥಾನವನ್ನು ಜಯರಾಮ್ ಆಟದ ಬಯಲಿನಲ್ಲಿ ಗಳಿಸಿಕೊಂಡಿದ್ದ. ಟೆನಿಸ್, ಫುಟ್‌ಬಾಲ್, ಹಾಕಿ, ಬ್ಯಾಸ್ಕೆಟ್ ಬಾಲ್ ಮೊದಲಾದ ಆಟಗಳನ್ನು ಜಯರಾಮ್ ಚೆನ್ನಾಗಿ ಆಡುತ್ತಿದ್ದ, ಕ್ರಿಕೆಟ್ ಆಟದಲ್ಲಿ ಅವನ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡೂ ಪ್ರಸಿದ್ಧಿಯಾಗಿತ್ತು.

ಜಯರಾಮ್ ಸ್ವಭಾವತಃ ದುಷ್ಟನಾಗಿರಲಿಲ್ಲ. ತನ್ನ ಸಹೋದ್ಯೋಗಿ ಸುಂದರರಾಯನ ಮೇಲೆ ಅವನ ಚಕಾರ ಶಬ್ದವನ್ನಾಡುತ್ತಿರಲಿಲ್ಲ. ತನಗಿಂತಲೂ ಸುಂದರ ದಕ್ಷನೆಂಬುದು ಜಯರಾಮ್ ಮನಸ್ಸಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ವಿದ್ಯಾರ್ಥಿಗಳು ಜಯರಾಮನನ್ನು ಮೆಚ್ಚಿಸಲು ಸುಂದರರಾಯನ ಬಗ್ಗೆ ಅಣಕವಾಡುತ್ತಿದ್ದರೆ, ತೆಗಳುತ್ತಿದ್ದರೆ ಅವರನ್ನು ಪ್ರತಿಭಟಿಸುವ ಗೋಜಿಗೂ ಹೋಗುತ್ತಿರಲಿಲ್ಲ. ಅವನ ನಡತೆ ಅವರ ಅಣಕಕ್ಕೆ ಮೌನಸಮ್ಮತಿಯನ್ನು ಸೂಚಿಸುತ್ತಿತ್ತು.

ಸುನಂದೆಯ ಪರೀಕ್ಷೆಯ ಫಲಿತಾಂಶ ಹೊರಬೀಳುವ ದಿನ ಸುಂದರ ತನ್ನ ಸ್ವಂತ ಪ್ರಯೋಗಶಾಲೆಯಲ್ಲಿ ಕಾರ್ಯೋನ್ಮುಖನಾಗಿದ್ದ. ಸುನಂದೆಯ ರಿಸಲ್ಟ್ ತಿಳಿದು ಬರಲು ಕಾಲೇಜಿಗೆ ಹೋಗಿದ್ದ ಗಫೂರನನ್ನು ಸುಂದರ ನಿರೀಕ್ಷಿಸುತ್ತಿದ್ದ. ಅವನ ಮನಸ್ಸಿನಲ್ಲಿ ಆತಂಕ ಮೂಡಿತ್ತು. 'ಸುನಂದ ಪಾಸಾಗುವುದರಲ್ಲಿ ಸಂದೇಹವೇನು' ಎಂದು ತನಗೆ ತಾನೇ ಸಮಾಧಾನ ಹೇಳಿಕೊಳ್ಳುವನು. 'ಅವಳಿಗೆ ಫಸ್ಟ್ ಕ್ಲಾಸ್ ಸಿಕ್ಕುವಾಗ ಪ್ಯಾಸಿನ ಬಗ್ಗೆ ಯೋಚಿಸಬೇಕೇ' ಎಂದು ಮನಸ್ಸನ್ನು ರಮಿಸುವನು. ಕ್ಷಣಕಾಲ ಶಾಂತವಾದ ಮನಸ್ಸು ಒಮ್ಮೆಲೇ ಅಧೀರವಾಗುತ್ತಿತ್ತು. 'ಒಂದುವೇಳೆ ಫೇಲ್ ಆಗಿದ್ದರೇ?' ಸುನಂದೆ ಫೇಲ್ ಆದರೆ, ಅದರ ಹಿನ್ನೆಲೆಯಲ್ಲಿ ಬರುತ್ತಿದ್ದ

ತೊಂದರೆಗಳನ್ನು ಯೋಚಿಸುವನು. ಇಂದಿರಮ್ಮನವರ ಮನಸ್ಸಿಗಾಗುತ್ತಿದ್ದ ನೋವಿನ ಚಿತ್ರ ಕಣ್ಣಮುಂದೆ ಬಂದು ನಿಲ್ಲುತ್ತಿತ್ತು. 'ಸುನಂದಾ ಫೇಲಾದರೆ ಇನ್ನೂ ಒಂದು ವರ್ಷ ಮೈಸೂರಿನಲ್ಲೇ ನಿಲ್ಲಬೇಕಾಗುತ್ತದೆ. ಅವಳು ಕೂಡಲೆ ಇಲ್ಲಿಗೆ ಬರುವುದಕ್ಕಾಗುವುದಿಲ್ಲ' ಎಂಬ ಚಿಂತೆ ಮೂಡುತ್ತಿತ್ತು.

ಗಫೂರನ ಮುಖದ ಮೇಲೆ ಪರೀಕ್ಷೆಯ ಫಲಿತಾಂಶ ಅಮೃತಾಕ್ಷರಗಳಿಂದ ಬರೆದಂತೆ ಮೂಡಿತ್ತು. ಸುಂದರ ಉತ್ಸಾಹದಿಂದ

"ಏನಾಯಿತು ಗಫೂರ್" ಎಂದು ಕೇಳಿದ.

"ನೋಡಿ ಸರ್ಕಾರ್"

ಎಂದು ಕಾಲೇಜ್ ಕ್ಲರ್ಕ್ ಕಪ್ಪಣ್ಣ ಕೊಟ್ಟಿದ್ದ ಕಾಗದವನ್ನು ಗಫೂರ್ ಕೊಟ್ಟ.

"ಎರಡನೆಯ ತರಗತಿಯಲ್ಲಿ ತೇರ್ಗಡೆ!"

"ಪಾಸಾದರಲ್ಲಾ ಬಿಡಿ ಸರ್ಕಾರ್"

"ಪಾಸಾಗುವುದರಲ್ಲಿ ಸಂದೇಹವೇ ಇರಲಿಲ್ಲ ಗಫೂರ್. ಆದರೆ ಸೆಕೆಂಡ ಕ್ಲಾಸ್ ಬಂದಿರುವುದು ನನಗೇ ಆಶ್ಚರ್ಯವನ್ನುಂಟುಮಾಡಿದೆ."

"ಮಧ್ಯಾನ್ಹದ ಗಾಡೀಗೆ ಮೈಸೂರಿಗೆ ಹೋಗುತ್ತೀರಾ ಸರ್ಕಾರ್."

"ಏಕೆ ?"

"ಅಮ್ಮಾವರನ್ನು ಕರೆದುಕೊಂಡು ಬರುವುದು."

"ಮೊದಲು ಒಂದು ವೈರ್ ಕೊಡುತ್ತೇನೆ. ಅವರ ಕಾಗದ ಬಂದಮೇಲೆ ಮುಂದಿನ ಮಾತು."

ಒಂದು ಕಾಗದದ ಮೇಲೆ ಸಂದೇಶ ಗುರುತು ಹಾಕಿಕೊಟ್ಟ.

ತಂತೀವಾರ್ತೆ ಕೊಟ್ಟು ಬಂದ ಗಫೂರ್ ಪೆಚ್ಚುಮುಖ ಹಾಕಿಕೊಂಡು ನಿಂತುದನ್ನು ಕಂಡು ಸುಂದರನಿಗೆ ಗಾಬರಿಯಾಯಿತು.

"ಏನಾಯಿತು ಗಫೂರ್."

"ಏನೂ ಇಲ್ಲ ಸರ್ಕಾರ್. ನನಗೆ ರಿಟೈರ್ ಆರ್ಡರ್ ಆಗಿದೆಯಂತೆ."

"ಯಾರು ಹೇಳಿದರು."

"ಕಪ್ಪಣ್ಣ ಸಾಮಿ."

"ನೀನು ಕಾಲೇಜ್ ಬಿಟ್ಟುಹೋದರೆ ನನ್ನ ಎಕ್ಸ್‌ಪೆರಿಮೆಂಟ್ಸ್ (Experiments) ಗತಿಯೇನು ಗಫೂರ್."

"ನಾನೂ ಬುಡ್ಡ ಆಗ್ಬಿಟ್ಟೆ - ರಿಟೈರ್ ಆಗ್ಬೇಕಲ್ಲ ಸರ್ಕಾರ್."

"ಪ್ರೊಫೆಸರ್ ಹತ್ತಿರ ಮಾತನಾಡಿ ನೋಡಲೇ."

"ಅವರೇನೂ ಮಾಡೋದಿಲ್ಲ - ಸುಮ್ಕೆ ನಿಮ್ಗೆ ಕೆಟ್ಟಹೆಸರು."

"ಮುಂದೇನು ಮಾಡಬೇಕೆಂದಿರುವೆ ಗಫೂರ್."

"ಕುಲೀಸ್‌ಪೇಟೇಲಿ ನನ್ನ ಅಣ್ಣನ ಮಕ್ಕಳವ್ರೆ. ಅಲ್ಲಿ ಹೋಗಿಬಿಡ್ತೀನಿ."

"ನೀನು ಹೋದರೆ ನನ್ನ ಕೈಯೇ ಮುರಿದುಹೋಗುತ್ತದಲ್ಲಾ ಗಫೂರ್"

ಸುಂದರನ ಅಭಿಮಾನ ಗಫೂರನ ಹೃದಯದಲ್ಲಿ ತಳಮಳವನ್ನುಂಟು ಮಾಡಿತು. ಕಣ್ಣಕೋಟೆಯನ್ನತಿಕ್ರಮಿಸಿ ಹೊರಗೆ ಧಾವಿಸಲು ಯತ್ನಿಸಿದ್ದ ಅಶ್ರುಬಿಂದುಗಳನ್ನು ತಡೆಗಟ್ಟಿ

"ನೀವು ಹೇಗೆ ಹೇಳಿದರೆ ಹಾಗೆ ಮಾಡುತ್ತೀನೆ ಸರ್ಕಾರ್"

"ನೀನೂ ಇರುವವನು ಒಬ್ಬ. ಇಲ್ಲಿಯೇ ಬಂದು ಇದ್ದುಬಿಡು. ನಿನಗೇನು ಸಂಬಳಬೇಕೋ ನಾನು ಕೊಡುತ್ತೀನೆ"

ಗಫೂರನ ಅಂತಃಕರಣ ಉಕ್ಕಿ ಬಂತು. ಸುಂದರನ ಕಾಲುಹಿಡಿದು

"ನೀವೇನೂ ಕೊಡಬೇಡಿ ಮಾಬಾಪ್ ನಾನು ಸಂತೋಷವಾಗಿ ನಿಮ್ಮ ಚಾಕರಿ ಮಾಡಿಕೊಂಡು ಹೋಗುತ್ತೀನೆ." ಎಂದು ಆಶ್ವಾಸನವಿತ್ತ.

"ಅಮ್ಮಾಜಿ ಯಾವಾಗ ಬರುತ್ತಾರೆ."

"ಈಗ ತಾನೆ ಅವರ ರಿಸಲ್ಟ್ ಬಂದಿದೆ."

"ನೀವೇ ಹೋಗಿ ಅವರನ್ನು ಕರೆದುಕೊಂಡು ಬರದಿದ್ದರೆ ಅಮ್ಮಾಜಿ ನಾರಾಜ್ ಆಗುತ್ತಾರೆ."

"ಹಾಗೇನಿಲ್ಲ ಗಫೂರ್. ಇತರ ಹೆಂಗಸರಂತಲ್ಲ ನನ್ನ ಸುನಂದಾ. ನನ್ನ ಕೆಲಸದ ಜವಾಬ್ದಾರಿ ಅವಳಿಗೆ ಚೆನ್ನಾಗಿ ಗೊತ್ತಿದೆ."

'ದೊಡ್ಡ ವಿಜ್ಞಾನಿ. ಲೌಕಿಕ ಜ್ಞಾನ ಮಾತ್ರವಿಲ್ಲ ಎನ್ನುವಂತೆ ಗಫೂರನ ಮುಖದಲ್ಲಿ ತೆಳುನಗೆಯೊಂದು ತೇಲಿ ತಕ್ಷಣ ಮಾಯವಾಯಿತು.

ಮನೆಯನ್ನು ಅಚ್ಚುಗಟ್ಟುಮಾಡಿ 'ಅಮ್ಮಾಜಿ' ಸ್ವಾಗತಕ್ಕೆ ಸಿದ್ಧತೆ ಮಾಡುವ ಪೂರ್ಣ ಜವಾಬ್ದಾರಿ ಗಫೂರ್ ತಾನೇ ವಹಿಸಿಕೊಂಡ. ಗೋಡೆ

ಗಳಿಗೆ ಸುಣ್ಣ ಬಣ್ಣವಾಯಿತು, ಒಡೆದುಹೋಗಿದ್ದ ಕಿಟಕಿಯ ಗಾಜುಗಳು ಬದಲಿಸಲ್ಪಟ್ಟವು, ಕಿಟಕಿ ಬಾಗಿಲುಗಳಿಗೆ ತೆರೆಗಳು ಬಂದವು.

ಗಫೂರನ ಅಭಿರುಚಿ, ಆಸ್ಥೆ, ಕರ್ತವ್ಯದಕ್ಷತೆ ಕಂಡು ಸುಂದರನಿಗೆ ಆತ್ಯಾಶ್ಚರ್ಯವಾಯಿತು

"ಇವನ್ನೆಲ್ಲಾ ಎಲ್ಲಿ ಕಲಿತೆ ಗಫೂರ್."

"ಯಾವವನ್ನು ಸರ್ಕಾರ್ - ಮನೆ ಅಲಂಕಾರಮಾಡುವುದನ್ನೇ!"

"ಹೌದು."

"ನಾನು ಟೇಟ್ ಸಾಹೇಬರ ಮನೆಯಲ್ಲಿ ಕೆಲಸಕ್ಕಿದ್ದೆ ಮೆಮ್ ಸಾಹೇಬರ (Mem Sahaib) ಹತ್ತಿರ ಎಲ್ಲಾ ಪಾಠವಾಗಿದೆ ಸರ್ಕಾರ್."

"ಹಾಗಾದರೆ ನಿನಗೆ ಅಡಿಗೆಯೂ ಬರುತ್ತದೆ."

"ಬರುತ್ತದೆ - ಆದರೆ ನನ್ನ ಅಡಿಗೆ ನಿಮಗೆ ಪ್ರಯೋಜನವಿಲ್ಲ ಸರ್ಕಾರ್."

"ಏಕೋ!"

"ನನ್ನವಲ್ಲಾ ಲಾಲ್ ತರಕಾರಿ ಅಡಿಗೆ * ಅದೂ ಅಲ್ಲದೆ ನಾನು ಮಾಡಿದರೆ ನೀವು ತಿನ್ನುವಿರಾ ಸರ್ಕಾರ್ - ಅವನ್ನಾಜಿ ಮುಟ್ಟುತ್ತಾರೆಯೇ?"

"ಲಾಲ್‌ತರಕಾರಿ ತಿನ್ನುವುದು ಸಾಧ್ಯವಿಲ್ಲದಿದ್ದರೂ ನೀನು ಮಾಡಿದ ಅಡಿಗೆ ಊಟ ಮಾಡುವುದರಲ್ಲೇನು ತಪ್ಪು ಗಫೂರ್."

ಸುಂದರನ ಮುಗ್ಧ ಮಾತು ಕೇಳಿ ಗಫೂರನಿಗೆ ನಗೆ ಬಂದಿತು. ಹಿಂದೂ ಪ್ರೊಫೆಸರುಗಳ ಮನೆಗಳಲ್ಲಿಯೂ ಕೆಲಸಮಾಡಿ ಅವನಿಗೆ ಅಭ್ಯಾಸವಿತ್ತು. ಪ್ರೊಫೆಸರುಗಳ, ಅವರ ಸೌಭಾಗ್ಯವತಿಯರ ಕಟುಧರ್ಮದ ಪರಿಚಯ ಚೆನ್ನಾಗಿ ಪಡೆದಿದ್ದ ಗಫೂರ್, ಸುಂದರನ ಆಶ್ವಾಸಕ್ಕೆ ಹೆಚ್ಚು ಲಕ್ಷ್ಯಕೊಡಲಿಲ್ಲ.

ಸುಂದರನ ಮನೆಯಲ್ಲಿಯೇ ಗಫೂರ್ ವಾಸಕ್ಕೆ ಬಂದಮೇಲೆ ಅವರಿಬ್ಬರಿಗೂ ನಿಕಟಸ್ನೇಹ ಬೆಳೆಯಲಾರಂಭಿಸಿತು. ಗಫೂರ್ ಮನೆಯಾಳು ಆಗಿದ್ದುದಲ್ಲದೆ ಲ್ಯಾಬೊರೇಟರಿ ಅಸಿಸ್ಟೆಂಟೂ ಆಗಿದ್ದ. ಅವನೇ ಹೋಗಿ ಹೋಟಲಿನಿಂದ ಒಂದು ಟಿಫನ್‌ಕ್ಯಾರಿಯರ್‌ನಲ್ಲಿ ಊಟ ತರುತ್ತಿದ್ದ ಸುಂದರ, ಗಫೂರ್ ಇಬ್ಬರೂ ಜತೆಯಲ್ಲಿ ಕುಳಿತು ಊಟ ಮುಗಿಸುತ್ತಿದ್ದರು.

ರಾತ್ರಿ ಲ್ಯಾಬೊರೇಟರಿಯಲ್ಲಿ ನಿಂತರೆ ಸುಂದರನಿಗೆ ಹೊತ್ತೇ ಗೊತ್ತಾಗುತ್ತಿರಲಿಲ್ಲ. ಗಂಟೆಗೊಮ್ಮೆ ಬಂದು ಗಫೂರ್ ವೇಳೆ ತಿಳಿಸಿ ಮಲಗಲು ಹೋಗಬೇಕೆಂದು ಪ್ರಾರ್ಥಿಸುತ್ತಿದ್ದ. ಅವನ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ಸುಂದರ ಕೆಲಸಮಾಡುತ್ತಿದ್ದರೆ ರಾತ್ರಿ ಒಂದು ಗಂಟೆ, ಎರಡು ಗಂಟೆ ವೇಳೆಗೆ ಗಫೂರ್ ಬಲವಂತದಿಂದ ಸುಂದರನನ್ನು ಮಲಗಲು ಕಳಿಸುತ್ತಿದ್ದ.

ಒಂದೊಂದು ರಾತ್ರಿ ಸುಂದರನಿಗೆ ನಿದ್ರೆ ಹತ್ತುವವರೆಗೆ ಗಫೂರ್ ಅವನ ಪಾದಗಳನ್ನೊತ್ತುತ್ತಿದ್ದ.

"ಇದೇನು ಮಾಡುತ್ತಿರುವೆ ಗಫೂರ್."

"ಏನು ಸರ್ಕಾರ್."

"ನೀನು ಹಿರಿಯ ಮನುಷ್ಯ - ನನ್ನ ಪಾದ ಮುಟ್ಟುವುದೇ."

"ತಮ್ಮ ಪಾದಸೇವೆ ಮಾಡೋದು ನನ್ನ ನಸೀಬು ಸರ್ಕಾರ್. ನೀವು ಪಡೋ ಕಷ್ಟಕ್ಕೆ ನಾನು ಮಾಡೋ ಸೇವೆ ಹೆಚ್ಚೇನೂ ಅಲ್ಲ."

"ನನ್ನ ಎಕ್ಸ್‌ಪೆರಿಮೆಂಟ್ ಊರ್ಜಿತವಾಗಬೇಕು ಗಫೂರ್ - ಅದರಿಂದ ನನಗೆ ಕೀರ್ತಿ ಬರುವುದಂತೂ ಖಂಡಿತ ಆದರ ನಾನು ಕೀರ್ತಿಗಾಗಿ ದುಡಿಯುತ್ತಿಲ್ಲ. ನನ್ನ ಪ್ರಯೋಗದಿಂದ ಲೋಕಕ್ಕೆ ಸ್ವಲ್ಪ ಪ್ರಯೋಜನವಾಗುತ್ತದೆ."

ಸುಂದರನ ಮಾತು ಕೇಳಿ ಗಫೂರನಿಗೆ ಅತ್ಯಾನಂದವಾಗುತ್ತಿತ್ತು. ತನಗೆ ಪರಿಚಯವಿದ್ದ ವಿಜ್ಞಾನಿಗಳ ಅಮರ ಕಥೆಗಳನ್ನುಸುರುತ್ತಿದ್ದ.

"ಅವರೂ ನಿಮ್ಮ ಹಾಗೇ ಇದ್ದರು ಸರ್ಕಾರ್. ಅನ್ನ, ನೀರು ಬಿಟ್ಟು ದುಡಿಯುತ್ತಿದ್ದರು. ಸೈನ್ಸು ಪರಂಗಿಯೋರ ಗುತ್ತಿಗೆಯಾಗಿದೆ - ಅದನ್ನು ತಪ್ಪಿಸಬೇಕು. ನಾವೂ ಶೋಧಮಾಡಬೇಕು ಎಂದು ಹೇಳುತ್ತಿದ್ದರು. ಖುದಾ ಅವರಿಗೆ ತುಂಬ ಆಯಸ್ಸು ಕೊಡಲಿಲ್ಲ."

"ಯಾರವರು ಗಫೂರ್"

"ಪ್ರೊಫೆಸರ್ ಎಂ. ಜಿ. ಶ್ರೀನಿವಾಸರಾಯರು."

"ದೊಡ್ಡವರು. ಅವರಿಗೆ ನನ್ನನ್ನೇಕೆ ಹೋಲಿಸುವೆ ಗಫೂರ್."

"ನೀವು ಅವರ ಹಾಗೆ ಆಗುತ್ತೀರಿ ಎಂದು ನನಗೆ ನಂಬಿಕೆ ಇದೆ . . . . .

ಗುಲಾಮ ಏನೇನೋ ಮಾತಾಡ್ತಾನೆ ಎಂತಾ ಕೋಪಮಾಡಿಕೋ ಬೇಡಿ ಸರ್ಕಾರ್."

"ನಿನ್ನನ್ನ ಗುಲಾಮನೆಂದು ಕರೆವವನೇ ನಮಗುಲಾಮ"

ಎನ್ನುತ್ತಿರುವಂತೆ ಸುಂದರನ ಕಣ್ಣುಗಳು ಮುಚ್ಚಿಕೊಳ್ಳುತ್ತಿದ್ದವು. ಗಫೂರ್ ನಿಶ್ಶಬ್ದವಾಗಿ ಎದ್ದು ರಗ್ಗನ್ನು ಸುಂದರನ ಮೇಲೆ ಹೊದಿಸಿ ಕ್ಷಣಕಾಲ ಅವನ ಮುಖವನ್ನು ದಿಟ್ಟಿಸಿ ನೋಡುತ್ತಿದ್ದ. ತಾಯೊಲವಿನ ಆ ಶುಭ್ರ ಸೌಂದರ್ಯ ನೋಡಲು ಸುಂದರ ನಿದ್ರೆಯಲ್ಲಿ ಮಗ್ನನಾಗಿರುತ್ತಿದ್ದ. ಅವರೆ ಬೇರೆ ಯಾರದೋ ಅದೃಶ್ಯನೇತ್ರಗಳು ಆ ದಿವ್ಯನೋಟವನ್ನು ನೋಡಿ ಆನಂದಿಸುತ್ತಿದ್ದವು

ಸುನಂದಾ ಊರಿಗೆ ಹೊರಡುವ ದಿನ ನಿಶ್ಚಯಿಸಿ ಗಂಡನಿಗೆ ಕಾಗದ ಬರೆದಿದ್ದಳು. ಇಂದಿರಮ್ಮನವರು ಮಗಳನ್ನು ಕರೆತಂದು ಬಿಟ್ಟು ಹೋಗುವು ದೆಂದು ನಿಶ್ಚಯವಾಯಿತು

ರೈಲಿಗೆ ಹೊರಡುವ ಮುನ್ನ ಜಾನಕಮ್ಮ ತಂಗಿಯನ್ನಪ್ಪಿ ಕಣ್ಣೀ ಗರೆದಳು. ಇಂದಿರಮ್ಮನವರ ದುಃಖಕ್ಕೆ ಪಾರವೇ ಇರಲಿಲ್ಲ

"ನಿನಗೆ ಹೊಸಸೀರೆ ಉಡಿಸುವಷ್ಟೂ ನನಗೆ ಯೋಗ್ಯತೆ ಇಲ್ಲದೆ ಹೋಯಿತು" ಎಂದು ಇಂದಿರಮ್ಮನವರು ದುಃಖ ತೋಡಿಕೊಂಡರು

ಸುನಂದೆಯ ಕಾಗದ ನೋಡಿ ಸುಂದರ ಅವಾಕ್ಕಾಗಿ ಕುಳಿತುಬಿಟ್ಟ. ಅವನ ಸ್ಥಿತಿ ನೋಡಿ ಏನೋ ಕೆಟ್ಟಸುದ್ದಿ ಬಂದಿದೆಯೆಂದು ಗಫೂರ್ ಭಾವಿಸ ಬೇಕಾಯಿತು

"ಏನಾಯಿತು ಸರ್ಕಾರ್, ಕಾಗದದಲ್ಲಿ ಏನು ಬರೆದಿದ್ದಾರೆ."

'ಇವತ್ತು ಬರುತ್ತಾರಂತೆ!"

"ಖುದಾ - ಪರವರ್ದಿಗಾರ್"

ಎಂದು ಗಫೂರ್ ನಿಟ್ಟುಸಿರುಬಿಟ್ಟ

ರಾತ್ರಿಗೆ ಹೊಟೇಲ್ ಆಲಿನ ಕೈಯಲ್ಲೇ ಊಟ ತೆಗೆಸಿಕೊಂಡು ಬರುವು ದೆಂದು ಸುಂದರ ಗಫೂರನಿಗೆ ತಿಳಿಸಿದ.

ಸ್ಟೇಷನ್ನಿಗೆ ಗಫೂರನೇ ಹೋಗಿ ಇಂದಿರಮ್ಮನವರನ್ನೂ ಸುನಂದನನ್ನೂ ಕರೆತರಬೇಕಾಯಿತು.

ಮನೆಯ ಅಚ್ಚುಕಟ್ಟು ಸುನಂದೆಗೆ ಆನಂದವನ್ನುಂಟುಮಾಡಿತು. ಮಾತು ಗಾಣದೆ ತೊಳಲುತ್ತಿದ್ದ ಗಂಡನನ್ನು

"ಸ್ಟೇಷನ್ನಿಗೆ ನೀವೇ ಬಂದಿದ್ದರೆ ಆಗುತ್ತಿರಲಿಲ್ಲವೇ ?"

"ಬರಬೇಕೊಂತಿದ್ದೆ. ಆದರೆ . . . . . . ."

ಸುನಂದ ಅವನ ಅವಸ್ಥೆ ನೋಡಿ ನಕ್ಕುಬಿಟ್ಟಳು.

ಮುಖಮಾರ್ಜನೆ ಮಾಡಿಕೊಂಡು ಸುನಂದೆ ಗಂಡನಿಗೆ ಒಂದು ತಟ್ಟೆಯಲ್ಲಿ ತಾನು ತಂದಿದ್ದ ತಿಂಡಿ ಸಾಮಾನು ಕೊಡುತ್ತಾ

"ಅಮ್ಮ ಸ್ನಾನ ಮಾಡಿ ಅಡಿಗೆ ಮಾಡುತ್ತಾಳೆ" ಎಂದಳು.

"ಮನೆಯಲ್ಲಿ ಅಡಿಗೆ ಸಾಮಾನೇ ಇಲ್ಲ ಸುನಂದಾ. ಅದೆಲ್ಲಾ ನಾಳೆಯಾಗಲಿ. ಹೊಟೇಲಿನಿಂದ ಊಟ ತರಿಸಿಟ್ಟಿದೇನೆ."

"ಅಮ್ಮ ಹೊಟೇಲು ಊಟ ಮಾಡುವುದಿಲ್ಲವಲ್ಲಾ." ಎಂದಳು.

ತನ್ನ ಅವಿವೇಕಕ್ಕೆ ಸುಂದರ ನಾಚಿ

"ಹಾಲು, ಹಣ್ಣು ತರಿಸಿಕೊಡುತ್ತೇನೆ."

ಎಂದು ಹೇಳಿ ಪರಿಸ್ಥಿತಿಯಿಂದ ಪಾರಾದ.

ಮಾರನೆಯ ಬೆಳಿಗ್ಗೆಯಿಂದ ಸುಂದರನ ಕ್ರಮವಾದ ಸಂಸಾರ ಆರಂಭವಾಯಿತು.

ನಾಲ್ಕು ದಿನ ಕಳೆಯಲು ಊರಿಗೆ ಹೋಗಲು ಇಂದಿರಮ್ಮನವರು ಆತುರರಾದರು.

"ಇದೇನಿಷ್ಟು ಅವಸರ"

"ಮನೆಯಲ್ಲಿ ಯಾರೂ ಇಲ್ಲವಂತೆ"

"ನಿಮ್ಮ ಅಕ್ಕ ನೋಡಿಕೊಳ್ಳುವುದಕ್ಕಾಗುವುದಿಲ್ಲವೆ ?—ನಿಮ್ಮ ತಾಯಿ ಇಲ್ಲೇ ಏಕೆ ಇರಬಾರದು."

"ಆ ವಿಷಯ ನಾನು ಪ್ರಸ್ತಾಪಿಸಿದೆ. ಅವಳು ಮೈಸೂರಿಗೇ ಹೋಗಿರಲು ಆಸೆಪಡುತ್ತಾಳೆ."

"ನಾಲ್ಕು ದಿನ ಇದ್ದು ಹೋಗಿ ಎಂದಾದರೂ ಹೇಳು."

"ಅವಳಿಷ್ಟೇ ಹಗರಣಮಾಡಿದರೂ ನಾಳೆ, ನಾಡಿದ್ದು ಕಳಿಸಿಕೊಡುವುದಿಲ್ಲ. ಭಾನುವಾರ ಪ್ರಯಾಣಮಾಡಲಿ."

"ನಾನೂ ನೀನೂ ಸೇರಿ ಅವರಿಗೆ ಔತಣಮಾಡಬೇಕು ಸುನಂದಾ."

"ಅಡಿಗೆ ನೀವು ಮಾಡುವಿರಾ ?"

"ಮಾಡುವುದಕ್ಕೆ ಸಿದ್ಧವಾಗಿದ್ದೇನೆ ಆದರೆ ನಿಮ್ಮ ತಾಯಿ ಊಟ ಮಾಡುವುದಕ್ಕೆ ಅನುಮಾನಿಸಬಾರದು."

"ನೀವು ಕಷ್ಟಪಡಬೇಡಿ. ನಾನೇ ಮಾಡುತ್ತೇನೆ."

"ನಿನಗೆ ಅಡಿಗೆಮಾಡುವುದಕ್ಕೆ ಬರುವುದೇ ?"

"ಚೆನ್ನಾಗಿ ಕೇಳುತ್ತೀರಿ. ಹೆಣ್ಣಾಗಿ ಅಡಿಗೆ ಬರುವುದಿಲ್ಲವೇ ?"

"ಬಿ.ಎ ಆನರ್ಸ್ ಮಾಡಿದವರು ಅಡಿಗೆ ಮಾಡುವುದು ಗೌರವಕ್ಕೆ ಕಡಿಮೆಯೆಂದು ಸಾಮಾನ್ಯವಾಗಿ ಭಾವಿಸುತ್ತಾರೆ."

"ನಾನು ಹಾಗೆ ಭಾವಿಸುವುದಿಲ್ಲ. ನಮ್ಮ ತಾಯಿ ನನಗೆ ಅಡಿಗೆ, ಕೆಲಸ ಎಲ್ಲಾ ಕಲಿಸಿದ್ದಾರೆ."

"ನನಗವರು ಮಹೋಪಕಾರಮಾಡಿದರು."

"ಏಕೆ ?"

"ನಿನಗೆ ಅಡಿಗೆ ಬರದಿದ್ದರೆ ನಾನು ಸೌಟು ಹಿಡಿಯಬೇಕಾಗುತ್ತಿತ್ತು."

"ಎಲ್ಲರ ಹಾಗೆ ನೀವೂ ವಿದ್ಯೆಕಲಿತ ಹುಡುಗಿಯರನ್ನು ಆಡಿಕೊಳ್ಳುತ್ತೀರಾ ?"

"ನಾನು ಆಡಿಕೊಳ್ಳುತ್ತಿಲ್ಲ ಸುನಂದಾ. ಜನ ಆಡಿಕೊಳ್ಳುವ ಹಾಗೆ ಹುಡುಗಿಯರು ವರ್ತಿಸುತ್ತಾರೆ ಅದಕ್ಕೆ ಹೇಳಿದೆ."

"ಅಮ್ಮ ಹೊರಡುವ ಮುನ್ನ . . . ."

"ಏನಾಗಬೇಕು."

"ಉಡುಗೊರೆ ಕೊಡಬೇಡವೇ ?"

"ಹೌದು ಹೌದು ಹಾಗೇ ನಿಮ್ಮಕ್ಕನಿಗೆ, ಅವರ ಇಬ್ಬರು ಮಕ್ಕಳಿಗೆ ಏನಾದರೂ ಕಳಿಸಿಕೊಡು. ಇನ್ನು ಮೇಲೆ ಈ ವಿಷಯಗಳೊಂದನ್ನೂ ಕೇಳಲೇಬೇಡ ಸುನೂ. ಗಫೂರ್ ಸಂಬಳ ತಂದು ನಿನ್ನ ಕೈಗೆ ಹಾಕುತ್ತಾನೆ - ಅದನ್ನು ಬೇಕಾದ ಹಾಗೆ ಖರ್ಚುಮಾಡಿಕೋ."

ಎಂದು ಹೇಳಿದ. ಸಂತೋಷದ ಭರದಲ್ಲಿ ಸುನಂದೆ ಎಲ್ಲವನ್ನೂ ತಾಯಿಗೆ

ವರದಿಮಾಡಿದಳು. ಇಂದಿರಮ್ಮನವರ ಕಣ್ಣುಗಳಲ್ಲಿ ಆನಂದಭಾಷ್ಪಗಳು ಉಕ್ಕಿ ಹರಿದವು.

"ನಿನ್ನ ನೋಡಿಕೊಂಡು ಜಾನಕಿಯ ದುಃಖ ಮರೆಯಬೇಕಾಗಿದೆ ಸುನಂದಾ" ಎಂದು ಹೇಳಿದರು.

ಮೊದಲೇ ನಿಶ್ಚಯಿಸಿದ್ದಂತೆ ಭಾನುವಾರ ಇಂದಿರಮ್ಮನವರು ಹೊರಟು ನಿಂತರು. ಸುನಂದಾ ಬಲವಂತದಿಂದ ಉಡುಗೊರೆಯ ಸೀರೆ, ಜಾನಕಿಗೆ ತಂದಿದ್ದ ಸೀರೆ, ಮಕ್ಕಳ ಬಟ್ಟೆಗಳನ್ನು ತಾಯಿಯ ಟ್ರಂಕಿನಲ್ಲಿ ತುಂಬ ಬೇಕಾಯಿತು.

ಸುನಂದಾ, ಸುಂದರ ಇಬ್ಬರೂ ಸ್ಟೇಷನ್ನಿಗೆ ಹೋಗಿ ಇಂದಿರಮ್ಮನವರನ್ನು ಗಾಡಿ ಹತ್ತಿಸಿ ಬಂದರು.

ಮನೆಗೆ ಬಂದಮೇಲೆ ಸುನಂದಾ ಮೌನವಾಗಿ ಕುಳಿತಳು. ಅವಳ ಅಳಲನ್ನು ಅರ್ಥಮಾಡಿಕೊಂಡು ಸುಂದರ

"ಇವತ್ತಿನಿಂದ ನೀನೇ ಅಡಿಗೆ ಕೆಲಸ ಆರಂಭಿಸಬೇಕು."

ಸುನಂದಾ ತಲೆಯಲ್ಲಾಡಿಸಿದಳು.

"ಇವತ್ತು ಅಡಿಗೆ ಮಾಡಬೇಡ ಸುನೂ. ಎಲ್ಲಾದರೂ ಹೊಟೇಲಿನಲ್ಲಿ ಊಟಮಾಡಿ, ಮಧ್ಯಾಹ್ನ, ಮ್ಯಾಟ್ನಿ ಪಿಕ್ಚರ್ ನೋಡಿಕೊಂಡು ಬರೋಣ. ರೆಕ್ಸ್‌ನಲ್ಲಿ 'ಫಾರ್ ಎವರ್ ಆ್ಯಂಬರ್' (For Ever Amber) ನಡೆಯುತ್ತಿರ ಬಹುದು."

ಗಂಡನ ತಿಳುವಳಿಕೆಗೆ ಸುನಂದಾ ತಲೆದೂಗಿದಳು.

"ಗಫೂರ್ ಊಟ."

"ಅವನೂ ಎಲ್ಲಾದರೂ ಹೊಟೇಲಿನಲ್ಲಿ ಊಟ ಮಾಡಿಬರಲಿ. ನಮ್ಮ ಸಪ್ಪೆ ಊಟ ಅವನಿಗೂ ಬೇಸರವಾಗಿರುತ್ತದೆ."

"ಲಾಲ್ ತರಕಾರಿ . . . ."

ಎನ್ನುತ್ತಾ ಸುನಂದಾ ನಕ್ಕಳು.

❀

ಅನಂತಯ್ಯನ ಮನಸ್ಸು ಅಸ್ತವ್ಯಸ್ತವಾಗಿ ಬಿಟ್ಟಿತ್ತು. ಮೈಸೂರಿಗೆ ಬಂದ ಕೆಲಸ ನಿರರ್ಥಕವಾಯಿತಲ್ಲಾ ಎಂಬ ಕೊರಗಿಗೂ ಹೆಚ್ಚಾಗಿ ಸಂಜೀವನ

ಪ್ರಣಯ ಪ್ರಸಂಗ ಅವನ ಮನಶ್ಯಾಂತಿಯ ಮೇಲೆ ಧಾಳಿ ನಡೆಸಿತ್ತು. ರೈಲಿನಲ್ಲಿ ಕುಳಿತವನು ತನ್ನಷ್ಟಕ್ಕೇ ಲೊಟಕಿಕೊಂಡ 'ಅಣ್ಣನದು ರಾಮಾಯಣ. ತಮ್ಮನದು ಮಹಾಭಾರತ. ಪಂಡಿತರು ಬದುಕಿದ್ದರೆ ಹೊಟ್ಟೆಗೆ ಹಾಲು ಹುಯ್ದುಕೊಳ್ಳುತ್ತಿದ್ದರು.'

ನಂಜನಗೂಡಿನಲ್ಲಿ ಇಳಿಯುವ ಉದ್ದೇಶವಿಲ್ಲದಿದ್ದರೂ ಸ್ಟೇಷನ್ ಕಂಡ ಕೂಡಲೆ ಇಳಿದು ನೇರವಾಗಿ ಲಾಯರ್ ಸೋಮಶೇಖರರಾಯರ ಮನೆಗೆ ಹೋದ. ಲಾಯರ್ ಮನೆಯಲ್ಲಿಯೇ ಸ್ನಾನ, ಊಟ ಮುಗಿಸಿ,

"ನಿಮ್ಮಲ್ಲಿ ಒಂದು ಕೆಲಸವಿಟ್ಟುಕೊಂಡು ಬಂದಿದ್ದೇನೆ ಸ್ವಾಮಿ." ಎಂದ.

"ಹೇಳಿ ಅನಂತಯ್ಯನವರೇ."

"ರಂಗಣ್ಣನ ವಿಷಯ ಕೇಳಿರಬಹುದು."

"ಕೇಳಿದೆನಪ್ಪಾ ಕೇಳಿದೆ. ಎಷ್ಟು ಅಚ್ಚುಮೆಚ್ಚಾಗಿದ್ದಳು ಜಾನಕಮ್ಮ, ಅವಳಿಗೇಕೆ ಈ ದುರ್ಬುದ್ಧಿ ಹುಟ್ಟಿತು"

"ಏನು ದುರ್ಬುದ್ಧಿ ?"

"ಗಂಡನನ್ನು ಬಿಟ್ಟು ಓಡಿಹೋಗುವುದು."

"ರಂಗಣ್ಣನಂಥ ಗಂಡನಜತೆ ಯಾರು ಬಾಳ್ವೆಮಾಡಲು ಸಾಧ್ಯಸಾರ್. ಆ ಮನುಷ್ಯ ದನಕ್ಕಿಂತ ಕಡೆ."

"ಅವನನ್ನೇ ತಿದ್ದಿಕೊಳ್ಳಬೇಕು. ಇದೆಲ್ಲಾ ಏನು ಚೆನ್ನ ಹೇಳಿ. ನೋಡಿದವರು ಆಕೆಯ ಮೇಲೆ ತಪ್ಪುಹೊರಿಸುತ್ತಾರ.

"ಆಕೆ ಒಳ್ಳೆಯ ತಾಯಿಯ ಮಗಳು ಸ್ವಾಮಿ ಇಲ್ಲದ ತಪ್ಪು ಹೊರಿಸಬಾರದು."

"ಗಂಡ ಹೆಂಡತಿ ವ್ಯಾಜ್ಯ ಪರಿಹಾರಮಾಡಲು ಸಾಧ್ಯವಿಲ್ಲವೇ ?"

"ಅದಕ್ಕೇ ನಾನು ಮೈಸೂರಿಗೆ ಹೋಗಿದ್ದೆ. ಪ್ರಯತ್ನವನ್ನೂ ಮಾಡಿದೆ."

"ಏನಾಯಿತು ನಿಮ್ಮ ಪ್ರಯತ್ನ.'

"ವಿಫಲವಾಯಿತು."

"ಮುಂದೆ . . . . "

"ದೇವರು ಮಾಡಿಸಿದ ಹಾಗಾಗಲಿ ಎಂದು ಸುಮ್ಮನಿರುವುದು."

"ಮೈಸೂರಿನಲ್ಲಿ ಸಂಜೀವನನ್ನು ಕಂಡಿದ್ದಿರಾ ? ಚೆನ್ನಾಗಿದ್ದಾನೆಯೇ ?"

“ಚೆನ್ನಾಗಿದ್ದಾನೆ. ಅವನ ವಿಷಯ ಪ್ರಸ್ತಾಪಮಾಡುವುದಕ್ಕೇ ನಾನು ಬಂದದ್ದು.”

“ಅವನಿಗೆ ಬೇಗ ಮದುವೆ ಮಾಡಿಸಿಬಿಡಬೇಕಪ್ಪಾ. ಆ ಜವಾಬ್ದಾರಿ ಪಂಡಿತರು ನನ್ನ ತಲೆಯಮೇಲೆ ಹಾಕಿದ್ದಾರೆ.”

“ಅವನ ಭಾಗದ ಆಸ್ತಿಯನ್ನೆಲ್ಲಾ ವಹಿಸಿಬಿಟ್ಟಿರಾ?”

“ಹೋದವರ್ಷವೇ ವಹಿಸಿಬಿಟ್ಟೆನಲ್ಲಾ. ಮದುವೆಗೇಂತ ಅವರ ತಂದೆ ಐದುಸಾವಿರ ರೂಪಾಯಿ ನಗದುಕೊಟ್ಟಿದ್ದರು. ಅದು ನನ್ನಲ್ಲಿದೆ.”

“ಅವನು ಬಂದು ಕೇಳಿದರೆ ನೀವು ಅದನ್ನು ಕೊಟ್ಟುಬಿಡಬೇಕಾಗುತ್ತದೆ.”

“ಕೊಡದೇ ಉಂಟೇ. ಅವನ ಹಣ ನಾನು ಎಷ್ಟುದಿವಸ ಇಟ್ಟು ಕೊಂಡಿರಲಿ. ಆದರೆ ಮದುವೆ ನಿಶ್ಚಯವಾದರೆ ಹಣ ಕೊಡುವುದು.”

“ನಿಶ್ಚಯಮಾಡಿಕೊಂಡಿದ್ದಾನೆ ಸ್ವಾಮಿ - ನಿಶ್ಚಯಮಾಡಿಕೊಂಡಿದ್ದಾನೆ.”

“ಸಂತೋಷ. ಯಾರು ಹೆಣ್ಣು.”

“ಒಬ್ಬ ಕಿರಸ್ತಾನರವಳು.”

“ಹಾ! ಕಿರಿಸ್ತಾನರವಳೇ. ಚಿನ್ನದಂಥ ಹುಡುಗನ ಬಗ್ಗೆ ಇಲ್ಲದ್ದು ಸಲ್ಲದ್ದು ಹೇಳುವಿರಲ್ಲಾ ಅನಂತಯ್ಯ.”

“ನಾನೇ ಕಣ್ಣಾರೆ ಕಂಡೆ. ಅವನನ್ನೇ ಕೇಳಿದೆ. ನನ್ನ ಕ್ಲಾಸ್ ಮೇಟು ಎಂದು ಹೇಳಿದ. ಇದೆಲ್ಲಾ ಸರಿಯಲ್ಲ ಎಂದು ಬುದ್ಧಿಯೂ ಹೇಳಿದೆ.”

“ಅದಕ್ಕೆ ಅವನು ಏನಂದ?”

“ಆಡಿಕೊಳ್ಳುವವರ ಬಾಯಿಗೆ ಬುಟ್ಟಿಕಟ್ಟಲಾಗುವುದೇ ಎಂದು ಹೇಳಿದ. ಅದರ ಮೇಲೆ ನೀವೇ ಅರ್ಥಮಾಡಿಕೊಳ್ಳಿ.”

“ಆಕೆ ಕ್ಲಾಸ್‌ಮೇಟೇ ಆಗಿರಬಹುದು”

“ಎಲ್ಲಾ ಹಾಗೇ ಸ್ವಾಮಿ ಆರಂಭವಾಗುವುದು - ಚಿನ್ನದಂಥ ಹುಡುಗ - ಸ್ವತಂತ್ರವಾಗಿದ್ದಾನೆ - ಉಣ್ಣುವುದಕ್ಕೆ ಉಡುವುದಕ್ಕೆ ಸಾಕಷ್ಟಿದೆ. ಇಂಥ ಹಕ್ಕಿ ಸಿಕ್ಕಿದರೆ ಯಾವ ಗಿಡುಗ ಬಿಡತ್ತೆ ಹೇಳಿ. ಕಿರಿಸ್ತಾನರು ನಮ್ಮವರನ್ನು ಜಾತಿ ಕೆಡಿಸೋದೇ ಹೀಗೆ - ಒಂದು ಹೆಣ್ಣು ಹಕ್ಕಿ ಛೂಬಿಟ್ಟು, ಬಲೆಯಲ್ಲಿ ಪಶುವನ್ನು ಕೆಡವಿಕೊಳ್ಳುವುದು.”

"ಹಾಗೇಂತೀರಾ ?"

"ನನ್ನ ಮಾತಿನಲ್ಲಿ ನಿಮಗೆ ಅನುಮಾನವಿದ್ದರೆ ನೀವೇ ಹೋಗಿ ಪರಾಂಬರಿಸಿ ಬನ್ನಿ."

"ಕಾಲ ಎಲ್ಲೀಗೆ ಬಂತು ಅನಂತಯ್ಯನವರೇ. ಪಂಡಿತರು ಮಹಾ ಶ್ರೋತ್ರೀಯರು. ಅವರ ಮಗ ಕಿರಿಸ್ತಾನರವಳನ್ನು ಕಟ್ಟಿಕೊಂಡರೆ ಏನು ಗತಿ ?"

"ಗತಿಯೇನು - ಹಿಂದೂಧರ್ಮ ನಾಶವಾಗಿಹೋಗತ್ತೆ."

"ನನ್ನ ಏನು ಮಾಡೂಂತೀರಿ."

"ಶತಾಯಗತಾಯ ಈ ಸಂಬಂಧ ತಪ್ಪಿಸಿ, ಸಂಜೀವನಿಗೆ ಸರಿಯಾದ ಹೆಣ್ಣು ನೋಡಿ ಲಗ್ನ ಕೂಡಲೆ ಮಾಡಿಸಬೇಕು."

"ನಾನು ಅವರ ಮನೆ ಲಾಯರೇ ವಿನಾ ನ್ಯಾಯಾಧೀಶನಲ್ಲ ಅನಂತಯ್ಯ. ನನ್ನ ಮಾತಿಗೆ ಸಂಜೀವ ಬೆಲೆಕೊಡುತ್ತಾನೆಂದು ಹೇಗೆ ಹೇಳುವುದು."

"ನೀವು ಅವನ ತಂದೆಯ ಸ್ನೇಹಿತರು. ನಿಮ್ಮನ್ನು ಎದುರಿಸುವಷ್ಟು ಹುಡುಗನಿಗೆ ಧೈರ್ಯವಿಲ್ಲ ಕಿರಿಸ್ತಾನರವಳನ್ನು ಕಟ್ಟಿಕೊಳ್ಳುವ ಹಾಗಿದ್ದರೆ ಈ ಐದುಸಾವಿರ ಕೊಡುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿಬಿಡಿ."

"ನಾನು ಹೇಳುವುದು ಸಾಧ್ಯವಿಲ್ಲ ಅನಂತಯ್ಯ. ಆ ಹಣ ಸಂಜೀವನ ಲಗ್ನಕ್ಕೆ ವಿನಿಯೋಗವಾಗಬೇಕೆಂದು ಪಂಡಿತರು ವಿಲ್‌ನಲ್ಲಿ ಬರೆದಿಟ್ಟಿದ್ದಾರೆ. ಅದರಲ್ಲಿ ಹುಡುಗಿ ಹಿಂದುವೇ ಆಗಿರಬೇಕೆಂದು ಕಡ್ಡಾಯವಿಲ್ಲ. ಹಣಕ್ಕೆ ಸಂಜೀವ ನನ್ನ ಮೇಲೆ ದಾವಾಮಾಡಿ ವಸೂಲ್ಮಾಡಿಕೊಳ್ಳಬಹುದು"

"ಇದಕ್ಕೆ ಪರಿಹಾರವೇನೆಂಬುದನ್ನು ನೀವೇ ಆಲೋಚಿಸಿ ಸ್ವಾಮಿ. ದೊಡ್ಡ ಲಾಯರು, ನಿಮಗೆ ನಾನು ಹೇಳಿಕೊಡುವುದೇನಿದೆ."

"ರಂಗಣ್ಣನ ಕಿವಿಯ ಮೇಲೆ ಒಂದು ಮಾತು ಹಾಕಿದರೆ."

"ಹಾಕಿದರೆ ಏನು ಪ್ರಯೋಜನ. ಸಮುದ್ರ ಹಾರಿದ ಹನುಮಂತ ರಾಯನ ಹಾಗೆ ಅವನು ಆಕಾಶಕ್ಕೆ ನೆಗೆಯುತ್ತಾನೆ - ಮನೆ ಸೂರು ಕಿತ್ತುಬರುವ ಹಾಗೆ ಕಿರಿಚಿಕೊಳ್ಳುತ್ತಾನೆ."

"ಅತ್ತಿಗೆ ಕಂಡರೆ ಸಂಜೀವನಿಗೆ ತುಂಬ ಗೌರವ. ಜಾನಕಮ್ಮನ ಕೈಯಲ್ಲಿ ಒಂದು ಮಾತು ಹೇಳಿಸಿದರೆ . . . . '

"ಅವರ ಸಂಸಾರವೇ ಡೊಂಕಾಗಿರುವಾಗ ಇನ್ನೊಬ್ಬರ ಸಂಸಾರ ತಿದ್ದಲು ಅವರು ಬರುತ್ತಾರೆಯೇ ?"

"ನಿಜ. ಏನು ಮಾಡುವುದು ನೀವೇ ಹೇಳಿ."

"ನೀವೇ ಯಜಮಾನ್ಯವಹಿಸಿ ಸಂಜೀವನ ಕಿವಿಹಿಂಡಬೇಕು."

ಕಿವಿಹಿಂಡುವುದಕ್ಕೆ ಸೋಮಶೇಖರರಾಯರು ಸಿದ್ಧವಾಗಿದ್ದರು, ಹಿಂಡಿಸಿಕೊಳ್ಳುವುದಕ್ಕೆ ಸಂಜೀವ ಸಿದ್ಧವಾಗಿದ್ದಾನೆಯೇ ಎಂಬ ಯೋಚನೆ ಅವರನ್ನು ಮುತ್ತಿತು. ರಾಯರು ದೀರ್ಘವಾಗಿ ಆಲೋಚಿಸುತ್ತ

"ಆಗಲಿ ಅನಂತಯ್ಯನವರೇ, ಏನು ಮಾಡಬೇಕೆಂಬುದನ್ನು ಯೋಚಿಸುತ್ತೇನೆ" ಎಂದರು.

"ನಿಮ್ಮ ನೂರೆಂಟು ಕೆಲಸಗಳಲ್ಲಿ ಮರೆತುಹೋಗುವ ಸಂಭವವಿದೆ. ಅಲ್ಲದೆ ಇದು ಕಾಲಾವಕಾಶ ಮಾಡುವ ವಿಚಾರವೂ ಅಲ್ಲ. ಈ ವಾರ - ಮುಂದಿನ ವಾರಗಳಲ್ಲಿ ನೀವು ಮೈಸೂರಿಗೆ ಹೋಗಿಯೇ ಬರಬೇಕು ಸ್ವಾಮಿ."

"ಹೋಗಿ ಬರುತ್ತೇನೆ"

ಎಂದು ಅವರು ಆಶ್ವಾಸನ ಕೊಟ್ಟಮೇಲೇ ಅನಂತಯ್ಯ ಆ ಸ್ಥಳ ಬಿಟ್ಟು ಎದ್ದದ್ದು.

ಅಂದೇ ಚಾಮರಾಜನಗರ ಸೇರಿದರೂ ಅನಂತಯ್ಯ ಕೂಡಲೆ ರಂಗಣ್ಣನನ್ನು ನೋಡಲೆತ್ನಿಸಲಿಲ್ಲ. ಮಾರನೆಯ ದಿವಸ ಸಾವಕಾಶನಾಗಿ ರಂಗಣ್ಣನ ಮನೆಯ ಕಡೆಹೋದ. ಮೈಸೂರಿನಲ್ಲಿ ಆದ ಅನುಭವದಿಂದ ರಂಗಣ್ಣ ಭೂಮಿಗಿಳಿದು ಹೋಗಿರಬೇಕೆಂದು ಅನಂತಯ್ಯ ಎಣಿಕೆ ಹಾಕಿಕೊಂಡಿದ್ದ. ರಂಗಣ್ಣ, ಎಂದಿನಂತೆ ನಿತ್ಯಗೆಲಸದಲ್ಲಿ ಉದ್ಯುಕ್ತನಾಗಿ ಹರ್ಷಚಿತ್ತನಾಗಿಯೇ ಇದ್ದ. 'ಇದು ಪಶು ಎನ್ನುವುದರಲ್ಲಿ ಸಂದೇಹವೇ ಇಲ್ಲ' ಎಂದುಕೊಂಡೇ ಅನಂತಯ್ಯ ಮನೆಯೊಳಗೆ ಕಾಲಿಟ್ಟ.

"ಯಾವಾಗ ಬಂದೆ ಅನಂತೂ"

"ನಿನ್ನೆ ರಾತ್ರಿ ಬಂದೆನಪ್ಪಾ."

"ನನ್ನ ತಮ್ಮ ಸಿಕ್ಕಿದ್ದನೋ ?"

"ಇಲ್ಲ. ನಾನು ಆ ಕಡೆ ಹೋಗಲಿಲ್ಲ"

ಎಂದು ಉದ್ದೇಶಪೂರ್ವಕವಾಗಿಯೇ ಅನಂತಯ್ಯ ಸುಳ್ಳು ಹೇಳಿ

"ಮೈಸೂರಿಗೆ ನಾವು ಹೋದದ್ದು ತೀರ ಅಷ್ಟು ಆಭಾಸವಾಗುತ್ತದೆ ಯೆಂದು ನಾನು ಭಾವಿಸಿರಲಿಲ್ಲ ರಂಗಣ್ಣಾ."

"ಇನ್ನು ಎಲ್ಲರೂ ನನ್ನ ಮೇಲೆ ಗೂಬೆಕೂರಿಸಿ ನನ್ನ ಹೆಸರು ಹೇಳಿ ಶಂಖ ಬಾರಿಸುತ್ತಾರೆ"

"ಜಾನಕಮ್ಮನವರ ಮನಸ್ಸು ಅಷ್ಟು ಕಠಿಣವಾಗುವುದರ ಕಾರಣ ವೇನು ?"

"ಹೋಗಲಿ ಬಿಡೋ - ಏನು ಹಾಳುಮಾತು.'

"ಅವರನ್ನು ಮನೆಗೆ ಬರಮಾಡಿಕೊಳ್ಳುವ ಪ್ರಯತ್ನ ಬಿಟ್ಟೇಬಿಡು ವೆಯೋ ?"

"ಏನು ಮಾಡೆನ್ನುವೆ - ನೀನು ಹೇಳಿದಹಾಗೆ ಮಾಡಿದೆ - ಅವಳ ಕಾಲ ಮೇಲೆ ಬಿದ್ದೆ. ಎಲ್ಲೂ ಇಲ್ಲದ ಬಿಗುಮಾನ ಅವಳಿಗೆ ಬಂದಿದ್ದರೆ ನಾನೇನು ಮಾಡಲಿ. ಅಹಂಕಾರಕ್ಕೆ ಉದಾಸೀನವೇ ಮದ್ದು."

"ಸ್ವಯಂಪಾಕ ಮಾಡಿಕೊಂಡು ಎಷ್ಟು ದಿವಸ ಕಾಲ ಹಾಕುತ್ತೀಯೋ ರಂಗಣ್ಣಾ. ಊಟ ತಿಂಡಿಯೆಂದರೆ ನಿನಗೆ ಪಂಚಪ್ರಾಣ."

"ಬೇರ ಮದುವೆಮಾಡಿಕೊಳ್ಳುವುದನ್ನು ನಿಶ್ಚಯಮಾಡಿದ್ದೀನಿ ರಂಗಣ್ಣಾ".

"ನಿನ್ನ ಮೊದಲನೆಯ ಮದುವೆ ವಿಷಯ ತಿಳಿದೂ ನಿನಗೆ ಯಾರು ಹೆಣ್ಣುಕೊಡುತ್ತಾರೆ."

"ಅಯ್ಯೋ ಹುಚ್ಚಪ್ಪ. ಯಾವ ಲೋಕದಲ್ಲಿದ್ದೀ ನೀನು. ನನಗೆ ಹೆಣ್ಣುಕೊಡುವವರಿಗೆ ಅಭಾವವೇ. ಮುಂದಗೆರೆಯಲ್ಲಿ ನಮ್ಮವರೇ ಒಬ್ಬರು ಶಾನುಭೋಗರಿದ್ದರು. ಅವರು ಹರಹರಾ ಎಂದರು. ಅವರ ಮಗಳು ಬೆಳೆದ ಹುಡುಗಿ ಒಂದಿದೆ - ವಯಸ್ಸು ಹತ್ತೊಂಭತ್ತೋ ಇಪ್ಪತ್ತೋ ಆಗಿದೆಯಂತೆ. ಹುಡುಗಿ ತಾಯಿ ಕೂಲಿ ನಾಲಿ ಮಾಡಿ ಸಂಸಾರ ಸಾಗಿಸುತ್ತಿದ್ದಾಳಂತೆ - ನಿಂತ ಗಳಿಗೆಯಲ್ಲಿ ಮದುವೆ ಮಾಡಿಕೊಡಲು ಸಿದ್ಧವಾಗಿದ್ದಾಳೆ."

"ಈ ಸಂಬಂಧ ಹೇಗೆ ಪತ್ತೆ ಹಚ್ಚಿದ."

"ಹುಡುಗಿ ಸೋದರ ಮಾವ ಒಬ್ಬನಿದ್ದಾನೆ. ಈಗವನು ಚನ್ನರಾಯ ಪಟ್ಟಣದಲ್ಲಿ ಸ್ಕೂಲ್ ಮೇಷ್ಟ್ರು. ನಮ್ಮ ತಂದೆಯವರು ಇದ್ದಾಗ ಅವನು ಆಗಾಗ್ಗೆ ಇಲ್ಲಿಗೆ ಬರುತ್ತಿದ್ದ - ಮೈಸೂರಿನಿಂದ ನಾನು ಬರುವಾಗ ಕಡಕೊಳ

ಸ್ಟೇಷನ್ನಿನಲ್ಲಿ ಅವನೂ ರೈಲು ಹತ್ತಿದ. ವಿಷಯ ಪ್ರಸ್ತಾಪಿಸಿದ. ನನ್ನ ಅಭಿಪ್ರಾಯ ಸೂಕ್ಷ್ಮವಾಗಿ ತಿಳಿಸಿದೆ. ಊರಿಗೆ ಹೋಗಿ ಅಕ್ಕನನ್ನು ಕೇಳಿ ಕಾಗದ ಬರೆಯುವುದಾಗಿ ಹೇಳಿದ. ಇಲ್ಲಿ ನೋಡು ಅವನ ಕಾಗದ." ಎಂದು ಗೂಡಿನಲ್ಲಿ ಲಕ್ಷ್ಮೀನಾರಾಯಣಸ್ವಾಮಿಯ ಮಣ್ಣಿನ ಬೊಂಬೆಯ ಹಿಂದಿಟ್ಟಿದ್ದ ಕಾಗದವನ್ನು ತೆಗೆದು ಅನಂತಯ್ಯನ ಕೈಗಿತ್ತ

## ಮುಂದಗೆರೆ

**"ಮ॥ರಾ॥ ರಂಗಣ್ಣನವರ ಸ॥ಕ್ಕೆ- ದೇವರಯ್ಯ ಮಾಡುವ ವಿಜ್ಞಾಪನೆಗಳು- ಉಭಯಕ್ಷೇಮ. ಸಾಂಪ್ರತ.**

**ತಮ್ಮಲ್ಲಿ ಪ್ರಸ್ತಾಪ ಮಾಡಿದ ವಿಷಯವನ್ನು ನನ್ನ ಮ॥ಶ್ರೀ॥ ಅಕ್ಕನವರಲ್ಲಿ ಮಾತಾಡಿದೆ. ತಮ್ಮ ಸಂಬಂಧ ಫಲಿಸಿ ಈ ದಾಂಪತ್ಯ ಕೈಗೂಡಿದರೆ ನಾವು ಬಹಳ ಪುಣ್ಯವಂತರು. ತಮ್ಮ ಉತ್ತರವನ್ನು ಚನ್ನರಾಯಪಟ್ಟಣಕ್ಕೇ ಬರೆಯಬೇಕಾಗಿ ಪ್ರಾರ್ಥನೆ.**

**ಇಂತೀ ವಿಜ್ಞಾಪನೆಗಳು.'**

ಅನಂತಯ್ಯನ ಉಸಿರೇ ಕಟ್ಟಿಹೋಯಿತು. ಸುಧಾರಿಸಿಕೊಂಡು - ಸಾವಕಾಶವಾಗಿ

"ಇಷ್ಟು ಅವಸರ ಪಡಬೇಡ ರಂಗಣ್ಣ ಕಾರ್ಯ ಕೈಮೀರಿಹೋಗಿದೆ ಎಂದು ನನಗೆ ಇನ್ನೂ ಅನಿಸಲೊಲ್ಲದು. ನಾಲ್ಕು ದಿವಸ ಕಳೆದರೆ ಜಾನಕಮ್ಮ ತಾವೇ ದಾರಿಗೆ ಬರುತ್ತಾರೆ."

"ಅವಳಿಗೆ ವಿವೇಕ ಬರುವ ಹೊತ್ತಿಗೆ ನನ್ನ ತಿಥಿ ಆಗಿಹೋಗಿರುತ್ತದೆ ನಾನೇಕಯ್ಯ ಅವಳ ಮರ್ಜಿ ಕಾಯಬೇಕು."

"ಮೈನರ್ ಮಗ ಅವರ ವಶದಲ್ಲಿದ್ದಾನೆಂಬುದನ್ನು ಮರೆಯಬೇಡ "

"ಅವರಜ್ಜನ ಆಸ್ತಿ ಅವನಿಗೆ ಕೊಡುವುದಕ್ಕೆ ನಾನು ಸಿದ್ಧವಾಗಿಯೇ ಇದ್ದೇನೆ."

"ಮನೆ ಜಗಳ ಮನೆಯಲ್ಲಿಯೇ ಪರಿಹರಿಸಿಕೊಂಡರೆ ಚೆನ್ನ. ಅದು ಬೀದಿ ಹಗರಣವಾದರೆ ಯಾರಿಗೆ ಹಿತ ಹೇಳು "

"ನಿಜ ಅನಂತ. ನಿನ್ನ ಮಾತು ಒಪ್ಪಿದೆ. ಬೀದಿ ಹಗರಣವಾಡುತ್ತಿರುವವನು ನಾನೋ ಜಾನಕಿಯೋ ?"

"ಅವರ ಮೊಂಡುತನ ನಾನೊಪ್ಪಿದೆನೆಂದು ಹೇಳಿದೆನೇ ?"

"ನಿನ್ನ ಮಾತಿನಂತೆಯೇ ಆಗಲಪ್ಪಾ. ಇನ್ನೂ ಒಂದು ಕಾಗದ ಬರೆಯುತ್ತೇನೆ ಅವರ ಹಣೇಬರಹ ಏನಾಗುತ್ತದೆ ನೋಡಿಕೊಂಡು ಮುಂದಿನ ವಿಷಯ ನಿರ್ಧರಿಸುತ್ತೇನೆ. ಆಗಬಹುದೋ ?"

"ಆಗಬಹುದು ಕಾಗದ ನಾನು ಹೇಳಿದಂತೆ ಬರೆಯಬೇಕು."

"ಒಳ್ಳೆಯ ವಿಚಿತ್ರ ಸ್ನೇಹಿತ ಗಂಟುಬಿದ್ದೆಯಯ್ಯಾ. ಹೇಳು - ಏನು ಬರೆಸುತ್ತೀಯೋ."

"ಕಾಗದ, ಪೆನ್ ತೆಗೆದುಕೋ."

ರಂಗಣ್ಣ ಕಾಗದ, ಪೆನ್ ಜತೆಮಾಡಿಕೊಂಡು ಬಂದು ಕುಳಿತ.

"ಒಕ್ಕಣೆ ನೀನು ಬರೆಯುವ ಹಾಗೆ ಬರಿ."

"ಒಕ್ಕಣೆ ಇರಲಿ - ಮುಂದಿನದು ಹೇಳು."

**" 'ನಾನೂ ನನ್ನ ಸ್ನೇಹಿತ ರಂಗಣ್ಣನೂ ಮೈಸೂರಿಗೆ ಬಂದು ಹೋದದ್ದು ನಿನಗೆ ನೆನಪಿರಬಹುದು. ನನ್ನ ಮೇಲ ನಿನಗಷ್ಟು ಕೋಪವಿದ್ದರೂ ಮುಖ ಕಂಡಕೂಡಲೆ ಅದನ್ನು ಮರೆಯುವೆ ಎಂದು ಭಾವಿಸಿದ್ದೆ. ನಿನ್ನ ಕೋಪ ಇನ್ನೂ ಆರಿಲ್ಲ. ಈಗಲೂ ಹಳೆಯ ಕಥೆ ಮರೆತು ನೀನು ಇಲ್ಲಿಗೆ ಬಂದು ನನ್ನೊಂದಿಗೆ ಸಂಸಾರಮಾಡಿಕೊಂಡಿರಬೇಕೆಂದು ನಾನು ಬಯಸುತ್ತೇನೆ. ನಾವು ಅನೇಕ ವರ್ಷಗಳು ಜತೆಯಲ್ಲಿ ಕಳೆದಿದ್ದೇವೆ. ಅದನ್ನು ಜ್ಞಾಪಿಸಿಕೊಂಡು, ನಮ್ಮ ಮಕ್ಕಳ ಯೋಗಕ್ಷೇಮವನ್ನೂ ಲಕ್ಷ್ಯದಲ್ಲಿಟ್ಟುಕೊಂಡು ನೀನು ಕೋಪ ಬಿಡುವುದೊಳ್ಳೆಯದು. ಸಮಾಧಾನಚಿತ್ತಳಾಗಿ ಎಲ್ಲಾ ಸಾಧಕ ಬಾಧಕಗಳನ್ನೂ ಆಲೋಚಿಸಿ ಕೂಡಲೆ ಉತ್ತರ ಬರೆಯುವೆಯೆಂದು ನಂಬಿದ್ದೇನೆ.—'**

ಇಷ್ಟೇ ಸಾಕು."

"ಸಾಲದು ಅನಂತೂ - ಸಾಲದು. ಮುಂದೆ ನಾನು ಬರೆಯಬೇಕಾದದ್ದು ಸ್ವಲ್ಪ ಇದೆ. ಅದನ್ನೂ ಕೇಳು.

**" 'ನಿನ್ನ ಉತ್ತರಕ್ಕೆ ಒಂದುವಾರ ಕಾಯುತ್ತೇನೆ. ಇಲ್ಲಿಗೆ ಬರುತ್ತೇನೆಂದು ಒಂದು ವಾರದೊಳಗೆ ನೀನು ಬರೆಯದಿದ್ದರೆ ಮುಂದಿನ ವಿಚಾರಮಾಡಲು ನಾನು ಸ್ವತಂತ್ರನಾಗಿದ್ದೇನೆ. ನನ್ನ ಆಸ್ತಿಯ ಮೇಲೆ ನಿನಗಾಗಲಿ ಮಕ್ಕಳಿಗಾಗಲಿ ಯಾವ ಹಕ್ಕೂ ಉಳಿಯುವುದಿಲ್ಲ. ನನ್ನ ಎರಡನೆಯ ಹೆಂಡತಿ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳಿಗೆ ಸಮಸ್ತ ಚರ, ಸ್ಥಿರ ಆಸ್ತಿಯೂ ಸೇರುತ್ತದೆ.' "**

"ಅದು ನನಗೆ ಸಮರ್ಪಕವಾಗದಿದ್ದರೆ. . . . "

"ನೀನೇ ಹೆಣ್ಣನ್ನು ಚುನಾಯಿಸಿ ತಿಳಿಸು. ಮನೆತನಸ್ಥರ ಮನೆ ಹುಡುಗಿಯಾಗಿರಲಿ - ನಿಮ್ಮ ಜಾತಿಯದೇ ಆಗಿರಲಿ. ಮುಸ್ಲಿಮರು, ಕ್ರೈಸ್ತರು, ವಿಲಾಯಿತಿಯವರು - ಇವರ ಬೀಗತನ ಬೇಡ."

"ಅನಂತಯ್ಯನವರು ಕೀಟಲೆ ಹಚ್ಚಿದ್ದಾರೆ."

"ಕೀಟಲೆ ಏನಲ್ಲ - ನೀನು ಕ್ರಿಶ್ಚಿಯನ್ ಹುಡುಗಿಯೊಬ್ಬಳ ಜತೆ ಬಹಳ ಸಲಿಗೆಯಾಗಿದ್ದೀ ಎಂದು ತಿಳಿಸಿದರು."

"ಅವಳನ್ನೇ ಮದುವೆಯಾಗುತ್ತಾನೆ ಎಂದು ತಿಳಿಸಲಿಲ್ಲವೇ ?"

"ಆದರೂ ಆಗಬಹುದು ಎಂದರು."

"ತುಂಬ ಉಪಕಾರಮಾಡಿದರು."

"ಏಕೆ ? ಅವರು ಹೇಳಿದ್ದು ಸುಳ್ಳೇ ?"

"ಸುಳ್ಳೂ ಅಲ್ಲ - ನಿಜವೂ ಅಲ್ಲ."

"ಆಕೆ ನಿನ್ನ ಕ್ಲಾಸ್‌ಮೇಟ್ ಅಂತೆ ?"

"ಸ್ಕೂಲ್‌ಮೇಟ್."

"ಇಲ್ಲಿಗೆ ಬಂದು ಹೋಗುತ್ತಿರುತ್ತಾಳಂತೆ."

"ಹೌದು."

"ಈ ವಿಧವಾದ ಬಳಕೆ ಅಪಾರ್ಥಕ್ಕೆ ಅವಕಾಶ ಮಾಡಿಕೊಡುತ್ತದೆ."

"ಅಪಾರ್ಥ ಈಗ ಆಗಿಯೇ ಇದೆಯಲ್ಲ"

"ನಾನು ಯಾವ ಆಪಾದನೆಯನ್ನೂ ಹೊರೆಸುತ್ತಿಲ್ಲ ಸಂಜೀವ - ನೀನು ಹುಡುಗ - ಲೋಕದ ರೀತಿ ನೀತಿಗಳ ಪರಿಚಯ ನಿನಗಿಲ್ಲ - ಯಾವದಾದರೂ ಚಂಡಾಲ ಹೆಣ್ಣು ನಿನ್ನ ಅಡ್ಡದಾರಿಗೆ ಎಳೆದೀತು ಎಂದು ಎಚ್ಚರಕೊಡಬೇಕಾದುದು ನಮ್ಮ ಕರ್ತವ್ಯವಲ್ಲವೇ ?"

"ನೀವು ಯಾವ ಹೆಣ್ಣಿನ ವಿಷಯ ಚರ್ಚೆಮಾಡುತ್ತಿರುವಿರೋ ಆಕೆಯನ್ನು ನೋಡ ಬಯಸುವಿರಾ ?"

"ಆಕೆಯನ್ನು ನಾನೇಕೆ ನೋಡಬೇಕು."

"ಅವಳು 'ಚಂಡಾಲ ಹೆಣ್ಣು' ಹೌದೇ ಅಲ್ಲವೇ ಎಂಬುದನ್ನು ನಿಶ್ಚಯ ಮಾಡಿಕೊಳ್ಳುವುದಕ್ಕೆ."

"ವ್ಯಂಗ್ಯವಾಗಿ ಮಾತನಾಡುತ್ತಿರುವೆ ಸಂಜೀವ."

"ಇದರಲ್ಲಿ ವ್ಯಂಗ್ಯವೆಲ್ಲಿ ಬಂತು ಸಾರ್. ಒಂದುವೇಳೆ ನಾಳೆ ಅವಳನ್ನೇ ನಾನು ಮದುವೆ ಮಾಡಿಕೊಳ್ಳಲು ನಿಶ್ಚಯಿಸಿದರೆ, ನೀವು ಮೊದಲೇ ನೋಡಿದ್ದಿರಿ ಎನ್ನುವ ಸಮಾಧಾನ ನನಗಿರುತ್ತದೆ."

"ಅನಂತಯ್ಯನವರು ಹೇಳಿದ ವಿಷಯ ಸುಳ್ಳಲ್ಲ ಕ್ರಿಶ್ಚಿಯನ್ ಹುಡುಗಿಯನ್ನು ಮದುವೆಯಾಗಲು ನೀನು ನಿಶ್ಚಯಿಸಿರುವ ಹಾಗಿದೆ."

"ಜಯದೇವ ಅಗಸರವಳನ್ನು ಮದುವೆಯಾದನಂತೆ, ಜಗನ್ನಾಥ ಪಂಡಿತ ಮುಸ್ಲಿಮ ಕನ್ಯೆಯಲ್ಲಿ ಅನುರಕ್ತನಾದನಂತೆ, ಬಾಜೀರಾಯ ಮುಸ್ಲಿಮ ಸ್ತ್ರೀಯೊಡನೆ ಸಂಸಾರವನ್ನೇ ಮಾಡಿದನಂತೆ - ನಾನೇಕೆ ಕ್ರಿಶ್ಚಿಯನ್ ಹುಡುಗಿಯನ್ನು ಮದುವೆಯಾಗಬಾರದು."

"ಕಾವ್ಯಶೃಂಗಾರಕ್ಕೂ ಜೀವನಕ್ಕೂ ಬಹಳ ವ್ಯತ್ಯಾಸವಿದೆಯಪ್ಪ."

"ಜಯದೇವ, ಜಗನ್ನಾಥ ಪಂಡಿತ, ಬಾಜೀರಾಯ ಕಾವ್ಯವ್ಯಕ್ತಿಗಳಲ್ಲ ಸ್ವಾಮಿ - ಜೀವಿಸಿದ್ದ ವ್ಯಕ್ತಿಗಳು."

'ಕ್ರಿಶ್ಚಿಯನ್ ಹುಡುಗಿಯ ಕೈಹಿಡಿದು ಎಲ್ಲರನ್ನೂ ದೂರಮಾಡಿಕೊಳ್ಳುವೆಯಾ ?"

"ಎಲ್ಲರೂ ಎಂದರೆ ಯಾರು ?"

"ನಿನ್ನ ಬಂಧು - ಬಳಗ - ಮಿತ್ರರು."

"ನನ್ನ ಬಂಧು ಬಳಗಕ್ಕೂ ನನಗೂ ಇರುವ ಸಂಬಂಧ ನಿಮಗೆ ಗೊತ್ತೇ ಇದೆ ಇರುವ ಒಬ್ಬ ಅಣ್ಣಕೂಡ ಬದುಕಿರುವೆಯಾ, ಸತ್ತೆಯಾ ಎಂದು ಕೇಳುವುದಿಲ್ಲ. ಇನ್ನು ಮಿತ್ರರು - ಅವರಿಗೂ ನನ್ನ ಗೃಹಜೀವನಕ್ಕೂ ಸಂಬಂಧವಿಲ್ಲ."

"ಇದು ವಾದದಲ್ಲಿ ಗೆಲ್ಲುವ ಪ್ರಶ್ನೆಯಲ್ಲ ಸಂಜೀವ. ಪರಂಪರಾಗತ ಆಚರಣೆಗಳು, ಸಮಾಜದ ಕಟ್ಟುಕಾಯಿದೆಗಳು ನಮಗೆ ತಿಳಿದಂತೆ, ತಿಳಿಯದಂತೆ ಪ್ರಭಾವ ಮೂಡಿರುತ್ತವೆ. ಅವುಗಳನ್ನೆಲ್ಲಾ ಎದುರಿಸುತ್ತೇನೆಂದು ಹೋಗುವುದು ವಿವೇಕಿಯ ಲಕ್ಷಣವಲ್ಲ."

"ನನ್ನ ಮನಸ್ಸು ಈಕೆಯಲ್ಲಿದ್ದು ನಾನು ಬೇರೆಯೊಬ್ಬಳನ್ನು ಮದುವೆಯಾದರೆ ಇಬ್ಬರಿಗೂ ಅನ್ಯಾಯ ಮಾಡಿದಂತಾಗುವುದಿಲ್ಲವೇ ?"

"ಇದೇನು ಮಾಡಿಕೊಂಡೆಯೋ ಜಾನಕಿ"

ಎನ್ನುವ ಮಾತುಗಳು ಅವರ ಹೃದಯವನ್ನು ಹಿಂಡಿ ಹೊರಬಂದವು. ಜಾನಕಿ ಮುಖದಲ್ಲಿ ಕಾಠಿಣ್ಯ ಮೂಡಿತು - ಧ್ವನಿ ಗಡಸಾಯಿತು.

"ನಿನಗೆ ಅಪಕೀರ್ತಿ ಬರುವ ಹಾಗಿದ್ದರೆ ಮಕ್ಕಳೊಂದಿಗೆ ಬೇರೆ ಕಡೆ ನಾನು ಹೋಗಿ ಇರುತ್ತೇನಮ್ಮ"

"ಈ ಮನೆಯಲ್ಲಿ ನಿನಗೆ ಜಾಗವಿಲ್ಲವೆಂದು ಹೇಳಲಿಲ್ಲ ಜಾನಕಿ."

"ಅವರ ಜತೆ ನಾನು ಇನ್ನು ಸಂಸಾರಮಾಡುವುದು ಸಾಧ್ಯವಿಲ್ಲ."

"ಆ ಮಾತು ಕಾಗದದಲ್ಲಿ ಸ್ಪಷ್ಟವಾಗಿ ಹೇಳಿಯೇ ಬಿಟ್ಟಿರುವೆಯಲ್ಲಾ"

ಎಂದು ಇಂದಿರಮ್ಮನವರು ನುಡಿದು ಒಳಕ್ಕೆ ಎದ್ದು ಹೋದರು.

೬

ಮೈಸೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಸೋಮಶೇಖರರಾಯರಿಗೆ ಮೇಲಿಂದ ಮೇಲೆ ಕೆಲಸವಿರುತ್ತಿತ್ತು. ವಾರಕ್ಕೊಮ್ಮೆಯಾದರೂ ಅವರು ಮೈಸೂರಿಗೆ ಹೋಗಿ ಬರುವ ಪ್ರಸಂಗ ಬೀಳುತ್ತಿತ್ತು. ಒಂದು ಸಲ ತಾವು ಮೈಸೂರಿಗೆ ಬರುವುದನ್ನು ಪೂರ್ವಭಾವಿಯಾಗಿ ಸಂಜೀವನಿಗೆ ತಿಳಿಸಿ ಮೈಸೂರಿಗೆ ಹೋದರು. ಸಂಜೀವ ಕೋರ್ಟಿನ ಬಳಿಗೆ ಬಂದು ಕಾದಿದ್ದು ರಾಯರನ್ನು ತನ್ನ ಮನೆಗೆ ಕರೆದುಕೊಂಡು ಹೋದ.

ಹೋಟೇಲ್ ಕಾಫಿ, ಉಪಾಹಾರದ ಆತಿಥ್ಯವಾದ ಮೇಲೆ

"ನಿನ್ನಲ್ಲಿ ಮಾತನಾಡುವ ವಿಷಯ ಬಹಳ ಇದೆ ಎಂದು ಬರೆದಿದ್ದರಲ್ಲಾ ಏನು ಸ್ವಾಮಿ ಸಮಾಚಾರ."

"ನಿಮ್ಮಣ್ಣನ ವಿಷಯ ತಿಳಿಯಿತೇನು ?"

"ಈಚೆಗೆ ಏನಾಗಿದೆ ?"

"ಅವನು ಬೇರೆ ಮದುವೆ ಮಾಡಿಕೊಳ್ಳುತ್ತಾನೆ. ನಿಮ್ಮ ಅತ್ತಿಗೆ ಸಂಪೂರ್ಣವಾಗಿ ಕೈತೊಳೆದುಕೊಂಡ ಹಾಗೆ ಕಾಣುತ್ತದೆ."

"ಅವರನ್ನು ಆಕ್ಷೇಪಿಸುವಂತಿಲ್ಲ."

"ಮಕ್ಕಳ ಪಾಲಿನ ಆಸ್ತಿಯನ್ನು ತೆಗೆದಿಟ್ಟುಬಿಡಿ ಎಂದು ಬರೆದಿದ್ದಾರಂತೆ."

"ನ್ಯಾಯವೇ - ಗಂಡ ಹೆಂಡಿರ ಜಗಳದಲ್ಲಿ ಕೂಸು ಮೈತ್ತಗಾಗಬೇಕೇನು ? ಈ ವಿಷಯ ಸರಿಯಾಗಿ ಇತ್ಯರ್ಥವಾಗಬೇಕಾದರೆ ನೀವೇ ಮುಂದೆ ನಿಂತು ಕೊಳ್ಳಬೇಕು ಸ್ವಾಮಿ"

"ಈಗಲೂ ನಿಮ್ಮ ಅಣ್ಣ ಅತ್ತಿಗೆಗೆ ರಾಜಿಮಾಡಿಸುವುದಕ್ಕಾಗುವು ದಿಲ್ಲವೇ ?"

"ಅನಂತಯ್ಯನವರು ಎಲ್ಲಾ ವಿಷಯ ನಿಮಗೆ ತಿಳಿಸಿರಬಹುದು. ನಾನೂ ಪ್ರಯತ್ನಿಸಿ ನೋಡಿದೆ ಅತ್ತಿಗೆ ಜಪ್ಪಯ್ಯ ಎಂದರೂ ಜಗ್ಗುವ ಹಾಗಿಲ್ಲ."

"ನಿಮ್ಮಣ್ಣ ದಾರಿಗೆ ಬಂದಿದ್ದಾನಂತೆ !"

"ಅವನದು ಯಾವ ಲೆಕ್ಕ ಸ್ವಾಮಿ. ನಾಯಿಬಾಲಕ್ಕೆ ದಬ್ಬೆಕಟ್ಟಿದ ಹಾಗೆ"

"ಈ ಪ್ರಸಂಗ ಎಲ್ಲರಿಗೂ ಕೆಟ್ಟಹೆಸರು ತರುತ್ತದೆ ಸಂಜೀವ."

"ಅದನ್ನು ಬಲ್ಲೆ ಸಾರ್ ಏನು ಮಾಡಲು ಸಾಧ್ಯ ? ಬಂದದ್ದು ಅನು ಭವಿಸಬೇಕು."

"ನಿನ್ನ ವಿಷಯ ಏನುಮಾಡಿದೆ ?"

"ಯಾವದು ?"

"ನಿನ್ನ ಭವಿಷ್ಯ"

"ಹಣೆಗೆ ಡಿಗ್ರಿ ಹಚ್ಚಿಕೊಂಡು ಕುಳಿತಿದ್ದೇನೆ. ಕೆಲಸ ಸಿಕ್ಕಿದರೆ ಸರಿ. ಸಿಕ್ಕದಿದ್ದರೆ ಮುಂದಿನ ಯೋಚನೆ ಮಾಡಬೇಕಾಗುತ್ತದೆ."

"ನಿನ್ನ ಮದುವೆಯ ವಿಷಯ."

"ಅದಕ್ಕೆ ಈಗೇನು ಅವಸರ."

"ನಿಮ್ಮ ತಂದೆ ನನ್ನ ಮೇಲೆ ಜವಾಬ್ದಾರಿ ಹಾಕಿದ್ದಾರಲ್ಲವ್ವಾ."

"ಜವಾಬ್ದಾರಿ ನಿರ್ವಹಿಸಲು ನೀವು ದಕ್ಷರೆಂದೇ ನಿಮ್ಮ ಮೇಲೆ ಎಲ್ಲ ಭಾರ ಹಾಕಿದ್ದಾರೆ."

"ನೀನೂ ಸಹಕರಿಸಿದರೆ ತಾನೆ ನನ್ನ ದಕ್ಷತೆ ಬೆಳಕಿಗೆ ಬರುವುದು."

"ನಾನೇನು ಮಾಡಬೇಕು ಹೇಳಿ."

"ನಾನು ಗೊತ್ತುಮಾಡುವ ಹೆಣ್ಣು ಒಪ್ಪಿಕೊಳ್ಳಬೇಕು."

"ಕೊನೆಯ ಪ್ಯಾರಾ ಬೇಡವೋ ರಂಗಣ್ಣ."

"ಅದಿಲ್ಲದಿದ್ದರೆ ಆ ಹುಚ್ಚು . . . . ಗೆ ಬುದ್ಧಿ ಬರುವುದಿಲ್ಲ ಕಣಯ್ಯಾ."

"ನಿನ್ನ ಇಷ್ಟ ಬಂದ ಹಾಗೆ ಮಾಡಿಕೊಳ್ಳಪ್ಪಾ."

"ನಿನ್ನ ಇಷ್ಟದಂತೆ ವರ್ತಿಸ್ಥಿದರೂ ನನ್ನ ಮೇಲೇ ಆಕ್ಷೇಪಣೆ ಹೊರೆಸುವೆಯಲ್ಲಾ ಅನಂತೂ - ಇದು ಯಾವ ನ್ಯಾಯ."

"ದುಂಡಾವರ್ತಿಯಲ್ಲಿ ಸ್ನೇಹ, ವಿಶ್ವಾಸಗಳಿಸುವುದು ಸಾಧ್ಯವಿಲ್ಲ ರಂಗಣ್ಣ - ಆ ವಿಷಯ ನಿನಗೆ ಅರ್ಥವಾಗಲ್ಲ ಹೋಗಲಿಬಿಡು"

ಎಂದು ಬೇಸರದಿಂದ ಹೇಳಿದ.

ಅಂಚೆಯಾಳು ತಂದುಕೊಟ್ಟ ರಿಜಿಸ್ಟರ್ಡ್ ಕಾಗದವನ್ನು ಜಾನಕಮ್ಮ ಸ್ವೀಕರಿಸಿ ಒಡೆದು ಓದಿಕೊಂಡಳು ಅವಳ ಮುಖದ ಬಣ್ಣ ಬದಲಾಯಿಸಿದುದನ್ನು ಕಂಡ ಇಂದಿರಮ್ಮನವರು

"ಯಾರದೇ ಜಾನಕಿ ಕಾಗದ" ಎಂದು ಕೇಳಿದರು.

"ನನ್ನ ಯಜಮಾನರದಮ್ಮ. ನೋಟೀಸ್ ಕೊಟ್ಟಿದ್ದಾರೆ"

"ನೋಟೀಸ್ !"

"ಒಂದು ವಾರದಲ್ಲಿ ನಾನು ಚಾಮರಾಜನಗರಕ್ಕೆ ಹೋಗದಿದ್ದರೆ ಬೇರೆ ಮದುವೆ ಮಾಡಿಕೊಳ್ಳುತ್ತಾರಂತೆ."

"ಬೇರೆ ಮದುವೆ !"

"ಅನಂತರ ಅವರ ಆಸ್ತಿಯ ಮೇಲೆ ನನಗಾಗಲಿ ಮಕ್ಕಳಿಗಾಗಲಿ ಯಾವ ಹಕ್ಕೂ ಇರುವುದಿಲ್ಲವಂತೆ !"

"ಉತ್ತರ ಬರೆಯುತ್ತೀಯಾ ?"

"ಬರೆಯುದೆ ಉಂಟೇ ?"

"ಸಮಾಧಾನವಾಗಿ ಬರಿ ಜಾನಕಿ.—ಮದುವೆಯಾದ ಗಂಡನನ್ನು ದೂರ ಮಾಡುವುದು ಹೆಣ್ಣಿಗೆ ಗೌರವವಲ್ಲ"

"ನೀನೂ ಹೀಗೇ ಹೇಳುವೆಯಾ ?"

"ಸ್ವಲ್ಪ ಮನಸ್ತಾಪ ಬಂದಕೂಡಲೆ ಗಂಡ ಹೆಂಡಿರು ಬೇರೆಯಾಗುತ್ತಾ ಬಂದರೆ ಸಂಸಾರ, ಮನೆ ಉಳಿಯುವುದು ಹೇಗೆ ?"

"ಇದು ಸ್ವಲ್ಪ ಮನಸ್ತಾಪದ ವಿಷಯವಲ್ಲಮ್ಮ. ನನಗೂ ಅವರಿಗೂ ವಿರಸ ಹುಟ್ಟಿದ ಕಾರಣ ಕೇಳಿದರೆ ನೀನು ಏನನ್ನುವೆಯೋ ?—ಉತ್ತರ ಬರೆದು ನಿನಗೆ ತೋರಿಸಿ ಅಂಚೆಗೆ ಹಾಕುತ್ತೇನೆ."

"ವಿಚಾರಮಾಡಿ ಬರೆಯಮ್ಮ. ಸಂಬಂಧ ಮುರಿದುಕೊಳ್ಳುವುದರಿಂದ ತುಂಬ ಅಪಖ್ಯಾತಿಬರುತ್ತದೆ."

ಜಾನಕಿ ಮನಸ್ಸು ಗಟ್ಟಿಮಾಡಿಕೊಂಡು ಕಾಗದ ಬರೆಯುವುದಕ್ಕೆ ಕುಳಿತಳು.

## ಮೈಸೂರು

ಮ॥ರಾ॥ ರಂಗಣ್ಣನವರ ಸ॥ಕ್ಕೆ. ಅನೇಕ ನಮಸ್ಕಾರಗಳು,

ನಿಮ್ಮ ರಿಜಿಸ್ಟರ್ಡ್ ಕಾಗದ ಕೈಸೇರಿತು. ಮೊದಲು ನಯವಾಗಿ ಆರಂಭಿಸಿ ಕೊನೆಯಲ್ಲಿ ಬೆದರಿಕೆ ಹಾಕಿದ್ದೀರಿ.

ನಾನು ಚಾಮರಾಜನಗರ ಬಿಟ್ಟುಬಂದ ಸಂದರ್ಭವೆಂಥದು ಎಂಬುದನ್ನು ಉದ್ದೇಶಪೂರ್ವಕವಾಗಿಯೇ ನೀವು ಮುಚ್ಚಿಡುತ್ತಿರುವುದು ಆಶ್ಚರ್ಯಕರ ವಾಗಿದೆ. ನಿಮ್ಮ ಕೀಳು ಆಸೆ ಆಕಾಂಕ್ಷೆಗಳಿಗೆ ಹೊಂದಿಕೊಂಡು ಸಂಸಾರ ಮಾಡುವುದು ಯಾವ ಹೆಣ್ಣುಪ್ರಾಣಿಗೂ ಸಾಧ್ಯವಿಲ್ಲ. ನಾನೂ ಮನುಷ್ಯಳು – ಪಶುವಲ್ಲ.

ನಾನು ಚಾಮರಾಜನಗರಕ್ಕೆ ಬಂದು ನಿಮ್ಮೊಂದಿಗೆ ಸಂಸಾರಮಾಡುವುದು ಸುಳ್ಳುಮಾತು. ನೀವು ಬರೆದಿರುವಂತೆ 'ಮುಂದಿನ ಯೋಚನೆ' ನೀವು ಮಾಡಿ ಕೊಳ್ಳಬಹುದು. ನಿಮ್ಮ ಕೈಹಿಡಿಯಲು ಕಾದಿರುವ ನಿರ್ಭಾಗ್ಯ ಹೆಣ್ಣಿಗಾಗಿ ನಾನು ದುಃಖಿಸುತ್ತೇನೆ.

ಇನ್ನು ಆಸ್ತಿಯ ವಿಷಯ. ನನಗಾಗಿ ಒಂದು ಕುರುಡು ಕವಡೆಯನ್ನೂ ಅಪೇಕ್ಷಿಸುವುದಿಲ್ಲ. ನಿಮ್ಮ ಮಗ, ಮಗಳ ವಿದ್ಯೆ, ವಿವಾಹ, ಜೀವನ ಸಾಗ ಬೇಕಾಗಿದೆ. ಆ ಖರ್ಚುಗಳಿಗಾಗುವಷ್ಟು ಹಣ ತೆಗೆದಿಟ್ಟು ಉಳಿದ ಆಸ್ತಿಯನ್ನು ನೀವು ಮನಸ್ಸು ಬಂದಂತೆ ವಿಲೆಮಾಡಬಹುದು. ಈ ವಿಷಯದಲ್ಲಿ ನೀವು ನ್ಯಾಯವಾಗಿ ವರ್ತಿಸದೆ ಕಿರುಕುಳ ಕೊಡುವುದಾದರೆ ನಾನು ನಿರ್ವಾಹವಿಲ್ಲದ ಕೋರ್ಟಿನ ಮರೆಹೋಗಬೇಕಾಗುತ್ತದೆ.

ಜಾನಕಮ್ಮ."

ಮಗಳು ಓದಿದ ಕಾಗದದ ವಿಷಯ ಕೇಳಿ ಇಂದಿರಮ್ಮನವರು ತಲೆಯ ಮೇಲೆ ಕೈಹೊತ್ತು ಕುಳಿತುಕೊಂಡುಬಿಟ್ಟರು.

"ಸಮಾಜದ ಹಿತದ ಮುಂದೆ ವ್ಯಕ್ತಿಯ ಹಿತ ಗೌಣ."

"ವ್ಯಕ್ತಿಗಳಿಲ್ಲದೆ ಸಮಾಜವಾಗುತ್ತದೆಯೇ?"

"ಅನೇಕ ವ್ಯಕ್ತಿಗಳ ಅನುಭವದ ಫಲವೇ ಸಮಾಜದ ಕಟ್ಟು ಕಟ್ಟಳೆಯಾಗಿ ಮಾರ್ಪಡುತ್ತದೆ."

"ಅನುಭವವೂ ಕಾಲಾನುಗುಣವಾಗಿ ಬದಲಾಗುವುದಿಲ್ಲವೇ?"

"ಅನುಭವ ಬದಲಾದರೂ ಸಮಾಜದ ಹಿತ - ಅಹಿತ ಬದಲಾಗುವುದಿಲ್ಲ."

"ಸಮಾಜದ ಹಿತವನ್ನು ವ್ಯಕ್ತಿ ನೋಡುವುದೆಷ್ಟು ಅವಶ್ಯಕವೋ ಅಷ್ಟೇ ಸಮಾಜವೂ ವ್ಯಕ್ತಿಯ ಹಿತವನ್ನು ನೋಡುವುದು ಅವಶ್ಯಕವಲ್ಲವೇ?"

"ನಿಸ್ಸಂದೇಹವಾಗಿ"

"ನನ್ನ ಅತ್ತಿಗೆಯ ಹಿತವನ್ನು ಯಾವ ಸಮಾಜ ಲಕ್ಷಿಸಿದೆ. ನಾಳೆ ಎಲ್ಲರೂ ಅವರ ಮೇಲೇ ಅಲ್ಲವೆ ಆಕ್ಷೇಪಣೆಗಳ ಹೊರೆ ಹೊರಿಸುವುದು"

"ನಿರ್ದೋಷಿಗಳನ್ನು ಯಾರು ಆಕ್ಷೇಪಿಸಲು ಸಾಧ್ಯ?"

"ಹೆಣ್ಣಿಗೂ ನಮ್ಮ ಸಮಾಜದಲ್ಲಿ ಈ ಸೌಲಭ್ಯವಿದೆಯೇ?"

"ಇಲ್ಲವೆಂದು ಒಪ್ಪಿಕೊಳ್ಳುತ್ತೇನೆ. ಆ ಸೌಲಭ್ಯ ಸೃಷ್ಟಿಮಾಡಿಕೊಳ್ಳಬೇಕಾದುದು ಹೆಣ್ಣಿನ ಕರ್ತವ್ಯ."

"ಗಂಡಿನ ಪಾಳೆಯಗಾರ ಪ್ರಭುತ್ವ ನಡೆದಿರುವಾಗ ಹೆಣ್ಣು ಹೇಗೆ ತನ್ನ ಹಕ್ಕು ಬಾಧ್ಯತೆಗಳನ್ನು ಸ್ಥಾಪಿಸಿಕೊಳ್ಳುವುದು."

"ಇಂದು ಎಲ್ಲರೂ ಹಕ್ಕು ಬಾಧ್ಯತೆಗಳಿಗೆ ಹೊಡೆದಾಡುತ್ತಿದ್ದೇವೆ - ಕರ್ತವ್ಯ ಯಾರಿಗೂ ಬೇಡವಾಗಿದೆ."

"ಕರ್ತವ್ಯ - ಕರ್ತವ್ಯ ಎಂದು ಕೂಗುವವರು ಅದಕ್ಕೆ ನಾನಾರ್ಥ ಕಲ್ಪನೆ ಮಾಡದೆ ಇದ್ದರೆ ಎಲ್ಲರೂ ಕರ್ತವ್ಯಪರರಾಗಬಹುದು."

"ಸಮಾಜವನ್ನು ಪ್ರತಿಭಟಿಸಿ, ನಿನ್ನವರನ್ನು ದೂರತಳ್ಳಲು ನೀನು ಸಿದ್ಧವಾಗಿರುವ ಹಾಗೆ ಕಾಣುತ್ತದೆ."

"ಅವಶ್ಯ ಕಂಡು ಬಂದರೆ."

"ನಾನಿನ್ನು ಮಾತನಾಡಿ ಪ್ರಯೋಜನವಿಲ್ಲ. ನೀನು ದೊಡ್ಡವನಾದೆ - ವಿದ್ಯಾವಂತನಾದೆ - ಸ್ವತಂತ್ರನಾಗಿರುವೆ. ನಿನ್ನ ಮನಸ್ಸು ಬಂದ ಹಾಗೆ ಮಾಡಬಹುದು."

"ನಿಮ್ಮ ಮಾತು ಕೇಳಲಿಲ್ಲವೆಂದು ಕೋಪವೇ ?"

"ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೇ ಈ ಕಾಲದಲ್ಲಿ ಹಿರಿಯರ ಮಾತು ಕೇಳುವುದಿಲ್ಲ - ನೀನೇಕೆ ಕೇಳಬೇಕಪ್ಪಾ."

"ದುಡುಕಿ ನಾನು ಮಾತನಾಡಿದ್ದರೆ ಕ್ಷಮಿಸಿ ಸ್ವಾಮಿ. ನಿಮ್ಮ ಮಾತು ತೆಗೆದು ಹಾಕಬೇಕೆಂದು ನನ್ನ ಉದ್ದೇಶವಲ್ಲ - ಆದರೆ ಯಾರನ್ನೋ ಮೆಚ್ಚಿಸುವುದಕ್ಕೆ ನನಗೆ ಬೇಡದ ಹೆಣ್ಣನೊಂದಿಗೆ ಸಂಸಾರಮಾಡುವುದಕ್ಕೆ ನಾನು ಸಿದ್ಧನಾಗಿಲ್ಲ."

"ನಿನ್ನ ಮದುವೆಗೆಂದು ಪಂಡಿತರು ಐದುಸಾವಿರ ರೂಪಾಯಿ ನನ್ನಲ್ಲಿ ಇಡಗಂಟು ಇಟ್ಟಿದ್ದಾರೆ. ಅದನ್ನ ಬೇಕಾದಾಗ ನೀನು ತಗೆದುಕೊಳ್ಳಬಹುದು."

"ಹಾಗೇ ಆಗಲಿ" ಎಂದ

ಸೋಮಶೇಖರರಾಯರು ಹುಬ್ಬುಗಂಟಿಕ್ಕಿದ ಮುಖಹೊತ್ತು ಹೊರಗೆ ಬಂದರು ಅವರನ್ನು ಸಮಾಧಾನಗೊಳಿಸಲು ಸಂಜೀವ ಪ್ರಯತ್ನಿಸಲಿಲ್ಲ

ಸೋಮಶೇಖರರಾಯರು ಬಂದುಹೋದುದು ಸಂಜೀವನ ಮನಸ್ಸನ್ನು ವಿಪ್ಲವಕ್ಕೊಳಗಾಗಿಸಿತ್ತು, ಅವರು ಆಡಿದ ಮಾತುಗಳು ಮತ್ತೆ ಮತ್ತೆ ಅವನ ಮನಸ್ಸನ್ನ ಘಾತಿಸುತ್ತಿದ್ದವು. 'ನನ್ನ ಸ್ವಂತ ವ್ಯವಹಾರ ಕಟ್ಟಿಕೊಂಡು ಇವರಿಗೆ ಆಗಬೇಕಾದುದೇನು - ನಾನು ಕ್ರಿಶ್ಚಿಯನ್ನರ ಹುಡುಗಿಯನ್ನೋ ಹರಿಜನರ ಹುಡುಗಿಯನ್ನೋ ಮದುವೆ ಮಾಡಿಕೊಂಡರೆ ಇವರ ಗಂಟು ಏನುಹೋಗುತ್ತದೆ' ಎಂದು ವಿಚಾರಮಾಡುತ್ತಾ ಅವರ ಆಕ್ಷೇಪಣೆಗಳಿಗೆ ಸಮಾಧಾನ ಹೇಳಲೆತ್ನಿಸಿದ ತನ್ನ ತಂದೆಗೂ ಸೋಮಶೇಖರರಾಯರಿಗೂ ಇದ್ದ ಮೈತ್ರಿ ನೆನಪಿಗೆ ಬಂತು - ಪಂಡಿತರ ಆರೋಗ್ಯರಗಳನ್ನು ಚಾಚೂ ತಪ್ಪದೆ ರಾಯರು ಪೂರೈಸಿದುದು, ಅವರ ಗೃಹಕೃತ್ಯದ ಬಗ್ಗೆ ರಾಯರು ತೋರಿಸಿದ್ದ ಅವ್ಯಾಜ ಅಂತಃಕರಣವೂ ಸ್ಮೃತಿಗೆ ಬಂದಿತು 'ನನ್ನ ಹಿತೈಷಿಗಳಾದ ರಾಯರ ಮನಸ್ಸು ನೋಯಿಸಿದೆನೇ ? — ಅವರಾದರೂ ಶಿಷ್ಟಾಚಾರದ ಹದ್ದು ಮೀರಿ ಇಲ್ಲಸಲ್ಲದ ಆರೋಪಮಾಡಬಾರದಾಗಿತ್ತು' - ಎಂದು ವಿಚಾರಮಾಡುತ್ತ ಕುಳಿತ.

ಸ್ವಲ್ಪ ಹೊತ್ತಿಗೆ ಮುಂಚೆ ಬಂದಿದ್ದ ಪುಷ್ಪ, ಸಂಜೀವನನ್ನು ಎವೆಯಿಕ್ಕದೆ ನೋಡುತ್ತ ನಿಂತಳು. ತಾನು ಬಂದಿರುವುದು ಸಂಜೀವನ ಗಮನಕ್ಕೆ ಬಂದಿಲ್ಲ ವೆಂಬುದನ್ನು ಅವಳು ಅರಿಯಲು ಬಹಳಕಾಲ ಹಿಡಿಸಲಿಲ್ಲ. ಯೋಗಸಮಾಧಿ ಯಿಂದ ಸಂಜೀವ ಯಾವಾಗ ಬಹಿರ್ಮುಖನಾಗುವನೆಂಬುದನ್ನು ಕುತೂಹಲ ದಿಂದೀಕ್ಷಿಸುತ್ತ ನಿಂತಳು.

ಸಂಜೀವ ಅತ್ತ ತಿರುಗಿ ನೋಡಿದಾಗ ಪುಷ್ಪ ಕೈಕಟ್ಟಿಕೊಂಡು ಬಾಗಿಲು ವಾಡ ಒರಗಿಕೊಂಡು ನಿಂತಿದ್ದಳು ಅವಳ ಕೈಯಲ್ಲಿದ್ದ ಪ್ಲಾಸ್ಟಿಕ್‌ಬ್ಯಾಗ್ ತೂಗಾಡುತ್ತಿತ್ತು. ಅವಳು ನಿಂತ ಭಂಗಿಗೆ, ಬಾಗಿಲುವಾಡ ಚೌಕಟ್ಟು ಹಾಕಿ ದಂತಿತ್ತು.

ಸಂಜೀವ ಪುಷ್ಪನನ್ನು ನೋಡಿದಾಗ ಅವನ ಕಣ್ಣನ್ನು ಸೆಳೆದುದು ಅವಳ ನಿರ್ದೋಷ ಅಲಂಕರಣ ದೇಹಕ್ಕೊಪ್ಪುವಂತೆ ಅಲಂಕಾರ ಮಾಡಿಕೊಳ್ಳು ವುದರಲ್ಲಿ ಪುಷ್ಪ ಸಿದ್ಧಿಪಡೆದಿದ್ದಳು. ಆದರಿಂದು ಅವಳ ಸಿದ್ಧಿ ಪರಾಕಾಷ್ಠ ದೆಸೆಯನ್ನು ಮುಟ್ಟಿತ್ತು.

ಪುಷ್ಪ ರೂಪವತಿಯೇ ಅಲ್ಲವೇ ಎನ್ನುವ ವಿಷಯದಲ್ಲಿ ಸೌಂದರ್ಯ ಶಾಸ್ತ್ರಜ್ಞರಲ್ಲಿ ಭಿನ್ನಾಭಿಪ್ರಾಯ ಹುಟ್ಟಲು ಅವಕಾಶವಿತ್ತು. ಅವಳ ಎಣ್ಣೆಗೆಂಪು ಬಣ್ಣ, ತುಸು ನೀಳವಾದ ನಡುಪ್ರದೇಶ, ವಯೋಧರ್ಮ ಮೀರಿ ಮುಂದೆ ಹಾಯುತ್ತಿದ್ದ ಕುಚಗಳು, ಪ್ರಮಾಣವನ್ನತಿಕ್ರಮಿಸಿದ ಕಣ್ಣುಗಳು ಅವಳ ಸೌಂದರ್ಯದ ವಿರುದ್ಧ ಸಾಕ್ಷ್ಯ ಹೇಳುತ್ತಿದ್ದವು. ಅವಳ ತಿದ್ದಿದ ಮುಖ, ಕಡದ ಮೈ, ಕಮಲದ ಎಸಳುಗಳಂತೆ ಅರಳಿದ್ದ ಬೆರಳುಗಳು ಅವಳ ಪರ ವಾದಮಾಡುವವರಿಗೆ ಗ್ರಾಸ ಒದಗಿಸಿದ್ದವು.

ತನ್ನ ದೇಹಕ್ಕೊಪ್ಪುವಂತೆ ಸಿಂಗರಿಸಿಕೊಳ್ಳುವ ಕಲೆ ಪುಷ್ಪನಿಗೆ ಚೆನ್ನಾಗಿ ಸಾಧಿಸಿತ್ತು. ಮೈ ಬಣ್ಣಕ್ಕೊಪ್ಪುವ ಸೀರೆ, ಅದಕ್ಕನುಗುಣವಾದ ಕುಪ್ಪಸ ವನ್ನವಳು ಜಾಣ್ಮೆಯಿಂದ ಆರಿಸುತ್ತಿದ್ದುದಲ್ಲದೆ, ಹ್ಯಾಂಡ್‌ಬ್ಯಾಗ್ ಚಪ್ಪಲಿಗಳ ನ್ನಾಯುವುದರಲ್ಲಿಯೂ, ಅಷ್ಟೇ ಕೌಶಲ್ಯವನ್ನು ವ್ಯಕ್ತಪಡಿಸುತ್ತಿದ್ದಳು.

ಅಂದು ಪುಷ್ಪ ವಿಶೇಷ ಎಚ್ಚರಿಕೆಯಿಂದ ಅಲಂಕಾರ ಮಾಡಿಕೊಂಡು ಬಂದಂತಿತ್ತು. ತನ್ನ ನಸುನೀಳವಾದ ತಲೆಗೂದಲನ್ನು ಎರಡು ಜಡೆಗಳಾಗಿ ಹೆಣೆದು ಅವುಗಳನ್ನು ನಾಗಬಂಧದಂತೆ ಸುತ್ತಿ ಗಂಟುಹಾಕಿದ್ದಳು. ಹೆಳಲನ್ನು

ಒಂದು ಸಣ್ಣ ಮಲ್ಲಿಗೆಯ ಹೂವಿನ ಎಳೆ ಆವರಿಸಿತ್ತು. ಹೆಳಲು ಮಧ್ಯದಲ್ಲಿ ಒಂದೇ ಒಂದು ಕೆಂಪು ಗುಲಾಬಿ ಮೊಗ್ಗೆಯನ್ನು ಮುಡಿದಿದ್ದಳು. ಒಡಲಿಗೆ ಕಪ್ಪುರೇಷ್ಮೆಯ ಜಾಜಿಮೊಗ್ಗೆ ನೆಯ್ದಿದ್ದ ಕಿತ್ತಲೆಬಣ್ಣದ ಸೀರೆ, ಅದಕ್ಕನುಗುಣವಾದ ಕಾವಿವರ್ಣದ ಕುಪ್ಪಸ ಅವಳಿಗೆ ಶೋಭಿಸುತ್ತಿದ್ದವು ಎರಡು ಕೈಗಳ ತುಂಬ ತಂತಿಯಂತಿದ್ದ ಬಂಗಾರದ ಬಳೆಗಳು, ಕುತ್ತಿಗೆಯಲ್ಲಿ ಎರಡೆಳೆಯ ಚಿನ್ನದ ಚೈನ್ ಪಪ್ಪನೆಯ ಒಂದೇ ಬಿಳಿ ಹರಳಿನ ಓಲೆಗಳು ಕಿವಿಯಲ್ಲಿ ಮೆರೆಯುತ್ತಿದ್ದವು.

ಪುಷ್ಪ ಮೈಗೆ ಹತ್ತಿಕೊಳ್ಳುವಂತೆ ಸೀರೆ, ಕುಪ್ಪಸ ಧರಿಸಿದ್ದುದು ಸಂಜೀವನ ಗಮನವನ್ನು ಸೆಳೆಯಿತು ದೇಹದ ರೇಖಾವಿನ್ಯಾಸವನ್ನು ಅವಳು ಧರಿಸಿದ್ದ ವಸ್ತ್ರ ಮರೆಮಾಚದೆ ಚೌಕಟ್ಟಿನಲ್ಲಿಟ್ಟು ತೋರಿದಂತಿತ್ತು 'ಇದಿಷ್ಟು ಸಿಂಗಾರ ನನಗಾಗಿ' ಎಂದು ಸಂಜೀವ ತನ್ನಲ್ಲಿಯೇ ಹೇಳಿಕೊಳ್ಳದಿರಲಿಲ್ಲ

"ಯಾವಾಗ ಬಂದೆ ಪುಷ್ಪ"

ಎಂದು ಸಂಜೀವ ಎದ್ದು ಅವಳ ಕೈಹಿಡಿದು ಕರೆತಂದು ತೊಟ್ಟಿಯಲ್ಲಿದ್ದ ಸೋಫಾದ ಮೇಲೆ ಕುಳ್ಳಿರಿಸಿದ.

"ಬಿಸಿಲು ಕೂಡ ನೋಡದೆ ನಾನಿಲ್ಲಿಗೆ ಧಾವಿಸಿ ಬಂದರೆ ನಿಮ್ಮ ಲಕ್ಷ್ಯ ಎಲ್ಲೋ ಹೋಗಿತ್ತು."

"ಹೌದು ನಾನು ಯೋಚಿಸುತ್ತ ಕುಳಿತಿದ್ದೆ"

"ಏನು ಯೋಚನೆ ಎಂದು ಕೇಳಬಹುದೇ'

"ನೀನು ಬಂದಿರುವುದರಿಂದ ಅದನ್ನು ಮರೆಯಲು ಸಾಧ್ಯವಾಯಿತು. ಮತ್ತೆ ಅದನ್ನೇ ಏಕೆ ಪ್ರಸ್ತಾಪಿಸಬೇಕೆನ್ನುವೆ."

'ನನಗೆ ಸಂಬಂಧಿಸಿದ ಮಾತೇ!"

"ಹೌದು"

"ಹಾಗಾದರೆ ನೀವು ಹೇಳಲೇಬೇಕು."

"ಹಿಂದೊಮ್ಮೆ ನೀನು ಇಲ್ಲಿಗೆ ಬಂದುಹೋಗುವಾಗ ಒಬ್ಬರು ಒಳಕ್ಕೆ ಬಂದರು ಜ್ಞಾಪಕವಿದೆಯೇ?"

"ಸ್ವಲ್ಪ ಸ್ವಲ್ಪ ಜ್ಞಾಪಕವಿದೆ"

"ಆ ಮನುಷ್ಯ ಸ್ವಲ್ಪ ಪುಳ್ಳಿ ಇಟ್ಟಿದ್ದಾನೆ."

"ಆತ ಯಾರು ?'

"ನನ್ನ ಅಣ್ಣನ ಸ್ನೇಹಿತ."

"ಅದನ್ನು ನೀವು ನಿರೀಕ್ಷಿಸಿರಲಿಲ್ಲವೇ ?"

"ನಿರೀಕ್ಷಿಸಿದ್ದೆ. ಆದರೆ ನಮ್ಮ ಸಂಬಂಧಕ್ಕೆ ರಾಡಿಯು ಲೇಪವಾಗಬಾರದೆಂದು ನನ್ನ ಇಚ್ಛೆ."

"ಇನತ್ತು ಯಾರಾದರೂ ಬಂಧಿದ್ದರೇ ?"

"ನನ್ನ ತಂದೆಯವರ ಸ್ನೇಹಿತರು ಒಬ್ಬರು ಬಂದಿದ್ದರು. ಜಾತಿಯ ಪ್ರಶ್ನೆಯನ್ನು ಮುಂದೆಮಾಡಿದರು. ನಾನೂ ಸ್ವಲ್ಪ ಬಿರುಸಾಗಿಯೇ ಮಾತನಾಡಿದೆ. ಅಸಮಾಧಾನಪಟ್ಟುಕೊಂಡು ಎದ್ದುಹೋದರು – ಹೋಗಲಿ ಬಿಡು. ಹಾಳು ಮಾತು ಕಟ್ಟಿಕೊಂಡು ನಾವೇಕೆ ವ್ಯಥೆಪಡಬೇಕು."

ಆ ಸಂಭಾಷಣೆ ಬೆಳಸುವುದಕ್ಕೆ ಪುಷ್ಪನಿಗೆ ಸ್ವಲ್ಪವೂ ಮನಸ್ಸಿರಲಿಲ್ಲ. ಸಂಜೀವನೇ ಅದರ ಮುಕ್ತಾಯ ಸೂಚಿಸಲು ಸಂತೋಷವಾಗಿ ಒಪ್ಪಿಕೊಂಡಳು.

"ಕಾಫಿ ತರಿಸಿಕೊಡುತ್ತೇನೆ."

"ಇಲ್ಲಿ ಬೇಡ ಏಳಿ – ದಾರಿಯಲ್ಲಿ ಎಲ್ಲಿಯಾದರೂ ಕುಡಿದರಾಯಿತು."

"ಎಲ್ಲಿಗೆ ಹೋಗುವುದು ?"

"ನೀವು ಬೇಗ ಡ್ರೆಸ್ ಮಾಡಿಕೊಳ್ಳಬಾರದೇ ?'

"ಎಂಗೇಜ್‌ಮೆಂಟ್ (Engagement) ಇಟ್ಟುಕೊಂಡೇ ನೀನು ಬಂದಿರುವ ಹಾಗೆ ಕಾಣುತ್ತದೆ.'

"ಹೌದು – ಸೊಗಸಾದ ಪಿಕ್ಚರ್ ನಡೆಯುತ್ತಿದೆ."

"ಓಹೊ ! ಪಿಕ್ಚರೇ ! ಯಾವ ಪಿಕ್ಚರ್."

"ರತ್ನನ್."

"ಅದನ್ನು ನೋಡಿದ್ದೆಯೆಂದು ಹಿಂದೆ ನೀನು ಹೇಳಿದಂತೆ ಜ್ಞಾಪಕ."

"ನಿಮ್ಮ ಜತೆ ನೋಡಬೇಕೆಂದು ಆಸೆ."

"ಹಾಳು ಪಿಕ್ಚರ್‌ಗಳನ್ನು ನೋಡುವುದನ್ನು ಬಿಡಲೊಲ್ಲೆಯಾ ?"

"ಪಿಕ್ಚರ್‌ಗಳನ್ನು ನೋಡಬಾರದೇ ?"

"ಯಾವಾಗಲಾದರೊಮ್ಮೆ ನೋಡಲು ಅಡ್ಡಿಯಿಲ್ಲ. ದಿನವೂ ಅದೇ ಕೆಲಸ ಮಾಡುವುದೇ ?"

ಪುಷ್ಪ ಮುಖ ಚಿಕ್ಕದು ಮಾಡಿಕೊಂಡು,

"ಪಿಕ್ಚರ್ ನೋಡೋದಿಕ್ಕಿಂತ ಹೆಚ್ಚಾಗಿ, ನಿಮ್ಮ ಜತೆ ಹೋಗಬೇಕೆಂದು ಅಷ್ಟೆ."

"ಆಗಬಹುದು. ಪಿಕ್ಚರ್ ಬೇಡ. ಎಲ್ಲಿಯಾದರೂ ವಾ ಕಿಂ ಗ್ ಹೋಗೋಣ."

ತನ್ನ ಮಾತಿನ ಬಲೆಯಲ್ಲಿ ತಾನೇ ಸಿಕ್ಕುಹಾಕಿಕೊಂಡಂತಾಯಿತು ಪುಷ್ಪಾಗೆ ಅಸಮಾಧಾನ ವ್ಯಕ್ತಪಡಿಸುವುದು ಅಲೌಕಿಕವೆನ್ನುವುದನ್ನು ಅವಳು ತಕ್ಷಣ ಗ್ರಹಿಸಿ ನಸುನಗುತ್ತಾ

"ನೀವು ಹೇಗೆ ಹೇಳಿದರೆ ಹಾಗಾಗಲಿ. ನಿಮ್ಮ ಮಾತಿಗೆ ನಾನು ಅಡ್ಡಿ ಬರುತ್ತೇನೆಯೇ? ಆದರೆ ಒಂದು ಕಂಡಿಷನ್ (Condition)."

"ಏನು ಕಂಡಿಷನ್"

"ನೀವು ಸೂಟ್ ಹಾಕಿಕೊಂಡು ಬರಬೇಕು."

"ಇಲ್ಲೇ ವಾಕಿಂಗ್ ಹೋಗಿಬರುವುದಕ್ಕೆ ಸೂಟ್ ಏಕೆ? ಟೈ ಕಾಲರ್ ಎಲ್ಲಾ ಬಿಗಿದುಕೊಳ್ಳುವುದಕ್ಕೆ ಅರ್ಧ ಗಂಟೆಯಾಗುತ್ತದೆ. ಮನೆಗೆ ಹೋಗಲು ನಿನಗೆ ಹೊತ್ತಾಗುತ್ತದೆ."

"ಮನೆಯಲ್ಲಿ ಹೇಳಿ ಬಂದಿದ್ದೇನೆ - ಸ್ವಲ್ಪ ಲೇಟಾದರೂ ಚಿಂತೆಯಿಲ್ಲ."

"ನೀನೊಬ್ಬಳೇ ಕುಳಿತಿರಬೇಕಲ್ಲ."

"ಮ್ಯಾಗಜಿನ್‌ಗಳನ್ನು ನೋಡುತ್ತಿರುತ್ತೇನೆ - ರೇಡಿಯೋ ಕೇಳುತ್ತಿರು ತ್ತೇನೆ."

"ಬೇಗ ಬರುತ್ತೇನೆ." ಎಂದು ಹೇಳಿ ಸಂಜೀವ ಹೋದ.

ಪುಷ್ಪ ಎದ್ದು ಮೇಜಿನ ಮೇಲಿದ್ದ 'ಇಲ್ಲಸ್ಟ್ರೇಟೆಡ್ ವೀಕ್ಲಿ' (Illus-trated Weekly) ಪತ್ರಿಕೆಯನ್ನು ತೆಗೆದಳು. ಹಾಳೆಗಳನ್ನು ಮಗುಚುತ್ತಾ ನೂತನ ವಿವಾಹಿತ ದಂಪತಿಗಳ ಫೋಟೋಗಳಿದ್ದ ಪುಟವನ್ನು ಎವೆಯಿಕ್ಕದೆ ನೋಡುತ್ತ ನಿಂತಳು. ಚಿತ್ರಗಳು ಮಸಕು ಮಸಕಾಗಿ ಕಲಸಿಹೋದವು. ಕಲಸಿ ಕ್ರಮಕ್ರಮೇಣ ಬಿಡಿಬಿಡಿಯಾಗುತ್ತ ಬಂತು. ಪುಟದಲ್ಲಿದ್ದ ಎಂಟು ದಂಪತಿಗಳ ಚಿತ್ರಗಳೂ ಮಾಯವಾದವು. ಅವುಗಳ ಸ್ಥಾನದಲ್ಲಿ ದಂಪತಿಗಳಿಬ್ಬರ ಚಿತ್ರ. ಪುಷ್ಪ ಅದನ್ನೇ ದಿಟ್ಟಿಸಿ ನೋಡಿದಳು. ಎತ್ತರದ ಬೆನ್ನಿನ ಸೊಗಸಾ

ಕೆತ್ತನೆಯ ಕುರ್ಚಿ - ಅದರ ಮೇಲೆ ತಾನು ಸರ್ವಾಲಂಕಾರಭೂಷಿತಳಾಗಿ ಕುಳಿತಿದ್ದಾಳೆ. ಪಕ್ಕದಲ್ಲಿ ಸೂಟ್ ಧರಿಸಿ ಸಂಜೀವ ನಿಂತಿದ್ದಾನೆ. ಅವನ ಬಲಗೈ ತನ್ನ ಬಾಹುಭುಜ ಬಳಸಿದಂತಿದೆ. ಹರ್ಷಾತಿರೇಕದಿಂದ ಪುಷ್ಪನಿಗೆ ರೋಮಾಂಚವಾಯಿತು ಪತ್ರಿಕೆಯನ್ನು ಮುಚ್ಚಿ ರೇಡಿಯೋ ತಿರುಗಿಸಿದಳು. ಮದರಾಸಿನ ಎ.ಐ.ಆರ್ ಸ್ಟೇಷನ್ - ಸುಮಧುರ ಶ್ರೀಕಂಠ. 'ರಾಧಾಸಮೇತಾ ಕೃಷ್ಣ.' ಹಾಡು ಮೂಡಿದ್ದ ಚಿತ್ರನನ್ನ ಚಿತ್ತಭಿತ್ತಿಯ ಮೇಲೆ ಅನುರಾಗ ಕುಂಚದಿಂತ ಪುಷ್ಪ ಬರೆದಳು. ಹೌದು! ತಾನೇ ರಾಧೆ, ಸಂಜೀವನೇ ಕೃಷ್ಣ. ಹಾಡು ಕೇಳುತ್ತ ಮೈಮರೆತಳು. ರೇಡಿಯೋ ಕಾರ್ಯಕ್ರಮ ಮುಗಿದು ಯಾರೋ ಗೊಗ್ಗರು ಧ್ವನಿಯಲ್ಲಿ ಇಂಗ್ಲಿಷಿನಲ್ಲಿ ಸುದ್ದಿ ಹೇಳುವುದಕ್ಕಾರಂಭಿಸಿದ್ದರು. ಅವಳ ಸಮಾಧಿಗೆ ಭಂಗ ಬಂದಂತಾಗಿತ್ತು, ಸುತ್ತ ಕಣ್ಣಾ ಹೊರಳಿಸಿ ನೋಡಿದಳು. ಏನೋ ಸಂತೋಷ - ತೃಪ್ತಿ - ಆಶೆ ಹೃದಯವನ್ನು ತುಂಬಿತು. 'ಇವೆಲ್ಲಾ ನನ್ನದು. ಈ ಮನೆ - ಈ ರೇಡಿಯೋ - ಈ ಮನೆಯ . . . . .' ಎಂದು ಯೋಚಿಸುತ್ತಿರುವಲ್ಲಿ ಸಂಜೀವ ಅಲಂಕಾರ ಮುಗಿಸಿಕೊಂಡು ಬಂದು 'ರೆಡಿ' ಎಂದ.

'ವಾಕಿಂಗ್ ಬೇಡ, ಮನೆಯಲ್ಲಿಯೇ ಇದ್ದುಬಿಡೋಣ' ಎಂದು ಸಂಜೀವ ಹೇಳಬಾರದೇ ಎಂದು ಪುಷ್ಪ ತವಕಪಟ್ಟಳು. ಸಂಜೀವನ ಬಾಯಲ್ಲಿ ಆ ಮಾತು ಬರುವ ಲಕ್ಷಣ ಕಾಣಬರಲಿಲ್ಲ. ಪುಷ್ಪ ಅವನ ಸಮೀಪಕ್ಕೆ ತೆರಳಿ ಟೈ ಸರಿ ಮಾಡುವ ನೆವದಲ್ಲಿ ಅವನನ್ನು ಮುಟ್ಟಿದಳು. ಅಷ್ಟು ಅವಳಿಗೆ ನಾಲದೆನಿಸಿತು.

"ಸ್ವಲ್ಪ ಕೂಂಬ್ (Conb) ಕೊಡಿ."

ಒಳಗಿನಿಂದ ಸಂಜೀವ ಬಾಚಣಿಗೆ ತಂದುಕೊಟ್ಟ. ಪುಷ್ಪ ಅವನನ್ನು ಸೋಫಾ ಕುರ್ಚಿಯ ಮೇಲ ಕುಳ್ಳಿರಿಸಿ ಅವನ ಕ್ರಾಪು ಕಡಿಸಿದಳು

"ಏನು ಮಾಡಿದೆ ಪುಷ್ಪಾ" ಎಂದ.

"ಏನೂ ಇಲ್ಲ, ಕ್ರಾಪು ಸರಿಮಾಡುತ್ತಿದ್ದೇನೆ."

"ಸರಿಯಾಗಿಯೇ ಬಾಚಿಕೊಂಡು ಬಂದಿದ್ದೆನಲ್ಲಾ."

"ನಿಮ್ಮ ಬೈತಲೆ ಹೇಗಿತ್ತು ಬಲ್ಲಿರಾ ?"

"ಹೇಗಿತ್ತು ?"

"ಡಿಸ್ಟ್ರಿಕ್ಟ್ ಬೋರ್ಡ್ ರೋಡ್ ಇದ್ದ ಹಾಗಿತ್ತು."

ಸಂಜೀವ ಗಹಗಹಿಸಿ ನಕ್ಕ. ಪುಷ್ಪ ಮಧ್ಯೆ ಮಧ್ಯೆ ತಲೆ ನೇವರಿಸುತ್ತ ಸಾವಕಾಶವಾಗಿ ಬಾಚಿದಳು

"ಗಂಡಸರಿಗೆ ತಲೆಬಾಚಿಕೊಳ್ಳುವುದಕ್ಕೆ ಬರುವುದಿಲ್ಲರೀ."

"ಅದು ಲೋಕಕ್ಕೇ ತಿಳಿದ ಸತ್ಯ. ನಮ್ಮ ಸೌಂದರ್ಯ ನೋಡಿ ಯಾರು ಮೆಚ್ಚಿಕೊಳ್ಳಬೇಕು."

"ನಾವು. ಹೆಂಗಸರಿಗೆ ಸೌಂದರ್ಯಾನುಭೂತಿ ಇಲ್ಲವೆಂದು ಭಾವಿಸಿ ಕೊಂಡಿರುವಿರಾ ?"

"ಹೆಣ್ಣು ಗಂಡಿನಲ್ಲಿ ಸಿರೀಕ್ಷಿಸುವುದು ಸೌಂದರ್ಯವನ್ನಲ್ಲ."

"ಇನ್ನೇನನ್ನು ?"

"ಪೌರುಷ, ವಿದ್ಯೆ, ಸಂಪತ್ತು, ಔದಾರ್ಯ ಇತ್ಯಾದಿ."

"ಅವುಗಳ ಜತೆಗ ಸೌಂದರ್ಯವನ್ನೂ ನಿರೀಕ್ಷಿಸುತ್ತದೆ. ಗಂಡನ್ನು ಮೆಚ್ಚಿಸಲು ಹೆಣ್ಣು ಹೇಗೆ ಅಲಂಕಾರಮಾಡಿಕೊಳ್ಳುವುದೋ ಹಾಗೇ ಹೆಣ್ಣನ್ನು ಮೆಚ್ಚಿಸಲು ಗಂಡೂ ಪ್ರಯತ್ನಿಸಬೇಕು."

"ಹಾಗೇನು ! ಇನ್ನು ಮೇಲೆ ಗಂಡೂ ಮುಖಕ್ಕೆ ಪೌಡರ್ ಹಾಕಿ ಕೊಂಡು, ತುಟಿಗೆ ಕೆಂಪು ಹಚ್ಚಿಕೊಳ್ಳಬೇಕು."

"ಹಾಗಲ್ಲ. ಗಂಡು ಹೆಂಗಸಿನ ಹಾಗೆ ಅಲಂಕಾರ ಮಾಡಿಕೊಳ್ಳ ಬೇಕೆಂದಲ್ಲ. ತನ್ನ ಮುಖ - ದೇಹಲಕ್ಷಣ ಕಾಣುವಂತೆ ಅಲಂಕಾರ ಮಾಡಿ ಕೊಳ್ಳಬೇಕು."

"ಈ ವಿಷಯದಲ್ಲಿ ನಾನು ಕೇವಲ ಅಶಿಕ್ಷಿತನೆಂದು ಒಪ್ಪಿಕೊಂಡು ಬಿಡುತ್ತೇನೆ"

ಎಂದು ಸಂಜೀವ ನಕ್ಕ. ಪುಷ್ಪನೂ ಅವನ ಜತೆ ನಕ್ಕುಬಿಟ್ಟಳು

ಪುಷ್ಪನನ್ನು ಕರೆದುಕೊಂಡು ಸಂಜೀವ ನೇರವಾಗಿ ಬೊಂಬಾಯಿ ಹೊಟೇಲಿಗ ಬಂದುಕುಳಿತು ಮಾಣಿಯನ್ನು ಕರೆದು ಖಾರ, ಸಿಹಿ ತಿಂಡಿಯನ್ನೂ ಕಾಫಿಯನ್ನೂ ತರಹೇಳಿದ.

"ಈಗೇಕೆ ತಿಂಡಿ"

"ಬರೀ ಕಾಫಿ ಕುಡಿದರೆ ಮೈಗೆ ಒಳ್ಳೆಯದಲ್ಲವಂತೆ."

ಉಪಾಹಾರ ಮುಗಿದ ಮೇಲೆ ಬೀಡ ತರಿಸಿ ಪುಷ್ಪನಿಗಿತ್ತು ತಾನೂ ಸೇವಿಸಿದ. ಬಿಲ್ ಕೊಡುವ ಮುನ್ನ ಅರ್ಧಪ್ಯಾಕೆಟ್ 'ಗೋಲ್ಡ್‌ಫ್ಲೇಕ್' ಸಿಗರೇಟ್ ತರಿಸಿ, ಒಂದನ್ನು ಅಲ್ಲಿಯೇ ಹಚ್ಚಿದ.

ದಾರಿಯಲ್ಲಿ ಬರುತ್ತ ಪುಷ್ಪ ಕೇಳಿದಳು

"ನೀವು ಸಿಗರೇಟ್ ಸೇದುವುದು ನನಗೆ ಗೊತ್ತೇ ಇರಲಿಲ್ಲ"

"ನಿನಗೆ ಗೊತ್ತಾಗಲೆಂದೇ ಇವತ್ತು ಸಿಗರೇಟ್ ಹಚ್ಚಿದೆ."

"ಎಷ್ಟು ದಿವಸದಿಂದ ಈ ಅಭ್ಯಾಸ."

"ಅಭ್ಯಾಸವಿಲ್ಲ. ಆಗಾಗ್ಗೆ ಒಂದೊಂದು ಸೇದುತ್ತೇನೆ."

ಸಂಜೆಯಾಗುತ್ತ ಬಂದಿತ್ತು. ರಸ್ತೆಯಲ್ಲಿ ಜನರ ಓಡಾಟ ಕಡಿಮೆಯಾಗುತ್ತ ಬಂದಿತ್ತು. ಬಸ್ಸು, ಗಾಡಿಗಳು ಮಾತ್ರ ಯಥಾಕ್ರಮದಂತೆ ಓಡಿಯಾಡುತ್ತಿದ್ದವು. ಆಗಾಗ್ಗೆ ಬಿರುಗಾಳಿಯಂತೆ ಒಂದೊಂದು ಮೋಟಾರು ಅತ್ಯುಗ್ರವೇಗದಲ್ಲಿ ಹಾದುಹೋಗುತ್ತಿತ್ತು

ಇಬ್ಬರೂ ರಸ್ತೆ ದಾಟುವಲ್ಲಿ ಒಂದು ಮೋಟಾರು ರಭಸವಾಗಿ ಹೋಗುತ್ತ ಹಾದಿಯಲ್ಲಿ ಹೋಗುವವರ ಮೇಲೆ ಧೂಳಿನ ರಾಶಿ ತೂರಿತು ಪುಷ್ಪ ಕರವಸ್ತ್ರ ತೆಗೆದುಕೊಂಡು ಕಣ್ಣು ಮೂಗು ಒರಸಿಕೊಳ್ಳುತ್ತಾ

"ಸ್ಪೀಡಾಗಿ (Speed) ಹೋಗುವವರ ಮೇಲೆ ಪೋಲೀಸಿನವರು ಕ್ರಮ ತೆಗೆದುಕೊಳ್ಳಬೇಕು."

"ಹೋಗಲಿಬಿಡು. ಅವರ ಆತುರ ಅವರಿಗೆ."

"ಮೋಟಾರಿನಲ್ಲಿ ಹೋಗುವವರಿಗೂ ಆತುರವೇ !"

"ಅವರು ಕನ್ನಂಬಾಡಿಗೆ ಮಧುಚಂದ್ರ (Honeymoon) ದರ್ಶನಕ್ಕೆ ಹೊರಟಿದ್ದಾರೆಂಬುದು ಮರೆತಿರುವೆ."

"ಮಧುಚಂದ್ರ ದರ್ಶನಕ್ಕೆ ಕನ್ನಂಬಾಡಿಗೆ ಹೋಗಬೇಕೇನು ?"

"ಅಲ್ಲಿ ಸಕಲ ಸೌಕರ್ಯವಿದೆ - ಬಾರ್ (Bar) ಇದೆ."

"ಹಾಗೇನು !"

ಎಂದು ರಾಗವೆಳೆದು ಪುಷ್ಪ ನುಡಿದಳು. ಮಾತು ಬದಲಾಯಿಸುವುದು ಅಗತ್ಯವೆಂದು ಸಂಜೀವನಿಗೆ ತೋರಿತು.

"ಎಲ್ಲಿಗೆ ಹೋಗೋಣ."

"ವಾಕ್ ಹೋಗೋಣವೆಂದಿರಿ."

"ಕುಕ್ಕನಹಳ್ಳಿ ಕೆರೆಯ ಮೇಲೆ ಹೋಗೋಣ. ಅಲ್ಲಿ ಸ್ವಲ್ಪಹೊತ್ತು ಕೂಡಬಹುದು."

ಇಬ್ಬರೂ ಕುಕ್ಕನಹಳ್ಳಿ ಕೆರೆಯ ಏರಿ ಮುಟ್ಟುವ ವೇಳೆಗೆ ಹೆಪ್ಪು ಗಟ್ಟಿದಂತೆ ಸಂಜೆ ಕವಿದಿತ್ತು. ಚಂದ್ರೋದಯ ಸೂಚನೆ ಮಾತ್ರ ಕಾಣಬರು ತ್ತಿತ್ತು. ಸೂಕ್ಷ್ಮವಾದ ಬೆಳಕುಬೆರೆತ ಮಧುರಕತ್ತಲೆ ವ್ಯಾಪಿಸಿತ್ತು.

ಕೆರೆಯ ಏರಿಯ ಮೇಲೆ ಅಲ್ಲಲ್ಲಿ ಲತಾಮಂಟಪಗಳಿದ್ದವು. ಕೆಲವು ಲತಾಮಂಟಪಗಳಲ್ಲಿ ಗೆಳೆಯರು ಕುಳಿತು ಹರಟೆಕೊಚ್ಚುತ್ತಿದ್ದರು. ಅವರು ಹಚ್ಚಿದ್ದ ಸಿಗರೇಟಿನ ಕುಡಿಬೆಳಕು ದೂರಕ್ಕೆ ಮಿಂಚುಹುಳದಂತ ಕಾಣುತ್ತಿತ್ತು.

ಸ್ವಲ್ಪ ದೂರದಲ್ಲಿದ್ದ ಒಂದು ಲತಾಮಂಟಪವನ್ನೂ ಯಾರೂ ಆಕ್ರಮಿಸಿ ಕೊಂಡಿರಲಿಲ್ಲ. ಸಂಜೀವ, ಪುಷ್ಪ ಹೋಗಿ ಅಲ್ಲಿ ಕುಳಿತರು.

"ಸಿನಿಮಾ ಮಂದಿರದ ಕತ್ತಲೆಕೋಣೆಯಲ್ಲಿ ಕೂಡುವುದಕ್ಕಿಂತ ಇಲ್ಲಿ ಕೂಡುವುದು ಲೇಸಲ್ಲವೆ ?"

"ಹೌದು . . . . . ನೀವೇಕೆ ಮನಸ್ಸುಬಿಚ್ಚಿ ಮಾತನಾಡುವುದಿಲ್ಲ."

"ಯಾವ ವಿಷಯ ?"

"ಯಾವ ವಿಷಯವನ್ನೂ ನನಗೆ ಸ್ಪಷ್ಟವಾಗಿ ತಿಳಿಸುವುದಿಲ್ಲ. ನಿಮ್ಮ ನಂಬಿಕೆಗೆ ನಾನು ಅರ್ಹಳಲ್ಲವೇ ?"

"ನಿನ್ನಲ್ಲಿ ಆ ಭಾವನೆ ಬರಲು ನಾನು ಯಾವ ಅಪರಾಧವನ್ನೂ ಮಾಡಿಲ್ಲ."

"ಹಾಗಾದರೆ ನಾನು ಕೇಳುವ ಪ್ರಶ್ನೆಗೆ ನೇರವಾಗಿ ಉತ್ತರಕೊಡುವಿರಾ ?"

"ಕೇಳು."

"ಮುಂದೇನು ಮಾಡಬೇಕೆಂದಿರುವಿರಿ ?"

"ಅದೇ ನನಗೂ ಸಮಸ್ಯೆಯಾಗಿದೆ. ನೌಕರಿ ಸೇರುವುದಕ್ಕೆ ಇಚ್ಛೆಯಿಲ್ಲ. ಸ್ವತಂತ್ರವಾಗಿ ಏನಾದರೂ ಮಾಡಬೇಕೆಂದಿರುವೆ."

"ವ್ಯಾಪಾರವೇ ?"

"ವ್ಯಾಪಾರದ ಅನುಭವ ನನಗಿಲ್ಲ. ಸರಿಯಾದ ಜತೆಗಾರರು ಸಿಕ್ಕಿದರೆ

ವ್ಯಾಪಾರ ಮಾಡಬಹುದು. — ಮುಂದೆ ನೀನೇನು ಮಾಡಬೇಕೆಂದಿರುವೆ ಪುಷ್ಪಾ."

"ನನ್ನದೂ ನಿಮ್ಮ ಹಾಗೇ ಅನಿಶ್ಚಿತ. ಕೆಲಸಕ್ಕೆ ಸೇರು ಎಂದು ಮನೆಯಲ್ಲಿ ಒತ್ತಾಯಮಾಡುತ್ತಿದ್ದಾರೆ. ನೀವೇ ಹೇಳಿ - ನಾನೇನು ಮಾಡಲಿ "

"ನಿನ್ನ ಮನೆಯ ವಿಷಯವೇ ತಿಳಿಯದೆ ನಾನೇನು ಹೇಳಲಿ."

"ನಿಮಗದರಲ್ಲಿ ಆಸಕ್ತಿಯಿಲ್ಲವೆಂದು ಹೇಳದೆ ಬಿಟ್ಟಿದ್ದೆ "

"ಹೆಂಗಸರು - ನಿಮ್ಮ ತರ್ಕದ ವೈಖರಿಯೇ ವೈಖರಿ "

"ಏಕೆ ?"

"ಆಸಕ್ತಿಯಿಲ್ಲವೆಂದು ಎಷ್ಟು ಸುಲಭವಾಗಿ ಹೇಳಿಬಿಟ್ಟೆ ನೋಡು."

"ಹೋಗಲಿ ಬಿಡಿ. ನನ್ನ ತಿಳುವಳಿಕೆಯೇ ತಪ್ಪು ಎಂದು ಒಪ್ಪಿಕೊಳ್ಳುತ್ತೇನೆ. ನನ್ನ ಮನೆಯವರು ಅಷ್ಟು ಅನುಕೂಲಸ್ಥರಲ್ಲ ನನ್ನ ತಂದೆ ಬೆಂಗಳೂರಿನ ಇ ಎಲ್.ಎಸ್ ಸೊಸೈಟಿಯ (E L S Ecclesiastical Literature Society) ಮುದ್ರಣಾಲಯದ ಮ್ಯಾನೇಜರ್ ಆಗಿದ್ದರು. ಅಲ್ಲಿಯೇ ಈಗ ಫೋರ್‌ಮನ್ (Foreman) ಆಗಿರುವ ಮಿ. ಸಾಮ್ಯುಯಲ್ ಅವರಿಗೇ ನನ್ನ ಅಕ್ಕ ಜ್ಯೂಡಿ (Judy) ಯನ್ನು ಕೊಟ್ಟು ಲಗ್ನ ಆಗಿದೆ. ಅಕ್ಕನಿಗೆ ನನಗೆ ಓದಿಸಿದ ಖರ್ಚೇ ಬಹಳ ಬಂತು. ಈಗ ನಾನು ಕೆಲಸಕ್ಕೆ ಸೇರಬೇಕೆಂದು ತಂದೆ ಒತ್ತಾಯಮಾಡುತ್ತಿದ್ದಾರೆ.''

"ನಿಮ್ಮ ತಂದೆ ತಾಯಿಯ ಪರಿಚಯ ನನಗೆ ಮಾಡಿಕೊಟ್ಟೇ ಇಲ್ಲ."

"ಅದಕ್ಕೇನು - ಇಂದೇ ಬರುವಿರಾ ?'

"ಇವತ್ತು ಬೇಡ."

"ನಾನು ಏನುಮಾಡಲಿ ಹೇಳಿ."

"ಒಳ್ಳೆಯ ಕೆಲಸ ಸಿಕ್ಕಿದರೆ ಏಕೆ ಸೇರಬಾರದು."

"ನನಗೆ ಕೆಲಸ ಸೇರಲು ಇಷ್ಟವಿಲ್ಲ"

ಎಂದು ಖಡಾಖಂಡಿತವಾಗಿ ಹೇಳಿದಳು.

ಆಕಾಶದಲ್ಲಿ ಅದೇ ಚಂದ್ರ ಮೂಡುತ್ತಿದ್ದ. ಕೆರೆಯ ನೀರಿನ ಮೇಲೆ ಮೃದುವಾಗಿ ಚಂದ್ರನ ಬೆಳಕು ಪಸರಿಸಿತ್ತು. ಹರಿಯುತ್ತಿದ್ದ ನೀರು ಹಾಲು ಹೊಳೆಯಂತೆ ಕಾಣಬರುತ್ತಿತ್ತು. ಎರಡು ಕಮಲದ ಮೊಗ್ಗೆಗಳು ಮುಂದಾಸಿಲನ

ಪ್ರಭಾವಕ್ಕೆ ಸಿಕ್ಕಿಬಿದ್ದು ಒಂದಕ್ಕೊಂದು ತೆಕ್ಕೆಹಾಕಿಕೊಳ್ಳುತ್ತಿದ್ದವು. ವಾಯು ವೇಗ ಕಡಿಮೆಯಾದರೆ ಅವು ಬೇರೆ ಬೇರೆಯಾಗುತ್ತಿದ್ದವು. ಸಂಜೀವ ಅವುಗಳ ಚೆಲ್ಲಾಟ ನೋಡುತ್ತ ಮೈಮರೆತಿದ್ದ.

"ನಿಮ್ಮ ಯೋಚನೆ ನಿಮಗೆ - ನಾನಿರುವುದೂ ಮರೆತುಬಿಟ್ಟಿರುವಿರಿ."

"ಮರೆತಿಲ್ಲ ಪುಷ್ಪಾ - ಅಲ್ಲಿ ನೋಡು."

ಪುಷ್ಪಾ ಪಕ್ಕಕ್ಕೆ ಬಾಗಿ ನೋಡಿದಳು. ಸಂಜೀವ ಅವಳಿಗೆ ಕಮಲಗಳನ್ನು ತೋರಿಸಿದ. ಪುಷ್ಪನ ಕೆನ್ನೆ ಸಂಜೀವನ ಕೆನ್ನೆಗೆ ತಗುಲಿತು. ಅವಳೇ ಮೆಲ್ಲನೆ ತನ್ನ ಕೈಯನ್ನು ಸಂಜೀವನ ಕೈಯಲ್ಲಿಟ್ಟಳು. ಸಂಜೀವ ಅದನ್ನು ಭದ್ರವಾಗಿ ಹಿಡಿದ.

"ಕಮಲಗಳು ಕೂಡುತ್ತಿಲ್ಲವೇ !"

"ಬೆಳಿಗ್ಗೆಯ ವೇಳೆಗೆ ಅವು ಅರಳುತ್ತವೆ. ಆಗ ಬಂದು ನೋಡು."

ಆ ನಸುಬೆಳಕಿನಲ್ಲಿಯೂ ಪುಷ್ಪನ ಎರಡು ಕಣ್ಣುಗಳು ವಿದ್ಯುದ್ದೀಪಗಳಂತೆ ಪ್ರಕಾಶಿಸುತ್ತಿದ್ದವು. ಪುಷ್ಪ ಮೆಲ್ಲನೆ ಸಂಜೀವನ ಸಮೀಪಕ್ಕೆ ಸರಿದು ಕುಳಿತಳು. ಸಂಜೀವನೂ ಅವಳ ಪಕ್ಕಕ್ಕೆ ಸರಿದ. ಅವನ ಎಡತೋಳು ಅವಳ ಸೊಂಟವನ್ನು ಬಳಸಿತು.

ಪುಷ್ಪ ಕುತ್ತಿಗೆಯೆತ್ತಿ ಸಂಜೀವನನ್ನು ದಿಟ್ಟಿಸಿ ನೋಡುತ್ತಾ

"ನನ್ನನ್ನು ಪ್ರೀತಿಸುವಿರಾ?"

"ಬಾಯಲ್ಲಿ ಹೇಳಬೇಕೇ !"

"ನನ್ನಿಂದೇಕೆ ದೂರ ನಿಲ್ಲುವಿರಿ?"

"ಸಮೀಪದಲ್ಲೇ ಇರುವೆನಲ್ಲಾ !'

"ಈಗಲ್ಲ - ಮಿಕ್ಕ ವೇಳೆಯಲ್ಲಿ.!"

"ಮನಸ್ಸು ದೂರ ನಿಂತಿಲ್ಲ."

ಪುಷ್ಪ ತನ್ನ ಬಲತೋಳಿನಿಂದ ಸಂಜೀವನನ್ನಪ್ಪಿದಳು.

ಹೆಡೆ ತುಳಿಸಿಕೊಂಡ ಹಾವು ಎದ್ದು ನಿಲ್ಲುವಂತ ಸಂಜೀವನ ಸುಪ್ತಶಕ್ತಿ ಯೆದ್ದು ನಿಂತಂತಾಯಿತು. ಪುಷ್ಪನನ್ನು ಬಲವಾಗಿ ಅಪ್ಪಿ ಅವಳ ತುಟಿಗಳಿಗೆ ತನ್ನ ತುಟಿ ಕೂಡಿಸಿದ.

ಅರೆನಿಮಿಷದಲ್ಲಿ ವಿಸ್ಮೃತಿಯನ್ನು ಕೊಡವಿಕೊಂಡೆದ್ದು ಸಂಜೀವ

"ಹೊತ್ತಾಗುತ್ತಾ ಬಂತು. ಮನೆಯಲ್ಲಿ ನಿನ್ನನ್ನು ಆಕ್ಷೇಪಿಸುತ್ತಾರೆ"

ಎಂದು ಹೇಳಿದ. ಪುಷ್ಪ ವಿಧಿಯಿಲ್ಲದೆ ಎದ್ದು ನಿಂತಳು. ಇಬ್ಬರೂ ಬಸ್ ನಿಲ್ದಾಣದವರೆಗೆ ಬಂದು ಮಾರ್ಕೆಟ್ಟಿಗೆ ಹೋಗುವ ಬಸ್ ಹತ್ತಿದರು.

ಮಾರ್ಕೆಟ್ಟಿನ ಬಸ್ ಸ್ಟ್ಯಾಂಡಿನಲ್ಲಿ ಇಬ್ಬರೂ ಇಳಿದು ಚಾಮುಂಡಿ ವಿಸ್ತರಣಕ್ಕೆ ಹೋಗುವ ಬಸ್ಸಿನ ದಾರಿ ನೋಡುತ್ತ ನಿಂತರು.

ಬಸ್, ಸ್ಟ್ಯಾಂಡಿಗೆ ಬರಲು ಚೌಕ ಬಳಸಿತು. ಪುಷ್ಪ ಮೆಲ್ಲನೆ

"ನನ್ನನ್ನು ಕನ್ನಂಬಾಡಿಗೆ ಯಾವಾಗ ಕರೆದುಕೊಂಡು ಹೋಗುವಿರಿ"

ಎಂದು ಕೇಳಿದಳು. 'ಹೋಗೋಣ' ಎಂದಷ್ಟೇ ಸಂಜೀವ ಉತ್ತರಿಸಿದ ಅವಳನ್ನು ಬಸ್ಸಿನಲ್ಲಿ ಕೂಡಿಸಿ ತಾನು ಕಿಟಕಿಯ ಪಕ್ಕದಲ್ಲಿ ನಿಂತ.

"ನಿಮ್ಮ ಒಂಟಿಕೊಪ್ಪಲು ಬಸ್ ಕಾದಿದೆ" ಎಂದಳು

"ಬಸ್ಸಿನಲ್ಲಿ ಹೋಗುವುದಿಲ್ಲ. ನಡೆದೇ ಹೋಗುತ್ತೇನೆ" ಎಂದ.

ಚಾಮುಂಡಿ ವಿಸ್ತರಣದ ಬಸ್ ಅಲ್ಲಿಂದ ಹೊರಟುಬಿಟ್ಟಿತು. ಬಸ್ ಕಣ್ಮರೆಯಾಗುವವರೆಗೆ ಅಲ್ಲಿಯೇ ನಿಂತಿದ್ದು ಕಾಲ್ನಡಗೆಯಲ್ಲಿ ಸಂಜೀವ ಒಂಟಿಕೊಪ್ಪಲಿನ ಕಡೆ ಹೊರಟ

ಆಗವನನ್ನು ಯಾರಾದರೂ ಕಂಡಿದ್ದರೆ ಕಳ್ಳಂಗಡಿಯಿಂದ ಬರುತ್ತಿದ್ದಾನೆಂದು ಭಾವಿಸುತ್ತಿದ್ದರು. ಸಂಜೀವನ ನಡಗೆಯಲ್ಲಿ ಸ್ಥೈರ್ಯವೇ ಉಳಿದಿರಲಿಲ್ಲ.

೭

ಸುಂದರ ಹತ್ತುಗಂಟೆಗೆ ಊಟಮಾಡಿಕೊಂಡು ಹೋದರೆ, ಸಂಜೆ ಅವನು ಮನೆಗೆ ಹಿಂದಿರುಗುವವರೆಗೆ ಹೊತ್ತುಗಳೆಯುವುದೇ ಸುನಂದೆಗೆ ದೊಡ್ಡ ಸಮಸ್ಯೆಯಾಗಿತ್ತು. ಉಳಿದಿದ್ದ ಮನೆಗೆಲಸ ಮುಗಿಸುವುದರಲ್ಲಿ ಸ್ವಲ್ಪ ಹೊತ್ತು ಗಳೆಯುತ್ತಿದ್ದಳು, ಸ್ವಲ್ಪ 'ಓದುವ ಶಾಸ್ತ್ರ' ಮಾಡುತ್ತಿದ್ದಳು. ಹನ್ನೆರಡು ಗಂಟೆಯಾದಮೇಲೆ ಗಫೂರನಿಗೂ ಬಡಿಸಿ, ತಾನೂ ಊಟ ಮುಗಿಸುತ್ತಿದ್ದಳು.

ಊಟ ಮುಗಿಸಿಕೊಂಡು ಸುನಂದಾ ತೊಟ್ಟಿಯಲ್ಲಿ ಕ್ರೋಷಾ ಕಡ್ಡಿ, ದಾರ ಹಿಡಿದು ಕೂಡುತ್ತಿದ್ದಳು. ಗಫೂರ್ ಬಂದು ಮೂರ, ಬಾಗಿಲು ಬಳಿ ಕೂಡುತ್ತಿದ್ದ. 'ಅಮ್ಮಾಜಿ' ಬೇಸರ ಪರಿಹಾರಕ್ಕೆ ಹರಟೆ ಹೊಡೆಯುತ್ತಿದ್ದ.

ಕಾಲೇಜಿನ ಪೂರ್ವೇತಿಹಾಸ, ಹಿಂದಿದ್ದ ಪ್ರೊಫೆಸರುಗಳ ವಿಷಯ, ಕಾಲೇಜಿನ ರಾಜಕಾರಣಗಳನ್ನೆಲ್ಲಾ ವರದಿ ಒಪ್ಪಿಸುತ್ತಿದ್ದ

ಗಫೂರನ ಜೀವನ ಕಾಲೇಜಿನೊಂದಿಗೆ ಹಾಸುಹೊಕ್ಕಾಗಿದ್ದುದರಿಂದ ಅವನು ಎರಡುಮೂರು ದಿವಸಕ್ಕಾದರೂ ಒಮ್ಮೆ ಕಾಲೇಜ್ ಕಡೆ ಹೋಗಿ 'ಕಪ್ಪಣ್ಣಸ್ವಾಮಿ'ಯನ್ನು, ಲ್ಯಾಬೊರೇಟರಿಯ ಆಳುಗಳನ್ನು, ತನ್ನ ಪರಿಚಯದ ಲೆಕ್ಚರುಗಳನ್ನು ಕಂಡುಬಂದರೇ ಸಮಾಧಾನ. ಕಾಲೇಜಿನಲ್ಲಿ ತಾನು ಸಂಗ್ರಹಿಸುತ್ತಿದ್ದ ಸುದ್ದಿಗಳನ್ನು ಚಾ-ಚೂ ತಪ್ಪದೆ ಸುನಂದೆಗೆ ವರದಿ ಮಾಡುತ್ತಿದ್ದ. ಹೀಗಾಗಿ ಕಾಲೇಜಿನ ವಿಷಯ ಸುಂದರನಿಗಿಂತಲೂ ಸುನಂದೆಗೆ ಹೆಚ್ಚು ಗೊತ್ತಿತ್ತು.

ಒಂದು ದಿನ ಗಫೂರ್ ತಿಳಿಸಿದ ಸುದ್ದಿ ಸುನಂದೆಯನ್ನು ಖಿನ್ನಳನ್ನಾಗಿಸಿತು.

"ಇವರ ಮೇಲೆ ಏಕೆ ನಾಯಿಡು ಪ್ರೊಫೆಸರಿಗೆ ಇಷ್ಟು ದ್ವೇಷ."

"ದ್ವೇಷವಲ್ಲ ಅಮ್ಮಾಜಿ. ಅಳಿಯನನ್ನು ಮೇಲೆತ್ತುವುದಕ್ಕೆ ಇವರನ್ನು ತುಳಿಯುತ್ತಿದ್ದಾರೆ."

"ಪ್ರೊ. ನಾಯಿಡು ಪ್ರಿನ್ಸಿಪಾಲರಾದರೆ ಇವರಿಗೆ ಉಳಿಗಾಲವೇ ಇಲ್ಲ."

"ಇವರನ್ನೇನು ಮಾಡಬಲ್ಲರು ಅಮ್ಮಾಜಿ "

"ಜೀವಮಾನವೆಲ್ಲಾ ಲೆಕ್ಚರರಾಗಿಯೇ ಕೊಳೆಯಬೇಕಲ್ಲ ಗಫೂರ್."

"ಜಾಲಿಗಿಡದಲ್ಲೂ ಮುಳ್ಳು ಇರತ್ತೆ, ಗುಲಾಬಿ ಗಿಡದಲ್ಲೂ ಮುಳ್ಳು ಇರತ್ತೆ ಅಮ್ಮಾಜಿ."

ಗಫೂರನ ಕಾವ್ಯಮಯವಾಣಿಗೆ ಸುನಂದಾ ನಕ್ಕರೂ ಅವಳ ಮನಸ್ಸಿಗೆ ಸ್ವಲ್ಪವೂ ಸಮಾಧಾನವಿರಲಿಲ್ಲ

ಸಂಜೆ ಸುಂದರ ಮನೆಗೆ ಬರುವುದನ್ನೇ ಕಾಯುತ್ತಿದ್ದಳು. ಅವನಿಗೆ ಕಾಫಿ ಉಪಾಹಾರವಿತ್ತು

"ಇವತ್ತು ಏಕೆ ಇಷ್ಟು ಬೇಸರಗೊಂಡಿರುವಿರಿ" ಎಂದು ಕೇಳಿದಳು.

"ಬೇಸರವೆಲ್ಲಿಂದ ಬಂತು. ಸ್ವಲ್ಪ ಆಯಾಸವಾಗಿದೆ. ನಾಲ್ಕು ಪೀರಿಯಡ್ ನನಗೇ ಬಿದ್ದಿತ್ತು."

"ಕಾಲೇಜಿನಲ್ಲಿ ಏನು ವಿಶೇಷ ಸಮಾಚಾರ ?"

"ವಿಶೇಷ ಸಮಾಚಾರವೇನು ಇರುತ್ತದೆ."

"ನೀವೇಕೆ ನನ್ನಲ್ಲಿ ಮರೆಮಾಚುತ್ತೀರಿ."

"ಯಾವ ವಿಷಯ ?"

"ಇನ್ನು ಯಾವ ವಿಷಯ - ನಿಮ್ಮ ಕಾಲೇಜಿನ ವಿಷಯ."

"ಮರೆಮಾಚುತ್ತಿಲ್ಲ ಸುನೂ. ನನಗೆ ಆಗುತ್ತಿರುವ ಅನ್ಯಾಯ ಕಂಡು ಮನಸ್ಸಿಗೆ ನೋವಾಗಿದೆ."

"ಪ್ರೊ. ನಾಯಿಡು ಪ್ರಿನ್ಸಿಪಾಲರಾಗುವುದು ನಿಜವೇ ?"

"ನಿನಗೆಲ್ಲಾ ಗೊತ್ತಾಗಿದೆ. ಗಫೂರ್ ಹೇಳಿದನೋ ?"

"ಹೂ ! ಹೇಳಿದ."

"ಪ್ರಿಯರ್ ಟು ರಿಟೈರ್‌ಮೆಂಟ್ (Prior to retirement) ಈಗಿನ ಪ್ರಿನ್ಸಿಪಾಲರು ರಜೆಯಮೇಲೆ ಹೋಗುತ್ತಾರೆ. ಅವರ ಸ್ಥಾನಕ್ಕೆ ಪ್ರೊ. ನಾಯಿಡು ಬರುತ್ತಾರೆ. ಪ್ರೊ. ನಾಯಿಡು ಸ್ಥಾನಕ್ಕೆ ಅಸಿಸ್ಟೆಂಟ್ ಪ್ರೊಫೆಸರ್ ಕೇಶವಯ್ಯ ಬರುತ್ತಾರೆ. ಅಸಿಸ್ಟೆಂಟ್ ಪ್ರೊಫೆಸರ್ ಸ್ಥಾನ ಯಾರಿಗೆ ಕೊಡಬೇಕೆಂದು ಜಿಜ್ಞಾಸೆ ಹುಟ್ಟಿದೆ. ನನಗೆ ಕೊಡಿಸಬೇಕೆಂದು ಪ್ರಿನ್ಸಿಪಾಲ್ ಪ್ರಯತ್ನಪಡು ತ್ತಿದ್ದಾರೆ. ಜಯರಾಮ್‌ಗೆ ಕೊಡಿಸಬೇಕೆಂದು ಪ್ರೊ. ನಾಯಿಡು ಭೂಮಿ ಆಕಾಶ ಅಲುಗಾಡಿಸುತ್ತಿದ್ದಾರೆ."

"ನಿಮಗೆ ಸಿಕ್ಕುವ ಸಂಭವವಿದೆಯೋ ?"

"ಎಳ್ಳಷ್ಟು ಇಲ್ಲ. ರಿಟೈರ್ ಆಗುವ ಪ್ರಿನ್ಸಿಪಾಲ್ ಮಾತು ಯಾರು ಕೇಳುತ್ತಾರೆ. ಸೆನೆಟ್‌ನಲ್ಲಿಯೂ ಪ್ರೊ. ನಾಯಿಡು ಅವರ ಪ್ರಭಾವ ಸಾಕಷ್ಟಿದೆ —ಎಲ್ಲಕ್ಕೂ ಹೆಚ್ಚಾಗಿ ಜಾತಿಯ ಕಂಟಕ ಒಂದಿದೆಯಲ್ಲಾ."

"ಯೋಗ್ಯತೆಗೆ ಬೆಲೆ ಕೊಡುವ ಯಾವ ವಿಶ್ವವಿದ್ಯಾನಿಲಯವೂ ಹಿಂದೂ ಸ್ಥಾನದಲ್ಲಿಲ್ಲವೇ !"

"ಇರಬಹುದು."

"ಕೆಲಸಕ್ಕೇಕೆ ನೀವು ರಾಜೀನಾಮೆ ಕೊಡಬಾರದು. ಉತ್ತರದ ಯಾವ ದಾದರೂ ವಿಶ್ವವಿದ್ಯಾನಿಲಯದಲ್ಲಿ ನಿಮ್ಮ ಯೋಗ್ಯತೆಗೆ ತಕ್ಕ ಕೆಲಸ ಸಿಕ್ಕೇ ಸಿಕ್ಕುತ್ತದೆ."

"ಅದರಲ್ಲಿ ಏನೂ ಸಂದೇಹವಿಲ್ಲ ಸುನೂ. ಆದರೆ ಒಂದು ಮಾತು ಹೇಳುತ್ತೇನೆ. ಶುದ್ಧ ಸೆಂಟಿಮೆಂಟಲ್ ಫೂಲ್ (Sentimental fool) ಎಂದುಕೊಳ್ಳಬೇಡ. ನನ್ನ ವಿದ್ಯಾಭ್ಯಾಸವಾದುದೆಲ್ಲಾ ಈ ಕಾಲೇಜಿನಲ್ಲಿ. ನನಗೇನಾದರೂ ಅಲ್ಪಸ್ವಲ್ಪ ವಿದ್ಯೆ ಬಂದಿದ್ದರೆ ಅದು ಪ್ರೊ. ನಾಯಿಡು ಅವರ ಆಶೀರ್ವಾದದ ಪ್ರಭಾವ. ಈ ಕಾಲೇಜಿನ ಲ್ಯಾಬೊರೇಟರಿಯಲ್ಲಿ ನನ್ನ ಪ್ರಯೋಗಗಳನ್ನು ನಡಸಿ ಕೃತಕೃತ್ಯನಾಗಿದ್ದೇನೆ. ನನ್ನ ಸಂಶೋಧನೆಗಳಿಗೆ ಇಂದಲ್ಲ ನಾಳೆ ಅಖಿಲಭಾರತದ ಖ್ಯಾತಿ - ವಿಶ್ವದ ಖ್ಯಾತಿ ಬರುವುದೆನ್ನುವುದರಲ್ಲಿ ನನಗೆ ಸ್ವಲ್ಪವೂ ಅನುಮಾನವಿಲ್ಲ ನನ್ನ ಪ್ರಯತ್ನ ಫಲಿಸುವ ವೇಳೆಯಲ್ಲಿ ಅದರ ಕೀರ್ತಿಯನ್ನು ಬೇರೆ ವಿಶ್ವವಿದ್ಯಾನಿಲಯಕ್ಕೆ ಕೊಡಲೇ? ನನ್ನನ್ನು ಸಾಕಿ ಸಲಹಿ, ವಿದ್ಯೆ ಕಲಿಸಿ, ಬುದ್ಧಿಗೊಟ್ಟ ಈ ಮಾತೃಮಂದಿರಕ್ಕೆ ದ್ರೋಹ ಬಗೆಯಲೇ? ಇಂದು ನನಗೆ ಅನ್ಯಾಯವಾಗುತ್ತಿದೆ ನಿಜ - ನನ್ನನ್ನು ಸಾಕಿದ ಪ್ರೊ. ನಾಯಿಡು ಅವರೇ ನನಗೆ ಅನ್ಯಾಯಮಾಡುತ್ತಿದ್ದಾರೆ. ಆದರೆ ನಾಳೆ ಇವರೇ ನನ್ನನ್ನು ಆದರಿಸುವರೆಂದು ನಾನು ಬಲ್ಲೆ. ಲೋಕ ಹೊಗಳುವುದು ಒಂದು ತೂಕವಾದರೆ ನನ್ನ ಗುರುಗಳು ಒಂದು ಒಳ್ಳೆಯ ಮಾತು ಆಡುವುದು ಹೆಚ್ಚಿನ ತೂಕವಲ್ಲವೇ?"

"ಇದು ನನ್ನ ಗಂಟಲು ಒಳಗಿಳಿಯದ ವಾದಸರಣಿ. ಅನ್ಯಾಯಕ್ಕೆ ತಲೆಬಾಗಿ ಅದನ್ನು ಸಹಿಸಿಕೊಳ್ಳುವುದು ದೌರ್ಬಲ್ಯದ ಲಕ್ಷಣ."

"ಬ್ರಿಟಿಷರ ಅನ್ಯಾಯ ಗಾಂಧೀಜಿ ಸಹಿಸಿಕೊಂಡಿದ್ದರು - ಅದೂ ದೌರ್ಬಲ್ಯದ ಲಕ್ಷಣವೇ?"

"ಅಲ್ಲದೆ ಮತ್ತೇನು. ನಮ್ಮಲ್ಲಿ ಐಕ್ಯತೆ ಇರಲಿಲ್ಲ - ಬ್ರಿಟಿಷರೊಂದಿಗೆ ಹೋರಾಡುವುದಕ್ಕೆ ಸೈನ್ಯವಿರಲಿಲ್ಲ - ಪ್ಲೇನುಗಳಿರಲಿಲ್ಲ. ನಮ್ಮ ಸ್ಥಿತಿಗತಿ ನೋಡಿಕೊಂಡೇ ಗಾಂಧೀಜಿ 'ಅಹಿಂಸೆ'ಯ ಯುಕ್ತಿಹೂಡಿದ್ದು."

"ಭಾರತ ಅಷ್ಟು ದುರ್ಬಲವಾಗಿರಲಿಲ್ಲ ಸುನೂ, ಭಾರತಾದ್ಯಂತ ಸ್ವಾತಂತ್ರ್ಯೇಚ್ಛೆ ದಳ್ಳುರಿಯಂತೆ ವ್ಯಾಪಿಸಿತ್ತು. ಗೆರಿಲಾ ಕದನಮಾಡುವುದಕ್ಕೆ ಕೋಟ್ಯಂತರ ಭಾರತೀಯರು ಸಿದ್ಧರಾಗಿದ್ದರು - ಬ್ರಿಟಿಷರ ಅಧೀನದಲ್ಲಿದ್ದ ಭಾರತೀಯ ಸೈನ್ಯದ ಸಿಪಾಯಿಗಳು, ಅಧಿಕಾರಿಗಳು ದಂಗೆಯೇಳಲು ಸಿದ್ಧವಾಗಿದ್ದರು ಗಾಂಧೀಜಿ ಹಿಂಸಾಮಾರ್ಗವನ್ನವಲಂಬಿಸಿ ನಮ್ಮ ಸೈನಿಕರಿಗೆ,

ಸೈನ್ಯಾಧಿಕಾರಿಗಳಿಗೆ ಬೆಂಬಲಕೊಟ್ಟಿದ್ದರೆ ಸೈನ್ಯದಲ್ಲಿದ್ದ ಬ್ರಿಟಿಷರ ಮಾರಣ ಹೋಮವಾಗಿ ಬಿಡುತ್ತಿತ್ತು. ದೆಲ್ಲಿ ಸೆಕ್ರೆಟೇರಿಯಲ್ಲಿಟ್ಟಿನಲ್ಲಿ, ಪ್ರಾಂತ್ಯ ಸರ್ಕಾರ ಗಳ ಸೆಕ್ರೆಟೇರಿಯಟ್ಟಿನಲ್ಲಿದ್ದ ಭಾರತೀಯ ನೌಕರರು ಬ್ರಿಟಿಷರ ಮೇಲೆ ತಿರುಗಿ ಬೀಳಲು ಸಿದ್ಧರಾಗಿದ್ದರು. ಜಪಾನ್, ಜರ್ಮನಿ ಭಾರತಕ್ಕೆ ಬೇಕಾದ ಸಹಾಯ ನೀಡಲು ಮುಂದೆ ಬಂದಿದ್ದವು. ಸುಭಾಷರು ಸೈನ್ಯಸಮೇತರಾಗಿ ಭಾರತಕ್ಕೆ ಬಂದು ಬ್ರಿಟಿಷರೊಂದಿಗೆ ಹೋರಾಡುತ್ತಾರೆಂದು ಸುದ್ದಿಯೂ ಹರಡಿತ್ತು. ಭಾರತ ಬ್ರಿಟಿಷರ ಬಂಧನದಿಂದ ಬಿಡುಗಡೆ ಹೊಂದಲು ಎಲ್ಲ ರೀತಿಯಲ್ಲಿಯೂ ಕಾಲ ಪ್ರಶಸ್ತವಾಗಿತ್ತು. ಆದರೆ ಗಾಂಧೀಜಿ ಒಬ್ಬರು ಅದನ್ನು ಅನೀತಿಯೆಂದು ಸಾರಿದರು. ಹಿಟ್ಲರನಂಥ ಲೋಕಶತ್ರುವಿನೊಂದಿಗೆ ಬ್ರಿಟಿಷರು ಹೋರಾಡು ತ್ತಿದ್ದಾಗ ಭಾರತ ಅವರ ಅಸಹಾಯಕತೆಯ ಪ್ರಯೋಜನ ಪಡೆಯುವುದು ಧರ್ಮವಿರುದ್ಧವೆಂದು ಸಾರಿದರು. ಇದರಿಂದ ಭಾರತದ ಖ್ಯಾತಿ ಕುಂದಿತೇ? ಸ್ವಾತಂತ್ರ್ಯ ಎರಡು ವರ್ಷ ತಡವಾಗಿ ೧೯೪೭ ರಲ್ಲಿ ಬಂತು. ಬ್ರಿಟಿಷರೇ ಸಂತೋಷವಾಗಿ ಈ ದೇಶ ಬಿಟ್ಟುಹೋದರು. ಭಾರತ ಬ್ರಿಟನ್‌ಗಳ ಮೈತ್ರಿ ನಿಕಟವಾದುದಲ್ಲದೆ, ಭಾರತದ ಕೀರ್ತಿ ಅಜರಾಮರವಾಯಿತು. ರಕ್ತ ಚೆಲ್ಲದೆ ಸ್ವಾತಂತ್ರ್ಯಗಳಿಸಿದ ದೇಶ ಇಡಿಯ ಮಾನವೇತಿಹಾಸದಲ್ಲಿ ಭಾರತವೊಂದೇ ಎಂಬ ಕೀರ್ತಿ ದಕ್ಕಿತು. ಇದು ನಮ್ಮ ದೌರ್ಬಲ್ಯದ ಪ್ರಭಾವವೋ ಸುಬಲದ ಪ್ರಭಾವವೋ?"

"ಬ್ರಿಟಿಷರು ಗಾಂಧೀಜಿಯವರನ್ನು ಆದರಿಸಿದಂತೆ ಪ್ರೊ. ನಾಯಿಡು ನಿಮ್ಮನ್ನು ಆದರಿಸುತ್ತಾರೆಂದು ನಂಬಿರುವಿರಾ?"

"ಏಕಾಗಬಾರದು?"

"ಬ್ರಿಟಿಷರ ನೀತಿಯಲ್ಲಿ ಒಂದಂಶ ಪ್ರೊ. ನಾಯಿಡು ಅವರಲ್ಲಿದ್ದರೆ ಅವರು ನಿಮಗೆ ಅನ್ಯಾಯಮಾಡುತ್ತಲೇ ಇರಲಿಲ್ಲ."

"ಅನ್ಯಾಯವಾಗುತ್ತದೆ. ಮನುಷ್ಯ ತಪ್ಪಿನಡೆಯುತ್ತಾನೆ. ತಿಳಿದೂ ತಪ್ಪುಮಾಡುತ್ತಾನೆ - ತಿಳಿಯದೆಯೂ ತಪ್ಪುಮಾಡುತ್ತಾನೆ. ಅದನ್ನು ಸರಿ ಪಡಿಸಲು ಅವನಿಗೆ ಅವಕಾಶಕೊಡಬೇಕು."

"ಈ ವಿಷಯದಲ್ಲಿ ನಿಮ್ಮ ನನ್ನ ಅಭಿಪ್ರಾಯ ಕೂಡುವುದಿಲ್ಲ. ಲೆಟ್ ಅಸ್ ಅಗ್ರಿ ಟು ಡಿಸ್‌ಅಗ್ರಿ (Let as agree to disagree)"

ಎಂದು ಹೇಳಿದಳು. ಸುಂದರ ಮಾತು ಮುಂದುವರಿಸಲಿಲ್ಲ. ಸುನಂದಾ ಕ್ರೋಶಾಕಡ್ಡಿ, ದಾರ ಕೈಗೆತೆಗೆದುಕೊಂಡಳು. ಸುಂದರ ಎದ್ದು ತನ್ನ ಲ್ಯಾಬೊರೇಟರಿಗೆ ಬಂದುಬಿಟ್ಟ.

ಸುನಂದೆಯ ವಿಚಾರಶಕ್ತಿ ಕ್ಷಣಕಾಲ ಉಡುಗಿ ಹೋದಂತಾಗಿತ್ತು. ವಿಚಿತ್ರ ಅನೈಸರ್ಗಿಕ ಅತೃಪ್ತಿ ಅವಳನ್ನು ಆವರಿಸಿದಂತಾಗಿತ್ತು. 'ಜೀವಮಾನವೆಲ್ಲಾ ಹೀಗೇ ಕಳೆಯಬೇಕೇ' ಎಂದುಕೊಂಡಳು. ಗಂಡನ ಅನಾಸಕ್ತಿಯೋಗ ಅವಳಿಗೆ ಅಲೌಕಿಕವೂ ಅಯುಕ್ತವೂ ಆದುದಾಗಿ ಕಂಡುಬಂತು. 'ಕೆಲಸಕ್ಕೆ ಬಾರದವರನ್ನು ತಲೆಯಮೇಲೆ ಕೂಡಿಸಿದರೂ ಸಹಿಸಿಕೊಂಡು, ಗಾಂಧೀ ವೇದಾಂತ ಉಪದೇಶಿಸುತ್ತಾರೆ' ಎಂದು ಕನಲಿದಳು.

ಲ್ಯಾಬೊರೇಟರಿಯ ಕಡೆಯಿಂದ ಕೊಳಲಿನ ನಾದ ಕೇಳಿಬರುತ್ತಿತ್ತು. ಸುನಂದಾ ಅದನ್ನೇ ಆಲಿಸಿ ಕೇಳಿದಳು. ಕೊಳಲಿನ ಮಧುರ ನಾದಲಹರಿ ಅವಳ ಹೃದಯವನ್ನು ಮೃದುಗೊಳಿಸಲಾರಂಭಿಸಿತು.

ಒಮ್ಮೆಲೇ ನಾದಲಹರಿ ನಿಂತೇ ಹೋಯಿತು. ರಾಗಾಲಾಪ ನಡೆಯುತ್ತಿದ್ದಾಗ ವೀಣೆಯ ತಂತಿ ಕಡಿದುಹೋದರೆ ಮನಸ್ಸಿಗಾಗುವ ಬೇಸರ - ವೇದನೆ, ಅವಳ ಮನಸ್ಸಿಗಾಯಿತು. ತನ್ನ ಹೃದಯದ ಯಾವದೋ ತಂತಿಯೇ ಕಡಿದು ಹೋಯಿತೇನೋ ಎಂದುಕೊಂಡಳು.

ಸ್ವಾಸ್ಥ್ಯವಿಲ್ಲದ ಸುನಂದೆಯ ಚಿತ್ತ ಪರದೇಶಿ ಹಕ್ಕಿಯಂತೆ ಹಾರಾಡುತ್ತಿತ್ತು. ನೂರಾರು ವಿಚಾರಗಳು - ಒಂದೂ ಸ್ಥಿರವಾಗಿ ಚಿತ್ತಫಲಕದ ಮೇಲೆ ನಿಲ್ಲುತ್ತಿರಲಿಲ್ಲ.

ಇದ್ದಕ್ಕಿದ್ದಂತೆ ಸುನಂದೆಗೆ ಅಕ್ಕ ಜಾನಕಿಯ ನೆನಪಾಯಿತು. ಆ ರಾತ್ರಿ ಜಾನಕಿ ತನ್ನನ್ನು ಹತ್ತಿರ ಮಲಗಿಸಿಕೊಂಡು ತನ್ನ ದಾಂಪತ್ಯಜೀವನದ ದುರಂತಕಥೆಯನ್ನು ಹೇಳಿದುದು ಸ್ಮೃತಿಪಥಕ್ಕೆ ಬಂತು. ಮೈನಡುಗಿ ಬೆವರು ಕಾಣಿಸಿಕೊಂಡಿತು.

'ಜಾನಕಿಯನ್ನು ಇಂದೇಕೆ ನಾನಿಷ್ಟು ಜ್ಞಾಪಿಸಿಕೊಳ್ಳುತ್ತಿದ್ದೇನೆ' ಎಂದು ಸುನಂದಾ ತನ್ನನ್ನೇ ಕೇಳಿಕೊಂಡಳು. ತನ್ನ ಮನಸ್ಸು ವಿಕ್ಷಿಪ್ತವಾಗಿದ್ದ ಈ ಸನ್ನಿವೇಶದಲ್ಲಿ ಜಾನಕಿಯ ದುರಂತಕಥೆಯ ನೆನಪಾದುದಕ್ಕೆ ಅವಳು ವಿಷಾದಪಟ್ಟುಕೊಂಡಳು.

ರಾತ್ರಿ ಒಂಭತ್ತಾಯಿತು - ಹತ್ತು ಕಳೆಯಿತು. ಸುಂದರ ಲ್ಯಾಬೊರೇಟರಿ ಬಿಟ್ಟುಬರುವ ಚಿನ್ಹೆ ಕಾಣಲಿಲ್ಲ. 'ರಾಯರನ್ನು ಊಟಕ್ಕೆ ಎಬ್ಬಿಸು' ಎಂದು ಗಫೂರನ ಕೈಯಲ್ಲಿ ಹೇಳಿ ಕಳಿಸಿದಳು. ಗಫೂರ್ ಸುಂದರನ ಚಿತ್ತೈಕಾಗ್ರತೆಯನ್ನು ನೋಡಿ ಬಂದು 'ರಾಯರ್ನ ಮಾತಾಡಿಸೋಕೆ ಆಗಾಕಿಲ್ರಮ್ಮಣ್ಣಿ' ಎಂದು ಹೇಳಿದ.

ಸುಂದರನೇ ಎದ್ದು ಬಂದು ತನಗೆ ಸಮಾಧಾನ ಹೇಳಲಿ ಎಂದು ಹೆಣ್ಣು ಹೃದಯ ಬಯಸಿತು. ಅಹಂಕಾರವೆಂದು ಬಗೆಯಬಹುದಾದ ಆ ಬಯಕೆಯಲ್ಲಿ ಸ್ತ್ರೀಸಹಜವಾದ ಪ್ರೇಮಾಕಾಂಕ್ಷೆಯೂ ಅಡಕವಾಗಿತ್ತು.

ಸುಂದರನ ಮನಸ್ಸು ಲವಣವಿಚ್ಛೇದನದಲ್ಲಿ ತಲ್ಲೀನವಾಗಿತ್ತು. ಅಹಂಕಾರವನ್ನತ್ತ ತಳ್ಳಿ ಸುನಂದೆ ಮೆಲ್ಲನೆ ಲ್ಯಾಬೊರೇಟರಿಯ ಬಾಗಿಲ ಬಳಿ ಬಂದು ನಿಂತಳು - ಸುಂದರನ ಲಕ್ಷ್ಯ ಅತ್ತ ಹೊರಳಲಿಲ್ಲ - ಸೂಕ್ಷ್ಮದರ್ಶಕಯಂತ್ರದಲ್ಲಿ (Microscope) ವಜ್ರದ ತುಂಡುಗಳಂತೆ ಕಾಣುತ್ತಿದ್ದ ಲವಣ ಕಣಗಳು ಅವನ ಕಣ್ಣು ತುಂಬಿಬಿಟ್ಟಿದ್ದವು.

ಸುನಂದೆ ಬಾಗಿಲುಬಿಟ್ಟು ಸುಂದರನ ಬಳಿಗೆ ಬಂದು ನಿಂತಳು. ಅವಳು ಬಂದುದು ನಿಂತುದು ಎರಡೂ ಸುಂದರನ ಗಮನಕ್ಕೆ ಬರಲಿಲ್ಲ. ಸುನಂದ ಮೆಲ್ಲನೆ ಸುಂದರ ಭುಜಮುಟ್ಟಿದಳು. ಬೆಚ್ಚಿಬಿದ್ದು ಅವನು ಕತ್ತೆತ್ತಿ ನೋಡಿದ.

ಸುನಂದೆಯ ಕಣ್ಣು ಹನಿಗಣ್ಣಾಗಿತ್ತು. ದೈನ್ಯದಿಂದ

"ಹತ್ತೂವರೆಯಾಯಿತು. ಊಟಕ್ಕೆ ಏಳುವುದಿಲ್ಲವೇ? ಅನ್ನವೆಲ್ಲಾ ಆರಿ ತಂಗಳಾಗಿದೆ." ಎಂದಳು.

ಸುಂದರ ಮರುಮಾತಾಡದೆ ಎದ್ದು ಬಂದ.

ಊಟದ ವಿಧಿ ಎರಡೇ ನಿಮಿಷಗಳಲ್ಲಿ ಮುಗಿದು ಹೋಯಿತು. ತಟ್ಟೆಯಲ್ಲಿ ಕೈತೊಳೆದುಕೊಂಡೆದ್ದು ಬಂದು ಮೇಜಿನ ಮೇಲಿದ್ದ ವೈಜ್ಞಾನಿಕ ಪತ್ರಿಕೆಯನ್ನು ನೋಡುತ್ತ ಕುಳಿತ.

ಗಫೂರನಿಗೂ ಊಟಕ್ಕೆ ಬಡಿಸಿ, ತಾನೂ ಊಟಮಾಡಿ, ಹಾಲಿಗೆ ಹೆಪ್ಪುಹಾಕಿ, ಅಡಿಗೆಯ ಮನೆಯ ದೀಪ ಆರಿಸಿ ಸುನಂದಾ ಹೊರಗೆ ಬಂದಳು.

ಸುಂದರನ ಮನಸ್ಸು ವೈಜ್ಞಾನಿಕ ಪತ್ರಿಕೆಯಲ್ಲಿ ನೆಟ್ಟುಹೋಗಿತ್ತು. ಸುನಂದಾ ಮೆಲ್ಲನೆ ಸುಂದರನ ಸಮೀಪಕ್ಕೆ ಬಂದು ಅವನ ಕ್ರಾಪಿನ ಮುಂಗುರುಳನ್ನು ಬೆರಳಿಂದ ಆಡಿಸಿದಳು. ಸುಂದರ ಕತ್ತೆತ್ತಿ ನೋಡಲಿಲ್ಲ.

"ಮಲಗುವುದಕ್ಕೆ ಹೊತ್ತಾಗಲಿಲ್ಲವೇ ?"

"ನೀನು ಮಲಗುಹೋಗು. ನನಗೆ ನಿದ್ರೆ ಬರುವುದಿಲ್ಲ."

"ದಿನವೂ ಹೀಗೆ ನಿದ್ರೆಗೆಡಬಾರದು. ಮೈಗೆ ಒಳ್ಳೆಯದಲ್ಲ."

ಸುಂದರ ಪ್ರತ್ಯುತ್ತರ ಕೊಡದೆ ಎದ್ದು ಲ್ಯಾಬೊರೇಟರಿಗೆ ಬಂದುಬಿಟ್ಟ.

ಸುನಂದೆಗೆ ದುಃಖ ತಡೆಯಲಾಗಲಿಲ್ಲ. ಕಣ್ಣುಗುಡ್ಡೆಗಳನ್ನೇ ಕಿತ್ತುಕೊಂಡು ಬರುವಂತೆ ಕಂಬನಿಪ್ರವಾಹ ಉಕ್ಕಿಬಂತು. ತೊಟ್ಟಿಯ ದೀಪ ಆರಿಸಿ ಹಾಸಿಗೆಯ ಮೇಲೆ ದೊಪ್ಪನೆ ಬಿದ್ದಳು. ಅವಳ ಹೃದಯ ಅಪಾರ ದುಃಖದಾವೇಗದಲ್ಲಿ ತಲ್ಲಣಿಸಿತು. ನೋವಿನ ಜತೆಗೆ ಭಯ. 'ಇವರು ನನ್ನನ್ನು ಮರೆಯಲೆತ್ನಿಸುತ್ತಿದ್ದಾರೆಯೇ ?' ಎಂದೊಮ್ಮೆ ಕೇಳುವಳು. ಮರುಕ್ಷಣವೇ ತಾನೇ 'ಇವರ ಸಂಶೋಧನೆಯೇ ನನ್ನ ಪ್ರಬಲಶತ್ರು - ಅದೇ ನನ್ನ ಸವತಿ. ಆ ಹೆಣ್ಣು ಕರೆಯಿತೆಂದರೆ ನನ್ನನ್ನು - ಇಡಿಯ ಪ್ರಪಂಚವನ್ನು ಮರೆಯುತ್ತಾರೆ' ಎಂದುಕೊಂಡಳು. ಸುಂದರನ ಸಂಶೋಧನೆಗಳ ಬಗ್ಗೆ, ಅವನ ಲ್ಯಾಬೊರೇಟರಿಯ ಬಗ್ಗೆ ಅವರ್ಣನೀಯ ಅಸೂಯೆ ಅಂಕುರಿಸಿತು.

'ಈಗ ಬರಬಹುದು - ಆಗ ಬರಬಹುದು' ಎಂದು ನಿರೀಕ್ಷಿಸುತ್ತಾ, ಕಣ್ಣುಬಿಟ್ಟುಕೊಂಡೇ ಸುನಂದಾ ಮಲಗಿದ್ದಳು. ತೊಟ್ಟಿಯ ಗಡಿಯಾರದಲ್ಲಿ ಹನ್ನೆರಡು ಹೊಡೆದದ್ದು ಕೇಳಿಸಿತು - ಒಂದು ಹೊಡೆದದ್ದು ಕೇಳಿಸಿತು - ಚಿಂತಾಪರವಶಳಾಗಿದ್ದ ಸುನಂದಾ ಹಾಗೇ ನಿದ್ರಾಧೀನಳಾದಳು.

೮

ಸೋಮಶೇಖರರಾಯರ ಆತ್ಮಗೌರವಕ್ಕೆ ಪ್ರಬಲ ಧಕ್ಕೆ ತಗುಲಿದಂತಾಗಿತ್ತು. 'ನನ್ನ ಕಣ್ಣುಮುಂದೆ ಹುಟ್ಟಿ ಬೆಳೆದ ಹುಡುಗ ನನ್ನ ಮಾತನ್ನು ಕಸಕ್ಕೆ ಕಡೆಯಾಗಿ ಕಂಡನಲ್ಲಾ' ಎಂದು ಮುಸುಗುಟ್ಟಿದರು. 'ಹುಡುಗ ಸಹವಾಸ. ಈ ವ್ಯವಹಾರಕ್ಕೆ ನಾನು ಕೈ ಹಾಕಿದುದೇ ತಪ್ಪಾಯಿತು' ಎಂದು ತಮ್ಮನ್ನೇ ಹಳಿದುಕೊಂಡರು.

ಅನಂತಯ್ಯ ತಿಳಿಸಿದ್ದ ಸಮಾಚಾರವನ್ನು ಸಂಜೀವನೇ ಸಮರ್ಥಿಸಿದಂತಾಗಿತ್ತು. ' 'ಎಲ್ಲಿಯಾದರೂ ಹಾಳಾಗಿ ಹೋಗಲಿ ಎಂದು ಸುಮ್ಮನಿರಲೇ ' ಎಂದು ವಿಚಾರಮಾಡಿದರು. 'ನನ್ನ ಗೌರವವೇನಾಯಿತು. ಇಪ್ಪತ್ತು ವರ್ಷ ವಕೀಲಿ ಮಾಡಿದವನು ಒಬ್ಬ ಹುಡುಗನ ಮಾತಿಗೆ ಸೋತ ಎಂದರೆ ನನ್ನ ಮರ್ಯಾದೆಯ ಗತಿಯೇನು?—ನನ್ನನ್ನೇ ನಂಬಿದ್ದ ಪಂಡಿತರಿಗೂ ನಾನು ದ್ರೋಹ ಬಗೆದಂತಾಗುತ್ತದೆ ' ಎಂದುಕೊಂಡರು. ಪರಿಸ್ಥಿತಿಯನ್ನು ಅಳೆದು ಸುರಿದು ನೋಡಿ ಕೊನೆಗೆ ಅನಂತಯ್ಯನನ್ನು ಬರಮಾಡಿಕೊಂಡು, ಅವನ ಜತೆ ಆಲೋಚಿಸುವುದೇ ಒಳ್ಳೆಯದೆಂದು ನಿರ್ಧರಿಸಿದರು.

ಸೋಮಶೇಖರರಾಯರ ಕಾಗದ ನೋಡಿದ ಕೂಡಲೆ ಅನಂತಯ್ಯ ನಂಜನಗೂಡಿಗೆ ಹೊರಟು ಬಂದ. ತಮಗೂ ಸಂಜೀವನಿಗೂ ನಡೆದ ಮಾತು ಕತೆಯನ್ನು ಅನಂತಯ್ಯನಿಗೆ ರಾಯರು ವಿವರಿಸಿದರು.

"ಅವನು ಸಸೇಮಿರಾನಾಗಿದ್ದಾನೆ ಸ್ವಾಮಿ. ನಿಮಗೂ ಗುಟುಕು ನೀರೇ - ನನಗೂ ಗುಟುಕು ನೀರೇ."

"ಈಗೇನು ಮಾಡುವುದು ಅನಂತಯ್ಯನವರೇ ?"

"ಇರುಳು ಕಂಡ ಭಾವಿಯಲ್ಲಿ ಹಗಲು ಬೀಳುತ್ತೇನೆಂದು ಹೋಗುವವರಿಗೆ, ನಾವೇನು ಮಾಡುವುದಕ್ಕಾಗುತ್ತದೆ ಸ್ವಾಮಿ. ನಾನು ಹೇಳಿ ನೋಡಿದೆ - ನನ್ನ ಮಾತು ಕೇಳಲಿಲ್ಲ; ದೊಡ್ಡವರು - ನೀವು ಹೇಳಿದಿರಿ. ನಿಮ್ಮ ಮಾತಿಗೂ ಅವನು ಬೆಲೆ ಕೊಡಲಿಲ್ಲ. ಅನುಭವಿಸಲಿ ಬಿಡಿ."

"ನಾವು ಹಾಗೆ ಕೈ ಕೊಡವಿಕೊಳ್ಳುವುದಕ್ಕೆ ಬರುವುದಿಲ್ಲವಲ್ಲಪ್ಪ. ಪಂಡಿತರು ದೊಡ್ಡ ಜವಾಬ್ದಾರಿ ಹೊರೆಸಿ ಹೋಗಿದ್ದಾರೆ "

"ಏನು ಮಾಡಲು ಸಾಧ್ಯ. ನೀವೇ ಹೇಳಿ ಸ್ವಾಮಿ."

"ಶತಾಯಗತಾಯ ಈ ಅನಿಷ್ಟ ಸಂಬಂಧ ತಪ್ಪಿಸಬೇಕು."

"ತಪ್ಪಿಸಬೇಕು ಎನ್ನುವ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಹೇಗೆ ಎನ್ನುವುದೇ ಪ್ರಶ್ನೆ."

"ನೀವು ಎಂಟು ಹತ್ತು ದಿನ ಪುರಸತ್ತು ಮಾಡಿಕೊಳ್ಳುವುದು ಸಾಧ್ಯವೇ ?"

"ನೀವು ಹೇಳಿದ ಮೇಲೆ ಪುರಸತ್ತು ಮಾಡಿಕೊಳ್ಳಲೇ ಬೇಕು. ಏಕೆ ?"

"ನೀವು ಹೋಗಿ ಮೈಸೂರಿನಲ್ಲಿ ನಿಂತುಕೊಂಡು ಆ ರಂಭೆ ವಿಷಯ ಸಂಗ್ರಹಿಸಬೇಕು. ಅವಳ ಪೂರ್ವೇತಿಹಾಸ ಗೊತ್ತಾದರೆ ನಮ್ಮ ದಾಳ ಉರುಳಿಸುವುದಕ್ಕೆ ಅನುಕೂಲವಾಗುತ್ತದೆ."

"ಅದರಿಂದ ಪ್ರಯೋಜನವಾಗುತ್ತದೆಂದು ನನಗೆ ತೋರುವುದಿಲ್ಲ. ಸಂಜೀವ ಮೋಹಾಂಧನಾಗಿರುವಾಗ ಅವಳ ವಿಷಯ ನಾವು ಏನೇ ಹೇಳಿದರೂ ಅದು ಅಪಪ್ರಚಾರ ಎಂದವನು ಭಾವಿಸುತ್ತಾನೆ."

"ಅವನು ಏನಾದರೂ ಭಾವಿಸಲಿ, ಚಿಂತೆಯಿಲ್ಲ. ನೀವು ಇಷ್ಟು ಕೆಲಸಮಾಡಿ. ಮೈಸೂರಿನಲ್ಲಿ ನಿಂತು ಅವಳ ಚಲನವಲನ, ಮನೆ ವಿಷಯ, ಬಂಧು ಬಳಗದ ವಿಷಯ ಸಂಗ್ರಹಿಸಿ ನನಗೆ ತಂದುಕೊಡಿ. ನೀವು ಮೈಸೂರಿನಲ್ಲಿರುವುದರ ಸೂಚನೆ ಸಂಜೀವನಿಗೆ ಸಿಕ್ಕಿದರೆ ನಮ್ಮ ಕೆಲಸ ಕೆಟ್ಟುಹೋಗುತ್ತದೆ. ಯಾರ ಮನೆಯಲ್ಲಿಯೂ ಇರಬೇಡಿ - ಯಾವದಾದರೂ ಅಭೂಕ್ತ ಮೂಲೆಯಲ್ಲಿರುವ ಹೊಟೇಲಿನಲ್ಲಿ ಇರಿ ಖರ್ಚಿಗೆ ಯೋಚನೆ ಮಾಡಬೇಡಿ - ಸಂಜೀವನ ದುಡ್ಡೇ ನನ್ನ ಹತ್ತಿರ ಇದೆ. ಅದನ್ನು ಅವನ ಕೆಲಸಕ್ಕೇ ಬಳಸಿದರಾಯಿತು."

"ಕೆರೆಯ ನೀರನು ಕೆರೆಗೆ ಚೆಲ್ಲಿ . . . ."

"ಮೈಸೂರಿಗೆ ಬೇಗ ಹೊರಡಬೇಕು. ಕಾಲ ವಿಳಂಬಮಾಡಿದರೆ ಕೆಲಸ ಕೆಟ್ಟುಹೋಗುತ್ತದೆ."

"ನನಗೇನು ಸ್ವಾಮಿ. ಗುಂಡುಗೋವಿ. ಇವತ್ತೇ ಮೈಸೂರಿಗೆ ಹೋಗಲು ಸಿದ್ಧವಾಗಿದ್ದೇನೆ" ಎಂದ.

ಸೋಮಶೇಖರರಾಯರು ಅವನ ಕೈಯಲ್ಲಿ ನೂರು ರೂಪಾಯಿಯಿಟ್ಟು "ಹಣ ಸಾಲದೆ ಬಂದರೆ ತಿಳಿಸಿ - ಕಳಿಸಿಕೊಡುತ್ತೇನೆ" ಎಂದರು.

ಅನಂತಯ್ಯ ಅಂದೇ ಮೈಸೂರಿಗೆ ಪ್ರಯಾಣ ಬೆಳಸಿ, ಸೋಮಶೇಖರರಾಯರ ಸಲಹೆಯಂತೆ ಲಕ್ಷ್ಮೀಪುರದಲ್ಲಿದ್ದ ಉಡುಪಿ ಹೊಟೇಲೊಂದರಲ್ಲಿ ನೆಲಸಿದ.

ಸೋಮಶೇಖರರಾಯರು, ಅನಂತಯ್ಯ ಆಡಿದ ಮಾತುಗಳನ್ನೇ ಧ್ಯಾನಿಸುತ್ತ ಕೂಡಲು ಸಂಜೀವನಿಗೆ ಅಗತ್ಯವಿರಲಿಲ್ಲ. ಸಂಬಂಧ ಸೂತ್ರವಿಲ್ಲ

ದಿದ್ದರೂ ತನ್ನ ವ್ಯವಹಾರದಲ್ಲಿ ಕೈಹಾಕಿದುದಕ್ಕೆ ಅವರ ಬಗೆ ಜಿಗುಪ್ಸೆ ಹುಟ್ಟಿತ್ತು.

ಸಂಜೀವನ ತಲೆಯ ತುಂಬ 'ಪುಷ್ಪ' ತುಂಬಿದ್ದಳು. ಅವಳ ನಿಲುವು, ಚೆಲುವು, ಒಲವು ಅವನ ಮನಸ್ಸು, ದೇಹಾದ್ಯಂತವನ್ನೂ ವ್ಯಾಪಿಸಿತ್ತು.

ಕುಕ್ಕನಹಳ್ಳಿ ಕೆರೆಯ ಏರಿಯ ಮೇಲೆ ವಾಕಿಂಗ್ ಹೋದ ದಿನದ ಪ್ರತಿಯೊಂದು ಚಲನವಲನ, ಮಾತು, ಮುಖಭಾವವನ್ನು ಅವನು ನೂರಾರು ಸಾರಿ - ಸಾವಿರಾರು ಸಾರಿ - ಮನಸ್ಸಿನಲ್ಲೇ ಮೆಲಕು ಹಾಕಿಕೊಂಡಿದ್ದ. ಈ ಅನುಭವ ಸಂಜೀವನಿಗೆ ಯಾವದೋ ಅವ್ಯಕ್ತವಾದ, ಅನಂತ ಪ್ರಮಾಣದ ವಿಶ್ವದ ಪರಿಚಯ ಮಾಡಿಸಿತ್ತು. ಅವನ ನರನಾಡಿಗಳಿಗೆ ನವಚೈತನ್ಯವನ್ನು ತಂದುಕೊಟ್ಟಿತ್ತು. 'ನನಗೇನು ಆಗಿದೆ' ಎಂದು ತನ್ನನ್ನೇ ಕೇಳಿಕೊಳ್ಳುವನು. ಒಂದೇ ದಿನದ ಅನುಭವ ತನ್ನ ಮೇಲೆ ಅದ್ಭುತ ಪರಿಣಾಮವನ್ನುಂಟುಮಾಡಿದುದನ್ನು ಅವನು ಬಲ್ಲ. ಆದರೆ ಆ ಅನುಭವದ ಸೂಕ್ಷ್ಮಕಾರಣ ಅವನಿಗೆ ಭಾಸವಾಗಿರಲಿಲ್ಲ.

ಅಕಿದು ಮನೆಯಲ್ಲಿ ತಲೆಬಾಚುವ ನೆಪಮಾಡಿಕೊಂಡು ಪುಷ್ಪ ತನ್ನನ್ನು ಸ್ಪರ್ಶಿಸಿದ್ದಳು. ಆಗಲೇ ದೇಹದಲ್ಲಿ ವಿದ್ಯುತ್ಸಂಚಾರವಾದಂತಾಗಿತ್ತು. ತರುವಾಯ ಕೆರೆಯ ಏರಿಯ ಮೇಲಿದ್ದ ಲತಾಮಂಟಪದಲ್ಲಿ ಕುಳಿತಿದ್ದಾಗ ಅವಳು ಸಮೀಪಕ್ಕೆ ಬಂದಿದ್ದಳು. ಮೈಗೆ ಮೈ ತಾಕಿತು — ಆ ಕ್ಷಣವೇ ಅವಳನ್ನು ಅಪ್ಪಿ ಮುದ್ದಾಡಬೇಕೆಂಬ ಹಂಬಲ ತನ್ನಲ್ಲಿ ಹುಟ್ಟಿತು. ಆದರೆ ಧೈರ್ಯ ಸಾಗದು. ಪುಷ್ಪ ವಿದ್ಯಾವತಿ - ಸ್ನೇಹಪರಳು - ಸಲಿಗೆಯಾಗಿ ಇರುವುದು ಅವಳ ಸ್ವಭಾವ. ಅವಳ ಸತ್ - ಶೀಲದ ಪ್ರಯೋಜನವನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳಬಾರದೆಂಬ ಧರ್ಮದೃಷ್ಟಿ ತನ್ನನ್ನು ತಡೆಯಿತು. ಧರ್ಮದೃಷ್ಟಿಯಲ್ಲಿ ತಾನು ವಿಚಾರಮಾಡುತ್ತಿದ್ದಾಗ ಅವಳ ಮನಸ್ಸಿನಲ್ಲಿ ಯಾವ ಪರಿಣಾಮವಾಗಿರಬಹುದೆಂಬ ಪರಿವೆ ಬರಲಿಲ್ಲವೇಕೆ? ಅವಳು ತನ್ನನ್ನು ಹೇಗೆ ಸೂಜಿಗಲ್ಲಿನಂತೆ ಸೆಳೆಯುತ್ತಿದ್ದಳು ತಾನೂ ಹಾಗೇ ಅವಳನ್ನು ಸಳೆಯುತ್ತಿರಲಿಲ್ಲವೇ? ತನ್ನ ಮನಸ್ಸಿನಲ್ಲಿ ಹೇಗೆ ಹಂಬಲ - ಬಯಕೆ ಹುಟ್ಟಿತೋ ಹಾಗೇ ಅವಳ ಮನಸ್ಸಿನಲ್ಲಿಯೂ ಹುಟ್ಟಿರಲಿಲ್ಲವೇ? ಈ ಪ್ರಶ್ನೆಗೆ ಉತ್ತರ ಬರಲು ಬಹಳ ವೇಳೆ ಕಾಯಬೇಕಾಗಲಿಲ್ಲ. ಎರಡು ಜೀವದ ಆಸೆ - ಬಯಕೆ ಮೇಳವಿಸಿತು.

ಲೊಲ್ಲದು. ಕಣ್ಣು ಮುಚ್ಚಿದರೆ ಎದುರಿಗೆ ಬಂದು ನಿಲ್ಲುತ್ತೀರಿ. ಏನುಮಾಡುವು ದೆಂದು ಯೋಚಿಸಿ ಯೋಚಿಸಿ ಕೊನೆಗೆ ಪತ್ರ ಬರೆಯುವುದೆಂದು ನಿಶ್ಚಯಿಸಿದೆ.

ಇದು ನನ್ನ ಪ್ರಥಮ ಪತ್ರ. ನನ್ನ ಕೈ ನಡುಗುತ್ತಿದೆ. ಬರವಣಿಗೆಯಲ್ಲಿ ತಪ್ಪಿದ್ದರೆ ಕ್ಷಮಿಸಿ.

ಮಾರ್ಕೆಟ್ ಬಸ್‌ಸ್ಟ್ಯಾಂಡಿನಲ್ಲಿ ನೀವು ನಿಂತುಬಿಟ್ಟಿರಿ. ನಾನೊಬ್ಬಳೇ ಬಸ್‌ನಲ್ಲಿ ಮನೆಬಂದು ಸೇರಿದೆ. ಬಸ್ ಇಳಿದು ಮನೆ ಹೇಗೆ ಸೇರಿದೆನೋ ಹೇಳಲಾರೆ. ದೇಹ - ಮನಸ್ಸು ಎರಡೂ ಕಬ್ಬಿಣದ ಗುಂಡಿನಂತೆ ಭಾರವಾಯಿತು.

ಅಯ್ಯೋ! ಅದೇಕೆ ಕೆರೆಯ ಏರಿಯ ಮೇಲೆ ನಾವು ಕುಳಿತಿದ್ದ ಸ್ಥಳದಿಂದ ಅಷ್ಟು ಬೇಗ ಎದ್ದುಬಿಟ್ಟಿರಿ. ಅದೇಕೆ ಅಷ್ಟು ಅವಸರದಿಂದ ನನ್ನನ್ನು ಮನೆಗೆ ಕಳಿಸಿಬಿಟ್ಟಿರಿ. ನಾನು ನಿಮಗೆ ಬೇಡವಾದೆನೇ?

ಕೆರೆಯ ಏರಿಯ ಮೇಲೆ ನಾವು ಕುಳಿತಿದ್ದ ಕಾಲ ಮತ್ತು ಆಡಿದ ಮಾತುಗಳು ನನ್ನ ಹೃದಯದಲ್ಲಿ ಶಾಸನದಂತೆ ಬರೆಯಲ್ಪಟ್ಟಿವೆ. ಅದನ್ನು ಜನ್ಮ ಜನ್ಮಕ್ಕೂ ಮರೆಯಲಾರೆ. ನನ್ನ ಪ್ರೇಮದ ಸ್ವಾಮಿ. ಎಷ್ಟು ಪ್ರೀತಿಯಿಂದ ನನ್ನನ್ನಪ್ಪಿ ಮುದ್ದಿಟ್ಟಿರಿ. ಒಂದೇ ಕ್ಷಣದಲ್ಲಿ ಇಹಲೋಕ ವ್ಯಾಸಾರವನ್ನೇ ಮರೆಸಿಬಿಟ್ಟಿರಿ - ಆದರೆ ಮರುಕ್ಷಣವೇ ಈ ನಿರಸ ಪ್ರಪಂಚಕ್ಕೆ ಎಳೆತಂದಿರಿ. ಪ್ರಭೂ - ನನ್ನ ಮೇಲೇಕೆ ಇಷ್ಟು ಆಗ್ರಹ!

ನನ್ನ ಮನಸ್ಸು ಅಲ್ಲೋಲಕಲ್ಲೋಲವಾಗಿದೆ. ಈ ಕಾಗದವೂ ಬೇಗ ನಿಮ್ಮ ಕೈಸೇರಿ ಉತ್ತರ ತರಲೊಲ್ಲದು. ನಾಳೆ ನಾನೇ ಅತ್ತ ಬರಲೂ ಸಾಧ್ಯವಿಲ್ಲವಾಗಿದೆ. ನಮ್ಮ ಬಂಧುಗಳೊಬ್ಬರ ಲಗ್ನ - ಚರ್ಚಿಗೆ ಹೋಗಿರಬೇಕು. ನಾಡಿದ್ದು ಅವ ಮನೆಗೆ ಊಟಕ್ಕೆ ಕರೆದಿದ್ದಾರೆ. ನಾಡಿದ್ದು ನಿಮ್ಮನ್ನು ನೋಡದೆ ನಾನು ಅತಿಥಿಗಳು ಊಟ ಮುಗಿಸಿಕೊಂಡು ನಾಲ್ಕುಗಂಟೆಯ ವೇಳೆಗೆ ಹೊ ನಾನು ಐದು ಗಂಟೆಯ ವೇಳೆಗೆ ನನ್ನ ಪ್ರಭುವಿನ ಪ್ರೇಮಮಂದಿ ಅಲ್ಲಿಯವರೆಗೆ ನನ್ನ ನೆನಪುಕೊಡುವುದಕ್ಕೆ ಈ ಕಾಗದ,

ನಿಮ್ಮ ಪ್ರೇಯಸಿಯಾಗಲು ಬಯ

ಕಾಗದವನ್ನು ಸಂಜೀವ ಮೂರು ನಾಲ್ಕು ಸಾರಿ
ಭಾರ ಒಮ್ಮೆಲೇ ಇಳಿದಂತಾಗಿತ್ತು. ಮನಸ್ಸು
ನಾಲ್ಕಕ್ಕೆ ಬಂದಿತ್ತು - 'ಇನ್ನೇನು, ಪುಷ್ಪ ಬರುವ
ಒಂದು ಷರಟು ಧರಿಸಿ ಬೈಸಿಕಲ್ ತೆಗೆದುಕೊಂಡು

ಹೊಟೇಲಿನ ತಿಂಡಿಯ ಸಾಮಾನು, ಅ
ವೀಳೆಯದೆಲೆ ಕಟ್ಟಿಸಿಕೊಂಡು ಅವನು ಮ

ಯಾಗಿತ್ತು. ತಾನೇ ಎರಡು ಬೆಳ್ಳಿಯ ತಟ್ಟೆ ತೆಗೆದು ಒಂದರಲ್ಲಿ ತಿಂಡಿಯ ಸಾಮಾನನ್ನೂ, ಇನ್ನೊಂದರಲ್ಲಿ ಹೂವು, ವೀಳೆಯದೆಲೆ ಅಡಿಕೆಯನ್ನೂ ಅಣಿ ಮಾಡಿ ಎಲೆಕ್ಟ್ರಿಕ್ ಸ್ಟೋವ್ (Stove) ಹೊತ್ತಿಸಿದ. ಕಾಫಿಯ ಫಿಲ್ಟರ್‌ಗೆ ಬಿಸಿ ನೀರು ಹಾಕಿ ಕಾಫಿ ಕಷಾಯ ಸಿದ್ಧಗೊಳಿಸಿದ. ಹಾಲು ಕಾಸಿ ತೆಗೆದಿಟ್ಟ. ಸ್ಟೋವ್ ಆರಿಸಿ ಬಂದು ಪುನಃ ಪುನಃ ಪುಷ್ಪನ ಕಾಗದ ಓದುತ್ತ ಕುಳಿತ. 'ಎಷ್ಟು ಪ್ರೀತಿಯಿಂದ ನನ್ನನ್ನಪ್ಪಿ ಮುದ್ದಿಟ್ಟಿರಿ - ಒಂದೇ ಕ್ಷಣದಲ್ಲಿ ಇಹ ಲೋಕ ವ್ಯಾಪಾರವನ್ನೇ ಮರೆಸಿಬಿಟ್ಟಿರಿ - ಆದರೆ ಮರುಕ್ಷಣವೇ ಈ ನೀರಸ ಪ್ರಪಂಚಕ್ಕೆ ಎಳೆತಂದಿರಿ' - ಈ ಪಂಕ್ತಿಗಳ ಮೇಲೆ ಸಂಜೀವನ ದೃಷ್ಟಿ ನೆಟ್ಟು ಹೋಯಿತು.

ಪುಷ್ಪ ಬರುವವೇಳೆಗೆ ತಾನು ಆತುರ ವ್ಯಕ್ತಮಾಡಬಾರದೆಂದು ನಿಶ್ಚಯಿಸಿದ. ಸೋಫಾದ ಮೇಲೆ ಕಾಲುಚಾಚಿ ಮಲಗಿಕೊಂಡು ಕೈಯಲ್ಲಿ 'ರೀಡರ್ಸ್ ಡೈಜೆಸ್ಟ್' (Readers Digest) ಹಿಡಿದ. ಒಂದೆರಡು ಚಿತ್ರಗಳನ್ನು ನೋಡುವಷ್ಟರಲ್ಲಿ ಹೊಡೆದೆಬ್ಬಿಸಿದಂತಾಯಿತು.

ಆದೇ ಐದುಗಂಟೆ ಹೊಡೆಯಿತು 'ಇನ್ನೂ ಪುಷ್ಪ ಏಕೆ ಬರಲಿಲ್ಲ. ವೇಳೆಗೆ ಸರಿಯಾಗಿ ಬಸ್ ಸಿಕ್ಕಲಿಲ್ಲವೆಂದು ಕಾಣುತ್ತದೆ. ಬಸ್‌ಗೆ ಏಕೆ ಕಾಯಬೇಕು - ಒಂದು ಗಾಡಿಮಾಡಿಕೊಂಡು ಬಂದರಾಗದೇ ?' ಪುಷ್ಪ ತನ್ನ

ೆಯ ವಿಷಯ ಹೇಳಿದ್ದುದು ನೆನಪಾಯಿತು. 'ಪಾಪ! ಅವಳಲ್ಲಿ

ೋ ಇಲ್ಲವೋ' ಎಂದುಕೊಂಡು ಒಳಗೆಹೋಗಿ ಒಂದು ಖಾಲಿ

ಿ ಕೆಲವು ನೋಟುಗಳನ್ನು ತುಂಬಿ ಲಕೋಟೆಯಲ್ಲಿ ಅಂಟಿಸಿಟ್ಟ.

ರ ಕುಂಟಿಕೊಂಡು ನಡೆಯುತ್ತಿತ್ತು. ಒಂದೊಂದು ನಿಮಿಷವೂ

ಗವಾಗಿ ಪರಿಣಮಿಸಿತ್ತು. ಸಂಜೀವ ಅಡಿಗೆಯ ಮನೆಗೆ

ುಕ್ಕೆ ಹಾಲುಸಕ್ಕರೆ ಬೆರಸಿ ಒಂದು ಬಾರಿ ಸೇವಿಸಿದ.

ಲು ತಟ್ಟಿದಂತಾಯಿತು.

ದಲೇ 'ಬನ್ನಿ' ಎಂದ.

ೆದುಕೊಂಡು ಒಳಗೆ ಪ್ರವೇಶಿಸಿದಳು.

ಅವಳನ್ನು ಆಪಾದಮಸ್ತಕ ನೋಡಿ ಮುಗುಳ್ನಗೆ

ುಂಬಿದ್ದ ಭಾವನೆಗಳನ್ನು ಆ ನಗೆ ಹೊರಗೆಡಹಿತು.

"ಬಸ್ ಸಿಕ್ಕಲಿಲ್ಲವೇ ?"

"ಮಾರ್ಕೆಟ್ ಸ್ಟ್ಯಾಂಡಿನಲ್ಲಿ ಸ್ವಲ್ಪ ಗಲಾಟೆಯಿತ್ತು. ಒಂದು ಬಸ್ ಸಿಕ್ಕಲಿಲ್ಲ . . . ನನ್ನ ಕಾಗದ ಬಂದಿತೇ ?"

"ಇವೇ ಮಧ್ಯಾಹ್ನ ಬಂತು. ಮದುವೆ ಗಲಾಟೆ ಮುಗಿಯಿತೇ ? – ಇವತ್ತು ಅತಿಥಿಗಳು ಎಷ್ಟು ಗಂಟೆಗೆ ಹೋದರು."

"ಮೂರು ಗಂಟೆಗೇ ಹೋದರು. ಮನೆಗೆಲಸ ಸ್ವಲ್ಪವಿತ್ತು. ಮುಗಿಸಿ ಬರುವವೇಳೆಗೆ ಇಷ್ಟು ಹೊತ್ತಾಯಿತು."

"ಅಂತೂ ಬಂದೆಯಲ್ಲಾ . . . "

"ಬರದೇ ಉಂಟೇ ?"

"ಕಾಗದದಲ್ಲಿ ಏನುಏನೋ ಬರೆದುಬಿಟ್ಟಿರುವೆ . . . . ತಡೀ ಬಂದೆ . . . ಕಾಫಿ ತರುತ್ತೇನೆ . . . ಆರಿಹೋಗಿಬಿಡುತ್ತದೆ."

ಸಂಜೀವ ಎದ್ದು ನಿಲ್ಲಲು ಪುಷ್ಪನೂ ಎದ್ದು ನಿಂತು

"ನಾನೂ ಬರಬಹುದೇ – ಅಡಿಗೇ ಮನೆಗೆ . . . "

ಸಂಜೀವ ಅವಳ ಕೈಹಿಡಿದು ಜತೆಯಲ್ಲಿ ಕರೆದುಕೊಂಡು ಹೋದ. ಸಜ್ಜಾಗಿದ್ದ ಉಪಹಾರ, ಹೂ, ವೀಳೆದೆಲೆಯ ತಟ್ಟೆಗಳನ್ನು ಪುಷ್ಪ ನೋಡಿ

"ಇದೆಲ್ಲಾ ಏನು ? ಯಾವಾಗ ತಂದಿರಿ ?"

"ನಿನ್ನ ಕಾಗದ ನೋಡಿದ ಕೂಡಲೆ "

"ನನ್ನಿಂದ ನಿಮಗೆ ತುಂಬ ತೊಂದರೆ . . . "

ಪುಷ್ಪ ತಟ್ಟೆಗಳನ್ನು ಕೈಯಲ್ಲಿ ತೆಗೆದುಕೊಂಡು ತೊಟ್ಟಿಯಲ್ಲಿದ್ದ ಟೀಪಾಯ್ ಮೇಲೆ ತಂದಿಟ್ಟಳು. ಸಂಜೀವ ಕಾಫಿ ಬೆರಸಿ ಎರಡು ಕಪ್ಪುಗಳಿಗೆ ಹಾಕಿಕೊಂಡು ಬಂದ.

"ನನಗೆ ಔತಣದ ಊಟವಾಗಿದೆ – ಕಾಫಿ ತೆಗೆದುಕೊಳ್ಳುತ್ತೇನೆ."

"ನನ್ನನ್ನು ಬಿಟ್ಟು ಔತಣದ ಊಟಮಾಡಿದೆಯಲ್ಲವೇ ?"

"ನನ್ನ ಗಂಟಲಲ್ಲಿ ಅನ್ನ ಇಳಿಯಿತೆಂದುಕೊಂಡಿರುವಿರಾ ?"

"ಹಾಗಾದರೆ ತಿಂಡಿ ತೆಗೆದುಕೊಳ್ಳಲು ಅಭ್ಯಂತರವಿರಬಾರದು."

"ನನ್ನ ಮಾತಿನಲ್ಲಿಯೇ ನನ್ನನ್ನು ಸಿಕ್ಕಿಸಿದಿರಿ."

ಸಂಜೀವ ಉಪಚಾರ ಮಾಡಿ ಅವಳು ಅರ್ಧ ತಿನ್ನುವಂತೆ ಮಾಡಿದ. ಇಬ್ಬರೂ ಕಾಫಿ ಮುಗಿಸಿದ ಮೇಲೆ ತಟ್ಟೆ, ಬಟ್ಟಲನ್ನು ಪುಷ್ಪನೇ ಒಯ್ದು ಅಡಿಗೆಯ ಮನೆಯಲ್ಲಿಟ್ಟು ಬಂದಳು.

ಸಂಜೀವ ಸುಣ್ಣ ಹಚ್ಚಲು ಕೈಗೆ ಎಲೆ ತೆಗೆದುಕೊಂಡಿದ್ದ.

"ಅದು ನಿಮ್ಮ ಕೆಲಸವಲ್ಲ - ಇಲ್ಲಿ ಕೊಡಿ"

ಎಂದು ಅವನ ಕೈಯಿಂದ ಕಿತ್ತುಕೊಂಡು ನಾಲ್ಕು ಎಲೆಗೆ ಸುಣ್ಣ ಹಚ್ಚಿ, ಅಡಿಕೆಯೊಂದಿಗೆ ಸಂಜೀವನಿಗಿತ್ತಳು. ಅವನು ಎರಡು ಎಲೆಯನ್ನು ಅಡಿಕೆಯೊಂದಿಗೆ ಅವಳಿಗೆ ಹಿಂದಿರುಗಿಸಿದ. ತಾಂಬೂಲಚರ್ವಣ ಮಾಡುತ್ತಾ ಪುಷ್ಪ ಹೂವಿಗೆ ಕೈಹಾಕಿ

"ನನಗೇ ತಾನೇ" ಎಂದಳು.

"ಹೆಣ್ಣುಮಕ್ಕಳು ತಮ್ಮ ಕೈಯಲ್ಲಿ ತಾವು ಹೂ ಮುಡಿಸುಕೊಳ್ಳಬಾರದಂತೆ" ಎಂದ.

ಪುಷ್ಪ ಸಂತೋಷವಾಗಿ ಅವನ ಕೈಗೆ ಹೂಗಳನ್ನಿತ್ತಳು. ಹೂ ಮುಡಿಸುತ್ತಿದ್ದ ಸಂಜೀವನ ಕೈಗಳನ್ನು ಪುಷ್ಪ ತನ್ನ ಕೈಗಳಿಂದ ಹಿಡಿದಳು. ಹೂ ಮುಡಿಸಿದ್ದು ಮುಗಿಯಲು ಸಂಜೀವ ಅವಳನ್ನಪ್ಪಿ ಚುಂಬಿಸಿದ

ಇಬ್ಬರೂ ಒಂದೇ ಸೋಫಾದ ಮೇಲೆ ಕುಳಿತರು. ಪರಸ್ಪರ ಒಬ್ಬರನ್ನೊಬ್ಬರು ತಮ್ಮ ಬಾಹುಗಳಿಂದ ಬಳಸಿದರು. ಸಂಜೀವ ಮೃದುವಾಗಿ

"ರಾತ್ರಿ ನಿದ್ರೆ ಬರಲಿಲ್ಲವೇ?"

"ನಿಮಗೆ . . . "

"ನಿನ್ನೆ ನೀನು ಬಂದೇ ಬರುವೆಯೆಂದು ನಿರೀಕ್ಷಿಸಿದ್ದೆ."

"ಏನುಮಾಡಲಿ - ಮನೆ ಹತ್ತಿರದಲ್ಲಿಯಾವರೂ ಇದ್ದಿದ್ದರೆ ಒಂದು ಗಳಿಗೆ ಬಂದು ನೋಡಿಕೊಂಡು ಹೋಗುತ್ತಿದ್ದೆ."

"ನನ್ನ ಬಗ್ಗೆ ನಿನಗೇಕೆ ಅನುಮಾನ ಬಂದಿತು?"

"ಅನುಮಾನ ತೋರಿಸಿರುವೆನೇ?"

"ನೀನು ತೋರಿಸದಿದ್ದರೂ ನಿನ್ನ ಕಾಗದ ತೋರಿಸಿದೆ."

"ಅದೇ! . . . ಮೊನ್ನೆ ಏಕೆ ಅಷ್ಟು ಅವಸರವಾಗಿ ನನ್ನನ್ನು ಕಳಿಸಿಕೊಟ್ಟಿರಿ?"

"ಕತ್ತಲಾಗುತ್ತ ಬಂದಿತ್ತು."

"ಲೋಕಕ್ಕೆ- ನಮಗಲ್ಲ."

"ನಿಜ ಹೇಳಲೇ . . . "

"ನೀವು ಏನು ಹೇಳಿದರೂ ಅದು ನನಗೆ ನಿಜವೇ. ಹೇಳಿ."

"ನಾನು ಅಧೀರನಾದೆ."

"ಏಕೆ ?"

"ಅಂದು ನಿನ್ನನ್ನು ಮನೆಗೆ ಕಳಿಸಲು ಮನಸ್ಸಾಗಿರಲಿಲ್ಲ."

"ಆದರೂ ಕಳಿಸಿಕೊಟ್ಟಿರಲ್ಲಾ ! ಎಷ್ಟು ಗಟ್ಟಿ ಮನಸ್ಸು ನಿಮ್ಮದು."

"ಅಂದು ನಾನು ದುರ್ಬಲನಾಗಿದ್ದರೆ ನನ್ನಿಂದ ಮಹಾಪರಾಧವಾಗುತ್ತಿತ್ತು."

"ಅಪರಾಧವೇ, ಏನದು ?"

"ನಿನ್ನನ್ನು ಇಲ್ಲಿಗೆ ಕರೆದುಕೊಂಡು ಬರುತ್ತಿದ್ದೆ."

"ನಾನು ನಿಮ್ಮವಳಲ್ಲವೇ ?"

"ಹೌದು - ಆದರೆ ನಮ್ಮ ಸಂಬಂಧ ಸಣ್ಣ ದಾರಿ ಹಿಡಿಯಬಾರದೆಂದು ನನ್ನ ಆಸೆ."

"ನಿಮ್ಮವಳಾದ ನಾನು ನಿಮ್ಮಲ್ಲಿ ಬಂದರೆ ಅದು ಸಣ್ಣದಾರಿಯೇ ?"

"ನಿನ್ನ ತಾಯಿ ತಂದೆ ಏನನ್ನುತ್ತಿದ್ದರು."

"ನನ್ನ ಸುಖಕ್ಕೆ ಅವರು ಅಡಿ ಬರುವುದಿಲ್ಲ."

"ಇರಬಹುದು - ಆದರೆ ನಿನ್ನ ಸೌಜನ್ಯದ ದುರುಪಯೋಗ ಪಡಿಸುವುದು ನನಗೆ ತರವಲ್ಲ."

"ದುರುಪಯೋಗವೆಲ್ಲಿಂದ ಬಂತು ? ನನ್ನನ್ನೇ ನಾನು ನಿಮಗೆ ಅರ್ಪಿಸಿಕೊಂಡಿದ್ದೇನೆ."

"ನಾನೂ ಅರ್ಪಿಸಿಕೊಂಡಿದ್ದೇನೆ ಪುಷ್ಪಾ - ಆದರೆ ಸಂಪ್ರದಾಯದ ಕಟ್ಟಳೆಯನ್ನು ಸ್ವಲ್ಪ ನಾವು ಪಾಲಿಸಬೇಕು."

ಈ ಮಾತು ಸದ್ಯ ಬೆಳಸುವುದು ಅಪಾಯಕಾರಿಯೆಂಬುದನ್ನು ಪುಷ್ಪ ಅರಿತು ನೀರವವಾದಳು.

"ನಿನ್ನೆ ಮದುವೆ ಚೆನ್ನಾಗಿ ಆಯಿತೇ ?"

"ಆಯಿತು.... ನಿಮಗೆ ಶಕುನಗಳಲ್ಲಿ ನಂಬಿಕೆಯಿದೆಯೇ ?"

"ಏಕೆ ?"

"ಇದು ನಮಗೆ ಶುಭಶಕುನವಲ್ಲವೇ ?"

"ಹೌದು."

ಇದ್ದಕ್ಕಿದ್ದಂತೆ ಪುಷ್ಪನ ಮುಖ ಗಂಭೀರವಾದುದನ್ನು ಕಂಡು ಸಂಜೀವ ಅವಳ ತಲೆಯನ್ನು ಮೃದುವಾಗಿ ಎತ್ತಿ ಕಣ್ಣಲ್ಲಿ ಕಣ್ಣು ಸೇರಿಸಿ ನೋಡಿ

"ಪುಷ್ಪಾ – ನಿನ್ನ ಕಣ್ಣಲ್ಲೇಕೆ ನೀರು."

ಪುಷ್ಪ ಅವನ ಎದೆಯಮೇಲೆ ತಲೆಯಿಟ್ಟಳು. ಅವಳ ಕಣ್ಣಿಂದ ನಾಲ್ಕಾರು ಹನಿಗಳು ಮಿಡಿದವು.

"ಏನಾಯಿತು ಪುಷ್ಪಾ. ಹೇಳು – ಅಳಬೇಡ."

"ನಿಮ್ಮನ್ನು ನಾನು ಬಿಟ್ಟಿರಲಾರೆ."

"ಬಿಟ್ಟಿರು ಎಂದು ನಾನು ಹೇಳಲಿಲ್ಲ – ಇನ್ನು ಸ್ವಲ್ಪ ದಿವಸ ಇಬ್ಬರೂ ಸಮಾಧಾನ ತಂದುಕೊಳ್ಳಬೇಕು."

"ಹೊಟೇಲ್ ಊಟಮಾಡಿಕೊಂಡು, ನೀವೇ ಕಾಫಿ ಮಾಡಿಕೊಳ್ಳುವುದನ್ನು ನಾನು ನೋಡಲಾರೆ."

"ನನಗೆ ಅಭ್ಯಾಸವಾಗಿದೆ. ಅದರಿಂದ ಏನೂ ಹಿಂಸೆಯಾಗುತ್ತಿಲ್ಲ."

"ನನ್ನನ್ನು ಯಾವಾಗ ಬರಮಾಡಿಕೊಳ್ಳುವಿರಿ."

"ಸ್ವಲ್ಪ ದಿವಸಗಳಲ್ಲಿಯೇ .......ಹೊರಗೆ ಹೋಗಿ ತಿರುಗಾಡಿಕೊಂಡು ಬರೋಣ ಏಳು"

ಎಂದು ಎಬ್ಬಿಸಿದ. ಕಣ್ಣೀರಿಂದ ಕಂಗೆಟ್ಟಿದ್ದ ಅವಳ ಮುಖ ನೋಡಿ

"ಮುಖ ತೊಳೆದುಕೊಂಡು ಬಾ. ಅಷ್ಟು ಹೊತ್ತಿಗೆ ಇನ್ನೊಂದು ಡೋಸ್ (Dose) ಕಾಫಿ ಮಾಡುತ್ತೇನೆ."

ಪುಷ್ಪ ಎದ್ದು ಬಚ್ಚಲ ಮನೆಗೆ ಹೋದಳು. ಸಂಜೀವ ಅಡಿಗೆಯ ಮನೆ ಸೇರಿ ಉಳಿದಿದ್ದ ಕಾಫಿ ಕಷಾಯವನ್ನು ಸ್ಟೌವ್ ಮೇಲಿಟ್ಟ.

ಪುಷ್ಪ ಮುಖಕ್ಕೆ ಸೋಪು ಹಚ್ಚಿ ಮುಖ ತೊಳೆದುಕೊಂಡು ಟವಲಿಗೆ ಹುಡುಕಿದಳು. ಟವಲು ಕಾಣದಾಗಲು ಒದ್ದೆ ಮುಖದಲ್ಲಿಯೇ ಅಡಿಗೆಯ ಮನೆ ಬಳಿಗೆ ಬಂದು

"ಟವಲು ಎಲ್ಲಿದೆ" ಎಂದಳು.

"ಬೆಡ್ ರೂಮಿನಲ್ಲಿರಬಹುದು ನೋಡು – ತಡೀ ನಾನೇ ಬಂದು ಕೊಡುತ್ತೇನೆ."

"ಬೇಡಿ - ನಾನು ತೆಗೆದುಕೊಳ್ಳುತ್ತೇನೆ"

ಎಂದು ಬೆಡ್‌ರೂಮಿಗೆ ಹೋದಳು. ಸ್ಟ್ಯಾಂಡ್ (Stand) ಮೇಲಿದ್ದ ಟರ್ಕಿ ಟವಲೆಳೆದುಕೊಂಡು ಮುಖ ಒರಸಿಕೊಂಡು ಮೇಜಿನ ಮೇಲಿದ್ದ ಪೌಡರ್ ಸಿಂಪಡಿಸಿಕೊಳ್ಳಲಾರಂಭಿಸಿದಳು.

ಪುಷ್ಪ ಇದ್ದೆಡೆಗೇ ಸಂಜೀವ ಕಾಫಿ ತೆಗೆದುಕೊಂಡು ಹೋಗಿ ಅವಳ ಕೈಗೊಂದು ಲೋಟವಿತ್ತ.

ತನ್ನ ಕೈಗೆ ತೆಗೆದುಕೊಂಡ ಲೋಟವನ್ನು ಪುಷ್ಪ ಸಂಜೀವನ ಬಾಯಿ ಹತ್ತಿರ ಹಿಡಿದಳು.

"ನನ್ನ ಲೋಟವೂ ತುಂಬಿದೆ."

"ಚಿಂತೆಯಿಲ್ಲ ಸ್ವಲ್ಪ ಕುಡಿದು ಕೊಡಿ"

ಸಂಜೀವ ಅವಳ ಲೋಟವಲ್ಲಿ ಸ್ವಲ್ಪ ಕುಡಿದು ಕೊಟ್ಟು ತನ್ನ ಲೋಟದಿಂದ ಸ್ವಲ್ಪ ಕುಡಿಸಿದ. ಇಬ್ಬರೂ ಕಾಫಿ ಮುಗಿಸಿ ಮೇಜಿನ ಮೇಲೆ ಲೋಟ ಗಳನ್ನಿಟ್ಟರು.

ಸಂಜೀವ ಹೊರಗೆ ಹೊರಡಲುದ್ಯುಕ್ತನಾದುದನ್ನು ಕಂಡು ಪುಷ್ಪ ಅವನ ಕೈ ಹಿಡಿದು ಜಗ್ಗಿ ತಾನು ಹೋಗಿ ಮಂಚದ ಮೇಲೆ ಕುಳಿತಳು. ಸಂಜೀವ ಅನೈಚ್ಛಿಕವಾಗಿ ಅವಳನ್ನನುಸರಿಸಿ ಹೋಗಿ ಅವಳ ಪಕ್ಕದಲ್ಲಿ ಕುಳಿತ. ಪುಷ್ಪ ಅವನನ್ನು ಬಂಧುರಾಲಿಂಗನದಲ್ಲಿ ಹಿಡಿದಳು. ಅವಳ ಹಿಡಿತದಿಂದ ಮೆಲ್ಲನೆ ಬಿಡಿಸಿಕೊಂಡು, ಅವಳ ಕೈ ಹಿಡಿದು

"ಬೇಡ ಪುಷ್ಪಾ." ಎಂದ.

"ನೀವು ನನ್ನ ಮನಸ್ಸು ತುಂಬಾ ನೋಯಿಸುತ್ತಿರುವಿರಿ."

"ಇಲ್ಲವೆನ್ನಲಾರೆ. ನಿನ್ನ ಮನಸ್ಸನ್ನು ಸಂತೋಷಗೊಳಿಸುವ ಕಾಲ ಮುಂದಿದೆ."

"ಯಾವಾಗ?"

"ಸಾವಕಾಶವಾಗಿ ಯೋಚನೆ ಮಾಡೋಣ."

"ನಾನು ನಿರ್ಭಾಗ್ಯೆ."

"ಏಕೆ ಹಾಗನ್ನುವೆ."

"ನಿಮಗೂ ನಾನು ಬೇಡವಾಗುತ್ತಿರುವೆನಲ್ಲಾ."

"ನೀನು ತಪ್ಪು ತಿಳಿದುಕೊಳ್ಳುತ್ತಿರುವೆ – ಈಗ ಬೇಡ, ಈ ವಿಷಯ ಮತ್ತೆ ಯಾವಾಗಲಾದರೂ ಮಾತನಾಡುವ"

ಎಂದೆದ್ದು ಹೊರಗೆ ಬಂದ. ಪುಷ್ಪ ಸ್ವಲ್ಪಹೊತ್ತು ಕಳೆದ ಮೇಲೆ ಹೊರಗೆ ಬಂದಳು. ಕಣ್ಣೀರ್ಗರೆದು ಬಂದಿದ್ದುದು ಸ್ಪಷ್ಟವಾಗಿ ಕಾಣುತ್ತಿತ್ತು.

"ನಿನ್ನ ಕಣ್ಣುಗಳನ್ನು ನೋಡಿಕೋ."

"ಇನ್ನು ನಾನು ಮನೆಗೆ ಹೋಗಬಹುದೇ?"

"ಕಳಿಸುವುದಕ್ಕೆ ನಾನು ಬರಬಾರದೇ?"

"ನಿಮಗೆ ತೊಂದರೆಯಾಗುವುದೇನೋ?"

ನಸುನಗುತ್ತ ಕೋಟು ಧರಿಸಿ ಸಂಜೀವ ಅವಳೊಂದಿಗೆ ಹೊರಬಿದ್ದ.

ರಸ್ತೆ ದಾಟಿದ ಮೇಲೆ ಎದುರಿಗೆ ಬರುತ್ತಿದ್ದ ಷಹಪಸಂದ್ ನಿಲ್ಲಿಸಿ ಬಾಡಿಗೆ ಗೊತ್ತು ಮಾಡಿದ. ಇಬ್ಬರೂ ಗಾಡಿ ಹತ್ತಿ ಕುಳಿತರು. ಗಾಡಿಯಲ್ಲಿ ಹೋಗುತ್ತಿರುವಂತೆ

"ನಾಳೆ ಎಷ್ಟು ಹೊತ್ತಿಗೆ ಬರುತ್ತೀ ಪುಷ್ಪ."

"ನಿಮಗೆ ಬೇಡದ ಮೇಲೆ ನಾನೇಕೆ ಬರಲಿ."

"ತಪ್ಪು ಮಾತಾಡಬಾರದು. ಎಷ್ಟು ಹೊತ್ತಿಗೆ ಬರುವೆ ಹೇಳು."

"ನೀವೇ ಹೇಳಿ."

"ನಾಲ್ಕುಗಂಟೆಗೆ ಬರಲು ಸಾಧ್ಯವೇ?"

"ಅಷ್ಟು ಬೇಗ."

"ಕನ್ನಂಬಾಡಿಗೆ ಹೋಗಿ ಬರೋಣ."

"ನಿಜವೇ........"

"ನಿಜ....ಡಾರ್ಲಿಂಗ್ (Darling)"

"ತಪ್ಪು ತಿಳಿದುಕೊಂಡುದಕ್ಕೆ ನನ್ನನ್ನು ಕ್ಷಮಿಸಿ."

"ನಾನು ನಿನ್ನ ಕ್ಷಮೆ ಬೇಡಬೇಕಾಗಿದೆ. . . . ಈಗ ಸಮಾಧಾನವಾಯಿತೇ?"

"ಆಯಿತು. ನಾನು ತಿಳಿವಳಿಕೆಯಿಲ್ಲದವಳು . . . . ಏನಾದರೂ ತಪ್ಪುಮಾಡಿದರೆ ದೊಡ್ಡ ಮನಸ್ಸು ಮಾಡಿ ಕ್ಷಮಿಸಿ."

"ಸ್ನೇಹ - ಪ್ರೇಮವಿದ್ದ ಕಡೆ ಭಿನ್ನಾಭಿಪ್ರಾಯ ಬರುವುದೂ ಸ್ವಾಭಾವಿಕ. ಅದನ್ನು ದೊಡ್ಡದು ಮಾಡಿಕೊಳ್ಳದಿರುವುದೇ ಸ್ನೇಹ - ಪ್ರೇಮದ ಸಹಜ ಲಕ್ಷಣ."

"ನಿಮ್ಮದು ಅಸಾಧಾರಣ ತಿಳುವಳಿಕೆ."

"ನೀನೊಬ್ಬಳೇ ಹಾಗೆ ಹೇಳಿದವಳು ಉಳಿದವರು ನನ್ನನ್ನು ಶುದ್ಧ ಅವಿವೇಕಿ ಎಂದು ತಿಳಿದುಕೊಂಡಿದ್ದಾರೆ."

"ಯಾರು ? ಆವತ್ತು ಬಂದಿದ್ದರಲ್ಲಾ ಅವರೇ ?"

"ಅವರೂ ಹಾಗೇ ತಿಳಿದುಕೊಂಡಿದ್ದಾರೆ."

"ನನ್ನ ದೊರೆಯ ಯೋಗ್ಯತೆ ಅವರೇನು ಬಲ್ಲರು."

"ಕೂಡಿದವರಿಗೆ ಕೋಡಗ ಮುದ್ದು ಎಂದು ಕನ್ನಡದಲ್ಲಿ ಒಂದು ಗಾದೆಯಿದೆ."

"ನಮ್ಮ ಮನೆಗೆ ಬರುವುದಿಲ್ಲವೇ ?"

"ನೀನು ಕರೆದೇ ಇಲ್ಲ."

"ನಿಮ್ಮನ್ನು ಕರೆಯುವಷ್ಟು ಯೋಗ್ಯತೆ ನನಗಿದೆಯೇ ! ಬಡವರ ಮನೆ - ಬಡತನದ ಸಂಸಾರ."

"ನಾನು ಲಕ್ಷಾಧೀಶ್ವರನಲ್ಲವೇ ? ಯಾವಾಗ ಬರಲಿ ಹೇಳು."

"ನಿಮ್ಮನ್ನು ಕರೆಯುವುದಕ್ಕೂ ನನಗೆ ಬಾಯಿ ಬರುವುದಿಲ್ಲ."

"ಏಕೆ ?"

"ನನ್ನ ತಂದೆಯ ಸ್ವಭಾವ ವಿಚಿತ್ರವಾದುದು - ಅವರು ಯಾವ ಹೊತ್ತಿನಲ್ಲಿ ಹೇಗಿರುತ್ತಾರೆಂದು ಹೇಳಲು ಸಾಧ್ಯವಿಲ್ಲ."

"ತುಂಬ ಕೋಪಿಷ್ಟರೇ ?"

"ನಿಜ ಹೇಳಲೇ ?"

"ನಿನ್ನ ಮನಸ್ಸಿಗೆ ನೋವಾಗದಿದ್ದರೆ ಹೇಳು."

"ಅವರು ಕುಡಿಯುತ್ತಾರೆ."

"ಅವರಿಂದ ನಮಗೇನು ಬಾಧಕ."

"ಬುದ್ಧಿಯ ಮೇಲೆ ಹತೋಟಿ ತಪ್ಪಿಹೋಗುತ್ತದೆ. ಮನಸ್ಸು ಬಂದರೆ ತಲೆಯ ಮೇಲೆ ಕೂಡಿಸಿಕೊಂಡು ಮೆರೆಯುತ್ತಾರೆ: ಬೇಡವಾದರೆ ಬಾಯಿಗೆ ಬಂದಂತೆ ಬಯ್ದು ಬಿಡುತ್ತಾರೆ."

"ಹೋಗಲಿ ಬಿಡು - ಆ ಪ್ರಸ್ತಾಪವೇಕೆ?"

ಗಾಡಿಯವನು 'ಎಲ್ಲಿ ನಿಲ್ಲಿಸಲಿ ಸ್ವಾಮಿ' ಎಂದು ಕೇಳಿದ. ಪುಷ್ಪ 'ಬಸ್ ಸ್ಟ್ಯಾಂಡಿನ ಬಳಿ ನಿಲ್ಲಿಸಲಿ. ಅಲ್ಲಿಂದ ನಮ್ಮ ಮನೆ ಹತ್ತಿರ.' ಎಂದಳು.

ಬಸ್‌ಸ್ಟ್ಯಾಂಡ್ ಸಮೀಪದಲ್ಲಿ ಗಾಡಿಯವನು ಗಾಡಿ ನಿಲ್ಲಿಸಿದ ಸಂಜೀವ, ಪುಷ್ಪ ಇಬ್ಬರೂ ಇಳಿದರು.

"ನೀವು ಮನೆ ಮುಟ್ಟುವುದು ಹೇಗೆ?"

"ಇದೇ ಗಾಡಿಯಲ್ಲಿ ಹಿಂದಿರುಗಿ ಹೋಗುತ್ತೇನೆ."

"ನಾನು ಬರಲೇ."

"ತಡಿ"

ಎಂದು ಹೇಳಿ ಕಿಸೆಯಿಂದ ಒಂದು ಲಕೋಟೆ ತೆಗೆದು ಅವಳ ಕೈಯಲ್ಲಿಟ್ಟ.

"ಏನಿದು?"

"ಮನೆಗೆ ಹೋಗಿ ಒಡೆದು ನೋಡಿಕೋ. ನಿನ್ನ ಕಾಗದಕ್ಕೆ ನನ್ನ ಉತ್ತರ ಬರೆದಿಟ್ಟಿದ್ದೇನೆ. ನಾಳೆ ನಾಲ್ಕು ಗಂಟೆ ಮರೆಯಬೇಡ"

"ಇಲ್ಲ"

ಎನ್ನುತ್ತಾ ಪುಷ್ಪ ಲಕೋಟೆಯನ್ನು ಕುಪ್ಪಸದೊಳಗೆ ಇಟ್ಟುಕೊಂಡಳು.

ಪುಷ್ಪ ಕಣ್ಮರೆಯಾಗುವವರೆಗೂ ಅಲ್ಲಿಯೇ ನಿಂತಿದ್ದು ಗಾಡಿ ಹತ್ತಿ ಕುಳಿತ.

"ಎಲ್ಲಿಗೆ ಹೊಡೆಯಲಿ ಬುದ್ಧಿ"

"ಎಲ್ಲಿಂದ ಬಂದೆಯೋ ಅಲ್ಲಿಗೆ ಹೊಡಿ"

ಎಂದು ಸಂಜೀವ ಹೇಳಿದ

## ೬

ಮಂದಗೆರೆಯಲ್ಲಿ ಮದುವೆ ಮಾಡುವುದು ಸಾಧ್ಯವೇ ಇರಲಿಲ್ಲ. ನಿರ್ಗತಿಕ ಪುಟ್ಟತಾಯಮ್ಮ ತನ್ನ, ತನ್ನ ಮಗಳ ಹೊಟ್ಟೆಯಪಾಡು ಕಳೆದುಕೊಳ್ಳುವುದೇ

ಕಷ್ಟವಾಗಿದ್ದಾಗ ಮಗಳ ಮದುವೆಮಾಡುವ ವಿಷಯವಂತೂ ದೂರ ಉಳಿಯಿತು. ಮಗಳ ಮದುವೆಯೆಂದಿದ್ದರೆ ಊರಿನವರು ಅಷ್ಟೋ ಇಷ್ಟೋ ಸಹಾಯಮಾಡುತ್ತಿದ್ದರು. ಆದರೆ ಆ ಭರವಸೆಯ ಮೇಲೆ ಪುಟ್ಟತಾಯಮ್ಮ ಮದುವೆ ಕಲಾಪ ಮುಂದಗೆರೆಯಲ್ಲಿ ಹೂಡಿಕೊಳ್ಳಲು ಸಿದ್ಧವಾಗಿರಲಿಲ್ಲ.

ದೇವರಯ್ಯ ಬಂದು ಅಕ್ಕನಲ್ಲಿ ರಂಗಣ್ಣನ ವಿಷಯ ಪ್ರಸ್ತಾಪಮಾಡಿದಾಗ ಆಕೆಯ ಕಣ್ಣಲ್ಲಿ ನೀರೇ ಬಂತು. 'ನಂಜುಂಡೇಶ್ವರ ಈಗಲಾದರೂ ಕಣ್ಣು ಬಿಟ್ಟು ನೋಡಿದನಲ್ಲಾ' ಎಂದಳು.

''ಮದುವೆ ವಿಷಯ ಏನು ಮಾಡುತ್ತೀ ಅಕ್ಕಾ''

ಎಂದು ದೇವರಯ್ಯ ಕೇಳಿದ.

''ನಾನೇನು ಹೇಳಲಪ್ಪಾ. ನೀನು ಹೇಗೆ ಹೇಳಿದರೆ ಹಾಗೆ ಮಾಡುತ್ತೀನೆ.''

''ನನ್ನ ಸ್ಥಿತಿಗತಿ ನಿನಗೆ ಗೊತ್ತೇ ಇದೆಯಲ್ಲಾ.''

''ಗೊತ್ತಿದೆ. ನೀನೂ ಮಕ್ಕಳೊಂದಿಗ. ಸುಬ್ಬೂನೂ ನಿನ್ನ ಮಗಳೇ ಅಲ್ಲವೇ.''

''ಜವಾಬ್ದಾರಿ ಹೊರುವುದಕ್ಕೆ ನಾನು ಸ್ವಲ್ಪವೂ ಹಿಂಜರಿಯುವುದಿಲ್ಲ ಅಕ್ಕ. ಆದರೆ ಯಾವದಕ್ಕೂ ಮಾರ್ಗವಿಲ್ಲವಾಗಿದೆ. ನನಗೆ ಬರೋ ನಲವತ್ತು ರೂಪಾಯಿಯಲ್ಲಿ ಎಂಟು ಜನರ ಸಂಸಾರ ಸಾಗಿಸಬೇಕೆಂದರೆ ನನಗೆ ಸಾಕು ಸಾಕಾಗಿ ಹೋಗುತ್ತದೆ.''

''ಯಾವ ಬಾಯಲ್ಲಿ ನಿನ್ನ ಆಕ್ಷೇಪಿಸಲಿ ದೇವೂ. ನನಗೂ ಅಲ್ಪ ಸ್ವಲ್ಪ ಸಹಾಯಮಾಡುತ್ತಲೇ ಇದ್ದೀ. ಈ ಕನ್ಯಾಸೆರೆ ಒಂದು ಹೇಗಾದರೂ ಬಿಡಿಸಿ ಪುಣ್ಯಕಟ್ಟಿಕೊಳ್ಳಪ್ಪ.''

''ಇದಕ್ಕೊಂದೇ ಮಾರ್ಗ. ನೀನು ಒಪ್ಪಿದರೆ ರಂಗಣ್ಣನವರಿಗೆ ಬರೆಯುತ್ತೀನೆ.''

''ಏನು ಹೇಳು.''

''ಮದುವೆ ಖರ್ಚು ನೀವೇ ವಹಿಸಿಕೊಳ್ಳಬೇಕು ಎಂದು ಅವರಿಗೆ ಸ್ಪಷ್ಟವಾಗಿ ತಿಳಿಸಿಬಿಡಬೇಕು.'' ,

''ಅವರು ಒಪ್ಪುತ್ತಾರೆಯೇ ?''

"ಒಪ್ಪುತ್ತಾರೆ ಎಂದು ನನ್ನ ಅಂತರಾತ್ಮ ಹೇಳುತ್ತಿದೆ. ಮೊದಲನೆಯ ಹೆಂಡತಿ ಜಗಳ ಕಾಮಕೊಂಡು ತೌರುಮನೆಗೆ ಹೊರಟುಹೋಗಿದ್ದಾಳಂತೆ."

"ನಾಳೆ ಅವಳೂ ಬಂದು ಒಕ್ಕರಿಸಿವರೆ."

"ಅಂಥ ಸಂಭವ ಕಾಣಲಿಲ್ಲ. ಗಂಡ ಹೆಂಡತಿಗೆ ರಾಜಿಯಾಗುವ ಲಕ್ಷಣ ಸ್ವಲ್ಪವೂ ಇಲ್ಲ. ಇಬ್ಬರು ಮಕ್ಕಳು ಪಾಲಿನ ಆಸ್ತಿ ಕೊಟ್ಟುಬಿಟ್ಟು ನೀವು ಬೇಕಾದದ್ದು ಮಾಡಿಕೊಳ್ಳಿ ಎಂದು ಆಕೆ ಬರೆದಿದ್ದಾಳಂತೆ."

"ಮದುವೆ ಖರ್ಚಿನ ವಿಷಯ ಬರೆದು ನೋಡಪ್ಪಾ."

"ನೀನೂ ಸುಬ್ಬೂ ನನ್ನ ಜತೆ ಚನ್ನರಾಯಪಟ್ಟಣಕ್ಕೆ ಬಂದು ಬಿಡಿ. ಬಂದುವೇಳೆ ಹೆಣ್ಣು ನೋಡುವುದಕ್ಕೆ ರಂಗಣ್ಣನವರು ಬಂದರೂ ಬರಬಹುದು."

ಪುಟ್ಟತಾಯಮ್ಮ ತಮ್ಮನ ಸಲಹೆಯನ್ನು ಅಂಗೀಕರಿಸಿ ಮಗಳೊಂದಿಗೆ ಚನ್ನರಾಯಪಟ್ಟಣಕ್ಕೆ ಪ್ರಯಾಣ ಮಾಡಿದಳು.

ದೇವರಯ್ಯ ಚನ್ನರಾಯಪಟ್ಟಣದಿಂದಲೇ ರಂಗಣ್ಣನಿಗೆ ಕಾಗದ ಬರೆದು ಮದುವೆಯ ಖರ್ಚಿನ ವಿಷಯನ್ನೂ ಸೂಚಿಸಿದ. ರಂಗಣ್ಣ ತಾನೇ ಬರುವುದಾಗಿ ಉತ್ತರವಿತ್ತ.

ನಿಶ್ಚಯಿಸಿದ್ದ ತಾರೀಖಿಗೆ ರಂಗಣ್ಣ ಚಾಮರಾಜನಗರ ಬಿಟ್ಟುಹೊರಟು ಮೈಸೂರಿನಿಂದ ಬಸ್ಸಿನಲ್ಲಿ ಚನ್ನರಾಯಪಟ್ಟಣ ಸೇರಿದ. ತಾನು ಚನ್ನರಾಯ ಪಟ್ಟಣಕ್ಕೆ ಹೋಗುವ ವಿಷಯ ಯಾರಲ್ಲಿಯೂ ಬಾಯಿ ಬಿಡಲಿಲ್ಲ.

ದೇವರಯ್ಯ ಬಸ್‌ಸ್ಟ್ಯಾಂಡಿನ ಬಳಿಗೆ ಬಂದು ರಂಗಣ್ಣನನ್ನು ವಿಶ್ವಾಸ ಪೂರ್ವಕವಾಗಿ ಸ್ವಾಗತಿಸಿ ಮನೆಗೆ ಕರೆದೊಯ್ದ. ಪಾಯಿಸದಡಿಗೆ ಊಟ ವಾಯಿತು. ಪ್ರಯಾಣದ ಆಯಾಸ ಪರಿಹರಿಸಿಕೊಳ್ಳಲು ರಂಗಣ್ಣ ಸ್ವಲ್ಪ ಹೊತ್ತು ಮಲಗಿದ.

ರಂಗಣ್ಣ. ವಿಶ್ರಮಿಸಿಕೊಂಡು ಎದ್ದ ಮೇಲೆ ದೇವರಯ್ಯ ಅವನಿಗೆ ಬಿಸಿ ಬಿಸಿ ಕಾಫಿ ತಂದಿತ್ತು ಮಾತಿಗೆ ಕುಳಿತ.

"ನಮ್ಮ ವಿಷಯವೆಲ್ಲಾ ನಿರ್ವಂಚನೆಯಾಗಿ ಅರಿಕೆಮಾಡಿದ್ದೇನೆ ರಂಗಣ್ಣನವರೇ. ನೀವು ದೊಡ್ಡ ಮನಸ್ಸು ಮಾಡಿ ಈ ಶುಭ ಕೆಲಸ ಆಗುಮಾಡಿ ಕೊಡಬೇಕು."

"ಖರ್ಚಿನ ವಿಷಯ ಯೋಚನೆಮಾಡಬೇಡಿ ದೇವರಯ್ಯ. ಹೇಗೋ ಆಗುತ್ತದೆ. ಈ ವಿಷಯ ಮಾತ್ರ ತುಂಬ ಗೋಪ್ಯವಾಗಿಡಬೇಕು."

"ಲಗ್ನಪತ್ರಿಕೆ ಅಚ್ಚು ಹಾಕಿಸುವುದು ಬೇಡವೇ ?"

"ಅಚ್ಚು ಹಾಕಿಸಿ. ಮದುವೆ ಹಿಂದಿನ ದಿನ ಟಪಾಲಿಗೆ ಕಳುಹಿಸಿ. ಎಲ್ಲರ ಕೈಗೂ ಮದುವೆಯ ದಿನವೇ ಲಗ್ನಪತ್ರಿಕೆ ತಲುಪಬೇಕು. ಇಲ್ಲಿಗೆ ಬರುವುದಕ್ಕೆ ಯಾರಿಗೂ ಸಾಧ್ಯವಾಗಬಾರದು."

"ಯಾರಾದರೂ ಆಕ್ಷೇಪವೆತ್ತುವ ಸಂಭವವಿದೆಯೇನು ?"

"ಮೊದಲೇ ಎಚ್ಚರವಾಗಿರುವುದು ಒಳ್ಳೆಯದು. ಇನ್ನೊಂದು ವಿಷಯ. ಹೆಚ್ಚು ಕಲಾಪ ಇಟ್ಟುಕೊಳ್ಳಬೇಡಿ - ಕಾಶೀಯಾತ್ರೆ, ಉರುಟಣೆ, ಔಪಾಸನೆ ಗಳನ್ನೆಲ್ಲಾ ವರ್ಜ್ಯಮಾಡಿ ಎಷ್ಟು ಪ್ರಕೃತವೋ ಅಷ್ಟು ಮಾತ್ರ ಶಾಸ್ತ್ರವಿಧಿ ಇಟ್ಟುಕೊಂಡು ಒಂದೇ ದಿನದಲ್ಲಿ ಮದುವೆ ಮುಗಿಸಿಬಿಡಿ."

"ಆಗಬಹುದು. ನಾನೂ ಸ್ಥಳೀಕನಲ್ಲ. ನನಗೂ ಇಲ್ಲಿ ಹೆಚ್ಚು ಸಂಬಂಧ ಸೂತ್ರಗಳಿಲ್ಲ."

"ಲಗ್ನವಾದ ಮಾರನೆಯ ದಿವಸ ನಾನೂ ನನ್ನ ಹೆಂಡತಿ ಊರಿಗೆ ಪ್ರಯಾಣ ಬೆಳಸುತ್ತೇವೆ ಅತ್ತೆಮ್ಮನವರು ಇಲ್ಲಿಯೋ ಇರುತ್ತಾರೋ ಹೇಗೆ ?"

"ಅವರದೇನೂ ನಿಶ್ಚಯವಾಗಿಲ್ಲ."

"ಅವರಿಗೆ ಅಭ್ಯಂತರವಿಲ್ಲದಿದ್ದರೆ ನನ್ನ ಜತೆ ಬರಲಿ. ನನ್ನ ಹೆಂಡತಿಗೂ ನಿಕ್ಕಾಗುತ್ತದೆ."

"ಆಗಬಹುದು - ಮದುವೆಯಾದ ಕೂಡಲೇ ಹೊರಡಬೇಕೆನ್ನುವಿರಲ್ಲಾ !"

"ಅದರಲ್ಲೇನು ತಪ್ಪು."

"ಪ್ರಸ್ತದ ಶಾಸ್ತ್ರವಾಗದೆ ಹೆಣ್ಣನ್ನು ಕಳಿಸುವ ಸಂಪ್ರದಾಯವಿಲ್ಲ."

"ಮದುವೆಯ ರಾತ್ರಿಯೇ ಆ ಶಾಸ್ತ್ರವನ್ನೂ ಮುಗಿಸಿಬಿಡಿ."

"ಪುರೋಹಿತರು ಒಪ್ಪಬೇಕಲ್ಲಾ ಸ್ವಾಮಿ."

"ಇಪ್ಪತ್ತು ರೂಪಾಯಿ ಹೆಚ್ಚು ದಕ್ಷಿಣೆ ಕೊಟ್ಟರಾಯಿತು."

"ಮುಹೂರ್ತ ಯಾವಾಗ ಇಡಿಸಲಿ."

"ನಾಳೆಯೇ ಇಡಿಸಿದರೂ ನಾನು ಸಿದ್ಧನಾಗಿದ್ದೇನೆ."

"ಅಷ್ಟುಬೇಗ ಹೇಗೆ ಸಾಧ್ಯ ಸ್ವಾಮಿ."

"ನಿಮ್ಮ ಪುರೋಹಿತರನ್ನ ಬರಮಾಡಿ ಸಮೀಪದಲ್ಲಿ ಲಗ್ನ ಯಾವುದಿದೆ ತಿಳಿದುಕೊಳ್ಳಿ."

"ಅವರನ್ನ ಇಲ್ಲೇ ಕರೆಸುತ್ತೇನೆ. ನಿಮ್ಮ ಎದುರಿಗೇ ಇತ್ಯರ್ಥವಾಗಲಿ"

ಎಂದು ತನ್ನ ಮಗನ ಕೈಯಲ್ಲಿ ಪುರೋಹಿತ ಶಾಮಭಟ್ಟರಿಗೆ ಹೇಳಿ ಕಳಿಸಿದ.

ಪುಟ್ಟತಾಯಮ್ಮ ತಮ್ಮನನ್ನು ಕರೆದು ಕಿವಿಯಲ್ಲೇನೋ ಪಿಸುಗುಟ್ಟಿದಳು ದೇವರಯ್ಯ ಹೊರಗೆ ಬಂದು

"ಕನ್ಯಾ ಕರೆದುಕೊಂಡು ಹೋಗಿ ತೋರಿಸು ಎಂದು ಅಕ್ಕ ಹೇಳಿದರು."

'ಆಗಬಹುದು' ಎನ್ನುವಂತೆ ರಂಗಣ್ಣ ತಲೆದೂಗಿದ

ದೇವರಯ್ಯನ ಹಿರಿಮಗಳು ವೆಂಕಮ್ಮ, ಸುಬ್ಬಲಕ್ಷ್ಮಿಯನ್ನು ಜತೆಯಲ್ಲಿ ಕರೆದುಕೊಂಡು ಬಂದು ಗೋಡೆಯ ಪಕ್ಕದಲ್ಲಿ ಕುಳಿತರು

ಸುಬ್ಬಲಕ್ಷ್ಮಿ ಸ್ಫುರದ್ರೂಪಿಯಾಗಿರದಿದ್ದರೂ ಕುರೂಪಿಯಾಗಿರಲಿಲ್ಲ ಬಡತನ ಮುಖದ ಮೇಲೆ ತೇಲುತ್ತಿದ್ದರೂ ಮೈ ಕೈ ತುಂಬಿಕೊಂಡು ಪ್ರೌಢ ಪ್ರಾಯದವಳಾಗಿದ್ದಳು. ಸ್ವಲ್ಪ ಕಪ್ಪಿನ ಕಡೆ ವಾಲುತ್ತಿದ್ದ ಬಣ್ಣ, ಎತ್ತರದ ಆಳು. ಕಣ್ಣು ಮೂಗು ಲಕ್ಷಣವಾಗಿದ್ದವು ದೇವರಯ್ಯನ ಹೆಂಡತಿ ತಮ್ಮದೇ ಒಂದು ಒಳ್ಳೆಯ ಸೀರೆ ಉಡಿಸಿದ್ದರು.

''ಹಾಡು ಹಸೆ ಬರುತ್ತದೆಯೋ' ಎಂದು ರಂಗಣ್ಣ ಕೇಳಿದ.

"ಹಳ್ಳಿಯ ಹಾಡು ಹಸೆ"

"ಹೇಳಲಿ ನೋಡೋಣ" ಎಂದ.

ದೇವರಯ್ಯ ಒತ್ತಾಯಮಾಡಿ ಸುಬ್ಬಲಕ್ಷ್ಮಿಯ ಕೈಯಲ್ಲಿ ಒಂದೆರಡು ಹಾಡು ಹೇಳಿಸಿದ.

ಪುರೋಹಿತರನ್ನು ಕರೆಯಲು ಹೋಗಿದ್ದ ಹುಡುಗ ಬಂದು 'ಉಪಾಧ್ರು ಬರ್‍ತಾ ಇದ್ದಾರೆ' ಎಂದು ಹೇಳಿದ. ಸುಬ್ಬಲಕ್ಷ್ಮಿ, ದೇವರಯ್ಯ ಮಗಳು ವೆಂಕಮ್ಮ ಒಳಕ್ಕೆ ಎದ್ದುಹೋದರು.

ಶಾಮಭಟ್ಟರಿಗೆ ರಂಗಣ್ಣನ ಪರಿಚಯ ದೇವರಯ್ಯ ಮಾಡಿಕೊಟ್ಟ

"ನಮ್ಮ ಸುಬ್ಬನ ತಂದುಕೊಳ್ಳೋಕೆ ದೊಡ್ಡಮನಸ್ಸುಮಾಡಿ ಒಪ್ಪಿ ಕೊಂಡಿದ್ದಾರೆ ಉಪಾಧ್ರೆ ಹತ್ತಿರದ ಲಗ್ನ ಯಾವದಿದೆ ನೋಡಿ."

"ಜಾತಕಗಳು ಬೇಕಲ್ಲ."

ಒಳಗಿನಿಂದ ಪುಟ್ಟತಾಯಮ್ಮ ಮಗಳ ಜಾತಕದ ಪ್ರತಿ ಕಳಿಸಿಕೊಟ್ಟಳು. ರಂಗಣ್ಣ ತನ್ನ ಕಿಸೆಯಿಂದ ಜಾತಕ ತಗೆದು ಭಟ್ಟರ ಕೈಯಲ್ಲಿಟ್ಟ. ಜಾತಕಗಳನ್ನು ಭಟ್ಟರು ನೋಡುತ್ತಿರಲು

"ಗ್ರಹಬಲ ಹೇಗಿದೆ ಭಟ್ಟರೇ.' ಎಂದು ಕೇಳಿದ.

"ಪ್ರಶಸ್ತವಾಗಿದೆ. ಸವಿೂಪದ ಲಗ್ನವೆಂದರೆ ಇನ್ನು ಹದಿನೈದು ದಿವಸಕ್ಕೇ ಒಂದು ಲಗ್ನವಿದೆ ಆಗಬಹುದೋ '

"ಆಗಬಹುದು" ಎಂದು ರಂಗಣ್ಣ ಹೇಳಿದ.

ಒಳಿತಲ್ಲಿಂದಲೇ ದೇವರಯ್ಯ ಅಕ್ಕನನ್ನು ಕೂಗಿ

"ಹದಿನೈದು ದಿವಸಕ್ಕೇ ಲಗ್ನವಿದೆ ಎಂದು ಉಪಾಧ್ಯ ಹೇಳುತ್ತಾರೆ"

ಎಂದ.

"ಮುಹೂರ್ತ ಚೆನ್ನಾಗಿದ್ದರೆ ಇಡಿಸಿಬಿಡಪ್ಪಾ"

ಎಂದು ಪುಟ್ಟತಾಯಮ್ಮ ಹೇಳಿದಳು.

"ಲಗ್ನವಾದ ಮಾರನೆಯ ದಿವಸವೇ ಹೆಂಡತಿಯನ್ನು ಜತೆಯಲ್ಲಿ ಊರಿಗೆ ಕರೆದುಕೊಂಡು ಹೋಗಬೇಕೆನ್ನುತ್ತಾರೆ ಉಪಾಧ್ರೆ."

"ಪ್ರಸ್ತದ ಶಾಸ್ತ್ರವೂ ಮದುವೆಯ ರಾತ್ರಿಯೇ ಮುಗಿಸಿಬಿಡಬೇಕಾಗುತ್ತದೆ."

"ಹೌದು" ಎಂದು ರಂಗಣ್ಣ ಸೂಚಿಸಿದ.

"ಆಗಬಹುದು. ಹಾಗೇ ವ್ಯವಸ್ಥೆ ಮಾಡೋಣ"

ಎಂದು ಭಟ್ಟರು ಒಪ್ಪಿಗೆಕೊಟ್ಟರು. ಭಟ್ಟರ ಬಗ್ಗೆ ರಂಗಣ್ಣನಿಗೆ ಗೌರವ ಹುಟ್ಟಿತು

"ಲಗ್ನಪತ್ರಿಕೆ ಮಾಡಿಕೊಂಡೇ ತಾವು ಊರಿಗೆ ಪ್ರಯಾಣ ಬೆಳಸುವುದು ತಾನೇ."

"ಇಲ್ಲ ನಾನು ನಾಳೆಯ ಬೆಳಗ್ಗೆ ಹೊರಡಲೇ ಬೇಕಾಗಿದೆ. ಮದುವೆ ಕಾಲದಲ್ಲಿಯೇ ಆ ಶಾಸ್ತ್ರವನ್ನೂ ಮುಗಿಸಿದರಾಯಿತು."

"ಹಾಗೂ ಮಾಡಬಹುದು" ಎಂದು ಭಟ್ಟರು ತಿಳಿಸಿದರು.

ಭಟ್ಟರು ಹೊರಡುವ ಸನ್ನಾಹಮಾಡಲು ದೇವರಯ್ಯ ಒಳಗೆ ಹೋಗಿ ಎರಡು ತೆಂಗಿನಕಾಯಿ ಇಟ್ಟು ತಾಂಬೂಲ ತಂದ. ಅವನ ಶಕ್ತ್ಯನುಸಾರ ಐದು ರೂಪಾಯಿ ದಕ್ಷಿಣೆಯೂ ಇಟ್ಟಿದ್ದ. ರಂಗಣ್ಣ ದೇವರಯ್ಯನನ್ನು ಹತ್ತಿರ ಕರೆದು ಅವನ ಕೈಗೆ ಇಪ್ಪತ್ತೈದು ರೂಪಾಯಿ ಕೊಟ್ಟ.

ದಕ್ಷಿಣೆ ಮೌಲ್ಯ ಕಂಡು ಭಟ್ಟರ ಮುಖವರಳಿತು.

"ನೀವೇ ನಿಂತುಕೊಂಡು ಎಲ್ಲಾ ಸಾಂಗವಾಗಿ ನಡೆಸಿಕೊಡಬೇಕು ಭಟ್ಟರೇ"

ಎಂದು ರಂಗಣ್ಣನೂ ಉಪಚಾರ ಹೇಳಿದ. 'ಆಗಬಹುದು ಸ್ವಾಮಿ' ಎನ್ನುತ್ತಾ ಭಟ್ಟರು ನೋಟುಗಳನ್ನು ಸೊಂಟಕ್ಕೆ ಸೇರಿಸಿದರು.

ಭಟ್ಟರು ಹೋದ ಮೇಲೆ ರಂಗಣ್ಣ

"ನಿಮ್ಮ ಭಟ್ಟರು ಪರವಾಗಿಲ್ಲ ದೇವರಯ್ಯ. ಸಮಯ ಸಂದರ್ಭಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತಾರೆ"

"ಅವನು ಪ್ರಚಂಡ ಸ್ವಾಮಿ. ಅ ಪ ಟು ಡೇ ಟ್ (Up to Date) ಪುರೋಹಿತ."

"ಮದುವೆ ಖರ್ಚಿಗೆ ಹಣ ಎಷ್ಟು ಬೇಕಾಗಬಹುದು.."

"ನಾನು ಹೇಗೆ ಹೇಳಲಿ. ತಾವು ಎಷ್ಟರಲ್ಲಿ ಮುಗಿಸು ಎಂದರೆ ಅಷ್ಟರಲ್ಲಿ ಮುಗಿಸುತ್ತೇನೆ."

"ಸಾವಿರ ರೂಪಾಯಿ ಸಾಕಾಗಬಹುದೇ ?"

"ಕನ್ಯಾದಾನ ಮಾಡುವಾಗ ಹುಡುಗಿಗೆ ಒಂದೆರಡು ಒಳ್ಳೆಯ ಸೀರೆ ಬೇಡವೇ ? – ಮಾಂಗಲ್ಯ ಮಾಡಿಸಬೇಕು"

"ಒಡವೆ ವಸ್ತ್ರ ಎಲ್ಲಾ ನಾನು ತರುತ್ತೇನೆ. ಮಿಕ್ಕ ವಿಷಯ ನೀವು ನೋಡಿಕೊಳ್ಳಿ. ಕೈಯಲ್ಲಿ ಮುನ್ನೂರು ರೂಪಾಯಿ ತಂದಿದ್ದೇನೆ. ಅವನ್ನು ಮಾಂಗಲ್ಯ, ಊಟದ ಖರ್ಚಿಗೆ ಉಪಯೋಗಿಸಿಕೊಳ್ಳಿ. ನಾಳೆ ಊರಿಗೆ ಹೋಗುತ್ತೇನೆ - ನಾಡಿದ್ದಿನ ಟಪಾಲಿನಲ್ಲಿ ನಿಮಗೆ ಸಾವಿರ ರೂಪಾಯಿ ಕಳಿಸಿ ಕೊಡುತ್ತೇನೆ. ಒಟ್ಟು ಸಾವಿರದ ಮುನ್ನೂರಾಯಿತು. ಇಷ್ಟರಲ್ಲಿಯೇ ಮುಗಿದರೆ ಸಂತೋಷ - ಸಾಲದೆ ಬಂದರೆ ನಾನು ಮತ್ತೆ ಹಣ ಕೊಡುತ್ತೇನೆ. ಆಗಬಹುದೋ ?"

"ಧಾರಾಳವಾಗಿ" ಎಂದು ದೇವರಯ್ಯ ಒಪ್ಪಿಕೊಂಡ.

ಬೆಳಿಗ್ಗೆ ಏಳೂವರೆಯ ಬಸ್ಸಿಗೆ ರಂಗಣ್ಣ ಊರಿಗೆ ಹೊರಡಲು ನಿಶ್ಚಯಿಸಿದ. ಪುಟ್ಟತಾಯಮ್ಮ ಬೆಳಿಗ್ಗೆ ಐದು ಗಂಟೆಗೇ ಎದ್ದು ಸ್ನಾನಕ್ಕೆ ನೀರು ಕಾಯಿಸಿ, ಕಾಫಿ ಉಪ್ಪಿಟ್ಟು ಮಾಡಿಟ್ಟಳು

ರಂಗಣ್ಣ ಎದ್ದವನೇ ಸ್ನಾನ ಮುಗಿಸಿಕೊಂಡು ಉಪಾಹಾರ ಸ್ವೀಕರಿಸಿದ. ಬಸ್ಸಿಗೆ ಅವನು ಹೊರಡಲನುವಾದಾಗ ದೇವರಯ್ಯ ಸುಬ್ಬುಲಕ್ಷ್ಮಿಯನ್ನು ಕರೆದು ರಂಗಣ್ಣನಿಗೆ ನಮಸ್ಕಾರಮಾಡಿಸಿದ

ಚನ್ನರಾಯಪಟ್ಟಣ ಬಿಟ್ಟುಹೊರಟ ರಂಗಣ್ಣ ಮೈಸೂರಿಗೆ ಬಂದು ಅಲ್ಲಿಂದ ಬೇರೆ ಬಸ್ಸಿನಲ್ಲಿ ಊರಿಗ ಹೊರಟುಬಿಟ್ಟ. ಅವನು ಊರು ತಲುಪಿದಾಗ ಮೂರು ಗಂಟೆಯಾಗಿತ್ತು.

ಮಾರನೆಯ ದಿನ ಬೆಳಿಗ್ಗೆ ಮೈಸೂರಿನಿಂದ ತನ್ನ ಕರೆಂಟ್ ಅಕೌಂಟಿನಲ್ಲಿ ಎರಡು ಸಾವಿರ ರೂಪಾಯಿ ಪಡೆದು ಮೈಸೂರಿಗೆ ಬಂದ. ಅಲ್ಲಿಂದಲೇ ದೇವರಯ್ಯನಿಗೆ ಸಾವಿರ ರೂಪಾಯಿ ಕಳಿಸಿ ಉಳಿದ ಹಣಕ್ಕೆ ಸುಬ್ಬುಲಕ್ಷ್ಮಿಗೆ ಕುತ್ತಿಗೆಗ ಚೈನು, ಕೈಗೆ ಬಂಗಾರದ ಬಳೆ ಮಾಡಲು ಹಾಕಿದ. ಅದೇ ಸಂಜೆಯ ಗಾಡಿಗೆ ಹೊರಟು ರಾತ್ರಿ ಊರು ಸೇರಿದ.

ಮದುವೆಗೆ ಮೂರು ದಿವಸ ಮುಂಚೆಯೇ ರಂಗಣ್ಣ ಊರುಬಿಟ್ಟು ಮೈಸೂರಿಗೆ ಹೋಗಿ ಅಕ್ಕಸಾಲೆಯಿಂದ ಒಡವೆಗಳನ್ನು ತಗೆದುಕೊಂಡು ಜವಳಿ ಖರೀದಿಮಾಡಿದ ತನಗ ಸಂಕಲಿಕ ಪಂಚೆ, ದೇವರಯ್ಯನಿಗೆ ಪುರೋಹಿತರಿಗೆ ಪಂಚೆ ಜತೆಗಳು, ಸುಬ್ಬುಲಕ್ಷ್ಮಿಗೆ ಎರಡು ಧರ್ಮಾವರದ ಸೀರೆ, ಎರಡು ಸಾದಾ ಸೀರೆ, ದೇವರಯ್ಯನ ಹೆಂಡತಿಗೆ ಒಂದು ಧರ್ಮಾವರದ ಸೀರೆ, ದೇವರಯ್ಯನ ಮಕ್ಕಳಿಗೆ ಬಟ್ಟೆಬರೆಯನ್ನು ಸಂಗ್ರಹಿಸಿಕೊಂಡ. ಮದುವೆಯ ಹಿಂದಿನ ರಾತ್ರಿಯೇ ಚೆನ್ನರಾಯಪಟ್ಟಣ ಸೇರಿ ಒಡವೆವಸ್ತ್ರಗಳನ್ನು ದೇವರಯ್ಯನ ವಶಕ್ಕೆ ಕೊಟ್ಟು, ಮದುವೆಯ ವ್ಯವಸ್ಥೆಯನ್ನು ಖುದ್ದಾಗಿ ಪರಾಮರ್ಶಿಸಿದ.

ಬುಧವಾರ ಬೆಳಿಗ್ಗೆ ಹತ್ತು ಗಂಟೆಗೆ ರಂಗಣ್ಣ, ಸುಬ್ಬುಲಕ್ಷ್ಮಿಯ ವಿವಾಹ ಚನ್ನರಾಯಪಟ್ಟಣದಲ್ಲಿ 'ಗುರುಹಿರಿಯರ ಸಮ್ಮುಖ'ದಲ್ಲಿ ನಡೆಯಿತು.

ಅಂದೇ ಮಧ್ಯಾನ್ಹದ ಟಪಾಲಿನಲ್ಲಿ ಬೆಂಗಳೂರು, ಮೈಸೂರು, ನಂಜನಗೂಡು, ಚಾಮರಾಜನಗರಗಳಲ್ಲಿ ಎಲ್ಲರ ಕೈಗೂ ಲಗ್ನಪತ್ರಿಕೆಗಳು ತಲುಪಿದವು.

ಗುರುವಾರ ಬೆಳಿಗ್ಗೆ ಹೆಂಡತಿ, ಅತ್ತೆಯನ್ನು ಕರೆದುಕೊಂಡು ರಂಗಣ್ಣ ಊರಿಗೆ ಪ್ರಯಾಣ ಬೆಳೆಸಿದ ಮೂವರನ್ನೇ ಪ್ರಯಾಣ ಹೊರಡಿಸಬಾರದೆಂದು ದೇವರಯ್ಯನೂ ಮೈಸೂರಿನವರೆಗೆ ಜತೆಯಲ್ಲಿ ಬಂದು ಅವರನ್ನು ಅಲ್ಲಿ ಬಿಟ್ಟು ಊರಿಗೆ ಹಿಂದಿರುಗಿದ

೧೦

ನಾಲ್ಕು ಗಂಟೆಗೆ ಸರಿಯಾಗಿ ಪುಷ್ಪ ಗಾಡಿಯಿಂದಿಳಿದುದನ್ನು ನೋಡಿ ಸಂಜೀವನಿಗೆ ಆನಂದ, ಆಶ್ಚರ್ಯಗಳೆರಡೂ ಆದವು. ಎರಡೂ ಕೈಗಳನ್ನೂ ಜೋಡಿ ಅವಳಿಗೆ ಸ್ವಾಗತ ಬಯಸಿ

"ನಿನಗೆ ಟೈಮ್ ಸೆನ್ಸ್ (Time Sense) ಇದೆಯೆನ್ನುವುದರಲ್ಲಿ ಸಂದೇಹವೇ ಇಲ್ಲ ಪುಷ್ಪಾ."

"ಡ್ಯಾಡಿ (Daddy) ಮೂರು ಸಲುವತ್ತರ ರೈಲಿಗೆ ಹೊರಟರು. ನಾನೂ ಅವರ ಜತೆ ರೈಲ್ವೆ ಸ್ಟೇಷನ್‌ವರೆಗೆ ಬಂದು ಅಲ್ಲಿಂದ ಗಾಡಿಮಾಡಿಕೊಂಡು ಬಂದೆ."

"ಎಲ್ಲಿಗೆ ಹೋದರು."

"ಬೆಂಗಳೂರಿಗೆ.'

"ಇದ್ದಕ್ಕಿದ್ದಂತೆ ಅವರು ಹೊರಟ ಹಾಗೆ ಕಾಣುತ್ತದೆ."

"ಹೌದು. ಅಕ್ಕನಿಗೆ ಮೈಯಲ್ಲಿ ಸರಿಯಿಲ್ಲವೆಂದು ಇವತ್ತೇ ವೈರ್ ಬಂತು - ಹೊರಟುಬಿಟ್ಟರು."

"ನಿಮ್ಮ ತಾಯಿಯೂ ಹೊರಡಬೇಕಾಗಿರಲಿಲ್ಲವೇ ?"

"ಅದು ನಮ್ಮ ಮನೆಯ ಪಾಲಿಟಿಕ್ಸ್ (Politics) ನಮ್ಮ ಅಕ್ಕ ಭಾವನಿಗೆ ಮಮ್ಮಿಯನ್ನು (Mummy) ಕಂಡರೆ ಸ್ವಲ್ಪ ಹಾಗೆ ಹಾಗೇ."

"ಓಹೊ! ನೀನು ಮಮ್ಮೀಸ್ ಡಾರ್ಲಿಂಗ್ (Mummy's Darling) ನಿನ್ನ ಅಕ್ಕ ಡ್ಯಾಡೀಸ್ ಡಾರ್ಲಿಂಗ್ (Daddy's Darling)."

"ಮಮ್ಮೀಸ್ ಡಾರ್ಲಿಂಗ್ ಯಾಕಾದೇನು ?"

"ಇನ್ನು ಯಾರ ಡಾರ್ಲಿಂಗ್ ಹಾಗುವರೆ . . . ."

"ನೀವೇ ಹೇಳಿ"

ಎಂದು ನಗೆಬಾಣ ಪ್ರಯೋಗಿಸಿದಳು.

"ಹೌದು ಸ್ವೀಟ್ (Sweet) - ನೀನು ನನ್ನ ಡಾರ್ಲಿಂಗ್ ಎನ್ನುವುದರಲ್ಲಿ ಸಂದೇಹವೇ ಇಲ್ಲ"

"ಕನ್ನಂಬಾಡಿ ಪುನ್ಹಾ ಆಯಿತೇನು ?"

"ಯಾಕಾಗಬೇಕು. ಪ್ರೋಗ್ರ್ಯಾಂ ಬದಲಾಯಿಸುವುದು ನನ್ನ ಜಾಯಮಾನಕ್ಕೇ ಬಂದದ್ದಲ್ಲ."

"ಹೊರಡಿ ಹಾಗಾದರೆ."

"ರೈಲು ಐದುಗಂಟೆ ಇಪ್ಪತ್ತು ನಿಮಿಷಕ್ಕೆ - ಇನ್ನೂ ಒಂದು ಗಂಟೆ ಇದೆ."

"ಇಲ್ಲಿಂದ ಸ್ಟೇಷನ್ನಿಗೆ ಹೋಗಬೇಡವೇ ?"

"ಹದಿನೈದು ನಿಮಿಷಕ್ಕೆ ಗುಡ್ ಓಲ್ಡ್ ಟಾಂಗಾವಾಲಾ (Good old Tongawalla) ಕರೆದುಕೊಂಡು ಹೋಗಿಬಿಡುತ್ತಾನೆ"

"ನನ್ನದೊಂದು ಪ್ರಾರ್ಥನೆ ಇದೆ - ಹೇಳಲೇ."

"ಹೇಳು - Our Father which art in Heaven - ಓ ಸ್ವರ್ಗದಲ್ಲಿರುವ ನನ್ನ ತಂದೆಯೇ . . . ."

'ಹೋಗಿ ನಿಮಗೆ ಎಲ್ಲಾ ಹಾಸ್ಯವೇ !"

"ಇಲ್ಲ ಹೇಳು - ಗಂಭೀರವಾಗಿರುತ್ತೇನೆ."

"ನಡೆಸಿಕೊಡುತ್ತೇನೆಂದು ನೀವು ವಾಗ್ದಾನಮಾಡಬೇಕು."

"ವಾಗ್ದಾನಮಾಡಿ ತಪ್ಪಿದರೆ ?'

"ತಪ್ಪಬೇ ಕೂಡದು."

"ಅದೇನಪ್ಪಾ ಅಂಥ ಘನವಾದ ವಿಷಯ."

"ವಾಗ್ದಾನ ಮಾಡಿ ಹೇಳುತ್ತೇನೆ."

"ಸೂರ್ಯ ಚಂದ್ರರ ಸಾಕ್ಷಿಯಾಗಿ ಎಂದು ಹೇಳಬೇಕೋ - ಫಾದರ್, ಸನ್, ಹೋಲಿ ಸ್ಪಿರಿಟ್ (Father, Son, Holy Spirit) ಎಂದು ಹೇಳಬೇಕೋ ?"

"ಹುಡುಗಾಟಿಕೆ ಮಾಡುತ್ತೀರಿ ಬಿಡಿ - ನಾನು ಹೇಳುವುದೇ ಇಲ್ಲ."

"ಇಲ್ಲ ಹೇಳು - ಪ್ಲೀಸ್ (Please)"

"ನಾಳೆ ಸಂಜೆ ತಪ್ಪದೆ ನಿಮ್ಮನ್ನು ಮನೆಗೆ ಟೀಗೆ ಕರೆದುಕೊಂಡು ಬರಬೇಕೆಂದು ಮಮ್ಮಿ ಹೇಳಿದ್ದಾರೆ"

"ನಮ್ಮ ವಿಷಯವೆಲ್ಲಾ ಮಮ್ಮೀಗೆ ತಿಳಿದಿದೆಯೇನು ?"

"ನಾನೇ ಹೇಳಿದ್ದೇನೆ"

"ಅವರು ಏನಂದರು ?"

"ತುಂಬಾ ಸಂತೋಷಪಟ್ಟುಕೊಂಡರು. ಬರುತ್ತೀರಾ - ಬಡವರ ಮನೆ ಎಂದು ಉದಾಸೀನ ಮಾಡುತ್ತೀರೋ."

"ನಿನ್ನ ಜತೆ ಎಲ್ಲಿಗೆ ಬೇಕಾದರೂ ಬರುವುದಕ್ಕೆ ಸಿದ್ಧವಾಗಿರುವಾಗ ನಿಮ್ಮ ಮನೆಗೆ ಬರದೆ ಇರುತ್ತೇನೆಯೇ ?"

"ಈಗ ನನ್ನ ಮನಸ್ಸಿಗೆ ನೆಮ್ಮದಿಯಾಯಿತು. ಈ ವಿಷಯ ನಿಧಾನವಾಗಿ ಹೇಳೋಣ ಎಂದಿದ್ದೆ - ಆದರೆ ಮನಸ್ಸು ತಡೆಯಲಿಲ್ಲ"

"ಇನ್ನು ಹೊರಡೋಣ. ಹೊತ್ತಾದರೆ ರೈಲು ನಮಗೋಸ್ಕರ ನಿಲ್ಲುವುದಿಲ್ಲ"

ಎಂದು ಸಂಜೀವ ವಸ್ತ್ರಧರಿಸಿ 'ಇಲ್ಲಿ ಬಾ ಪುಷ್ಪಾ ಡಿಯರ್ (Dear)' ಎಂದು ಪುಷ್ಪನನ್ನು ಕರೆದು ಅವಳ ಕೈಗೆ ಒಂದು ಕಾಶ್ಮೀರ್ ಶಾಲಿತ್ತ.

"ಇದೇಕೆ ?"

"ಕೈಯಲ್ಲಿರಲಿ. ಕನ್ನಂಬಾಡಿಯಲ್ಲಿ ಕೆಟ್ಟಹವ ಗಾಳಿ ಬಡಿದು ದೇಹಕ್ಕೆ ಅಲಸಿಕೆಯಾದೀತು."

"ನಿಮಗೊಂದು ಶಾಲು ತೆಗೆದುಕೊಳ್ಳಿ."

"ಒಂದೇ ಶಾಲಿರುವುದು - ನಾನು ಓವರ್ ಕೋಟ್ (Overcoat) ತೆಗೆದುಕೊಳ್ಳುತ್ತೇನೆ"

ಎಂದು ಹೇಳಿದ. ಗಾಡಿ ಮಾಡಿಕೊಂಡು ಇಬ್ಬರೂ ಸ್ಟೇಷನ್ ಸೇರಿದರು ಅರ್ಧ ಗಂಟೆಯೊಳಗೆ ರೈಲು ಕೃಷ್ಣರಾಜಸಾಗರ ಸ್ಟೇಷನ್ ಮುಟ್ಟಿತು. ಇಬ್ಬರೂ ನಡೆದೇ ಕಟ್ಟೆ ಮುಟ್ಟಿದರು.

"ಆಯಾಸವಾಯಿತೇ !"

"ಏಕೆ ?"

"ನಡೆಯಬೇಕಾಯಿತು."

"ಸಂಜೆ ವಾಕಿಂಗ್ ಆದ ಹಾಗಾಯಿತು."

"ರೆಸ್ಟುರಾದಲ್ಲಿ ಟೀ ತೆಗೆದುಕೊಂಡು ಹೋಗೋಣ."

"ಈಗಬೇಡ ಬೇಡಿ - ತಿರುಗಾಡಿಕೊಂಡು ಬರೋಣ. ಬಾಯಾರಿರುತ್ತೆ - ಆಗ ಟೀ ರುಚಿಸತ್ತೆ."

"ಆಗಬಹುದು."

"ನಾವು ಊರಿಗೆ ಹೋಗುವುದು ಯಾವಾಗ ?"

"ಆಗಲೇ ಊರಿನ ಗಮನ ಬಂತೇ ?"

"ಇಲ್ಲ - ಕೇಳಿದೆ "

"ಒಂಭತ್ತುವರೆಗೆ ಒಂದು ಷಟಲ್ ಇವೆ - ಅದರಲ್ಲಿ ಹೋಗೋಣ."

ಇಬ್ಬರೂ 'ಬೃಂದಾವನ' ತೋಟದಲ್ಲಿ ಸುತ್ತಾಡತೊಡಗಿದರು. ಸಣ್ಣ ಕಾರಂಜಿಗಳಲ್ಲಿ, ದೊಡ್ಡ ಕಾರಂಜಿಗಳಲ್ಲಿ ಪುಟಪುಟನೆ ನೀರು ನೆಗೆದಾಡುತ್ತಿತ್ತು. ಬಣ್ಣ ಬಣ್ಣದ ದೀಪಗಳು ಅವುಗಳಿಗೆ ಅಪೂರ್ವ ಶೋಭೆಯನ್ನಿತ್ತಿದ್ದವು.

ಹರಿಯುತ್ತಿದ್ದ ನೀರಿಗೂ ಅಲ್ಲಲ್ಲಿ ಬಣ್ಣದ ದೀಪಗಳನ್ನು ಹಚ್ಚಿಟ್ಟಿದ್ದರು. ದೀಪದ ಬೆಳಕಿನಲ್ಲಿ ನೀರು ಕೆಂಪಗೆ, ಹಸುರಾಗೆ, ನೀಲಿ ಬಣ್ಣವಾಗಿ ಕಾಣುತ್ತಿತ್ತು. ಪುಷ್ಪ ನೀರಿನಲ್ಲಿ ಕೈಯಿಟ್ಟು ಅದರ ವೇಗವನ್ನು ಪರೀಕ್ಷಿಸುವಳೊಮ್ಮೆ, ಒಮ್ಮೊಮ್ಮೆ ನೀರನ್ನು ಕೈಯಲ್ಲೆತ್ತಿಕೊಂಡು ಅದು ವರ್ಣರಹಿತವಾಗಿದ್ದುದನ್ನು ಕಂಡು ಆಶ್ಚರ್ಯ ವ್ಯಕ್ತಪಡಿಸುವಳು

ಕಾರಂಜಿಗಳನ್ನು ದಾಟಿ ಬಲಕ್ಕೆ ತಿರುಗಿದರೆ ವಿಶಾಲವಾದ ತೋಟ. ನೀಳವಾದ ಮರಗಳು ಬೆಳೆದು ನಿಂತಿದ್ದವು ಆಗಲೇ ಮಸಕು ಕತ್ತಲೆ ಕವಿದಿತ್ತು. ಪುಷ್ಪ ಮೆಲ್ಲನೆ ಸಂಜೀವನ ಕೈಯ್ಯಿಂದ ತನ್ನ ಕೈಬಿಡಿಸಿಕೊಂಡು ಎಲ್ಲೋ ಹೋಗಿ ಅವಿತುಕೊಂಡಳು. ಸಂಜೀವ ಅವಳನ್ನು ಕೂಗೇ ಕೂಗಿದ. ಕೊನೆಗೆ ಒಂದು ಮರದ ಹಿಂಬದಿಯಿಂದ 'ಓ' ಕೇಳಿ ಬಂತು. ಹೀಗೇ ಸ್ವಲ್ಪ ಕಾಲ ಹಿಡಿಯುವ ಆಟವಾಗಿತು. ಕತ್ತಲು ನಾಕಷ್ಟು ಕವಿಯುತ್ತ ಬಂದಂತೆ ತುಂತುರು ಹನಿ ಬೀಳಲಾರಂಭಿಸಿತು. ಸಂಜೀವ ಶಾಲುಬಿಚ್ಚಿ ಪುಷ್ಪನ ತಲೆಯ ಮೇಲೆ ಹೊದೆಸಿ, ಓವರ್‌ಕೋಟ್ ತೆಗೆದು ತನ್ನ ತಲೆಯ ಮೇಲ ಧರಿಸಿದ. ತೋಟ ಬಿಟ್ಟು ರೆಸ್ಟುರಾ ತಲುಪುವ ವೇಳೆಗೆ ಮಳೆ ಜೋರಾಗಿ ಬಂದೇಬಿಟ್ಟಿತು. ಇಬ್ಬರೂ ಸಾಕಷ್ಟು ನೆನೆದುಕೊಂಡೇ ರೆಸ್ಟುರಾ ಸೇರಿದರು

ಸಂಜೀವ ಪುಷ್ಪನ ಶಾಲು ತೆಗೆದುಕೊಂಡು ಕುರ್ಚಿಯ ಮೇಲೆ ಹರವಿದ.

ಕಿಸೆಯಿಂದ ಕರವಸ್ತ್ರ ತೆಗೆದು ಅವಳ ಕೈಗಿತ್ತ. ಇಬ್ಬರೂ ರೆಸ್ಟುರಾದಲ್ಲಿ ಕುಳಿತು ಕಾಫಿ, ಬಿಸ್ಕತ್ತಿಗೆ ಆರ್ಡರ್ ಮಾಡಿದರು.

ಮಳೆ ಕ್ರಮಕ್ರಮೇಣಾ ತನ್ನ ಪ್ರಭಾವ ಬೆಳಸುತ್ತಿತ್ತು ಕಾಫಿ, ಬಿಸ್ಕತ್ತು ಮುಗಿಸಿದ ಮೇಲೆ ಸಂಜೀವ ಸಿಗರೇಟ್ ತರಿಸಿ ಹಚ್ಚಿ ಸೇದುತ್ತ ಕುಳಿತ.

ಗಂಟೆ ಒಂಭತ್ತಾಯಿತು. ಮಳೆ ನಿಲ್ಲುವ ಸಂಭವ ಕಾಣಲಿಲ್ಲ. ಹೊಟೇಲ್ ಬಾಯ್, ಬಂದು "ಡಿನ್ನರ್ ಬೇಕೆ ಸಾರ್" ಎಂದು ಕೇಳಿದ. ಸಂಜೀವ ಬೇಡವೆಂದು ಉತ್ತರಿಸಿದ.

"ಒಂಭತ್ತೂವರೆ ಗಾಡಿ ನಮಗೆ ಸಿಕ್ಕಬೇಕಾದರೆ ನಾವು ಈ ಕೂಡಲೆ ಹೊರಡಬೇಕು ಪುಷ್ಪಾ."

"ನಡೆಯಿರಿ ಹೊರಟುಬಿಡೋಣ."

"ಈ ಮಳೆಯಲ್ಲಿ . . . ."

"ಈ ಕೂಡಲೆ ಹೊರಡಬೇಕೆಂದಿರಿ."

"ರೈಲಿನ ವಿಷಯ ಹೇಳಿದೆ."

"ಮುಂದಿನ ಯೋಚನೆ"

ಸಂಜೀವ ಎದ್ದು ಹೋಗಿ ಮ್ಯಾನೇಜರನ್ನು ಕಂಡು ಮಾತನಾಡಿ ಬಂದ. ಅವನ ಜತೆ ಕೀಲಿಯ ಗೊಂಚಲು ಹಿಡಿದು ಒಬ್ಬ 'ಬಾಯ್' ಬಂದ. ಸಂಜೀವನ ಕಣ್ಸನ್ನೆ ತಿಳಿದುಕೊಂಡು ಪುಷ್ಪ ಎದ್ದು ಜತೆಯಲ್ಲಿ ಹೊರಟಳು.

ಬಾಯ್ ಇಬ್ಬರನ್ನೂ ಕರೆದೊಯ್ದು ಮೇಲಿನ ಅಂತಸ್ತಿನಲ್ಲಿ ಒಂದು ರೂಮ್ ತೆಗೆದು ದೀಪ ಹಚ್ಚಿದ.

ರೂಮ್ ಸಾಧಾರಣದ ರೂಮ್ ಆಗಿರಲಿಲ್ಲ. ವಿಶಾಲವಾದ ಹಜಾರವಾಗಿತ್ತು. ನಾಲ್ಕು ಸೊಗಸಾದ ಮಂಚ, ಹಾಸಿಗೆಗಳು, ಪಕ್ಕದಲ್ಲಿ ಟೀಪಾಯ್, ಕನ್ನಡಿ ಹಾಕಿದ ಮೇಜುಗಳು, ಬಟ್ಟೆ ಸ್ಟ್ಯಾಂಡ್, ಸೋಫಾ ಸೆಟ್ ಇದ್ದವು. ನೆಲಕ್ಕೆ ರತ್ನಗಂಬಳಿ ಹಾಸಲಾಗಿತ್ತು.

ಬಾಯ್ ರೂಮಿನಲ್ಲಿದ್ದ ದೀಪಗಳನ್ನೆಲ್ಲಾ ಹಚ್ಚಿ ಸಂಜೀವನನ್ನು ಕರೆದೊಯ್ದು ಸ್ನಾನದ ಮನೆ ತೋರಿಸಿ ಕೈಗೆ ಊಟದ ವಿವರದ ಕಾರ್ಡು (Menu Card) ಕೊಟ್ಟು

"ಡಿನ್ನರ್ ಏನು ಬೇಕು ಸಾರ್" ಎಂದು ಕೇಳಿದ.

ಸಂಜೀವ ಮೆನುಕಾರ್ಡು ಕೈಗೆ ತೆಗೆದುಕೊಂಡು ಅದನ್ನು ನೋಡಿ, ಪುಷ್ಪನ ಕೈಗಿತ್ತ

"ಏನುಬೇಕೋ ಹೇಳು" ಎಂದ

"ನೀವೇ ಹೇಳಿ"

"ಆಮ್ಲೆಟ್ಸ್ ಆಗಬಹುದಲ್ಲವೇ ?"

"ನೀವು ತೆಗೆದುಕೊಳ್ಳುವಿರಾ ?"

"ಆಮ್ಲೆಟ್ಸ್ ಅಭ್ಯಾಸವಿದೆ – ಬಾಯ್ . . ."

"ಸಾರ್"

"ಎರಡು ಆಮ್ಲೆಟ್ಸ್ - ಬಿಸ್ಕತ್ತು ಕಾಫಿ - ಹಣ್ಣೇನಿವೆ ?"

"ಟಿನ್ ಫ್ರೂಟ್ಸ್ (Tin Fruits) ಇದೆ ಸಾರ್."

"ಪೀಜನ್'

"ರೈಸ್ ಅಂಡ್ ಕರಿ (Rice and Curry)"

"ಬೇಕೇ ಪುಷ್ಪಾ."

"ಅಯ್ಯೋ ಎಷ್ಟು - ನಿಮಗೆ ಬೇಕಾದರೆ ತರಿಸಿಕೊಳ್ಳಿ"

"ಬೇಡ - ಇಷ್ಟೇ ಸಾಕು  ಬೇಡ ಸಿಕ್ಕುತ್ತದೆಯೇನಯ್ಯ"

"ಪಕ್ಕದ ಹೋಟೆಲಿನಲ್ಲಿ ವಿಚಾರಿಸುತ್ತೇನೆ ಸಾರ್."

ಬಾಯ್ ಆರ್ಡರ್ ತೆಗೆದುಕೊಂಡು ಹೋಗಲು ಸಂಜೀವ

"ಕನ್ನಂಬಾಡಿ ಆಮ್ಲೆಟ್ಟಿನ ಋಣ ಇವತ್ತಿತ್ತೆಂದು ಕಾಣುತ್ತದೆ."

"ವಿಷಾದವಾಗಿದೆಯೇ ?"

"ವಿಷಾದ ಪಡಲು ಏನಾಗಿದೆ  ಸಮಯಕ್ಕೆ ಸರಿಯಾಗಿ ಮಳೆಬಂತು."

"ನನ್ನ ಪ್ರಾರ್ಥನೆ ಹಾಸ್ಯಮಾಡಿದಿರಿ.  ಅದರ ಮಹಿಮೆ ಈಗ ನಿಮಗೆ ಗೊತ್ತಾಗಿದೆ."

"ಏನೆಂದು ಪ್ರಾರ್ಥಿಸಿದೆ"

"ದೇವರೇ, ಹೇಗಾದರೂ ಇವತ್ತು ನಾವು ಇಲ್ಲಿರುವಂತೆ ಮಾಡು ಎಂದು."

"ನಿಜವಾಗಿ ಸ್ವೀಟ್ (Sweet)"

"ಸತ್ಯವಾಗಿ."

"ನನಗೆ ಒಂದೇ ಯೋಚನೆ."

"ಇವತ್ತಾದರೂ ನೀವು ಯಾವ ಯೋಚನೆಯನ್ನೂ ಮಾಡಕೂಡದು."

"ನಿಮ್ಮ ಮನೆಯಲ್ಲಿ ಆಕ್ಷೇಪಿಸುವುದಿಲ್ಲವೇ ?"

"ನಾನು ಬರುವುದು ತುಂಬ ಹೊತ್ತಾಗಬಹುದು. ಕನ್ನಂಬಾಡಿಯಿಂದ ಬರುವುದಕ್ಕೆ ಸಾಧ್ಯವಾಗದಿದ್ದರೆ ಅಲ್ಲೇ ಇದ್ದು ಬೆಳಿಗ್ಗೆ ಬರುತ್ತೇನೆ ಎಂದು ಹೇಳಿಯೇ ಬಂದೆ."

''ಮಳೆಯನ್ನೂ ಸಂಗಡಲೇ ಕರೆತಂದೆಯೆಂದು ಕಾಣುತ್ತದೆ.''

''ಭಗವಂತ ಕಳಿಸಿಕೊಟ್ಟ.''

''ಯಾರ ಜತೆ ಹೋಗುತ್ತೀ ಎಂದು ಕೇಳಲಿಲ್ಲವೇ ?''

''ಕೇಳಿದರು.''

''ಏನು ಹೇಳಿದೆ.''

''ನಿಮ್ಮ ಜತೆ ಹೋಗುತ್ತೇನೆಂದು ಹೇಳಿದೆ . . . ಹಾಗೆ ಹೇಳಬಾರದಾಗಿತ್ತೇ ?"

''ಸುಳ್ಳೇಕೆ ಹೇಳಬೇಕು ಇದ್ದುದನ್ನು ಇದ್ದಂತೆ ಹೇಳಿ ಒಳ್ಳೆಯದು ಮಾಡಿದೆ."

''ಡಾರ್ಲಿಂಗ್, ನಿನಗೆ ಅಸಮಾಧಾನವಿಲ್ಲವಷ್ಟೆ.'

''ಏಕೆ ಅಸಮಾಧಾನ."

''ಹೀಗಾಯಿತಲ್ಲ ಎಂದು.''

''ಅಸಮಾಧಾನವಿಲ್ಲ - ಮನೆಯಲ್ಲಿ ನಿನಗಿಷ್ಟು ಸ್ವಾತಂತ್ರ್ಯಕೊಟ್ಟಿರುವುದು ಹೆಚ್ಚೇ.''

''ನಮ್ಮ ತಂದೆ ವಿಷಯ ಹೇಳಿದೆನಲ್ಲಾ. ಕೆಲಸದಲ್ಲಿರುವವರೆಗೆ ಕುಡಿತ ಹತೋಟಿಯಲ್ಲಿತ್ತು. ರಿಟೈರ್ ಆದಮೇಲೆ ಮಿತಿಮೀರಿತು. ತಂದೆ ಸ್ವಭಾವತಃ ಒಳ್ಳೆಯವರು ಆದರೆ ಕುಡಿದ ವೇಳೆಯಲ್ಲಿ ಅವರು ಮೇರೆ ತಪ್ಪುತ್ತಾರೆ. ನಮ್ಮ ತಾಯಿ ಪಡಬಾರದ ಕಷ್ಟ ಅನುಭವಿಸಿದರು. ಹಾಗೂ ಹೀಗೂ ನನ್ನ ಅಕ್ಕನ ಮದುವೆ ಮಾಡಿದರು. ನನ್ನ ಭಾವ ಒಳ್ಳೆಯವನಲ್ಲ - ತುಂಬ ಕೋಪಿಷ್ಟ. ಒಂದು ದಿನ ಕುಡಿದ ವೇಳೆಯಲ್ಲಿ ತಂದೆ ಭಾವವನ್ನು ಬಾಯಿಗೆ ಬಂದಂತೆ ಬಯ್ದರು. ಭಾವ ರೇಗಿಕೊಂಡು ತಂದೆಯನ್ನು ಹೊಡೆಯಲು ಹೋದ. ನನ್ನ ತಾಯಿ ಬಂದು ಬಿಡಿಸಿಕೊಂಡರು. ತಾಯಿಗೂ ಭಾವನಿಗೂ ಬಿಸಿಯಾದ

ಮಾತಾಯಿತು. ಭಾವ ಕೋಪಮಾಡಿಕೊಂಡು ಅಕ್ಕನನ್ನು ಕರೆದುಕೊಂಡು ಹೊರಟುಹೋದ. ಅಂದಿನಿಂದ ಇದುವರೆಗೆ ಅವರಿಬ್ಬರೂ ನಮ್ಮ ಮನೆಗೇ ಬಂದಿಲ್ಲ ಎಷ್ಟೋ ವರ್ಷಗಳಾದ ಮೇಲೆ ಈಗಲೇ ತಂದೆ ಮಗಳನ್ನು ನೋಡು ವುದಕ್ಕೆ ಹೋಗುತ್ತಿರುವುದು. ಈ ಅನುಭವ ತಾಯಿಯನ್ನು ಹಣ್ಣುಮಾಡಿತು. ಇನ್ನೊಬ್ಬ ಮಗಳಾದರೂ ಸುಖವಾಗಿರಲಿ ಎಂದು ನನಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟರು. — ಆ ಸ್ವಾತಂತ್ರ್ಯ ನಾನು ದುರುಪಯೋಗಪಡಿಸಿಕೊಂಡಿಲ್ಲ.''

''ಈ ಕಥೆ ಕೇಳಿ ನನಗೆ ತುಂಬ ದುಃಖವಾಗುತ್ತದೆ ಡಾರ್ಲಿಂಗ್. ಈ ವಯಸ್ಸಿಗೇ ನಿನಗೆ ಜೀವನದ ಕಾಠಿಣ್ಯದ ಪೂರ್ಣ ಪರಿಚಯವಾಗಿದೆ.''

''ತಂದೆ ಎಷ್ಟೋ ತಿಂಗಳು ಮನೆಗೆ ಮೂರುಕಾಸು ಕೊಡುತ್ತಿರಲಿಲ್ಲ. ಆಗ ನಾನು ಕಾಲೇಜಿಗೆ ಹೋಗುತ್ತಿದ್ದೆ. ಮನೆಯ ಖರ್ಚಿಗಾಗಬೇಕು - ನನ್ನ ಕಾಲೇಜ್ ಖರ್ಚಿಗಾಗಬೇಕು. ನನ್ನ ತಾಯಿ ಸೊಗಸಾಗಿ ಕಸೂತಿ ಕೆಲಸ ಮಾಡುತ್ತಾರೆ. ಕಸೂತಿ ಹಾಕಿ ಹಣ ಸಂಪಾದಿಸಿ ಮನೆ ಖರ್ಚು - ನನ್ನ ಖರ್ಚು ನೋಡಿಕೊಳ್ಳುತ್ತಿದ್ದರು ಜನ ಬಾಯಿಗೆ ಬಂದಂತೆ ಆಡಿಕೊಂಡರು. ನನ್ನ ತಾಯಿಗೆ ಹೆಸರಿಟ್ಟರು.''

''ಈಗ?''

''ಈಗ ಪರಿಸ್ಥಿತಿ ಸುಧಾರಿಸಿದೆ. ನನ್ನ ವಿದ್ಯಾಭ್ಯಾಸ ಮುಗಿಯಿತು - ಖರ್ಚೂ ಉಳಿಯಿತು ತಂದೆಯೂ ಮನೆಗೆ ಹಣಕೊಡುತ್ತಾರೆ.''

''ಇನ್ನೊಂದು ಪ್ರಶ್ನೆ ಕೇಳುತ್ತೇನೆ. ಮನಸ್ಸಿಗೇನೂ ತಿಳಿದುಕೊಳ್ಳ ಬೇಡ''

''ಇಲ್ಲ - ಕೇಳಿ.''

''ನಿನ್ನ ಮದುವೆ ಪ್ರಯತ್ನ ನಡೆಯಲಿಲ್ಲವೇ?''

''ನಡೆಯಿತು. ನಮ್ಮವರೇ ಇಬ್ಬರು - ಅಮಲ್ದಾರರಾಗಿದ್ದಾರೆ - ಪ್ರೊಪೋಸಲ್ (Proposal) ಕಳಿಸಿದರು ಆತನಿಗೆ ಕೈತುಂಬ ಸಂಬಳವೂ ಬರುತ್ತಿತ್ತು - ಮನೆಯಲ್ಲಿಯೂ ಅನುಕೂಲವಾಗಿದ್ದರು. ಈ ಸಂಬಂಧವಾಗಲಿ ಎಂದು ನನ್ನ ತಾಯಿ ಮನಸ್ಸಿನಲ್ಲಿಯೂ ಇತ್ತು. ಆದರೆ ನಾನೇ ಒಪ್ಪಲಿಲ್ಲ.''

''ಏಕೆ?''

"ತಾಯಿಯನ್ನು ಬಿಟ್ಟು ಹೋಗಬೇಕಲ್ಲಾ ಎನ್ನುವ ಕಾರಣ ಒಂದು, ಎರಡನೆಯದಾಗಿ ಆತನನ್ನು ಕಂತರೆ ಆಗಲಿಲ್ಲ, ಮೂರನೆಯದು ಹೇಳಲೇ...."

"ಹೇಳಿಬಿಡು"

"ನೀವೇಕೆ ನನ್ನ ಮನಸ್ಸು ಕದ್ದಿರಿ?"

"ಯಾವಾಗ."

"ಅಂದು ನೀವು ನನ್ನ ಗೆಳತಿ ಸುನಂದಾ ಮನೆಗೆ ಬಂದಿದ್ದಿರಿ. ಅವರಕ್ಕ ನಿಮ್ಮ ಅತ್ತಿಗೆಯಂತೆ! ಅತ್ತಿಗೆಯನ್ನು ಮಾತನಾಡಿಸುತ್ತ ನಿಂತಿದ್ದಿರಿ. ನಾನೂ, ಶಾಂತ, ರಾಜಮಣಿ ಸುನಂದನ ರೂಮಿನಲ್ಲಿದ್ದೆವು. ನೀವು ಹೊರಡುವುದರಲ್ಲಿದ್ದಾಗ ಸುನಂದಾ ನಿಮ್ಮನ್ನು ಕರೆದು ನಮ್ಮೆಲ್ಲರ ಪರಿಚಯ ಮಾಡಿಸಿಕೊಟ್ಟಳು. ಎಲ್ಲಾ ಮರೆತುಹೋಯಿತೇನು?"

"ಮರೆತಿಲ್ಲ - ಮುಂದಕ್ಕೆ ಹೇಳು."

"ಕಾಲೇಜಿನಲ್ಲಿ ನಿಮ್ಮನ್ನು ಎಷ್ಟೋ ಸಲ ನೋಡಿದ್ದೆ - ಪರಿಚಯ ವಿರಲಿಲ್ಲ. ಮುಂದೆ ಪರಿಚಯ ಬೆಳೆದುದು ನಿಮಗೇ ಗೊತ್ತಿದೆಯಲ್ಲಾ."

"ವಿಧಿಯೆಂದು ಹಿರಿಯರು ಹೇಳುವುದು ನಿಜವೆಂದೆನಿಸುತ್ತದೆ. ಕಾಲೇಜಿನಲ್ಲಿ ಎಷ್ಟೋ ಹುಡುಗಿಯರಿದ್ದರೂ ನಿನಗೂ ನನಗೂ ವಿಶ್ವಾಸ ಬೆಳೆಯಬೇಕೇ?"

"ನಿಮಗೆ ಪಶ್ಚಾತ್ತಾಪವಾಗಿಲ್ಲವಷ್ಟೆ."

"ಆಗಿದ್ದರೆ ಹೇಳುತ್ತಿದ್ದೆ. ಈ ಬಾಯ್ ಎಷ್ಟುಹೊತ್ತು ಹೋದ" ಎಂದು ಎದ್ದುಹೋಗಿ 'ಬಾಯ್' ಎಂದು ಕೂಗಿದ. 'ಬಂದೇ ಸಾರ್' ಎಂದು ಬಾಯ್ ಉತ್ತರವಿತ್ತ.

ಬಾಯ್ ಟ್ರೇಗಳಲ್ಲಿ ಉಪಾಹಾರದ ಪದಾರ್ಥಗಳನ್ನು ತಂದು ಮೇಜಿನ ಮೇಲೆ ಅಣಿಮಾಡಿಟ್ಟ.

"ಬೀಡಾನೂ ತಂದಿರುವೆ - ಸಾರ್."

'ಗುಡ್' ಎಂದು ಸಂಜೀವ ಸಂತೋಷ ವ್ಯಕ್ತಮಾಡಿದ.

ಮಳೆ ಸ್ವಲ್ಪ ಇಳಿಮುಖವಾಗಿತ್ತು.

ಸಂಜೀವ, ಪುಷ್ಪ ಇಬ್ಬರೂ ಉಪಾಹಾರ ಮುಗಿಸಿದರು. ಬೀಡಾ ತಟ್ಟೆಯನ್ನು ಸಂಜೀವ ಪ್ರತ್ಯೇಕವಾಗಿ ತೆಗೆದಿಟ್ಟ. ತಟ್ಟೆ ಬಟ್ಟಲುಗಳನ್ನು ತೆಗೆದುಕೊಂಡು ಹೋಗಲು ಬಾಯ್ ಬಂದಾಗ

"ಬೆಳಿಗ್ಗೆ ಕೃಷ್ಣರಾಜಸಾಗರಕ್ಕೆ ಗಾಡಿ ಎಷ್ಟುಹೊತ್ತಿಗೆ ಬರುತ್ತದೆ ಬಾಯ್."

"ಯಾವ ಕಡೆಗೆ ಹೋಗುವುದು ಸಾರ್."

"ಮೈಸೂರಿಗೆ ಹೋಗುವುದು"

"ಏಳೂವರೆಗೆ ಬರುತ್ತದೆ."

"ಆ ವೇಳೆಗೆ ನಮಗೆ ಸ್ನಾನಕ್ಕೆ ಬಿಸಿನೀರು ಕೊಡುತ್ತೀಯಾ."

"ರೆಡಿ (Ready) ಮಾಡುತ್ತೇನೆ ಸಾರ್. ಬೆಳಿಗ್ಗೆ ಚೋಟಾ-ಹಾಜರಿ (Chota-Hazari) ಏನು ತರಲಿ?"

"ಟೋಸ್ಟ್-ಕಾಫಿ."

ಬಾಯ್ ಬಾಗಿಲು ಮುಂದಕ್ಕೆಳೆದುಕೊಂಡು ಹೋಗಲು ಸಂಜೀವ ಸಿಗರೇಟ್ ಹಚ್ಚಿಕೊಂಡು ವೆರಾಂಡದಲ್ಲಿ ಬಂದು ನಿಂತ

ಮಳೆ ನಿಲುಗಡೆಗೆ ಬರುತ್ತಿತ್ತು

ವೃಷ್ಟಿಯಿಂದ ತೃಪ್ತಿಗೊಂಡ ಪ್ರಕೃತಿ ನವಯೌವನದಿಂದ ಶೋಭಿಸುತ್ತಿತ್ತು ಬೆಳಕಿನ ಮುಂದೆ ಹನಿಹನಿಯಾಗಿ ಬೀಳುತ್ತಿದ್ದ ಮಳೆನೀರು ಮುತ್ತಿನ ಪಂಕ್ತಿಯನ್ನು ನೆನಪಿಗೆ ತರುತ್ತಿತ್ತು. ಮೊರೆಯುತ್ತಿದ್ದ ಕಾವೇರಿಯ ಝೇಂಕಾರ ವಾತಾವರಣಕ್ಕೆ ಅಪೂರ್ವ ಗಭೀರತೆಯನ್ನೀಯುತ್ತಿತ್ತು.

ಪ್ರಕೃತಿಸೌಂದರ್ಯದಲ್ಲಿ ತಲ್ಲೀನನಾಗಿ ಸಂಜೀವ ನಿಂತಿದ್ದ. ಪುಷ್ಪ ಬಂದು ತೋಳು ಮುಟ್ಟಿದಾಗಲೇ ಎಚ್ಚರ.

"ನನ್ನನ್ನು ಮರತೇಬಿಟ್ಟರೆಂದು ಕಾಣುತ್ತದೆ."

"ಇಲ್ಲಿ ನೋಡು ಪುಷ್ಪ-ಮಳೆ ಬಂದಮೇಲೆ ಬೃಂದಾವನದ ಪ್ರಕೃತಿನೋಟ ಎಷ್ಟು ರಮ್ಯವಾಗಿದೆ"

"ನೀವು ಕವಿಗಳೆಂಬುದು ನನಗೆ ತಿಳಿದಿರಲಿಲ್ಲ."

"ಪ್ರತಿಯೊಬ್ಬ ಮನುಷ್ಯನೂ ಕವಿಯೇ. ಪ್ರಕೃತಿ ನುಡಿಸಲನುಕೂಲಿಸುವಂತೆ ವ್ಯಕ್ತಿ ತನ್ನ ಹೃದಯವೀಣೆಯನ್ನು ಶ್ರುತಿಮಾಡಿಕೊಳ್ಳಬೇಕು."

"ಬೀಡಾ ಬೇಡವೇ ?" ಎಂದಳು.

ಕ್ಷಣಕಾಲ ಸಂಜೀವನ ಮನಸ್ಸು ಅಸಂತುಷ್ಟಿಗೊಳಗಾಯಿತು. ಮುಖದ ಮೇಲೆ ಕಾಣಿಸಿಕೊಂಡ ನೋವಿನ ಗೆರೆಯನ್ನು ಮರುಕ್ಷಣವೇ ಅಳಿಸಿ ನಗೆ ಮೊಗದಿಂದ

"ಮರೆತೇಬಿಟ್ಟಿದ್ದೆ - ಕೊಡು" ಎಂದ.

ಪುಷ್ಪ ಅವನ ಬಾಯಿಗೆ ಬೀಡಕೊಟ್ಟು, ತಾನೊಂದನ್ನು ಬಾಯಿಗೆ ಹಾಕಿಕೊಂಡು.

"ನಿಮ್ಮ ಮೇಲೆ ನನಗೆ ತುಂಬ ಕೋಪ ಬಂದಿದೆ."

"ನಾನೇನು ಅಪರಾಧಮಾಡಿದೆ."

"ಕಾಗದವೆಂದು ಹೇಳಿ ನೀವು ನನ್ನ ಕೈಗೆ ಕೊಟ್ಟ ಲಕೋಟೆಯಲ್ಲಿ ಏನಿಟ್ಟಿದ್ದಿರಿ ?"

"ಅದೇ ! - ಯಾವ ದೊಡ್ಡ ವಿಷಯ ಹೇಳು."

"ಹಾಗೇಕೆ ಮಾಡಿದಿರಿ ?"

"ನಿನ್ನ ಖರ್ಚಿಗೆ ನಾನು ಹಣ ಕೊಡಬೇಡವೇ ?"

"ನೀವೇ ಇರುವಾಗ ನನಗೆ ಹಣವೇಕೆ ?"

"ಇನ್ನುಮೇಲೆ ಖರ್ಚಿಗೆ ಹಣ ಬೇಕಾದರೆ ನೀನೇ ಕೇಳಿ ತೆಗೆದುಕೊಳ್ಳಬೇಕು. ಬಿಂಕ, ಬಿಗುಮಾನ ತೋರಿದರೆ ನನಗೆ ಕೋಪ ಬರುತ್ತದೆ."

"ನನಗೆ ಹಣ ಬೇಡ - ನಿಮ್ಮ ಶಾಶ್ವತ ವಿಶ್ವಾಸ ಬೇಕು."

"ಅದಕ್ಕೆ ನಾನು ಚ್ಯುತಿ ತರುವುದಿಲ್ಲ ಪುಷ್ಪಾ"

ಎಂದವಳನ್ನು ಅಪ್ಪಿದ.

ಮಳೆ ಸಂಪೂರ್ಣವಾಗಿ ನಿಂತುಹೋಗಿ ಆಕಾಶ ತಿಳಿಯಾಗಿತ್ತು. ಅಲ್ಲಲ್ಲಿ ನಕ್ಷತ್ರಗಳು ಕಾಣಿಸಿಕೊಂಡು ಮಿನುಗುತ್ತಿದ್ದವು.

ಸಂಜೀವ, ಪುಷ್ಪ ಒಬ್ಬರನ್ನೊಬ್ಬರು ಅಪ್ಪಿಕೊಂಡು ಪ್ರಕೃತಿಯ ಲಲಿತ ಲಾವಣ್ಯವನ್ನು ನೋಡುತ್ತ ನಿಂತರು. ಎಷ್ಟುಹೊತ್ತು ಕಳೆದಿರಬಹುದೆನ್ನುವುದು ಇಬ್ಬರಿಗೂ ಗೊತ್ತಿಲ್ಲ. ಇದ್ದಕ್ಕಿದ್ದಂತೆ ಪುಷ್ಪ ನಡುಗಿದಳು.

"ಚಳಿಯಾಗುತ್ತಿದೆಯೇ ?"

"ಹೂ ! ಥಂಡಿ ಗಾಳಿ."

ಇಬ್ಬರೂ ರೂಮಿನೊಳಗೆ ಬಂದು ಹೊರಗಿನ ಬಾಗಿಲು ಹಾಕಿದರು. ಸಂಜೀವ ಷೂಸು, ಕಾಲುಚೀಲ ಬಿಚ್ಚಿ, ಕೋಟು ಷರ್ಟು ತೆಗೆದು ಸ್ಟ್ಯಾಂಡಿನ ಮೇಲೆ ಹಾಕಿದ. ಪುಷ್ಪ ತಲೆಗೆ ಧರಿಸಿದ್ದ ಕೆಲವು ಹೇರ್‌ಪಿನ್‌ಗಳನ್ನು (Hairpin) ತೆಗೆದು ಮೇಜಿನಮೇಲಿಟ್ಟಳು.

ಸಂಜೀವ ಎದ್ದು ತಾಂಬೂಲ ಉಗುಳಿ ಬಾಯಿ ಮುಕ್ಕಳಿಸಿ ಬರಲು ಸ್ನಾನಗೃಹಕ್ಕೆ ಹೋದ. ಪುಷ್ಪ ಬಾಗಿಲ ಮೇಲಿದ್ದ ಒಂದು ದೀಪ ಬಿಟ್ಟು ಉಳಿದುದನ್ನಾರಿಸಿ ಮಂಚದ ಮೇಲೆ ಮಲಗಿ ರಗ್ ಎಳೆದುಕೊಂಡಳು. ದೀಪದ ಬೆಳಕು ಕಣ್ಣು ಚುಚ್ಚದಿರಲೆಂದು ಕಣ್ಣುಗಳಮೇಲೆ ಕೈಯಿಟ್ಟುಕೊಂಡು ಮಲಗಿದ್ದಳು.

ಸಂಜೀವ ಅರೆಕ್ಷಣದಲ್ಲಿ ಎಲ್ಲವನ್ನೂ ಅರ್ಥಮಾಡಿಕೊಂಡ. ದೀಪ ಆರಿತ್ತು. ಮಲಗಿದ್ದರೂ ಪುಷ್ಪ ಬೆರಳುಸಂದಿಯಲ್ಲಿ ತನ್ನನ್ನೇ ನೋಡುತ್ತಿರುವಳೆಂದು ಸಂಜೀವನಿಗೆ ಗೊತ್ತಿತ್ತು.

ಅವನ ಮನಸ್ಸು ಸಂದಿಗ್ಧಕ್ಕೊಳಗಾಯಿತು. ಸ್ವಲ್ಪಕಾಲ ಚಿಂತಲ್ಲಿಯೇ ಚಿಂತೆ. ರೂಮಿನಲ್ಲಿ ಪುಷ್ಪ ಮಲಗಿದ್ದ ಮಂಚವಲ್ಲದೆ, ಹಾಸಿಗೆ ಹಾಸಿದ ಮೂರು ಮಂಚಗಳಿದ್ದವು. ಅವುಗಳನ್ನೂ ಒಮ್ಮೆ ನೋಡಿದ. ಕಣ್ಣು ಹಾಗೆಯೇ ಪುಷ್ಪನ ಕಡೆ ಹೊರಳಿತು. ದಪ್ಪ ರಗ್ ಹೊದೆದು ಅವಳು ಮಲಗಿದ್ದರೂ ಅವಳ ದೇಹವಿನ್ಯಾಸ ಕಾಣುತ್ತಿತ್ತು. ಮೂಗಿನ ಮೇಲ್ಭಾಗ ಕೈಗಳಿಂದ ಮರೆಯಾಗಿದ್ದರೂ ಕೆಳಭಾಗ ಸ್ಪಷ್ಟವಾಗಿ ಕಾಣುತ್ತಿತ್ತು. ಅವನ ಲಕ್ಷ್ಯ ಅವಳ ತುಟಿಯತ್ತ ಹೋಯಿತು. ರಾಗರಂಜಿತ ತುಟಿಗಳು - ಈಗವಕ್ಕೆ ತಾಂಬೂಲ ರಾಗವೂ ಸೇರಿದೆ - ಎಲ್ಲಕ್ಕೂ ಹೆಚ್ಚಾಗಿ ಅನುರಾಗ ಲೇಪವಾಗಿದೆ. ಹೃದಯದ ಆಸೆಯನ್ನು ತುತ್ತೂರಿಯಂತೆ ಪುಷ್ಪನ ತುಟಿಗಳು ಮೊಳಗುತ್ತಿದ್ದವು.

ಅದೃಶ್ಯಶಕ್ತಿಯೊಂದು ಸಂಜೀವನನ್ನು ಪುಷ್ಪನ ಮಂಚದ ಬಳಿಗೆಳೆದೊಯ್ಯಿತು. ಮಂಚದ ಮೇಲೆ ಕುಳಿತು ಮೃದುವಾಗಿ ಅವಳ ತಲೆ ನೇವರಿಸಿದ. ಪುಷ್ಪ ಕಣ್ಣಿನ ಮೇಲಿಂದ ಕೈಗಳನ್ನು ತೆಗದು ಸಂಜೀವನ ಕುತ್ತಿಗೆ ಬಳಸಿ 'ಬನ್ನಿ - ದೊರೆ' ಎಂದಳು.

ಬೆಳಿಗ್ಗೆ ಬಾಯ್ ಬಂದು ಎಬ್ಬಿಸಿದಾಗಲೇ ಸಂಜೀವನಿಗೆ ಎಚ್ಚರ. ಇಬ್ಬರೂ ಸ್ನಾನ ಮುಗಿಸಿ, ಚೋಟಾ - ಹಾಜರಿ ತೀರಿಸಿಕೊಂಡರು. ಸಂಜೀವ

ಹೋಟೇಲ್ ಬಿಲ್, ಬಾಯ್‌ಗೆ ಎರಡು ರೂಪಾಯಿ 'ಭಕ್ಷೀಸ್' ಕೊಟ್ಟುದ ಮೇಲೆ ಇಬ್ಬರೂ ಸ್ಟೇಷನ್ನಿಗೆ ಧಾವಿಸಿದರು.

ರೈಲು ಯಥಾಕ್ರಮದಂತೆ ಕಾಲುಗಂಟೆ ತಡವಾಗಿ ಬಂತು. ಇಬ್ಬರೂ ಮೈಸೂರು ಸೇರುವ ವೇಳೆಗೆ ಎಂಟೂವರೆಯಾಗಿತ್ತು.

ಸಂಜೀವ ಷಹ-ಪಸಂದ್ ಗೊತ್ತುಮಾಡಿದ. ಗಾಡಿ ಹೋಗುತ್ತಿರುವಂತೆ ಪುಷ್ಪ ಕೇಳಿದಳು.

"ಸಂಜೆ ಎಷ್ಟುಹೊತ್ತಿಗೆ ಬರುತ್ತೀರಿ."

"ನೀನೇ ಹೇಳು."

"ಬೇಗ ಬನ್ನಿ - ನನ್ನನ್ನು ಬಹಳ ಹೊತ್ತು ಕಾಯಿಸಬೇಡಿ."

ಸಂಜೀವ ಉತ್ತರಕೊಡದೆ ಮಂದಹಾಸ ಬೀರಿದ. ಪುಷ್ಪ ಹುಸಿಮುನಿಸಿನಿಂದ

"ಹೋಗಿ - ನಾನು ಮಾತನಾಡಿದರೆ ನಗುವಿರಿ."

"ಇಂದು ನನ್ನ ಪಾಲಿಗೆ ಜಗತ್ತೇ ನಗುತ್ತಿದೆ ಪುಷ್ಪಾ - ನನ್ನನ್ನೇಕೆ ನಗಬೇಡವೆನ್ನುವೆ."

ದಾರಿಯಲ್ಲಿ ಗಾಡಿ ಹೋಗುತ್ತಿದ್ದಂತೆ ಸಂಜೀವನ ಸಹಪಾಠಿಗಳಾಗಿದ್ದವರು ಕೆಲವರು ಅವನಿಗೆ 'ನಮಸ್ತೇ' ಹೇಳಿದರು. ಅವರ ಶುಭಾಶಯಗಳನ್ನು ಸಂತೋಷವಾಗಿ ಸ್ವೀಕರಿಸಿದ.

ಚಾಮುಂಡಿ ವಿಸ್ತರಣದಲ್ಲಿ ತನ್ನ ಮನೆಯ ಮುಂದಕ್ಕೇ ಪುಷ್ಪ ಗಾಡಿ ಹೊಡೆಸಿದಳು.

ಗಾಡಿ ನಿಲ್ಲಲು ಇಬ್ಬರೂ ಇಳಿದರು. ಪುಷ್ಪ ಮೆಲ್ಲನೆ

"ಮನೆ ಗುರುತು ಸಿಕ್ಕುವುದಲ್ಲವೇ? ಈಗ ಕವಿಗಳಾಗಿದ್ದೀರಿ. ಎಲ್ಲಿ ಮರೆತುಬಿಡುತ್ತೀರೋ ಎಂದು ಭಯ."

"ಕವಿಗಳಿಗೆ ಬೇಡವಾದುದಷ್ಟೇ ಮರೆತುಹೋಗುತ್ತದೆ. ಬೇಕಾದುದು ಮರೆಯುವುದಿಲ್ಲ" ಎಂದ.

ಪುಷ್ಪ ತಾನು ಹೊದೆದಿದ್ದ ಶಾಲು ಅವನಿಗೆ ಕೊಡಹೋದಳು.

"ಇದು ಇಲ್ಲಿಯೇ ಇರಲಿ" ಎಂದು ಹೇಳಿ

ಪುಷ್ಪ ಮನೆಯೊಳಗೆ ಹೋಗುವವರೆಗೆ ಕಾದಿದ್ದು ಗಾಡಿಹತ್ತಿದ. ಗಾಡಿ ಕಣ್ಮರೆಯಾಗುವವರೆಗೂ ಪುಷ್ಪ ತಲೆಬಾಗಲಿನಲ್ಲೇ ನಿಂತಿದ್ದಳು.

ಗಾಡಿ ಸಂಜೀವನ ಮನೆಮುಟ್ಟಿತು. ಗಾಡಿಯವವನು ಬೇಡಿದುದಕ್ಕಿಂತಲೂ ಎಂಟಾಣೆ ಹೆಚ್ಚಾಗಿಕೊಟ್ಟು ಸಂಜೀವ ಒಳಗೆ ಬಂದು ಸೋಫಾ ಮೇಲೆ ಓವರ್‌ಕೋಟ್ ಒಗೆದು ಸೋಫಾಕುರ್ಚಿಯ ಮೇಲೆ ಕುಳಿತ.

ಅವನ ಮನಸ್ಸು ಸುಪ್ರಸನ್ನವಾಗಿತ್ತು. ಯಾವದೋ ಹಾಡನ್ನು ಕುರುಕಿಕೊಳ್ಳುತ್ತಾ ಬಟ್ಟೆ ಬದಲಾಯಿಸಿ ಕಾಫಿ ಮಾಡಿ ಕುಡಿದ.

ಉದ್ದೇಶರಹಿತನಾಗಿ ಮೇಜಿನ ಮೇಲಿದ್ದ 'ನಾನಾ' ಕಾದಂಬರಿಯನ್ನು ಕೈಗೆತ್ತಿಕೊಂಡ. ಪುಟಗಳ ಮೇಲೆ ಕಣ್ಣು ಓಡಿತೇ ವಿನಾ ಒಂದು ಶಬ್ದವೂ ಅರ್ಥವಾಗಲಿಲ್ಲ. ಪುಸ್ತಕವನ್ನು ಅತ್ತ ಸರಿಸಿ ಗಡಿಯಾರ ನೋಡಿದ. ಹತ್ತರ ಬಳಿಗೆ ಗಂಟೆಯ ಮುಳ್ಳು ತೆವಳುತ್ತಿತ್ತು.

ಸಂಜೀವನ ತಲೆಯಲ್ಲಿ ಏನೋ ವಿಚಾರ ಹೊಳೆಯಿತು. ಎದ್ದವನೇ ಕಿಸೆಯಲ್ಲಿ ಚೆಕ್‌ಬುಕ್ ಇಟ್ಟುಕೊಂಡು ಬೈಸಿಕಲ್ ಹಿಡಿದುಹೊರಟ.

ರಸ್ತೆಗೆ ಬರಲು ಮತ್ತೆ ಏನೋ ನೆನಪಾಯಿತು. ಮನೆಯ ಒಳಗೆ ಬೈಸಿಕಲ್ ಇಟ್ಟು ನಡೆದೇ ಹೊರಟ. ದೂರದಲ್ಲಿ ಬಸ್ ಬರುತ್ತಿರುವುದು ಕಂಡಿತು. ಸ್ಟ್ಯಾಂಡಿನ ಬಳಿ ಓಡಿಹೋಗಿ ಅದನ್ನು ಹಿಡಿದ.

ಮಾರ್ಕೆಟ್ ಬಳಿ ಸಂಜೀವ ಬಸ್ ಇಳಿದು ನೇರವಾಗಿ 'ಸಾಮ್ರಾಜ್ಯ ಲಕ್ಷ್ಮೀಹಾಲ್'ಗೆ ಬಂದ. ಅಂಗಡಿಯವನು ಅನುಮಾನಿಸುತ್ತ

"ಏನು ಬೇಕು ಸಾರ್" ಎಂದು ಕೇಳಿದ.

"ಒಳ್ಳೆ ರೇಷ್ಮೆಯ ಸೀರೆಗಳು ತೋರಿಸಿ."

"ಧರ್ಮಾವರದದ್ದು ಬೇಕೋ - ಮೈಸೂರು ಸಿಲ್ಕ್ ಬೇಕೋ ಸಾರ್."

"ಎರಡೂ ತೋರಿಸಿ"

ಅಂಗಡಿಯವನು ಕಪಾಟಿನಿಂದ ರಾಶಿರಾಶಿ ಸೀರೆಗಳನ್ನು ತೆಗೆದು ಸಂಜೀವನ ಮುಂದೆ ಗುಡ್ಡೆ ಹಾಕಿದ. ಸಂಜೀವ ಯೋಚಿಸಿ ಯೋಚಿಸಿ ಎರಡು ಧರ್ಮಾವರದ ಸೀರೆಗಳು, ಒಂದು ಮೈಸೂರು ಸೀರೆ, ಅದಕ್ಕೊಪ್ಪುವ ಕಣಗಳನ್ನು ಆರಿಸಿದ.

"ಇನ್ನೇನೂ ಬೇಡವೇ ಸಾರ್."

"ಟವಲು, ಬೆಡಷೀಟ್ಸ್ ಬೇಕಾಗಿತ್ತು."

"ಒಳಗೆ ಬನ್ನಿ ಸಾರ್."

ಅಂಗಡಿಯವನು ನೂಲಿನ ಬಟ್ಟೆಗಳಿದ್ದ ಒಳ ಆವರಣಕ್ಕೆ ಕರೆದೊಯ್ಯಲು ಸಂಜೀವ ಅಲ್ಲಿ ನಾಲ್ಕು ಟರ್ಕಿಟವಲು, ಒಂದು ಜತೆಗೆ ಸೊಲ್ಲಾಪುರದ ಮಿಲ್ಲಿನ ಬೆಡ್ - ಸ್ಪ್ರೆಡ್ (Bed Spread) ಆಯ್ದ.

ಗಿರಾಕಿ 'ಶುದ್ಧ ಎಂಕ್ಪು' ಎನ್ನುವುದನ್ನು ಅಂಗಡಿಯವನು ಅರ್ಥಮಾಡಿಕೊಂಡಿದ್ದ.

"ಹೊಸ ಸ್ಟಾಕು ಆರ್‌ಗಂಡಿ ಸೀರೆಗಳು ಬಂದಿವೆ ನೋಡುತ್ತೀರಾ ಸಾರ್"

"ಬೇಡಿಯಪ್ಪ"

"ನೋಡಿ ಸಾರ್. ತೆಗೆದುಕೊಳ್ಳದಿದ್ದರೆ ಪರವಾಯಿಲ್ಲ."

ಎಂದು ಅಂಗಡಿಯವನು ಬಗೆಬಗೆಯ ನಮೂನೆಯ ಆರ್‌ಗಂಡಿ ಸೀರೆಗಳನ್ನು ಸಂಜೀವನ ಮುಂದೆ ಪಸರಿಸಿದ. ಒಡಲೆಲ್ಲಾ ಹೂವಿನ ನಮೂನೆ ಇದ್ದ ಒಂದು ಸೀರೆ, ಸೊಗಸಾದ ದೊಡ್ಡ ಬಾರ್ಡರ್ ಇದ್ದ ಒಂದು ಸೀರೆ ಸಂಜೀವನ ಮನಸ್ಸಿಗೆ ಬಹಳ ಚೆಲುವಾಗಿ ಕಂಡವು.

"ಇವುಗಳನ್ನೂ ಲೆಕ್ಕಕ್ಕೆ ಸೇರಿಸಿಬಿಡಿ" ಎಂದ.

ಅಂಗಡಿಯವನು ಎಲ್ಲಾ ಬಟ್ಟೆಗಳನ್ನೂ ಮೂಟೆಕಟ್ಟಿ ಮುನ್ನೂರ ಹದಿನೇಳು ರೂಪಾಯಿ, ಹದಿನೈದು ಆಣೆಗೆ ಬಿಲ್ ಹಾಕಿದ. ಸಂಜೀವ ಬಿಲ್ ಪರಾಮರ್ಶಿಸಿ ಕಿಸೆಯಿಂದ ಚೆಕ್‌ಬುಕ್ ತೆಗೆದ. ಅಂಗಡಿಯವನು ನಯವಾಗಿ

"ಕ್ಯಾಷೇ ಕೊಟ್ಟಿದ್ದರಾಗಿತ್ತು ಸಾರ್."

"ಕ್ಯಾಷ್ ಮಾಡಿಸುವುದಕ್ಕೇ ನಾನೂ ಬಂದೆ. ಬ್ಯಾಂಕು ತೆಗೆಯುವ ವೇಳೆಯಾಗಿಲ್ಲ ಬಟ್ಟೆ ಗಂಟು, ಬಿಲ್ ಇಟ್ಟಿರಿ. ಇನ್ನೂ ಸ್ವಲ್ಪ ವ್ಯಾಪಾರವಿದೆ. ಮುಗಿಸಿಕೊಂಡು ಮನೆಗೆ ಹೋಗುವಾಗ ತೆಗೆದುಕೊಂಡು ಹೋಗುತ್ತೇನೆ"

"ಯಾವ ಬ್ಯಾಂಕಿಂದು ಸಾರ್ ಚೆಕ್ಕು."

"ಮೈಸೂರು ಬ್ಯಾಂಕಿನದು."

"ಕೊಡೀ ಸಾರ್ ಪರವಾಯಿಲ್ಲ."

ಸಂಜೀವ ಚೆಕ್ ಬರೆಯುವಾಗ ಅಂಗಡಿಯವನು ಮೆಲ್ಲನೆ

"ಚೆಕ್ಕಿನ ಹಿಂದೆ ನಿಮ್ಮ ಪೂರ್ತಿ ಅಡ್ರೆಸ್ ಬರೆದು ಬಿಡಿ ಸಾರ್"

ಎಂದು ಹೇಳಿದ. ಅವನು ತಿಳಿಸಿದಂತೆ ಬರೆದು ಕೊಟ್ಟು, ಗಂಟನ್ನು ಅಲ್ಲಿಯೇ ಬಿಟ್ಟು ಸಂಜೀವ, ಸಯ್ಯಾಜಿರಾವ್ ರಸ್ತೆಯಲ್ಲಿದ್ದ ಮೈಸೂರು ಬ್ಯಾಂಕಿಗೆ ತನ್ನ ಹೆಸರಿಗೇ ಚೆಕ್ ಬರೆದುಕೊಟ್ಟು ಇಪ್ಪತ್ತೈವತ್ತು ರೂಪಾಯಿ ತೆಗೆದುಕೊಂಡು ನೇರವಾಗಿ ಲಾನ್ಸ್‌ಡೌನ್ ಬಜಾರಿಗೆ ಬಂದ.

'ಹಿಂದೂಸ್ಥಾನ ವಾಚ್ ಮಾರ್ಟ'ನ ಮುಂಬಾಗಿಲಿನಲ್ಲಿಯೇ ಗಾಜಿನ ಬೀರುವಿನಲ್ಲಿ ಬಗೆಬಗೆಯ ಗಡಿಯಾರಗಳನ್ನು ಪ್ರದರ್ಶನಕ್ಕಿಟ್ಟಿದ್ದರು. ಸಂಜೀವ ಅವುಗಳನ್ನು ದಿಟ್ಟಿಸಿ ನೋಡು ಮೂರು ಗಡಿಯಾರಗಳನ್ನು ಹೊರಗೆ ತೆಗೆಸಿದ. ಅವುಗಳಲ್ಲಿ ಒಂದು ಅವನ ಮನಸ್ಸನ್ನು ಬಲವಾಗಿ ಸೆಳೆಯಿತು. ಬಿಡಿಕಾಸಿನಷ್ಟು ಪ್ರಮಾಣ – ಚತುಷ್ಕೋಣಕವಾಗಿತ್ತು – ಉಬ್ಬಿದ ಗಾಜು – ಅತ್ತಿತ್ತ ಕುಣಿಕೆಗಳಿಗೆ ರೇಷ್ಮೆಯ ಹುರಿ. ಅಂಗಡಿಯವನೊಂದಿಗೆ ವ್ಯಾಪಾರ ಮಾಡಿ ನೂರ ಇಪ್ಪತ್ತೆಂಟು ರೂಪಾಯಿ, ಹನ್ನೆರಡಾಣೆ ಕೊಟ್ಟು ಅದನ್ನು ಕೊಂಡ. ಸೊಗಸಾದ ಪುಟ್ಟ ಭರಣಿಯಲ್ಲಿ ಗಡಿಯಾರವನ್ನಿಟ್ಟು ಅಂಗಡಿಯವನು ಸಂಜೀವನ ಕೈಗಿತ್ತ.

ಇನ್ನು ಉಳಿದಿದ್ದುದು ಮಾರ್ಕೆಟ್ಟಿನ ವ್ಯಾಪಾರ ಒಂದೇ. ಮೊದಲು ಹೊಸ ಬುಟ್ಟಿಯೊಂದನ್ನು ಕೊಂಡು ಅದರಲ್ಲಿ ಬಗೆಬಗೆಯ ಹಣ್ಣುಗಳು, ಆರು ಕುಚ್ಚು ಹೂವು, ಒಂದು ಘನವಾದ ಹಾರ, ಒಂದು ಕಟ್ಟು ಚಿಗುರು ವೀಳೆಯ ದೆಲೆ ಹಾಕಿಸಿಕೊಂಡ. ಮಾರ್ಕೆಟ್ ಮುಂದೆಯೇ ಗಾಡಿ ಗೊತ್ತುಮಾಡಿಕೊಂಡು, ಬಟ್ಟೆಯ ಅಂಗಡಿಗೆ ಬಂದು ಅಲ್ಲಿದ್ದ ಗಂಟನ್ನೂ ತೆಗೆದುಕೊಂಡು ಮನೆ ಸೇರುವ ವೇಳೆಗೆ ಒಂದು ಗಂಟೆಯಾಗಿತ್ತು.

ಸಂಜೀವ ಊಟದ ಶಾಸ್ತ್ರ ಮುಗಿಸಿ, ಸ್ವಲ್ಪ ವಿಶ್ರಾಂತಿ ಪಡೆಯಲೆತ್ನಿಸಿದ. ರಾತ್ರಿಯೂ ನಿದ್ರೆಯಿರಲಿಲ್ಲ, ಕಣ್ಣು ಮುಚ್ಚಿದರ ನಿದ್ರೆ ಬರುತ್ತಿರಲಿಲ್ಲ - ಬಗೆ ಬಗೆಯ ನೆನಪುಗಳು. ಹಿಂದಿನ ರಾತ್ರಿಯ ಅನುಭವ ಒಂದು ಕಡೆ - ಮುಂದೆ ಆಗುವ ಅನುಭವದ ಸುಂದರ ಚಿತ್ರಗಳು ಮತ್ತೊಂದು ಕಡೆ. ಮಧುರ ವಿಸ್ಮೃತಿ ಸಂಜೀವನನ್ನು ದೇಹಾದ್ಯಂತ ವ್ಯಾಪಿಸಿತ್ತು ಹಾಸಿಗೆಯಲ್ಲಿ ಹೊರಳಾಡಿದ್ದು ಅಯಿತೇ ವಿನಾ ನಿದ್ರೆಮಾಡಲಾಗಲಿಲ್ಲ.

ಮೂರು ಗಂಟೆ ಹೊಡೆಯಿತು. ಸಂಜೀವ ಎದ್ದವನೇ ಕಾಫಿ ಮಾಡಿಕೊಂಡು ಕುಡಿದು, ಮುಖಕ್ಷೌರಮಾಡಿಕೊಂಡ. ಮುಖಕ್ಕೆ ತೆಳುವಾಗಿ 'ಬೂಜ್ವಾ' ಪೌಡರ್ ಲೇಪಿಸಿಕೊಂಡು ಬೀರು ತೆಗೆದು ತನ್ನ ನೀಲಿ ಸರ್ಜ್

ಸೂಟ್ ಹೊರಗೆ ತೆಗೆದ. ಅದಕ್ಕನುಗುಣವಾದ ಎಣ್ಣೆಗೆಂಪು ಬಣ್ಣದ ಟೈ ಆಯ್ದು ಕೊಂಡು, ಟೈಗಂಟು ವೈಶಿಷ್ಟ್ಯದಿಂದ ಮೆರೆಯುವಂತೆ ಕಟ್ಟಿಕೊಂಡ.

ಸೂಟ್ ಧರಿಸಿದ್ದು ಮುಗಿಯಲು ಕೋಟಿನ ಎರಡು ಕಿಸೆಗಳಿಗೆ, ಷರಾಯಿಯ ಎರಡು ಕಿಸೆಗಳಿಗೆ 'ಪಿರಮಿಡ್' ಕರವಸ್ತ್ರ ತುರುಕಿ, ಕೋಟಿನ ಮೇಲುಕಿಸೆಯಲ್ಲಿ ರೇಷ್ಮೆ ಕರವಸ್ತ್ರವೊಂದನ್ನು ಗೋಪುರದಂತೆ ಮಡಿಸಿಟ್ಟ.

ತಲೆಗೆ ಬೈಲ್‌ಕ್ರೀಮ್ ಬಳಿದುಕೊಂಡು, ಕೂದಲನ್ನು ಮಾಟವಾಗಿ ಬಾಚಿಕೊಂಡ. ಬಟ್ಟೆಯ ಬೀರುವಿಗೆ ಹಾಕಿದ್ದ ನಿಲುಗನ್ನಡಿಯಲ್ಲಿ ತನ್ನ ಅಲಂಕಾರವನ್ನು ಮತ್ತೆ ಮತ್ತೆ ನೋಡಿಕೊಂಡು ತಾನೇ ಮೆಚ್ಚಿಕೊಂಡ.

ನಾಲ್ಕು ಗಂಟೆ ಹೊಡೆದಿತ್ತು. 'ಹೊತ್ತಾಯಿತು. ಪುಷ್ಪ ಕಾಯುತ್ತಿರುತ್ತಾಳೆ' ಎಂದುಕೊಂಡು ಮನೆಯಿಂದ ಹೊರಗೆ ಬಂದು ಒಂದು ಗಾಡಿ ಗೊತ್ತು ಮಾಡಿದ. ಗಾಡಿಯವನು ಒಳಕ್ಕೆ ಬಂದು ಹಣ್ಣಿನ ಬುಟ್ಟಿಯನ್ನೂ, ಬಟ್ಟೆಯ ಗಂಟನ್ನೂ ಒಯ್ದು ಗಾಡಿಗಿಟ್ಟ - ಸಂಜೀವ ಗಡಿಯಾರದ ಸಂಪುಟವನ್ನು ಕಿಸೆಗೆ ಹಾಕಿಕೊಂಡು ಗಾಡಿ ಹತ್ತಿ ಕುಳಿತ.

ಸಂಜೀವನ ಒತ್ತಾಯಕ್ಕೆ ಗಾಡಿಯವನು ಕುದುರೆಯನ್ನೋಡಿಸಬೇಕಾಯಿತು. ಅವನೆಷ್ಟು ಆವಸರಪಟ್ಟರೂ ಪುಷ್ಪನ ಮನೆ ತಲಪುವ ವೇಳೆಗೆ ಐದು ಗಂಟೆಯ ಸಮೀಪವಾಗಿತ್ತು.

ಪುಷ್ಪ ಬಾಗಿಲಲ್ಲೇ ಕಾಯುತ್ತಿದ್ದಳು.

ಗಾಡಿಯವನು ಬುಟ್ಟಿ, ಗಂಟನ್ನು ಹೊತ್ತು ತಂದು ಪುಷ್ಪನ ಮನೆಯ ಹಜಾರದ ಮಧ್ಯೆಯಿದ್ದ ದುಂಡುಮೇಜಿನ ಮೇಲಿಟ್ಟು ಬಾಡಿಗೆ ತೆಗೆದುಕೊಂಡು ಹೋದ.

"ಪುಷ್ಪ ಸಂಜೀವನನ್ನು ಎವೆಯಿಕ್ಕದೆ ನೋಡಿ ಕುಳಿತುಕೊಳ್ಳಿ - ನೀವು ನಾಲ್ಕು ಗಂಟೆಗೆ ಬರುವವರಲ್ಲವೇ ?"

"ಸಾರಿ, ಮೈ ಡಿಯರ್ (Sorry my dear) - ನಾನು ಮನೆಗೆ ಹೋಗುವುದೇ ಒಂದು ಗಂಟೆಯಾಯಿತು."

"ಊಟ ಮಾಡಿದರೋ ಇಲ್ಲವೋ"

"ಮಾಡದೆ ಉಂಟೇ, ಮಮ್ಮಿ ಎಲ್ಲಿ ?"

"ಒಳಗಿದ್ದಾರೆ - ಬರುತ್ತಾರೆ"

ಎಂದು ಗಂಟನ್ನು ನೋಡಿ "ಇವೇನು" ಎಂದು ಕೇಳಿದಳು.

"ನೋಡು."

ಪುಷ್ಪ ಗಂಟಿನ ದಪ್ಪದಾರ ಬಿಚ್ಚಿ ನೋಡಿದಳು. ಅವಳ ಕಣ್ಣನ್ನು ಅವಳೇ ನಂಬದಾದಳು.

"ಇದೇನ್ರೀ - ಇಷ್ಟೊಂದು."

ಸಂಜೀವ ಒಂದು ಧರ್ಮಾವರದ ಸೀರೆ, ಒಂದು ವೈನೂರು ಸೀರೆ, ಅವುಗಳ ಕಣಗಳನ್ನು ಕೈಗೆ ತೆಗೆದುಕೊಂಡು

"ಇದು ನಿನಗೆ ಡಾರ್ಲಿಂಗ್ - ಇನ್ನೊಂದು ಸೀರೆ, ಕಣ ನಿನ್ನ ಮಮ್ಮೀಗೆ"

"ಇವುಗಳನ್ನೆಲ್ಲಾ ನಿಮ್ಮನ್ನು ಯಾರು ತರಹೇಳಿದವರು"

ಎನ್ನುತ್ತಾ 'ಮಮ್ಮಿ' ಎಂದು ಕೂಗಿದಳು. ಪುಷ್ಪನ ತಾಯಿ ಹೆಲನ್ ಬರಲು, ಸಂಜೀವ ಎದ್ದುನಿಂತು ನಮಸ್ಕರಿಸಿದ. ಸ್ವಚ್ಛ ಇಂಗ್ಲಿಷಿನಲ್ಲಿ 'ದಯೆಯಿಟ್ಟು ಕುಳಿತುಕೊಳ್ಳಿ' ಎಂದು ಆಕೆ ಹೇಳಿದಳು. ಪುಷ್ಪ ಎರಡು ಕೈಗಳಲ್ಲಿಯೂ ಸೀರೆಗಳನ್ನು ಹಿಡಿದು ತಾಯಿಗೆ ತೋರಿಸುತ್ತಾ

"ಇದು ನಿನಗೆ - ಇದು ನನಗೆ ಮಮ್ಮಿ" ಎಂದಳು.

ಹೆಲನ್ ಅಮ್ಮ ಸೀರೆಗಳನ್ನು ನೋಡಿ

"ಏಕಪ್ಪಾ ತೊಂದರೆ ತೆಗೆದುಕೊಂಡಿರಿ." ಎಂದಳು.

"ನಿಶ್ಚಿತಾರ್ಥಕ್ಕೆ (Engagement) ನಿಮ್ಮಲ್ಲಿ ಉಂಗುರಕೊಡುವ ಪದ್ಧತಿ ಇದೆ - ನಮ್ಮಲ್ಲಿ ಸೀರೆ, ಕಣಕೊಡುವ ಪದ್ಧತಿ ಇದೆ."

"ಪುಷ್ಪ ನಿಮ್ಮ ವಿಷಯಬೇಕಾದಷ್ಟು ಹೇಳಿದ್ದಾಳೆ. ಅವಳ ಮಾತು ಅಕ್ಷರಶಃ ಸತ್ಯವೆಂದೆನಿಸುತ್ತದೆ."

"ನಿಮಗೆ ನಾನು ಥ್ಯಾಂಕ್ಸ್ (Thanks) ಹೇಳಬೇಕಾಗಿದೆ."

"ಏಕೆ ?"

"ನೀವು ತೋರಿಸಿರುವ ಔದಾರ್ಯಕ್ಕೆ."

"ನನ್ನದೇನು ಔದಾರ್ಯ!"

"ಪುಷ್ಪ, ನಾನು ಸ್ವತಂತ್ರವಾಗಿರಲು ಅವಕಾಶಕೊಟ್ಟಿರಿ."

ಹೆಲನ್ ಅಮ್ಮ ಅವಕ್ಕೆ ಉತ್ತರಕೊಡಲಿಲ್ಲ ಪುಷ್ಪ ಬುಟ್ಟಿಯ ಕಡೆ ಕೈತೋರಿಸಿ

"ಅದರಲ್ಲಿ ಏನಿದೆ?" ಎಂದು ಕೇಳಿದಳು.

"ನೋಡು" ಎಂದು ಸಂಜೀವ ಹೇಳಿದ.

ಪುಷ್ಪ ಬುಟ್ಟಿಯಿಂದ ಹೂವು, ವೀಳೆಯದೆಲೆ ತೆಗೆದು ಮೇಜಿನ ಮೇಲಿಟ್ಟು

"ಎಷ್ಟು ಹೂ ತಂದಿದ್ದೀರಿ. ಹೂವು ಎಂದರೆ ನನಗೆ ಹುಚ್ಚು ಮೋಹ"

ಎನ್ನುತ್ತಾ ಹಾರದ ಪೊಟ್ಟಣ ಬಿಚ್ಚಿ ಅದನ್ನು ಸಂಜೀವನ ಬಳಿಗೆ ತಂದು ಅವನಿಗೆ ಹಾಕಲೆತ್ನಿಸಿದಳು. ಸಂಜೀವ ಅವಳ ಕೈತಡೆದು, ಗೋಡೆಯ ಮೇಲಿದ್ದ ಯೇಸೂ ಸ್ವಾಮಿಯ 'ಪವಿತ್ರ ಹೃದಯ' (Sacred Heart) ಚಿತ್ರ ತೋರಿಸಿ

"ಅಲ್ಲಿ ಹಾಕು" ಎಂದು ಹೇಳಿದ.

ಹೆಲನ್ ಅಮ್ಮನ ಕಣ್ಣುಗಳಲ್ಲಿ ಆನಂದ ಚಿಮ್ಮಿತು ಪುಷ್ಪ ಒಂದು ಕುರ್ಚಿ ಎಳೆದುಕೊಂಡು ಅದರ ಮೇಲೆ ನಿಂತುಕೊಂಡು ಸ್ವಾಮಿಗೆ ಹಾರಹಾಕಿದಳು

ಹೆಲನ್ ಅಮ್ಮ ಆಶ್ಚರ್ಯದಿಂದ

"ನಮ್ಮ ಯೇಸುಸ್ವಾಮಿಯಲ್ಲಿ ನಿಮಗೆಷ್ಟು ಭಕ್ತಿಯಿದೆ!"

"ಯೇಸುಸ್ವಾಮಿ ಇಡಿಯ ವಿಶ್ವಕ್ಕೆ ಸೇರಿದವನು. ಎಲ್ಲರ ವಿಶ್ವಾಸ, ಗೌರವ, ಪ್ರೇಮವನ್ನು ಅವನು ಸೆಳೆದುಕೊಳ್ಳುತ್ತಾನೆ."

"ಬೈಬಲ್ ಓದಿರುವಿರಾ?"

"ಸಾಹಿತ್ಯದ ಸಲುವಾಗಿ ಓದಿದೆ. ಅದರ ದಿವ್ಯಶೈಲಿ ನನಗೆ ತುಂಬ ಹಿಡಿಸಿತು. ಅನಂತರ ಹತ್ತಾರು ಸಲ ಸ್ವಸಂತೋಷಕ್ಕಾಗಿ ಓದಿದೆ."

"ಅವರಿಗೆ ಗೊತ್ತಿರುವಷ್ಟು ಬೈಬಲ್ ನಮಗೇ ಗೊತ್ತಿಲ್ಲ ಮಮ್ಮಿ"

ಎಂದು ಪುಷ್ಪ ಸೇರಿಸಿ

"ಮಮ್ಮಿ - ನಮಗೆ ಕಾಫಿ ಕೊಡುತ್ತೀಯೋ ಇಲ್ಲವೋ"

ಎಂದಳು. ಹೆಲನ್ ಅಮ್ಮ ಎದ್ದು ಒಳಕ್ಕೆ ಹೋದಳು ಪುಷ್ಪ ಬುಟ್ಟಿ, ಬಟ್ಟೆಗಳನ್ನು ಒಳಗಿಟ್ಟುಬಂದು

"ನನ್ನ ರೂಮಿನಲ್ಲೇ ಕಾಫಿ ಕುಡಿಯೋಣ."

"ಮಮ್ಮಿ ಏನಾದರೂ ಅಂದುಕೊಂಡಾರು."

"ಏನೂ ಅಂದುಕೊಳ್ಳುವುದಿಲ್ಲ"

"ನಿಮ್ಮ ಮನೆ ನನಗೆ ತೋರಿಸುವುದಿಲ್ಲವೇನು ?"

"ನಮ್ಮದೇನು - ಬಡವರ ಮನೆ - ನಿಮ್ಮ ಎದುರಿಗಿರುವುದೇ ಡ್ಯಾಡಿಯ ರೂಮ್ - ನಿಮ್ಮ ಹಿಂದಿರುವುದೇ ನನ್ನ ರೂಮ್ - ಒಳಗಡೆ ಹಾಲ್, ಅದೇ ನಮ್ಮ ಡೈನಿಂಗ್ ಹಾಲ್ (Dining Hall) - ಡ್ಯಾಡಿ ರೂಮ್ ಪಕ್ಕದಲ್ಲಿ ಮಮ್ಮಿರೂಮ್ - ಅಪರಾಚೆ ಅಡಿಗೆಯ ಮನೆ, ಸ್ನಾನದ ಮನೆ."

"ಮನೆ ಚೆನ್ನಾಗಿದೆ. ಸ್ವಂತದ್ದೇ ?"

"ಹೌದು - ತಂದೆಗೆ ಬಂದ ಪ್ರಾವಿಡೆಂಟ್ ಹಣದಲ್ಲಿ ಮನೆ ತೆಗೆದು ಕೊಂಡರು - ಏಳಿ"

ಎಂದು ಕೈಹಿಡಿದೆಬ್ಬಿಸಿ ತನ್ನ ರೂಮಿಗೆ ಕರೆದೊಯ್ದಳು. ಸಂಜೀವ ಬಾಗಿಲನ್ನು ಮುಂದಕ್ಕೆ ಹಾಕಿ ಅವಳನ್ನು ಭರದಿಂದ ಅಪ್ಪಿ ಮುದ್ದಿಟ್ಟ.

"ಹ್ಯಾಪಿ - ಡಾರ್ಲಿಂಗ್ (Happy, Darling)"

"ವೆರಿ ಹ್ಯಾಪಿ - ಸ್ವೀಟ್ (Very happy, Sweet)"

ಎಂದು ಉತ್ತರಿಸಿದ

"ಸ್ವಲ್ಪ ಕೂಡಿ - ನಾನು ಕಾಫಿ ತರುತ್ತೇನೆ"

ಎಂದು ಪ್ರಯತ್ನಪೂರ್ವಕವಾಗಿ ಕೈಬಿಡಿಸಿಕೊಂಡು ಹೋದಳು.

ಸಂಜೀವನ ಕಣ್ಣುಗಳು ರೂಮಿನ ಸುತ್ತ ಸಂಚರಿಸಿದವು. 'ಹೂವು ಎಂದರೆ ನನಗೆ ಹುಚ್ಚು ಮೋಹ' ಎಂದು ಪುಷ್ಪ ಹೇಳಿದ್ದುದು ಅಕ್ಷರಶಃ ದಿಟವಾಗಿತ್ತು. ಗೋಡೆಯ ಮೇಲಿದ್ದ ಪಟಗಳಿಗೆ, ಮಂಚದ ಛತ್ತಿಗೆ ಹೂಮಾಲೆಗಳನ್ನು ತೂಗುಹಾಕಿದ್ದಳು. ಮೇಜಿನ ಮೇಲೆ ಹೂಪಾತ್ರೆಯಲ್ಲಿ ಕೆಲವು ಅರಿಸಿದ ಗುಲಾಬಿ ಹೂಗಳು ಮೆರೆಯುತ್ತಿದ್ದವು

ಪುಷ್ಪನ ರೂಮ್ ವಿಶಾಲವಾಗಿತ್ತು. ಅದಕ್ಕೆ ವೆರಾಂಡದಿಂದ ಬಾಗಿಲಿದ್ದುದಲ್ಲದೆ ಒಳಗಡೆಯೂ ಒಂದು ಬಾಗಿಲಿತ್ತು. ರೂಮ್ ಪ್ರವೇಶಮಾಡಿದೊಡನೆಯೇ ಬಲಗಡೆ - ಗೋಡೆಯ ಪಕ್ಕಕ್ಕೆ ಒಂದು ಮೇಜು - ಮೇಜಿನ ಒಂದು ಬದಿಗೆ ಸಾಧಾರಣ ಕುರ್ಚಿ, ಇನ್ನೊಂದು ಬದಿಗೆ ಆರಾಮ ಕುರ್ಚಿಗಳಿದ್ದವು. ಮೇಜಿನ ಮುಂದೆ ಒಂದು ಕುರ್ಚಿಯಿತ್ತು. ಬಾಗಿಲು ಎದುರಿಗೆ

ಪರದೆ ಹಾಕಿದ ಮಂಚ. ಮಂಚದ ಪಕ್ಕಕ್ಕೆ ದೊಡ್ಡ ಬೀರು. ಬೀರು ಪಕ್ಕದಲ್ಲಿ ಗೋಡೆಯ ಮೇಲೆ ದೊಡ್ಡ ನಿಲುಗನ್ನಡಿ. ನಿಲುಗನ್ನಡಿಯ ಪಕ್ಕದಲ್ಲಿ ಬಟ್ಟೆಯ ಸ್ಟ್ಯಾಂಡ್. ಎರಡು ಬಾಗಿಲುಗಳ ಮಧ್ಯೆ, ಮಂಚದೆದುರಾಗಿ ಅಲಂಕಾರ ಮಾಡಿಕೊಳ್ಳುವ ಮೇಜು. ರೂಮಿನ ಮಧ್ಯದಲ್ಲಿ ಒಂದು ದೊಡ್ಡ ಟೀಪಾಯ್.

ಸಂಜೀವನ ಲಕ್ಷ್ಯ ಸೆಳೆದುದು ಅಲ್ಲಿದ್ದ ಫರ್ನೀಚರುಗಳ ಸೌಂದರ್ಯ. ಎಲ್ಲದರ ಮೇಲೆ ಮೈಸೂರು ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ಹೆಸರಿತ್ತು. ಫರ್ನೀಚರುಗಳು ಸೊಗಸಾದ ಕರಿಮರದಲ್ಲಿ ಮಾಡಲ್ಪಟ್ಟು ಕುಶಲ ಬಡಗಿಯ ಕಲಾನೈಪುಣ್ಯವನ್ನು ಸಾರುತ್ತಿದ್ದವು.

ಅಲಂಕಾರದ ಮೇಜಿನ ಮೇಲೆ ಬ್ರಷ್, ಬಾಚಣಿಗೆಗಳು, ಸ್ವಾಸ್ತಿಕ್ ಕಂಪೆನಿಯ ಸುಗಂಧದ ಕೊಬ್ಬರಿಯೆಣ್ಣೆ, ಲಿಪ್‌ಸ್ಟಿಕ್, ಪಾಂಡ್ ಸ್ನೋ, ನೈಟ್‌ಕ್ರೀಮ್, ಪೌಡರ್‌ಗಳಲ್ಲದೆ ಹೇರ್‌ಕ್ರೀಮ್, ಡೆಟ್ಟಾಲ್ ಶೀಷೆಗಳೂ ಇದ್ದವು.

ಪುಷ್ಪನ ಮೇಜಿನ ಮೇಲೆ ಒಂದು ಸಣ್ಣ ಸ್ಟ್ಯಾಂಡಿನಲ್ಲಿ (Stand) ಎರಡು ಸಾಲು ಪುಸ್ತಕಗಳು ಜೋಡಿಸಲ್ಪಟ್ಟಿದ್ದವು. ಒಂದು ಸಾಲು ಪುಷ್ಪನ ಪಠ್ಯಪುಸ್ತಕಗಳು, ಇನ್ನೊಂದು ಸಾಲು ಇತರ ಪುಸ್ತಕಗಳು. ಪುಸ್ತಕಗಳನ್ನು ಸಂಜೀವ ಸೂಕ್ಷ್ಮವಾಗಿ ನೋಡಿದ - ಅವುಗಳಲ್ಲಿ ಹೆಚ್ಚಾಗಿದ್ದುದು ಪೆಂಗ್ವಿನ್, ಪಾಕೆಟ್ ಬುಕ್, ಚೆವ್‌ರಾನ್, ಬ್ಯಾಂಟಮ್, ಏವನ್, ಜ್ಯೆಕೊ ಮಾಲೆಯಲ್ಲಿ ಪ್ರಕಟವಾಗಿದ್ದ ಡಿ.ಎಚ್. ಲಾರೆನ್ಸ್, ಕ್ಯಾಥಲೀನ್ ನಾರಿಸ್, ಪರ್ಲ್‌ಬಕ್, ಜೋಲಾ, ಫ್ಲಾಬೋ, ಗಾರ್ಕಿ, ದಾದೊ, ಮಾರಿಸ್ ಡೆಕೋಬ್ರಾ, ಇವರ ಕಾದಂಬರಿಗಳ ಜತೆಗೆ ಷಾ ಮತ್ತು ವೆಲ್ಸ್ ಇವರ ಸಮಗ್ರ ಗ್ರಂಥಗಳಿದ್ದವು. ಪುಸ್ತಕಗಳ ಕಪಾಟಿನ ಮೇಲೆ ಸೊಗಸಾದ ಮೊರಾಕೋ ಚರ್ಮದ ಹೊದಿಕೆ ಹಾಕಿದ 'ಹೋಲಿ ಬೈಬಲ್' (Holy Bible).

ಗೋಡೆಗಳ ಮೇಲಿದ್ದ ಚಿತ್ರಗಳು ಸಂಜೀವನ ಕುತೂಹಲವನ್ನು ಕೆರಳಿಸಿದವು. ಸುಮಾರು ಮೂರು ಅಡಿ ಪ್ರಮಾಣದ ಲಾರ್ಡ್ ಲೇಟನ್ನನ —ಎರಡು ಚಿತ್ರಗಳು ಕಣ್ಣು ಕೋರೈಸುತ್ತಿದ್ದವು. ಡ್ರೆಸಿಂಗ್ ಟೇಬಲ್ ಇದ್ದ

ಗೋಡೆಯ ಮೇಲೆ ಲಿಯೊನಾರ್ಡೊ ಐಂಚಿಯ 'ಲಾಸ್ಟ್ ಸಪ್ಪರ್' (Last Supper) ಚಿತ್ರ. ಅಲ್ಲಲ್ಲಿ ಪುಷ್ಪನದೇ ಹಲವು ಭಾವಭಂಗಿಗಳಲ್ಲಿ ತೆಗೆಯಲ್ಪಟ್ಟಿದ್ದ ಚಿತ್ರಗಳು. ಪುಷ್ಪ ಬೈಸಿಕಲ್ ಹಿಡಿದು ಕನ್ನಡಕ ಧರಿಸಿರುವಂತೆ - ಪಂಜಾಬಿ ಪೈಜಾಮು, ಜುಬ್ಬ ಹಾಕಿಕೊಂಡಿರುವಂತೆ - ಲಂಗ ಹಾಕಿಕೊಂಡಿರುವಂತೆ - ಇನ್ನೊಂದರಲ್ಲಿ ಕುರ್ಚಿಯ ಮೇಲೆ ಕುಳಿತಿರುವಂತೆ - ಮತ್ತೊಂದರಲ್ಲಿ ಹೂ ಕುಂಡಗಳ ಜತೆ ನಿಂತಿರುವಂತೆ - ಮಗದೊಂದರಲ್ಲಿ ಮೇಜಿನ ಮುಂದೆ ಓದುತ್ತ ಕುಳಿತಿರುವಂತೆ ಚಿತ್ರಗಳಿದ್ದವು.

ಅವುಗಳನ್ನು ನೋಡುತ್ತ ಸಂಜೀವ ಮುಗುಳ್ನಗೆ ನಗುತ್ತಿರುವಂತೆ ತಿಂಡಿ ತಿನಿಸುಗಳ ಟ್ರೇ (Tray) ತಂದು ಪುಷ್ಪ ಟೀಪಾಯ್ ಮೇಲಿಟ್ಟಳು. ಶಬ್ದ ಕೇಳಿ ಸಂಜೀವ ಹಿಂದಿರುಗಿ ನೋಡಿದ.

"ನನ್ನ ಫೋಟೋಗಳನ್ನು ನೋಡಿ ನಗುತ್ತಿರುವಿರಾ ?"

"ಇಲ್ಲ - ಸಂತೋಷಪಡುತ್ತಿದ್ದೇನೆ."

"ತಡೆಯಿರಿ - ಬಂದು ನಿಮ್ಮನ್ನು ವಿಚಾರಿಸಿಕೊಳ್ಳುತ್ತೇನೆ"

ಎಂದು ಒಳಗೆ ಹೋಗಿ ಮತ್ತೊಂದು ಟ್ರೇ ಹಿಡಿದು ಬಂದಳು. ಅದನ್ನೂ ಟೀಪಾಯ್ ಮೇಲಿಟ್ಟು

"ಏನು - ಹೀಗೆ ನಿಂತುಬಿಟ್ಟಿರಿ."

"ಏನುಮಾಡಬೇಕಾಗಿತ್ತು ?"

ಪುಷ್ಪ ಅವನ ಸಮೀಪಕ್ಕೆ ಬಂದು ಕೋಟು ಬಿಚ್ಚಿಸಿ ಸ್ಟ್ಯಾಂಡಿನ ಮೇಲಿಟ್ಟು ಅವನನ್ನು ಬಲವಂತದಿಂದ ಕುರ್ಚಿಯ ಮೇಲೆ ಕುಳ್ಳಿರಿಸಿ ಅವನ ಷೂಸ್ ಬಿಚ್ಚಲಾರಂಭಿಸಿದಳು.

"ಇದೇನು ಮಾಡುತ್ತಿರುವೆ ಡಾರ್ಲಿಂಗ್."

"ಷೂಸು ಬಿಚ್ಚಿ."

"ನಾನು ಬಿಚ್ಚುತ್ತೇನೆ - ನೀನು ಬಿಡು"

ಎಂದು ಅವಳ ಕೈಬಿಡಿಸಿ, ಷೂಸ್ ಬಿಚ್ಚಿಟ್ಟ. ಪುಷ್ಪ ಅವನ ಟೈ ಬಿಚ್ಚಿ ಸ್ಟ್ಯಾಂಡಿನ ಮೇಲಿಟ್ಟು ಬಾಗಿಲು ಹಾಕಿ, ಕುರ್ಚಿಗಳನ್ನು ಟೀಪಾಯ್ ಬಳಿಗೆಳೆದು, ಸಂಜೀವ ತಂದಿದ್ದ ಹೊಸ ಟವಲುಗಳಲ್ಲಿ ಎರಡನ್ನೂ ಕುರ್ಚಿಗಳ ಬೆನ್ನಿನ ಮೇಲೆ ಹಾಕಿದಳು.

ಸಂಜೀವ ಖಾದ್ಯಪದಾರ್ಥಗಳನ್ನು ನೋಡಿ

"ಇಬ್ಬರಿಗೆ ಇಷ್ಟು ಸಾಕೇ. ಇನ್ನೊಮ್ಮೆ ನಿಮ್ಮ ಮನೆಗೆ ನಾನು ಬರಬಾರದೆಂದು ಎಲ್ಲಾ ಒಂದೇ ದಿವಸ ತಂದಿರುವೆಯಾ ?"

"ನಿಮಗೆಷ್ಟುಬೇಕೊ ತೆಗೆದುಕೊಳ್ಳಿ"

ಎಂದು ಒಂದು ಜಪಾನೀ ಕೇಕನ್ನು ತೆಗೆದು ಅವನ ಬಾಯಿಗೆ ಕೊಟ್ಟಳು. ಸ್ವಲ್ಪ ಕಚ್ಚಿಕೊಂಡ - ಉಳಿದದ್ದನ್ನು ಪುಷ್ಪ ಹಿಂತೆಗೆದುಕೊಂಡು ತಾನು ಭುಜಿಸಿದಳು.

ಉಪಾಹಾರ ಸಾಗಿದ್ದಂತೆ ಪುಷ್ಪ ಕೇಳಿದಳು

"ಮಮ್ಮಿಯನ್ನು ನೋಡಿ ನಿಮಗೇನು ಅನಿಸಿತು.

"ಷಿ ಈಸ್ ಎ ಬ್ಯೂಟಿಫುಲ್ ವುಮನ್ (She is a beautiful Woman) - ಅವರ ತಿಳುವಳಿಕೆ ನನಗೆ ಆಶ್ಚರ್ಯವನ್ನುಂಟುಮಾಡಿತು.

ನನ್ನನ್ನು ನೋಡಿ ಏನು ಹೇಳಿದರು."

"ಹೇಳಲೀ ?"

"ಹೇಳು "

"ನಿಮಗೆ ಜಂಬ ಬಂದುಬಿಡುತ್ತದೇನೋ ?"

"ಜಂಬ ಬಂದರೂ ತೋರಿಸಿಕೊಳ್ಳುವುದಿಲ್ಲ ಎಂದು ಮಾತು ಕೊಡುತ್ತೇನೆ."

"ನಿನ್ನ ಯಜಮಾನರು ಅಪೋಲೋ ದೇವರಿದ್ದಹಾಗಿದ್ದಾರೆ ಎಂದು ಹೇಳಿದರು."

ಆ ಪ್ರಶಸ್ತಿ ಸಂಜೀವನಿಗೆ ಆಪ್ಯಾಯಮಾನವಾಯಿತು.

"ನನ್ನ ಫೋಟೋಗಳನ್ನು ನೋಡಿ ಏಕೆ ನಗುತ್ತಿದ್ದಿರಿ ?"

"ನಿನ್ನ ಪಂಜಾಬಿ ಉಡುಪಿನ ಚಿತ್ರ ನೋಡಿ ನಗು ಬಂದಿತು - ಸಿನೀಮಾ ಪ್ರಭಾವವೆಂದು ಕಾಣುತ್ತದೆ."

"ನನ್ನ ಹುಚ್ಚುಗಳಲ್ಲಿ ಅದೂ ಒಂದು."

"ಹೂವು - ಸಿನೀಮಾ - ಫೋಟೋ ಮೂರಾಯಿತು, ಇನ್ನೆಷ್ಟು ಇದೆ ಈಗಲೇ ಹೇಳಿಬಿಡು."

"ಇನ್ನೊಂದು ದೊಡ್ಡ ಹುಚ್ಚು ಇದೆಯಲ್ಲಾ !"

"ಯಾವದದು ?"

"ನೀವು !"

ಉಪಾಹಾರ ಸಾಕೆಂದು ಸಂಜೀವ ಕಾಫಿ ಕೇಳಿದ. ಅವನಿಗೆ ಕಾಫಿಕೊಟ್ಟು ತಾನೂ ಕುಡಿದು ಪುಷ್ಪ ಟ್ರೇಗಳನ್ನು ಒಳಗೆ ಇಟ್ಟುಬರಲು ಎದ್ದಳು. ಸಂಜೀವ ಮೆಲ್ಲನೆ

''ಸ್ವೀಟ್ - ಹೊಸ ಸೀರೆ ಉಟ್ಟುಕೊಳ್ಳುವುದಿಲ್ಲವೇ ?" ಎಂದ

''ಉಟ್ಟುಕೊಳ್ಳುತ್ತೇನೆ - ಯಾವದು ಉಟ್ಟುಕೊಳ್ಳಲಿ."

''ಮೈಸೂರ್ ಸಿಲ್ಕ್ ಸೀರೆ ಒಪ್ಪಿಗೆಯಾಯಿತೇ ?"

''ಮಂದ ಹಸುರಿನ ಮೈಸೂರ್ ಸಿಲ್ಕ್ ಸೀರೆ ಉಡಬೇಕೆಂದು ಬಹಳ ದಿವಸಗಳಿಂದ ಬಯಸುತ್ತಿದ್ದೆ.''

''ಅದನ್ನೇ ಉಟ್ಟುಕೋ ''

ಎಂದು ಹೇಳಿ ಅವಳು ಬರುವುದರೊಳಗಾಗಿ ಕೋಟಿನ ಕಿಸೆಯಲ್ಲಿ ಸಂಪುಟದಲ್ಲಿದ್ದ ಗಡಿಯಾರವನ್ನು ತೆಗೆದು ಕೈಯಲ್ಲಿ ಮುಚ್ಚಿಟ್ಟುಕೊಂಡ.

ಸ್ವಲ್ಪಕಾಲ ಕಳೆಯಿತು. ಪುಷ್ಪ ಸೀರೆ ಬದಲಾಯಿಸಿಕೊಂಡು, ಮೈಸೂರು ಸಿಲ್ಕ್ ಸೀರೆ ಧರಿಸಿ ತಲೆತುಂಬ ಹೂಮುಡಿದುಕೊಂಡು ಬಂದಳು. ಸಂಜೀವ ಅವಳನ್ನೇ ಕಣ್ಣು ತುಂಬುವಂತೆ ನೋಡಿ ಹತ್ತಿರ ಕರೆದು

''ಕಣ್ಣು ಮುಚ್ಚಿಕೋ ಡಾರ್ಲಿಂಗ್.''

''ಏಕೆ ''

''ದಯೆಯಿಟ್ಟು ಪ್ರಶ್ನೆ ಕೇಳಬೇಡ.''

''ಪುಷ್ಪ ಕಣ್ಣುಮುಚ್ಚಿಕೊಳ್ಳುತ್ತಲೇ ಸಂಜೀವ ಅವಳ ಎಡಗೈ ಹಿಡಿದು ಗಡಿಯಾರ ಕಟ್ಟಿದ. ಪುಷ್ಪ ಕಣ್ಣುಬಿಟ್ಟು ನೋಡಿ ತನ್ನಲ್ಲಿ ಉಕ್ಕುತ್ತಿದ್ದ ಸಂತೋಷವನ್ನು

''ಓ! ವಂಡರ್‌ಫುಲ್ (Oh ! Wonderful !!) "

ಎಂದು ಸೂಚಿಸಿ ಸಂಜೀವನನ್ನು ಬಲವಾಗಿ ಅಪ್ಪಿದಳು.

''ಕೈಗೊಪ್ಪುತ್ತದೆಯೇ ?''

''ಮನಸ್ಸು ತುಂಬಿರುವಾಗ ಬಾಯಿಕಟ್ಟುತ್ತದಂತೆ - ಏನು ಹೇಳಲಿ ? ಈಗಲೇ ಗಡಿಯಾರ ತರುವುದಕ್ಕೆ ಅವಸರವಾಗಿದ್ದದ್ದೇನು ?''

"ನಿನ್ನ ಟೈಮ್ ಸ್ಪಿರಿಟ್ಟಿಗೆ (Time - Spirit) ಮೆಚ್ಚುಗೆ ವ್ಯಕ್ತವಾಡ ಬೇಕಾದುದು ತನ್ನ ಕರ್ತವ್ಯ."

ಪುಷ್ಪ ಮತ್ತೆ ಹೊರಗೆ ಹೊರಡಲನುವಾಗಲು ಸಂಜೀವ ಅವಳ ಕೈಹಿಡಿದು

"ಪುನಃ ಹೊರಟಿರುವೆಯಲ್ಲಾ"

"ಬೇಗ ಬಂದು ಬಿಡುತ್ತೇನೆ. ಮಮ್ಮಿ ಕನಕಮ್ಮನವರ ಮನೆಗೆ ಹೊರಟಿದ್ದಾರೆ. ಅವರನ್ನು ಕಳಿಸಿ ಬಾಗಿಲು ಹಾಕಿಕೊಂಡು ಬರುತ್ತೇನೆ."

"ಕನಕಮ್ಮ ಯಾರು?"

"ಆಸ್ಪತ್ರೆಯಲ್ಲಿ ನರ್ಸ್ ಆಗಿದ್ದಾರೆ. ನನ್ನ ತಾಯಿಗೆ ತುಂಬ ಸ್ನೇಹಿತರು."

"ಮಮ್ಮಿ ತುಂಬ ಇಂಗಿತಜ್ಞರು" ಎಂದ.

ಪುಷ್ಪ ಹೊರಗೆ ಹೋದ ಸ್ವಲ್ಪ ಹೊತ್ತಿನಲ್ಲಿ ಹೆಲನ್ ಅಮ್ಮ ರೂಮ್ ಬಾಗಿಲಿನಲ್ಲಿ ನಿಂತುಕೊಂಡು

"ಸ್ವಲ್ಪ ಹೊರಗೆ ಹೋಗಿಬರುತ್ತೇನೆ. ನಾನು ಬರುವವರೆಗೆ ಇರುವಿರಷ್ಟೆ."

"ಇರುತ್ತೇನೆ" ಎಂದು ಸಂಜೀವ ಹೇಳಿದ.

"ಸಂಕೋಚಪಟ್ಟುಕೊಳ್ಳಬೇಡಿ - ನಿಮ್ಮ ಮನೆ ಎಂದು ತಿಳಿದುಕೊಳ್ಳಿ."

"ಹಾಗೇ ತಿಳಿದುಕೊಂಡಿದ್ದೇನಮ್ಮ."

ಹೆಲನ್ ಅಮ್ಮ ತಾನು ಉಡುಗೊರೆ ಕೊಟ್ಟಿದ್ದ ಧರ್ಮಾವರದ ಸೀರೆ ಉಟ್ಟಿದ್ದುದನ್ನು ಸಂಜೀವ ಗಮನಿಸದಿರಲಿಲ್ಲ. ಅವರು ಹೋಗುವ ಮುನ್ನ ಮಗಳನ್ನು ಕರೆದು,

"ಅವರಿಗೆ ಬೇಕಾದರೆ ಇನ್ನೊಂದು ಸಲ ಕಾಫಿ ಮಾಡಿಕೊಡು. ನಾನೂ ಬೇಗ ಬಂದು ಬಿಡುತ್ತೇನೆ" ಎಂದು ಹೇಳಿ ಹೋದರು.

ಪುಷ್ಪ ಹೊರಬಾಗಿಲು ಚಿಲಕ ಹಾಕಿಕೊಂಡು ವೆರಾಂಡಾ ದೀಪ ಹಚ್ಚಿಸಿ, ರೂಮಿನೊಳಗೆ ಬಿಟ್ಟಬಾಣದಂತೆ ಬಂದವಳೇ ಕುರ್ಚಿಯ ಮೇಲೆ ಕುಳಿತಿದ್ದ ಸಂಜೀವನ ತೊಡೆಯೇರಿ

"ಗಡಿಯಾರ ಮಮ್ಮಿಗೆ ತೋರಿಸಿದೆ."

"ಏನು ಹೇಳಿದರು?"

"ಅವರನ್ನು ಸುಲಿಯುವುದಕ್ಕೆ ಆರಂಭಿಸಿದೆಯಲ್ಲಾ ಎಂದರು."

"ಇದರಲ್ಲಿ ಸುಲಿಗೆ ಎಲ್ಲಿಂದ ಬಂತು."

"ಮಮ್ಮಿ ಉಟ್ಟುಕೊಂಡಿಸ್ದ ಸೀರೆ ನೋಡಿದಿರಾ ?"

"ನೋಡಿವೆ - ಹೊಸ ಸೀರೆ ಉಟ್ಟುಕೊಳ್ಳಿ ಎಂದು ನೀನೇ ಹೇಳಿದೆ ಯೇನೋ ?"

"ಛೆ! ಛೆ! ನಾನು ಏಕೆ ಹೇಳಲಿ. ಅವರೇ 'ನನ್ನ ಅಳಿಯಂದಿರು ಪ್ರೀತಿಯಿಂದ ತಂದುಕೊಟ್ಟಿರುವ ಸೀರೆ ನಾನು ಉಟ್ಟುಕೊಳ್ಳಬೇಡವೇ ಎಂದು ಹೇಳಿ ಉಟ್ಟುಕೊಂಡು, ನಿಮಗೆ ತೋರಿಸಲೆಂದೇ ಬಾಗಿಲುವರೆಗೆ ಬಂದು ಹೇಳಿ ಹೋದವು. - ಏನು ಹೇಳಿದರು ?"

"ನೀನು ಕೇಳಲಿಲ್ಲವೇ ?"

"ಇಲ್ಲ - ನಾನು ಒಳಗಡೆ ಹೋಗಿದ್ದೆ."

"'ಸಂಕೋಚಪಟ್ಟುಕೊಳ್ಳಬೇಡಿ - ನಿಮ್ಮ ಮನೆ ಎಂದು ತಿಳಿದುಕೊಳ್ಳಿ' ಎಂದು ಹೇಳಿದರು."

"ನಿಮ್ಮ ಮನೆ ಎಂದು ತಿಳಿದುಕೊಳ್ಳುವಿರಾ ದೊರೆ"

"ತಿಳಿದುಕೊಂಡೇ ಇರುವೆನಲ್ಲಾ. ಇಲ್ಲಿಗೆ ಬಂದ ಸ್ವಲ್ಪ ಹೊತ್ತಿನಲ್ಲೇ ಈ ರೂಮನ್ನು ನನ್ನದು ಮಾಡಿಕೊಂಡಿರುವೆ - ಇಲ್ಲಿರುವ ಪ್ರತಿಯೊಂದು ವಸ್ತುವೂ ನನ್ನ ಮನಸ್ಸಿನ ಮೇಲೆ ಚಿತ್ರಿತವಾಗಿವೆ. — ನಿನ್ನ ಫರ್ನಿಚರ್ ಬಹಳ ಚೆನ್ನಾಗಿವೆ ಪುಷ್ಪ. ಇವುಗಳನ್ನು ಹೊಸದಾಗಿ ಮಾಡಿಸಿದೆಯಾ ?"

"ನಾನೆಲ್ಲಿ ಮಾಡಿಸುವುದು. ನನ್ನ ಚಿಕ್ಕಪ್ಪ ಕೆ. ಜಿ. ಎಫ್‌ನಲ್ಲಿ (Kolar Gold Fields) ಗಣಿ ಕಂಟ್ರಾಕ್ಟು ಮಾಡುತ್ತಿದ್ದಾರೆ. ಕೆಲವು ತಿಂಗಳ ಹಿಂದೆ ಅವರು ಇಲ್ಲಿಗೆ ಬಂದಿದ್ದಾಗ್ಗೆ ಇವುಗಳನ್ನೆಲ್ಲಾ ತೆಗೆದುಕೊಟ್ಟರು. ಅವರಿಗೆ ಮಕ್ಕಳಿಲ್ಲ - ನನ್ನ ಕಂಡರೆ ತುಂಬ ಪ್ರೀತಿ."

"ನಿನ್ನ ಕಂಡರೆ ಎಲ್ಲರೂ ಪ್ರೀತಿಸುತ್ತಾರೆ ಪುಷ್ಪ."

"ನಿಮ್ಮೊಬ್ಬರನ್ನು ಬಿಟ್ಟು . . . ."

ಎಂದು ಅವನ ತೊಡೆಯಿಂದ ಇಳಿದು, ಕೈಹಿಡಿದು ಅವನನ್ನು ಮಂಚದ ಬಳಿಗೆ ಎಳೆದೊಯ್ದಳು.

ಪುಷ್ಪ, ರೂಮ್ ಬಿಟ್ಟು ಹೊರಗೆ ಬಂದಾಗ ಎಂಟು ಗಂಟೆ ಹೊಡೆದಿತ್ತು. 'ಮಮ್ಮೀ ಇನ್ನೂ ಏಕೆ ಬರಲಿಲ್ಲ' ಎಂದುಕೊಂಡು ಮನೆಗೆ ಹೋಗಿ ಸ್ಟೌವ್

ಹೊತ್ತಿಸಿ ಕಾಫಿಗೆ ನೀರು ಇಟ್ಟಳು ನೀರು ಮರಳುವಷ್ಟರಲ್ಲಿ ಜಡೆ ಬಿಚ್ಚಿ ಮತ್ತೆ ಬಾಚಿಕೊಂಡು, ನಲುಗಿ ಹೋಗಿದ್ದ ಹೂವನ್ನು ಕಿತ್ತೆಸೆದು ಹೊಸ ಹೂವು ಮುಡಿದಳು.

ಹೆಲನ್ ಅಮ್ಮ ಬಂದು ಬಾಗಿಲು ತಟ್ಟಿದಳು. ಪುಷ್ಪನೇ ಬಂದು ಬಾಗಿಲು ತೆಗೆಯಲು ಇಬ್ಬರೂ ಅಡಿಗೆಯ ಮನೆಗೆ ಬಂದರು. ಹೆಲನ್ ಅಮ್ಮ ಮಗಳ ಮುಖದಲ್ಲಿ ಕಂಡುಬಂದ ಬದಲಾವಣೆ ಗ್ರಹಿಸಿ

"ಹೊರಟುಹೋದರೇ" ಎಂದು ಕೇಳಿದಳು.

"ಇಲ್ಲ ಇದ್ದಾರೆ."

"ಕಾಫಿ ಮಾಡುತ್ತಿದ್ದೆಯಾ ?"

"ಹೂ."

"ನನಗೂ ಸ್ವಲ್ಪ ಕೊಡು."

"ನಿನ್ನ ಲೆಕ್ಕ ಹಿಡಿದೇ ಡಿಕಾಕ್ಷನ್ (Decoction) ಹಾಕಿದ್ದೇನೆ ಮಮ್ಮೀ."

"ಮದುವೆ ವಿಷಯವೇನಾದರೂ ಮಾತನಾಡಿದೆಯಾ ?"

"ಇಲ್ಲ. ಅದನ್ನು ನಾನಾಗಿಯೇ ಹೇಗೆ ಪ್ರಸ್ತಾಪಮಾಡಲಿ."

"ಸೂಕ್ಷ್ಮವಾಗಿ ಸೂಚಿಸಿಬಿಡು. ಬೇಗ ಸಿವಿಲ್ ಮ್ಯಾರೇಜ್ (Civil Marriage) ಆಯಿತು ಅನ್ನಿಸಿಬಿಡುವುದೊಳ್ಳೆಯದು."

"ಅವರಲ್ಲಿ ಅಪನಂಬಿಕೆಯೇ ಮಮ್ಮೀ"

"ಅಪನಂಬಿಕೆ ಮಾತಿಗಲ್ಲವೇ ಹುಚ್ಚು ಹುಡುಗಿ - ಯಾರಾದರೂ ಆಗದವರು ಅಡ್ಡಬಂದರೆ ಮುಂದೆ ಕಷ್ಟವಾಗುತ್ತದೆ - ಇಂಟರ್ - ಕಮ್ಯುನಲ್ ಮ್ಯಾರೇಜಸ್ (Inter – Communal marriages) ಸುಸೂತ್ರವಾಗಿ ಆಗುವ ಕಾಲವಿನ್ನೂ ಬಂದಿಲ್ಲ."

ಪುಷ್ಪ ಹಾಲು ಬಿಸಿಮಾಡಿ ಮೂರು ಕಪ್ಪುಗಳಿಗೆ ಕಾಫಿ ಸರಿಮಾಡಿ, ಒಂದನ್ನು ತಾಯಿಯ ಕೈಗಿತ್ತು, ಉಳಿದಿದ್ದ ಎರಡು ಕಪ್ಪುಗಳನ್ನು ಕೈಯಲ್ಲಿ ಹಿಡಿದಳು. ಹೆಲನ್ ಅಮ್ಮ ಕಾಫಿ ಸವಿಯುತ್ತಾ

"ಈಗ ಮನೆಗೆ ಹೋಗುತ್ತಾರಂತೇನು ?"

"ನಾನು ಬಿಟ್ಟರಲ್ಲವೇ ಅವರು ಹೋಗುವುದು."

"ಇಲ್ಲೇ ಊಟಕ್ಕೆಬ್ಬಿಸು - ಬೇಗ ಅನ್ನ ಸಾರು ಮಾಡಿಬಿಡುತ್ತೇನೆ."

ಪುಷ್ಪ ಆನಂದತುಂದಿಲಳಾಗಿ ಕಾಫಿ ಕಪ್ಪುಗಳನ್ನು ಹಿಡಿದು ರೂಮಿಗೆ ಬಂದಳು.

"ಎಷ್ಟು ಹೊತ್ತು ಹೋಗಿಬಿಟ್ಟ ಡಾರ್ಲಿಂಗ್"

"ನಿಮಗೆ ಕಾಫಿ ಮಾಡಲು ಹೋದೆ - ಅಷ್ಟರಲ್ಲಿ ಮಮ್ಮೀ ಬಂದರು."

ಅವನ ಪಕ್ಕದಲ್ಲಿ ಕುಳಿತುಕೊಂಡೇ ತಾನೇ ಕಾಫಿ ಕುಡಿಸುತ್ತಾ

"ನಿಮ್ಮನ್ನು ಇಲ್ಲೇ ಊಟಕ್ಕೆಬ್ಬಿಸಲು ಮಮ್ಮೀ ಹೇಳಿದ್ದಾರೆ."

"ಇಷ್ಟು ತಿಂಡಿತಿಂದ ಮೇಲೆ ಇನ್ನು ಊಟವೇ ?"

"ಮಹಾ ತಿಂದಿರಿ - ಎಲ್ಲಾ ನನಗೇ ಗಿಡುಗಿಬಿಟ್ಟು . . . . ."

"ಸುಳ್ಳು ಹೇಳಿದರೂ ದಿಟದ ತಲೆಯಮೇಲೆ ಹೊಡೆದ ಹಾಗೆ ಹೇಳುತ್ತೀ ಸ್ವೀಟ್"

"ಹೌದು ನಾನು ಸುಳ್ಳುಗಾತಿ."

"ಕೋಪಬಂತೇನು ? ಕೋಪ ಮಾಡಿಕೊಳ್ಳುವುದಕ್ಕೆ, ವ್ಯಾಜ್ಯ ಕಾಯುವುದಕ್ಕೆ ಮುಂದೆ ಬಹಳ ಅವಕಾಶ - ಅನುಕೂಲವಿದೆ."

"ನೀವು ನನ್ನ ಮೇಲೆ ಕೋಪಮಾಡಿಕೊಳ್ಳುವಿರಾ ?"

"ಏಕೆ ?"

"ಏತಕ್ಕಾದರೂ . . . ."

"ನಿಷ್ಕಾರಣವಾಗಿ ಕೋಪಮಾಡಿಕೊಳ್ಳುವುದಿಲ್ಲ ಎಂದು ಹೇಳುತ್ತೇನೆ."

"ಸಕಾರಣವಾಗಿಯೂ ಕೋಪಮಾಡಿಕೊಳ್ಳಬಾರದು ದೊರೆ. ಅದು ನಮ್ಮ ಜನ್ಮಸಿದ್ಧಹಕ್ಕು."

"ಇದು ಸಮತೆಯಕಾಲ - ಅದರಲ್ಲಿಯೂ ಇಬ್ಬರಿಗೂ ಸಮಾನವಾದ ಹಕ್ಕು."

ಸಂಜೀವನ ವಿಪರೀತವ್ಯಾಖ್ಯೆ ಕೇಳಿ ಪುಷ್ಪನಿಗೆ ಹಿಡಿಸಲಾರದಷ್ಟು ನಗೆ ಬಂದಿತು.

"ಕೊನೆಗೂ ನಾನು ಕೇಳಿದುದಕ್ಕೆ ನೀವು ಉತ್ತರ ಹೇಳಲಿಲ್ಲ."

"ಏನು ಕೇಳಿದೆ."

"ಊಟದ- ವಿಷಯ."

"ಕಾಫಿ ಕುಡಿದಾಯಿತು . ಹೋಗು ಎಂದು ಹೇಳುವೆಯೇನು ?"

"ಎಂದೆಂದಿಗೂ ಆ ಮಾತು ನನ್ನ ಬಾಯಿಂದ ಬರುವುದಿಲ್ಲ ದೊರೆ. ನಿಮ್ಮನ್ನು ಬಿಟ್ಟು ಅರಗಳಿಗೆ ನಾನಿರಲಾರೆ."

ಸಂಜೀವ ಅವಳನ್ನು ಬರಸೆಳೆದು ಹತ್ತಿರಕೂಡಿಸಿಕೊಂಡ.

"ನೀವು ಹಾಸ್ಯಮಾಡುವುದಿಲ್ಲವೆಂದು ಮಾತುಕೊಟ್ಟರೆ ಇನ್ನೊಂದು 'ವಿಷಯ ಕೇಳಬೇಕೆಂದಿದ್ದೇನೆ."

"ಹಾಸ್ಯಮಾಡದಿರಲು ಪ್ರಯತ್ನಿಸುತ್ತೇನೆ - ಹೇಳು."

"ಹೋಗಿ - ನಾನು ಹೇಳುವುದೇ ಇಲ್ಲ"

"ಹೇಳು - ಖಂಡಿತವಾಗಿ ಹಾಸ್ಯಮಾಡುವುದಿಲ್ಲ."

"ಮದುವೇಗೆ ನನ್ನ ಗ್ಯಾಂಗ್ (Gang) ಕರೆಸಿಕೊಳ್ಳಬೇಕು."

"ನಿನ್ನ ಗ್ಯಾಂಗಿನಲ್ಲಿ ಯಾರು ಯಾರಿದ್ದಾರೆ."

"ಸುನಂದಾ, ರಾಜಮಣಿ, ಶಾಂತಾ. ಜತೆಯಲ್ಲಿರುವವರೆಗೆ ನಾವು ನಾಯಿ ಬೆಕ್ಕುಗಳ ಹಾಗೆ ಜಗಳವಾಡುತ್ತಿದ್ದೆವು. ಈಗ ಒಬ್ಬೊಬ್ಬರು ಒಂದೊಂದು ಕಡೆ."

"ಸುನಂದಾ ಬೆಂಗಳೂರಿನಲ್ಲಿದ್ದಾರೆ - ಉಳಿದವರು !"

"ಶಾಂತಾ ಬೊಂಬಾಯಿಯಲ್ಲಿದ್ದಾಳೆ - ರಾಜಮಣಿ ತುಮಕೂರಿನಲ್ಲಿ ದ್ದಾಳೆ."

"ಆಗಲಿ ಡಾರ್ಲಿಂಗ್ - ಹದಿನೈದು ದಿವಸ ಮುಂಚಿತವಾಗಿಯೇ ಅವರಿಗೆ ಕಾಗದ ಬರೆದು ಕರೆಸಿಕೊಳ್ಳೋಣ"

"ಲಗ್ನ ನಿಶ್ಚಯಿಸದೆಯೇ ಕರೆಸಿಕೊಳ್ಳುವುದು ಹೇಗೆ ?"

"ಗುರುಹಿರಿಯರ ಸಮ್ಮತಿ ಪಡೆದು ತಾನೇ ಲಗ್ನ ನಿಶ್ಚಯಿಸಬೇಕು."

ಪುಷ್ಪ ಸ್ವಲ್ಪ ಗಾಬರಿಗೊಂಡು

"ನೀವು ಯಾವ ಗುರುಹಿರಿಯರ ಸಮ್ಮತಿ ಪಡೆಯಬೇಕು."

"ಅದೇ ವಿಷಯ ನಾನೂ ನಿನಗೆ ಹೇಳಬೇಕೆಂದಿದ್ದೆ, ನಿನ್ನ ಬಾಸಾ ಫ್ರೆಂಡ್ ಸುನಂದಮ್ಮನ ಅಕ್ಕ ಜಾನಕಮ್ಮ ನನ್ನ ಅತ್ತಿಗೆಯಾಗಬೇಕು ಗೊತ್ತೇ ?"

"ಗೊತ್ತು - ಸುನೂ ಹೇಳಿದ್ದಳು."

"ನಾಳೆ ಅವರ ಮನೆಗೆ ಹೋಗಿ ಅವರ ಕಿವಿಯ ಮೇಲೆ ಒಂದು ಮಾತು ಹಾಕಿ ಬರೋಣ."

"ಅವರು ಏನೋ ಒಂದು ತರಹಾರಿ! ಸುನಂದನನ್ನು ನೋಡುವುದಕ್ಕೆ ನಾವು'ಅವರ ಮನೆಗೆ ಹೋದರೂ ನನ್ನನ್ನು ಮಾತೇ ಆಡಿಸುತ್ತಿರಲಿಲ್ಲ."

"ಅವರೂ ಬಹಳ ನೊಂದಿದ್ದಾರೆ ಪುಷ್ಪ. ಪ್ರಪಂಚವೇ ಅವರಿಗೆ ಬೇಸರ ವಾಗಿದೆ."

"ನಾನೂ ಬರಬೇಕೇ ?"

"ನೀನು ಬರದೆ . . . ."

"ನಾಳೆ ನನ್ನ ಕೆಲಸವೊಂದು ನೀವು ಮಾಡುವ ಹಾಗಿದ್ದರೆ ಬರುತ್ತೇನೆ."

"ಹೇಳು. ಅದಕ್ಕೆ ಕರಾರುಗಳೇತಕ್ಕೆ ?"

"ನೀವೂ ನಾನೂ ಇರುವ ಫೋಟೋ ಒಂದೂ ನನ್ನಲಿಲ್ಲ."

"ಫೋಟೋ ತೆಗೆಸಬೇಕು ತಾನೆ."

"ಹೌದು. ಹಾಗೇ ನೀವು ಒಬ್ಬರೇ ಇರುವ ಫೋಟೋನೂ ಬೇಕು."

"ಇಷ್ಟೇ ತಾನೆ - ಆಗಬಹುದು."

"ಸ್ಟುಡಿಯೋಕ್ಕೆ ಎಷ್ಟು ಹೊತ್ತಿಗೆ ಹೋಗೋಣ."

"ಮೂರು ಗಂಟೆಗೆ ಮನೆಬಿಟ್ಟು ಅತ್ತಿಗೆಮ್ಮನವರನ್ನು ನೋಡಿಕೊಂಡು ಸ್ಟುಡಿಯೋಗೆ ಹೋಗೋಣ. ಟ್ಯಾಕ್ಸಿ ಮಾಡಿಕೊಂಡು ಬರುತ್ತೇನೆ - ಸಂಜೆ ಎಲ್ಲಿಯಾದರೂ ಡ್ರೈವ್ ಹೋಗಿಬರಬಹುದು."

"ನಮ್ಮದೇ ಒಂದು ಕಾರ್ ಇದ್ದರೆ ಎಷ್ಟು ಚೆನ್ನ."

"ತೆಗೆದುಕೊಳ್ಳೋಣ ಸುಮ್ಮನಿರು - ಕಾರಿನದೇನು ದೊಡ್ಡ ವಿಷಯ."

ಹೆಲನ್ ಅಮ್ಮ ಒಳಗಿನಿಂದ ಮಗಳನ್ನು ಕೂಗಿದರು. ಪುಷ್ಪ ಒಳಗೆ ಹೋಗಿ ಬಂದು ಸಂಜೀವನನ್ನೆಬ್ಬಿಸಿ ಊಟಕ್ಕೆ ಕರೆದೊಯ್ದಳು.

ಹಜಾರದಲ್ಲಿ ಮೇಜಿನ ಮೇಲೆ ಊಟದ ವ್ಯವಸ್ಥೆಮಾಡಲಾಗಿತ್ತು. ಅನ್ನ, ಸಾರು, ಆಲುಗೆಡ್ಡೆ ಉಪ್ಪೇರಿ, ಉಪ್ಪಿನಕಾಯಿ, ಹಾಲು ಮೊಸರು ಗಳೆಲ್ಲವನ್ನೂ ಪ್ರತ್ಯೇಕ ಪಿಂಗಾಣಿ ಪಾತ್ರೆಗಳಲ್ಲಿ ಇಡಲಾಗಿತ್ತು. ಸಂಜೀವ, ಪುಷ್ಪ ಇಬ್ಬರೂ ಕುಳಿತು ತಾವೇ ಬಡಿಸಿಕೊಂಡು ಊಟ ಮುಗಿಸಿದರು.

ಸಂಜೀವ ಊಟ ಮುಗಿಸಿಕೊಂಡು ರೂಮಿಗೆ ಬಂದು ಕುಳಿತು ಒಂದು ಸಿಗರೇಟ್ ಹಚ್ಚಿದ. ತಾಯಿಯ ಊಟ ಮುಗಿಯುವವರೆಗೆ ಪುಷ್ಪ ಒಳಗಿದ್ದು, ಎಲಡಿಕೆಯ ತಟ್ಟೆ, ಹಾಲಿನ ಲೋಟ ಹಿಡಿದು ಒಳಕ್ಕೆ ಬಂದಳು.

## ೧೧

ಇಂದಿರಮ್ಮನವರ ಹೆಸರಿಗೆ ಕೆಂಪು, ನೀಲಿಬಣ್ಣಗಳ ಚೌಕಟ್ಟು ಹಾಕಿದ್ದ 'ಏರ್ ಮೇಲ್' (Air Mail) ಕಾಗದವೂ, ಜಾನಕಮ್ಮನ ಹೆಸರಿಗೆ ಹಳದಿ ಹಚ್ಚಿದ ಒಂದು ಲಗ್ನಪತ್ರಿಕೆಯೂ ಬಂದಿತು. ಜಾನಕಮ್ಮ ಸಡಗರದಿಂದ ತಾಯಿಯ ಬಳಿಗೆ ಕಾಗದವನ್ನೊಯ್ದು

"ಏರ್ ಮೇಲ್ ಕಾಗದ - ನಿನ್ನ ಹೆಸರಿಗಮ್ಮ - ಅಣ್ಣನಿಂದ ಬಂದಿರ ಬಹುದು."

"ಒಡೆದು ಓದು ಜಾನಕಿ" ಎಂದರು.

ಜಾನಕಿ ಒಡೆದು ಓದಿದಳು. ಅವಳ ಊಹೆ ಸರಿಯಾಗಿಯೇ ಇತ್ತು. ಚಂದ್ರಶೇಖರ ಮುಂಬಯಿಯಿಂದ ಕಾಗದ ಬರೆದಿದ್ದ. ನಾಲ್ಕೇ ಪಂಕ್ತಿಗಳು. 'ಮುಂದಿನ ಶನಿವಾರ ಬರುತ್ತೇನೆ. ಹೆಚ್ಚು ದಿನ ನಿಲ್ಲಲು ಸಾಧ್ಯವಿಲ್ಲ' ಸಂತೋಷ ತಡೆಯಲಾರದೆ ಇಂದಿರಮ್ಮನವರು ಕಣ್ಣೀರಿಡುತ್ತಾ.

"ಅವರಿರುವವರೆಗೆ ಮಗ ಬಂದಾನೆ ಎಂದು ತಪಸ್ಸು ಮಾಡಿದರು. ಮಗ ಈಗಲಾದರೂ ಬಂದನಲ್ಲಾ."

"ಅವನು ಒಂದೆರಡು ದಿನವೂ ನಿಲ್ಲುವ ಹಾಗೆ ಕಾಣುವುದಿಲ್ಲವಮ್ಮಾ."

"ಶನಿವಾರದ ವೇಳೆಗೆ ಇಲ್ಲಿಗೆ ಬಾ ಎಂದು ಸುನಂದನಿಗೆ ಕಾಗದ ಬರೆ ಜಾನಕಿ. ಮಕ್ಕಳನ್ನೆಲ್ಲಾ ಒಟ್ಟಿಗೆ ಕಣ್ಣಾತುಂಬ ನೋಡಿಬಿಡುತ್ತೇನೆ."

"ನೀನು ಹೀಗೆ ಮಾತನಾಡಿದರೆ ನನ್ನ ಮನಸ್ಸಿಗೆ ತುಂಬ ನೋವಾಗುವುದಮ್ಮ."

"ನನ್ನ ಕಾಲವೂ ಮುಗಿಯುತ್ತ ಬಂತು ಜಾನಕಿ. ನಿನ್ನ ಸಂಸಾರ ಒಂದು ನೇರವಾಗಿಬಿಟ್ಟಿದ್ದರೆ ನಿರಾತಂಕವಾಗಿ ಪ್ರಾಣಬಿಡುತ್ತಿದ್ದೆ. – ಆ ಕಾಗದ ಯಾವದು ? ಯಾರದೋ ಲಗ್ನಪತ್ರಿಕೆಯಿದ್ದ ಹಾಗಿದೆ."

ಕೈಯಲ್ಲಿದ್ದ ಕಾಗದವನ್ನು ಜಾನಕಿ ಮರೆತೇ ಇದ್ದಳು. ತಾಯಿ ಜ್ಞಾಪಿಸುತ್ತಲು ಅದನ್ನು ನೋಡಿದಳು. ಅವಳ ಎದೆ ಧಸಕ್ಕೆಂದಿತು. 'ಅಮ್ಮಾ....' ಎಂದು ಚೀರಿ ಲಗ್ನಪತ್ರಿಕೆಯನ್ನು ತಾಯಿಯ ಕೈಯಲ್ಲಿಟ್ಟಳು.

ಇಂದಿರಮ್ಮನವರ ಬಾಯಲ್ಲಿಯೂ ಮಾತು ಹೊರಡಲಿಲ್ಲ. ಜಾನಕಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು.

"ಇದೂ ಆಗಿಹೋಯಿತೇ ?" ಎಂದರು.

"ಇಸತ್ತೇ ಮದುವೆ - ಎಂಥಾ ಮೋಸ - ಎಂಥಾ ಅನ್ಯಾಯ."

"ವಿಧಿಲಿಖಿತಕ್ಕೆ ಯಾರೇನು ಮಾಡಲು ಸಾಧ್ಯ ಜಾನಕಿ."

"ವಿಧಿಗಷ್ಟು ಬೆಂಕಿಯಿಟ್ಟರು."

"ಈಗ ವಿಧಿ ನಮಗೆ ಬೆಂಕಿಯಿಟ್ಟಿದೆ."

"ಅವರ ದಾರಿ ಅವರು ನೋಡಿಕೊಂಡರು. ನಿನ್ನ - ನಿನ್ನ ಮಕ್ಕಳ ವಿಷಯ ಏನುಮಾಡಿದ್ದಾರೆ ಅದನ್ನಾದರೂ ತಿಳಿದುಕೊಳ್ಳಮ್ಮ."

"ಅವರದು ಕುರುಡು ಕವಡೆ ಮುಟ್ಟುವುದಕ್ಕೂ ನನಗಿಷ್ಟವಿಲ್ಲ."

"ನಾಳೆ ನಿನ್ನ ಮಕ್ಕಳೇ ನಿನ್ನ ಮೇಲೆ ತಿರುಗಿಬೀಳಬಾರದು ಜಾನಕಿ. ಗಂಡ ಹೆಂಡಿರ ಜಗಳದಲ್ಲಿ ಮಕ್ಕಳು ಮತ್ತಗಾಗಬಾರದು. ನಿನ್ನ ಯಜಮಾನರ ಲಾಯರು ಇದ್ದಾರಲ್ಲಾ ನಂಜನಗೂಡಿನಲ್ಲಿ ಅವರಿಗೊಂದು ಕಾಗದ ಬರೆ."

ತಾಯಿಯ ಮಾತನ್ನು ಒಪ್ಪಿಕೊಳ್ಳದೆ ಜಾನಕಿಗೆ ನಿರ್ವಾಹವೇ ಇರಲಿಲ್ಲ.

"ಜಗದೀಶನನ್ನು ಕರೆದುಕೊಂಡು ನಾನೇ ಒಂದು ದಿನ ನಂಜನಗೂಡಿಗೆ ಹೋಗಿಬರಲೇ ?"

"ಮೊದಲು ಕಾಗದ ಬರೆ. ಅವರು ಬಾರೆಂದರೆ ಹೋಗಿ ಬಾ."

ಎಂದರು. ಜಾನಕಿ ತನ್ನ ರೂಮಿಗೆ ಹೋಗಿ ಕಾಗದ ಬರೆಯುವುದಕ್ಕೆ ಕುಳಿತಳು.

ಮಗನ ಸ್ವಾಗತಕ್ಕೆ ಮಾಡಬೇಕಾದ ವ್ಯವಸ್ಥೆಯನ್ನು ಯೋಚಿಸುತ್ತ ಇಂದಿರಮ್ಮನವರು ಹೊರಗೇ ನಿಂತರು. 'ಮನೆಗೆ ಮೊದಲು ಸುಣ್ಣ ಬಣ್ಣ ಮಾಡಿಸಬೇಕು - ಯಜಮಾನರ ರೂಮ್ ಸ್ವಚ್ಛಮಾಡಿಸಿ, ಚಂದ್ರಶೇಖರ ಇಳಿದುಕೊಳ್ಳಲು ಅನುಕೂಲಮಾಡಬೇಕು. ಹೆಚ್ಚು ದಿನ ನಿಲ್ಲಲು ಸಾಧ್ಯ

ವಿಲ್ಲವೆಂದು ಬರೆದಿದ್ದಾನಲ್ಲಾ ' ಬರೆಯುಲಿ - ಇಲ್ಲಿ ಬಂದ ಮೇಲೆ ಅವನನ್ನು ಬಿಟ್ಟರಲ್ಲವೇ ಹೋಗುವುದು ' ಎಂದುಕೊಂಡರು.

ಸಂಜೀವ ಟ್ಯಾಕ್ಸಿಯನ್ನು ಹೊರಗೇ ನಿಲ್ಲಿಸಿ ಪುಷ್ಪನೊಂದಿಗೆ ಒಳಗೆ ಬಂದ. ಪುಷ್ಪ, ಸಂಜೀವ ಜತೆಗೂಡಿ ಬಂದುದನ್ನು ಕಂಡು ಇಂದಿರಮ್ಮ ನವರಿಗೆ ಆಶ್ಚರ್ಯವಾದರೂ, ಅದನ್ನವರು ತೋರಗೊಡದೆ ವಿಶ್ವಾಸದಿಂದ ಸ್ವಾಗತ ಬಯಸಿದರು. ಯಾರೋ ಮಾತನಾಡಿದ ಧ್ವನಿ ಕೇಳಿ ಜಾನಕಿಯೂ ಹೊರಗೆ ಎದ್ದುಬಂದಳು. ಅವಳ ಆಶ್ಚರ್ಯ ಮುಖದ ಮೇಲೆ ಅಚ್ಚೊತ್ತಿ ದಂತೆ ನಿಂತಿತು

"ಪುಷ್ಪಾ ನೀನು ' . . . . ಇದೇನು ಸಂಜೀವಾ . . . . "

"ಹೇಳುತ್ತೇನೆ ಅತ್ತಿಗೆ, ಅದಕ್ಕೇ ಬಂದಿರುವುದು."

ಪುಷ್ಪ ಜಾನಕಮ್ಮನಿಗೂ ಇಂದಿರಮ್ಮನವರಿಗೂ ಕಾಲುಮುಟ್ಟಿ ನಮಸ್ಕಾರ ಮಾಡಿದಳು. ಸಂಜೀವನೂ ಇಬ್ಬರಿಗೂ ನಮಸ್ಕರಿಸಿದ.

ಜಾನಕಮ್ಮ ಬೆಕ್ಕಸಬೆರಗಾಗಿ ನಿಂತುಕೊಂಡುಬಿಟ್ಟಳು.

"ಆಶೀರ್ವಾದ ಮಾಡುವುದಿಲ್ಲವೇ ಅತ್ತಿಗೆ."

"ನಾನು ಹೊಸದಾಗಿ ಆಶೀರ್ವಾದ ಮಾಡಬೇಕೇನಪ್ಪಾ. ದೇವರು ಯಾವಾಗಲೂ ನಿನಗೆ ಒಳ್ಳೆಯದನ್ನು ಮಾಡಲಿ."

"ನಾನೂ ಪುಷ್ಪಾ ಮದುವೆ ಮಾಡಿಕೊಳ್ಳಲು ನಿಶ್ಚಯಿಸಿದ್ದೇವೆ ಅತ್ತಿಗೆ."

ಜಾನಕಮ್ಮ ಬಾಯಲ್ಲಿ 'ಸಂತೋಷ' ಎಂದು ಹೇಳಿದರೂ ಆ ಮಾತು ಅವಳ ಹೃದಯದಿಂದ ಬರಲಿಲ್ಲ.

ಬಿಕ್ಕಟ್ಟು ಪರಿಹರಿಸಲು ಇಂದಿರಮ್ಮನವರು

"ಸುನಂದಾ ಊರಿಗೆ ಹೋದಮೇಲೆ ನೀನು ನಮ್ಮ ಮನೆ ಕಡೇನೆ ಬರಲಿಲ್ಲ ಪುಷ್ಪಾ." ಎಂದರು.

"ಪುರಸತ್ತಾಗಲಿಲ್ಲವಮ್ಮಾ" ಎಂದವಳು ವಿನಮ್ರತೆಯಿಂದ ನುಡಿದಳು.

"ಸ್ವಲ್ಪ ಒಳಕ್ಕೇ ಬಾ, ಸಂಜೀವ"

ಎಂದು ಅವನನ್ನು ಜಾನಕಮ್ಮ ಒಳಕ್ಕೆ ಕರೆದೊಯ್ದಳು. ಇಂದಿರಮ್ಮ ನವರು ಪುಷ್ಪನೊಂದಿಗೆ ಮಾತನಾಡುತ್ತ ಕುಳಿತರು.

ಒಳಕ್ಕೆ ಬಂದು ಕುಳಿತ ಮೇಲೆ

"ಇದೇನು ಸಂಜೀವ ?" ಎಂದು ಕೇಳಿದಳು.

"ನಿಮ್ಮ ಸ್ಪಷ್ಟ ಅಭಿಪ್ರಾಯ ತಿಳಿಸಿ ಅತ್ತಿಗೆ. ನನಗೆ 'ಅಯ್ಯೋ' ಎನ್ನುವವರು ನೀವೊಬ್ಬರು - ನಿಮ್ಮ ಆಶೀರ್ವಾದವೇ ನನ್ನ ರಕ್ಷಾಕವಚ."

"ಪುಷ್ಪನ ವಿಷಯ ನನಗೆ ಹೆಚ್ಚು ಗೊತ್ತಿಲ್ಲ ಸಂಜೀವ. ಸುನಂದಾ ಜತೆಗೆ ಬರುತ್ತಿದ್ದಳು. ನನ್ನ ಚಿಂತೆಯಲ್ಲಿ ನಾನಿದ್ದುದರಿಂದ ಸುನಂದೆ ಸ್ನೇಹಿತರಿಗೂ ನನಗೂ ಹೆಚ್ಚಿನ ಸಂಬಂಧ ಬೆಳೆಯಲಿಲ್ಲ. — ಈ ಸಂಬಂಧ ನಿನಗೆ ಹೇಗೆ ಸಂಧಿಸಿತು ಸಂಜೀವ."

"ನಾವಿಬ್ಬರೂ ಒಂದೇ ಕಾಲೇಜಿನಲ್ಲಿ ಓದುತ್ತಿದ್ದೆವು."

"ಅವನ್ನು ನಾನು ಬಲ್ಲೆ."

"ಪ್ರೇಮಕ್ಕೆ ಕಣ್ಣಿಲ್ಲ ಎನ್ನುವ ಗಾದೆ ಕೇಳಿರುವಿರಲ್ಲವೇ ?'

"ಅದು ಅಕ್ಷರಶಃ ಸತ್ಯವೆನ್ನಿಸುತ್ತದೆ."

"ನಿಮಗೆ ಸಮಾಧಾನವಿರುವ ಹಾಗೆ ಕಂಡು ಬರುವುದಿಲ್ಲ."

"ನನ್ನ ಸಮಾಧಾನ, ಅಸಮಾಧಾನ ಅಲ್ಪ ವಿಷಯ. ನೀವಿಬ್ಬರೂ ಸುಖವಾಗಿರಬಲ್ಲಿರಾ ?"

"ಏಕೆ ಸಾಧ್ಯವಿಲ್ಲ - ಅವಳು ಕ್ರಿಶ್ಚಿಯನ್ ಜಾತಿಗೆ ಸೇರಿದವಳೆಂದು ಅನುಮಾನ ಪಡುವಿರಾ !"

"ಜಾತಿ ನನಗೇನು ಮಾಡಿತು ಎಂಬುದನ್ನು ನೀನೂ ಬಲ್ಲೆ. ಪುಷ್ಪನ ಸ್ವಭಾವ, ನಿನ್ನ ಸ್ವಭಾವ ಕೂಡುತ್ತದೆಯೇ ? ಬರೀ ಸಿನೀಮಾ ನೋಡಿಕೊಂಡು ಬೆಳೆದ ಹುಡುಗಿ ಅದು - ಯಾವ ಅಡ್ಡಿ ಆತಂಕವೂ ಇಲ್ಲದೆ ಬಾಳಿದವಳು."

"ಸಂಸಾರದ ಜವಾಬ್ದಾರಿ ತಲೆಯ ಮೇಲೆ ಬಿದ್ದಮೇಲೆ ಹುಡುಗತನ ತಾನಾಗಿ ತಾನೇ ಹೋಗುವುದಲ್ಲವೇ ?"

"ನಿಜ - ನನಗೊಂದು ಮಾತು ಹೇಳಿದ್ದರೆ ನಾನು ಹೆಣ್ಣು ನೋಡಿ ಗೊತ್ತುಮಾಡುತ್ತಿರಲಿಲ್ಲವೇ ?"

"ಲವ್ ಎಟ್ ಫಸ್ಟ್ ಸೈಟ್ (Love at First Sight) ಎಂದು ಕೇಳಿರುವಿರಲ್ಲವೇ ಅತ್ತಿಗೆ."

"ಲವ್ ಮ್ಯಾರೇಜಸ್ (Love marriages) ವಿಫಲವಾಗಿರುವುದನ್ನು ನಾವೇ ಕಣ್ಣಾರೆ ನೋಡುತ್ತಿದ್ದೇವೆ."

"ಹಾಗೇ ಸಂಪ್ರದಾಯದ ಮದುವೆಗಳು ವಿಫಲವಾಗುತ್ತಿರುವುದನ್ನೂ ನೋಡುತ್ತಿದ್ದೇವೆ."

"ಮದುವೆ ಎನ್ನುತ್ತಲೇ ಜ್ಞಾಪಕಕ್ಕೆ ಬಂತು - ಇವತ್ತು ನಿನಗೂ ಒಂದು ಲಗ್ನಪತ್ರಿಕೆ ಬಂದಿರಬೇಕಲ್ಲವೇ ?"

"ಯಾರದು ?"

ಜಾನಕಮ್ಮ ಯಾರದೆಂದು ಹೇಳದೆ ತನಗೆ ಬಂದಿದ್ದ ಲಗ್ನಪತ್ರಿಕೆಯನ್ನು ಸಂಜೀವನ ಕೈಗಿತ್ತಳು. ಲಗ್ನಪತ್ರಿಕೆ ನೋಡಿದವನೇ ಸಿಡಿಲೆರಗಿದಂತೆ ಸಂಜೀವ ಕುಕ್ಕರಿಸಿಬಿಟ್ಟ. ಅವನ ಕಣ್ಣಲ್ಲಿ ಪ್ರವಾಹ ಹೊರಟಿತು.

"ಏಕೆ ದುಃಖಪಡುತ್ತೀ ಸಂಜೀವ. ಒಳ್ಳೆಯದಕ್ಕೆ ಎಲ್ಲಾ ಆಗಿರುವುದು. ಅವರು ಸುಖವಾಗಿದ್ದರೆ ಸಾಕು."

"ನಮ್ಮಣ್ಣ ಎಂಥ ಅವಿವೇಕಿ ಅತ್ತಿಗೆ. ನಿಮ್ಮಂಥ ಹೆಂಡತಿ ಅವನಿಗೆ ಏಳು ಜನ್ಮಹೊತ್ತರೂ ಸಿಕ್ಕಬೇಕಲ್ಲ. ಚಾಮರಾಜನಗರದ ಋಣ ಸಂಪೂರ್ಣ ವಾಗಿ ತೀರಿದಂತೆ ಆಯಿತು. ಅಣ್ಣನಿಗೂ ನಿನಗೂ ಎಂದಾದರೂ ರಾಜಿಯಾಗ ಬಹುದು ಎನ್ನುವ ಭ್ರಾಂತಿಯಿತ್ತು. ಅದೂ ಹೋದಂತಾಯಿತು. ಮುಂದೆ . . ."

"ಮುಂದೇನು ?"

"ಮಕ್ಕಳ ಗತಿ."

"ಅವರ ಭಾಗದ ಆಸ್ತಿ ತೆಗೆದಿಟ್ಟಿದ್ದಾರಂತೆ. ನೀನು ಬರುವುದಕ್ಕೆ ಮುಂಚೆ ನಾನು ಲಾಯರ್ ಸೋಮಶೇಖರರಾಯರಿಗೆ ಕಾಗದ ಬರೆಯುತ್ತಿದ್ದೆ."

"ನಾನೇನು ಮಾಡಬಹುದು ಹೇಳಿ ಅತ್ತಿಗೆ - ನಿಮ್ಮ ಸೇವೆಗೆ ಸದಾಸಿದ್ಧ."

"ನೀನೇನೂ ಮಾಡಬೇಡಪ್ಪಾ. ಅತ್ತಿಗೆಯೆಂದರೆ ವಿಶ್ವಾಸ, ಗೌರವ ಇಟ್ಟುಕೊಂಡಿದ್ದೀಯಲ್ಲಾ ಅಷ್ಟೇ ಸಾಕು."

"ಪುಷ್ಪನಿಗೆ ಒಂದು ಒಳ್ಳೆಯಮಾತು ನೀವು ಆಡದಿದ್ದರೆ ಅವಳು ತುಂಬ ನೊಂದುಕೊಳ್ಳುತ್ತಾಳೆ."

ದುಃಖ ತುಂಬಿದ ಜಾನಕಮ್ಮನ ಮುಖದ ಮೇಲೆ ಎಳೆನಗೆಯೊಂದು ಸುಳಿಯಿತು. ಸಂಜೀವನನ್ನು ಕರೆದುಕೊಂಡು ಹೊರಗೆ ಬಂದು ಪುಷ್ಪನ

ಪಕ್ಕದಲ್ಲಿ ಕುಳಿತಳು. ಇಂದಿರಮ್ಮನವರು ಎದ್ದು ಒಳಕ್ಕೆ ಹೋದರು.

ಜಾನಕಮ್ಮ ಪುಷ್ಪನ ಮುಂಪಲೆ ನೇವರಿಸಿ ಅವಳ ಕೆನ್ನೆಗಳ ಮೇಲೆ ಮೃದುವಾಗಿ ಕೈಯಾಡಿಸಿ

"ತಾಯೀ, ನಮ್ಮ ಹುಡುಗನನ್ನು ನಿನ್ನ ಕೈಯಲ್ಲಿಟ್ಟಿದ್ದೇವೆ. ಅವನ ಮನಸ್ಸು ನೋಯದಂತೆ, ಜೀವನ ಚೆನ್ನಾಗುವಂತೆ ನಡೆಸಿಕೊಳ್ಳುವುದು ನಿನ್ನ ಭಾರ"

ಎನ್ನುತ್ತಿರುವಂತೆ ಕಣ್ಣುತುಂಬಿ ಕಂಬನಿ ಹರಿಯಿತು.

"ಹಾಗೆ ಮಾತು ಕೊಡುವೆಯಾ" ಎಂದು ಕೇಳಿದಳು.

"ಕೊಡುತ್ತೇನ್ರೀ" ಎಂದು ಪುಷ್ಪ ಕ್ಷೀಣಸ್ವರದಲ್ಲಿ ಉತ್ತರಿಸಿದಳು.

"ಯಾವಾಗ ಮದುವೆ ಸಂಜೀವ"

"ಇನ್ನೂ ನಿಶ್ಚಯವಾಡಿಲ್ಲ."

"ನನ್ನನ್ನೂ ಮದುವೆಗೆ ಕರೆಯುತ್ತೀಯಷ್ಟೇ ?"

"ಮದುವೆ ಮಾಡಿಸುವವರೇ ನೀವು - ನಿಮ್ಮನ್ನು ನಾನು ಕರೆಯಬೇಕೇ ಅತ್ತಿಗೆ."

"ಅಣ್ಣ ಬರುವ ವಿಷಯ ಗೊತ್ತಾಯಿತೇ ?"

"ಇಲ್ಲ - ಯಾವಾಗ ಬರುತ್ತಾರೆ."

"ಬೊಂಬಾಯಿಗೆ ಬಂದಿದ್ದಾನೆ - ಮುಂದಿನ ವಾರ ಇಲ್ಲಿಗೆ ಬರುತ್ತಾನೆ. ಆ ವೇಳೆಗೆ ಇಲ್ಲಿಗೆ ಬರಬೇಕೆಂದು ಸುನಂದನಿಗೂ ಕಾಗದ ಬರೆಯುತ್ತಿದ್ದೆ."

"ಸುನಂದಾ ಬರುತ್ತಾರೆಯೇ ?"

ಎಂದು ಉತ್ಸಾಹದಿಂದ ಪುಷ್ಪ ಕೇಳಿದಳು.

"ಬರಬಹುದಮ್ಮ"

ಎಂದು ಜಾನಕಮ್ಮ ಉತ್ತರವಿತ್ತಳು.

ಇಂದಿರಮ್ಮನವರು ಎಲ್ಲರಿಗೂ ಕಾಫಿ ತಂದಿತ್ತರು. ಕಾಫಿ ಕುಡಿದಾದ ಮೇಲೆ ಸಂಜೀವ, ಪುಷ್ಪ ಎದ್ದುನಿಂತರು.

"ಇಷ್ಟು ಬೇಗ ಹೊರಡಬೇಕೇ ?"

"ಇನ್ನೆಲ್ಲೋ ಹೋಗಬೇಕಾಗಿದೆ ಅತ್ತಿಗೆ - ಮತ್ತೆ ಬರುತ್ತೇವೆ."

"ಅಪರೂಪಕ್ಕೆ ನೀನು ಬಂದರೆ ಬರೀ ಕಾಫಿ ಕೊಡಬೇಕಾಯಿತಲ್ಲಪ್ಪಾ ಪುಷ್ಪನನ್ನು ಕರೆದುಕೊಂಡು ಊಟಕ್ಕೆ ಯಾವಾಗ ಬರುತ್ತೀ"

ಎಂದು ಇಂದಿರಮ್ಮನವರು ಕೇಳಿದರು.

"ನೀವು ಕರೆದಾಗ ಬರುತ್ತೇನಮ್ಮಾ"

ಎಂದು ಸಂಜೀವ ಹೇಳಿದ. ಜಾನಕಮ್ಮ ಒಳಗೆ ಹೋಗಿ ಫಲ ತಾಂಬೂಲ ತಂದು, ತಾನೇ ಪುಷ್ಪನಿಗೆ ಹಣೆಗಿಟ್ಟು ತಾಂಬೂಲವಿತ್ತಳು. ಪುಷ್ಪ ಜಾನಕಮ್ಮ ನಿಗೂ ಇಂದಿರಮ್ಮನವರಿಗೂ ನಮಸ್ಕಾರಮಾಡಿದಳು.

ಟ್ಯಾಕ್ಸಿಯವರೆಗೆ ಇಂದಿರಮ್ಮನವರು, ಜಾನಕಮ್ಮ ಬಂದು ಅವರನ್ನು ಬಿಟ್ಟು ಒಳಕ್ಕೆ ಬಂದರು. ಜಾನಕಮ್ಮ ಮನೋವೇದನೆ ಸಹಿಸಲಾರದೆ

"ಇವತ್ತು ಎದ್ದ ಹೊತ್ತೇ ಒಳ್ಳೆಯದಲ್ಲಮ್ಮ - ಬರೀ ಕೆಟ್ಟ ಸುದ್ದಿಗಳೇ - ಸಂಜೀವನ ಪಾಡೂ ಹೀಗಾಗಬೇಕೇ" ಎಂದಳು.

ಮಗನ ಧ್ಯಾನಪಲ್ಲಿದ್ದ ಇಂದಿರಮ್ಮನವರಿಗೆ ಜಾನಕಮ್ಮನ ಮಾತು ಚೆನ್ನಾಗಿ ಕೇಳಿಸಲಿಲ್ಲ.

ಕಾರಿನಲ್ಲಿ ಕುಳಿತರೂ ನೀರವನಾಗಿದ್ದ ಸಂಜೀವನಿಗೆ ಪುಷ್ಪ

"ನಿಮ್ಮ ಅತ್ತಿಗೆಗೆ ನಿಮ್ಮನ್ನು ಕಂಡರೆ ಎಷ್ಟು ವಿಶ್ವಾಸ - ಎಷ್ಟು ನಂಬಿಕೆ."

"ಹೌದು. ಅವರು ನನ್ನ ಭಾಗ್ಯದ ದೇವತೆ."

"ಒಳಗೆ ಏನು ಹೇಳಿದರು ? – ನನ್ನ ವಿಷಯ ಏನು ಬಂತು ?"

"ನಮ್ಮಣ್ಣನಿಗೆ ಇವತ್ತು ಇನ್ನೊಂದು ಮದುವೆ ಚನ್ನರಾಯಪಟ್ಟಣದಲ್ಲಿ ಇಂದೇ ಲಗ್ನಪತ್ರಿಕೆ ಕೈಗೆ ಬಂದಿದೆ."

"ಅದೇಕೆ ಹಾಗೆ ಮಾಡಿದರು ?"

"ಅವನು ಮಾಡುವ ಅವಿವೇಕಗಳಿಗೆ ಇತಿಮಿತಿ ಎಲ್ಲಿದೆ ಹೇಳು."

"ನಿಮ್ಮ ಮನಸ್ಸಿಗೆ ಇವತ್ತು ನೆಮ್ಮದಿಯಿಲ್ಲ."

"ಏಕೆ ಹಾಗನ್ನುವೆ."

"ಅತ್ತಿಗೆಗೆ ಹೀಗಾಯಿತಲ್ಲ ಎಂದು ವ್ಯಸನವಾಗಿದೆ ಇವತ್ತು ಸ್ಟೂಡಿಯೋಕ್ಕೆ ಹೋಗೋದು ಬೇಡ."

"ಛೆ! ಛೆ! ಎಲ್ಲಿಯಾದರೂ ಉಂಟೆ? ಸ್ಟುಡಿಯೋದವನಿಗೆ ನಾನು ಹೇಳಿ ಬಂದಿದ್ದೇನೆ."

"ಹಾಗಾದರೆ, ಒಂದು ಕೆಲಸಮಾಡೋಣ. ನಮ್ಮ ಮನೆಗೆ ಹೋಗಿ ಒಂದುಗಳಿಗೆ ಕುಳಿತಿದ್ದು ಹೋಗೋಣ"

ಸಂಜೀವನ ಮನಸ್ಸಿಗೂ ವಿಶ್ರಾಂತಿ ಬೇಕಾಗಿತ್ತು. ಅವನು ಪುಷ್ಪನ ಸಲಹೆಗೆ ಕೂಡಲೆ ಒಪ್ಪಿಗೆ ಕೊಟ್ಟುದಲ್ಲದೆ ಅವಳ ತಿಳುವಳಿಕೆಗೆ ಮನಸ್ಸಿನಲ್ಲಿಯೇ ಅಭಿವಂದಿಸಿದ.

ಮಗಳು, ಭಾವೀ ಅಳಿಯ ಮನೆಗೆ ಬೇಗ ಬಂದುದನ್ನು ಕಂಡು ಹೆಲನ್ ಅಮ್ಮನಿಗೆ ಆಶ್ಚರ್ಯವಾಯಿತು.

"ಇಷ್ಟು ಬೇಗ ಫೋಟೋ ತೆಗೆಸಿದ್ದಾಯಿತೇ?" ಎಂದು ಕೇಳಿದಳು.

"ಇಲ್ಲ ಮಮ್ಮಾ - ಇನ್ನು ಮೇಲೆ ಸ್ಟುಡಿಯೋಗೆ ಹೋಗುತ್ತೇವೆ. ಸ್ವಲ್ಪ ಕಾಫಿಕೊಡು"

ಎಂದು ಹೇಳಿ ರೂಮಿನೊಳಕ್ಕೆ ಬಂದಳು. ಸಂಜೀವ ವಿಷಣ್ಣವದನ ನಾಗಿದ್ದುದನ್ನು ಕಂಡು ಅವನನ್ನು ಹುರಿದುಂಬಿಸಲೆತ್ನಿಸಿದಳು.

"ಸ್ವಲ್ಪ ಕುಳಿತುಕೋ ಪುಷ್ಪ. ನಿನ್ನೊಂದಿಗೆ ನಾನು ಮಾತನಾಡ ಬೇಕಾಗಿದೆ"

ಎಂದು ಸಂಜೀವ ಹೇಳಲು 'ಏನು ಕಾದಿದೆಯೋ' ಎಂದುಕೊಂಡು ಪುಷ್ಪ ವಿನಮ್ರಳಾಗಿ ಗಂಭೀರವಾಗಿ ಕುಳಿತಳು.

"ನಾವಿಬ್ಬರೂ ನಮ್ಮ ಜೀವನದ ಬಹು ಮುಖ್ಯ ಘಟ್ಟ ಮುಟ್ಟುತ್ತಿದ್ದೇವೆ ಪುಷ್ಪಾ."

"ಹೌದು."

"ನನ್ನ ಎಲ್ಲಾ ಬಂಧು ಬಳಗವನ್ನೂ ನಾನು ತೊರೆದು ಹೊರಗೆ ಬರಬೇಕಾಗುತ್ತದೆ - ನೀನೂ ಹಾಗೇ ಮಾಡಬೇಕಾಗುತ್ತದೆ. ಸಮಾಜ ಸೂತ್ರಗಳನ್ನು ಉಲ್ಲಂಘಿಸಿ ನಿಂತ ನಮ್ಮ ಮೇಲೆ ಎರಡು ಪ್ರಬಲ ಸಮಾಜಗಳು ಹೋರಾಟ ಹೂಡುತ್ತವೆ."

"ಹೂಡಿದರೆ ಹೂಡಲಿ. ಅವರಿಂದ ನಮಗಾಗುವ ನಷ್ಟವೇನು?"

"ಮನುಷ್ಯ ಸಂಘಜೀವಿ. ತನ್ನದೇ ಒಂದು ಸಮಾಜವನ್ನು ಅವನು ನಿರ್ಮಾಣ ಮಾಡಿಕೊಳ್ಳುವವರೆಗೆ ವ್ಯವಸ್ಥಿತ ಸಮಾಜವನ್ನು ಎದುರಿಸಬೇಕಾಗುತ್ತದೆ."

"ನೀವು ಸಿದ್ಧವಾಗಿರುವಾಗ ನನಗೇನು ಭಯ."

"ನೀನು . . . . ?"

"ನಾನೂ ಸಿದ್ಧವಾಗಿದ್ದೇನೆ."

"ನಮ್ಮಿಬ್ಬರ ವಿಶ್ವಾಸ ಮುರಿಯಲು ಬಹಳ ಮಂದಿ ಪ್ರಯತ್ನಿಸುತ್ತಾರೆ."

"ಅವರ ಸಂಧಾನಕ್ಕೆ ನಾವು ಅವಕಾಶಕೊಡದಿದ್ದರಾಯಿತು."

"ನಮ್ಮಿಬ್ಬರ ವಿಶ್ವಾಸ ಕುಂದದಿದ್ದರೆ ಅದು ಸಾಧ್ಯ."

"ಏಕೆ ಕುಂದುತ್ತದೆ ದೊರೆ."

"ಪರಸ್ಪರ ವಿಶ್ವಾಸದೊಂದಿಗೆ ಪರಸ್ಪರ ಗೌರವವೂ ಹಾಸುಹೊಕ್ಕಾಗಿ ಹೊಂದಿಕೊಂಡಿದೆ."

"ನನ್ನ ದೊರೆಯನ್ನು ನಾನು ಪೂಜಿಸುತ್ತೇನೆ."

"ನಿನ್ನ ವಿಷಯದಲ್ಲಿ ನನ್ನ ಭಾವನೆಯೂ ಇದೇ ಆಗಿದೆ."

"ಇನ್ನೂ ಭಯವೇತಕ್ಕೇ ?"

"ಇಂದು ನಮ್ಮಲ್ಲಿರುವ ಭಾವನೆಯೇ ಮುಂದಕ್ಕೂ ಬೆಳೆಯಬೇಕು."

"ಆ ವಿಷಯದಲ್ಲಿ ನನಗೆ ಸ್ವಲ್ಪವೂ ಅನುಮಾನವಿಲ್ಲ."

"ನಾನೊಂದು ನೇರವಾದ ಪ್ರಶ್ನೆ ಕೇಳಿಬಿಡಲೇ ಸ್ವೀಟ್ - ನೀನು ಯಾವುದನ್ನೂ ಮರೆಮಾಜದೆ ಸತ್ಯವಾಗಿ ಹೇಳಬೇಕು."

"ಕೇಳಿ - ನಿಮ್ಮಲ್ಲಿ ಮರೆಮಾಜುವುದೇನಿದೆ ?"

"ನನ್ನಿಂದ ನೀನು ಯಾವುದನ್ನೂ ಮುಚ್ಚಿಡುತ್ತಿಲ್ಲವೇ ?"

"ಮುಚ್ಚಿಡುವ ಹಾಗಿದ್ದರೆ ನನ್ನ ತಂದೆ ಕುಡಿಯುವ ವಿಷಯ ಹೇಳುತ್ತಿದ್ದೆನೇ - ಜನ ನನ್ನ ತಾಯಿಗೆ ಹೆಸರಿಟ್ಟ ವಿಷಯ ಹೇಳುತ್ತಿದ್ದೆನೇ - ನನ್ನ ಭಾವನಿಗೂ ನಮಗೂ ಇರುವ ವೈಮನಸ್ಯದ ವಿಷಯ ಹೇಳುತ್ತಿದ್ದೆನೇ ?"

"ಅದು ಸರಿ - ನಿನ್ನ ವಿಷಯ ಹೇಳಬೇಕಾದ್ದು ಏನೂ ಇಲ್ಲವೇ ?"

"ಕೇಳುವುದನ್ನು ಸ್ಪಷ್ಟವಾಗಿ ಕೇಳಿ."

"ಈ ಮೊದಲೇ ನಿನಗೆ ಯಾರ ಮೇಲೂ ವಿಶ್ವಾಸವಿರಲಿಲ್ಲವೇ ?"

"ನನಗೆ ಮದುವೆ ಮಾಡಬೇಕೆನ್ನುವ ಪ್ರಯತ್ನ ಮನೆಯಲ್ಲಿ ನಡೆಯಿತು - ವರ ನನ್ನನ್ನು ಮೆಚ್ಚಿಕೊಂಡ, ನಾನು ಅವನನ್ನು ಮೆಚ್ಚಿಕೊಳ್ಳಲಿಲ್ಲ. ಆ ಮಾತು ಅಲ್ಲಿಗೇ ನಿಂತುಹೋಯಿತು. ನನ್ನ ಮೇಲೆ ಏನಾದರೂ ಅನುಮಾನವಿದೆಯೇ ?"

"ಅನುಮಾನವಿಲ್ಲ. ನನ್ನ ಅತ್ತಿಗೆ ಎಷ್ಟು ಉತ್ಸಾಹ ತೋರಿಸಬೇಕೋ ಅಷ್ಟು ತೋರಿಸಲಿಲ್ಲ, ಅದೇ ನನ್ನ ಮನಸ್ಸಿಗೆ ಒಂದು ಚಿಂತೆಯಾಗಿದೆ."

"ನಿಮ್ಮ ಅತ್ತಿಗೆಗೂ ನಮಗೂ ಅಷ್ಟಷ್ಟೆ ಎಂಬುದನ್ನು ಬಲ್ಲಿರಾ ?"

"ನಿಮ್ಮ ಮೇಲೆ ಅವರು ಅಸಂತೋಷಗೊಳ್ಳಲು ಕಾರಣವೇನು ?"

"ಸುನಂದೆಗೂ ಅವರಕ್ಕನಿಗೂ ಹೇಳಿಕೊಳ್ಳುವಷ್ಟು ವಿಶ್ವಾಸವಿಲ್ಲ. ನಾನೂ, ಶಾಂತಾ, ರಾಜಮಣಿ, ಸುನಂದೆಯ ಗೆಳತಿಯರು. ನಮ್ಮ ಮೇಲೂ ಅವರಿಗೆ ವಿಶ್ವಾಸವಿಲ್ಲ. ಸುನಂದೆಯನ್ನು ನೋಡಲು ಅವರ ಮನೆಗೆ ಹೋದರೆ ನಮ್ಮನ್ನು ಮಾತನಾಡಿಸುತ್ತಲೂ ಇರಲಿಲ್ಲ"

"ಅವರ ಚಿಂತೆ ಅವರಿಗೆ"

"ಒಪ್ಪಿದೆ. ನಾನು ಅದಕ್ಕೆ ಆಕ್ಷೇಪಿಸಲಿಲ್ಲವಲ್ಲ."

"ಈಗ ನನ್ನ ಮನಸ್ಸಿಗೆ ನೆಮ್ಮದಿಯಾಯಿತು."

ಪುಷ್ಪನ ಮನಸ್ಸಿನ ನೆಮ್ಮದಿಗೆ ಭಂಗವುಂಟಾಗಿತ್ತು. ಅವಳ ಕಣ್ಣುಗಳಿಂದ ದುಃಖಾಶ್ರುಗಳುದುರಿದವು. ಸಂಜೀವ ಅವಳ ಪಕ್ಕದಲ್ಲಿ ಕುಳಿತು ರಮಿಸಿದ. ಅಳುವಿನ ಮಧ್ಯೆ ಪುಷ್ಪ ಹೇಳಿದಳು

"ಈಗಲೂ ಚೆನ್ನಾಗಿ ಯೋಚನೆಮಾಡಿ ದೊರೆ ನಿಮ್ಮ ಮನಸ್ಸಿನಲ್ಲಿ ನಂಬಿಕೆ - ಸಂತೋಷವಿಲ್ಲದಿದ್ದರೆ ನನ್ನನ್ನು ಮದುವೆಯಾಗುವ ಯೋಚನೆ ದೂರಮಾಡಿ. ನಿಮ್ಮ ಹಿತದ ಸಲುವಾಗಿ ನಾನು ನಿಮ್ಮಿಂದ ದೂರ ನಿಲ್ಲಲು ಸಿದ್ಧವಾಗಿದ್ದೇನೆ."

"ಹೀಗೇಕೆ ಹೇಳುವೆ ಪುಷ್ಪಾ. ನಾವು ಈಗಾಗಲೇ ಮದುವೆಯಾದ ದಂಪತಿಗಳಂತೆ ಬಾಳ್ವೆ ಮಾಡುತ್ತಿರುವುದು ಮರೆತುಹೋಯಿತೇ ?"

"ಅದಕ್ಕೋಸ್ಕರ ನೀವು ನನ್ನನ್ನು ಮದುವೆಯಾಗಬೇಕಾಗಿಲ್ಲ

ನನ್ನಂಥ ದುಃಖಿಗಳಿಗೆ ಕಾನ್‌ವೆಂಟಿನ (Convent) ಬಾಗಿಲು ಸದಾ ತೆಗೆದೇ ಇರುತ್ತದೆ.''

''ನನ್ನನ್ನೂ ಕಾನ್‌ವೆಂಟಿಗೆ ಸೇರಿಸಿಕೊಳ್ಳುವ ಹಾಗಿದ್ದರೆ ಅಡ್ಡಿಯಿಲ್ಲ.''

ಸಂಜೀವನ ಮಾತು ಕೇಳಿ ಪುಷ್ಪನಿಗೆ ತಡೆಯಲಾರದಷ್ಟು ನಗು ಬಂದಿತು.

''ಹೋಗಿ ದೊರೆ - ಏನೇನೋ ಮಾತನಾಡಿ ನನ್ನ ಕಣ್ಣಿನಲ್ಲಿ ನೀರು ಹಾಕಿಸುತ್ತೀರಿ.''

''ಇಲ್ಲ ಸ್ವೀಟ್ - ಇನ್ನು ಅಂಥ ಅಪರಾಧ ಮಾಡುವುದಿಲ್ಲ ಏಳು ಹೊತ್ತಾಗುತ್ತಾ ಬಂತು - ಸ್ಟೂಡಿಯೋ, ಟ್ಯಾಕ್ಸಿ ಎಲ್ಲಾ ನಮ್ಮ ದಾರಿ ನೋಡುತ್ತಿವೆ.''

''ಕಣ್ಣೀರಿನ ಪಟ್ಟಿ ಹೋಗಲಾಡಿಸಲು ನಾನು ಮತ್ತೆ ಮುಖ ತೊಳೆದು ಕೊಂಡು ಬರಬೇಕಾಯಿತು.''

''ಬೇಗ ಮುಗಿಸಿಕೊಂಡು ಬಾ'' ಎಂದು ಹೇಳಿದ.

ಪುಷ್ಪ ಮುಖತೊಳೆದುಕೊಂಡು ಮುಖಕ್ಕೆ ಹೊಸದಾಗಿ ಪೌಡರ್ ಸಿಂಪಡಿಸಿಕೊಂಡು, ತುಟಿಯ ಮೇಲೆ ತೆಳುವಾಗಿ ತುಟಿಗೆಂಪು ಹಚ್ಚಿ ಕೊಂಡು, ಕೈಯಲ್ಲಿ ಕಾಫಿ ಲೋಟಾಗಳನ್ನು ಹಿಡಿದು ಬಂದಳು.

"ಈಗ ಸರಿಹೋಯಿತು."

ಎಂದು ಸಂಜೀವ ತನ್ನ ಮೆಚ್ಚುಗೆ ವ್ಯಕ್ತಪಡಿಸಿದ.

ಇಬ್ಬರೂ ಕಾಫಿ ಮುಗಿಸಿ ಸ್ಟೂಡಿಯೋಗೆ ಹೊರಟರು.

'ಮೋಹನ್ ಆರ್ಟ್ ಸ್ಟೂಡಿಯೋ' (Mohan Art Studio) ಮಾಲಿಕ ಜನಾರ್ಧನ್ ಅವರ ದಾರಿಯನ್ನೇ ನೋಡುತ್ತ ನಿಂತಿದ್ದ.

"ಹೊತ್ತಾಯಿತಲ್ಲಾ ಸಾರ್. ಆರು ಗಂಟೆಗೆ ನನಗೆ ಬೇರೆ ಸಿಟ್ಟಿಂಗ್ (Sitting) ಇದೆ."

''ನಮ್ಮ ಕೆಲಸ ಮುಗಿಸಿಬಿಡಿ ಜನಾರ್ಧನ್.''

ಸಂಜೀವ ಪುಷ್ಪ ಇಬ್ಬರೂ ಇರುವ ಒಂದು ಚಿತ್ರ; ಸಂಜೀವ ಒಬ್ಬನೇ ಇರುವ ಒಂದು ಚಿತ್ರ, ಪುಷ್ಪ ಒಬ್ಬಳೇ ಇರುವ ಒಂದು ಚಿತ್ರ - ಮೂರೂ

ತೆಗೆವದ್ದಾಯಿತು. ಪ್ಲೇಟುಗಳನ್ನು ಒಳಗಿಟ್ಟು ಬರಲು ಜನಾರ್ಧನ್ ಹೋದಾಗ

''ಕಾಪಿಗಳನ್ನು ಎಷ್ಟು ಮಾಡಿಸೋಣ ಪುಷ್ಪಾ'' ಎಂದು ಸಂಜೀವ ಕೇಳಿದ.

''ಸಣ್ಣ ಸೈಜಿನದು ಎಲ್ಲಾ ನನಗೆ ಮೂರು ಮೂರು ಪ್ರತಿಬೇಕು. ದೊಡ್ಡ ಸೈಜಿನದು ಎರಡು ಸೆಟ್ - ಒಂದು ನಿಮ್ಮ ರೂಮಿಗೆ - ಇನ್ನೊಂದು ನನ್ನ ರೂಮಿಗೆ.''

ಜನಾರ್ಧನ್ ಹಿಂದಿರುಗಿ ಬರುತ್ತಲೇ ಅವನಿಗೆ ಪ್ರತಿಗಳ ವಿಷಯ ತಿಳಿಸಿ

''ಕಾಪಿಗಳನ್ನು ಯಾವಾಗ ಕೊಡುವಿರಿ'' ಎಂದು ಕೇಳಿದ.

''ಇವತ್ತು ಬುಧವಾರ - ಶನಿವಾರ ಕಾಪಿಗಳನ್ನು ಕೊಡುತ್ತೇನೆ - ಎನ್‌ಲಾರ್ಜ್‌ಮೆಂಟ್ಸ್ (Enlargements) ಮುಂದಿನ ಶನಿವಾರ ಕೊಡುತ್ತೇನೆ ಸಾರ್. ನಾಳೆ ಬಂದರೆ ಪ್ರೂಫ್ ಕೊಡುತ್ತೇನೆ.''

''ಆಗಬಹುದು. ಎನ್‌ಲಾರ್ಜ್‌ಮೆಂಟ್ಸ್‌ಗೆ ನೀವೇ ಚೆನ್ನಾಗಿ ಕಟ್ಟು ಹಾಕಿಸಿಕೊಡಿ.''

''ಬಜಾರ್ ಕಟ್ಟಾದರೆ ಬೆಲೆ ಕಡಿಮೆಯಾಗುತ್ತದೆ. ಕರೀಮರದ ಕಟ್ಟಾದರೆ ಸ್ವಲ್ಪ ಹೆಚ್ಚಾಗುತ್ತದೆ.''

''ಒಳ್ಳೆಯ ಕರಿಮರದ್ದೇ ಹಾಕಿಸಿಯಪ್ಪ.''

''ಎನ್‌ಲಾರ್ಜ್‌ಮೆಂಟ್ಸ್ ಯಾವ ಸೈಜು ಬೇಕು ಸಾರ್.''

''೧೨ × ೧೬''

ಸ್ಟುಡಿಯೋ ಮೆಟ್ಟಿಲು ಇಳಿದು ಬರುತ್ತಾ ಸಂಜೀವ ಕೇಳಿದ

''ಎಲ್ಲೀಗೆ ಹೋಗೋಣ ಪುಷ್ಪಾ.''

''ನೀವು ಎಲ್ಲೀಗೆ ಹೇಳಿದರೆ ಅಲ್ಲೀಗೆ.''

''ಶ್ರೀರಂಗಪಟ್ಟಣಕ್ಕೆ ಡ್ರೈವ್ ಹೋಗಿಬರೋಣ.''

''ಆಗಬಹುದು - ಶ್ರೀರಂಗಪಟ್ಟಣಕ್ಕೆ ಹೋಗುವ ಹಾಗಿದ್ದರೆ ಮಮ್ಮಿಯನ್ನು ಕರೆಯಬಹುದಾಗಿತ್ತು.''

''ಅವರನ್ನು ಕರೆದುಕೊಂಡು ಇನ್ನೊಂದು ದಿವಸ ಹೋಗೋಣ - ಇವತ್ತು ನೀನೂ ನಾನೂ . . . .''

ಪುಷ್ಪ ಮುಗುಳ್ನಗೆ ನಕ್ಕಳು.

ಶ್ರೀರಂಗಪಟ್ಟಣದಲ್ಲಿ ಕಾರನ್ನು ರಂಗನಾಥಸ್ವಾಮಿಯ ದೇವಾಲಯದ ಪಕ್ಕದಲ್ಲಿ ನಿಲ್ಲಿಸಿ, ಸಂಜೀವ, ಪುಷ್ಪ ಇಬ್ಬರೂ ನಡೆದು ಹೊರಟರು. ಸ್ವಲ್ಪ ಹೊತ್ತು ಅಲ್ಲಲ್ಲಿ ಸುತ್ತಾಡಿ ಕೊನೆಗೆ 'ದರಿಯಾ ದೌಲತ್' ಅರಮನೆಯ ಮುಂದಿನ ಹಸಿರುಹಾಸಿನ ಇಬ್ಬರೂ ಕುಳಿತರು. ಯೋಚನಾಮಗ್ನನಾಗಿದ್ದ ಸಂಜೀವನನ್ನು ಪುಷ್ಪ

"ಬಹಳ ಯೋಚನೆ ಮಾಡುತ್ತಿರುವಂತಿದೆ" ಎಂದು ಕೇಳಿದಳು.

"ಈ ಅರಮನೆ ನೋಡಿದಾಗಲೆಲ್ಲಾ ಮನಸ್ಸು ಮುದುಡುತ್ತದೆ. ಇಲ್ಲಿ ಎಷ್ಟು ಜಲಸಾಗಳು, ಬೈಟಕ್ಕುಗಳು, ಕಛೇರಿಗಳು, ನಾಚ್‌-ನೃತ್ಯಗಳೂ ನಡೆದಿರಬಹುದು - ಎಂಥೆಂಥ ರಾಜಕಾರಣದ ಮಾತುಕತೆಗಳು ಸಾಗಿರಬಹುದು. ಇಂದು - ಇದೊಂದು ಹಾಳು ಮನೆ. ಕುತೂಹಲಿಗಳಾಗಿ ಬರುವ ಪ್ರವಾಸಿಗರ ಒಂದು ಪ್ರೇಕ್ಷಣೀಯ ವಸ್ತು."

"ಹಳೆಯ ಸಾಮ್ರಾಜ್ಯಗಳು ಹೋದರಲ್ಲವೇ ಹೊಸ ಸಾಮ್ರಾಜ್ಯಗಳು ತಲೆಯೆತ್ತುವುದು. ಹಳೆಯದು ಹೊಸದಕ್ಕೆ ದಾರಿಮಾಡಿಕೊಡುತ್ತಲೇ ಇರಬೇಕು.

"ಹೌದು - ಸತತ ವಿಭ್ರಮಣದ ಶಿಶುವೇ ಜೀವನ. ಈ ವಿಭ್ರಮಣ ನಿಲ್ಲುವುದು ಯಾವಾಗ?"

"ಪ್ರಳಯ ಬಂದಾಗ."

"ಈ ವಿಭ್ರಮಣದ ಗುರಿಯೇನು? ನಾವು ಹೇಳುವಂತೆ ಭಗವಂತನ ಲೀಲೆಯೇ?"

"ಏಕಾಗಿರಬಾರದು."

"ಜೀವಿಗಳನ್ನು ಹಿಂಸಿಸುವುದರಲ್ಲಿ ಭಗವಂತನಿಗೆ ಯಾವ ಸುಖವಿದೆ. ಭಗವಂತ ಸ್ಯಾಡಿಸ್ಟ್ (Sadist) ಅಲ್ಲವಲ್ಲ!"

"ಭಗವಂತನ ಸ್ವರೂಪ ತಿಳಿದವರು ಯಾರು?"

"ಹಾಗಾದರೆ ಜಗತ್ತಿನಲ್ಲಿ ಸಾವಿರಾರು ವರ್ಷಗಳಿಂದ ಬೆಳೆದು ಬಂದಿರುವ ಧರ್ಮಸಿದ್ಧಾಂತಗಳೆಲ್ಲಾ ಸುಳ್ಳೇ?"

"ಸುಳ್ಳು ಎಂದು ಭಾವಿಸುವವರಿಗೆ ಸುಳ್ಳು, ನಿಜವೆಂದು ಭಾವಿಸುವವರಿಗೆ ನಿಜ. ಕ್ರೈಸ್ತಧರ್ಮ ಹೇಳುವಂತೆ ಎಲ್ಲಕ್ಕೂ ನಂಬಿಕೆಯೇ (Faith) ಮುಖ್ಯ."

"ನಂಬಿಕೆಗೆ ಅರ್ಹವಾದ ವಸ್ತು ಯಾವದು ?"

"ಪ್ರೇಮ - ಪ್ರೇಮವನ್ನೇ ದೇವರೆಂದು ಯೇಸುಸ್ವಾಮಿ ಕರೆದಿದ್ದಾನೆ."

"ನನ್ನನ್ನು ಮತಾಂತರಗೊಳಿಸುತ್ತಿರುವಿಯಾ ಪುಷ್ಪ."

"ಯೇಸು ಎನ್ನಲು ಕಷ್ಟವಾದರೆ ಕೃಷ್ಣ ಎನ್ನಿ."

"ಯೇಸು - ಕೃಷ್ಣರಲ್ಲಿ ನಾನು ಭೇದವೆಣಿಸುವುದಿಲ್ಲ ಪುಷ್ಪಾ. ಇಬ್ಬರೂ ನನ್ನ ಆರಾಧ್ಯಮೂರ್ತಿಗಳು."

"ಪ್ರೇಮಕ್ಕಿಂತ ಪವಿತ್ರವಾದುದು ಯಾವದಿದೆ ?"

"ಪ್ರೇಮ - ಕಾಮ ಈ ಶಬ್ದಗಳನ್ನು ನಾವು ಧಾರಾಳವಾಗಿ ಬಳಸುತ್ತೇವೆ. ಅವುಗಳ ನಿಷ್ಕೃಷ್ಟ ಅರ್ಥ ನಮಗೆ ಗೊತ್ತಿದೆಯೇ ?"

"ನೀವು ವಿಷಯವನ್ನು ಒಳಹೊಕ್ಕು ನೋಡುತ್ತೀರಿ. ಅದು ಸಾಮಾನ್ಯರಿಗೆ ಸಾಧ್ಯವಿಲ್ಲ."

"ಮನುಷ್ಯನಿಗೂ ಪಶುವಿಗೂ ಇರುವ ವ್ಯತ್ಯಾಸ 'ವಿವೇಚನೆ' ಅಲ್ಲವೇ ?"

"ಹೌದು."

"ಒಬ್ಬನಿಗೆ ಸಾಧ್ಯವಾದುದು ಎಲ್ಲರಿಗೂ ಸಾಧ್ಯವಾಗಲೇಬೇಕು."

"ಏಕೆ ಸಾಧ್ಯವಾಗುವುದಿಲ್ಲ."

"ಬಹಳ ಮಂದಿಯಲ್ಲಿ ಪ್ರಯತ್ನಶೀಲತೆಯಿಲ್ಲ."

"ಪ್ರೇಮ - ಕಾಮದ ವ್ಯತ್ಯಾಸವೇನು ?"

"ನೀನು ಹೇಳು ನೋಡೋಣ."

"ಒಂದು ಮಾನಸಿಕ – ಇನ್ನೊಂದು ದೈಹಿಕ."

"ದೈಹಿಕ ಸಂಬಂಧವಿದ್ದೂ ಪ್ರೇಮವನ್ನು ರೂಢಿಸುವುದಕ್ಕಾಗುವುದಿಲ್ಲವೇ ?"

"ಹೇಗೆ ಸಾಧ್ಯ ?"

"ತನ್ನನ್ನು 'ದೇವವಧು' (Bride of God) ಎಂದು ಸಂಬೋಧಿಸಿ

ಕೊಂಡಾಗ ಯೇಸು ಅವುಗಳ ಮೇಳ ಸಾಧಿಸಿದ್ದಾನೆಂದು ನನ್ನ ಅಭಿಪ್ರಾಯ. ಭಕ್ತ ಕವಿಗಳು ಅವನ ಕಂಡ ಸತ್ಯವನ್ನೇ ನಿರೂಪಿಸಿದ್ದಾರೆ."

"ಕ್ರೈಸ್ತ ಧರ್ಮವೇ ಅವುಗಳಿಗೆ ಬೇರೆ ಬೇರೆ ಅರ್ಥ ಕೊಟ್ಟಿದೆಯಲ್ಲಾ."

"ಕ್ರೈಸ್ತ ಧರ್ಮವೆನ್ನುವುದು ಕ್ರಿಸ್ತನ ಧರ್ಮವಾಗಿಲ್ಲ. ಅದು ಪಾದ್ರಿಗಳ ಧರ್ಮವಾಗಿದೆ. ಸ್ವಾಮಿ ಹೇಳಿದ ಮಾತಿಗೆ ಅಪಾರ್ಥಕಲ್ಪಿಸುವುದರಲ್ಲಿ ಅವರು ನಿಸ್ಸೀಮರು."

"ನೀವು ಹೇಗೆ ಅರ್ಥ ಮಾಡುವಿರಿ."

"ಯೇಸು ಸ್ವಾಮಿಯ ರಹಸ್ಯೋಪದೇಶ ಅರ್ಥಮಾಡಿಕೊಳ್ಳುವುದಕ್ಕೆ ನಾವು ದರ್ಶನಗಳ ಮರೆ ಹೋಗಬೇಕು. ದೈಹಿಕಕ್ರಿಯೆ ಪಾಪಕರವಾದದ್ದು ಎಂಬ ಭಾವನೆ ಕ್ರಿಸ್ತನ ತರುವಾದ ಕ್ಯಾಲ್ವನಿಸ್ಟರಿಂದ (Calvanist) ಬಂದದ್ದು ಕೆಲವು ರೋಮನ್ ಕ್ಯಾಥೊಲಿಕ್ ಮಠಗಳು ವಿವಾಹ ಕೂಡ ಪಾಪಾಚರಣೆ ಎಂದು ಸಾರಿದವು. ಹಿಂದೂಧರ್ಮ ಮಾನವನ ಪರಿಣಾಮಚಕ್ರವನ್ನು (Cycle of Evolution) ನಿರ್ದೇಶಿಸುತ್ತಾ ಮೊದಲು ಧರ್ಮಕ್ಕೆ ಸ್ಥಾನ ಕೊಟ್ಟಿತು. ಅನಂತರ ಅರ್ಥ ಮತ್ತು ಕಾಮ, ಕೊನೆಯದಾಗಿ ಮೋಕ್ಷ ಧರ್ಮದ ಅಸ್ತಿಭಾರದ ಮೇಲೆ ಅರ್ಥ, ಕಾಮ ಸಾಧಿಸುವವನಿಗೇ ಮೋಕ್ಷವೆಂದು ಸಾರಿತು. ಇದರಿಂದವರು ಕಾಮ ಪಾಪಕರವಾದುದೆಂದಾಗಲಿ, ಜೀವನಕ್ಕೆ ಅನವಶ್ಯಕವೆಂದಾಗಲಿ ಭಾವಿಸಲಿಲ್ಲ. ಮಾನವ ತನ್ನ ಅಲ್ಪತನದಿಂದ ಎಲ್ಲವನ್ನೂ ದುರುಪಯೋಗಪಡಿಸಿಕೊಂಡಂತೆ ಕಾಮವನ್ನೂ ದುರುಪಯೋಗ ಪಡಿಸಿಕೊಂಡ. ಅವನ ಕೈಯಲ್ಲಿ ಧರ್ಮ ಅಧರ್ಮವಾಯಿತು; ಕಾಮ ವಿಕೃತ ಕಾಮವಾಯಿತು; ಮೋಕ್ಷ ಅವನ ಕೃಪಾವಶೇಷವಾಯಿತು. ಇಂದ್ರಿಯಗಳ ಸಂಬಂಧ ಪಡೆದಿರುವುದರಿಂದ ಕಾಮ ಅಪವಿತ್ರವಾದುದಾದರೆ ಇಂದ್ರಿಯಗಳೂ, ಅವುಗಳ ವ್ಯಾಪಾರವೂ ನಿರ್ಮಾಣವಾದುದೇಕೆ ? ಅಪವಿತ್ರವೆನಿಸಿಕೊಳ್ಳುವ ಸ್ತ್ರೀಪುರುಷ ಸಮ್ಮಿಳನದಿಂದ ಯೇಸು, ಲಿಯೋನಾರ್ಡೊ ವಿಂಚಿ, ರೆಮಬ್ರ್ಯಾಂಟ್, ಬೀಥೊವನ್, ಷೇಕ್ಸ್ಪಿಯರ್, ಕಾಳಿದಾಸ ಜನ್ಮತಳೆದಿರುವಾಗ, ಅದಕ್ಕಿಂತಲೂ ಹಿರಿದಾದುದನ್ನು ಪವಿತ್ರ ಪ್ರೇಮ ಸಾಧಿಸಿರುವುದೇ ?"

"ಮಾನವ ಪ್ರಗತಿಗೆ ದೇಹಕ್ರಿಯೆ ಅತ್ಯವಶ್ಯಕವೆನ್ನುವಿರಾ ?"

"ಯಾವ ಸಿದ್ಧಾಂತವನ್ನೂ ಮಂಡಿಸಲು ನಾನು ಇಚ್ಛಿಪಡುವುದಿಲ್ಲ. ದೈಹಿಕಕ್ರಿಯೆ ಯಾವ ಅನುಭವವನ್ನು ಬಹುಮಂದಿಗೆ ತಂದುಕೊಡಬಲ್ಲುದೋ ಅದರರಾಹಿತ್ಯ ಕೆಲವರಿಗೆ ಅದೇ ಅನುಭವ ತಂದುಕೊಡಬಲ್ಲುದು."

"ಹೇಗೆ ಸಾಧ್ಯ ?"

"ನಾವು ಕಠಿಣವಾದ ಒಂದು ಲೆಕ್ಕ ಮಾಡಬೇಕಾದರೆ ಕೂಡುವುದು, ಕಳೆಯುವುದು, ಗುಣಾಕಾರ, ಭಾಗಾಕಾರ ಅಭ್ಯಾಸಮಾಡಿಕೊಳ್ಳಬೇಕು. ರಾಮಾನುಜಂ, ಐನ್‌ಸ್ಟೈನರಂಥ ಗಣಿತಜ್ಞರು ಕ್ರಮಾಗತವಾಗಿ ಹತ್ತಬೇಕಾದ ಈ ಹಂತಗಳನ್ನು ಅತಿಕ್ರಮಿಸಿ ಒಮ್ಮೆಲೇ ಮೇಲಕ್ಕೆ ಹೋಗುತ್ತಾರೆ. ಈ ಬಗೆಯ ದೈವಿಕಸಿದ್ಧಿಯಿಂದ ಮೇಲಕ್ಕೆ ಹೋಗುವುದೂ ಒಂದು ದಾರಿ ; ಕ್ರಮಾಗತವಾದ ಹಂತಗಳನ್ನೇರಿ ಹೋಗುವುದೂ ಒಂದು ದಾರಿ. ಇದರಲ್ಲಿ ಒಳ್ಳೆಯದು, ಕೆಟ್ಟದು ಪ್ರಶ್ನೆ ಬರುವುದಿಲ್ಲ. ಕಾಮ ಕೆಟ್ಟದೆನ್ನುವವರು ಪ್ರಕೃತಿಯ ಸರ್ವತೋಮುಖ ಶಕ್ತಿಯನ್ನರಿಯದವರು."

"ಕಾಮವೂ ಪ್ರೇಮದಷ್ಟೇ ಪವಿತ್ರವೆನ್ನುವಿರಾ ?"

"ನಿಸ್ಸಂದೇಹವಾಗಿ."

"ಹೇಗೆ ?"

"ದೇಹವನ್ನೇ ಸಾಧನಮಾಡಿಕೊಂಡು ಮನುಷ್ಯ ಪ್ರಗತಿಯನ್ನೈದಲು ಮಹಾನುಭಾವ ಪತಂಜಲಿ ಯೋಗಮಾರ್ಗ ನಿರ್ದೇಶಿಸಿದ. ಮೂಲಾಧಾರದಲ್ಲಿ ಹಾವಿನಂತೆ ಸುತ್ತಿಕೊಂಡು ಜಡವಾಗಿ ಬಿದ್ದಿರುವ ಶಕ್ತಿಯನ್ನು ಸಾಧಕ ಹೊಡೆದೆಬ್ಬಿಸಿ ತಲೆಗೆ ತಳ್ಳುತ್ತಾನೆ. ಈ ಪ್ರಯೋಗ ನಡೆಯುವಾಗ ಶಕ್ತಿ ದೇಹದ ಹಲವು ಭಾಗಗಳಲ್ಲಿ ನಿಂತುನಿಂತು ಮುಂದೆ ಹೋಗುತ್ತದೆ. ದೇಹದಲ್ಲಿದ್ದೂ ದೇಹಾತೀತವಾಗುವ, ಇಂದ್ರಿಯಗಳ ಹಿಡಿತಕ್ಕೆ ಸಿಕ್ಕಿದಂತೆ ಕಂಡುಬಂದರೂ ಸಿಕ್ಕದಿರುವ ರಹಸ್ಯವನ್ನು ಪತಂಜಲಿಮುನಿ ಬೋಧಿಸಿದ. ಅರಿವಿಗೆ ನಿಲುಕದೆ ಗಾಳಿಯಲ್ಲಿ ಓಡಿಯಾಡುವ ಶಕ್ತಿಸಂಚಯನ ಮಾಡುವುದಕ್ಕಿಂತ ಅರಿವಿಗೆ ನಿಲುಕುವ ಶಕ್ತಿಯನ್ನು ವಿಸ್ತರಿಸುವುದೊಳ್ಳೆಯದು ಎನ್ನುವುದು ಅವನ ಯೋಗದ ಧ್ಯೇಯ. ವಿಷಯ ಕ್ಲಿಷ್ಟವಾಯಿತು. ಇನ್ನೂ ಒಂದು ದೃಷ್ಟಾಂತ ಕೊಟ್ಟು ಹೇಳುತ್ತೇನೆ ಸ್ತ್ರೀಪುರುಷ ಸಂಯೋಗ ದೇಹವನ್ನು ಅವಲಂಬಿಸಿದ್ದು ತಾನೆ."

"ಹೌದು."

"ಸಂಯೋಗಾನಂತರ ಅವರಲ್ಲಿ ಪರಸ್ಪರ ತಿರಸ್ಕಾರ, ಅಸಹ್ಯ ಹುಟ್ಟಿದರೆ ಅದು ದುರಂತಕಾಮ; ಅವರಲ್ಲಿ ಪರಸ್ಪರ ಗೌರವ, ವಿಶ್ವಾಸ, ಕೃತಜ್ಞತೆ ಹುಟ್ಟಿದರೆ ಅದೇ ಸುಕುಮಾರ ಪ್ರೇಮ. ಒಂದೇ ಕ್ರಿಯೆ ಎರಡು ಭಾವನೆಗಳನ್ನೂ ಕೆರಳಿಸುತ್ತದೆ"

"ಕಾಮದ ಸ್ಥಾನ ಅಷ್ಟು ದೊಡ್ಡದೇ ?"

"ಪ್ರಶ್ನೆಯೇ ತಪ್ಪು. ಕಾಮದ ಸ್ಥಾನ ಧರ್ಮ, ಅರ್ಥ, ಮೋಕ್ಷನಷ್ಟೇ ದೊಡ್ಡದು. ಒಬ್ಬ ತಂದೆಗೆ ನಾಲ್ಕು ಮಕ್ಕಳಿದ್ದರೆ ಅವನು ಯಾವನಾದರೊಬ್ಬನಿಗೆ ಆಸ್ತಿಯ ಹೆಚ್ಚಿನ ಭಾಗ ಕೊಟ್ಟರೆ ಅವನನ್ನು ಜನ ಅವಿವೇಕಿಯೆನ್ನುವುದಲ್ಲವೇ - ತಮಗೆ ದೊರೆಯಬೇಕಾದ ನ್ಯಾಯವಾದ ಭಾಗ ದೊರೆಯಲಿಲ್ಲವೆಂದು ಉಳಿದವರು ಮುನಿದು ತಂದೆಯ ಮೇಲೆ ಹಗೆಮಾಡುವರಲ್ಲವೇ ಹಾಗೇ ಪ್ರಕೃತಿಯಲ್ಲಿ ಸಮಾನಧರ್ಮಾಚರಣೆ ಗಮನಿಸಬೇಕಾದುದಗತ್ಯ. ಕಾಮಕ್ಕೆ ಬಂದಿರುವ ಕೆಟ್ಟ ಹೆಸರನ್ನು ತೊಡೆದುಹಾಕಿ ಅದನ್ನು ಯೋಗ್ಯಸ್ಥಾನದಲ್ಲಿರಿಸಬೇಕಾದುದು ವ್ಯಷ್ಟಿ, ಸಮಷ್ಟಿಗಳೆರಡರ ಹಿತದ ದೃಷ್ಟಿಯಿಂದಲೂ ಅತ್ಯವಶ್ಯಕ."

"ಸಂತಾನಾಭಿವೃದ್ಧಿಯೇ ಕಾಮದ ಗುರಿಯಾಗಿರಬೇಕೆಂದು ಕ್ರಿಸ್ತ ಮತ ಗುರುಗಳು ಬೋಧಿಸಿದ್ದಾರೆ."

"ಮನು, ಯಾಜ್ಞವಲ್ಕ್ಯ, ಶುಕ್ರ ಮೊದಲಾದ ಧರ್ಮಶಾಸ್ತ್ರಕಾರರ ಅಭಿಪ್ರಾಯವೂ ಅದೇ ಆಗಿದೆ. ಇವರು ಮಾನವನನ್ನು ಪಶುವಿನ ಪಂಕ್ತಿಗೇ ಸೇರಿಸಿದಂತಾಯಿತು. ವೈಜ್ಞಾನಿಕದೃಷ್ಟಿ ಈ ಮತವನ್ನು ಒಪ್ಪಿಕೊಳ್ಳುವುದಿಲ್ಲ *

---

* It may not be too much to say that while biologically procreation remains the primary function of Sex in human life, psychologically its primary function has come to vivify, enrich and develop love. Those who still insist upon animal analogy as a guide for human conduct, holding that sex union is justifiable only for the purpose of procreation, are in fundamental error. They fail to appreciate the great contribution Sex has to make to the spiritual life of man. In human beings Sex serves the end of love, independent of procreation."

Dr. M J. Exner

ಮಾನವನ ಸಹಜಸಂವೇದನೆ ಕಾಮ. ಅದರ ಅಂತಿಮ ಗುರಿ ಸಂತಾನ ಸೃಷ್ಟಿಯೆಂಬುದು ನಿಜವಾದರೂ ಅದರ ರಸವಂತಿಕೆಗಳಿಂದ ಮಾನವ ಜೀವನವೇ ರೂಪುಗೊಳ್ಳುತ್ತದೆ. ಮಾನವನ ವಿಚಾರಶಕ್ತಿಗೆ ಬೇಕಾದ ಕ್ರತು ಶಕ್ತಿಯನ್ನು, ದೈಹಿಕ ಬೆಳವಣಿಗೆಗೆ ಬೇಕಾದ ಪುಷ್ಟಿಯನ್ನು, ರಸಜೀವನಕ್ಕೆ ಬೇಕಾದ ಅಮೃತತ್ವವನ್ನು ಕಾಮ ಒದಗಿಸುತ್ತದೆ. ಹಿಂದೂ ಪುರಾಣಗಳಲ್ಲಿ ರತಿ, ಕಾಮರು ಚಿರಂಜೀವಿಗಳು. ಶಿವನಲ್ಲಿ ಮನ್ಮಥ ಕಾಮಪ್ರಚೋದನೆ ಮಾಡದಿದ್ದರೆ ತಾರಕಾಸುರ ಲೋಕವನ್ನು ನಾಶಮಾಡಿಬಿಡುತ್ತಿದ್ದ. ಶಿವ ಕಾಮನನ್ನು ಸುಟ್ಟರೂ ಕಾಮನೆಯನ್ನು ಸುಡಲಾಗಲಿಲ್ಲ. ಮನ್ಮಥ ದೇಹ ನೀಗಿಕೊಂಡರೂ ಮನಸಿಜನಾಗಿ ಅಮರನಾದ."

ಕ್ಷಣಕಾಲ ಪುಷ್ಪ ಅರೆಮೂಕಳಾಗಿ ಕುಳಿತಳು. ಅವಳ ಮೌನಕಂಡು ಸಂಜೀವ

"ಏನಾದರೂ ಮಾತನಾಡು ಪುಷ್ಪ, ಏಕೆ ಸುಮ್ಮನೆ ಕುಳಿತೆ."

"ಏನು ಮಾತಾಡಲಿ ದೊರೆ - ನನ್ನ ಬಾಯಿ ಕಟ್ಟಿಹೋಗಿದೆ. ಅಷ್ಟೆಲ್ಲ ಅಭ್ಯಾಸ ಯಾವಾಗಮಾಡಿಕೊಂಡಿರಿ ? ಇದುವರೆಗೆ ನಾನು ನೋಡುತ್ತಿದ್ದುದು ನಿಮ್ಮ ಒಂದೇ ಮುಖವನ್ನು - ಈಗ . . . "

"ಎಷ್ಟು ಮುಖ ಕಂಡುಬಂತು. ದತ್ತಾತ್ರೇಯನಿಗೆ. ಬ್ರಹ್ಮನಿಗೆ ನಾಲ್ಕು ಮುಖವಂತೆ, ಗಣಪತಿಗೆ ಐದು ಮುಖವಂತೆ, ಷಣ್ಮುಖನಿಗೆ ಆರು ಮುಖವಂತೆ, ರಾವಣನಿಗೆ ಹತ್ತು ಮುಖವಂತೆ - ನನಗೆಷ್ಟು ಮುಖ."

"ಈಗಲೇ ಹೇಳಲಾರೆ. ಸ್ವಲ್ಪ ದಿನ ಕಳೆದ ಮೇಲೆ ಹೇಳುತ್ತೇನೆ."

"ಗಂಟೆಯೆಷ್ಟು ನೋಡು."

"ಎಂಟೂಕಾಲಾಗುತ್ತ ಬಂದಿದೆ."

"ಹೊರಡೋಣ - ಹೊತ್ತಾಗುತ್ತದೆ."

ಕಾರಿನ ಬಳಿಗೆ ನಡೆದು ಬರುವಾಗ ಪುಷ್ಪ ಮತ್ತೆ ಕೇಳಿದಳು.

"ಇಷ್ಟೆಲ್ಲ ಅಭ್ಯಾಸ ಯಾವಾಗ ಮಾಡಿಕೊಂಡಿರಿ ಹೇಳಲೇ ಇಲ್ಲವಲ್ಲಾ."

"ಬಹುಮಟ್ಟಿಗೆ ಪಿತ್ರಾರ್ಜಿತ - ಸ್ವಲ್ಪಮಟ್ಟಿಗೆ ಸ್ವಯಾರ್ಜಿತ. ನನ್ನ ತಾಯಿ ತೀರಿಕೊಂಡಾಗ ನಾನು ಬಹು ಸಣ್ಣವನು. ಅವರ ಮುಖದ ನೆನಪೂ ನನಗೆ ಚೆನ್ನಾಗಿಲ್ಲ. ಆದರೆ ಅವರು ತುಂಬ ನಿಷ್ಠಾವಂತರು, ಪೂಜಾಪ್ರಿಯರು

ಎಂದು ಕೇಳಿದ್ದೇನೆ. ಲಲಿತಾ ಔಪಾಸಕರಾಗಿದ್ದರಂತೆ. ತಂದೆಯ ವಿಷಯ ನಿನಗೆ ಆಗಾಗ್ಗೆ ಹೇಳಿಯೇ ಇದ್ದೇನೆ - ಅವರೂ ಪರಮನಿಷ್ಠರು, ಭಗವದ್ಭಕ್ತರು. ತಂದೆಯವರು ಆಯುರ್ವೇದ ಪಂಡಿತರಾಗಿದ್ದ ಸಂಗತಿ ನಿನಗೆ ಗೊತ್ತಿದೆ. ಯಾರಾದರೂ ರೋಗಿಗಳಿಂದ ಕರೆಬಂದರೆ ಪೂಜೆಯನ್ನೂ ಬಿಟ್ಟು ಎದ್ದು ಹೋಗುತ್ತಿದ್ದರು. 'ರೋಗಿಗಳ ಸೇವೆಯೇ ಭಗವಂತನ ಸೇವೆ. ಇಲ್ಲಿ ಸಾಲಿಗ್ರಾಮವಾಗಿ ಕುಳಿತುಕೊಂಡು ಸೇವೆ ಮಾಡಿಸಿಕೊಳ್ಳುವ ನಮ್ಮಪ್ಪ ಅಲ್ಲಿ ರೋಗಿಯಾಗಿ ಮಲಗಿ ಸೇವೆ ಒಪ್ಪಿಸಿಕೊಳ್ಳುತ್ತಾನೆ' ಎನ್ನುತ್ತಿದ್ದರು. ಕೊನೆ ಕೊನೆಗೆ ಪಂಡಿತವೃತ್ತಿಗೇ ಶರಣುಹೊಡೆದರು. ಅವರಿಬ್ಬರ ತಪಸ್ಸಿನ ಫಲ ನನಗೆ ಸ್ವಲ್ಪ ಲಭಿಸಿದೆ. ನಮ್ಮಣ್ಣನಿಂದಲೂ ಸಹಾಯವಾಯಿತು ಬೇರೊಂದು ರೀತಿಯಲ್ಲಿ."

"ಅಣ್ಣನಿಂದಲೇ ಸಹಾಯ - ಹೇಗೆ?"

"ಅವನ ರೀತಿನೀತಿ ನೋಡುತ್ತಾ ಮಾನವ್ಯದಲ್ಲಿಯೇ ನಂಬಿಕೆ ಹೋಗುತ್ತ ಬಂತು. ಶ್ರೇಷ್ಟವಾದ ನರಜನ್ಮ ಹೊತ್ತೂ ಮನುಷ್ಯ ಪಶುವಿನಂತೆ ವರ್ತಿಸುವುದೇ ಎನಿಸಿತು. ಅಣ್ಣನ ಮನೋಭಾವದ ಕಾರಣ ಹುಡುಕುವ ಕುತೂಹಲ ಹುಟ್ಟಿತು. ಆಗ ನನ್ನನ್ನು ಕಾಪಾಡಿದುದು ಅತ್ತಿಗೆಯ ಸಾತ್ವಿಕ ವೃತ್ತಿ. ಅವರನ್ನೊಮ್ಮೆ ನೋಡಿದರೆ ನನ್ನ ಕೋಪವೆಲ್ಲಾ ಕರಗಿ ನೀರಾಗುತ್ತಿತ್ತು. ಮೈಸೂರಿಗೆ ಬಂದೆ - ರಾಮಕೃಷ್ಣಾಶ್ರಮದಲ್ಲಿ ಸ್ವಾಮಿ ವಿವೇಕಾನಂದರ ಗ್ರಂಥಗಳ ಪರಿಚಯವಾಯಿತು. ಅದರಲ್ಲಿಯೂ ಅವರ ದಿವ್ಯಗ್ರಂಥ 'ರಾಜಯೋಗ' ಅದನ್ನು ಇಪ್ಪತ್ತು ಮೂವತ್ತು ನಲ ಓದಿದೆ. ಆಶ್ರಮದ ಸ್ವಾಮಿಗಳ ಜತೆಯಲ್ಲಿ ಚರ್ಚೆಮಾಡಿದೆ - ನಾನೇ ವಿಚಾರಮಾಡಿದೆ. ನನ್ನ ವಿಚಾರಗಳೇ ತಿಳಿಯಾಗುತ್ತಾ ಬಂದವು - ಆದರಿನ್ನೂ ಮನಸ್ಸಿನಲ್ಲಿ ತುಂಬ ಬಗ್ಗಡವಿದೆ - ಶೋಧಿಸಬೇಕು, ತುಂಬಾ ಶೋಧಿಸಬೇಕು."

ಇಬ್ಬರೂ ಕಾರು ಸಮೀಪಿಸಿ ನೋಡುವಲ್ಲಿ ಡ್ರೈವರು ಹಿಂದಿನ ಸೀಟಿನಲ್ಲಿ ಮಲಗಿ ಸುಖವಾಗಿ ನಿದ್ರಿಸುತ್ತಿದ್ದ. ಸಂಜೀವ ಅರೆಮನಸ್ಸಿನಿಂದ ಅವನ ನಿದ್ರಾಭಂಗಮಾಡಿದ.

ಕಾರಿನಲ್ಲಿ ಬರುವಾಗ ಪುಷ್ಪ ಸಂಜೀವನ ಒತ್ತಿಗೆ ಕುಳಿತು ಅವನ ಎದೆಯ ಮೇಲೆ ತಲೆಯನ್ನೊರಗಿಸಿದಳು. ಸಂಜೀವ ಅವಳನ್ನು ಆದರದಿಂದ ಅಪ್ಪಿ

"ಚಳಿಯಾಗುವುದೇ ಸ್ವೀಟ್ - ಶಾಲು ತರಬೇಕಾಗಿತ್ತು."

"ಈಗ ಆಗುತ್ತಿಲ್ಲ"

ಸಂಜೀವ ತನ್ನ ಬ್ರೌನ್ ಬ್ಲೇಜರ್ (Brown Blazer) ಕೋಟು ಕಳಚಿ ಅವಳಿಗೆ ಹೊದೆಸಿದ.

"ಮಧುಚಂದ್ರನಿಗೆ (Honeymoon) ನಾವು ಎಲ್ಲಿಗೆ ಹೋಗುವುದು."

"ನೀನು ಹೇಳಿದಲ್ಲಿಗೆ - ಬೊಂಬಾಯಿಗೆ ಬೇಕಾದರೆ ಹೋಗಿ ಬರೋಣ."

"ಈಗೇಕೆ ಒಂದು ಸಣ್ಣ ಟ್ರಿಪ್ (Trip) ಮಾಡಬಾರದು ?"

"ಆಗಬಹುದು - ಎಲ್ಲಿಗೆ ಹೋಗೋಣ."

"ಬೆಂಗಳೂರಿಗೆ ಹೋಗಿ ಬರೋಣ. ನೀವೂ ನಾನೂ ಜತೆಯಲ್ಲಿದ್ದಂತೆಯೇ ಆಗಿಲ್ಲ. ನೀವು ಯಾವಾಗಲೋ ಬರುತ್ತೀರಿ ಹೋಗುತ್ತೀರಿ."

"ನಿಮ್ಮ ಮನೆಯಲ್ಲಿ ಯಾರೂ ಇಲ್ಲವಲ್ಲ. ನಿನ್ನ ತಾಯಿ ಒಬ್ಬರನ್ನೇ ಬಿಟ್ಟುಹೋಗುವುದು ನ್ಯಾಯವೇ?"

"ಅವರನ್ನು ಕೇಳಿ ಹೇಳುತ್ತೇನೆ. ಅವರು ಒಪ್ಪಿದರೆ ಬೆಂಗಳೂರಿಗೆ ಹೋಗೋಣವೇ?"

"ಅವಶ್ಯಕವಾಗಿ"

"ಯಾವಾಗ."

"ನಾಳೆ ಬೇಕಾದರೂ ನಾನು ಹೊರಡಲು ಸಿದ್ಧ."

"ಎಷ್ಟು ಒಳ್ಳೆಯವರ್ರೀ ನೀವು."

ಎಂದು ಪುಷ್ಪ ಅವನ ಸಮೀಪಕ್ಕೆ ಬಂದಳು.

ಕಾರು ಮೈಸೂರು ತಲುಪಿತು. ಪುಷ್ಪನನ್ನು ಒಳಕ್ಕೆ ಕಳಿಸಲು ಬಂದು ಸಂಜೀವ

"ಇನ್ನು ಹೋಗಲು ಅಪ್ಪಣೆಯೇ" ಎಂದು ಕೇಳಿದ.

"ಎಲ್ಲಿಗೆ ಹೋಗುವುದು ?"

"ಮನೆಗೆ."

"ಇದು ಮನೆಯಲ್ಲವೇನೋ ?''

''ನಾನೀಗ ನಿಂತರೆ ನಿಮ್ಮ ತಾಯಿಗೆ ವೃಥಾ ತೊಂದರೆ. ಅವರು ಮೊದಲಿನಿಂದ ಅಡಿಗೆಗಾರಂಭಿಸಬೇಕು.''

"ಏನಿಲ್ಲ. ನಾನು ಹೊರಡುವಾಗಲೇ ಮಮ್ಮಿ ಹೇಳಿದ್ದರು. ಅಡಿಗೆ ಸಿದ್ಧವಾಗಿದೆ."

"ನಾಳೆಯಿಂದ ಇಲ್ಲೇ ಬಂದು ಇದ್ದುಬಿಡುತ್ತೇನೆ ಸುಮ್ಮನಿರು. ಒಂಟಿಕೊಪ್ಪಲಿಗೆ ಹೋಗಿ ಬರುವ ಕಷ್ಟವಾದರೂ ತಪ್ಪುತ್ತದೆ."

"ಈಗ ಮೊದಲು ಟ್ಯಾಕ್ಸಿಯವನನ್ನು ಕಳಿಸಿ ಬನ್ನಿ."

ಟ್ಯಾಕ್ಸಿಯವನ ಬಾಡಿಗೆ ಕೊಟ್ಟು ಅವನನ್ನು ಸಂಜೀವ ಕಳಿಸಿ ಬಂದ. ಪುಷ್ಪ ಬೀರು ತೆಗೆದು ಅವನ ಕೈಗೆ ಎಂಟು ಮೊಳದ ಸೊಗಸಾದ ಫಿನ್‌ಲೇ ಮಿಲ್ಲಿನ ಹೊಸ ಪಂಚೆಯೊಂದನ್ನಿತ್ತಳು. ಸಂಜೀವ ನಸುನಗುತ್ತಾ

"ನೀನು ಬಲೆ ಮಾಯಗಾತಿ ಪುಷ್ಪ"

"ಏಕೆ ?"

"ಬಟ್ಟೆ ಬದಲಾಯಿಸುವ ನೆಪ ಹಾಕಬಹುದೆಂದು ಪಂಚೆಯನ್ನೂ ತರಿಸಿಟ್ಟಿರುವೆಯಲ್ಲಾ."

"ನನ್ನ ಯಜಮಾನರ ಯೋಗಕ್ಷೇಮ ನಾನು ನೋಡಿಕೊಳ್ಳ ಬೇಕಲ್ಲವೇ ?"

ಎನ್ನುತ್ತಾ ಪುಷ್ಪ ಒಳಗೆ ಹೋಗಿ ಊಟದ ವ್ಯವಸ್ಥೆ ಮಾಡಿ ಬಂದು ಸಂಜೀವನನ್ನು ಕರೆದೊಯ್ದಳು.

ಸಂಜೀವ ರಾತ್ರಿ ಅಲ್ಲಿಯೇ ಉಳಿದುಕೊಂಡಿದ್ದು ಬೆಳಿಗ್ಗೆ ಮನೆಗೆಹೋದ.

## ೧೨

ಕಾಲೇಜಿನಲ್ಲಿ ತನಗಾದ ಅನ್ಯಾಯ ಕಂಡು ಸುಂದರನಿಗೆ ನಾಲ್ಕು ದಿವಸ ಬೇಸರವಾಯಿತು. ರಜಕ್ಕೆ ಬರೆದು ಹಾಕಿ ಮನೆಯಲ್ಲಿ ಕುಳಿತುಬಿಡಲೇ ಎಂದು ಯೋಚಿಸಿದ. ಪ್ರೊ. ನಾಯಿಡು ಅವರ ಗುಂಪಿನವರು ತನ್ನ ನಡತೆಯ ಮೇಲೆ ವಿಪರೀತಾರ್ಥ ಕಲ್ಪನೆ ಮಾಡಬಹುದೆಂದು ಚಿಂತಿಸಿ ರಜದ ಯೋಚನೆ ಯನ್ನು ಬಿಟ್ಟುಬಿಟ್ಟ. ಸುಂದರನ ನಿರ್ವಿಣ್ಣತೆ ಹೋಗಲ್ಲು ಬಹಳ ದಿನ ಬೇಕಾಗಲಿಲ್ಲ. ಅವನ ಪ್ರಯೋಗಶಾಲೆ ಅವನೆಲ್ಲ ದುಃಖಗಳನ್ನೂ ಪರಿಹಾರ ಮಾಡುತ್ತಿತ್ತು - ಜತೆಗೆ ಕೊಳಲು ಇದ್ದೇಇತ್ತು.

ಸುಂದರ ಮರೆತಷ್ಟು ಸುಲಭವಾಗಿ ಸುನಂದಾ ಮರೆಯಲಾಗಲಿಲ್ಲ. ಕಾಲೇಜಿನವರು ಮಾಡಿದ ಅನ್ಯಾಯ - ಸುಂದರನ ಮೌನಸಮ್ಮತಿ ಎರಡೂ ಅವಳ ಹೃದಯದ ಮೇಲೆ ಬಲವಾದ ಬರೆಗಳನ್ನೆಳೆದಿದ್ದವು. ಗಂಡನ ಜತೆ ವಾದವಿವಾದಕ್ಕೆ ಕುಳಿತಾಗ ಅವಳು ತೋರುತ್ತಿದ್ದ ಹಟಮಾರಿತನ ಸುಂದರನ ಮನಸ್ಸನ್ನು ಕೆರಿಯುತ್ತಿತ್ತು. ಅಂಥ ಹೊತ್ತಿನಲ್ಲಿ ವಾದ ಬೆಳೆಸಿ, ಮತ್ತಷ್ಟು ಅಸಂತುಷ್ಟಿಗೆ ಕಾರಣವನ್ನೊದಗಿಸಬಾರದೆಂದು ಅವನು ಎದ್ದು ಹೊರಟು ಹೋಗುತ್ತಿದ್ದ. ಸುನಂದೆಯ ದೃಷ್ಟಿಯಲ್ಲದು ಮಹಾಪರಾಧವಾಗುತ್ತಿತ್ತು. 'ಇವರಿಗೆ ನಾನು ತಾಳಿಕೆಯಿಲ್ಲ. ನನ್ನ ಅಭಿಪ್ರಾಯಗಳು ಇವರಿಗೆ ತೃಣಸಮಾನ' ಎನ್ನುವ ಭಾವನೆ ಅವಳ ಮನಸ್ಸಿನಲ್ಲಿ ಬೇರೂರಿತು.

ಹೆಂಡತಿಯಲ್ಲಾಗುತ್ತಿದ್ದ ಮಾರ್ಪಾಟನ್ನು ಸುಂದರ ಗಮನಿಸದಿರಲಿಲ್ಲ. ಅವಳಿಗೆ ಶಾಂತಿ ಸಮಾಧಾನ ನೀಡಬೇಕೆಂಬುದು ಅವನ ಉತ್ಕಟೇಚ್ಛೆಯಾಗಿತ್ತು. ಅವಳ ದೃಷ್ಟಿಕೋನವೇ ಮಾರ್ಪಟ್ಟಿದುದರಿಂದ ಅವನು ಮಾಡಿದುದೆಲ್ಲಾ ಅವಳಿಗೆ ವ್ಯಂಗ್ಯವಾಗಿ, ವಿರೋಧವಾಗಿ, ತಪ್ಪಾಗಿ ಕಂಡುಬರುತ್ತಿತ್ತು.

ಒಂದು ದಿನ ಟಪಾಲಿನಲ್ಲಿ ಬಂದ ಜಾನಕಮ್ಮನ ಕಾಗದ ಸುನಂದೆಯನ್ನು ಅಸ್ತವ್ಯಸ್ತಳನ್ನಾಗಿ ಮಾಡಿತು. ಮನಸ್ಸು ಕ್ರೋಧಪರವಶವಾಯಿತು. ದುಃಖಾತಿರೇಕವನ್ನು ಕಾಗದದ ಮೇಲೆ ತೋರಿಸಿಕೊಂಡಳು. ಆದರೆ ಕುತೂಹಲ ಬಿಡಲಿಲ್ಲ. ಮುದ್ದೆಗೊಂಡು ಬಿದ್ದಿದ್ದ ಕಾಗದವನ್ನೆತ್ತಿಕೊಂಡು ಮತ್ತೆಮತ್ತೆ ಓದಿಕೊಂಡಳು. 'ಈ ಹಾಳು ಗಂಡಸು ಜಾತಿಯನ್ನು ದೇವರು ಏಕೆ ಸೃಷ್ಟಿಸಿದನೋ' ಎಂದುಕೊಂಡಳು.

ಆಕಾಶದ ಮನೋಹರ ನೀಲವರ್ಣವನ್ನು ಕಾರ್ಮೋಡಗಳು ಅವಕುಂಠನ ಹಾಕಿದಂತೆ ಮುಚ್ಚಿದ್ದಾಗ ಮಧ್ಯೆಯೊಂದು ಮಿಂಚಿನಬಳ್ಳಿ ಸುಳಿದು ಬೆಳಗಿಸಿತ್ತು. ಅಣ್ಣಾ ಚಂದ್ರಶೇಖರ ಮುಂಬಯಿಗೆ ಬಂದಿದ್ದುದನ್ನೂ ಮೈಸೂರಿಗೆ ಒಂದು ವಾರದಲ್ಲಿ ಬರುವ ವಿಷಯವನ್ನೂ ಬರೆದು, 'ನೀನೂ ನಿನ್ನ ಯಜಮಾನರೂ ಬರಬೇಕೆಂದು ಅಮ್ಮ ಬಯಸುತ್ತಾಳೆ' ಎಂದು ಸೇರಿಸಿದ್ದಳು 'ಅಣ್ಣಾ - ಅಣ್ಣಾ ಬರುತ್ತಾನೆ. ಇಂಗ್ಲೆಂಡ್ ಅಮೇರಿಕೆಯಲ್ಲಿ ಖ್ಯಾತಿಗಳಿಸಿಕೊಂಡಿರುವ ಅಣ್ಣಾ ಬರುತ್ತಾನೆ' ಎಂದು ಅವಳ ಹೃದಯ ಹರ್ಷದಿಂದ ಬಿರಿಯಿತು.

ಅಣ್ಣ ಬರುವ ಸಂತೋಷವನ್ನು ಅನುಭವಿಸಲು ಜಾನಕಮ್ಮನ ಕಾಗದ ಅವಕಾಶಕೊಡಲಿಲ್ಲ. ದೇವರಯ್ಯನ ಹೆಸರಿನಲ್ಲಿದ್ದ ಲಗ್ನಪತ್ರಿಕೆಯನ್ನು ಜಾನಕಮ್ಮ ಕಳುಹಿಸಿದ್ದಳು - ಲಗ್ನಪತ್ರಿಕೆಯೇ ರಂಗಣ್ಣನಾಗಿ ಆಗ ಸುನಂದೆಯ ಎದುರಿನಲ್ಲಿ ನಿಂತಿದ್ದರೆ ಶಿವನ ಫಾಲಾಕ್ಷಕ್ಕೆ ಸಿಕ್ಕಿ ಮದನ ಉರಿದುಹೋದಂತೆ ಉರಿದುಹೋಗುತ್ತಿದ್ದ.

ಕಾಗದಗಳನ್ನೆತ್ತಿ ಒಂದೆಡೆಯಿಟ್ಟು ಕ್ರೋಧಾವಿಷ್ಟಳಾಗಿ ಕುಳಿತಳು. ಪ್ರಸುಪ್ತಾವಸ್ಥೆಯಲ್ಲಿದ್ದ ಜ್ವಾಲಾಮುಖಿಯಂತಾಗಿತ್ತು ಅವಳ ಸ್ಥಿತಿ. ಗಫೂರ್ ಬಂದು ಬಾಗಿಲು ಬಳಿ ಕುಳಿತುದನ್ನೂ ಅವಳು ಗಮನಿಸಲಿಲ್ಲ. ಒಂದೆರಡು ಬಾರಿ ಮಾತನಾಡಿಸಲು ಗಫೂರ್ ಪ್ರಯತ್ನಿಸಿದ. 'ಅಮ್ಮಾಜಿ'ಯವರ ಶೂಲದೃಷ್ಟಿ ಕಂಡೊಡನೆಯೇ ಗಫೂರ್ ಮೆಲ್ಲನೆದ್ದು ಹೊರಟುಹೋದ.

ಬಿ. ಆರ್. ವಿ. ಥಿಯೇಟರಿನಲ್ಲಿ (B R. V. Theatre) ನಡೆಯುತ್ತಿದ್ದ ಚಾರ್ಲ್ಸ್ ಬಾಯೆ ಅಭಿನಯಿಸಿದ್ದ ಒಂದು ಚಿತ್ರಕ್ಕೆ ಸುನಂದೆಯನ್ನು ಕರೆದೊಯ್ಯಬೇಕೆಂದೇ ಸುಂದರ ಮನೆಗೆ ಬೇಗ ಬಂದ. ಸುನಂದಳಿಗೆ ಮನೆ ಬಿಟ್ಟು ಹೊರಗೆ ಹೋಗುವುದು ಬೇಕಾಗಿತ್ತು. ಚಿತ್ರಕ್ಕೆ ಹೊರಡಲೊಪ್ಪಿ ಸಿದ್ಧಳಾದಳು. ಅಣ್ಣನಿಂದ ಬಂದಿದ್ದ ಕಾಗದದ ವಿಷಯ ಪ್ರಸ್ತಾಪಿಸುವುದೂ ಸದ್ಯ ಅವಳಿಗೆ ಬೇಕಾಗಿರಲಿಲ್ಲ.

ಚಿತ್ರ ಮುಗಿಸಿಕೊಂಡು ಮನೆಗೆ ಬಂದ ಮೇಲೆ ಗಂಡಹೆಂಡತಿಗೆ ದೊಡ್ಡ ಜಗಳವಾಯಿತು. ಚಿತ್ರದಲ್ಲಿ ರೋಗಿಷ್ಟೆಯಾದ ಪತ್ನಿ ಸದಾ ಪತಿಯನ್ನು ಕಾಡುತ್ತಿರುತ್ತಾಳೆ. ಮಕ್ಕಳು ಕೂಡ ಅವಳ ಕೋಪಾಗ್ನಿಗೆ ಸಿಕ್ಕಿ ತಾಪ ಪಡುತ್ತಿವೆ. ಈ ಮಧ್ಯೆ ಮಕ್ಕಳ ದಾದಿಯಾಗಿ ಬಂದವಳಲ್ಲಿ ಗಂಡನಿಗೆ ಅನುರಾಗ ಹುಟ್ಟುತ್ತದೆ. ಉರಿಯುವ ಬೆಂಕಿಗೆ ಆಜ್ಯ ಹುಯ್ದಂತಾಗುತ್ತದೆ. ಗಂಡ ಹೆಂಡತಿಯರಲ್ಲಿ ವೈಮನಸ್ಯ ಬೆಳೆದು ಕೊನೆಗೆ ಅವನು ಕೆಂಡನೂಕುವ ಕಬ್ಬಿಣದ ಕೋಲಿನಿಂದ ಅವಳನ್ನು ಸಾಯಬಡಿಯುತ್ತಾನೆ. ಕೋರ್ಟು ಅವನನ್ನು ತಪ್ಪಿತಸ್ಥನೆಂದು ಪರಿಗಣಿಸಿ ಮರಣದಂಡನೆಗೆ ಗುರಿಮಾಡುತ್ತದೆ.

ಸುಂದರ ಉದ್ದೇಶಪೂರ್ವಕವಾಗಿಯೇ ತನ್ನನ್ನು ಈ ಚಿತ್ರ ನೋಡಲು ಕರೆದುಕೊಂಡು ಹೋಗಿದ್ದನೆಂದು ಸುನಂದಾ ಭಾವಿಸಿದಳು. ಮನೆಗೆ ಬಂದು

ಊಟ ಮುಗಿಸಿದ ಮೇಲೆ ಸುನಂದಾ ಕೈಯಲ್ಲಿ ಕ್ರೋಷಾದಾರ, ಕಡ್ಡಿ ಹಿಡಿದು ಕುಳಿತಳು. ಲೋಕಾಭಿರಾಮವಾಗಿ ಮಾತನಾಡುತ್ತಾ ಸುನಂದಾ ಕೇಳಿದಳು

"ಚಿತ್ರ ನಿಮ್ಮ ಮನಸ್ಸಿಗೆ ಹಿಡಿಯಿತೇ ?"

"ಅಭಿನಯ, ದಿಗ್ದರ್ಶನ ಚೆನ್ನಾಗಿತ್ತು. ಚಾರ್ಲ್ಸ್ ಬಾಯೆ ದೊಡ್ಡ ಕಲಾವಿದ."

"ಅಭಿನಯದ ವಿಷಯವಲ್ಲ ನಾನು ಕೇಳಿದ್ದು. ಕಥಾವಸ್ತುವಿನ ವಿಷಯ. ಕಥಾನಾಯಕನ ನಡತೆ ಒಪ್ಪಿಕೊಳ್ಳುತ್ತೀರಾ ?"

"ಹೇಗೆ ಒಪ್ಪಿಕೊಳ್ಳಲಿ. ರೋಗಿಷ್ಟೆಯಾದ ಹೆಂಡತಿಗೆ ಸಿಡುಕಲು (Peevishness) ಹಿಡಿಯುವುದು ಸ್ವಾಭಾವಿಕ. ಆ ಸಮಯದಲ್ಲಿ ಅವಳು ತೋರುವ ಕೋಪತಾಪ ಸಹಿಸಿಕೊಳ್ಳಬೇಕಾದುದು ಅವನ ಕರ್ತವ್ಯ. ಇದು ಆದರ್ಶವಾದ. ಇದರಲ್ಲಿ ನಿಸರ್ಗವಾದದ ಮುಖವನ್ನೂ ನಾವು ನೋಡಬೇಕು

"ಯಾವುದು ಅದು ?"

"ಗಂಡನ ಸಹನೆಗೂ ಒಂದು ಮಿತಿಯಿಲ್ಲವೇ ? ಬೆಳಿಗ್ಗೆಯಿಂದ ರಾತ್ರಿಯವರೆಗೂ ಹೆಂಡತಿ ಚಿಟಗುಟ್ಟುತ್ತಿದ್ದರೆ, ಮಕ್ಕಳನ್ನೂ ಕೂಡ ಹಿಂಸೆ ಮಾಡುತ್ತಿದ್ದರೆ, ಗಂಡ ಹೇಗೆ ಸಹಿಸಿಕೊಳ್ಳಬೇಕು."

"ಸಹಿಸಿಕೊಳ್ಳಬಾರದು - ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವುದಕ್ಕೆ ಬಂದ ದಾದಿಯಲ್ಲಿ ಅನುರಕ್ತನಾಗಿ ಹೆಂಡತಿಗೆ ಮೋಸಮಾಡಿ ತನ್ನ ಕಾಮ ದಾಹ ತೀರಿಸಿಕೊಳ್ಳಬೇಕು."

"ಚಿತ್ರದಲ್ಲಿ ನಾಯಕನಿಗೂ ದಾದಿಗೂ ಕಾಮಸಂಬಂಧ ಕಲ್ಪಿಸಿಲ್ಲ. ಮಕ್ಕಳ ಬಗ್ಗೆ ಅವರಿಬ್ಬರಿಗೂ ಇದ್ದ ವಿಶ್ವಾಸವೇ ಅವರನ್ನು ಹತ್ತಿರ ತರುತ್ತದೆ."

"ಮಕ್ಕಳ ನೆಪಮಾಡಿಕೊಂಡು ಈ ದುರ್ವ್ಯಾಪಾರ ನಡೆಸುವುದು ಮತ್ತಷ್ಟು ಪಾಪವಲ್ಲವೇ ?"

"ನಾಯಕ, ದಾದಿ ಇಬ್ಬರೂ ಉದ್ದೇಶಪೂರ್ವಕವಾಗಿ ದುರ್ಮಾರ್ಗ ಪ್ರವರ್ತಕರಾಗಿಲ್ಲ ಸುನಂದಾ. ಪರಿಸ್ಥಿತಿ ಅವರನ್ನು ಪಾಪದ ಹಾದಿ ತುಳಿಸಿತು."

"ಈ ಮಧ್ಯೆ ಕಾಹಿಲೆ ಮಲಗಿ ಸಾಯುತ್ತಿರುವ ಪ್ರಾಣಿಯ ಗತಿಯೇನೆಂಬುದು ಯಾರಿಗೂ ಬೇಡವೇನೋ ?"

"ಅವಳನ್ನು ಒಲಿಸಿಕೊಳ್ಳಲು ಗಂಡ ವಿಶ್ವಪ್ರಯತ್ನ ಮಾಡುತ್ತಾನಲ್ಲಾ."

"ಸರಿ. ಚಿತ್ರ ಮಾಡಿದವನೂ ಗಂಡಸೇ. ಗಂಡಸು ಏನು ಮಾಡಿದರೂ ಸರಿಯೆಂದು ತೋರಿಸುವುದೇ ಚಿತ್ರದ ಉದ್ದೇಶ."

"ನೀನು ಇಲ್ಲದ ಅಪಾರ್ಥ ಕಲ್ಪನೆಮಾಡಿದರೆ ಉತ್ತರ ಹೇಳುವುದು ಕಷ್ಟ."

"ಗಂಡಸರೆಲ್ಲರ ಹಣೆಯಬರಹವೂ ಒಂದೇ ಆಯಿತು. ನಿಮ್ಮ ಭೋಗ ಲಾಲಸೆಗಳಿಗೆ ಈಡಾಗುವುದು ಬಿಟ್ಟು ಹೆಂಗಸಿಗೆ ಬೇರೆ ಕೆಲಸವೇ ಇಲ್ಲವೆಂದು ಭಾವಿಸಿಕೊಂಡಿರುವಿರಿ."

"ಹಾಗೆ ಭಾವಿಸುವವನನ್ನು ಯಾರೂ ಗೌರವಿಸುವುದಿಲ್ಲ ಸುನಂದಾ. ಜಾರ್ಜ್‌ಸ್ಯಾಂಡ್ (George Sand), ಇಬ್ಸನ್ (Henrik Ibsen) ಇವರ ಅಭಿಪ್ರಾಯಗಳನ್ನು ತಂದು ಭಾರತೀಯ ಜೀವನಕ್ಕೆ ಕಸಿ ಮಾಡುವುದರಲ್ಲಿ ಅರ್ಥವಿಲ್ಲ. ವಿಲಾಯಿತಿಯವರ ಆಚಾರ, ವಿಚಾರ ಅವರ ಧರ್ಮ, ಸಂಸ್ಕೃತಿಯನ್ನವಲಂಬಿಸಿದೆ. ಹಾಗೇ ನಮ್ಮ ಆಚಾರ, ವಿಚಾರ ನಮ್ಮ ಧರ್ಮ, ಸಂಸ್ಕೃತಿಯನ್ನವಲಂಬಿಸಿದೆ. ಜೀವನಸಂಗ್ರಾಮದಲ್ಲಿ ಹೆಣ್ಣು ಗಂಡು ಇಬ್ಬರೂ ಸಹಯೋಧರು (Comrades) ಎಂದು ನಮ್ಮ ಧರ್ಮ ಹೇಳಿದೆ. ಗಂಡಸು ಹೊರಗೆ ದುಡಿದು ಮನೆಗೆ ಬೇಕಾದುದನ್ನು ಒದಗಿಸುತ್ತಾನೆ; ಹೆಣ್ಣು ಅದನ್ನು ಒಪ್ಪ ಓರಣವಾಗಿಟ್ಟುಕೊಂಡು ಮನೆ ಕಾಪಾಡುತ್ತಾಳೆ. ಅವನೂ ದುಡಿಯುತ್ತಾನೆ - ಅವಳೂ ದುಡಿಯುತ್ತಾಳೆ. ಪರಸ್ಪರ ವಿಶ್ವಾಸ, ಗೌರವ ಆ ದುಡಿಮೆಯಲ್ಲಿಯೇ ಸಂತೋಷವನ್ನೊದಗಿಸುತ್ತದೆ."

"ನಿಮ್ಮ ಸೂತ್ರವನ್ನು ನನ್ನ ಅಕ್ಕ ಜಾನಕಿಯ ಜೀವನಕ್ಕೆ ಹೋಲಿಸಿ ನೋಡಿ."

"ಅವರಿಗೆ ಗಂಡ ಅನ್ಯಾಯ ಮಾಡಿರಬಹುದು . . ."

"ಅನ್ಯಾಯಮಾಡಿರಬಹುದೆಂದೇಕೆ ಅನುಮಾನಿಸುವಿರಿ. ಇಲ್ಲಿನೋಡಿ."

ಎಂದು ಜಾನಕಮ್ಮನ ಕಾಗದವನ್ನು ಸುಂದರನ ಕೈಯಲ್ಲಿಟ್ಟಳು. ಸುಂದರ ಸಾವಕಾಶವಾಗಿ ಅದನ್ನು ಓದಿಕೊಂಡು

"ರಂಗಣ್ಣನವರು ಯೋಗ್ಯರು ಎಂದು ನಾನು ಭಾವಿಸಿಕೊಂಡಿದ್ದೆ."

"ಬಂಡವಾಳ ಹೊರಗೆ ಬರುವವರೆಗೆ ಎಲ್ಲರೂ ಯೋಗ್ಯರೇ! - ಮೈಸೂರಿಗೆ ಹೋಗುವ ವಿಷಯ ಏನು ಮಾಡುತ್ತೀರಿ."

"ನಿನಗೆ ಗೊತ್ತಿಲ್ಲವೇ ಸುನೂ. ಕಾಲೇಜಿನ ಈಗಿನ ಪರಿಸ್ಥಿತಿಯಲ್ಲಿ ನನಗೆ ರಜಾ ಸಿಕ್ಕುತ್ತದೆಯೇ ?"

"ನಾನು ಹೋಗಿ ಬರಬಹುದಷ್ಟೆ ?"

"ಅವಶ್ಯಕವಾಗಿ ಹೋಗಿ ಬಾ. ಗಫೂರ್ ಕರೆದುಕೊಂಡು ಹೋಗಿ ಬಿಟ್ಟುಬರುತ್ತಾನೆ."

"ನಾನು ನಾಳೆ ಮಧ್ಯಾಹ್ನ ಹೊರಡುತ್ತೇನೆ" ಎಂದು ಹೇಳಿದಳು.

ಸುಂದರ ಲ್ಯಾಬೊರೇಟರಿಗೆ ಬಂದು ತಲೆಯಮೇಲೆ ಕೈಹೊತ್ತು ಕುಳಿತ. ದುಃಖ ಉಕ್ಕಿಬಂತು. ಮೇಜಿನ ಅಂಚಿಗೆ ಮುಖವಿಟ್ಟು ಮಲಗಿದ. ಹರಟೆಯ ಕೊನೆಗಳು ಕಣ್ಣೀರಿನಲ್ಲಿ ತೊಯ್ದುವು. ಮಾತೃಹಸ್ತ ಅವನ ಭುಜ ನೇವರಿಸಿ

"ತಿಳಿದವರು ಹೀಗೆ ದುಃಖಿಸುತ್ತಾರೆಯೇ ಸರ್ಕಾರ್" ಎಂದಿತು.

ಸುಂದರ ಗಫೂರನ ಕೈಯಲ್ಲಿ ಮುಖವಿಟ್ಟು ಮಕ್ಕಳಂತೆ ರೋಧಿಸಿದ.

## ೧೩

ಇದ್ದಕ್ಕಿದ್ದಂತೆ ಬಂದಿಳಿದ ಸುನಂದೆಯನ್ನು ಕಂಡು ಇಂದಿರಮ್ಮನವರು ಆಶ್ಚರ್ಯವ್ಯಕ್ತಮಾಡಿದರೂ. ತಂಗಿ ಬಂದುದು ಜಾನಕಮ್ಮನಿಗೆ ಹೆಚ್ಚಿನ ಸಂತೋಷವನ್ನುಂಟುಮಾಡಿತು.

"ನಿನ್ನ ಯಜಮಾನರು ಏಕೆ ಬರಲಿಲ್ಲ ಸುನಂದಾ"

ಎಂದು ಇಂದಿರಮ್ಮನವರು ಕೇಳಿದರು.

"ಕಾಲೇಜಿನಲ್ಲಿ ರಜಾ ಸಿಕ್ಕುವುದಿಲ್ಲಂತಮ್ಮ"

"ಶನಿವಾರ - ಭಾನುವಾರವಾದರೂ ಬನ್ನಿ ಎಂದು ಹೇಳಬೇಕಾಗಿತ್ತು."

"ರಿಸರ್ಚಸ್ (Researches) ಬಿಟ್ಟು ಅವರಿಗೇನೂ ಬೇಡವಾಗಿದೆಯಮ್ಮ"

ಎಂದು ಸುನಂದಾ ಹೇಳಿದಳು. ಸುನಂದೆಯ ಮನಸ್ಸು ವಿಹ್ವಲವಾಗಿದೆಯೆಂಬುದನ್ನು ಇಂದಿರಮ್ಮನವರು ಅರಿಯಲು ತಡವಾಗಲಿಲ್ಲ.

ಹಲವು ತಿಂಗಳ ವಿಯೋಗ ಸುನಂದೆಗೂ ಜಾನಕಮ್ಮನಿಗೂ ಅವ್ಯಕ್ತ ಮಧುರಬಾಂಧವ್ಯ ಬೆಳಸಿತ್ತು.

"ನಿನ್ನ ಯಜಮಾನರು ತೀರ ಇಷ್ಟು ಅನ್ಯಾಯಮಾಡುತ್ತಾರೆಂದು ನಾನು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ ಅಕ್ಕ."

"ಅನ್ಯಾಯವೇನಾಯಿತು ಸುನಂದಾ."

"ಬೇರೆ ಮದುವೆ ಮಾಡಿಕೊಳ್ಳುವುದೇ ?"

"ಅವರ ಮನೆಗೊಬ್ಬಳು ಗೃಹಿಣಿ ಬೇಕಲ್ಲ."

"ನಿನ್ನ ಮನೆಗೂ ಗೃಹಸ್ಥ ಬೇಕಲ್ಲ - ಅದಕ್ಕೆ ಅವಕಾಶವಿದೆಯೇನು ?"

"ಬೇಡ ತಾಯಿ - ಅವಕಾಶವಿದ್ದರೂ ಬೇಡ - ಜನ್ಮಜನ್ಮಕ್ಕೂ ಆ ನರಕ ಬೇಡ."

"ಮಕ್ಕಳಿಗಾದರೂ ಆಸ್ತಿಯ ಪಾಲು ಕೊಡುತ್ತಾರಂತೋ ಇಲ್ಲವೋ ?"

"ಕೊಡದಿದ್ದರೆ ಬಿಡುವವರು ಯಾರು ? ಸೋಮಶೇಖರರಾಯರಿಗೆ ಕಾಗದ ಬರೆದಿದ್ದೇನೆ. ನಿನಗೆ ಇನ್ನೊಂದು ವಿಶೇಷಸುದ್ದಿ ಹೇಳುವುದಿದೆ ಸುನಂದಾ . . . ."

"ಏನದು ?"

"ನಿನ್ನ ಸ್ನೇಹಿತಳು ಪುಷ್ಪಾ - ಅವಳಿಗೆ ಮದುವೆ."

"ಮದುವೆ ! ಕತ್ತೆ ನನಗೊಂದು ಕಾಗದ ಕೂಡ ಬರೆದಿಲ್ಲ ನೋಡು. ಗಂಡ ಯಾರು ?"

"ಯಾರಿರಬಹುದು ಊಹಿಸು"

"ಅವರ ಸಂಬಂಧದವರೇ ಯಾರಾದರೂ ಇರಬಹುದು."

"ಅವರ ಸಂಬಂಧವರಲ್ಲ - ನನ್ನ ಸಂಬಂಧವರು."

"ಯಾರಕ್ಕಾ ?"

"ನಮ್ಮ ಸಂಜೀವ - ಇನ್ನು ಮೇಲೆ ಪುಷ್ಪಾ ನನ್ನ ವಾರಗಿತ್ತಿ."

"ಹಾ ! ತಮಾಷೆ ಮಾಡುತ್ತಿರುವೆಯಾ ?"

"ಇಲ್ಲ ಸುನೂ - ನಾಲ್ಕೈದು ದಿವಸಗಳ ಹಿಂದೆ ಇಬ್ಬರೂ ನನ್ನ ಆಶೀರ್ವಾದ ಪಡೆಯುವುದಕ್ಕೆ ಬಂದಿದ್ದರು."

"ಪುಷ್ಪ ಘಾಟಿ - ನಾನು ಏನೋಂತಿದ್ದೆ - ಆದರೆ . . . ."

"ಇದನ್ನು ಕೇಳಿ ನಿನಗೆ ಸಂತೋಷವಾದಂತಿಲ್ಲ."

"ಖಂಡಿತವಾಗಿಯೂ ಸಂತೋಷವಾಗಿಲ್ಲ. ಸಂಜೀವ ತುಂಬ ಒಳ್ಳೆಯ ಹುಡುಗ - ಮರ್ಯಾದಸ್ಥ. ಪುಷ್ಪನ ಜತೆ ಅವನು ಪೂರೈಸುತ್ತಾನೆಯೇ ?"

"ಏಕೆ ?"

"ಅದು ಶುದ್ಧ ಚೆಲ್ಲು."

"ನಿನ್ನ ಸ್ನೇಹಿತಳನ್ನು ನೀನೇ ಅಲ್ಲಗಳೆಯುವೆಯಾ ?"

"ಅವಳು ನನ್ನ ಸ್ನೇಹಿತಳಾಗಿದ್ದರೂ ನಾನು ಅಷ್ಟು ಹಚ್ಚಿಕೊಂಡಿರಲಿಲ್ಲ. ಒಂದೇ ಕ್ಲಾಸಿನಲ್ಲಿದ್ದೆವು. ಜತೆಯಲ್ಲಿ ಓದುತ್ತಿದ್ದೆವು. ಸ್ನೇಹಿತರು ಎನಿಸಿ ಕೊಂಡ ನಾವೇ ಒಬ್ಬರನ್ನೊಬ್ಬರು ಆಡಿಕೊಳ್ಳುವುದು ಸರಿಯಲ್ಲ ಎಂದು ಬಾಯಿ ಮುಚ್ಚಿಕೊಂಡಿದ್ದೆ. ಅವಳ ಮನೆಗೆ ನಾನು ಯಾವಾಗಲಾದರೂ ಹೋದದ್ದು ನೋಡಿದೆಯಾ ? ಅವಳ ಮನೆಯ ಕೀರ್ತಿಯೂ ಅಷ್ಟೇನೂ ಚೆನ್ನಾಗಿಲ್ಲ."

"ನೀನು ಹೇಳುವುದು ಕೇಳಿದರೆ ಭಯವಾಗುತ್ತದೆ ನುನೂ."

"ಅವರ ಸಂಬಂಧ ಎಲ್ಲಿಯವರೆಗೆ ಬಂದಿದೆ ?''

"ಮದುವೆ ವ್ಯವಸ್ಥೆ ನಡೆದಿರಬಹುದು."

"ಸರಿ - ಇದೂ ಒಂದು ದುರಂತ" ಎಂದು ನಿಟ್ಟುಸಿರುಬಿಟ್ಟಳು.

"ಅಣ್ಣ ಯಾವಾಗ ಬರುತ್ತಾನೆ."

"ನಾಳೆ ನಾಡಿದ್ದು ಬರಬಹುದು."

"ನಾನು ಪುಷ್ಪನನ್ನು ನೋಡಬೇಕಕ್ಕಾ."

"ಅವಳ ಮನೆಗೆ ಹೋಗುವುದಿಲ್ಲವೆಂದೆ."

"ಹೇಳಿ ಕಳಿಸಿದರೆ ಇಲ್ಲೇ ಬರುತ್ತಾಳೆ"

"ಸಂಜೀವನಿಗೆ ಹೇಳಿ ಕಳುಹಿಸುತ್ತೇನೆ - ಅವನೇ ಅವಳನ್ನು ಕರೆದು ಕೊಂಡು ಬರುತ್ತಾನೆ" ಎಂದು ಜಾನಕಮ್ಮ ಉತ್ತರಿಸಿದಳು.

ಮನೆಯಲ್ಲಿ ಎಲ್ಲರಿಗೂ ಚಂದ್ರಶೇಖರನ ಧ್ಯಾನವೇ ಆಯಿತು. ಅವನ ರೂಮ್ ಅಲಂಕಾರ ಮಾಡುವುದು, ಅವನಿಗೆ ಬಟ್ಟೆಬರೆ ಹೊಂದಿಸಿಡುವುದು, ಬಗೆಬಗೆಯ ತಿಂಡಿ ತಿನಸುಗಳನ್ನು ಸಿದ್ಧಗೊಳಿಸುವುದು ಇವುಗಳಲ್ಲಿ ಯಾರಿಗೂ ವ್ಯವಧಾನವಾಗಲಿಲ್ಲ. ಹೇಳಿದ್ದ ತಾರೀಖಿಗೆ ಚಂದ್ರಶೇಖರ ಬರಲೂ ಇಲ್ಲ. ಅವನು ಬರುತ್ತಾನೋ ಹಾಗೇ ಅಮೆರಿಕಾಕ್ಕೆ ಹೊರಟುಹೋಗುತ್ತಾನೋ

ಎಂದು ಇಂದಿರಮ್ಮನವರು ಚಿಂತಿಸಲಾರಂಭಿಸಿದರು. ಅವರಿಗೆ ಸಮಾಧಾನ ಹೇಳುವ ಕೆಲಸವೂ ಸುನಂದೆಗೆ ಗಂಟುಬಿತ್ತು.

ಸಂಜೀವನಿಗೆ ಸ್ವಲ್ಪವೂ ಪುರಸತ್ತಿರಲಿಲ್ಲ. ಹೇಳಿದವೇಳೆಗೆ ಫೋಟೋಗ್ರಾಫರ್ ಚಿತ್ರಗಳನ್ನು ಕೊಡಲಿಲ್ಲ. ಎನ್‌ಲಾರ್ಜ್‌ಮೆಂಟ್ಸ್ ಮತ್ತು ಫೋಟೋ ಪ್ರತಿಗಳನ್ನು ಒಟ್ಟಿಗೆ ಕೊಡುವುದಾಗಿ ಅವನು ತಿಳಿಸಿದ್ದ. ಅವನಿಗೆ ವರಾತ ಹಚ್ಚಿ, ಚಿತ್ರಗಳನ್ನು ಸಿದ್ಧಮಾಡಿಸುವುದೇ ಸಂಜೀವನಿಗೆ ದೊಡ್ಡ ಕೆಲಸವಾಯಿತು.

ಶನಿವಾರ ಖಂಡಿತವಾಗಿ ಚಿತ್ರಗಳನ್ನು ಕೊಡುವುದಾಗಿ ಫೋಟೋಗ್ರಾಫರ್ ತಿಳಿಸಿದ್ದ. ಸಂಜೀವ ಬೆಳಿಗ್ಗೆಯೇ ಅವನ ಸ್ಟುಡಿಯೋಗೆ ಹೋಗಿ ಕುಳಿತ. ಎನ್‌ಲಾರ್ಜ್‌ಮೆಂಟ್‌ಗಳು ಕಟ್ಟುಹಾಕಲಿಕ್ಕೆ ಕಳಿಸಲ್ಪಟ್ಟಿದ್ದವು. ಅವನ್ನು ತರಲು ಒಬ್ಬ ಆಳು ಕಳುಹಿಸಿ ಜನಾರ್ದನ್ ಉಳಿದ ಚಿತ್ರಗಳಿಗೆ ಮೌಂಟ್ ಹಾಕಲು ಕುಳಿತ. ಮೌಂಟ್ ಹಾಕುವ ಕೆಲಸ ಮುಗಿಯುವ ವೇಳೆಗೆ ಎನ್‌ಲಾರ್ಜ್‌ಮೆಂಟ್‌ಗಳೂ ಬಂದವು. ಅವುಗಳನ್ನು ಗಾಡಿಯಲ್ಲಿಟ್ಟುಕೊಂಡು ಸಂಜೀವ ಮನೆ ತಲುಪುವ ವೇಳೆಗೆ ಅಪರಾಹ್ನವಾಗಿ ಹೋಗಿತ್ತು. ಐದೇ ನಿಮಿಷಗಳಲ್ಲಿ ಸ್ನಾನ, ಊಟ ಮುಗಿಸಿ ಚಿತ್ರಗಳನ್ನು ತನ್ನ ಶಯ್ಯಾಗೃಹದ ಗೋಡೆಯ ಮೇಲೆ ಮಾಟವಾಗಿ ಕಟ್ಟಲು ನಿಂತ. ಅತ್ತ ಇತ್ತ ತನ್ನ ಪುಷ್ಪನ ಬಿಡಿಯ ಚಿತ್ರಗಳು - ಅವುಗಳ ಮಧ್ಯೆ ತಾವಿಬ್ಬರೂ ಇರುವ ಚಿತ್ರ. ಗೋಡೆಗೆ ಮೊಳೆಹೊಡೆದು, ಚಿತ್ರಗಳಿಗೆ ದಾರ ಬಿಗಿಯುತ್ತಿರುವಲ್ಲಿ ಪುಷ್ಪ ಬಂದಳು.

"ಬಾ ಸ್ವೀಟ್ - ಒಳ್ಳೆಯ ಸಮಯಕ್ಕೆ ಸರಿಯಾಗಿ ಬಂದೆ"

ಎಂದು ಅವಳಿಗೆ ಚಿತ್ರಗಳನ್ನು ತೋರಿಸಿದ. ಪುಷ್ಪನ ಆನಂದ ಕಣ್ಣಲ್ಲಿ ಕುಣಿಯುತ್ತಿತ್ತು.

"ನಿಮ್ಮದು ಎಷ್ಟು ಸ್ವಾರ್ಥ ?"

"ಸ್ವಾರ್ಥವೇ ?"

"ಅಲ್ಲದೆ ಮತ್ತೇನು. ಚಿತ್ರಗಳು ನನಗೆ ತಂದುಕೊಡುವುದಕ್ಕೆ ಮೊದಲೇ ನಿಮ್ಮ ರೂಮಿನಲ್ಲಿ ಕಟ್ಟಿಕೊಳ್ಳಬೇಕೋ ?"

"ಮನೆಗೆ ಬಂದು ಸ್ವಲ್ಪ ಹೊತ್ತಾಯಿತು ಡಾರ್ಲಿಂಗ್. ಚಿತ್ರಗಳನ್ನು ತೆಗೆದುಕೊಂಡು ನಿನ್ನಲ್ಲಿಯೇ ಬರುವವನಿದ್ದೆ."

"ನಾನೂ ಹನ್ನೆರಡು ಗಂಟೆಯವರೆಗೆ ನೋಡಿದೆ - ನೀವು ಬರಲಿಲ್ಲ - ಮನಸ್ಸು ತಡೆಯಲ್ಲಿಲ್ಲ - ಬಂದುಬಿಟ್ಟೆ. ಬರಬಾರದಾಗಿತ್ತೇ ?"

"ನಿನ್ನ ಮನೆಗೆ ನೀನು ಬರುವುದಕ್ಕೆ ನನ್ನದೇನು ಅಡ್ಡಿ ?"

ಪುಷ್ಪನ ಸಹಾಯದಿಂದ ಸಂಜೀವ ಗೋಡೆಗೆ ಚಿತ್ರಗಳನ್ನು ಕಟ್ಟಿ ಅವಳನ್ನು ಸ್ವಲ್ಪ ದೂರಕ್ಕೆ ಕರೆದೊಯ್ದು ಚಿತ್ರಗಳನ್ನು ನೋಡುತ್ತ ನಿಂತ. ಇಬ್ಬರೂ ಪರವಶರಾಗಿ ನಿಂತುಬಿಟ್ಟಿದ್ದರು. ಯಾರೋ ಬಾಗಿಲು ಬಡಿದಂತಾಯಿತು. ಸಂಜೀವ ಮುಖ ಕಹಿಮಾಡಿಕೊಂಡೇ ಹೋಗಿ ಬಾಗಿಲು ತೆಗೆದ. ಒಳಗೆ ಜಾನಕಮ್ಮನ ಮಗ ಜಗದೀಶ ಬಂದ.

"ಏನು ಜಗದೀಶ - ಅಪರೂಪಕ್ಕೆ ಬಂದುಬಿಟ್ಟೆ."

"ಅಮ್ಮ ಹೇಳಿಕಳುಹಿಸಿದ್ದಾಳೆ ಚಿಕ್ಕಪ್ಪ."

"ಏನು ಸಮಾಚಾರ."

"ನೀನು ಪುಷ್ಪಕ್ಕನನ್ನು ಕರೆದುಕೊಂಡು ಸಾಯಂಕಾಲ ಕಾಫಿಗೆ ಅಲ್ಲಿಗೇ ಬರಬೇಕಂತೆ."

"ಪುಷ್ಪ ಇದ್ದಾಳೆ. ಅವಳಿಗೇ ಹೇಳಿಬಿಡು."

ತನ್ನ ಹೆಸರೆತ್ತಿದುದನ್ನು ಕೇಳಿ ಪುಷ್ಪ ಒಳಗಿನಿಂದ ಬಂದಳು. ಜಗದೀಶ ಅವಳಿಗೂ ಆಹ್ವಾನ ನೀಡಿದ.

"ಏನು ಜಗದೀಶ, ಸಮಾಚಾರ ?"

"ಚಿಕ್ಕಮ್ಮ ಬೆಂಗಳೂರಿನಿಂದ ಬಂದಿದ್ದಾಳೆ. ಪುಷ್ಪಕ್ಕನನ್ನು ನೋಡಬೇಕಂತೆ."

"ಸುನಂದನೇ ! ಯಾವಾಗ ಬಂದಳು."

"ಬಂದು ಮೂರು ದಿನವಾಯಿತು. ಬರುತ್ತೀರಷ್ಟೆ."

"ಕೂತುಕೊಳ್ಳೋ ಜಗದೀಶ್ - ಕುದುರೆ ಮೇಲೆ ಬಂದಹಾಗೆ ಆಡುತ್ತಿರುವೆಯಲ್ಲ."

"ಬೈಸಿಕಲ್ ಮೇಲೆ ಬಂದಿದ್ದೇನೆ ಚಿಕ್ಕಪ್ಪ. ಮನೆಗೆ ಹೋಗಿ ನೀವು

ಬರುವುದನ್ನು ಅಮ್ಮನಿಗೆ ತಿಳಿಸಿ ನಾನು ಸಿನೀಮಾಕ್ಕೆ ಹೋಗಬೇಕು. ಎಷ್ಟು ಹೊತ್ತಿಗೆ ಬರುತ್ತೀರೆಂದು ಹೇಳಲಿ."

"ನಾಲ್ಕು ಗಂಟೆಗೆ ಬರುತ್ತೇವಪ್ಪ."

ಎಂದು ಸಂಜೀವ ಹೇಳಿ ಒಳಗಿನಿಂದ ಐದು ರೂಪಾಯಿ ತಂದು ಜಗದೀಶನ ಕೈಯಲ್ಲಿಟ್ಟ. ಜಗದೀಶ ಹೋದಮೇಲೆ ಪುಷ್ಪಾ ಕೇಳಿದಳು

"ಜಗದೀಶ ಯಾವ ಕ್ಲಾಸಿನಲ್ಲಿದ್ದಾನೆ."

"ಅವನೇ ಹೇಳಿದನಲ್ಲ - ಸಿನೀಮಾ ಕ್ಲಾಸಿನಲ್ಲಿ."

"ಹುಡುಗ ಚೂಟಿಯಾಗಿದ್ದಾನೆ – ಅವನನ್ನು ಸ್ಕೂಲೇಕೆ ಬಿಡಿಸಿದರು ?"

"ಗಾದೆ ಕೇಳಿಲ್ಲವೇ - ಗಂಡ ಹೆಂಡಿರ ಜಗಳದಲ್ಲಿ ಕೂಸು ಸೊತ್ತ ಗಾಯಿತು. ಅವನ ಜವಾಬ್ದಾರಿ ನನಗಿರಲಿ ಎಂದು ಹೇಳಿದೆ. ಇಲ್ಲಿ ಕಳುಹಿಸುವುದಕ್ಕೆ ಅತ್ತಿಗೆಮ್ಮ ಒಪ್ಪಲಿಲ್ಲ."

ಪುಷ್ಪನ ಚಿತ್ತವಿದ್ದುದು ಬೇರೆ ಎಡೆಯಲ್ಲಿ. ಅವಳು ಲೋಕಾಭಿರಾಮವಾಗಿ ಜಗದೀಶನ ಮಾತು ತೆಗೆದಿದ್ದಳು.

"ಸುನಂದಾ ಚೆನ್ನಾಗಿ ತರಾಟೆಗೆ ತೆಗೆದುಕೊಳ್ಳುತ್ತಾಳೆ.''

"ಏಕೆ ? ನೀನೇನು ತಪ್ಪುಮಾಡಿರುವೆ ?''

"ನಮ್ಮ ಮದುವೆ ವಿಷಯ ಅವಳಿಗೆ ನಾನೂ ತಿಳಿಸಿಯೇ ಇರಲಿಲ್ಲ.''

"ತಿಳಿಸಬೇಕಾಗಿತ್ತು."

"ನಮ್ಮ ಫೋಟೋ ಕಳಿಸಿಕೊಟ್ಟು ತಿಳಿಸುವ ಎಂದಿದ್ದೆ- ಅವಳೇ ಬಂದದ್ದು ಒಳ್ಳೆಯದಾಯಿತು. ಫೋಟೋಗಳಲ್ಲಿ ನಾನೆಷ್ಟು ತೆಗೆದುಕೊಳ್ಳಲಿ.

"ಎಷ್ಟು ಬೇಕಾದರೂ ತೆಗೆದುಕೋ."

"ಬಿಡಿ ಚಿತ್ರಗಳ ಮೂರು ಮೂರು ಪ್ರತಿ ಎನ್‌ಲಾರ್ಜ್‌ಮೆಂಟುಗಳನ್ನು ನಾನು ತೆಗೆದುಕೊಂಡು ಹೋಗುತ್ತೇನೆ. ನಿಮಗೆ ಬೇಕಾದರೆ ನೀವು ಬೇರೆ ಮಾಡಿಸಿಕೊಳ್ಳಿ."

"ಹಾಗೇ ಆಗಬಹುದು."

"ಮನೆಗೆ ಹೋಗಿಬಿಟ್ಟು ಸುನಂದೆಯ ಮನೆಗೆ ಹೋಗೋಣ,"

"ಕಾಫಿ ಕುಡಿದು ಹೋಗೋಣ."

"ಬೇಡ - ಮನೆಯಲ್ಲಿಯೇ ಕುಡಿಯೋಣ "

ಆಗಬಹುದೆಂದು ಸಂಜೀವ ಡ್ರೆಸ್‌ಮಾಡಿಕೊಂಡು ಹೋಗಿ ಗಾಡಿ ಗೊತ್ತುಮಾಡಿಕೊಂಡು ಬಂದ. ಇಬ್ಬರೂ ಗಾಡಿಯಲ್ಲಿ ಕುಳಿತು ಫೋಟೋಗಳನ್ನು ಎಚ್ಚರವಾಗಿಟ್ಟುಕೊಂಡರು.

ಮನೆಯಲ್ಲಿ ಹೆಲೆನ್‌ಅಮ್ಮ ಚಿತ್ರಗಳನ್ನು ನೋಡಿ ಪರಮಸಂತೋಷಪಟ್ಟಳು. ಎನ್‌ಲಾರ್ಜ್‌ಮೆಂಟುಗಳನ್ನು ವೆರಾಂಡದಲ್ಲಿ ಕಟ್ಟು ಎಂದು ಮಗಳಿಗೆ ಹೇಳಿದರು. ಅವು ತನ್ನ ರೂಮಿನಲ್ಲಿಯೇ ಇರಬೇಕೆಂದು ಪುಷ್ಪ ಹಟ ಹಿಡಿದಳು.

ಪುಷ್ಪ ಒಳಗೆ ಯಾವದೋ ಪಟಗಳನ್ನು ಕಟ್ಟಿದ್ದ ಮೂರು ಮೊಳೆಗಳನ್ನು ಕಿತ್ತು, ದಾರದೊಂದಿಗೆ ತಂದಳು. ಅವಳೂ ಸಂಜೀವ ಮೂರು ದೊಡ್ಡ ಪಟಗಳನ್ನೂ ಮಂಚದೆದುರಿಗೆ, ಡ್ರೆಸ್ಸಿಂಗ್ ಟೇಬಲ್ಲಿನ ಮೇಲೆ ಕಟ್ಟಿದರು.

ಪುಷ್ಪ ಒಳಗೆ ಹೋಗಿ ಮತ್ತೆ ಮುಖ ತೊಳೆದುಕೊಂಡು ಪೌಡರ್ ಹಚ್ಚಿಕೊಂಡು, ಬರುವಾಗ ಕೈಯಲ್ಲಿ ಕಾಫಿ, ಬಿಸ್ಕತ್ತು ಹಿಡಿದು ಬಂದಳು. ಇಬ್ಬರೂ ಕಾಫಿ ಮುಗಿಸಿಕೊಂಡು ಇಂದಿರಮ್ಮನವರ ಮನೆಗೆ ಬಂದರು.

ಸುನಂದಾ ಪುಷ್ಪನನ್ನು ಕಂಡಕೂಡಲೆ ಬಂದು ಅವಳನ್ನು ಅಪ್ಪಿದಳು. ಎಲ್ಲರೂ ತೊಟ್ಟಿಯಲ್ಲಿ ಕುಳಿತರು. ಇಂದಿರಮ್ಮನವರು ತಿಂಡಿ ಕಾಫಿ ವ್ಯವಸ್ಥೆಗೆ ನಿಂತರು. ಸಂಜೀವ ಸುನಂದೆಯನ್ನು

"ನಿಮ್ಮ ಯಜಮಾನರು ಚೆನ್ನಾಗಿದ್ದಾರೆಯೇ ?"

"ಚೆನ್ನಾಗಿದ್ದಾರೆ."

"ಅವರೇಕೆ ಬರಲಿಲ್ಲ"

"ರಜಾ ಸಿಕ್ಕಲಿಲ್ಲ. ನೀವೂ ಪುಷ್ಪಾ ಬೆಂಗಳೂರಿಗೆ ಯಾವಾಗ ಬರುತ್ತೀರಿ."

"ಸದ್ಯದಲ್ಲೇ ಬರುತ್ತೇವೆ."

"ನಮ್ಮ ಮನೆಗೇ ಬರಬೇಕು. ಎಲ್ಲಿಗೂ ಹೋಗಕೂಡದು."

ಇಂದಿರಮ್ಮನವರು, ಜಾನಕಮ್ಮ ಎಲ್ಲರಿಗೂ ತಿಂಡಿ ತಂದುಕೊಟ್ಟರು. ವಿಮಲಾ ಕುಡಿಯುವ ನೀರು ತಂದಿಟ್ಟಳು. ಸಂಜೀವ ಅವಳನ್ನು ಹತ್ತಿರ ಕರೆದು ಅಪ್ಪಿ ಮುದ್ದಾಡಿದ.

ತಿಂಡಿ, ಕಾಫಿಯಾದಮೇಲೆ ಸುನಂದಾ ಪುಷ್ಪನ ಕೈಹಿಡಿದುಕೊಂಡು ಅವಳನ್ನು ತನ್ನ ರೂಮಿಗೆ ಕರೆದೊಯ್ದಳು. ಸಂಜೀವ ಅತ್ತಿಗೆಯ ಜತೆ ಮಾತನಾಡುತ್ತ ಕುಳಿತ.

ಪುಷ್ಪ ನಿರೀಕ್ಷಿಸಿದ್ದಂತೆ ಸುನಂದೆಯ ಮೊದಲನೆಯ ಮಾತೇ ಆಕ್ಷೇಪಣೆಯದಾಗಿತ್ತು. ಮದುವೆ ವಿಷಯ ತನಗೆ ತಿಳಿಸಲಿಲ್ಲವೆಂದು ಅಸಮಾಧಾನ ವ್ಯಕ್ತಮಾಡಿದಳು.

"ನಿಶ್ಚಯವಾಗಿ ಬಹಳ ದಿವಸ ಆಗಿಲ್ರೀ . . . . ನಿಮಗೆ ತಿಳಿಸುವ ಎಂದೇ ಇದ್ದೆ. ಇಲ್ಲಿ ನೋಡಿ . . . ."

ಎಂದು ಫೋಟೋ ಸುನಂದೆಯ ಕೈಗಿತ್ತು.

"ಇದನ್ನೂ ಕಳಿಸಿ ತಿಳಿಸಬೇಕೆಂದಿದ್ದೆ" ಎಂದಳು

ಚಿತ್ರವನ್ನು ನೋಡುತ್ತ ಸುನಂದಾ ಕೆಣಕುಧ್ವನಿಯಲ್ಲಿ

"ಮದುವೆಯೇ ಮಾಡಿಕೊಳ್ಳುವುದಿಲ್ಲವೆಂದಿದ್ದರಿ ?"

"ಹೌದು - ನನಗೆ ಬೇಕಾದವರು ಸಿಕ್ಕುವವರೆಗೆ."

ಸುನಂದಾ ನಗುತ್ತಾ

"ಎಷ್ಟು ಸುಳ್ಳು ಹೇಳುತ್ತೀರ್ರೀ ನೀವು. ಈಗ ನಿತ್ಯ ಭೀಮುನಮವಾಸ್ಯೆ ಗಂಡನ ಪೂಜೆ ಮಾಡುವವಳು ನಾನೋ ನೀವೋ."

"ನನ್ನ ಮಾತಿರಲಿ - ನಿಮ್ಮದು ಹೇಳ್ರೀ - ಇದೇನು ಈ ಸಲ ಒಬ್ಬರೇ ಬಂದುಬಿಟ್ಟರಿ."

"ಅವರಿಗೆ ರಜಾ ಸಿಕ್ಕಲಿಲ್ಲವೆಂದು ಹೇಳಿದನಲ್ಲಾ."

"ಅದಲ್ಲ ನಾನು ಕೇಳಿದ್ದು. ಸುಂದರ್ - ಮೈನರ್ (Sunder-Minor) ಎಲ್ಲಿಯೆಂದು ?"

"ಮೈನರೂ ಇಲ್ಲ ಮೇಜರೂ ಇಲ್ಲ. ಮುಂದಿನ ವರ್ಷ ನಿಮ್ಮ ಮೈನರ್ ನೇಟಿವಿಟಿಗೆ (Nativity) ಮರೆಯದೆ ನನ್ನನ್ನು ಬರಮಾಡಿಕೊಳ್ಳಿ."

"ಆಗಬಹುದು. ದೇವರ ಇಚ್ಛೆ ನಾವು ಬದಲಾಯಿಸಲು ಸಾಧ್ಯವೇ ?"

"ನಿಮ್ಮಿಬ್ಬರ ಸ್ನೇಹ ಎಷ್ಟು ಗುಟ್ಟಾಗಿಟ್ಟರಿ. ಇಬ್ಬರೂ ಪಕ್ಕಾ ಕಳ್ಳರು."

"ಆ ಅಭಿಪ್ರಾಯವೇ ಇರಲಿಲ್ಲರಿ ಸುನಂದಾ. ನಮ್ಮ ಸಂಬಂಧ ಸ್ನೇಹದ

ಮಟ್ಟದಲ್ಲಿಯೇ ಒಹಳ ದಿವಸವಿತ್ತು - ಕ್ರಮೇಣ ಅದೇ ಪ್ರೇಮವಾಗಿ ರೂಪುಗೊಂಡಿತು."

"ಮದುವೆ ಯಾವಾಗ?"

"ಇನ್ನೂ ನಿಶ್ಚಯಿಸಿಲ್ಲ."

"ಅವನ್ನು ನನಗೆ ತಿಳಿಸಿದೆ ಮುಗಿಸಿಕೊಂಡುಬಿಡುವಿರೊ?"

"ಇಲ್ಲಮ್ಮ ಇಲ್ಲ. ನೀವು ಬರದೆ ನಾನು ಖಂಡಿತ ಮದುವೆಮಾಡಿ ಕೊಳ್ಳುವುದಿಲ್ಲ."

"ಪ್ರಾಮಿಸ್ (Promise)"

"ಪ್ರಾಮಿಸ್ (Promise)"

"ಈಗ ಸಂಜೀವ ಇರುವುದೆಲ್ಲಿ—ತನ್ನ ಮನೆಯಲ್ಲೋ ನಿಮ್ಮ ಮನೆಯಲ್ಲೋ?"

"ಅವರ ಮನೆಯಲ್ಲಿಯೇ ಇದ್ದಾರೆ - ನಮ್ಮ ಮನೆಗೆ ಬಂದು ಹೋಗು ತ್ತಿರುತ್ತಾರೆ . . . . ಈಚೆಗೇನು ಒಡವೆಮಾಡಿಸಿಕೊಂಡಿರಿ ಸುನಂದಾ."

"ನಾನೇನು ಮಾಡಿಸಿಕೊಳ್ಳಲಮ್ಮ - ಬಡ ಸ್ಕೂಲ್ ಮೇಷ್ಟ್ರ ಹೆಂಡತಿ. ನಿಮ್ಮಹಾಗೆ ದೊಡ್ಡ ಜಹಗೀರದಾರರ ಕೈಹಿಡಿದಿದ್ದೇನೆಯೇ?"

"ನಮ್ಮ ಎಂಗೇಜ್‌ಮೆಂಟ್ (Engagement) ನಿಮಗೆ ಒಪ್ಪಿಗೆಯೇ?"

"ಏಕೆ ಹಾಗೆ ಕೇಳುವಿರಿ."

"ನಿಮ್ಮ ಅಕ್ಕನವರು ಅಷ್ಟು ಸಂತೋಷಪಟ್ಟ ಹಾಗೆ ಕಾಣಲಿಲ್ಲ. ನೀವು . . ."

"ಅಕ್ಕನ ವಿಷಯ ನಿಮಗೆ ಗೊತ್ತೇಯಿದೆಯಲ್ಲ - ನನಗಂತೂ ತುಂಬ ಸಂತೋಷ. ನಿಮಗೊಂದು ಮಾತು ಹೇಳಬಹುದೇ ಪುಷ್ಪಾ."

"ಹೇಳಿ."

"ನೀವಿಬ್ಬರೂ ನಿಮ್ಮ ನಿಮ್ಮ ಸಮಾಜನಿಯಮಗಳನ್ನತಿಕ್ರಮಿಸುತ್ತಿರುವಿರಿ. ಆ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ಪ್ರೇಮ, ಗೌರವವಿದ್ದೆಡೆ ಕುಲ, ಜಾತಿ ನೋಡಬಾರದೆಂದು ನನ್ನ ಅಭಿಪ್ರಾಯ. ಆದರೆ ನಿಮ್ಮ ಜೀವನ ಅಷ್ಟು ಸುಗಮವಾದುದೆಂದು ತಿಳಿಯಬೇಡಿ. ಸಮಾಜ ಪ್ರತೀಕಾರ ಬಯಸು

ತ್ತದೆ. ಹತ್ತು ಜನ ಹತ್ತು ಬಗೆಯಲ್ಲಿ ಮಾತನಾಡುತ್ತಾರೆ. ಅದಕ್ಕೆಲ್ಲಾ ಒಂದೇ ಚಿಕಿತ್ಸೆ. ನಿಮ್ಮಿಬ್ಬರ ವಿಶ್ವಾಸ ಕುಂದಬಾರದು - ಗೌರವ ಕಡಿಮೆಯಾಗಬಾರದು.''

''ನಿಜ ಸುನಂದಾ - ಅವರ ಮನಸ್ಸು ಬಹು ನಿರ್ಮಲ. ಅವರು ದೇವರಂಥವರು. ನನ್ನ ಸರ್ವಸ್ವವನ್ನು ಅವರಿಗೆ ಅರ್ಪಿಸಿದ್ದೇನೆ. ಅವರು ಸುಖವಾಗಿರಲು ಶಕ್ತಿಮೀರಿ ಪ್ರಯತ್ನಿಸುತ್ತೇನೆ.''

''ನಿಮ್ಮ ಮಾತು ಕೇಳಿ ನನಗೆ ತುಂಬ ಸಂತೋಷವಾಯಿತು.—ಇಬ್ಬರೂ ಒಮ್ಮೆ ಬೆಂಗಳೂರಿಗೆ ಬನ್ನಿ.''

ಪುಷ್ಪ ಸಂತೋಷವಾಗಿ ಒಪ್ಪಿಗೆಯಿತ್ತಳು.

ಇಬ್ಬರೂ ಎದ್ದುಬಂದು ಉಳಿದವರನ್ನು ಕೂಡಿಕೊಂಡರು. ಜಾನಕಮ್ಮ ಪರಿಹಾಸ್ಯದಿಂದ

''ನಿಮ್ಮ ಗುಟ್ಟು ಮುಗಿಯಿತೋ''

ಎಂದು ಕೇಳಿದಳು.

''ಗುಟ್ಟೇನೂ ಇಲ್ಲ''

ಎನ್ನುತ್ತಾ ಸುನಂದಾ ಪುಷ್ಪನ ಕಡೆ ತಿರುಗಿ

''ನೋಡ್ರೀ - ಶಾಂತಾ, ರಾಜಮಣಿ ಕಾಗದವೇ ಬರೆದಿಲ್ಲ''

''ನನಗೂ ಬರೆದಿಲ್ಲಮ್ಮ'' ಎಂದಳು.

ಸಂಜೀವ ಪುಷ್ಪನನ್ನುದ್ದೇಶಿಸಿ

''ಅತ್ತಿಗೆಮ್ಮನ ಅಣ್ಣಂದಿರು ಬರುತ್ತಾರಂತೆ. ಆಗಲೇ ಬೊಂಬಾಯಿಗೆ ಬಂದಿದ್ದಾರಂತೆ.''

''ಅವರನ್ನು ನನಗೂ ತೋರಿಸಿರಿ.''

ಎಂದು ಪುಷ್ಪ ಸುನಂದನಿಗೆ ಹೇಳಿದಳು.

ಸಂಜೀವ, ಪುಷ್ಪ ಎದ್ದುನಿಲ್ಲಲು ಸುನಂದಾ ಒಳಗೆ ಹೋಗಿ ತಾಂಬೂಲ ತಂದು ಕೈಗೆ ಕುಂಕುಮ ತೆಗೆದುಕೊಂಡು

''ಇಡಬಹುದೋ?'' ಎಂದು ಕೇಳಿದಳು.

''ಇಡು ಸುನಂದಾ'' ಎಂದು ಜಾನಕಮ್ಮ ಹೇಳಿದಳು.

ಪುಷ್ಪನಿಗೆ ಕುಂಕುಮವಿಟ್ಟು, ಹೂ ಮುಡಿಸಿ ಸುನಂದಾ ತಾಂಬೂಲ ಕೊಟ್ಟಳು.

"ಪುನಃ ಯಾವಾಗ ಬರುತ್ತೀರಿ."

"ನಿಮ್ಮಣ್ಣ ಬಂದಮೇಲೆ ಬರುತ್ತೇವೆ."

ಎಂದು ಸಂಜೀವ ಹೇಳಿದ. ಅವರು ಹೋದಮೇಲೆ ಸುನಂದಾ ಫೋಟೋ ತಂದು ಅಕ್ಕನಿಗೂ ತಾಯಿಗೂ ತೋರಿಸಿ

"ಸಂಜೀವನ ಕಣ್ಣಿಗೆ ಚೆನ್ನಾಗಿ ಮಣ್ಣೆರಚಿದ್ದಾಳೆ ಅಕ್ಕ."

"ಏನು ಹೇಳಿದಳು."

"ಅವನು ದಾಸಾನುದಾಸನಾದ ಹಾಗೆ ಕಾಣುತ್ತದೆ."

"ಅದರಲ್ಲಿ ಸಂದೇಹವೇ ಇಲ್ಲ. ಅವನ ಕಣ್ಣುಗಳು ಸದಾ ಅವಳನ್ನೇ ಹಿಂಬಾಲಿಸುವುದನ್ನು ನೋಡಿದೆಯಾ? ಅವಳಲ್ಲಿ ಯಾವ ಸೌಂದರ್ಯ ಕಾಣುತ್ತಾನೋ ನನಗೆ ತಿಳಿಯದು . . . ಮದುವೆ ಮುಗಿಸಿಯೇ ಬಿಟ್ಟಿದ್ದಾಳೋ?"

"ಅಸಂಭವವಲ್ಲ ಎಂದು ಕಾಣುತ್ತದೆ. ಅವನೂ ಒಬ್ಬಂಟಿಗ - ಮನೆಯಲ್ಲಿ ಅವಳು ಸರ್ವತಂತ್ರ ಸ್ವತಂತ್ರಳು."

"ಅನುಕೂಲ ದಾಂಪತ್ಯಕ್ಕೂ ನಮ್ಮ ಸಂಸಾರಕ್ಕೂ ಋಣಾನುಬಂಧ ಕೂಡಿಲ್ಲವೆಂದು ಕಾಣುತ್ತದೆ"

ಎಂದು ಜಾನಕಮ್ಮ ನೊಂದು ನುಡಿದು, ಥಟ್ಟನೆ ಎಚ್ಚರಗೊಂಡು

"ನಿನ್ನ ವಿಷಯಕ್ಕೆ ಈ ಮಾತು ಅನ್ವಯಿಸಲ್ಲ ಸುನಂದಾ"

ಎಂದಳು. 'ಅನ್ವಯಿಸುವುದಿಲ್ಲವೇ' ಎನ್ನುವ ವಿಚಾರ ಸುನಂದೆಯ ಮನಸ್ಸಿನಲ್ಲಿ ಮೂಡಿತು.

## ೧೪

ಭಾರತಕ್ಕೆ ಚಂದ್ರಶೇಖರ ಒಬ್ಬಂಟಿಗನಾಗಿ ಬಂದಿರಲಿಲ್ಲ. ಅವನ ಜತೆಯಲ್ಲಿ ಯುನೆಸ್ಕೊ ಅಧಿಕಾರವರ್ಗದಲ್ಲಿದ್ದ ರಾಲ್ಫ್ ಗಾರ್ಡ್‌ನರ್ (Ralph Gardner), ಅವನ ಹೆಂಡತಿ ಈವಾ (Eva) ಮತ್ತು ಅಮೇರಿಕಾದ ಪ್ರಕಟನಾ ಶಾಖೆಯ 'ವಿದೇಶಿ ಸಮಿತಿ'ಯ (Foreign Department) ಜಾರ್ಜ್

ಬುಚ್ (George Butch) ಬಂದಿದ್ದರು. ಯುನೆಸ್ಕೊ ಈ ಮೊದಲೇ ಭಾರತಕ್ಕೆ ಕಳುಹಿಸಿದ್ದ 'ಸಾಂಸ್ಕೃತಿಕ ನಿಯೋಗ ಗೋಷ್ಠಿ'ಯೊಂದಿಗೆ ಬರಬೇಕೆಂದು ಚಂದ್ರಶೇಖರ ಪ್ರಯತ್ನಿಸಿದ್ದ. ಆದರೆ 'ವಿದೇಶ ಸಮಿತಿ' ಗೋಷ್ಠಿಯಲ್ಲಿ ಅಮೆರಿಕನ್ನರಲ್ಲದವರು ಇರಕೂಡದೆಂದು ನಿರ್ಧರಿಸಲು ಅವನಿಗೆ ಅವಕಾಶ ತಪ್ಪಿಹೋಯಿತು.

ಚಂದ್ರಶೇಖರ ನಿರಾಶೆಗೊಂಡು ತನ್ನ ಪ್ರಯತ್ನ ಬಿಡಲಿಲ್ಲ. ಭಾರತದ ಸಮಸ್ಯೆಗಳು, ರಾಜಕಾರಣ, ಜನಜೀವನ, ಧರ್ಮದ ಮೇಲೆ ಆಗಾಗ್ಗೆ ಅಮೆರಿಕನ್ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದ. ಅಮೇರಿಕಾದ ಕೆಲವು ಕಥಾಸಂಗ್ರಹಗಳಲ್ಲಿ ಅವನಿಗೂ ಸ್ಥಾನ ಸಿಕ್ಕಿತ್ತು. ಆದರೆ ಪ್ರಭಾವಶಾಲಿ ವರ್ತುಲಗಳಲ್ಲಿ ಚಂದ್ರಶೇಖರನಿಗೆ ಪ್ರವೇಶ ದೊರೆತಿರಲಿಲ್ಲ.

ಕೆಲಕಾಲ ಭಾರತದಲ್ಲಿ 'ಅಮೆರಿಕನ್ ರಾಯಭಾರಿ' (American Embassy) ಕಛೇರಿಯಲ್ಲಿದ್ದ ಜಾನ್ ಹ್ಯಾಮಿಲ್ಟನ್ (John Hamilton) ಅಮೇರಿಕಾಕ್ಕೆ ಹಿಂದಿರುಗಿದ ಮೇಲೆ 'ಲೈಫ್' (Life) ಪತ್ರಿಕೆಗೆ ಒಂದು ಲೇಖನ ಬರೆದ. ಅದರಲ್ಲಿ ಪ್ರತ್ಯಕ್ಷವಾಗಿ ಭಾರತವನ್ನು ಅವಹೇಳನ ಮಾಡುವ ಕೆಲವು ಮಾತುಗಳನ್ನಾಡಿದ್ದ. ಲೇಖನ ಭಾರತದ ರಾಜಕಾರಣ, ಭಾರತೀಯರ ಜೀವನ, ಧರ್ಮಗಳನ್ನು ಕುರಿತುದಾಗಿದ್ದರೂ, ಭಾರತವನ್ನು ಹೊರಗಿನವರ ಕಣ್ಣಿಗೆ 'ಪಿಶಾಚಿ ಪಟ್ಟಣ'ವಾಗಿ ಕಾಣಿಸುವುದೇ ಮುಖ್ಯೋದ್ದೇಶವಾಗಿತ್ತು. ಹ್ಯಾಮಿಲ್ಟನ್ನನ ಲೇಖನದ ಕೆಲವು ಭಾಗಗಳು ಭಾರತದಲ್ಲಿ ವಿಪರೀತ ಪ್ರತಿಕ್ರಿಯೆಯನ್ನುಂಟುಮಾಡಿತು.

**"ಭಾರತದ ಪ್ರಧಾನಾಮಾತ್ಯ ಪಂಡಿತ ನೆಹ್ರೂ ಅವರ ರಾಜನೀತಿ ಇನ್ನೂ ಶೈಶವಾವಸ್ಥೆಯಲ್ಲಿದೆ. ಬಾಯಲ್ಲಿ ಅಮೇರಿಕಾದ ವಿಶ್ವಾಸಬೇಕು ಎನ್ನುತ್ತಾರೆ; ಅದೇ ಬಾಯಲ್ಲಿ ಸೋವಿಯಟ್ ರಷ್ಯಾ ಹೊಗಳುತ್ತಾರೆ. ಕಾಶ್ಮೀರ ಸಮಸ್ಯೆಯ ಬಗ್ಗೆ ನೆಹ್ರೂ ಸರ್ಕಾರ ತಳೆದಿರುವ ಧೋರಣೆ ಪ್ರಜಾಸ್ವಾಮ್ಯ ರಾಷ್ಟ್ರಗಳಿಗೆ ಆಶ್ಚರ್ಯವನ್ನುಂಟುಮಾಡದಿರುವುದಿಲ್ಲ. ಖಚಿತವಾದ ನಿರ್ಧಾರಕ್ಕೆ ಬರಲಾಗದೆ ಯಾವಾಗಲೂ ಮೀನ ಮೇಷ ಎಣಿಸುವುದು ನೆಹ್ರೂ ಅವರ ವಿಶೇಷ ದೌರ್ಬಲ್ಯ. ಅಮೇರಿಕಾದ ರಾಜಕಾರಣದ ವಿರುದ್ಧವಾಗಿ ಸೋವಿಯಟ್ ಸರ್ಕಾರಕ್ಕೆ ಬೆಂಬಲ ಕೊಡುತ್ತಿರುವ ಭಾರತಕ್ಕೆ ಅಮೇರಿಕಾ ಲಕ್ಷಾಂತರ ಡಾಲರುಗಳ ಸಹಾಯ**

ಒದಗಿಸುತ್ತಿರುವುದು ಶೋಚನೀಯವಾಗಿದೆ. ಅಮೇರಿಕಾ ಬೇಡ, ಆದರೆ ಅಮೇರಿಕಾದ ಡಾಲರು ಬೇಕು ಎನ್ನುವ ಭಾರತದ ರಾಜನೀತಿಯನ್ನು ಅಮೆರಿಕನ್ ಮತದಾರರು ಒಪ್ಪಲು ಸಾಧ್ಯವಿಲ್ಲ.''

''ಭಾರತ ಪ್ರಪಂಚ ಶತ್ರುವಾಗದಂತೆ ಎಚ್ಚರವಾಗಿರಬೇಕಾದುದು ಸಂಯುಕ್ತ ರಾಷ್ಟ್ರಗಳ (United Nations) ಆದ್ಯಕರ್ತವ್ಯ. ಈ ಇಪ್ಪತ್ತನೆಯ ಶತಮಾನದಲ್ಲಿಯೂ ಭಾರತದಲ್ಲಿ ಮೂಡಿರುವ ಅಜ್ಞಾನ, ಅಂಧಕಾರ, ಅಶುಚಿ ಅದರ ಅನಾಗರಿಕಾವಸ್ಥೆಯನ್ನೆತ್ತಿ ಸಾರುತ್ತವೆ. ಬೀದಿಗಳಲ್ಲಿ ಮನುಷ್ಯರು, ಹೆಗ್ಗಣಗಳು, ನಾಯಿಗಳು ಸತ್ತು ಬಿದ್ದಿರುತ್ತವೆ. ಕೇಳುವವರಿಲ್ಲ. ಅದರ ಪಕ್ಕದಲ್ಲಿಯೇ ಹೊಟೇಲುಗಳು. ಜನ ನಿರಾತಂಕವಾಗಿ ಅಲ್ಲಿ ಕುಳಿತು ಉಪಾಹಾರ ಮಾಡುತ್ತಿರುತ್ತಾರೆ.''

"ಲೈಂಗಿಕ ವಿಚಾರಗಳಲ್ಲಿ ಭಾರತ ಅನಾಗರಿಕಸ್ಥಾನವಾಗಿದೆ. ಎಂಟು ಹತ್ತು ವರ್ಷದ ಕನ್ಯೆಯರು ಎರಡು ಮಕ್ಕಳ ತಾಯಿಯರಾಗಿರುತ್ತಾರೆ. ಪುರುಷರ ಜನನೇಂದ್ರಿಯವನ್ನೇ ಅಲ್ಲಿಯ ಜನ ದೇವರೆಂದು ಪೂಜಿಸುತ್ತಾರೆ. ದೊಡ್ಡ ದೇವಸ್ಥಾನಗಳಲ್ಲಿ ಜನನೇಂದ್ರಿಯ ಚಿನ್ಹೆಗೆ ಪೂಜೆ ಸಲ್ಲಿಸುತ್ತಾರೆ. ಮೈಮೇಲೆ ನಿರ್ಲಜ್ಜೆಯಿಂದ ಜನನೇಂದ್ರಿಯ ಚಿನ್ಹೆಗಳನ್ನು ಧರಿಸುತ್ತಾರೆ.''

"ಧರ್ಮದ ವಿಷಯದಲ್ಲಿ ಭಾರತ ತುಂಬ ಹಿಂದುಳಿದಿದೆ. ಅಲ್ಲಿ ಸಹಸ್ರಾರು ಮತಗಳಿವೆ. ಒಬ್ಬರನ್ನೊಬ್ಬರು ದ್ವೇಷಿಸುತ್ತಾರೆ. ಹಿಂದುಗಳಲ್ಲಿ, ಮುಸಲ್ಮಾನರಲ್ಲಿ ಹಲವು ಭಿನ್ನಭಿನ್ನ ಮತಗಳಿವೆ. ಧರ್ಮದ ಹೆಸರಿನಲ್ಲಿ ಕೊಲೆ, ಲೂಟಿ, ಕಳ್ಳತನ, ವ್ಯಭಿಚಾರ ಮಾಡುವುದು ತಪ್ಪೆಂದು ಭಾರತೀಯರು ಪರಿಗಣಿಸುವುದಿಲ್ಲ.''

ಸತ್ಯಪ್ರೇಮಿಗಳಾದ ಪ್ರಗತಿಪರ ಅಮೇರಿಕನ್ನರೇ ಸಭೆಗಳನ್ನು ಕರೆದು ಹ್ಯಾಮಿಲ್ಟನ್ನನ ಲೇಖನವನ್ನು ಖಂಡಿಸಿದರು. ಪರ್ಲ್‌ಬಕ್, ಪಾಲ್ ರೋಬ್‌ಸನ್, ಹೊವರ್ಡ್ ಫಾಸ್ಟ್, ಅಪ್ಟನ್ ಸಿಂಕ್ಲೇರ್ ಮೊದಲಾದ ಸಾಹಿತಿಗಳು, ಕಲಾವಿದರ ಖಂಡನೆಗಳಿಗೆ ಅಮೇರಿಕನ್ ಪತ್ರಿಕೆಗಳಲ್ಲಿ ಎಡೆ ದೊರೆಯಲಿಲ್ಲ. ಅವರ ಸಭೆಗಳ ಮೇಲೆ ಜನತೆ ಹಾಗೂ ಪೋಲೀಸಿನವರು ಅತ್ಯಾಚಾರಮಾಡಿದರು.

ಪರಿಸ್ಥಿತಿ ಪ್ರಕೋಪಕ್ಕೆ ಹೋಯಿತು. ಭಾರತದ ನಾಯಕರು, ವಿದ್ವನ್ಮಣಿಗಳು ಹ್ಯಾಮಿಲ್ಟನ್ನನ ದ್ವೇಷ ಪ್ರಣಾಳಿಕೆಯನ್ನು ಖಂಡಿಸಿ ಲೇಖನಗಳನ್ನು ಭಾರತೀಯ ಹಾಗೂ ವಿದೇಶೀಯ ಪತ್ರಿಕೆಗಳಿಗೆ ಬರೆದರು.

ಅವರೆಲ್ಲರಿಗೂ ಉತ್ತರರೂಪವಾಗಿ, 'ತಿಪ್ಪೆನಾರಿಸಿ' ಚಂದ್ರಶೇಖರ ಲೇಖನಗಳನ್ನು ಬರೆದ. ಭಾರತ ಅಮೆರಿಕಾಯಿಂದ ಕಲಿಯಬೇಕಾದುದು ಬಹಳ ಇದೆಯೆಂದೂ, ಅಮೇರಿಕನ್ನರ 'ಮಾರ್ಷಲ್ ಪ್ಲ್ಯಾನಿ'ನ (Marshall Plan) ಸಹಾಯ ಒದಗದಿದ್ದರೆ ಭಾರತ ತಲೆಯೆತ್ತುವುದೇ ಸಾಧ್ಯವಿಲ್ಲವೆಂದು ಪ್ರತಿಪಾದಿಸಿದ.

ಈ ಹೊಲಗೆಲಸದಿಂದ ಭಾರತದ ಮುಖಕ್ಕೆ ಮಸಿ ತಾಗಿದರೂ ಚಂದ್ರಶೇಖರನ ಭವಿಷ್ಯ ಸುಗಮವಾಯಿತು. 'ಸಿಂಡಿಕೇಟೆಡ್' (Syndicated) ಆದ ಅವನ ಲೇಖನಗಳು ವಿಶೇಷ ವರಮಾನ ತಂದುಕೊಟ್ಟವು. 'ನೋಡಿ ಭಾರತೀಯರೇ ಭಾರತದ ಬಗ್ಗೆ ಏನು ಹೇಳುತ್ತಾರೆ' ಎಂದು ಅಮೆರಿಕನ್ ಅಗ್ನಿಭಕ್ಷಕರು ವಿಮಾನ ತಿರುವಿದರು.

'ವಿದೇಶೀ ಇಲಾಖೆ'ಯ ಪ್ರಭಾವದಿಂದ, ಅಮೆರಿಕಾದ ಪ್ರಸಿದ್ಧ ಪ್ರಕಾಶಕರೊಬ್ಬರು ಭಾರತದ ಮೇಲೆ ಒಂದು ಅಧಿಕೃತ ಗ್ರಂಥ ಬರೆದುಕೊಡಲು ಚಂದ್ರಶೇಖರನನ್ನು ಭಾರತಕ್ಕೆ ಕಳಿಸಿಕೊಡಲು ಮುಂದೆ ಬಂದರು. ಅವನ ಜತೆಯಲ್ಲಿ ಗಾರ್ಡನರ್ ಮತ್ತು ಬುಚ್ ಹೊರಟು ನಿಂತರು.

ಮುಂಬಯಿಯ ಸಾಂಟಾಕ್ರೂಸ್ ಏರಿಯೋಡ್ರೋಮಿನಲ್ಲಿ ಅವರು ಇಳಿದ ಹೊತ್ತಿನಿಂದಲೇ ಭಾರತದ ಸರ್ಕಾರದ ಅತಿಥಿಗಳಾದರು. ತಾಜಮಹಾಲು ಹೋಟೇಲಿನಲ್ಲಿ ಬಿಡಾರವಾಯಿತು. ಮುಂಬಯಿ ಗವರ್ನರೊಂದಿಗೆ ಚಹಾ ಸೇವನೆಯಾಯಿತು. ಸರ್ಕಾರದ ಮೇಜುವಾನಿಯಾಯಿತು. ಮುಂಬಯಿ ಪತ್ರಿಕೆಗಳಲ್ಲಿ ಅವರ ಸಂದೇಶ, ಸಂದರ್ಶನವಾರ್ತೆಗಳು ಸಚಿತ್ರವಾಗಿ, ಪ್ರಕಟವಾದವು. 'ಅಮೆರಿಕಾದಲ್ಲಿ ಖ್ಯಾತಿವೆತ್ತ ಭಾರತೀಯ ಸಾಹಿತಿ'ಯಾಗಿ (An Indian Writer of American Reputation) ಚಂದ್ರಶೇಖರ ಪ್ರಸಿದ್ಧಿ ಪಡೆದ.

ಚಂದ್ರಶೇಖರ ಮತ್ತು ಗುಂಪು ರೈಲಿನಲ್ಲಿ ಮುಂಬಯಿಯಿಂದ ಹೊರಟು ಅರಸೀಕೆರೆ ತಲುಪಿದರು. ಅಲ್ಲಿ ಮೈಸೂರು ಸರ್ಕಾರದ ಕಾರುಗಳು ಅವರಿಗಾಗಿ ಕಾದಿದ್ದು, ಮೈಸೂರಿಗೆ ಕರೆತಂದವು. 'ಹೊಟೇಲ್ ಮೆಟ್ರೊಪೋಲ್'ನಲ್ಲಿ ಅವರ ಬಿಡಾರವಾಯಿತು. ಚಂದ್ರಶೇಖರನೂ ಅವರೊಂದಿಗೆ ಹೊಟೇಲಿನಲ್ಲಿ ಇಳಿದ.

ಬೆಳಿಗ್ಗೆ ಅಮೆರಿಕನ್ ಮಿತ್ರರನ್ನು ಊರು ನೋಡಲು ಕಳುಹಿಸಿಕೊಟ್ಟು ಚಂದ್ರಶೇಖರ ತಾಯಿಯ ಮನೆಗೆ ಬಂದ.

ತಾಯಿ, ಮಗ ಒಬ್ಬರನ್ನೊಬ್ಬರು ಕ್ಷಣಕಾಲ ನೋಡಿದರು. ಇಬ್ಬರೂ ಬಾಯಲ್ಲಿಯೂ ಮಾತು ಹೊರಡದು. ಚಂದ್ರಶೇಖರ ತಾಯಿಯನ್ನಪ್ಪಿದ. ಇಂದಿರಮ್ಮನವರು ಮಗನ ತಲೆನೇವರಿಸುತ್ತಾ ಅದಕ್ಕೆ ಕಣ್ಣೀರಿನ ಅಭಿಷೇಕ ಮಾಡಿದರು.

ಸುನಂದಾ, ಜಾನಕಮ್ಮ, ಜಗದೀಶ, ವಿಮಲಾ ಎಲ್ಲರೂ ಬಂದು ಚಂದ್ರಶೇಖರನ ಸುತ್ತ ಮುತ್ತಿದರು. 'ಉಭಯಕುಶಲೋಪರಿ' ಯಾದ ಮೇಲೆ

"ನಿನ್ನ ಸಾಮಾನೆಲ್ಲಿ ಚಂದ್ರೂ" ಎಂದು ಇಂದಿರಮ್ಮ ಕೇಳಿದರು.

"ನಾನು ಹೋಟೇಲಿನಲ್ಲಿ ಇಳಿಯಬೇಕಾಯಿತಮ್ಮ. ಜತೆಯಲ್ಲಿ ಮೂವರು ಅಮೇರಿಕನ್ ಮಿತ್ರರು ಬಂದಿದ್ದಾರೆ. ಮೆಯಿನ್ ಹೌಸ್ (Main House) ಬಾಡಿಗೆಗೆ ಕೊಟ್ಟಿದ್ದೀರೇನು ?"

"ಹೂ! ನಮಗೇಕೆ ಅಷ್ಟು ದೊಡ್ಡ ಮನೆ."

ಮಗನನ್ನು ನೂರಾರು ಪ್ರಶ್ನೆ ಕೇಳಬೇಕೆಂದು ಇಂದಿರಮ್ಮನವರ ಮನಸ್ಸಿನಲ್ಲಿ ಆಸೆ. ಹಲವು ವರ್ಷಗಳಿಂದ ಆ ಪ್ರಶ್ನೆಗಳನ್ನು ಅವರು ಹೃದಯ ದಲ್ಲಿ ಕಾದಿಟ್ಟುಕೊಂಡಿದ್ದರು. ಆದರೆ ಮಗನನ್ನು ನೋಡಿದಾಗ ಪ್ರಶ್ನೆಗಳೆಲ್ಲಾ ಮರೆತೇ ಹೋದವು. ಅವನನ್ನು ದಿಟ್ಟಿಸಿನೋಡುತ್ತಾ ನಿಂತುಬಿಟ್ಟರು.

ಸುನಂದನನ್ನು ನೋಡಿ ಹರ್ಷದಿಂದ ಚಂದ್ರಶೇಖರ

"ಸುನೂ ಎಷ್ಟು ದೊಡ್ಡದಾಗಿ ಬೆಳದಿದ್ದಾಳೆ. ನಿನ್ನ ಯಜಮಾನರು ಬರಲಿಲ್ಲವೇ ?"

"ಇಲ್ಲ - ಅವರಿಗೆ ರಜಾ ಸಿಕ್ಕಲಿಲ್ಲ"

"ಒಳಗೇ ಬಾ ಚಂದ್ರೂ"

ಎಂದು ತಾಯಿ ಕರೆದರು. ಅವರನ್ನು ಚಂದ್ರಶೇಖರ ಹಿಂಬಾಲಿಸಿ ಹೋಗಲು ಜಾನಕಮ್ಮ ಮೆಲ್ಲನೆ 'ಷೂಸ್ ಬಿಚ್ಚಿಬಿಡು ಅಣ್ಣಯ್ಯ' ಎಂದಳು ಚಂದ್ರಶೇಖರ ತಾಯಿಯ ಜತೆಗೆ ಅಡಿಗೆಯ ಮನೆಗೆ ಹೋದ. ಮಣೆ ಹಾ ಅವನನ್ನು ಕೂಡಿಸಿ ಎಲ್ಲರೂ ಅವನ ಸುತ್ತ ಕುಳಿತರು.

ಇಂದಿರಮ್ಮ ಕಾಫಿ ಬಿಸಿ ಮಾಡಿ ಚಂದ್ರಶೇಖರನಿಗೆ ಕೊಟ್ಟು "ಉಪ್ಪಿಟ್ಟು ಮಾಡಿಕೊಡುತ್ತೇನೆ" ಎಂದರು.

"ಬೇಡ. ಈಗ ತಾನೆ ಬ್ರೆಕ್‌ಫಾಸ್ಟ್ (Breakfast) ಮುಗಿಸಿಕೊಂಡು ಬಂದಿದ್ದೇನೆ."

"ಊಟಕ್ಕೆ ಏಳುವೆಯಷ್ಟೆ."

"ಇವತ್ತು ಸಾಧ್ಯವಿಲ್ಲ. ನನ್ನ ಜತೆಯಲ್ಲಿ ಬಂದಿರುವವರು ಕಾಯುತ್ತಿರುತ್ತಾರೆ. ಹತ್ತು ಗಂಟೆಗೆ ಚಿತ್ರಶಾಲೆಯಲ್ಲಿ ಅವರನ್ನು ಕಾಣುವುದಾಗಿ ಹೇಳಿ ಬಂದಿದ್ದೇನೆ."

"ಯಾರೋ ಬಂದಹಾಗೆ ಬಂದು ನೀನು ಹೋಗಿಬಿಟ್ಟರೆ . . ."

ತಾಯಿಯ ಹೊಟ್ಟೆಯಲ್ಲಾಗುತ್ತಿದ್ದ ಸಂಕಟವನ್ನರಿತು ಚಂದ್ರಶೇಖರ

"ಇವತ್ತು ಶ್ರೀಮನ್ಮಹಾರಾಜರ ಇಂಟರ್‌ವ್ಯೂ (Interview) ಇದೆ. ಅದನ್ನು ಮುಗಿಸಿಕೊಂಡು ಇಲ್ಲೇ ಬಂದು ಬಿಡುತ್ತೇನೆ. ರಾತ್ರಿ ತುಂಬ ಹೊತನಾದಬಹುದು . . . ನಿನ್ನ ಕೈಯಲ್ಲಿ ಊಟಮಾಡಿ ಬಹಳ ದಿವಸವಾಯಿತಮ್ಮ."

"ನಿನಗೆ ಮಾಡಿಹಾಕುವ ಪುಣ್ಯ ನಾನು ಕೇಳಿಕೊಂಡು ಬರಲಿಲ್ಲ ಚಂದ್ರೂ"

"ಅಮೆರಿಕಾದಲ್ಲಿ ಊಟ ತಿಂಡಿ ಹೇಗಿರತ್ತೆ ಅಣ್ಣಯ್ಯ"

ಎಂದು ಜಾನಕಿ ಕೇಳಿದಳು.

"ಚೆನ್ನಾಗಿರುತ್ತದೆ. ಅಲ್ಲಿ ಮಾಂಸಾಹಾರವೇ ಎಲ್ಲರಿಗೂ ರೂಢಿ. ಕೆಲವರು ಶಾಕಾಹಾರಿಗಳೂ ಇದ್ದಾರೆ. ಅವರದೇ ಕೆಲವು ರೆಸ್ಟುರಾಗಳೂ ಇವೆ."

"ನೀನೇನು ಊಟ ಮಾಡುತ್ತಿದ್ದೆ ಮಾವ"

ಎಂದು ಜಗದೀಶ ಕೇಳಿದ.

"ಶಾಕಾಹಾರ ಸಿಕ್ಕಿದ ಕಡೆ ಶಾಕಾಹಾರ ಮಾಡುತ್ತಿದ್ದೆ. ಸಿಕ್ಕದಿದ್ದರೆ ಮಾಂಸಾಹಾರ ಮಾಡುತ್ತಿದ್ದೆ."

"ಅಜ್ಜಿ ಜಾತಿ ಕೆಡಿಸಿಬಿಟ್ಟೆ" ಎಂದು ವಿಮಲಾ ಹಾಸ್ಯಮಾಡಿದಳು.

"ಅಜ್ಜಿ ಇವತ್ತು ನಿನಗೆ ಪ್ರಾಯಶ್ಚಿತ್ತ ಮಾಡಿಸುತ್ತಾಳೆ ಮಾವ."

ಎಂದು ಜಗದೀಶ ಹೇಳಿದ. ಜಗದೀಶ, ವಿಮಲಾ, ಸುನಂದಾ ಕುತೂಹಲದಿಂದ ಅಮೇರಿಕಾವ ಬಗ್ಗೆ ನೂರಾರು ಪ್ರಶ್ನೆ ಕೇಳಿದರು. ಹಾಲಿವುಡ್ಡಿನ (Hollywood) ವಿಷಯ ಮಾವನಿಂದ ಹೆಚ್ಚು ತಿಳಿಯಬೇಕೆಂದು ಜಗದೀಶನ ಆತುರ.

"ನಾನು ಹಾಲಿವುಡ್‌ಗೆ ಹೆಚ್ಚು ಹೋಗಿಲ್ಲ ಜಗದೀಶ. ಒಮ್ಮೆ ಮಾತ್ರ ಹೋಗಿದ್ದೆ."

"ಸ್ಟಾರ್‌ಗಳು ಯಾರು ಯಾರು ಸಿಕ್ಕಿದ್ದರು ಮಾವ."

"ಚಾರ್ಲ್ಸ್ ಲಾಟನ್ (Charles Langhton) ಸರ್ ಲಾರೆನ್ಸ್ ಆಲಿವಿಯರ್ (Sir Lawrence Olivier) ವಾಲೆಸ್ ಬೀರಿ (Wallace Beery) ಮಿಕ್ಕಿ ರೂನಿ (Mickey Rooney) ಇವರನ್ನು ಕಂಡಿದ್ದೆ."

"ಅವರನ್ನೆಲ್ಲ ನಾನು ಕೇಳಿದ್ದು ಮಾವ ಗ್ರೇಟಾ ಗಾರ್ಬೋ, ನಾರ್ಮ ಷೀರರ್ ಇವರನ್ನು ನೋಡಿದ್ದಿರಾ ?"

"ಇಲ್ಲಪ್ಪ ವಿವಿಯನ್‌ಲೀ (Vivien Leigh) ಮತ್ತು ಗ್ರೀಯರ್ ಗಾರ್‌ಸನ್ (Greer Garson) ಇವರ ಪರಿಚಯವಾಯಿತಷ್ಟೆ."

ಮಾವ 'ಯೂಸ್‌ಲೆಸ್' (useless) ಎಂದು ಜಗದೀಶ ನಿರ್ಧರಿಸಿಬಿಟ್ಟ.

ಸುನಂದಾ ಅಮೇರಿಕಾದ ಯೂನಿವರ್ಸಿಟಿಗಳು, ಕಾಲೇಜುಗಳ ವಿಷಯ ಕೇಳಿದಳು. ಜಾನಕಮ್ಮ ಅಮೆರಿಕನ್ನರ ಸಂಸಾರ ಜೀವನದ ಬಗ್ಗೆ ಕೇಳಿದಳು. ಇಂದಿರಮ್ಮ ಬೇಸರಗೊಂಡು

"ಅದೆಲ್ಲಾ ಇರಲಿ - ನಿನ್ನ ವಿಷಯ ಹೇಳು ಚಂದ್ರೂ" ಎಂದರು.

"ನನ್ನ ವಿಷಯ ಏನು ಹೇಳಲಿ. ಚೆನ್ನಾಗಿದ್ದೇನೆ. ನ್ಯೂಯಾರ್ಕಿನಲ್ಲಿ ವಾಸ - ಅಮೆರಿಕಾದ ದೊಡ್ಡ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದೇನೆ."

"ನಿನ್ನ ಒಂದು ಲೇಖನದ ವಿಷಯ ಇಲ್ಲಿ ಬಹಳ ಬೊಬ್ಬಾಟವಾಯಿತು ಅಣ್ಣಯ್ಯ" ಎಂದಳು ಸುನಂದಾ.

"ನನ್ನ ಲೇಖನ ಇಲ್ಲಿನ ಪತ್ರಿಕೆಗಳಲ್ಲಿ ಪೂರ್ತಿ ಪ್ರಕಟವಾಗಿತ್ತೇ ?"

"ಇಲ್ಲ. ಹಿಂದೂ - ಎಕ್ಸ್‌ಪ್ರೆಸ್ ಪತ್ರಿಕೆಗಳಲ್ಲಿ ಅಲ್ಪಸ್ವಲ್ಪ ಪ್ರಕಟ

ವಾಗಿತ್ತು. ರಜನಿ ಪಾಮ್ ದತ್ ಅದಕ್ಕೆ ಕೊಟ್ಟ ಉತ್ತರವೂ ಸ್ವಲ್ಪ ಸ್ವಲ್ಪ ಪ್ರಕಟವಾಗಿತ್ತು."

ಅವನೊಬ್ಬ ರಷ್ಯನ್ ಏಜಂಟ್ . . . . ನನ್ನ ಲೇಖನ ನೋಡಿ ಇಲ್ಲಿನ ಜನ ಏನಂದರು."

"ಕಟುವಾಗಿಯೇ ಟೀಕೆ ಮಾಡಿದರು."

"ನಿನ್ನ ಯಜಮಾನರು."

"ಪೂರ್ತಿ ಲೇಖನ ನೋಡದೆ ಏನೂ ಹೇಳಬಾರದು ಎಂದೂ ಹೇಳಿದರು."

"ಅಲ್ಲಿ ಮನೆ ಅನುಕೂಲವಾಗಿದೆಯೇ ಚಂದ್ರೂ" ಎಂದೂ ಇಂದಿರಮ್ಮ ಕೇಳಿದರು.

"ಅನುಕೂಲವಾಗಿದೆ - ಬೊಂಬಾಯಿಯಲ್ಲಿರುವ ಹಾಗೆ ಅಲ್ಲಿಯೂ ಫ್ಲ್ಯಾಟ್ ಸಿಸ್ಟಂ (Flat System) - ನ್ಯೂಯಾರ್ಕಿನಲ್ಲಿ ಕೆಲವು ಕಡೆ ಮನೆ ಅಗ್ಗದ ಬಾಡಿಗೆಗೂ ಸಿಕ್ಕುತ್ತದೆ. ನಾನಿರುವುದು ಒಳ್ಳೆಯ ಜಾಗ. ನಾಲ್ಕು ರೂಮಿನ ಫ್ಲ್ಯಾಟ್."

"ಬಾಡಿಗೆಯೆಷ್ಟು ?"

"ವಾರಕ್ಕೆ ಇಪ್ಪತ್ತು ಡಾಲರು - ಸುಮಾರು ನೂರು ರೂಪಾಯಿ."

"ತಿಂಗಳಿಗೆ ನಾನೂರು ರೂಪಾಯಿ ಬಾಡಿಗೆ ಕೊಡುತ್ತಿರುವೆಯಾ ?"

"ಅಲ್ಲಿ ಜೀವನದ ಮಟ್ಟವೇ ಬಹಳ ಮೇಲಿದೆಯಮ್ಮ. ಇಲ್ಲಿ ಎರಡು ರೂಪಾಯಿಗಾಗುವ ಬ್ರೇಕ್‌ಫಾಸ್ಟಿಗೆ ಅಲ್ಲಿ ಹತ್ತು ರೂಪಾಯಿ ಕೊಡಬೇಕು. ಒಂದೂಟವೆಂದರೆ ಹತ್ತು ಹದಿನೈದು ಡಾಲರಾಗುತ್ತದೆ."

"ಅಲ್ಲಿಯ ಒಪ್ಪತ್ತಿನೂಟದ ಬೆಲೆಗೆ ಇಲ್ಲಿ ಒಂದು ತಿಂಗಳು ಸಂಸಾರ ಮಾಡುತ್ತಾರಲ್ಲಪ್ಪಾ."

"ಅಲ್ಲಿ ಲಕ್ಷ್ಮೀ ತಾಂಡವವಾಡುತ್ತಾಳಮ್ಮ."

"ಇಲ್ಲಿಯೂ ತಾಂಡವವಾಡುತ್ತಾಳೆ ಅಣ್ಣಯ್ಯ - ದರಿದ್ರಲಕ್ಷ್ಮಿ"
ಎಂದು ಸುನಂದ ವ್ಯಂಗ್ಯವಾಗಿ ನುಡಿದಳು.

"ನನ್ನ ಪುರಾಣವಿರಲಿ - ಮನೆ ವಿಷಯ ಮಾತನಾಡಿ."
ಎಂದು ಚಂದ್ರಶೇಖರ ಕೇಳಿದ.

"ನೀನು ಹಕ್ಕಿಯ ಹಾಗೆ ಕುಪ್ಪಳಿಸಿದರೆ ಏನು ಹೇಳಲು ಸಾಧ್ಯ. ಸಂಜೆಗೆ ಬರುವೆಯಲ್ಲಾ ಆಗ ಸಾವಕಾಶವಾಗಿ ಮಾತನಾಡೋಣ."

ಎಂದು ಜಾನಕಮ್ಮ ಹೇಳಿದಳು.

"ಅಮೇರಿಕಾಕ್ಕೆ ಹೋಗಿ ಬಂದ ಮೇಲೆ ನಾವು ಬಹಳ 'ಹಿಂದುಳಿದವರು' ಎಂದು ನೀನು ಭಾವಿಸುವೆಯಲ್ಲವೇ ?"

"ಯಾಕೆ ಹಾಗೆ ಕೇಳುತ್ತೀ ಸುನಂದಾ."

"ನಾವೂ ಮುಂಮುವರಿಯುತ್ತಿದ್ದೇವೆಂದು ನಿನಗೆ ಹೇಳಬೇಕೆಂದು ಮನಸ್ಸು ಆತುರಪಡುತ್ತಿದೆ."

"ಹೇಳು."

"ಜಾನಕಕ್ಕನ ಮೈದುನ ಒಬ್ಬ ಇದ್ದ - ಸಂಜೀವ ಎಂದು - ಜ್ಞಾಪಕ ವಿದೆಯೇ ?"

"ನೋಡಿರಬಹುದು - ಜ್ಞಾಪಕವಿಲ್ಲಮ್ಮ."

"ಅವನಿಗೂ ನನ್ನ ಕ್ಲಾಸ್‌ಮೇಟ್ ಪುಷ್ಪನಿಗೂ ಮದುವೆ"

"ಅದರಲ್ಲಿ ಏನು ಆಶ್ಚರ್ಯ ?"

"ಆಶ್ಚರ್ಯವಿದೆ - ಪುಷ್ಪ ಕ್ರಿಶ್ಚಿಯನ್."

"ಹಾಗೇನು. ಸ್ಪ್ಲೆಂಡಿಡ್ (Splendid)"

"ನಿನ್ನ ನೋಡಬೇಕೆಂದು ಅವರಿಬ್ಬರೂ ಆಸೆಪಡುತ್ತಿದ್ದಾರೆ."

"ಬರಹೇಳು. - ಸರ್ಕಾರದ ಕಾರ್ ಹೇಗೂ ನನ್ನ ವಶದಲ್ಲಿದೆ. ನಾಳೆ ಸಂಜೆ ನಾವೇ ಅವರ ಮನೆಗೆ ಹೋಗೋಣ."

ಹೊತ್ತಾಯಿತೆಂದುಕೊಂಡು ಚಂದ್ರಶೇಖರ ಎದ್ದ. ಅವನನ್ನು ಕಳಿಸಿ ಬರಲು ಕಾರಿನವರೆಗೆ ಎಲ್ಲರೂ ಹೋದರು. ಮಗ ಕಾರಿನಲ್ಲಿ ಕುಳಿತ ಮೇಲೆ ಇಂದಿರಮ್ಮನವರು ಅವನ ಬಳಿ ಸಾರಿ ಅವನ ಭುಜನೇವರಿಸಿ

"ಸಂಜೆ ಎಷ್ಟುಹೊತ್ತಿಗೆ ಬರುತ್ತೀ" ಎಂದರು.

"ಆರು ಗಂಟೆಗೆ ಬರುತ್ತೇನಮ್ಮ" ಎಂದ.

ಕಾರು ಹೊರಟುಹೋದರೂ ಇಂದಿರಮ್ಮನವರು ಆ ಸ್ಥಳ ಬಿಡಲಿಲ್ಲ. ಮಗ ಹೋದ ಹಾದಿಯನ್ನು ನೋಡುತ್ತ ನಿಂತರು. ಸುನಂದಾ ಮೆಲ್ಲನೆ 'ಒಳಗೆ ಹೋಗೋಣವೇ ಅಮ್ಮ" ಎಂದಳು.

ಇಂದಿರಮ್ಮನವರು ಮೆಲ್ಲನೆ ನಡೆಯುತ್ತಾ ಒಳಕ್ಕೆ ಬಂದರು.

ಜಾನಕಮ್ಮ ಸುನಂದನನ್ನು ಕೇಳಿದಳು

''ಅಣ್ಣಯ್ಯನ ಭಾಷೆ ಎಷ್ಟು ವಿಚಿತ್ರವಾಗಿದೆ ನೋಡಿದೆಯಾ ಸುನಂದಾ.''

''ಕನ್ನಡದ ಸಂಪರ್ಕ ತಪ್ಪಿ ಎಷ್ಟೋ ವರ್ಷವಾಗಿದೆ - ಭಾಷೆ ಸ್ವಲ್ಪ ಮರೆತಿದ್ದರೂ ಇರಬಹುದು.''

''ಇಪ್ಪತ್ತೈದು ವರ್ಷ ಕಲಿತ ಭಾಷೆ ನಾಲ್ಕು ವರ್ಷದಲ್ಲಿ ಮರೆತುಹೋಗುದೇನೇ ?''

''ಕಲಿಯುವುದಕ್ಕೆ ತುಂಬ ಕಾಲಬೇಕು ಅಕ್ಕಾ, ಮರೆಯುವುದಕ್ಕೆ ಲ್ಪಕಾಲ ಸಾಕು.''

''ಅಣ್ಣಯ್ಯ ಇಲ್ಲೇ ಉಳಿದುಕೊಳ್ಳುತ್ತಾನೋ, ಮತ್ತೆ ತನ್ನ ಅಮೇರಿಕ್ಕೇ ಹೋಗುತ್ತಾನೋ ?''

"ಜತೆಯಲ್ಲಿ ಯಾರು ಯಾರೋ ಬಂದಿದ್ದಾರಲ್ಲಾ. ಅವನು ಇಲ್ಲೇ ರುವ ಹಾಗೆ ಕಾಣಲಿಲ್ಲ.''

''ಅವನಿಗೆ ಮದುವೆ ಮಾಡಬೇಕೂಂತ ಅಮ್ಮ ಯೋಚಿಸುತ್ತಿದ್ದಾಳೆ.''

''ಈಗಾಗಲೇ ಏನು ಮಾಡಿಕೊಂಡು ಬಂದಿದ್ದಾನೋ !"

"ಮೆಲ್ಲನೆ ಮಾತನಾಡು ಅಕ್ಕ - ಅಮ್ಮನ ಕಿವಿಗೆ ಬಿದ್ದೀತು" ಎಂದಳು.

ಎಲ್ಲರಿಗೂ ಊಟಕ್ಕೆ ಬಡಿಸಿದ ಮೇಲೆ ಇಂದಿರಮ್ಮನವರು ಊಟಕ್ಕೆ ಕುಳಿತುಕೊಳ್ಳುವುದು ನಿತ್ಯ ರೂಢಿಯಾಗಿತ್ತು. ಎಲ್ಲರೂ ಊಟ ಮುಗಿಸಿದ ಮೇಲೆ ಇಂದಿರಮ್ಮನವರು ಊಟಕ್ಕೆ ಕುಳಿತುಕೊಂಡರು. ಜಾನಕಮ್ಮ ಬಡಿಸುವುದಕ್ಕೆ ನಿಂತಿದ್ದಳು. ಸುನಂದಾ ಮಾತನಾಡುತ್ತ ತಾಯಿಯ ಪಕ್ಕದಲ್ಲಿ ಕುಳಿತಿದ್ದಳು.

ಇಂದಿರಮ್ಮನವರು ಸಾರು ಅನ್ನ ಕಲಸಿಕೊಂಡು ಎರಡು ತುತ್ತು ಬಾಯಿಗಿಟ್ಟುಕೊಂಡು ಅದನ್ನು ಪಕ್ಕಕ್ಕೆ ತಳ್ಳಿ 'ಅನ್ನ ಹಾಕಿ ಮಜ್ಜಿಗೆ ಹಾಕು ಜಾನಕಿ' ಎಂದರು.

"ಇದೇನೇ ಅಮ್ಮ - ಹೀಗೆ ಊಟ ಮಾಡಿದರೆ ಕೈಕಾಲು ಗಟ್ಟಿಯಾಗಿರುತ್ತೀನೇ"

ಎಂದು ಜಾನಕಮ್ಮ ಕೇಳಿದಳು. ಇಂದಿರಮ್ಮನವರು ಮಾತನಾಡದೆ ಮಜ್ಜಿಗೆಯನ್ನ ಕಲಸಿಕೊಂಡು, ಒಂದು ತುತ್ತು ಬಾಯಿಗಿಟ್ಟುಕೊಂಡರು. ಅನ್ನ ಸೇರಲಿಲ್ಲ. ಕಣ್ಣುಗಳು ತುಂಬಿದವು.

"ಮಗನನ್ನು ಬಿಟ್ಟು ನಾನೊಬ್ಬಳೇ ಹಾಳು ಹೊಟ್ಟೆ ತುಂಬಿಕೊಳ್ಳು ತ್ತಿದ್ದೇನೆ" ಎಂದಂದು ಎದ್ದುಬಿಟ್ಟರು.

ಜಾನಕಮ್ಮ, ಸುನಂದಾ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

ಚಂದ್ರಶೇಖರ ಬರುವವರೆಗೆ ಗಡಿಯಾರ ನೋಡುವುದೇ ಇಂದಿರಮ್ಮ ನವರ ಕೆಲಸವಾಯಿತು. ಐದು ಗಂಟೆ ಹೊಡೆದ ಮೇಲಂತೂ ಅವರ ಜೀವ ತಳಮಳಿಸಲಾರಂಭಿಸಿತು. ಗೇಟಿನ ಬಳಿಗೆ ಹತ್ತಾರು ಸಲ ಹೋಗಿಬಂದರು. ಜಾನಕಮ್ಮ ಒಮ್ಮೆ ತಾಯಿಯನ್ನ ಗದರಿಸಿಕೊಂಡು 'ಸ್ವಲ್ಪ ಸುಮ್ಮನೆ ಇರಮ್ಮ ನಿನ್ನ ಪ್ರೇಮಕುಮಾರ ಎಲ್ಲಿಯೂ ಓಡಿ ಹೋಗುವುದಿಲ್ಲ. ಬರುತ್ತಾನೆ' ಎಂದಳು. ಇಂದಿರಮ್ಮನವರ ಕಿವಿಗಳ ಮೇಲೆ ಅವಳ ಮಾತು ಬೀಳಲೇ ಇಲ್ಲ.

ಆರು ಗಂಟೆ ಹೊಡೆದ ಸ್ವಲ್ಪ ಹೊತ್ತಿನ ಮೇಲೆ ಚಂದ್ರಶೇಖರ ಬಂದಿಳಿದು ಕಾರನ್ನು ಕಳಿಸಿಕೊಟ್ಟ. ಇಂದಿರಮ್ಮನವರು ಮಗನ ಜತೆ ಕುಳಿತು 'ಇವತ್ತು ಅಡಿಗೆ ನೀನು ನೋಡಿಕೊಳ್ಳೇ ಜಾನಕಿ' ಎಂದು ಹೇಳಿದರು.

ಸುನಂದಾ ವಿವರವಾಗಿ ಜಾನಕಿಯ ಸಂಸಾರದ ಕಥೆಯನ್ನು ವರದಿ ಮಾಡಿದಳು. ಚಂದ್ರಶೇಖರ ಸುನಂದೆಯ ಗಂಡನ ವಿಷಯ ಕೇಳಿದ. ಇಂದಿರಮ್ಮನವರು ಹಳೆಯ ಕಥೆಯನ್ನು ವಿವರಿಸಿ 'ಅವರು ನನ್ನ ಅಳಿಯ ಇದ್ದ ಹಾಗಿಲ್ಲಪ್ಪಾ - ಮಗ ಇದ್ದ ಹಾಗಿದ್ದಾರೆ' ಎಂದು ಹೇಳಿದರು. ಚಂದ್ರಶೇಖರನ ಮನಸ್ಸಿಗೆ ಅಳುಕವುಂಟಾಯಿತು.

ಮಾತಿಗೆಮಾತು ಬೆಳೆದುಕೊಂಡು ಸಾಗಿರಲು ಇಂದಿರಮ್ಮನವರು

"ಮದುವೆ ವಿಷಯ ಏನು ಯೋಚನೆ ಮಾಡಿದ್ದೀ ಚಂದ್ರೂ"

ಎಂದು ಕೇಳಿದರು. ತಾಯಿಯ ಪ್ರಶ್ನೆ ಅರ್ಥವಾದರೂ ಅರ್ಥವಾಗ ದಿದ್ದಂತೆ ತೋರಿಸಿಕೊಂಡು

"ಯಾರ ಮದುವೆ" ಎಂದು ಕೇಳಿದ.

"ಯಾರದೇನು ? ನಿನ್ನದು."

"ನನ್ನ ಮದುವೆ ಆಗಿದೆಯಲ್ಲಾ."

"ಆಗಿದೆಯಲ್ಲಾ ! ಯಾವಾಗ ?"

ಚಂದ್ರಶೇಖರ ತನ್ನ ಪರ್ಸ್ ತೆಗೆದು ಅದರಲ್ಲಿ ಹುದುಗಿಸಿಟ್ಟ ಸಣ್ಣ ಭಾವಚಿತ್ರವನ್ನು ತಾಯಿಯ ಕೈಗಿತ್ತ. ಸುನಂದೆಯೂ ತಾಯಿಯ ಮುಖದ ಬಳಿ ಮುಖವಿಟ್ಟು ನೋಡಿದಳು

"ನನಗೊಂದು ಮಾತು ಬರೆಯಬಾರದಾಗಿತ್ತೇ ಚಂದ್ರೂ."

"ನಾನು ಇಲ್ಲಿಗೆ ಬಂದು ಬಹಳ ದಿವಸವಾಗಬೇಕಾಗಿತ್ತಮ್ಮ. ನಾನೇ ಬರುವೆನಲ್ಲ ಹೇಳುವ ಎಂದಿದ್ದೆ. ನನ್ನ ಪ್ರಯಾಣ ಮುಂದೆ ಬಿತ್ತು, ಅವರ ಮದುವೆಯನ್ನು ಮುಂದಕ್ಕೆ ತಳ್ಳಲಾಗಲಿಲ್ಲ."

"ಈಕೆ ಯಾರು ?"

"ನನ್ನ ಸ್ನೇಹಿತನ ತಂಗಿ - ನನ್ನ ಜತೆ ಯೂನಿವರ್ಸಿಟಿಯಲ್ಲಿ ಕೆಲಸ ಮಾಡು ತ್ತಿದ್ದಳು. ಹೇಗಿದ್ದಾಳಮ್ಮ"

"ಗೌರಮ್ಮ ಇದ್ದ ಹಾಗಿದ್ದಾಳೆ."

ಸುನಂದಾ ತಾಯಿಯ ಕೈಯಿಂದ ಚಿತ್ರ ಕಸುಗೊಂಡು ಜಾನಕಮ್ಮನಿಗೆ ತೋರಿಸಲು ಒಳಗೆದ್ದು ಹೋದಳು.

"ನಿನ್ನ ಹೆಂಡತಿಯನ್ನು ಕರೆದುಕೊಂಡು ಬರಬಾರದಾಗಿತ್ತೇ ?"

"ಇನ್ನೇನಮ್ಮ - ನಾನು ಮೇಲಿಂದ ಮೇಲೆ ಬರುತ್ತಿರಬೇಕಾಗುತ್ತೆ ಮುಂದಿನ ಸಾರಿ ಬರುವಾಗ ಖಂಡಿತ ಕರೆದುಕೊಂಡು ಬರುತ್ತೇನೆ"

"ಮೇಲಿಂದ ಮೇಲೆ ಬರುತ್ತಿರಬೇಕಾಗುತ್ತೆ ಎಂದರೆ ಈಗ ಹೊರಡ ಬೇಕೇನು ?"

"ಹೂ! ನನ್ನ ಪುಸ್ತಕಕ್ಕೆ ಬೇಕಾದ ವಿಷಯ ಸಂಗ್ರಹ ಮಾಡುವುದಕ್ಕೆ ಬಂದಿದ್ದೇನೆ. ಎರಡು ತಿಂಗಳು ಹಿಂದೂಸ್ಥಾನ ಪ್ರವಾಸಮಾಡಿ ಅಮೇರಿಕಾಕ್ಕೆ ಹೋಗುತ್ತೇನೆ. ಅಲ್ಲಿ ಪುಸ್ತಕ ಮುಗಿಸಿಕೊಂಡು ಪುನಃ ಬರುತ್ತೇನೆ."

"ನಿನ್ನ ಬಿಟ್ಟಿರಲಾರೆ ಚಂದ್ರೂ - ನಿನ್ನ ಧ್ಯಾನಮಾಡುತ್ತ ಅವರೂ ಕಣ್ಣು ಮುಚ್ಚಿಕೊಂಡರು. ನಾನೂ . . ."

"ಅಮೇರಿಕಾ ಈಗ ಬಹಳ ದೂರವಿಲ್ಲಮ್ಮ. ಪ್ಲೇನಿನಲ್ಲಿ ನೆನಸಿಕೊಂಡಾಗ ಬರಬಹುದು."

"ಅಮೇರಿಕಾಕ್ಕೆ ಹಿಂದಿರುಗಿ ಹೋಗಸಂತೆ ನೀನು ಇಲ್ಲಿ ಬರುವುದು ಯಾವಾಗ ?"

"ಇಲ್ಲಿ ತಮ್ಮ ಪ್ರಚಾರಕಾರ್ಯ ಬಲಪಡಿಸಬೇಕೆಂದು 'ವಿದೇಶೀ ಸಮಿತಿ' ಯವರು ಯೋಚಿಸುತ್ತಿದ್ದಾರೆ. ಅದು ಕೈಗೂಡಿದರೆ ನನ್ನನ್ನೇ ಡೈರೆಕ್ಟರಾಗಿ ಕಳಿಸುತ್ತಾರೆ. ಬೊಂಬಾಯಿ, ಮದರಾಸು, ಬೆಂಗಳೂರು ಈ ಮೂರು ಸ್ಥಳಗಳಲ್ಲಿ ಎಲ್ಲಿಯಾದರೂ ಕಛೇರಿ ತೆಗೆಯಬೇಕೆಂದು ಅವರ ಇಚ್ಛೆ."

"ನಿಜವಾಗಿ ಬೇಗ ಬಂದುಬಿಡುತ್ತೀಯಾ ?"

"ಖಂಡಿತ ಬರುತ್ತೇನಮ್ಮ - ಯೋಚನೆ ಮಾಡಬೇಡ."

ಇಂದಿರಮ್ಮನವರ ಹೃದಯಕ್ಕೆ ಹಾಲೆರೆದಂತಾಯಿತು. ಮಗನ ಎರಡು ಕೆನ್ನೆಗಳನ್ನೂ ಸವರಿಸಿ ನಟಿಕೆ ಮುರಿದರು.

ಸುನಂದಾ ಹಿಂದಿರುಗಿ ಬಂದ ಭಾವಚಿತ್ರವನ್ನು ಅಣ್ಣನಿಗೆ ಕೊಟ್ಟು ಊಟಕ್ಕೆ ಎಬ್ಬಿಸಿದಳು. ಇಂದಿರಮ್ಮನವರು

"ಹಣಕಾಸಿನ ತಾಪತ್ರಯವಿಲ್ಲವೇ ಚಂದ್ರೂ"

"ಏನೂ ಇಲ್ಲಮ್ಮ."

"ದೂರದೇಶ - ತಾಪತ್ರಯವಾದರೆ ತಿಳಿಸು."

"ನನಗೆ ಅನುಕೂಲವಾಗಿದೆ. ನಿನಗೆ ಏನಾದರೂ ಕಳಿಸಿಕೊಡಲೇ ?"

"ಏನೂ ಬೇಡಪ್ಪ - ಮಹಾರಾಯರು ಯಾವುದಕ್ಕೂ ಕಡಿಮೆಮಾಡಿಲ್ಲ. ನಾನೂ ತಿಂದು ನಾಲ್ಕು ಜನಕ್ಕೆ ಹಾಕುವಷ್ಟು ಸಂಪಾದಿಸಿಟ್ಟು ಹೋಗಿದ್ದಾರೆ. ತಪ್ಪದ ವಾರಕ್ಕೊಂದಾದರೂ ಕಾಗದ ಬರೆ ಚಂದ್ರೂ . . . ಅಷ್ಟು ಉಪಕಾರ ಮಾಡು."

ತಾಯಿಯ ಮಾತು ಜೀರ್ಣಿಸಿಕೊಳ್ಳುವುದು ಚಂದ್ರಶೇಖರನಿಗೆ ಕಷ್ಟವಾಯಿತು. 'ತಪ್ಪದೆ ಬರೆಯುತ್ತೇನಮ್ಮ' ಎಂದು ಊಟಕ್ಕೆ ಎದ್ದ. ಎಲ್ಲರ ಊಟ ಮುಗಿದ ಮೇಲೆ ಜಗದೀಶ, ವಿಮಲಾ ಮಲಗಲು ಹೋದರು. ಸುನಂದಾ ಮತ್ತೆ ಅಮೇರಿಕಾದ ಸುದ್ದಿ ತೆಗೆದಳು.

'ನೀಗ್ರೋ ಜನರನ್ನು ಅಲ್ಲಿ ಬಹಳ ಕೆಟ್ಟದಾಗಿ ಕಾಣುತ್ತಾರಂತೆ - ನಿಜವೇನಣ್ಣಾ !"

"ಎಲ್ಲಾ ಕಡೆಯಲ್ಲಿಯೂ ಅಲ್ಲ - ಕೆಲವು ಕಡೆ ಅವರಿಗೆ ಹಿಂಸೆಯಾಗುತ್ತಿದೆ."

"ಕೂ ಕ್ಲಕ್ಸ್ ಕ್ಲ್ಯಾನ್ (Ku Klus Klan) ಹಾವಳಿ ಬಹಳವಂತೆ, ಶಾಂತಿಪ್ರಸಾರಕ್ಕೆ ಪಾಲ್‌ರೋಬ್ಸನ್ ಸೇರಿಸಿದ ಸಭೆಯನ್ನೂ ಚೆದುರಿಸಿ, ರೋಬ್ಸನ್ನನನ್ನೂ ಅವನ ಕಡೆಯವರನ್ನೂ ಹೊಡೆದರಂತೆ."

"ಶಾಂತಿಯ ಹೆಸರಿನಲ್ಲಿ ರೋಬ್ಸನ್ ಕಮ್ಯೂನಿಸಂ ಪ್ರಚಾರ ಮಾಡುತ್ತಿದ್ದುದು ಜನಕ್ಕೆ ಬೇಡವಾಯಿತು. ಅಮೆರಿಕಾ ವಿರೋಧಿಗಳು ನೀಗ್ರೋ ಸಮಸ್ಯೆಗೆ ವಿಪರೀತ ಅರ್ಥಕೊಟ್ಟಿದ್ದಾರೆ. ಬಿಳಿ ಹುಡುಗಿಯರನ್ನು ಅಪಹರಿಸಲು ನೀಗ್ರೋಗಳು ಪ್ರಯತ್ನಿಸುವುದು - ಅವರ ದುರಾಚಾರಗಳೂ ಜನತೆಯನ್ನು ಕೆರಳಿಸುತ್ತವೆ."

"ಮನೆಯಲ್ಲಿ ಇದೇ ಮಾತು ಬಂದಿತು. ನಾನೂ ನಿನ್ನ ಹಾಗೆ ವಾದ ಮಾಡಿದೆ - ಅವರು ಮಾರನೆಯ ದಿವಸ ಒಂದು ಪುಸ್ತಕ ತಂದುಕೊಟ್ಟರು. ಅದನ್ನು ಓದಿದ ಮೇಲೆ ನೀಗ್ರೋಗಳು ನಿರ್ದೋಷಿಗಳೆಂದೆನಿಸಿತು."

"ಪುಸ್ತಕ ಬರೆದಿರುವವನು ಯಾರು? ಯಾವನೋ ಫ್ರೆಂಚ್ ಲೇಖಕ ಇರಬಹುದು."

"ಹೌದು - ಫ್ರೆಂಚ್ ಲೇಖಕನೇ - ಅವನ ಹೆಸರು ಹೆನ್ರಿ ಚಾಂಪ್ಲಿ (Henry Champly) ಅವನ ಪುಸ್ತಕ 'ವೈಟ್ ವುಮೆನ್ ಕಲರ್ಡ್ ಮೆನ್' (White Women Coloured Men) ನೀನು ಓದಿರಬಹುದು."

"ನಾನು ಓದಿಲ್ಲ. ಅವನೇನು ಹೇಳುತ್ತಾನೆ."

"ಬಾಲ್ಯದ ದುರಾಚಾರಗಳಿಂದ, ಯುದ್ಧದಿಂದಾದ ಪರಿಣಾಮದಿಂದ, ಸಾಮಾಜಿಕಜೀವನ ಸಂಯಮರಹಿತವಾದುದರಿಂದ ಅಮೇರಿಕಾದ ಪುರುಷರು ನಿರ್ವೀರ್ಯರಾಗಿದ್ದಾರೆ. ಅದಕ್ಕೇ ಪುರುಷಸಿಂಹಗಳಂತಿರುವ ಅಮೇರಿಕೆಯ ನೀಗ್ರೋಗಳನ್ನು ಶ್ವೇತಕನ್ಯೆಯರು ಬಯಸಿ, ಅವರನ್ನು ಹಿಂಬಾಲಿಸುತ್ತಾರೆ. ಇದನ್ನು ಸಹಿಸಲಾಗದ ಜನ ನೀಗ್ರೋಗಳು ಶ್ವೇತಕನ್ಯೆಯರ ಮೇಲೆ ಅತ್ಯಾಚಾರಮಾಡಲು ಯತ್ನಿಸಿದರೆಂದು ಆಪಾದಿಸಿ ಅವರನ್ನು ಚಿತ್ರಹಿಂಸೆಗೆ ಗುರಿಮಾಡುತ್ತಾರೆ."

"ಅವನೊಬ್ಬ ನೀಗ್ರೋಗಳ ಉದ್ಧಾರಕ್ಕೆ ಹೊರಟ ಮಹಾಪುರುಷ ಇರಬೇಕು - ಇನ್ನೊಬ್ಬ ಬೂಕರ್. ಟಿ. ವಾಷಿಂಗ್‌ಟನ್ (Booker. T. washington)"

"ಹಾಗಿಲ್ಲಣ್ಣಾ. ಚಾಂಪ್ಲಿ ಶ್ವೇತಕನ್ಯೆಯರ ಪಕ್ಷವನ್ನು ಹಿಡಿದೇ ವಾದ ಮಾಡಿದ್ದಾನೆ. ಶ್ವೇತಕನ್ಯೆಯರು ಭೂಮಿಗಿಳಿದು ಬಂದಿರುವ ರಂಭೆ, ಊರ್ವಶಿ, ಮೇನಕೆಯರೆಂದೂ ಅವರನ್ನು ಅನಾಗರಿಕರಾದ ನೀಗ್ರೋಗಳು ಬಯಸುತ್ತಾರೆಂದೂ ವಿವರಿಸುತ್ತಾ, ಆ ಬಯಕೆಯನ್ನು ಶ್ವೇತಕನ್ಯೆಯರು ಪೂರೈಸುತ್ತಾರೆಂದು ಹೇಳಿದ್ದಾನೆ."

"ಅಂಥ ಪುಸ್ತಕಗಳನ್ನೆಲ್ಲಾ ನಿನ್ನ ಯಜಮಾನರೇ ನಿನಗೆ ತಂದು ಕೊಡುತ್ತಾರೆಯೇ ?"

"ಸತ್ಯಾರ್ಥ ತಿಳಿದುಕೊಳ್ಳಲು ಯಾರೂ ಹಿಂಜರಿಯಬಾರದೆಂದು ಅವರ ಅಭಿಪ್ರಾಯ.'

"ಅಮೇರಿಕಾ ಜರಿಯುವುದು ಈಗ ಒಂದು ಫ್ಯಾಷನ್ ಆಗುತ್ತಿದೆ."

"ಅಮೇರಿಕಾದವರಷ್ಟು ಆ ಕೆಲಸ ಉಳಿದವರು ಮಾಡುತ್ತಿಲ್ಲಣ್ಣಾ. ಮಿಸ್. ಮೇಯೋ ಪುಸ್ತಕ ಓದಿರುವೆಯಲ್ಲ - ಬ್ರುಲೆಟ್ ಲೇಖನ ಓದಿರುವೆಯಲ್ಲಾ - ಮೊನ್ನೆ ತಾನೇ ಪ್ರಕಟವಾದ ಜಾನ್ ಹ್ಯಾಮಿಲ್‌ಟನ್ನನ ಲೇಖನ ನೋಡಿರುವೆಯಲ್ಲ."

"ಹೋಗಲಿ ಬಿಡಮ್ಮ. ಯಾವ ಯಾವುದೋ ವಿಷಯ ಯೋಚನೆ ಮಾಡಿ ಏಕೆ ತಲೆಕೆಡಿಸಿಕೊಳ್ಳುವೆ. ನನಗೂ ನಿದ್ರೆ ಬರುತ್ತಿದೆ." ಎಂದೆದ್ದ.

ಚಂದ್ರಶೇಖರನಿಗೆ ಸಿದ್ಧಪಡಿಸಿದ್ದ ರೂಮಿಗೆ ಅವನನ್ನೊಯ್ದು ಬಿಟ್ಟು ಸುನಂದಾ, ಜಾನಕಮ್ಮ, ಇಂದಿರಮ್ಮನವರು ಮಲಗಲು ಹೋದರು.

ಅರ್ಧ ಮುಕ್ಕಾಲು ಗಂಟೆ ಕಳೆದಿರಬಹುದು. ಇಂದಿರಮ್ಮನವರು ಮೆಲ್ಲನೆದ್ದು ಬಂದು, ಮಲಗಿ ನಿದ್ರಿಸುತ್ತಿದ್ದ ಮಗನನ್ನು ಎವೆಯಿಕ್ಕದೆ ನೋಡಿ ಹೊರಗಡೆ ಬಂದು ಕುಳಿತರು. ಜಾನಕಮ್ಮನಿಗೂ ನಿದ್ರೆ ಹತ್ತಿರಲಿಲ್ಲ. ತಾಯಿಯನ್ನೇ ಹಿಂಬಾಲಿಸಿ ಬಂದಳು. ತಾಯಿಯ ಹುಚ್ಚು ಕಂಡು ಅವಳಿಗೆ ಮರುಕವಾಯಿತು.

"ಏನಮ್ಮ.... ರಾತ್ರಿ ಹೀಗೆಯೇ ಕಳೆದುಹೋಗುತ್ತದೆ. ನಿದ್ರೆ ಮಾಡೇಳು"

ಎಂದು ತಾಯಿಯನ್ನೆಬ್ಬಿಸಿ ಕರೆದುಕೊಂಡು ಹೋದಳು.

ಇಂದಿರಮ್ಮನವರು ಮಲಗಿದರು ಆದರೆ ನಿದ್ರೆ ಹತ್ತಲಿಲ್ಲ. 'ಚಂದ್ರೂ ಅಮೇರಿಕಾಕ್ಕೆ ತಿರುಗಿ ಹೋಗಿಬಿಡುತ್ತಾನಲ್ಲಾ' ಎಂಬ ಚಿಂತೆ ಅವರ ತಲೆಯನ್ನು ಕೊರೆಯತೊಡಗಿತು.

ಬೆಳಿಗ್ಗೆ ಚಂದ್ರಶೇಖರ ಎದ್ದು ಮುಖ ತೊಳೆದುಕೊಂಡು ಕಾಫಿ ತೆಗೆದುಕೊಳ್ಳುವ ವೇಳೆಗೆ ಡ್ರೈವರ್ ಬಂದು 'ಕಾರು ಬಂದಿದೆ' ಎಂದು ತಿಳಿಸಿದ. ಚಂದ್ರಶೇಖರ ಹೊರಟುನಿಂತ

"ಸ್ನಾನ, ತಿಂಡಿ ಮಾಡಿಕೊಂಡು ಹೋಗು"

ಎಂದು ಇಂದಿರಮ್ಮನವರು ಹೇಳಿದರು.

"ಹೊತ್ತಾಗುತ್ತದಮ್ಮ. ಹೋಗುತ್ತೇನೆ ಜತೆಯಲ್ಲಿ ಬಂದವರನ್ನು ಅಲಕ್ಷ್ಯ ಮಾಡಿದಂತಾಗುತ್ತದೆ."

"ಎಷ್ಟುಹೊತ್ತಿಗೆ ಬರುತ್ತೀ ಅಣ್ಣಯ್ಯ"

ಎಂದು ಸುನಂದ ಕೇಳಿದಳು.

"ಇವತ್ತು ನಿನ್ನ ಫ್ರೆಂಡ್ ನೋಡುವುದಕ್ಕೆ ಹೋಗಬೇಕಲ್ಲವೇ - ನಾಲ್ಕು ಗಂಟೆಗೇ ಬರುತ್ತೇನೆ."

"ಮಧ್ಯಾಹ್ನ ಊಟಕ್ಕೆ ಬರುವುದಿಲ್ಲವೇ ಚಂದ್ರೂ"

ಎಂದು ಇಂದಿರಮ್ಮನವರು ಕೇಳಿದರು.

"ಅವರ ಜತೆಯಲ್ಲಿ ಒಂದು ದಿನವಾದರೂ ನಾನೂ ಇರಬೇಡವೇ ?"

"ಅವರನ್ನೂ ಇಲ್ಲೇ ಊಟಕ್ಕೆ ಕರೆದುಕೊಂಡು ಬಾ."

"ನೋಡುತ್ತೇನೆ"

ಎಂದಷ್ಟೇ ಹೇಳಿ ಹೊರಟ.

"ಅಮೇರಿಕಾದ ಕುಬೇರರಿಗೆ ನಮ್ಮ ಬಡತನ ತೋರಿಸುವುದಕ್ಕೆ ಅಣ್ಣಯ್ಯ ಇಷ್ಟಪಡಲ್ಲಮ್ಮ"

ಎಂದು ಜಾನಕಮ್ಮ ಹೇಳಿದಳು.

"ಚಂದ್ರೂ ಅಂಥಾವನಲ್ಲ ಕಣೇ ಜಾನಕಿ"

ಎಂದು ಇಂದಿರಮ್ಮನವರು ಉತ್ತರಿಸಿದರು. ಮಗನ ವಿರುದ್ಧ ಯಾವ ಮಾತು ಕೇಳುವುದಕ್ಕೂ ತಾಯಿಯ ಮನಸ್ಸು ಸಿದ್ಧವಾಗಿರಲಿಲ್ಲ.'

"ಸರಿ - ಇವತ್ತೂ ನಿನಗೆ ಏಕಾದಶಿ ತಾನೇ ?"

"ಏಕೆ - ಇವತ್ತಿನ್ನೂ ನವಮಿ ಅಲ್ಲವೇನೇ ?"

"ಜಗತ್ತಿಗೆಲ್ಲಾ ನವಮಿ - ನಿನಗೆ ಮಾತ್ರ ಏಕಾದಶಿ. ಮಗನನ್ನು ಬಿಟ್ಟು ನೀನು ಹೇಗೆ ಊಟಮಾಡುತ್ತೀ."

ಇಂದಿರಮ್ಮನವರ ಮನಸ್ಸು ಎಲ್ಲಿಯೋ ಅಲೆದಾಡುತ್ತಿತ್ತು. ಹಳೆಯ ಯಾವುದೋ ಅನುಭವವನ್ನು ನೆನಪು ಮಾಡಿಕೊಂಡು

"ಇವತ್ತು ಅವರ ತಂದೆ ಇದ್ದಿದ್ದರೆ ಮಗನನ್ನು ಹೆಗಲ ಮೇಲೆ ಕೂರಿಸಿ ಕೊಂಡು ಮೆರೆಸುತ್ತಿದ್ದರು"

ಎಂದು ಉಮ್ಮಳಿಸುತ್ತಿದ್ದ ಸಂಕಟದಲ್ಲಿ ನುಡಿದರು.

## ೧೫

ಅನಂತಯ್ಯ ಸಾಕಷ್ಟು ವಿಷಯ ಸಂಗ್ರಹಮಾಡಿಕೊಂಡೇ ಸಂಜನಗೂಡಿಗೆ ಹೋದ. ಅವನು ಒಪ್ಪಿಸಿದ ವರದಿ ನೋಡಿ ಸೋಮಶೇಖರರಾಯರು ಆಶ್ಚರ್ಯಪಟ್ಟರು.

"ನೀವು ಸಿ.ಐ.ಡಿ. ಡಿಪಾರ್ಟ್‌ಮೆಂಟಿನಲ್ಲಿ (C I D. Depaitmcnt) ಇರಬೇಕಾಗಿತ್ತು ಅನಂತಯ್ಯ. ಅವಳ ಮನೆಯ ವಿಷಯ ಹೇಗ ಸಂಗ್ರಹಿಸಿದಿರಿ."

"ಚಾಮುಂಡಿ ಎಕ್ಸ್‌ಟೆನ್ಷನ್ನಿನಲ್ಲಿ ಪುಷ್ಪನ ಮನೆಯ ಹತ್ತಿರ ನಮ್ಮ ವೆಂಕಟಾಚಲನ ಚಿಲ್ಲರೆ ಅಂಗಡಿಯಿದೆ."

"ವೆಂಕಟಾಚಲ – ಯಾವ ವೆಂಕಟಾಚಲ ?'

"ನಮ್ಮೂರಿನ ವೆಂಕಟಾಚಲ. ನಾವೆಲ್ಲಾ ಅವನನ್ನು ವಾಯಿದೆ ವೆಂಕಟಾಚಲ ಎಂದು ಹಾಸ್ಯಮಾಡುತ್ತಿದ್ದೆವು. ಯಾವದಕ್ಕೂ ವಾಯಿದೆ ಹೇಳದೆ ಮಾತನಾಡುವುದಕ್ಕೇ ಅವನಿಗೆ ಬರುತ್ತಿರಲಿಲ್ಲ. ಈ ಊರು ಸೇರಿ ಅವನು ಭಾರಿಕುಳವಾಗಿದ್ದಾನೆ. ಸುತ್ತಮುತ್ತಲಿರುವ ಕೆಲವು ಮನೆಗಳ ವರ್ತನೆಮಾಡಿಕೊಂಡಿದ್ದಾನೆ. ಅವರ ಮನೆಗೆ ರೇಷನ್ ಸಾಮಾನು ಮೊದಲು

ಗೊಂಡು ಸಮಸ್ತವನ್ನೂ ಸರಬರಾಯಿ ಮಾಡುತ್ತಾನೆ. ಒಂದು ದಿನ ಆಕಸ್ಮಾತ್ತಾಗಿ ಮಾರ್ಕೆಟ್ ಬಸ್ ಸ್ಟ್ಯಾಂಡಿನಲ್ಲಿ. ಪುಷ್ಪನನ್ನು ನೋಡಿದೆ - ಅವಳನ್ನೇ ಅನುಸರಿಸಿದೆ. ಅಮ್ಮಾನರ ಸವಾರಿ ಸಂಜೀವರಾಯರ ಮನೆಗೆ ದಯಮಾಡಿಸಿತು. ಸಂಜೀವನ ಮನೆ ಸಮೀಪದ ಒಂದು ಮರ - ವೆಂಕಟಾಚಲನ ಅಂಗಡಿ ಎರಡೂ ಸನ್ನ ನಿಲ್ದಾಣಗಳು. ಅವಳೂ ಸಲೀಸಾಗಿ ಅವನ ಮನೆಗೆ ಹೋಗಿಬರುತ್ತಾಳೆ - ಅವನೂ ಅವಳ ಮನೆಗೆ ಹೋಗಿಬರು ತ್ತಾನೆ. ಇಬ್ಬರೂ ರಾಜಾರೋಷವಾಗಿ ಜತೆಯಲ್ಲಿ ಓಡಿಯಾಡುತ್ತಾರೆ ಸಂಜೀವ ಪುಷ್ಪನನ್ನು ಮದುವೆಮಾಡಿಕೊಳ್ಳುವ ವಿಷಯ ಚಾಮುಂಡಿ ಎಕ್ಸ್ಟೆನ್‌ಷನ್ನಿನಲ್ಲಿ ಮನೆ ಮಾತಾಗಿದೆ."

"ಇದು ಸ್ವಾಭಾವಿಕ. ಅವಳ ಮನೆಯ ವಿಷಯ ಏನು ಗೊತ್ತಾಯಿತು ?"

ಪುಷ್ಪನ ತಂದೆ, ತಾಯಿ, ಅಕ್ಕ, ಭಾವ ಎಲ್ಲರ ವಿಷಯವನ್ನೂ ನಿರೂಪಿಸಿ ಅನಂತಯ್ಯ,

"ಕೆ. ಜಿ. ಎಫ್‌ನಲ್ಲಿ ಒಬ್ಬ ಗಣಿ ಕಂಟ್ರಾಕ್ಟರ್ ಇದ್ದಾನಂತೆ ಸ್ವಾಮಿ. ಅವನಿಗೂ ಪುಷ್ಪನಿಗೂ ಬಹಳ ದಿವಸಗಳಿಂದಲೂ ಗಳಸ್ಯ ಕಂಠಸ್ಯ. ಯಾರಾದರೂ ಕೇಳಿದರೆ ನಮ್ಮ ಚಿಕ್ಕಪ್ಪ ಎಂದು ಹೇಳುತ್ತಾಳಂತೆ. ಈ ಊರಿಗೆ ಬಂದರೆ ಅವನು ಪುಷ್ಪನ ಮನೆಯಲ್ಲಿಯೇ ಇಳಿದುಕೊಳ್ಳುತ್ತಾನಂತೆ ಅವನ ಜತೆ ಅವಳು ಬೇಕಾದಷ್ಟು ಊರೂರು ಸುತ್ತಾಡಿದ್ದಾಳೆ."

"ಇದು ಹೇಗೆ ಪತ್ತೆಮಾಡಿದಿರಿ."

"ಮುಂಡೇಗಂಡ ವೆಂಕಟಾಚಲ, ಮಹಾವ್ಯಾಪಿ. ಅವನ ವರ್ತನೆ ಮನೆಗಳಲ್ಲಿ ಒಂದು ನರ್ಸ್ ಕನಕಮ್ಮನದು. ಆ ಕನಕಮ್ಮನಿಗೂ ಪುಷ್ಪನ ತಾಯಿಗೂ ತುಂಬ ಸ್ನೇಹ. ಪುಷ್ಪನ ಮನೆ ವಿಷಯ ಕನಕಮ್ಮನಿಗೆ ತಿಳಿಯದೆ ಇರುವುದೇ ಇಲ್ಲ. ವೆಂಕಟಾಚಲ ಅವಳಿಗೆ ಸ್ವಲ್ಪ ಸಾಲಕೊಟ್ಟಿದ್ದಾನೆ. ಪುಷ್ಪನ ಹೂರಣವೆಲ್ಲಾ ಕನಕಮ್ಮ ಹೊರಗೆ ಹಾಕಿದ್ದಾಳೆ."

"ನಮಗೆ ಅನುಕೂಲವಾಗುವ ವಿಷಯ ಯಾವದಾದರೂ ಇದೆಯೋ ?"

"ಬೇಕಾದಷ್ಟಿದೆ. ಕನಕಮ್ಮನೇ ಪುಷ್ಪನಿಗೆ ಎರಡು ಸಲ ಗರ್ಭ ಇಳಿಸಿದ್ದಾಳಂತೆ."

"ಹಾ !"

ಎಂದು ಸೋಮಶೇಖರರಾಯರು ಕುರ್ಚಿಯಿಂದ ಜಿಗಿದರು.

"ಇದು ಬಹಳ ದೊಡ್ಡ ಎವಿಡೆನ್ಸ್ (Evidence) ಅನಂತಯ್ಯ."

"ಇವರೇನು ಸಾಮಾನ್ಯರಲ್ಲ ಸ್ವಾಮಿ."

"ಈಗ ಆ ಕೆ. ಜಿ. ಎಫ್‌ನವನು - ಅವನ ಹೆಸರೇನೆಂದಿರಿ . . . ?"

"ಮುನಿಸ್ವಾಮಯ್ಯ."

"ಅವನು ಇವಳ ಕೈಬಿಡಲು ಸಿದ್ಧವಾಗಿದ್ದಾನೆಯೋ ? ಈ ವಿಷಯ ಸಂಜೀವನಿಗೆ ತಿಳಿದಂತಿಲ್ಲ."

"ಪುಷ್ಪನಿಗೂ ಸಂಜೀವನಿಗೂ ಬೇಗ ಮದುವೆ ಮಾಡಿಸಿಬಿಡಬೇಕೆಂದು ಪುಷ್ಪನ ಅಮ್ಮ ವರಾತ ಹಚ್ಚುತ್ತಿದ್ದಾಳಂತೆ - ಸಂಜೀವನೇ ಏಕೋ ಸತಾಯಿಸು ತ್ತಿದ್ದಾನಂತೆ."

"ಬೆಕ್ಕಿನ ಕೈಗೆ ಗಿಣಿ ಸಿಕ್ಕಿಕೊಂಡ ಹಾಗೆ ಆಗಿದೆಯಲ್ಲ ಅನಂತಯ್ಯ. ಇಲ್ಲಿ ನೋಡಿ - ತನ್ನ ಮದುವೆ ಖರ್ಚಿನ ಐದು ಸಾವಿರ ರೂಪಾಯಿ ಕೂಡಲೆ ಕಳಿಸುವಂತೆ ಸಂಜೀವ ಕಾಗದ ಬರೆದಿದ್ದಾನೆ."

"ನಾನು ಹೇಳಿದ್ದಕ್ಕೆ ದಾಖಲೆ ಸಿಕ್ಕಿತಲ್ಲ. ಹಣ ಕಳುಹಿಸುವುದ ಕ್ಕಾಗುವುದಿಲ್ಲ ಎಂದು ಬರೆದು ಬಿಡಿ ಸ್ವಾಮಿ."

"ಹಾಗೆ ನಾನು ಮಾಡಲು ಬರುವುದಿಲ್ಲ ಅನಂತಯ್ಯ. ಅದು ಟ್ರಸ್ಟ್ ಹಣ. ಸಂಜೀವ ನನ್ನ ಮೇಲೆ ಹೈಕೋರ್ಟಿಗೆ ಅರ್ಜಿ ಗುಜರಾಯಿಸಿದರೆ ಅವರು ಪ್ರೊಫೆಷನಲ್ ಮಿಸ್‌ಕಾಂಡಕ್ಟ್‌ಗೆ (Professional misconduct) ನನ್ನ ಮೇಲೆ ಕ್ರಮ ಜರುಗಿಸಬಹುದು."

"ಈಗೇನು ಮಾಡುತ್ತೀರಿ ಸ್ವಾಮಿ."

"ಹಣ ಕಳುಹಿಸಿ, 'ಮದುವೆಗೆ ಅವಸರಪಡಬೇಡ' ಎಂದು ಬರೆಯು ತ್ತೇನೆ."

"ಮುಂದೆ ನಾನು ಮಾಡಬೇಕಾದದ್ದೇನಿದೆ ?"

"ಬಹಳ ಇದೆ ಅನಂತಯ್ಯ ನಿಮ್ಮ ಪೈಗಸ್ತಿ ಕೆಲಸ ನೀವು ಮುಂದು ವರಿಸಿಕೊಂಡು ಬರಬೇಕು. ಈ ಹಣವಂತೂ ಹೋಗುತ್ತದೆ - ಹೋದರೆ ಪೀಡೆ ಕಳೆದುಹೋಯಿತು. ಈಗಲೂ ಹುಡುಗನನ್ನು ಕಾಪಾಡಬಹುದೆಂಬ ನಂಬಿಕೆ ನನಗಿದೆ."

"ಅದೇನು ಯಕ್ಷಿಣಿ ಮಾಡುತ್ತೀರೋ ಮಾಡಿ ಸ್ವಾಮಿ."

"ನೀವು ಬೆಂಗಳೂರಿಗೂ, ಕೆ. ಜಿ. ಎಫ್‌ಗೂ ಹೋಗಿ ಬರಬೇಕಾಗುತ್ತದೆ ಅನಂತಯ್ಯ."

"ಇಳಿದು ಮುಳುಗಿದವನಿಗೆ ಚಳಿಯೇನು ಗಾಳಿಯೇನು?"

"ರಂಗಣ್ಣನ ಹೊಸ ಹೆಂಡತಿ ನೋಡಿದಿರಾ?"

"ನೋಡಿದೆ ಸ್ವಾಮಿ."

"ಹೇಗಿದ್ದಾಳೆ."

"ಬಿಡಿ ಸ್ವಾಮಿ. ಲಕ್ಷ್ಮಿ ಹಾಗಿದ್ದ ಹೆಂಡತಿ ಹೊರಟುಹೋದಳು - ಉಪ್ಪಿನಕಾಯಿ ಆಚಾರಕ್ಕೆ ಹಳ್ಳಿಮುಕ್ಕನನ್ನು ಕಟ್ಟಿಕೊಂಡು ಬಂದಿದ್ದಾನೆ."

"ಅಣ್ಣ ತಮ್ಮ ಇಬ್ಬರೂ ಕುಂಭಲಗ್ನದವರೇ ಇರಬೇಕ್ರೀ."

"ಯಾಕೆ ಸ್ವಾಮಿ."

"ಅವರು ಮಾಡೋದು ಯಾರಿಗೂ ತಿಳಿಯುವ ಹಾಗೇ ಇಲ್ಲ."

"ಅವರಿಗೇ ತಿಳಿಯಲ್ಲ - ಬೇರೆಯರಿಗೆ ಹೇಗೆ ತಿಳಿಯಬೇಕು. ನಾನು ನಾಳೆ ಮೈಸೂರಿಗೆ ಹೊರಟುಬಿಡುತ್ತೇನೆ."

"ಹೊರಡಿಯಪ್ಪ - ಅಲ್ಲಿನ ವಿಷಯಗಳನ್ನು ನೋಡಿಕೊಳ್ಳಿ. ಬೆಂಗಳೂರು, ಕೆ. ಜಿ. ಎಫ್‌ಗೆ ಹೋಗಬೇಕಾಗಿ ಬಂದರೆ ನನಗೆ ತಿಳಿಸಿ."

"ಸಂಜೀವನಿಗೆ ನೀವು ದುಡ್ಡುಕೊಟ್ಟುಬಿಟ್ಟರೆ ನನ್ನ ಖರ್ಚಿಗೇನು ಮಾಡುತ್ತೀರಿ ಸ್ವಾಮಿ. ಕನಕಮ್ಮನ ಕೈ ಸ್ವಲ್ಪ ಬೆಚ್ಚಗೆ ಮಾಡಬೇಕೂಂತ ವೆಂಕಟಾಚಲ ಹೇಳುತ್ತಿದ್ದಾನೆ."

"ಪೂರ್ತಿ ಹಣ ನಾನು ಕಳಿಸುವುದಿಲ್ಲ ಅನಂತಯ್ಯನವರೇ. ಸದ್ಯಕ್ಕೆ ನಾಲ್ಕು ಸಾವಿರ ಕಳಿಸಿಕೊಡುತ್ತೇನೆ. ನಿಮ್ಮ ಖರ್ಚಿಗೆಷ್ಟು ಬೇಕೋ ತೆಗೆದುಕೊಳ್ಳಿ. ಹೇಗಾದರೂ ಈ ಕೆಲಸ ನೀವು ಸಾಧಿಸಲೇ ಬೇಕು."

"ನೋಡೋಣ - ದೇವರಿಚ್ಛೆ ಹೇಗಿದೆಯೋ"

ಎಂದು ಹೇಳಿ ಅನಂತಯ್ಯ ಅಂದೇ ಮೈಸೂರಿಗೆ ಹೊರಟುಬಿಟ್ಟ.

ಸೋಮಶೇಖರರಾಯರು ಕಳುಹಿಸಿದ್ದ ನಾಲ್ಕು ಸಾವಿರ ರೂಪಾಯಿಗಳ ಚೆಕ್ಕನ್ನು ತನ್ನ ಬ್ಯಾಂಕಿಗೆ ಕಟ್ಟಿ, ಸಂಜೀವ ಮನೆಗೆ ಬಂದ. ಪೂರ್ತಿ ಹಣ

ಏಕೆ ಕಳಿಸಲಿಲ್ಲ ಎನ್ನುವ ಯೋಚನೆಯ ಜತೆಗೆ ರಾಯರ ಕಾಗದದಲ್ಲಿದ್ದ ಕೆಲವು ಪಂಕ್ತಿಗಳು ಅಪ್ಪನ ಶಾಂತಿಗೆ ಭಂಗತಂದಿದ್ದವು.

"ನಾನು ಉದ್ದೇಶಪೂರ್ವಕವಾಗಿಯೇ ನಿನಗೆ ನಾಲ್ಕೇ ಸಾವಿರ ರೂಪಾಯಿಗಳನ್ನು ಕಳಿಸುತ್ತಿದ್ದೇನೆ. ಉಳಿದ ಹಣಕ್ಕೆ ನೀನು ಯೋಚನೆ ಮಾಡಬೇಕಾದದ್ದಿಲ್ಲ. ಅದನ್ನು ನಾನೇ ಕೈಯಾರೆ ಕೊಡಬೇಕೆಂದು ಉಳಿಸಿಕೊಂಡಿದ್ದೇನೆ.

ನಾಲ್ಕು ಸಾವಿರ ರೂಪಾಯಿ ಈ ಕಾಲದಲ್ಲಿ ಅಲ್ಪ ಮೊತ್ತವಲ್ಲ. ಅದನ್ನು ವಿತರಣೆಯಿಂದ ಬಳಸಿಕೊಳ್ಳಬೇಕೆಂದು ವಯಸ್ಸಿನಲ್ಲಾದರೂ ಹಿರಿಯನಾದ ನಾನು ಸೂಚಿಸಿದರೆ ತಪ್ಪು ಭಾವಿಸಲಾರೆಯೆಂದು ನಂಬಿದ್ದೇನೆ.

ನಿನ್ನ ಮದುವೆಯ ವಿಷಯ ನನಗಾಗಲಿ ನಿನಗೆ ಸಂಬಂಧಪಟ್ಟ ಇತರರಿಗಾಗಲಿ ಸ್ವಲ್ಪವೂ ಸಂತೋಷವನ್ನುಂಟುಮಾಡಿಲ್ಲವೆಂದು ತಿಳಿಸದೆ ವಿಧಿಯಿಲ್ಲ. ನಿನ್ನ ಕೈಹಿಡಿಯಲು ಕಾತುರಳಾಗಿರುವ ಮಿಸ್. ಪುಷ್ಪಾ ಸ್ವಜಾತೀಯಳಲ್ಲ ವೆನ್ನುವ ಅಭ್ಯಂತರವಿದ್ದೇ ಇದೆ. ಇಂಥ ಕ್ರಾಂತಿಕಾರಕ ಸುಧಾರಣೆಯನ್ನು ಜೀರ್ಣಿಸಿಕೊಳ್ಳಲು ನಮ್ಮ ಸಮಾಜ ಸಿದ್ಧವಾಗಿಲ್ಲವೆನ್ನುವ ಅಂಶ ನಿನಗೂ ತಿಳಿದೇ ಇದೆ.

ಈ ವಿಷಯದಲ್ಲಿ ಹಿಂದಿನ ಸಂಪ್ರದಾಯಗಳು, ಹಿಂದಿನವರ ನಡೆನುಡಿಗಳನ್ನು ನಿರ್ಲಕ್ಷಿಸುವುದು ಜಾಣತನವಲ್ಲ. ವೈವಾಹಿಕ ಸಂಬಂಧ, ಎರಡು ವ್ಯಕ್ತಿಗಳ ಪೂರ್ಣಜೀವನವನ್ನು ರೂಪಿಸುವ ವಿಷಯ. ಗಂಡು ಹೆಣ್ಣುಗಳ ಜೋಡಿ, ವಿದ್ಯೆ, ಬುದ್ಧಿ, ಸಂಸ್ಕೃತಿ, ಅಭಿರುಚಿ, ಮನೆತನಗಳು ಹೊಂದಿಕೊಂಡರೆ ಮದುವೆ ಮಧುರಫಲಗಳನ್ನೀಯುತ್ತದೆ. ಅದರಲ್ಲಿ ವ್ಯತ್ಯಾಸವಾದರೆ ಇಬ್ಬರ ಜೀವನವೂ ನಾಶವಾಗುತ್ತದೆ. ಅವರು ಲೋಕವಿರೋಧಿಗಳಾಗುವುದು ಮಾತ್ರವಲ್ಲದೆ ತಮಗೆ ತಾವೇ ಶತ್ರುಗಳಾಗುತ್ತಾರೆ. ನೀನು ಮದುವೆಯಾಗಬೇಕೆಂದಿರುವ ಹುಡುಗಿಯ ಬಗ್ಗೆ ನಾನು ಏನು ಹೇಳಲೂ ಸಿದ್ಧನಾಗಿಲ್ಲ. ಕಂಡವರ ಮನೆಯ ಹೆಣ್ಣುಮಕ್ಕಳ ಬಗ್ಗೆ ಒಂದು ಕೆಟ್ಟ ಮಾತು ಆಡುವುದು ಶುದ್ಧ ನೀಚತನ. ಆದರೆ ಈ ಹುಡುಗಿಯ ಮನೆತನ, ಬಂಧುಬಳಗದ ವಿಷಯವನ್ನೂ ನೀನು ಯೋಚನೆ ಮಾಡಬೇಕು. ಇಂದು ಯಾವದೋ ಹುಚ್ಚು ಮೋಹದಲ್ಲಿ ಆತುರಪಟ್ಟು ಮದುವೆಯಾಗಿ ನಾಳೆ ಸಾವಕಾಶವಾಗಿ ಅದಕ್ಕಾಗಿ ಪಶ್ಚಾತ್ತಾಪ ಪಡಬಾರದು.

ನನ್ನ ಹಿತೋಕ್ತಿ ಎಷ್ಟರಮಟ್ಟಿಗೆ ನಿನ್ನ ಮನಸ್ಸಿಗೆ ಹಿಡಿದು ನಿನಗೆ ಪ್ರಯೋಜನವಾಗಬಹುದೆಂಬುದರ ಬಗ್ಗೆ ನಾನು ಬಲ್ಲೆ. ಆದರೂ ಸಕಾಲದಲ್ಲಿ

ನಿನಗೊಂದು ಎಚ್ಚರಿಕೆಯ ಮಾತು ಹೇಳುವುದು ನನ್ನ ಕರ್ತವ್ಯ. ಹೇಳ ಬೇಕಾದುದನ್ನು ಹೇಳಿದ್ದೇನೆ. ಇದರ ಮೇಲೆ ನಿನಗೆ ತಿಳಿದಂತೆ - ದೇವರು ಬುದ್ಧಿ ಕೊಟ್ಟಂತೆ ಮಾಡಬಹುದು.

ಇಂತು ಆಶೀರ್ವಾದಗಳು. ಸೋಮಶೇಖರರಾಯ.”

‘ರಾಯರೇಕೆ ಹೀಗೆ ಒಂದೇ ಸಮನಾಗಿ ಮನೆತನ - ಮನೆತನ ಎಂದು ಶಂಖಬಾರಿಸುತ್ತಾರೆ. ಮನೆತನ ಕಟ್ಟಿಕೊಂಡು ನನಗೆ ಆಗಬೇಕಾದುವೇನು ನಾನು ಮದುವೆಯಾಗುತ್ತಿರುವುದು ಪುಷ್ಪನನ್ನೇ ವಿನಾ ಅವಳ ಮನೆತನವನ್ನಲ್ಲ ಅಲ್ಲ. ಅವಳ ಮನೆಯವರು ಹೋಗಿದ್ದರೆ ನನಗೇನು? ಅವಳೇ ಹೇಳಿದ್ದಾಳೆ - ತಂದೆ ಕುಡಿಯುತ್ತಾರೆ, ತಾಯಿಯ ಮೇಲೆ ಅಪಖ್ಯಾತಿಯಿದೆ - ಮದುವೆಯಾದ ಮೇಲೆ ನಾನು ಹೋಗಿ ಪುಷ್ಪನ ಮನೆಯಲ್ಲಿರಬೇಕಾಗಿಲ್ಲ ಅವಳು ಬಂದು ನನ್ನ ಮನೆಯಲ್ಲಿ ನಿಲ್ಲುವಾಗ ಅವಳ ಮನೆಯವರ ರೀತಿ ನೀತಿಯ ಬಗ್ಗೆ ನಾನೇಕೆ ವಿಚಾರ ಮಾಡಬೇಕು - ಎಲ್ಲಕ್ಕೂ ಹೆಚ್ಚಾಗಿ ಸೋಮಶೇಖರರಾಯರು ಶಿಷ್ಟಾಚಾರ ಮೀರಿ, ಈ ವಿಷಯದಲ್ಲಿ ಅನವಶ್ಯಕ ಆಸಕ್ತಿ ವಹಿಸುತ್ತಿಲ್ಲವೇ - ಇವರಲ್ಲಿ ಅವರ ಉದ್ದೇಶವೇನಿರಬಹುದು.’

ಎಂದು, ಸಂಜೀವ ಒಂದೇ ಸಮನಾಗಿ ವಿಚಾರಮಾಡಿದ. ರಾಯರ ಕಾಗದವನ್ನು ಪುಷ್ಪನ ಕೈಯಲ್ಲಿಟ್ಟು ಅವಳ ಅಭಿಪ್ರಾಯ ಕೇಳಬೇಕೆಂದೆನಿಸಿತು. ಮರುಕ್ಷಣವೇ ‘ಮೊದಲೇ ನೊಂದಜೀವ. ಬೀದಿಯವರು ಆಡಿಕೊಳ್ಳುವ ಮಾತು ಗಳನ್ನೆಲ್ಲಾ ಅವಳ ಕಿವಿಯ ಮೇಲೆ ಹಾಕಿ ಅವಳ ಮನಸ್ಸಿಗೆ ಮತ್ತಷ್ಟು ಯಾತನೆಯುಂಟುಮಾಡಲೇ ’

ಎಂದು ಆ ವಿಚಾರವನ್ನು ತನ್ನ ಮನಸ್ಸಿನಿಂದ ಕಿತ್ತೊಗೆದ.

ರಾಯರ ಕಾಗದವನ್ನು ನಿರ್ಲಕ್ಷಿಸಬೇಕೆಂದು - ಮರೆಯಬೇಕೆಂದು ಸಂಜೀವ ಪ್ರಯತ್ನಿಸಿದಷ್ಟೂ ಅದು ಎದುರಿಗೆ ಬಂದು ವಿಕಟಾಟ್ಟಹಾಸದಿಂದ ಮರೆಯುತ್ತಿತ್ತು.

ಪುಷ್ಪ ಬಂದುದನ್ನು ಕಂಡಕೂಡಲೆ ಅವನ ಮನಸ್ಸು ಅರಳಿತೆಂಬುದನ್ನು ಕಣ್ಣುಗಳು ಸೂಸಿದವು.

“ಮೋಡಗಳು ಚದುರಿದವು ಸ್ವೀಟ್” ಎಂದ.

“ಮೋಡಗಳು! ತಲೆ ಸಿಡಿದು ಹೋಗುವ ಹಾಗೆ ಬಿಸಿಲು ಸುಡುತ್ತಿದೆ.”

"ನಾನು ಹೇಳಿದ್ದು ನನ್ನ ಮನಸ್ಸಿನ ಮೋಡಗಳ ವಿಷಯ."

"ನಿಮ್ಮ ಮನಸ್ಸಿನ ಮೇಲೆ ಮೋಡಗಳೇ!"

"ಹೌದು!"

"ನನ್ನಿಂದೇನಾದರೂ ಅಪರಾಧವಾಯಿತೇ ?"

"ಇಲ್ಲ ಡಾರ್ಲಿಂಗ್ - ಅಪರಾಧಿ ನಾನು."

"ನಿಮ್ಮ ಅಪರಾಧವೇನು ಹೇಳಿ."

"ಮದುವೆ ತಡಮಾಡುತ್ತಿರುವುದು."

"ಆಗತ್ತೆ ? – ಆಗಿಯೇ ಇದೆಯಲ್ಲ."

"ಅದು ಸರಿ - ಆದರೆ ಲೋಕಾಚಾರ ಕೇಳುವ ಮದುವೆಯನ್ನೂ ಬೇಗ ಮುಗಿಸಿಬಿಡಬೇಕು."

"ಬೆಂಗಳೂರಿಗೆ ಹೋಗಿ ಬರುವ ವಿಷಯ."

"ಅದನ್ನು ತಡಮಾಡುತ್ತಿರುವವಳು ನೀನೇ"

"ಡ್ಯಾಡಿ ಊರಿಗೆ ಬಂದು ಬಿಡಲಿ ಎಂದು ಕಾದಿದ್ದೇನೆ. ತನ್ನ ಜತೆಯಲ್ಲಿಯೇ ಬರಬೇಕೆಂದು ಸುನಂದೆಯೂ ಒತ್ತಾಯಮಾಡುತ್ತಿದ್ದಾಳೆ."

"ಬೆಂಗಳೂರಿಗೆ ಹೋದಾಗ ಅವರ ಮನೆಯಲ್ಲಿರಬೇಕೆಂದು ಯೋಚನೆ ಮಾಡುತ್ತಿರುವೆಯೇನು ?"

"ಯಾಕಾಗಬಾರದು. ಸುನಂದಾ ನನ್ನ ಹಳೆಯ ಸ್ನೇಹಿತಳು. ಇನ್ನು ಮೇಲೆ ಬಂಧುವಾಗತಕ್ಕವಳು.

"ಅವರ ಯಜಮಾನರಿಗೂ ನನಗೂ ಬಳಕೆಯಿಲ್ಲ. ನಾವು ಯಾವ ದಾದರೂ ಹೊಟೇಲಿನಲ್ಲಿ ಇಳಿದುಕೊಂಡು ಅವರ ಮನೆಗೆ ಹೋಗಿಬರೋಣ."

"ನೀವು ಹೇಳಿದಂತೆಯೇ ಆಗಲಿ."

ಅವರು ಮಾತನಾಡುತ್ತ ಕುಳಿತಿರುವಂತೆ ಜಗದೀಶ ಬಂದು 'ಚಿಕ್ಕಪ್ಪ ಎಂದು ಕೂಗಿದ-

"ಏನು ಜಗದೀಶ್."

"ನೋಡು ಬಾ - ಯಾರು ಬಂದಿದ್ದಾರೆ ?"

"ಯಾರು ಯಾರು ಬಂದಿದ್ದಾರೆ."

"ಸುನಂದಾ, ಮಾವ, ವಿಮ್ಮಿ, ಅಮ್ಮ ಎಲ್ಲರೂ ಬಂದಿದ್ದಾರೆ."

"ಅಮ್ಮ ಬಂದಿದ್ದಾರೆಯೇ ?"

ಎಂದು ಒಂದು ಪಟಟು ತಗುಲಿಸಿಕೊಂಡು, ಅವರೆಲ್ಲರನ್ನೂ ಮರ್ಯಾದೆಯಿಂದ ಒಳಕ್ಕೆ ಬರಮಾಡಿಕೊಂಡ

ಚಂದ್ರಶೇಖರನಿಗೆ ಸಂಜೀವ, ಪುಷ್ಪ ಇಬ್ಬರ ಪರಿಚಯವನ್ನೂ ಸುನಂದಾ ಮಾಡಿಕೊಟ್ಟಳು ಸಂಜೀವನ ಅಸಂವಕ್ಕಂತೂ ಮೇರೆಯೇ ಇರಲಿಲ್ಲ.

"ಇವತ್ತು ಸುದಿನ. ನೀವೆಲ್ಲರೂ ಬಂದುದರಿಂದ ನನಗಾಗಿರುವ ಸಂತೋಷ ವರ್ಣಿಸಲಾರೆ. ಅದರಲ್ಲಿಯೂ ಅಮ್ಮ ಬಂದಿರುವುದು."

"ಇವರೆಲ್ಲಾ ನನ್ನ ಬಿಟ್ಟೇ ಬರುತ್ತಿದ್ದರು ಸಂಜೀವ - ನಾನೇ ಗಂಟು ಬಿದ್ದೆ" ಎಂದು ಇಂದಿರಮ್ಮನವರು ಹೇಳಿದರು.

"ಅತ್ತಿಗೆಮ್ಮ ಬರಲಿಲ್ಲವೇ ?"

"ಮನೆಬಿಟ್ಟು ಬರಬೇಕೆಂದರೆ ಅಕ್ಕನಿಗೆ ಪ್ರಾಣಸಂಕಟ"

ಎಂದು ಸುನಂದಾ ಹೇಳಿದಳು. ಸಂಜೀವ, ಪುಷ್ಪ ಇಬ್ಬರನ್ನೂ ಉದ್ದೇಶಿಸಿ ಚಂದ್ರಶೇಖರ

"ಕನ್‌ಗ್ರಾಜುಲೇಷನ್ಸ್ (Congratulations) - ಮರೆಯದೆ ನನಗೆ ಇನ್‌ವಿಟೇಷನ್ (Invitation) ಕಳುಹಿಸಿ"

"ಥ್ಯಾಂಕ್ ಯು ಸರ್ (Thank you, Sir) - ಅವಶ್ಯಕವಾಗಿ ಇನ್‌ವಿಟೇಷನ್ ಕಳಿಸಿಕೊಡುತ್ತೇನೆ."

ಎಂದು ಪುಷ್ಪನ ಕಡೆ ತಿರುಗಿ

"ಎಲ್ಲರಿಗೂ ಸ್ವಲ್ಪ ಕಾಫಿಕೊಡುವಿರಾ" ಎಂದು ಕೇಳಿದ.

ಸುನಂದಾ ಪುಷ್ಪನ ಹೆಗಲ ಮೇಲೆ ಕೈಹಾಕಿ

"ನಡೆಯಿರಿ. ನಾವಿಬ್ಬರೂ ಕಾಫಿ ಮಾಡಿ ತರೋಣ. ಮೊದಲು ನಿಮ್ಮ ಮನೆ ತೋರಿಸಿ"

ಎಂದು ಹೇಳಿ ಪುಷ್ಪನೊಂದಿಗೆ ಹೋದಳು.

ಸಂಜೀವ ಒಳಗೆ ಹೋಗಿ ದುಡ್ಡು ತಂದು, ಜಗದೀಶನನ್ನು ಕರೆದು ಅವನ ಕೈಯಲ್ಲಿ ಹಣಕೊಟ್ಟು ತಿಂಡಿ, ಹಣ್ಣು, ಹೂವು, ಎಲೆ ಅಡಿಕೆ ತೆಗೆದುಕೊಂಡು ಬಾರೆಂದು ಹೇಳಿದ. ಜಗದೀಶ ಚಂದ್ರಶೇಖರನ ಅಪ್ಪಣೆ ಪಡೆದು ಕಾರಿನಲ್ಲಿಯೇ ಪೇಟೆಯ ಕಡೆ ಹೋದ.

ಸಂಜೀವ ಬಂದು ಅತಿಥಿಗಳ ಜತೆ ಕುಳಿತು ಚಂದ್ರಶೇಖರನಿಗೆ

"ಇಂಡಿಯಾ ಟೂರ್ (India Tour) ಮಾಡುತ್ತಿದ್ದೀರಾ ?"

"ಹೌದು."

"ಇವತ್ತು ಕಾಲೇಜ್ ಯೂನಿಯನ್ನಿನಲ್ಲಿ ನೀವು, ನಿಮ್ಮ ಜತೆ ಬಂದಿರುವವರದು ಭಾಷಣವಿತ್ತು ಎಂದು ಕಾಣುತ್ತದೆ."

"ಹೌದು. ಅದು ಮುಗಿಸಿಕೊಂಡೇ ಇತ್ತ ಬಂದೆ."

"ನಿಮ್ಮ ಟೂರಿನ ವಿಷಯ ಕೆಲವು ಲೇಖನಗಳನ್ನು ಬರೆಯಬೇಕು ಸಾರ್"

"ದೊಡ್ಡ ಪುಸ್ತಕ ಬರೆಯುತ್ತಾನಪ್ಪಾ"

ಎಂದು ಹೆಮ್ಮೆಯಿಂದ ಇಂದಿರಮ್ಮನವರು ಹೇಳಿದರು.

"ಹಾಗೇನು - ತುಂಬ ಸಂತೋಷ."

"ನೀವೂ ಒಮ್ಮೆ ಯೂರೋಪ್, ಅಮೇರಿಕಾ ಟೂರ್ ಮಾಡಬೇಕು ಮಿ ಸಂಜೀವ ಪ್ರವಾಸಮಾಡದಿದ್ದರೆ ನಮ್ಮ ದೃಷ್ಟಿ ವಿಶಾಲವಾಗುವುದಿಲ್ಲ. ಹೊರಗಿನವರಿಂದ ಕಲಿಯಬೇಕಾದುದು ಏನೂ ಇಲ್ಲ ಎನ್ನುವ ಅಭಿಪ್ರಾಯ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಜನಗಳಿಗೆ ಬಂದುಬಿಟ್ಟಿದೆ"

"ಅದು ತಪ್ಪು ಅಭಿಪ್ರಾಯ. ಜಗತ್ತಿನ ಇತರ ರಾಷ್ಟ್ರಗಳೊಂದಿಗೆ ಸರಿಜೋಡಿಯಾಗಿ ಭಾರತ ನಿಲ್ಲಬೇಕಾದರೆ ಅವರ ವೈಜ್ಞಾನಿಕ ಪ್ರಗತಿಯನ್ನು ಗಮನಿಸಬೇಕು ಕಲಿಯಬೇಕಾದುದನ್ನು ಕಲಿಯಬೇಕು. ಭಾರತದ ಬಗ್ಗೆ ಅಮೇರಿಕಾದಲ್ಲಿ ಏನು ಅಭಿಪ್ರಾಯವಿದೆ ಸಾರ್."

"ಅಲ್ಲಿನ ಜನಗಳಿಗೆ ಭಾರತದ ವಿಷಯ ಹೆಚ್ಚು ಗೊತ್ತಿಲ್ಲ ವೃತ್ತಪತ್ರಿಕೆಗಳಲ್ಲಿ ಬರುವ ಅಭಿಪ್ರಾಯಗಳನ್ನೇ ಜನ ನಂಬುತ್ತಾರೆ. ಅವರಿಗೆ ಸರಿಯಾದ ತಿಳುವಳಿಕೆ ಕೊಡುವವರೇ ಇಲ್ಲ."

"ನಮ್ಮ ಎಂಬಾಸಿ (Embassy) ಏನು ಮಾಡುತ್ತಿದೆ ?"

"ನಮ್ಮ ದೇಶದ ಗೌರವ ನಮ್ಮ ಎಂಬಾಸಿ ಹಾಳುಮಾಡಿರುವಷ್ಟು ಯಾರೂ ಮಾಡಿಲ್ಲ ಮಿ. ಸಂಜೀವ ಎಂಬಾಸಿಯವರಿಗೆ ಸಿಲೂನ್ ಸ್ಟ್ರೀಮ್ ಲೈನ್ ಕಾರುಗಳು, ಪಾರ್ಟಿಗಳು ಇದ್ದರಾಯಿತು ಸರಿಯಾದ ಪ್ರಚಾರ

ಕಾರ್ಯ ಕೈಗೊಳ್ಳಬೇಕೆಂದು ನಾನೇ ಎಂಬಾಸಿಗೆ ಹಲವು ಸಲ ಹೇಳಿವೆ. ಆದರೆ ನಮ್ಮ ಅಭಿಪ್ರಾಯಗಳು ಅವರಿಗೆ ಪಥ್ಯವಾಗಬೇಕಲ್ಲ!''

''ಜವಹರಲಾಲ್‌ಜೀ ಬಗ್ಗೆ ಅಮೆರಿಕನ್ನರು ಏನು ಹೇಳುತ್ತಾರೆ ಸರ್."

''ಅವರ ವ್ಯಕ್ತಿತ್ವಕ್ಕೆ ತುಂಬ ಗೌರವಕೊಡುತ್ತಾರೆ. ಆದರೆ ಅವರ ರಾಜಕಾರಣದ ಬಗ್ಗೆ ಅಮೇರಿಕನ್ನರು ಅಸಂತುಷ್ಟರಾಗಿದ್ದಾರೆ."

''ಅವರ ರಾಜಕಾರಣದ ಬಗ್ಗೆ ಅಮೇರಿಕಾದವರ ಆಕ್ಷೇಪಣೆಯೇನು ?''

''ಕೆಂಪು ಚೀಣಕ್ಕೆ ಅವರು ಕೊಟ್ಟಿರುವ ಮನ್ನಣೆ, ಕೊರಿಯಾ ಯುದ್ಧದ ಬಗ್ಗೆ ಅವರ ಧೋರಣೆ, ರಷ್ಯಾದ ಕಮ್ಯುನಿಸಂ ಬಗ್ಗೆ ಅವರು ತೋರು ತ್ತಿರುವ ಸೌಹಾರ್ದ.''

''ಇದು ಬಹಳ ವಿಚಿತ್ರವಾಗಿದೆ. ಇಲ್ಲಿನ ಕಮ್ಯುನಿಸ್ಟರು ನೆಹ್ರೂ ಅವರು ರಷ್ಯಾ ವಿರೋಧಿಗಳೆಂದು, ಅಮೇರಿಕಾದ ದತ್ತುಪುತ್ರರೆಂದೂ ಟೀಕ ಮಾಡುತ್ತಿದ್ದಾರೆ.''

''ನೆಹ್ರೂ ಅವರು ಇನ್ನೂ ಸ್ಪಷ್ಟವಾದ ರಾಜಕೀಯ ಧೋರಣೆ ತಳೆಯ ಬೇಕೆಂದು ಭಾರತದ ಹೊರಗಿರುವ ಭಾರತೀಯರ ಅಭಿಪ್ರಾಯ. ಒಮ್ಮೆ ಯುನೈಟೆಡ್ ನೇಷನ್ಸ್ (United Nations) ಬೆನ್ನುತಟ್ಟುವುದು, ಒಮ್ಮೆ ಪೀಪಲ್ಸ್ ಡೆಮಾಕ್ರಸೀಸ್ (People's Democracies) ಬೆನ್ನುತಟ್ಟುವುದು ಸರಿಯಲ್ಲ."

''ನನಗೆ ಹಾಗೆ ತೋರುವುದಿಲ್ಲ ಸರ್. ಇಂದು ಯುನೈಟೆಡ್ ನೇಷನ್ಸಿಗೂ, ಪೀಪಲ್ಸ್ ಡೆಮಾಕ್ರಸೀಸ್‌ಗೂ ವೈಮನಸ್ಯ ಮಸೆಯುತ್ತಿದೆ. ಕೊರಿಯಾ ಯುದ್ಧ, ಪರ್ಶಿಯಾದ ಎಣ್ಣೆ ಪ್ರಕರಣ, ಚಾಂಗ್ ಕೈ ಷೇಕರ ರಾಷ್ಟ್ರೀಯ ಚೀಣಾ ಸಮಸ್ಯೆ, ಜರ್ಮನಿಯ ಪುನರ್ - ಶಸ್ತ್ರೀಕರಣ ಮೂರನೆಯ ಮಹಾಯುದ್ಧಕ್ಕೆ ಅಸ್ತಿಭಾರ ಹಾಕುತ್ತಿದೆ. ಈ ಸಂದರ್ಭದಲ್ಲಿ ಭಾರತ ಏಕೆ ಒಂದು ಪಕ್ಷ ಸೇರಬೇಕು ? ನಮಗೆ ಅಮೇರಿಕಾ, ಇಂಗ್ಲೆಂಡ್, ಫ್ರಾನ್ಸ್‌ಗಳ ಸ್ನೇಹ, ಸೌಹಾರ್ದ, ಸಹಾಯ ಬೇಕು - ಹಾಗೇ ರಷ್ಯಾ, ಚೀನಾಗಳ ವಿಶ್ವಾಸವೂ ಬೇಕು. ರಷ್ಯಾ, ಚೀಣ ನಮ್ಮ ಬಗ್ಗೆ ಮೊದಲಿನಿಂದಲೂ ಸ್ನೇಹ ಬೀರಿಸುತ್ತಿವೆ. ನಿಷ್ಕಾರಣವಾಗಿ ನಾವು ಅವರನ್ನೇಕೆ ಶತ್ರುಗಳನ್ನಾಗಿ ಮಾಡಿಕೊಳ್ಳಬೇಕು."

"ಅಪ್ತಗೋಡೆಯ ಮೇಲೆ ದೀಪವಿಡುವ ನ್ಯಾಯ ರಾಜಕಾರಣದಲ್ಲಿ ನಡೆಯುವುದಿಲ್ಲ ಮಿ. ಸಂಜೀವ. ಇಂದಲ್ಲ ನಾಳೆ ಭಾರತ ಯಾವದಾದರೂ ಒಂದು ಪಕ್ಷ ಸೇರಲೇಬೇಕು.''

''ಯಾವ ಪಕ್ಷ ಸೇರುವುದು ಒಳ್ಳೆಯದೆಂದು ನಿಮ್ಮ ಅಭಿಪ್ರಾಯ.''

''ಯುನೈಟೆಡ್ ನೇಷನ್ಸ್ ಪಕ್ಷ ರಷ್ಯಾದವರಿಗೂ ನಮಗೂ ಕೂಡುವುದು ಸಾಧ್ಯವೇ ಇಲ್ಲ ಜಗತ್ತಿನ ಮೇಲೆ ತಮ್ಮ ಸ್ವಾಮ್ಯ ಸ್ಥಾಪಿಸಬೇಕೆಂದೇ ಅವರ ಉದ್ದೇಶ. ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವವರು ಯಾರೂ ರಷ್ಯಾದ ಧೋರಣೆ ಗೌರವಿಸಲು ಸಾಧ್ಯವಿಲ್ಲ.''

''ಜಗತ್ತಿನ ಮೇಲ ಸ್ವಾಮ್ಯ ಸ್ಥಾಪಿಸಬೇಕೆಂದು ಪ್ರಯತ್ನಿಸುತ್ತಿರುವವರು ಅಮೇರಿಕನ್ನರೇ ವಿನಾ ರಷ್ಯಾದವರಲ್ಲ ಎಂದು ನನ್ನ ಭಾವನೆ. ಪರ್ಶಿಯಾ, ಈಜಿಪ್ಟ್, ಕೊರಿಯಾ, ಪಾಕಿಸ್ತಾನಗಳಲ್ಲಿ ಅಮೇರಿಕನ್ನರ ಚಲನವಲನ ನೋಡಿದರೆ ಈ ವಿಷಯ ಸ್ಪಷ್ಟವಾಗುತ್ತದೆ. ಇಂಗ್ಲೆಂಡಿನಲ್ಲಿಯೇ ಈ ಮಾತನ್ನು ಬೆವಾನರೂ ಅವರ ಪಕ್ಷದವರೂ ಹೇಳುತ್ತಿಲ್ಲವೇ ? ಅಮೇರಿಕನ್ನರ ಅತ್ಯಾಚಾರ ಗಳನ್ನು ಖಂಡಿಸುತ್ತಿರುವ ಕ್ಯಾಂಟರ್‌ಬರಿ ಡೀನರು, ಡಾ. ಜೂಲಿಯಟ್ ಕ್ಯೂರಿ ರಷ್ಯಾದೇಶೀಯರಲ್ಲವಲ್ಲ.''

''ಅವರೆಲ್ಲ ರಷ್ಯಾದ ಏಜಂಟರು ''

''ಅಮೇರಿಕಾದ ರಾಕ್ಷಸೀಮಹತ್ವಾಕಾಂಕ್ಷೆಯನ್ನು ಖಂಡಿಸುವವರೆಲ್ಲರೂ ರಷ್ಯಾದ ಏಜಂಟರೇನು ?''

''ನೀವೇಕೆ ರಷ್ಯಾದ ಪಕ್ಷ ಹಿಡಿದು ಇಷ್ಟು ವಾದಮಾಡುವಿರಿ ?''

''ವಿನಾಕಾರಣ ಅವರನ್ನು ನಾವೇಕೆ ಆಕ್ಷೇಪಿಸಬೇಕು.''

''ಭಾರತದಲ್ಲಿಯೇ ರಷ್ಯಾ ಮಾಡುತ್ತಿರುವ ಹಾವಳಿ ಬಲ್ಲಿರಾ ?''

''ಇಲ್ಲಿನ ಕಮ್ಯುನಿಸ್ಟರ ವಿಷಯ ತಾನೇ !''

''ಹೌದು.''

''ಹೊಸದಾಗಿ ಮತಾಂತರ ಹೊಂದಿದವನಿಗೆ ಭಕ್ತಿ ಬಹಳವಂತೆ. ಇಲ್ಲಿನ ಮುಸಲ್ಮಾನರು ಪಾಕಿಸ್ತಾನಕ್ಕೆ ಬೇಡವಾಗಿದ್ದರೂ, ಇವರು ಪಾಕಿಸ್ತಾನವೇ ತಮ್ಮ ಮೆಕ್ಕಾ ಎಂದು ಭಾವಿಸುತ್ತಿಲ್ಲವೇ ಹಾಗೇ ನಮ್ಮ ಕಮ್ಯುನಿಸ್ಟರು ಕೂಡ."

"ಪರಿಸ್ಥಿತಿ ನೀವು ತಿಳಿದುಕೊಂಡಿರುವಷ್ಟು ಸುಲಭವಾಗಿಲ್ಲ ಮಿ. ಸಂಜೀವ."

ಎಂದು ಚಂದ್ರಶೇಖರ ಜಿಗುಪ್ಸೆಯಿಂದ ಹೇಳಿದ. ಅತಿಥಿಯನ್ನು ಹೆಚ್ಚು ಕೆಣಕುವುದು ನ್ಯಾಯವಲ್ಲವೆಂದು ಸಂಜೀವನಿಗೆ ತೋರಿತು.

ಜಗದೀಶ ತಂದುಕೊಟ್ಟ ತಿಂಡಿ, ಹಣ್ಣುಗಳನ್ನು ಪುಷ್ಪ, ಸುನಂದಾ ತಟ್ಟೆಗಳಲ್ಲಿ ಅಣಿಮಾಡುತ್ತಿದ್ದರು. ಸಂಜೀವ ಎದ್ದು ಹೋಗಿ ಅವರಿಗೆ ನೆರವಾಗಿ ಉಪಾಹಾರ ತಂದಿತ್ತ.

ಎಲ್ಲರೂ ಉಪಾಹಾರ ಸ್ವೀಕರಿಸಿದರು. ಇಂದಿರಮ್ಮನವರು ಮಾತ್ರ ಒಂದು ಕಿತ್ತಲೆಹಣ್ಣು ತೆಗೆದುಕೊಂಡರು.

ಸುನಂದಾ ಮತ್ತೊಮ್ಮೆ ಸಂಜೀವನನ್ನೂ ಪುಷ್ಪನನ್ನೂ ಬೆಂಗಳೂರಿಗೆ ಆಹ್ವಾನಿಸಿದಳು.

ಚಂದ್ರಶೇಖರ ನಿರೀಕ್ಷಿಸಿಕೊಂಡಿದ್ದಷ್ಟು ಸಂತೋಷ ಈ ಭೆಟ್ಟಿಯಿಂದ ಅವನಿಗೆ ಲಭಿಸಿರಲಿಲ್ಲ. ಕಾರು ಹೊರಟಮೇಲೆ ಸುನಂದಾ ಅಣ್ಣನನ್ನು ಕೇಳಿದಳು

"ಪುಷ್ಪ, ಸಂಜೀವ ಇವರನ್ನು ನೋಡಿ ಏನನ್ನಿಸಿತು ಅಣ್ಣಾ."

"ನೈಸ್ ಪೀಪಲ್ (Nice People) - ಸಂಜೀವ ಕಮ್ಯುನಿಸ್ಟೋ ?"

"ಇರಲಾರನು. ಏಕೆ ಹಾಗೆ ಕೇಳುವೆ."

"ರಷ್ಯಾಪರ ಬಹಳ ವಾದ ಮಾಡಿದರು"

"ಕೆಲವರಿಗೆ ರಷ್ಯಾ ಭೂಲೋಕ ಸ್ವರ್ಗವಾಗಿದೆ"

ಎಂದು ಹೇಳಿ 'ಅವರ ಪರಿಚಯವಾದ ಮೇಲೆ ಏನಾಗುತ್ತದೋ' ಎಂದು ಸಂಶಯು ತಳೆದಳು.

ಪುಷ್ಪನ ಮನಸ್ಸಿನ ಮೇಲೆ ಚಂದ್ರಶೇಖರನ ಸೌಜನ್ಯ ವಿಶೇಷ ಪರಿಣಾಮುವನ್ನುಂಟುಮಾಡಿತು. ತನ್ನ ಮದುವೆಯ ವಿಷಯದಲ್ಲಿ ಅವನು ವ್ಯಕ್ತಪಡಿಸಿದ ಉದಾರಭಾವನೆ ಅವಳ ಹೃದಯುವನ್ನು ಗೆದ್ದಿತ್ತು.

"ಸುನಂದನ ಅಣ್ಣಾ ತುಂಬ ದೊಡ್ಡ ಮನುಷ್ಯನು ಕಣ್ರೀ" ಎಂದಳು.

ಸಂಜೀವ ಅನುಮಾನಿಸುತ್ತ

"ಇರಬಹುದು" ಎಂದ.

"ನಿಮಗೂ ಹಾಗೆ ತೋರಲಿಲ್ಲವೇ ?"

"ತೋರುವುದಕ್ಕೆ ಕಾರಣ ಬೇಕಲ್ಲ."

"ನಮ್ಮ ಮದುವೆ ವಿಷಯ ಕೇಳಿ ಎಷ್ಟು ಸಂತೋಷಪಟ್ಟರು ನೋಡಿ. ಇಲ್ಲಿಗೆ ಬಂದು ನಮ್ಮಿಬ್ಬರ ಪರಿಚಯಮಾಡಿಕೊಳ್ಳಬೇಕೆಂದು ಅವರೇ ಬಯಸಿದರಂತೆ."

"ಅದು ಒಪ್ಪಿಕೊಂಡೆ ಆದರೆ ಅವರು ಅಮೇರಿಕಾ ಟಾಮ್ ಟಾಮ್ ಮಾಡುವುದು ಮಾತ್ರ ನನಗೆ ಸೇರಲಿಲ್ಲ."

"ಅದೇನೋ ರಾಜಕಾರಣವಾಯಿತು. ನಾವೇಕೆ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಕು."

"ಸ್ವತಂತ್ರಭಾರತದಲ್ಲಿ ನಂದಕುಮಾರ, ಮೀರ್ ಜಾಫರ್, ಮೀರ್ ಸಾದಕ್ ಕೆಲಸ ಮಾಡುವವರು ನಮ್ಮವರೇ ಎಂದರೆ ಎಷ್ಟು ನಾಚಿಕೆಗೇಡು ವಿಚಾರಮಾಡು."

"ರಷ್ಯಾದ ಬಗ್ಗೆ ನಿಮಗೆ ತುಂಬಾ ವಿಶ್ವಾಸವಿರುವ ಹಾಗೆ ಅಮೇರಿಕಾದ ಬಗ್ಗೆ ಅವರಿಗಿರಬಹುದು."

"ನನಗಿರುವ ತುಂಬು ವಿಶ್ವಾಸ ನನ್ನ ದೇಶದ ಮೇಲೆ ಪುಷ್ಪ. ಭಾರತವನ್ನು ಕೀಳುಮಾಡಿ ರಷ್ಯಾ, ಅಮೇರಿಕಾ ಮೆರೆಸುವವರನ್ನು ನಾನು ಗೌರವಿಸಲಾರೆ."

ಎಂದು ಹೇಳಿದ. ಅವನೊಂದಿಗೆ ವಾದ ಮುಂದುವರಿಸಲು ಪುಷ್ಪ ಇಚ್ಛೆಪಡಲಿಲ್ಲ.

## ೧೬

'ಯುಗವಾಣಿ' ಜನ್ಮತಾಳಿದ್ದು ನಾಲ್ವರು ಗೆಳೆಯರ ಕನಸಿನಲ್ಲಿ ಫಲವಾಗಿ. ವಿಶ್ವೇಶ್ವರಯ್ಯ ಕಾಲೇಜ್ ಮುಗಿಸಿ ಬಂದ ಕೂಡಲೆ ಪತ್ರಿಕಾ ವೃತ್ತಿಯನ್ನು ಕೈಗೊಳ್ಳುವುದೆಂದು ನಿಶ್ಚಯಿಸಿದ್ದ. ಇಂಗ್ಲಿಷ್, ಕನ್ನಡ ಎರಡು ಭಾಷೆಗಳಲ್ಲಿಯೂ ಲೇಖನಗಳನ್ನು ಬರೆದು ಅವನು ಸ್ವಲ್ಪ ಕೀರ್ತಿಯನ್ನೂ ಗಳಿಸಿಕೊಂಡಿದ್ದ. ಯಾವದಾದರೊಂದು ಕನ್ನಡ ಪತ್ರಿಕೆಯ ಕಛೇರಿಯಲ್ಲಿ ತನಗೆ ಉದ್ಯೋಗ ದೊರೆಯಬಹುದೆಂದು ಅವನು ಧೈರ್ಯದಿಂದಿದ್ದ.

ಲೇಖನಗಳ ಕಟ್ಟು ಹಿಡಿದು ಪತ್ರಿಕೆಗಳ ಕಛೇರಿಗಳಿಗೆ ಅವನು ಹೋದಾಗ ಅವನಿಗೆ ನಿಜಸ್ಥಿತಿಯ ಅರಿವಾಯಿತು. ಜನಪ್ರಿಯವಾಗಿದ್ದ ಉತ್ತಮವರ್ಗದ ಒಂದು ಪತ್ರಿಕೆಯ ಸಂಪಾದಕರು ಅವನನ್ನು ವಿಶ್ವಾಸದಿಂದ ಬರಮಾಡಿ ಕೊಂಡು, ಕಾಫಿ ತರಿಸಿಕೊಟ್ಟು 'ನಿಮ್ಮಂಥವರು ಪತ್ರಿಕೋದ್ಯಮ ಕೈಗೊಳ್ಳು ವುದು ಈ ವೃತ್ತಿಗೇ ಗೌರವ ವಿಶ್ವೇಶ್ವರಯ್ಯನವರೇ. ನಮ್ಮ ಕಛೇರಿಗೆ ನಿಮ್ಮನ್ನು ತೆಗೆದುಕೊಳ್ಳಬೇಕೆಂದು ತುಂಬ ಆಸೆಯಿದೆ. ಆದರೆ ಪರಿಸ್ಥಿತಿ ಚೆನ್ನಾಗಿಲ್ಲ. ಸಂಪಾದಕವರ್ಗವನ್ನು ನಾವೇ ಮೊಟಕು (Retrench) ಮಾಡುತ್ತಿದ್ದೇವೆ. ಮುಂದೆ ನೋಡೋಣ - ನಮ್ಮ ಪರಿಸ್ಥಿತಿ ಸುಧಾರಿಸಿದರೆ ಖಂಡಿತವಾಗಿ ನಿಮ್ಮನ್ನು ಬರಮಾಡಿಕೊಳ್ಳುತ್ತೇವೆ' ಎಂದು ಹೇಳಿದರು. ಆ ಸಂಪಾದಕರ ಕಛೇರಿಯಲ್ಲಿ ಕೆಲಸವೂ ಇತ್ತು, ಪರಿಸ್ಥಿತಿಯೂ ಚೆನ್ನಾಗಿತ್ತು, ಸಂಪಾದಕ ವರ್ಗವನ್ನು ಮೊಟಕೂ ಮಾಡುತ್ತಿರಲಿಲ್ಲ - ಆದರೆ ವಿಶ್ವೇಶ್ವರಯ್ಯನ ಸ್ವತಂತ್ರ ವೃತ್ತಿಗೆ ಸಂಪಾದಕರು ಅಂಜಿದ್ದರು. ಸರ್ಕಾರದ ಬಾಲಬಡಿಯುತ್ತಿದ್ದ ಇನ್ನೊಂದು ಪತ್ರಿಕೆಯ ಸಂಪಾದಕರು ವಿಶ್ವೇಶ್ವರಯ್ಯನನ್ನು ಒಂದು ಗಂಟೆ ಕಛೇರಿಯಲ್ಲಿ ಕಾಯಿಸಿ 'ನಮ್ಮಲ್ಲಿ ಕೆಲಸ ಖಾಲಿಯಿಲ್ಲ' ಎಂದು ಕಟುವಾಗಿ ಹೇಳಿ ಕಳಿಸಿದರು. ದೊಡ್ಡ ದೊಡ್ಡ ಆದರ್ಶಗಳನ್ನು ಬೋಧಿಸುತ್ತಿದ್ದ ಇನ್ನೊಂದು ಪತ್ರಿಕೆಯ ಸಂಪಾದಕರು 'ನೋಡಿ ವಿಶ್ವೇಶ್ವರಯ್ಯನವರೇ - ನಮ್ಮಲ್ಲಿ ಕೆಲಸ ಮಾಡುತ್ತಿರುವವರೆಲ್ಲಾ ಒಂದು ಮಹೋನ್ನತ ಆದರ್ಶದಿಂದ ಪ್ರೇರಿತರಾದರು. ಇಲ್ಲಿಯ ನೌಕರಿಯನ್ನು ಅವರು ಸಂಪಾದನೆಯ ಮಾರ್ಗ ವೆಂದು ಭಾವಿಸುತ್ತಿಲ್ಲ. ನಾನೂ, ನೌಕರರೂ ನಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ಈ ಸಂಸ್ಥೆಯನ್ನು ಕಟ್ಟುತ್ತಿದ್ದೇವೆ. ನೀವೂ ನಮ್ಮ ಜತೆಗೆ ಬರುವು ದಾದರೆ ತುಂಬ ಸಂತೋಷ' ಎಂದರು. 'ನಾನು ಬರುವುದಕ್ಕೆ ಸಿದ್ಧವಾಗಿ ದ್ದೇನೆ ಸರ್. ನನ್ನ ಊಟ, ತಿಂಡಿ, ರೂಮ್ ಬಾಡಿಗೆಗಾಗುವಷ್ಟಾದರೂ ನೀವು ಕೊಡದಿದ್ದರೆ ನಾನು ಪೂರೈಸುವುದು ಹೇಗೆ?' ಅದಕ್ಕೆ ಸಂಪಾದಕರ ಉತ್ತರ ಸಿದ್ಧವಾಗಿಯೇ ಇತ್ತು. 'ನಮ್ಮಲ್ಲಿ ಎಲ್ಲರೂ ಏನು ಮಾಡುತ್ತಾ ರೇಂದ್ರೆ, ತಮಗೆ ಪುರಸತ್ತು ಸಿಕ್ಕಿದಾಗ ಜಾಹಿರಾತುಗಳನ್ನು ತರುತ್ತಾರೆ. ಅದರಲ್ಲಿ ಬರುವ ಆದಾಯದ ಒಂದು ಭಾಗವನ್ನು ಅವರ ಕಮಿಷನ್ ಆಗಿ ಕೊಡುತ್ತೇವೆ. ನೀವೂ ಹಾಗೆ ಮಾಡಬಹುದು.' ನಾನು ಲೇಖಕನೇ

ವಿನಾ ಕ್ಯಾನ್‌ವಾಸರ್ ಅಲ್ಲ ಸಾರ್. ಜಾಹಿರಾತು ತರುವ ಕಲೆಯ ಪರಿಚಯ ನನಗಿಲ್ಲ. ಸಂಪಾದಕರು ಅವನ ನಿರುತ್ಸಾಹ ಕಂಡು ನಸುನಗುತ್ತಾ 'ಅದೇನು ದೊಡ್ಡ ವಿಷಯವಲ್ಲಾಂದ್ರೆ. ನಮ್ಮ ಉಪಸಂಪಾದಕರು ಯಾರಾದರೂ ತಿಳಿಸಿ ಕೊಡುತ್ತಾರೆ' ಎಂದರು. ಅವರಿಗೆ ಕೈಮುಗಿದು ಹೊರಬಂದ ವಿಶ್ವೇಶ್ವರಯ್ಯ ಮತ್ತೆ ಕೆಲಸ ಹುಡುಕುವ ಪ್ರಯತ್ನ ಮಾಡಲಿಲ್ಲ.

ವಿಶ್ವೇಶ್ವರಯ್ಯ, ಅವನ ಸ್ನೇಹಿತರು ಪ್ರತಿನಿತ್ಯ ರೇವಣ್ಣನ 'ಚಂದ್ರಕಲಾ ಪ್ರಿಂಟಿಂಗ್ ಪ್ರೆಸ್'ನಲ್ಲಿ ಸೇರುವುದು ವಾಡಿಕೆಯಾಗಿತ್ತು. ವಿಶ್ವೇಶ್ವರಯ್ಯನ ಅನುಭವ ಕೇಳಿ ಬೇಸರಗೊಂಡ ಮಾದೇಗೌಡ

"ನೀನೇ ಒಂದು ಪೇಪರ್ ಮಾಡಿಬಿಡಯ್ಯ" ಎಂದ.

"ನಿನಗೇನು ಹುಚ್ಚೇನೋ ಗೌಡ – ನಾನು ಪೇಪರ್ ಹೊರಡಿಸುವ ಹಾಗಿದ್ದರೆ ಕಂಡವರ ಮನೆ ಬಾಗಿಲಿಗೆ ಭಿಕ್ಷಾಪಾತ್ರೆ ಹಿಡಿದುಕೊಂಡು ಏಕೆ ಹೋಗತ್ತಿದ್ದೆ."

"ನಿನ್ನ ಪೇಪರಿಗೇನಪ್ಪಾ ಬೇಕು. ಪ್ರೆಸ್ಸು, ಪೇಪರ್. . . ."

"ಕೆಲಸಗಾರರಿಗೆ ಸಂಬಳ ಕೊಡುವುದಕ್ಕೆ ದುಡ್ಡು – ನಷ್ಟ ಎದುರಿಸೋಕೆ ಛಾತಿ."

"ರೇವಣ್ಣ ತನ್ನ ಪ್ರೆಸ್ಸಿನಲ್ಲಿ ಪೇಪರ್ ಮಾಡಿಕೊಡಲಾರನೇ?"

"ನನ್ನದು ಸಣ್ಣ ಟ್ರೆಡಲ್ ಪ್ರೆಸ್ಸು ಗೌಡ. ಪೇಪರ್ ಮಾಡೋದಿಕ್ಕೆ ಸಿಲಿಂಡರ್ ಬೇಕಾಗತ್ತೆ"

ಎಂದು ರೇವಣ್ಣ ಹೇಳಿದ. ಮಹಮ್ಮದ್‌ಖಾನ್ ಮಧ್ಯೆ ಬಾಯಿಹಾಕಿ

"ಒಂದು ಸಿಲಿಂಡರ್ ತಂದರಾಯಿತು. ಗೌಡ ಹೇಳಿದ ಹಾಗೆ ನಮ್ಮದೇ ಒಂದು ಪೇಪರ್ ಇರಬೇಕಯ್ಯಾ."

"ರೇವಣ್ಣ, ಸರಿಯಾದ ಪೇಪರ್ ಮಾಡೋದಿಕ್ಕೆ ಖರ್ಚು ಎಷ್ಟಾಗತ್ತೆ ಲೆಕ್ಕಹಾಕು."

"ಪೇಪರಿನ ಆಕಾರ, ಪುಟ ಸಂಖ್ಯೆಯ ಮೇಲೆ ಖರ್ಚು ಲೆಕ್ಕ ಹಾಕ ಬೇಕಾಗುತ್ತದೆ."

"ಸದ್ಯಕ್ಕೆ 'ಪ್ರಜಾಮತ' ಸೈಜು, ನಾಲ್ಕು ಪೇಜು ಎಂದಿಟ್ಟುಕೊ."

"ವಾರಪತ್ರಿಕೆಯಾದರೆ ಟ್ರೆಡಲ್ ಮೇಲೆ ನಾನೇ ಹೊಡೆದುಕೊಡಬಲ್ಲೆ."

"ವಾರಪತ್ರಿಕೆ ಸುಖವಿಲ್ಲಯ್ಯ. ದಿನಪತ್ರಿಕೆ ಮಾಡಬೇಕು."

"ಸಿಲೆಂಡರ್ ಬೇಕೇ ಬೇಕು. ಸಿಲೆಂಡರ್, ಟೈಪು, ಕಾಗದ, ಮೇಲು ಖರ್ಚು ಎಲ್ಲಾ ಸೇರಿ ಸದ್ಯಕ್ಕೆ ಹತ್ತು ಸಾವಿರವಿಲ್ಲದೆ ಕೆಲಸ ಆಗುವುದಿಲ್ಲ ಗೌಡ."

"ಟೈಪು ನೀನು ನೋಡಿಕೊಂಡುಬಿಡು ರೇವಣ್ಣ - ಸಿಲೆಂಡರ್ ನಾನು ತರಿಸಿಕೊಡುತ್ತೇನೆ. ನೀವು ಸಾಬರೇ. . . ."

"ನಾನೂ ಒಂದೆರಡು ಸಾವಿರ ಕೊಡುತ್ತೇನಪ್ಪಾ."

"ವಿಜಯದಶಮಿ ದಿವಸ ಪೇಪರ್ ತಂದುಬಿಡಪ್ಪಾ"

ಎಂದು ಗೌಡ ಹೇಳಿದ. ವಿಶ್ವೇಶ್ವರಯ್ಯ ಸಂಪಾದಕ, ಗೌಡ ಮ್ಯಾನೇಜರ್, ರೇವಣ್ಣ ಪ್ರಿಂಟರ್, ಸಮ್ಮದ್ ಖಾನ್ ಜಾಹಿರಾತು ಮ್ಯಾನೇಜರ್ ಎಂದು ನಿಶ್ಚಯವಾಯಿತು.

'ಯುಗವಾಣಿ' ವಿಜಯದಶಮಿಯ ಶುಭದಿನದಲ್ಲಿ ಹೊರಬಿತ್ತು. ಒಂದೆರಡು ತಿಂಗಳಲ್ಲಿ ಪತ್ರಿಕೆಯ ಖ್ಯಾತಿಯೂ ಬೆಳೆಯಿತು. ಎಂಟು ಸಾವಿರ ಪ್ರತಿಗಳವರೆಗೆ ಮಾರಾಟವಾಗುತ್ತಿತ್ತು. ಆದರೆ ಜಾಹಿರಾತುಗಳು ಸಾಕಷ್ಟು ಬರಲಿಲ್ಲ. ಜಾಹೀರಾತು ಕಂಪೆನಿಯವರು 'ಹೊಸ ಪೇಪರ್, ನೋಡೋಣ - ಎಷ್ಟು ದಿವಸ ಬದುಕತ್ತೋ' ಎಂದರು. ಉಳಿದವರು ಪುಟಕ್ಕೆ ಹತ್ತಿಪ್ಪತ್ತು ರೂಪಾಯಿಗಳಗಿಂತ ಹೆಚ್ಚು ಕೊಡಲು ಸಿದ್ಧವಾಗಿರಲಿಲ್ಲ. ನ್ಯೂಸ್‌ಪ್ರಿಂಟ್ ಕಾಗದದ ಬೆಲೆ ಮಲೇರಿಯಾ ಜ್ವರ ಏರಿದಂತೆ ಏರುತ್ತ ಹೋಯಿತು. ಎರಡು ತಿಂಗಳಲ್ಲಿ ಪತ್ರಿಕೆ ಎಂಟು ಸಾವಿರ ಪ್ರತಿ ಮಾರಾಟವಾಗುತ್ತದೆಂದು ಗೆಳೆಯರು ಸಂತೋಷಪಟ್ಟರೂ, ಮಾರಾಟದಲ್ಲಿ ಬರುತ್ತಿದ್ದ ಹಣ ಕಾಗದ, ಮುದ್ರಣಕ್ಕೇ ಸಾಕಾಗುತ್ತಿತ್ತು.

ಸಿಲೆಂಡರ್ ಕೊಳ್ಳುವುದಕ್ಕೆ ಮಾದೇಗೌಡ ಕೊಟ್ಟಿದ್ದ ಏಳೂವರೆ ಸಾವಿರ ರೂಪಾಯಿಯ ಜತೆಗೆ ನಿತ್ಯದ ಖರ್ಚು ಪೂರೈಸುವುದಕ್ಕೆ ಅವನು ಹಣ ಕಕ್ಕಬೇಕಾಯಿತು. ಒಂದು ವರ್ಷ ಕಳೆಯುವುದರೊಳಗಾಗಿ ಗೌಡನ ಕೈಯಿಂದ ಮತ್ತೆ ಮೂರು ಸಾವಿರಗಳಷ್ಟು ಬಿಟ್ಟುಹೋಗಿತು.

ಪತ್ರಿಕೆಯ ಖ್ಯಾತಿ ಬೆಳೆಯುತ್ತಿತ್ತೇ ವಿನಾ ವರಮಾನ ಬೆಳೆಯುತ್ತಿರಲಿಲ್ಲ. ಪತ್ರಿಕೆ ಮುಂದಕ್ಕೆ ನಡೆಸುವುದು ದುಸ್ಸಾಧ್ಯವಾಯಿತು - ನಿಲ್ಲಿಸಿದರೆ ಹಾಕಿದ

ಹಣ ಹಾಳಾಗಿಹೋಗುತ್ತಿತ್ತು. ಮುಂದೇನು ಗತಿ ಎನ್ನುವ ಚಿಂತೆ ಎಲ್ಲರನ್ನೂ ಬಾಧಿಸತೊಡಗಿತು.

ಎಲೆಕ್ಷನ್ ಕಾಲ ಸಮೀಪಿಸಿದಂತೆ ಪತ್ರಿಕೆಗೆ ಗಿರಾಕಿಗಳು ಹುಟ್ಟಿಕೊಂಡರು. ಸರಿಯಾದ ಬೆಲೆ ಬಂದರೆ ಪತ್ರಿಕೆಯನ್ನು ಮಾರಿಬಿಡುವುದೆಂದು ಗೆಳೆಯರು ನಿರ್ಧರಿಸಿದರು.

ಎರಡನೆಯ ಮಹಾಯುದ್ಧದಿಂದ ಪುಷ್ಟಿಗೊಂಡ ಪುರಪ್ರಮುಖರಲ್ಲಿ ಸಾಹುಕಾರ್ ರಂಗಸ್ವಾಮಯ್ಯನವರೂ ಒಬ್ಬರಾಗಿದ್ದರು. ಬೆಣ್ಣೆ ಧಾರಣೆಗೆ ಡಾಲ್ಡಾ ಮಾರಿ ಅವರು ಮಿಲ್ಟ್ರಿಯವರಿಂದ ನಾಕಷ್ಟು ಹಣ ಸೆಳೆದುಕೊಂಡಿದ್ದರು. ಊರಿನಲ್ಲಿ ಅವರ ರೇಷನ್ ಅಂಗಡಿ. ಚಿಲ್ಲರೆ ಅಂಗಡಿ, ಎಲೆಕ್ಟ್ರಿಕ್ ಸಾಮಾನಿನ ಅಂಗಡಿಗಳೂ ಇದ್ದವು. ಕೈಯಲ್ಲೊಂದು ಪತ್ರಿಕೆಯಿದ್ದರೆ ವ್ಯಾಪಾರದೃಷ್ಟಿಯಿಂದ ಅನುಕೂಲವಾಗುವುದು ಮಾತ್ರವಲ್ಲದೆ, ನಾಳೆ ಎಲೆಕ್ಷನ್ನಿಗೂ ಪ್ರಯೋಜನವಾಗುವುದೆನ್ನುವುದನ್ನು ಸಾಹುಕಾರರ ಸ್ನೇಹಿತರು ಅವರ ತಲೆಗೆ ತುಂಬಿದರು. ಎಲೆಕ್ಷನ್ನಿನಲ್ಲಿ ನಿಂತುಕೊಂಡು ಮಿನಿಸ್ಟರ್ ಆಗುವ ಛಾನ್ಸ್ (Chance) ಇದ್ದರೆ ಒಂದು ಕೈ ನೋಡಿಬಿಡಬೇಕೆಂಬ ಆಸೆಯೂ ಸಾಹುಕಾರರನ್ನು ಬಲವಾಗಿ ಕಾಡತೊಡಗಿತು.

ರಾಘವಯ್ಯ ಸಾಹುಕಾರರ ಆಪ್ತಸಚಿವನಾಗಿದ್ದ. ಅವರ ಒಂದು ರೇಷನ್ ಅಂಗಡಿಯಲ್ಲಿ ಅವನು ಮ್ಯಾನೇಜರ್ ಆಗಿದ್ದರೂ ಸಾಹುಕಾರರ ಅನೇಕ ವಹಿವಾಟುಗಳ ಮ್ಯಾನೇಜರಿಕೆ ಅವನಿಗೇ ಸೇರಿತ್ತು. ಸಾಹುಕಾರರ ಹಲವು ಚಟಗಳನ್ನು ಪೂರೈಸುತ್ತಿದ್ದವನು ರಾಘವಯ್ಯನೇ. ಅವನ ಮಾತೆಂದರೆ ಸಾಹುಕಾರರಿಗೆ ವೇದವಾಕ್ಯವಾಗಿತ್ತು.

ಸಾಹುಕಾರರು ರಾಘವಯ್ಯನನ್ನು ಬಿಟ್ಟು 'ಯುಗವಾಣಿ' ಖರೀದಿ ಮಾಡಿಸಿದರು. ಸಿಲಿಂಡರ್, ಟೈಪುಗಳು, ಕಾಗದದ ಸ್ಟಾಕು - ಜತೆಗೆ 'ಯುಗವಾಣಿ' ಪತ್ರಿಕೆಯ ಗುಡ್‌ವಿಲ್ (Good-will) ಎಲ್ಲಾ ಸೇರಿ ಇಪ್ಪತ್ತು ಸಾವಿರ ಬೇಕೆಂದು ಗೆಳೆಯರು ಸೂಚಿಸಿದರು.

ಚೌಕಾಸಿ, ಹಿಗ್ಗಾಟ ಮುಗ್ಗಾಟ ಎಲ್ಲಾ ಒಂದು ತಿಂಗಳು ಸಾಗಿತು. ಕೊನೆಗೆ ಹದಿನೈದು ಸಾವಿರ ರೂಪಾಯಿಗೆ ವ್ಯಾಪಾರ ಗಿಟ್ಟಿಸಿ ತಮ್ಮ ಹೆಸರಿಗೆ ಸಾಹುಕಾರರು ಪತ್ರಿಕೆ, ಅದರ ಆಸ್ತಿ ಬರೆಸಿಕೊಂಡರು. ಮಾದೇಗೌಡ,

ಸಮ್ಮದ್ ಖಾನ್ ತಮ್ಮ ಹಣ ಹಿಂದಕ್ಕೆ ತೆಗೆದುಕೊಂಡರು. ವಿಶ್ವೇಶ್ವರಯ್ಯ, ರೇವಣ್ಣನಿಗೆ ಒಂದೊಂದು ಸಾವಿರ ಕೊಟ್ಟುಬಿಟ್ಟರು.

ಮಾದೇಗೌಡ ಯಥಾಪ್ರಕಾರ ತನ್ನ ಜಮೀನಿಗೆ ಹೋದ.

ರೇವಣ್ಣ ತನ್ನ ಲಗ್ನಪತ್ರಿಕೆ ಪ್ರೆಸ್ ನಡೆಸಿಕೊಂಡು ಹೋದ.

ಸಮ್ಮದ್ ಖಾನ್‌ಗೆ ಸಿನಿಮಾ ಥಿಯೇಟರೊಂದರಲ್ಲಿ ಮ್ಯಾನೇಜರ್ ಕೆಲಸ ಸಿಕ್ಕಿತು.

ವಿಶ್ವೇಶ್ವರಯ್ಯ ಇಂಗ್ಲೀಷ್ ಪತ್ರಿಕೆಯೊಂದರಲ್ಲಿ ತನ್ನ ಅದೃಷ್ಟಪರೀಕ್ಷೆ ಮಾಡುವುದಕ್ಕೆ ಮುಂಬಯಿಗೆ ಹೋದ.

'ಯುಗವಾಣಿ'ಯ ಕನಸು ಮಣ್ಣುಗೂಡಿಹೋಯಿತು.

ಒಂದೆರಡು ತಿಂಗಳಲ್ಲಿಯೇ 'ಯುಗವಾಣಿ' ಸರ್ವಾಲಂಕಾರಭರಿತವಾಗಿ, ಹೊಸ ರೂಪದಲ್ಲಿ, ದೊಡ್ಡ ಪತ್ರಿಕೆಯಾಗಿ ರಾಘವಯ್ಯನ ಸಂಪಾದಕತ್ವದಲ್ಲಿ ಹೊರಬಿತ್ತು. ಸಾಹುಕಾರರು ಅದರ ಮೇಲೆ ಐವತ್ತು ಸಾವಿರ ರೂಪಾಯಿ ಸುರಿದು, ವಾರದ ಭವಿಷ್ಯ ನೋಡುತ್ತ ಕುಳಿತರು.

ಹೊಸ 'ಯುಗವಾಣಿ' ಮಂತ್ರಿಮಂಡಲದ ಮುಖವೀಣೆಯಾಯಿತು. ಮಂತ್ರಿಗಳ ಚಲನವಲನ, ಭಾಷಣಗಳು, ಗುಣವರ್ಣನೆ, ಅವರ ಸಾರ್ವಜನಿಕ ಕಾರ್ಯಕ್ರಮಗಳ ಸಚಿತ್ರ ವರದಿಗಳು ಅದರ ವೈಶಿಷ್ಟ್ಯವಾಗುತ್ತ ಬಂತು.

ಮೇಲಿಂದ ಮೇಲೆ ಸಾಹುಕಾರ್ ರಂಗಸ್ವಾಮಪ್ಪನವರ ಚಿತ್ರವನ್ನು ಮೊದಲನೆಯ ಪುಟದಲ್ಲಿಯೇ ಪ್ರಕಟಿಸಿ, ಅವರ ಪ್ರಜಾಸೇವೆಯನ್ನು ಮುಕ್ತ ಕಂಠದಿಂದ ಹೊಗಳಿ ರಾಘವಯ್ಯ 'ಭಲೆ' ಎನಿಸಿಕೊಂಡಿದ್ದ

ರೇಷನ್ ಅಂಗಡಿ ಬಿಟ್ಟು 'ಯುಗವಾಣಿ' ಸಂಪಾದಕೀಯ ಕುರ್ಚಿ ಏರಿದೊಡನೆಯೇ ರಾಘವಯ್ಯನ ಸ್ವರೂಪವೇ ಬದಲಾಯಿಸಿತು. ಟಸ್ಸರ್ ಸೂಟಿನ ಬದಲು 'ಗ್ರೇ ಫ್ಲ್ಯಾನಲ್' ಪ್ಯಾಂಟು, ಬ್ರೌನ್ ಬ್ಲೇಜರ್ ಕೋಟೂ, ಕೆಂಪು ಟೈ, ತಲೆಯ ಮೇಲೆ ಫೆಲ್ಟ್ ಹ್ಯಾಟ್ ಕಂಗೊಳಿಸಿದವು. ಅವನ ರಕ್ತ ಹೀನವಾದ ನೀರಸಮುಖದ ಮೇಲೆ ವಾರ್ನರ್ ಬ್ಯಾಕ್ಸ್‌ಟರ್ (Warner Baxter) ಮಾದರಿಯ ಕಡ್ಡಿ ಮೀಸೆ ಬಂದಿತು. ಗೋಲ್ಡ್ ಫ್ಲೇಕ್ ಸಿಗರೇಟ್ ಡಬ್ಬ ರಾಘವಯ್ಯ ಕೈಬಿಟ್ಟು ಕೆಳಗಿಳಿಯುತ್ತಿರಲಿಲ್ಲ.

ಸಂಜೆಯಾಗುತ್ತಲೇ ಒಂದೆರಡು ಬಾಟಲು ಬೀರ್ ಕುಡಿಯದಿದ್ದರೆ ರಾಘವಯ್ಯನಿಗೆ ಸ್ಫೂರ್ತಿಯೇ ಬರುತ್ತಿರಲಿಲ್ಲ. ಅವನಿಗೆ ಬೀರ್ ಕುಡಿಸಿ, ಅವನಿಂದ ತಮಗೆ ಬೇಕಾದುದನ್ನು ಬರೆಸಿಕೊಳ್ಳುವ ರಾಜಕೀಯ ಧುರೀಣರೂ ಕಮ್ಯೂನಿಸ್ಟ್ ಸಾಹಿತಿಗಳೂ 'ಯುಗವಾಣಿ' ಕಛೇರಿಯಲ್ಲಿ ಸದಾ ತುಂಬಿರುತ್ತಿದ್ದರು. ಒಂದು ದಿನ 'ಯುಗವಾಣಿ' ಸಂಪಾದಕೀಯದಲ್ಲಿ ಅಮೆರಿಕನ್ನರ ರಾಜಕಾರಣದ ಪ್ರಶಂಸೆ, ರಷ್ಯಾದ ಖಂಡನೆಯಿದ್ದರೆ ಇನ್ನೊಂದು ದಿನ ರಷ್ಯಾ ಪ್ರಶಂಸೆ, ಅಮೇರಿಕಾದ ಖಂಡನೆ ಇರುತ್ತಿತ್ತು. ಒಂದು ದಿನ ಕಾಗೋಡು ರೈತರ ಹೋರಾಟ ಪ್ರಶಂಸೆ ಮಾಡಿದ್ದರೆ ಮತ್ತೊಂದು ದಿನ ರೈತರನ್ನು ಖಂಡಿಸಿ, ಜಮೀನುದಾರರ ಹಿತಸಂರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯವೆಂದು ವಾದಿಸುತ್ತಿದ್ದ.

ರಾಘವಯ್ಯನಿಗೆ ಸಂಜೆ ಬೀರ್ ಯಾರು ಕೊಡಿಸುತ್ತಾರೆ ಎನ್ನುವುದರ ಮೇಲೆ ಮಾರನೆಯ ದಿನದ ಸಂಪಾದಕೀಯ ಲೇಖನ ಅವಲಂಬಿಸುತ್ತಿತ್ತು.

ಕೈಯಲ್ಲಿ ಒಂದು ಪತ್ರಿಕೆಯಿದ್ದುದರಿಂದ ಅವನೂ ಒಬ್ಬ ಗಣ್ಯ ವ್ಯಕ್ತಿಯಾಗಿದ್ದ. ಅವನು ಬರೆದುದೆಲ್ಲಾ ಸತ್ಯಸಂದೇಶ ಎಂದು ಭಾವಿಸುವ ಮೂಢರೂ ಇದ್ದರು.

ಅಮೇರಿಕೆಯಿಂದ ಮೂವರು ಅತಿಥಿಗಳು ಬಂದಿರುವ ಸುದ್ದಿ ಹೇಳಿದ ಕೂಡಲೆ ರಾಘವಯ್ಯ ಮೈಸೂರಿಗೆ ಟ್ರಂಕ್‌ಕಾಲ್ ಮಾಡಿ ಗಾರ್ಡನರ್, ಬುಚ್, ಚಂದ್ರಶೇಖರ ಇವರ ಪರಿಚಯ ಮಾಡಿಕೊಂಡ. ಅವನ ಸಲಹೆಯ ಮೇಲೆ ಯುನಿವರ್ಸಿಟಿ ಯೂನಿಯನ್ನಿನಲ್ಲಿ ಮೂವರೂ ಭಾಷಣ ಮಾಡಲೊಪ್ಪಿದರು.

ಮೈಸೂರು ಪ್ರವಾಸ ಮುಗಿಯಲು ಅಮೆರಿಕನ್ ಅತಿಥಿಗಳು ಬೆಂಗಳೂರಿಗೆ ಹೊರಟರು. ಚಂದ್ರಶೇಖರನೂ ಅವರ ಜತೆ ಹೊರಡಬೇಕಾಯಿತು. ಸುನಂದಾ ಬೆಂಗಳೂರಿಗೆ ಹೊರಟು ನಿಂತಿದ್ದಳು. ಚಂದ್ರಶೇಖರ ಕಾರಿನಲ್ಲಿ ಅವಳನ್ನು ಕರೆತಂದು ಮನೆಯಲ್ಲಿ ಬಿಟ್ಟ.

"ಒಳಗೆ ಬಂದು ಅವರ ಪರಿಚಯ ಮಾಡಿಕೊಳ್ಳುವುದಿಲ್ಲವೇ"

ಎಂದು ಕೇಳಿದಳು.

"ಹೊತ್ತು ಆಗಿದೆ. ನಾನು ಬಹಳ ಹೊತ್ತು ಕೂಡುವುದಕ್ಕೆ ಆಗುವುದಿಲ್ಲ. ನಾಳೆ ಸಂಜೆ ಬರುತ್ತೇನೆ."

"ಮೈಸೂರಿನಲ್ಲಿಯೂ ಹೊಟೇಲಿಗೇ ಹೋದೆ - ಇಲ್ಲಿಯೂ ಹೊಟೇಲಿನಲ್ಲಿಯೇ ಇಳಿದುಕೊಳ್ಳಬೇಕೇ?"

"ಏನು ಮಾಡಲಮ್ಮ. ನಾನು ಒಬ್ಬನೇ ಬಂದಿಲ್ಲವಲ್ಲ. ಅವರನ್ನು ಬಿಟ್ಟು ನಾನೊಬ್ಬ ಬೇರೆ ಕಡೆ ಇದ್ದರೆ ಚೆನ್ನಾಗಿರುತ್ತದೆಯೇ"

ಎಂದು ತಂಗಿಗೆ ಸಮಾಧಾನ ಹೇಳಿ 'ವೆಸ್ಟ್ ಎಂಡ್ ಹೊಟೇಲ್' ಸೇರಿದ.

ಮಾರನೆಯ ದಿನ ಯೂನಿಯನ್ ಕಾರ್ಯದರ್ಶಿ, ರಾಘವಯ್ಯನ ಸಲಹೆಯಂತೆ ಅತಿಥಿಗಳನ್ನು ಹೊಟೇಲಿನಲ್ಲಿ ಕಂಡು ಅವರ ಕಾರ್ಯಕ್ರಮ ನಿಶ್ಚಯ ಮಾಡಿಕೊಂಡು ಬರಲು ಹೋದ

ಬುಚ್, ರಾಲ್ಫ್, ಚಂದ್ರಶೇಖರ ತಮ್ಮ ಕಾರ್ಯಕ್ರಮ ಚರ್ಚಿಸಿಕೊಂಡು

"ಇಂದು ಬೇಡ - ನಾಳೆ ಇಟ್ಟುಕೊಳ್ಳಿ" ಎಂದು ಹೇಳಿದರು

ಸಭೆಗೆ ಯಾರು ಅಧ್ಯಕ್ಷರಾಗಿರಬೇಕೆಂದು ಯೂನಿಯನ್ ಸಮಿತಿಯಲ್ಲಿ ಜಿಜ್ಞಾಸೆ ಹುಟ್ಟಿತು. ಪ್ರಿನ್ಸಿಪಾಲರನ್ನು ಕೇಳಿಕೊಳ್ಳಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಪ್ರಿನ್ಸಿಪಾಲ್ ನಾಯಿಡು ಅವರನ್ನು ಯೂನಿಯನ್ ಸಮಿತಿಯ ನಿಯೋಗ ಹೋಗಿ ಕಂಡಾಗ

"ನನಗೆ ಪುರಸತ್ತಾಗುವುದಿಲ್ಲ ಬೇರೆ ಯಾರನ್ನಾದರೂ ಕೇಳಿ. ನಮ್ಮ ಕಾಲ ಮುಗಿದುಹೋಯಿತು. ಯಾರಾದರೂ ಕಿರಿಯರನ್ನು ನೀವು ಕೇಳಬೇಕು."

"ಯಾರನ್ನು ಕೇಳಬೇಕು, ನೀವೇ ಹೇಳಿ ಸಾರ್."

"ನಿಮ್ಮ ಲೆಕ್ಚರರ್ ಸುಂದರರಾಯರನ್ನೇಕೆ ಕೇಳಬಾರದು. ಅವರು ಚೆನ್ನಾಗಿ ಮಾತನಾಡುತ್ತಾರೆ."

ಪ್ರಿನ್ಸಿಪಾಲರು ತಮ್ಮ ಅಳಿಯನ ಹೆಸರಾಗಲಿ, ಪ್ರೊ. ಕೇಶವಯ್ಯನವರ ಹೆಸರಾಗಲಿ ಹೇಳದೆ ಸುಂದರರಾಯರ ಹೆಸರು ಹೇಳಿದುದು ವಿದ್ಯಾರ್ಥಿಗಳಿಗೆ ಆಶ್ಚರ್ಯವಾಯಿತು.

"ಅವರು ತುಂಬ ಜೂನಿಯರ್ ಆಗುತ್ತಾರೆ ಸಾರ್" ಎಂದರು.

"ವಿದ್ಯೆ, ಬುದ್ಧಿಗೆ ವಯಸ್ಸಿನ ಕಟ್ಟು ಎಲ್ಲಿಂದ ಬಂತು."

ಎಂದು ಹೇಳಿ ಪ್ರಿನ್ಸಿಪಾಲರು ತಮ್ಮ ಹೃದಯವೈಶಾಲ್ಯವನ್ನು ಮೆರೆಸಿದರು.

ವಿದ್ಯಾರ್ಥಿಗಳು ಹೋದಮೇಲೆ ಪ್ರಿನ್ಸಿಪಾಲರ ಮುಖದ ಮೇಲೆ ಹುಸಿನಗೆ ತೇಲಿತು. ಸುಂದರರಾಯ ಹೆಚ್ಚು ಕಡಿಮೆ ಮಾತನಾಡಿ, ಅತಿಥಿಗಳ ಮೇಲೆ ಕಟಾಟೀಕೆ ಮಾಡಿದರೆ ಅನಾಯಾಸವಾಗಿ ತಮ್ಮ ಕೆಲಸ ಸಾಧಿಸುವು ದೆಂದು ಅವರು ಲೆಕ್ಕಹಾಕಿಕೊಂಡರು.

ಅಧ್ಯಕ್ಷಪೀಠ ಅಲಂಕರಿಸುವುದಕ್ಕೆ ಸುಂದರರಾಯ ಸಂತೋಷವಾಗಿ ಒಪ್ಪಿಕೊಂಡ. ಅತಿಥಿಗಳು ಮೂವರೂ 'ಜೀವಂತ ಅಮೇರಿಕ' (Living America) ಎನ್ನುವ ವಿಷಯದ ಮೇಲೆ ಮಾತನಾಡುವುದೆಂದು ನಿಶ್ಚಯಿಸ ಲಾಯಿತು

ತಂಗಿಗೆ ವಾಗ್ದಾನಮಾಡಿದ್ದಂತೆ ಚಂದ್ರಶೇಖರ ಸಂಜೆ ಆರೂವರೆಗೆ ಅವಳ ಮನೆಗೆ ಬಂದ. ಕಾಲೇಜಿನಿಂದ ಹಿಂದಿರುಗಿದ್ದ ಸುಂದರ ತನ್ನ ಭಾವನನ್ನೆದುರು ಗೊಳ್ಳಲು ಕಾಯುತ್ತಿದ್ದ. ಸುನಂದಾ ಗಂಡನಿಗೂ ಅಣ್ಣನಿಗೂ ಪರಿಚಯ ಮಾಡಿಕೊಟ್ಟಳು. ಉಭಯಕ್ಷೇಮ ಸಮಾಚಾರದ ವಿನಿಮಯವಾದ ಮೇಲೆ ಚಂದ್ರಶೇಖರ

"ಸುನೂ ಮದುವೆಯ ವೇಳೆಯಲ್ಲಿ ನಾನು ಇಂಗ್ಲೆಂಡಿನಲ್ಲಿದ್ದೆ. ಬರುವು ದಕ್ಕೆ ಆಗಲಿಲ್ಲ. ಅವಳು ನನ್ನ ಖಾಸಾ ತಂಗಿ."

"ಬಲ್ಲ. ನಿಮ್ಮ ಬಗ್ಗೆ ಅವಳ ವಿಶ್ವಾಸವೂ ತುಂಬ ಗಾಢವಾದದ್ದು."

"ಬಹಳ ಸಂಶೋಧನೆ ಮಾಡುತ್ತಿರುವಿರೆಂದು ಕೇಳಿದೆ."

"ಏನೋ ಮಾಡುತ್ತಿದ್ದೇನೆ."

"ನಿಮಗೆ ಇಲ್ಲಿ ಸಾಕಷ್ಟು ಪ್ರೋತ್ಸಾಹವಿಲ್ಲವೆಂದು ಕೇಳಿದೆ"

"ಅದನ್ನೂ ಸುನಂದಾ ಹೇಳಿದ್ದಾಳೇನು?"

"ಅಮೇರಿಕಾಕ್ಕೆ ಏಕೆ ಬರಬಾರದು? ಸಂಶೋಧಕರಿಗೆ ಅಲ್ಲಿ ತುಂಬ ಗೌರವಕೊಡುತ್ತಾರೆ. ಮನೆಮಾಳರಾಗಿ ನಾವು ಕುಳಿತಿದ್ದರೆ ನಮಗೆ ಏಳಿಗೆ ಯಿಲ್ಲ."

"ಅಮೇರಿಕಾದ ಕೆಲವು ವಿಶ್ವವಿದ್ಯಾನಿಲಯಗಳೊಂದಿಗೆ ನಾನು ಪತ್ರ ವ್ಯವಹಾರ ನಡೆಸಿದ್ದೇನೆ."

"ಅವರಿಂದ ಉತ್ತರ ಬಂದಿತೇ ?"

"ಸ್ವಲ್ಪವೂ ತಡಮಾಡದೆ ಉತ್ತರ ಬರೆದರು. ನನ್ನ ಸಂಶೋಧನೆಯನ್ನು ಅವರು ಸ್ವೀಕರಿಸಿದರೆ ಅದರ ಪೂರ್ಣ ಹಕ್ಕನ್ನು ಬರೆದುಕೊಡಬೇಕಂತೆ."

"ನಿಮ್ಮ ಸಂಶೋಧನೆಯ ಪೂರ್ಣಹಕ್ಕು ಅವರಿಗೇಕೆ ?"

ಸುಂದರ ಉತ್ತರ ಕೊಡುವಷ್ಟರಲ್ಲಿ ಉಪಾಹಾರ, ಕಾಫಿ ತೆಗೆದುಕೊಂಡು ಸುನಂದಾ ಬಂದಳು. ಮೂವರೂ ಉಪಾಹಾರದ ಸ್ವಾದ ನೋಡುತ್ತ ಕುಳಿತರು.

"ನಿನ್ನ ಯಜಮಾನರ ಸಂಶೋಧನೆಗಳ ವಿಷಯ ಕೇಳುತ್ತಿದ್ದೆ ಸುನಂದಾ. ಅದರ ಪೂರ್ಣ ಹಕ್ಕನ್ನು ಅಮೇರಿಕಾದವರು ಕೇಳಿದರಂತೆ !"

"ಹೌದು - ಅದನ್ನವರು ನಿರಾಕರಿಸಿಬಿಟ್ಟರು."

"ಏಕೆ ?"

"ನನ್ನ ಸಂಶೋಧನೆಯನ್ನು ವಿವರಿಸಿದರೆ ಅಮೇರಿಕಾದ ಮನೋಭಾವ ಸ್ವತಃಸ್ಸಿದ್ಧವಾಗುತ್ತದೆ. ಸಾಕಷ್ಟು ಆಹಾರ ತೆಗೆದುಕೊಳ್ಳದಿದ್ದರೆ ಮನುಷ್ಯನ ಶಕ್ತಿ ಕುಂದುತ್ತದೆ. ಆಹಾರದ ಪ್ರಮಾಣದ ಜತೆಗೆ ಪೌಷ್ಟಿಕ ಪದಾರ್ಥಗಳ ಪ್ರಮಾಣವೂ ಹೆಚ್ಚಾಗಿರಬೇಕು. ಆಹಾರದ ಅಭಾವ ನಿರಿಮೂಗಿಸುವುದಕ್ಕೆ ನಾನು ಒಂದು ಗುಳಿಗೆ ಕಂಡುಹಿಡಿದಿದ್ದೇನೆ. ಸದ್ಯ ಪ್ರಸಾರದಲ್ಲಿರುವ ವಿಟಮಿನ್ ಗುಳಿಗೆಗಳಿಗಿಂತ ಇದು ಪ್ರಭಾವಶಾಲಿಯಾದುದು."

"ಅಮೇರಿಕಾದಲ್ಲಿ ಆಹಾರದ ಅಭಾವವಿಲ್ಲ."

"ಆಹಾರದ ಅಭಾವವಿರುವ ಕೆಲವು ರಾಷ್ಟ್ರಗಳು ಅಮೇರಿಕೆಯನ್ನಾಶ್ರಯಿಸುತ್ತಿವೆ. ಅದರಲ್ಲಿ ಭಾರತವೂ ಒಂದು."

"ನೀವು ಭಾರತ ಸರಕಾರಕ್ಕೆ ಈ ಬಗ್ಗೆ ಏಕೆ ಬರೆಯಲಿಲ್ಲ."

"ಬರೆದೆ - ಅವರ ಕಣ್ಣಲ್ಲಿ ನಾನು ಯಾರು ಹೇಳಿ - ಒಬ್ಬ ಸಾಧಾರಣ ಕಾಲೇಜ್ ಮೇಷ್ಟ್ರು - ನನಗೆ ವಿಲಾಯಿತಿ ಡಿಗ್ರಿಗಳಿಲ್ಲ"

"ಈಗೇನು ಮಾಡಬೇಕೆಂದಿರುವಿರಿ ?"

"ವಿಲಾಯತಿ ಮುದ್ರೆ ಒತ್ತಿಸಿಕೊಳ್ಳುವುದಕ್ಕೆ ಹಣ ಹಸನುಮಾಡಿಕೊಳ್ಳುತ್ತಿದ್ದೇನೆ. ಲಂಡನ್ನಿನ 'ರಾಯಲ್ ಇನ್‌ಸ್ಟಿಟ್ಯೂಟ್ ಆಫ್ ಕೆಮಿಸ್ಟ್ರಿ' -

(Royal Institute of Chemistry - Great Britain) ಸಂಸ್ಥೆಗೆ ನನ್ನ ಸಂಶೋಧನೆ ಒಪ್ಪಿಸಿದ್ದೇನೆ.''

''ಸ್ವತಂತ್ರ ಭಾರತವಲ್ಲಿಯೂ ಈ ಗೋಳೇ?''

''ಭಾರತ ರಾಜಕೀಯದೃಷ್ಟಿಯಿಂದ ಸ್ವತಂತ್ರವಾಯಿತು. ಆದರಿನ್ನೂ ಅಪರ ಚಿತ್ತದಾಸ್ಯ ಹೋಗಿಲ್ಲ. ಇಂಗ್ಲಿಷ್ ಅಮೆರಿಕನ್ನರಂತೆ ಇಲ್ಲಿಯೂ ಮಹತ್ತ್ವಶೋಧ ಮಾಡಬಲ್ಲ ವಿಜ್ಞಾನಿಗಳಿದ್ದಾರೆ ಎಂಬ ಅರಿವು ನಮ್ಮ ಸರ್ಕಾರಕ್ಕೆ ಬಂದಿಲ್ಲ. ನಮ್ಮ ಯೋಗ್ಯತೆಯ ಮೇಲೆ ಹೊರಗಿನವರು ಮುದ್ರೆಯೊತ್ತಿದಲ್ಲದೆ, ಅದನ್ನು ನಮ್ಮವರೇ ಅಂಗೀಕರಿಸುವುದಿಲ್ಲ''

''ಈ ಕಾಲೇಜು - ಯೂನಿವರ್ಸಿಟಿ ಬಿಟ್ಟುಬಿಡಿ ಎಂದು ನಾನು ಹೇಳಿದರೆ ಇವರು ಕೇಳುವುದಿಲ್ಲಣ್ಣ. ತಮ್ಮ ಕಾಲೇಜೆಂಬ ಅಭಿಮಾನ ಇವರನ್ನು ಬಾಧಿಸುತ್ತಿದೆ - ಸೆಂಟಿಮೆಂಟಿಗೂ (Sentiment) ಒಂದು ಎಲ್ಲೆ ಇರಬೇಡವೇ?''

''ಇಷ್ಟು ಯೋಗ್ಯತೆಯಿಟ್ಟುಕೊಂಡೂ ನೀವು ಪಡುತ್ತಿರುವ ಅವಸ್ಥೆ ಕಂಡು ನನಗೆ ತುಂಬ ದುಃಖವಾಗುತ್ತದೆ ಮಿ ಸುಂದರ್. ಅಮೇರಿಕಕ್ಕೆ ಬರಲು ನಿಶ್ಚಯಿಸಿದರೆ ನನಗೆ ತಿಳಿಸಿ. ನನ್ನ ಕೈಯ್ಯಲ್ಲಾಗುವ ಸಹಾಯ ಮಾಡಲು ಸಿದ್ಧನಾಗಿದ್ದೇನೆ.''

''ವಿಜ್ಞಾನದ ವಿಷಯದಲ್ಲಿ ಅಮೇರಿಕಾ ತುಂಬ ಮುನ್ನಡೆಯುತ್ತಿದೆ. ಅಲ್ಲಿನ ವಿಜ್ಞಾನಿಗಳು ಮಾಡಿರುವ ನೂತನ ಪ್ರಯೋಗಗಳು, ಕಂಡು ಹಿಡಿದಿರುವ ಹೊಸ ಯಂತ್ರಗಳನ್ನು ನೋಡಬೇಕೆಂದು ನನಗೆ ಉತ್ಕಟೇಚ್ಛೆ ಇದೆ.''

''ರಾಕ್‌ಫೆಲ್ಲರ್ ಫೌಂಡೇಷನ್‌ನವರು (Rochfeller Foundation) ಅಮೇರಿಕಾದಲ್ಲಿ ಭಾರತೀಯರು ಶಿಕ್ಷಣಪಡೆಯಲು ತುಂಬ ಸೌಕರ್ಯ ಒದಗಿಸುತ್ತಿದ್ದಾರೆ. ಅಲ್ಲಿ ನೀವು ಪ್ರಯತ್ನಿಸಿದರೆ ನಿರಾಶೆಯಾಗಲಾರದು.''

''ಆಗಲಿ - ಯೋಚನೆ ಮಾಡುತ್ತೇನೆ. ನಿಮ್ಮ ಸಲಹೆಗೆ ತುಂಬ ಋಣಿಯಾಗಿದ್ದೇನೆ.''

ಚಂದ್ರಶೇಖರನನ್ನು ಅಲ್ಲಿಯೇ ಉಳಿಸಿಕೊಳ್ಳಬೇಕೆಂದು ಸುನಂದಾ ಪ್ರಯತ್ನಿಸಿದಳು. ಸುಂದರನೂ ಅವಳ ಸಲಹೆಯನ್ನು ಅನುಮೋದಿಸಿದ.

ಜತೆಗಾರರನ್ನು ಬಿಟ್ಟಿರಲು ಸಾಧ್ಯವಿಲ್ಲದ ಪ್ರಯುಕ್ತ ಚಂದ್ರಶೇಖರ ಹೊರಡಲೇ ಬೇಕಾಯಿತು.

"ನಾಳೆ ನಿಮ್ಮ ಕಾಲೇಜ್ ಯೂನಿಯನ್ನಿನಲ್ಲಿ ನನ್ನದೂ, ನನ್ನ ಸಂಗಡಿಗರದೂ ಭಾಷಣವಿದೆ" ಎಂದು ಚಂದ್ರಶೇಖರ ಹೇಳಿದ.

"ಹೌದು - ಗೊತ್ತಾಯಿತು."

"ಇವರೇ ನಾಳೆ ಅಧ್ಯಕ್ಷರು ಅಣ್ಣಾ"

ಎಂದು ಸುನಂದಾ ಹೇಳಿದಳು. ಚಂದ್ರಶೇಖರ ದೇಶಾವರದ ನಗೆ ಬೀರುತ್ತಾ 'ಹಾಗೇನು' ಎಂದ.

ಸುನಂದಾ ತಾನೂ ಭಾಷಣಕ್ಕೆ ಬರಬೇಕೆಂದು ಇಚ್ಛೆಪಟ್ಟಳು. ಸಂಜೆ ಬಂದು ಅವಳನ್ನು ಜತೆಯಲ್ಲಿ ಕರೆದೊಯ್ಯುವುದಾಗಿ ಮಾತುಕೊಟ್ಟು ಚಂದ್ರಶೇಖರ ಹೊಟೇಲಿಗೆ ಹೊರಟ.

ಚಂದ್ರಶೇಖರ ಹೋದಮೇಲೆ ಸ್ವಲ್ಪಕಾಲ ಸುಂದರ, ಸುನಂದಾ ಮಾತ ನಾಡಲಿಲ್ಲ. ತನ್ನ ವಿಚಾರಲಹರಿಯನ್ನು ಮುಂದುವರಿಸುವಂತೆ ಸುನಂದಾ ಕೇಳಿದಳು

"ಅಣ್ಣನಿಗೇಕೆ ಒರಟು ಜವಾಬುಕೊಟ್ಟಿರಿ ?"

"ಒರಟು ಜವಾಬು ಎಲ್ಲಿ ಕೊಟ್ಟೆ ?"

"ಅಮೇರಿಕಾದಲ್ಲಿ ನಿಮಗೊಂದು ದಾರಿಮಾಡಬೇಕೆಂದು ಅವನು ಎಷ್ಟು ಆಸೆ ತೋರಿಸಿದ. ನಿಷ್ಕಾರಣವಾಗಿ ಅವನ ಮಾತನ್ನು ನೀವು ತಾತ್ಸಾರ ಮಾಡಿದಿರಿ."

"ನಿಷ್ಕಾರಣವಾಗಿಯಲ್ಲ - ಸಕಾರಣವಾಗಿ."

"ಏನು ಕಾರಣ"

"ಅಮೇರಿಕಾದ ಋಣಪುತ್ರನಾಗಬೇಕೆಂಬ ಇಚ್ಛೆ ನನಗಿಲ್ಲ."

"ಈಗ ಅಮೇರಿಕಾದ ಸಹಾಯ ತೆಗೆದುಕೊಂಡಿರುವವರೆಲ್ಲಾ ಅವರ ಋಣಪುತ್ರರಾಗಿರುವರೇನು ?"

"ಆಗದೆ ವಿಧಿಯೇ ಇಲ್ಲ ಸುನಂದಾ. ಅಮೇರಿಕಾದ ಸಹಾಯದ ಹಿಂದೆ ಅವರ ರಾಜಕಾರಣ ತಾಂಡವವಾಡುತ್ತಿರುತ್ತದೆ. ಭಾರತಕ್ಕೆ ಗೋಧಿಕೊಡುವ ವಿಷಯದಲ್ಲಿ ಅಮೇರಿಕಾ ಹಾಕಿದ ಕರಾರುಗಳನ್ನು ಪತ್ರಿಕೆಯಲ್ಲಿ ನೀನು

ಓದಲಿಲ್ಲವೇ ? ನಮ್ಮ ಸ್ವಾರ್ಥದ ಸಲುವಾಗಿ ಅಮೇರಿಕಾದ ನೆರವು ಪಡೆದು, ನಮ್ಮ ದೇಶಕ್ಕೇ ನಾವು ದ್ರೋಹಮಾಡುವುದು ನನಗೆ ಸಾಧ್ಯವಾಗುವ ಕೆಲಸವಲ್ಲ."

"ನಿಮಗೆ ಯಾವದೂ ಸಾಧ್ಯವಾಗುವುದಿಲ್ಲ. ಸತ್ತ ತತ್ತ್ವಗಳನ್ನು ಅಪ್ಪಿ ನೀವು ಕುಳಿತರೆ ರಿಟೈರ್ ಆಗುವ ವೇಳೆಯಲ್ಲಿಯೂ ಇದೇ ಲೆಕ್ಚರರ್‌ಷಿಪ್, ಇದೇ ಸಂಬಳ ನಿಮಗೆ ಖಾಯಂ ಆಗುತ್ತದೆ."

"ನೀನು ಬಡವನ ಕೈಹಿಡಿದೆಯೆನ್ನುವುದು ಗೊತ್ತಿಲ್ಲವೇ ಸುನಂದಾ."

"ಇಲ್ಲದ ಬಡತನ ಕೋರಿಕೊಳ್ಳುತ್ತಿರುವಿರಿ - ತಂದುಕೊಳ್ಳುತ್ತಿರುವಿರಿ. ಧನಲಕ್ಷ್ಮಿ ಮನೆಯ ಬಾಗಿಲಿಗೆ ಬಂದರೂ ಬೇಡವೆಂದು ಆಕೆಯನ್ನು ಹೊರ ದೂಡುತ್ತಿರುವಿರಿ."

"ದೇಶದ್ರೋಹಿ ಶ್ರೀಮಂತನಾಗುವುದಕ್ಕಿಂತಲೂ ವಿಷ ತೆಗೆದುಕೊಂಡು ಪ್ರಾಣಬಿಡುವುದು ಲೇಸು."

"ಇದು ಕೈಯಲ್ಲಾಗದಿರುವವರು ಆಡುವ ಮಾತು."

"ನಾನು ಕೈಯಲ್ಲಾಗದವನೆಂದು ನಿನ್ನ ಅಭಿಪ್ರಾಯವಲ್ಲವೇ ?"

"ನೀವು ಏನು ಎನ್ನುವುದು ನಿಮಗೇ ಗೊತ್ತು"

ಎಂದು ಬಿರುಸಾಗಿ ನುಡಿದು ಒಳಕ್ಕೆ ಹೋಗಿಬಿಟ್ಟಳು. ಸುಂದರನ ಮನಸ್ಸು ದುಮ್ಮಲ ಮರುಗಿತು. ದುಃಖ, ಅಪಮಾನಗಳಿಂದ ಝುರ್ಝುರಿಸಿ ಹೋಗಿದ್ದ ದೇಹಹೊತ್ತುಕೊಂಡು ತನ್ನ ಲ್ಯಾಬೊರೇಟರಿಯಲ್ಲಿ ಬಂದು ಕುಳಿತ.

ಕೆಲಸ ಮುಂದುವರಿಸಲೂ ಮನಸ್ಸಾಗದು - ಕೊಳಲೂ ಬೇಡವಾಯಿತು. ಲ್ಯಾಬೊರೇಟರಿಯ ದೀಪ ಆರಿಸಿ, ಕತ್ತಲೆಯಲ್ಲಿ ಧ್ಯಾನಾಸಕ್ತನಾಗಿ ಕುಳಿತು ಬಿಟ್ಟ. **'ಕತ್ತಲೆಯಿಂದ ಬೆಳಕು, ಮೃತ್ಯುವಿನಿಂದ ಅಮೃತತ್ತ್ವ, ಅಸತ್ಯದಿಂದ ಸತ್ಯ.'** ನಿಜವೇ - ನಿಜವೇ - ನಿಜವೇ ಎಂದು ಅವನ ಹೃದಯದಲ್ಲಿ ಮೊರೆಯೆದ್ದಿತು.

ಮಾರನೆಯ ದಿನ ಸಂಜೆ 'ಯೂನಿವರ್ಸಿಟಿ ಯೂನಿಯನ್' ಸಭಾಭವನ ಕಿಕ್ಕಿರಿದು ತುಂಬಿಹೋಯಿತು. ಎಳ್ಳು ಹಾಕಿದರೆ ಎಳ್ಳು ಸಿಡಿಯುವುದಕ್ಕೆ ಸ್ಥಳವಿಲ್ಲ. ಆರು ಗಂಟೆಯ ಕಾರ್ಯಕ್ರಮಕ್ಕೆ ಒಂದು ಗಂಟೆ ಮುಂಚೆಯೇ

ವಿದ್ಯಾರ್ಥಿಗಳು ತಮ್ಮ ಸ್ಥಳಗಳನ್ನು ಕಾಯ್ದಿಟ್ಟುಕೊಂಡರು. ಊರಿನ ಸದ್ಗೃಹಸ್ಥರೂ, ಪ್ರಧಾನವ್ಯಕ್ತಿಗಳೂ, ಯೂನಿಯನ್ನಿನ ಅಭಿಮಾನಿಗಳೂ ಸಭೆಗೆ ಬಂದಿದ್ದರು.

ಯೂನಿಯನ್ನಿನ ಕಾರ್ಯದರ್ಶಿಯ ಕೋರಿಕೆಯಂತೆ ಕಾರ್ಯಕ್ರಮಕ್ಕೆ ಅರ್ಧಗಂಟೆ ಮುಂಚಿತವಾಗಿ ರಾಲ್ಫ್ ಗಾರ್ಡನರ್, ಈವಾ ಗಾರ್ಡನರ್ ಮತ್ತು ಜಾರ್ಜ್ ಬುಚ್ ಹೋಟೇಲಿನಿಂದ ಆಗಮಿಸಿದರು. ಸ್ವಲ್ಪ ಹೊತ್ತಿನಲ್ಲಿಯೇ ಚಂದ್ರಶೇಖರ ಸುನಂದೆಯೊಂದಿಗೆ ಬಂದ. ಅತಿಥಿಗಳ ಸ್ವಾಗತಕ್ಕೆ ಕಾರ್ಯದರ್ಶಿಯ ಜತೆ ರಾಘವಯ್ಯನೂ ನಿಂತಿದ್ದ.

ಯೂನಿಯನ್ನಿನ ಅಧಿಕಾರಿಗಳು ಅತಿಥಿಗಳಿಗೆ ಅಲ್ಪೋಪಹಾರವನ್ನು ಮಹಡಿಯ ಮೇಲೆ ವ್ಯವಸ್ಥೆಮಾಡಿದ್ದರು. ಅವರ ಜತೆ ಚಂದ್ರಶೇಖರನನ್ನು ಕಳುಹಿಸಿಕೊಟ್ಟು ಸುನಂದಾ ಮಹಿಳೆಯರಿಗೆ ವ್ಯವಸ್ಥೆಯಾಗಿದ್ದೆಡೆಯಲ್ಲಿ ಬಂದು ಕುಳಿತಳು.

ಉಪಾಹಾರ ಕಾಲದಲ್ಲಿ ಕಾರ್ಯದರ್ಶಿ ಅತಿಥಿಗಳಿಗೆ ಯೂನಿಯನ್ ಸಮಿತಿಯ ಸದಸ್ಯರ, ಕಾಲೇಜಿನ ಅಧ್ಯಾಪಕರ ಪರಿಚಯ ಮಾಡಿಕೊಟ್ಟ. ಪ್ರಿನ್ಸಿಪಾಲರು ಉಪಾಹಾರಕ್ಕೆ ಬಾರದೆ ತಪ್ಪಿಸಿಕೊಂಡಿದ್ದರು.

ಆರು ಗಂಟೆಗೆ ಸರಿಯಾಗಿ ಕಾರ್ಯಕ್ರಮ ಆರಂಭವಾಯಿತು. ಪ್ರಿನ್ಸಿಪಾಲರು ಬಂದು ಶ್ರಾವಕರ ಜತೆಯಲ್ಲಿ ಕುಳಿತರು. ಕಾರ್ಯದರ್ಶಿಯ ಪರಿಚಯ ಭಾಷಣವಾಯಿತು. ಸಭಾಧ್ಯಕ್ಷರಾದ ಸುಂದರರಾಯರು ಪ್ರಾಸ್ತಾವಿಕವಾಗಿ ನಾಲ್ಕು ಮಾತುಗಳನ್ನಾಡುತ್ತಾ

"ವಿಶ್ವಶಾಂತಿ, ವಿಶ್ವಮೈತ್ರಿಗೆ ಅಡಿಗಲ್ಲು ಹಾಕಿದ ರಾಷ್ಟ್ರವೆಂದರೆ ಭಾರತ. ಉಪನಿಷತ್ತಿನ ಮಹರ್ಷಿಗಳು ನಮ್ಮ ಕೈಗೆ ಕೊಟ್ಟ ಶ್ವೇತಪತಾಕೆಯ ಮೇಲೆ ಅವರು ಬರೆದ ಬೀಜಮಂತ್ರ 'ಓಂ ಶಾಂತಿಃ ಶಾಂತಿಃ ಶಾಂತಿಃ'. ಬುದ್ಧ, ಅಶೋಕ, ಅಕ್ಬರ್, ದಾರಾಷುಕೋ ಇದೇ ತತ್ತ್ವವನ್ನು ಅನುಸರಿಸಿದರು. ನಮ್ಮ ಕಾಲದಲ್ಲಿಯೇ ಪೂಜ್ಯ ಗಾಂಧೀಜಿ ವಿಶ್ವಶಾಂತಿ, ವಿಶ್ವಪ್ರೇಮದ ಪ್ರವಾದಿಗಳಾಗಿ ಮಾಡಿರುವ ಕೆಲಸ ನಮ್ಮ ಸ್ಮೃತಿಯಿಂದ ಅಳಿಯಲು ಸಾಧ್ಯವಿಲ್ಲ. ಬಾಪೂ ಅವರ ಪರಮ ಶಿಷ್ಯರೂ, ಜಗತ್ತಿನ ಮಹಾ ಪುರುಷರಲ್ಲಿ ಒಬ್ಬರೂ ಆದ ನಮ್ಮ ಪ್ರಧಾನಾಮಾತ್ಯ ಜವಹರಲಾಲ್‌ಜೀಯವರು ವಿಶ್ವಶಾಂತಿ ರಕ್ಷಣೆಗಾಗಿ ಮಾಡುತ್ತಿರುವ ಮಹಾಪ್ರಯತ್ನ ನಮ್ಮ ನಾಡಿನ ಕೀರ್ತಿಗೆ ಕಳಶವಿಟ್ಟಂತಾಗಿದೆ.

**ಮಹೋನ್ನತ ಇತಿಹಾಸವುಳ್ಳ ಈ ಪುಣ್ಯಭೂಮಿಗೆ ಪ್ರವಾಸಿಗರಾಗಿ ಮಾನ್ಯ ಅತಿಥಿಗಳು ದಯೆಮಾಡಿಸಿದ್ದಾರೆ. ಜಗತ್ತಿನ ಎಲ್ಲ ರಾಷ್ಟ್ರಗಳೊಂದಿಗೆ ಮಧುರ ಬಾಂಧವ್ಯ ಬೆಳಸಬೇಕೆಂದು ಭಾರತ ಪ್ರಯತ್ನಿಸುತ್ತಿರುವಂತೆ ಅಮೇರಿಕೆಯೂ ಪ್ರಯತ್ನಿಸುತ್ತಿದೆಯೆಂದು ನಮ್ಮ ಅತಿಥಿಗಳಿಂದ ತಿಳಿಯಲು ನಾನು ತುಂಬ ಉತ್ಸುಕನಾಗಿದ್ದೇನೆ. ಭಾರತ - ಅಮೇರಿಕೆಯ ಮೈತ್ರಿಯನ್ನು ಬೆಸೆದು ಹೋಗುವುದಕ್ಕೆ ಈ ಅತಿಥಿಗಳು ಬಹಳ ದೂರದಿಂದ ಬಂದಿದ್ದಾರೆಂದು ನನ್ನ ನಂಬಿಕೆ''**

ಎಂದರು. ತರುವಾಯ ರಾಲ್ಫ್ ಗಾರ್ಡನರ್ ಮಾತನಾಡುತ್ತಾ ಅಮೇರಿಕಾ ಸ್ವಾತಂತ್ರ್ಯ ಪಡೆದ ಬಗೆಯನ್ನು ವಿವರಿಸಿ

**''ಇಂದು ಅಮೇರಿಕಾದಲ್ಲಿ ಹಲವು ಜನಾಂಗಗಳಿವೆ. ಎಲ್ಲರಿಗೂ ಅಮೆರಿಕನ್ ಕಾನ್‌ಸ್ಟಿಟ್ಯೂಷನ್ ಸಮಾನವಾದ ಹಕ್ಕು ಬಾಧ್ಯತೆಗಳನ್ನೊದಗಿಸಿದೆ. ವರ್ಣ, ಜಾತಿ, ಮತಗಳಿಗಿಂತ ಅಮೆರಿಕನ್ನರು ದೇಶಕ್ಕೆ ಹೆಚ್ಚು ಮಾನ್ಯತೆ ಕೊಡುತ್ತಾರೆ.''**

ಸಭೆಯ ಒಂದು ಮೂಲೆಯಲ್ಲಿದ್ದ ವಿದ್ಯಾರ್ಥಿ ಎದ್ದು ನಿಂತು

''ನೀಗ್ರೋಗಳ ಮಾರಣಹೋಮವಾಗುತ್ತಿದೆಯಲ್ಲಾ ಅದಕ್ಕೇನು ಹೇಳುವಿರಿ. ಪೀಕ್‌ಸ್ಕಿಲ್ ಪ್ರಕರಣಕ್ಕೇನು ಹೇಳುವಿರಿ ?''

ಎಂದು ಕೇಳಿದ. ಮೊದಲೇ ಕೆಂಪಗಿದ್ದ ಗಾರ್ಡನರ್ ಮುಖ ಮತ್ತಷ್ಟು ಕೆಂಪಗಾಯಿತು.

**"ಅಮೇರಿಕಾದಲ್ಲಿ ನೀಗ್ರೋಸಮಸ್ಯೆ ಇದೆಯೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಾಮಾಜಿಕ ಕಾರಣಗಳಿಗಾಗಿ ಉಳಿದ ವರ್ಣದವರಿಗೂ ಅವರಿಗೂ ಘರ್ಷಣೆಗಳಾಗುತ್ತವೆ. ಸರ್ಕಾರಕ್ಕೆ ಶಾಂತಿ, ಶಿಸ್ತು ಮುಖ್ಯವೇ ವಿನಾ ವರ್ಗಕಲಹವಲ್ಲ.''**

ಇನ್ನೊಬ್ಬ ವಿದ್ಯಾರ್ಥಿ ಎದ್ದು ನಿಂತು

''ಜಗದ್ವಿಖ್ಯಾತ ಪಾಲ್‌ರೋಬ್ಸನ್ನರಿಗೆ ಅಮೇರಿಕಾ ತೋರಿಸುತ್ತಿರುವ ಗೌರವ ವಿವರಿಸುವಿರಾ ?"

**''ನಮ್ಮ ಗೆಳೆಯರು ಹಾವರ್ಡ್‌ಫಾಸ್ಟ್ ಬರೆದಿರುವ 'ಪೀಕ್‌ಸ್ಕಿಲ್ ಯು. ಎಸ್. ಎ. (Peekskill U. S A.) ಗ್ರಂಥವನ್ನೋದಿ ಈ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಅಮೇರಿಕಾದಿಂದ ಸಾವಿರಾರು ಮೈಲಿ ದೂರದಲ್ಲಿರುವ ನಿಮಗ**

**ಅದರ ಪರಿಸ್ಥಿತಿ ಗೊತ್ತಿಲ್ಲ. ಪಾಲ್ ರೋಬ್ಸನ್, ಹೌವರ್ಡ್ ಫಾಸ್ಟ್ ಇಬ್ಬರೂ ಅಮೇರಿಕಾ ವಿರುದ್ಧ ಚಳುವಳಿ (Un-American activities) ಮಾಡು ವುದರಲ್ಲಿ ನಿಸ್ಸೀಮರು. ಹೊರಗಿನವರನ್ನು ಮೆಚ್ಚಿಸುವುದಕ್ಕೆ ಅವರು ಸ್ವದೇಶಕ್ಕೇ ದ್ರೋಹಬಗೆಯಲು ಹಿಂದೆಗೆದಿಲ್ಲ.''**

ಸಭೆಯಲ್ಲಿ ಗೊಂದಲವೆದ್ದಿತು. ನಾಲ್ಕು ಮೂಲೆಯಿಂದ 'ಷೇಮ್ - ನಿಮ್ಮ ಮಾತು ಹಿಂದಕ್ಕೆ ತೆಗೆದುಕೊಳ್ಳಿ - ಕ್ಷಮೆ ಕೇಳಿಕೊಳ್ಳಿ' ಮೊದಲಾದ ಉದ್ಗಾರಗಳೆದ್ದವು. ರಾಲ್ಫ್ ಅವರಿಗೆ ದೇಹಾದ್ಯಂತ ಬೆವರೊಡೆಯಿತು. ಅವರು ಭಾಷಣ ಮುಂದುವರಿಸಲು ಸಭಿಕರು ಅವಕಾಶಕೊಡಲಿಲ್ಲ. ರಾಲ್ಫ್ ಬಾಯಿ ತೆಗೆದೊಡನೆಯೇ ಒಂದೇ ಸಮನೆ ಚಪ್ಪಾಳೆ ಬಡಿಯುತ್ತಿದ್ದರು. ರಾಲ್ಫ್ ಬೇಸತ್ತು ಕುಳಿತುಬಿಟ್ಟರು

ಅಧ್ಯಕ್ಷ ಸುಂದರರಾಯರು ಎದ್ದುನಿಂತು

**"ನಿಮ್ಮ ವರ್ತನೆ ಕಂಡು ನನಗೆ ತುಂಬ ವ್ಯಸನವಾಗುತ್ತಿದೆ. ಇಲ್ಲಿ ಬಂದಿರುವ ಈ ಮಹನೀಯರು ನಮ್ಮ ಅತಿಥಿಗಳು. ನಿಮ್ಮ ಯೂನಿಯನ್ ಕಾರ್ಯದರ್ಶಿ ಗಳು ಅವರಿಗೆ ಆಮಂತ್ರಣವಿತ್ತಿದ್ದಾರೆ. ಅತಿಥಿಗಳನ್ನು ಅಪಮಾನಮಾಡುವುದು ನಮ್ಮ ಸಂಸ್ಕೃತಿಗೇ ವಿರುದ್ಧವಾದುದು. ಅತಿಥಿಗಳ ಅಭಿಪ್ರಾಯಗಳು ನಿಮಗೆ ಒಪ್ಪಿಗೆಯಾಗದಿರಬಹುದು. ಆದರೆ ಅವುಗಳನ್ನು ಕೇಳುವ ತಾಳ್ಮೆ ತೋರಿಸಿ. ನಿಮಗೆ ಸಂಶಯಗಳಿದ್ದರೆ ಅವರ ಭಾಷಣವಾದ ಮೇಲೆ ಪ್ರಶ್ನೆ ಕೇಳಬಹುದು.''**

ಎಂದು ಹೇಳಿ ಭಾಷಣ ಮಾಡಬೇಕೆಂದು ಬುಚ್ ಅವರನ್ನು ಪ್ರಾರ್ಥಿಸಿ ದರು. ಭಾರತಕ್ಕೂ ಅಮೇರಿಕಾಕ್ಕೂ ಬೆಳೆಯುತ್ತಿದ್ದ ಮೈತ್ರಿಯನ್ನು ಬುಚ್ ವಿವರಿಸಿ, ಮಾನ್ಯ ಜವಹರಲಾಲರು ಅಮೇರೀಕೆಗೆ ಹೋಗಿದ್ದಾಗ ಅವರಿಗೆ ಅಮೇರಿಕನ್ ಸರ್ಕಾರ, ಜನತೆ ತೋರಿಸಿದ ಅಪೂರ್ವ ಗೌರವವನ್ನು ಕುರಿತು ಪ್ರಸ್ತಾಪಿಸಿದರು.

**"ಜಗತ್ತಿನಲ್ಲಿ ಶಾಂತಿ ಸ್ಥಾಪಿಸಬೇಕೆನ್ನುವುದೇ ಅಮೇರಿಕಾದ ಮೂಲ ಉದ್ದೇಶ. ಅಮೇರಿಕಾ ಗಳಿಸಿರುವ ಅಪಾರ ಸಂಪತ್ತನ್ನು ತನ್ನಲ್ಲಿಯೇ ಇಟ್ಟು ಕೊಳ್ಳದೆ ಹಿಂದುಳಿದ ಎಲ್ಲ ರಾಷ್ಟ್ರಗಳಿಗೂ ಹಂಚಬೇಕೆಂದು ಅದು ಸಂಕಲ್ಪಿಸಿ ಕೊಂಡಿದೆ. ಈಗಾಗಲೇ ಭಾರತಕ್ಕೆ, ಪಾಕಿಸ್ಥಾನಕ್ಕೆ ಅಮೇರಿಕಾ ಕೊಟ್ಟಿರುವ ಸಹಾಯ ಕುರಿತು ನಾನು ಪ್ರಸ್ತಾಪಿಸಬೇಕಾಗಿಲ್ಲ''**

ಸಭೆಯ ನಾಲ್ಕು ಕಡೆಗಳಿಂದ ಪ್ರಶ್ನೆಗಳ ಸುರಿಮಳೆಯಾಯಿತು.

"ನೀವು ಕೊರಿಯಾ ಬಿಟ್ಟೇಕೆ ತೊಲಗುವುದಿಲ್ಲ" ಎಂದು ಒಬ್ಬ ಕೇಳಿದ.

"ಪರ್ಶಿಯಾದಲ್ಲಿ ಶಾಂತಿ ಸ್ಥಾಪಿಸುವುದಕ್ಕೆ ನಿಂತಿರುವಿರಾ?" ಎಂದು ಇನ್ನೊಬ್ಬ ಕೇಳಿದ.

"ಭಾರತಕ್ಕೂ ಪಾಕಿಸ್ಥಾನಕ್ಕೂ ಕಾಶ್ಮೀರದ ವಿಷಯದಲ್ಲಿ ಕಲಹ ತಂದಿಕ್ಕಿರುವವರು ಯಾರು"

ಎಂದು ಮಗದೊಬ್ಬ ಕೇಳಿದ. ರಾಲ್ಫನಂತೆ ಬುಚ್ ಅಧೀರನಾಗಲಿಲ್ಲ.

**"ನಿಮ್ಮ ಪ್ರಶ್ನೆಗಳಿಗೆಲ್ಲಾ ನಾನು ಉತ್ತರಕೊಡಬಲ್ಲೆ. ಆದರೆ ಇದು ಕಾಲೇಜ್ ಯೂನಿಯನ್. ಇಲ್ಲಿ ರಾಜಕೀಯ ವಿಷಯಗಳನ್ನು ಪ್ರಸ್ತಾಪಿಸುವುದು ಉಚಿತವಾಗಲಾರದು."**

ಎಂದರು. ಸಭಿಕರು ಭಾಷಣ ಮುಂದುವರಿಸಲು ಅವರಿಗೂ ಅವಕಾಶ ಕೊಡಲಿಲ್ಲ. ಶಾಂತಿಸ್ಥಾಪನೆ ಮಾಡಲೆತ್ನಿಸಿದ ಅಧ್ಯಕ್ಷರ ಪ್ರಯತ್ನ ವಿಫಲವಾಯಿತು. ಬುಚ್ ಕುಳಿತ ಮೇಲೆ ಸಭಿಕರು ಶಾಂತರಾದರು.

ಚಂದ್ರಶೇಖರನ ಕೈಕಾಲುಗಳು ನಡುಗಲಾರಂಭಿಸಿದವು. 'ಭಾಷಣ ಮಾಡದಿದ್ದರೆ ಸಭಿಕರು ತನ್ನನ್ನು ಹೇಡಿ ಎಂದು ಭಾವಿಸುತ್ತಾರೆ. ಅವರಿಗಿಂತ ಹೆಚ್ಚಾಗಿ ಸುನಂದ, ಸುಂದರ ತನ್ನನ್ನು ದುರ್ಬಲನೆಂದು ತಿಳಿಯುತ್ತಾರೆ. ಇಂಥ ಸಮಯದಲ್ಲಿ ಭಾಷಣಮಾಡಲು ಹಿಂದೆಗೆದನೆಂದು ಅಮೇರಿಕಾಗೆ ಸುದ್ದಿ ರಾಲ್ಫ್, ಬುಚ್ ಇವರ ಮೂಲಕ ಮುಟ್ಟಿದರೆ ತನ್ನ ಭವಿಷ್ಯವೇ ಹಾಳಾಗುತ್ತದೆ. ಏನು ಮಾಡಲಿ' ಎಂದವನು ಯೋಚಿಸುತ್ತಿರುವಂತೆ ಅಧ್ಯಕ್ಷರು ಅವನ ಹೆಸರು ಹೇಳಿದರು. ಚಂದ್ರಶೇಖರ ಎದ್ದು ನಿಲ್ಲಲೇಬೇಕಾಯಿತು.

**"ಈ ನಮ್ಮ ದೇಶ ಸಹಸ್ರಾರು ವರ್ಷಗಳಿಂದ ಅತಿಥಿಸತ್ಕಾರಕ್ಕೆ ಪ್ರಸಿದ್ಧವಾದುದು. ನಮ್ಮ ಮೇಲೆ ಆಕ್ರಮಣ ಮಾಡಿ ನಮ್ಮ ದೇಶದ ಸಂಪತ್ತನ್ನು ಕೊಳ್ಳೆಹೊಡೆಯಲು ಬಂದ ಗ್ರೀಕರು, ಹೂಣರು, ತುರುಕರು, ಮೊಘಲರು ಮೊದಲಾದವರನ್ನೇ ನಾವು ನಿರಾಕರಿಸಲಿಲ್ಲ."**

ಸಭಿಕರಲ್ಲಿ ಒಬ್ಬನೆಂದ

"ಹೌದು. ಅದಕ್ಕೆ ನಾವು ಸಹಸ್ರಾರು ವರ್ಷಗಳ ದಾಸ್ಯದಲ್ಲಿ ಕೊಳೆಯಬೇಕಾಯಿತು."

"ಈಗ ದಾಸ್ಯವಿಲ್ಲವಲ್ಲ. ನಾವು ಸ್ವತಂತ್ರರಾಗಿದ್ದೇವೆ. ಈಗ ನಾವು ಹೊರಗಿನವರಿಗೆ ಹೆದರಬೇಕಾಗಿಲ್ಲ. ಹಾಗೆ ಹೆದರುವುದು ದಾಸ್ಯದ ಚಿನ್ಹೆ. ನಮ್ಮ ಅಸ್ತಿತ್ವ ಗಟ್ಟಿಯಾಗಿರುವವರೆಗೆ ನಾವು ಇತರರ ಅಭಿಪ್ರಾಯಗಳಿಗ-ಭಾವನೆಗಳಿಗೆ ಭಯಪಡಬೇಕಾಗಿಲ್ಲ. ೧೮೯೩ ರಲ್ಲಿ ನಮ್ಮ ನಾಡಿನ ಮಹಾ ಪುರುಷರಾದ ಸ್ವಾಮಿ ವಿವೇಕಾನಂದರು ಅಮೇರಿಕೆಗೆ ಹೋದಾಗ ಅಲ್ಲಿನ ಜನ ಅವರಿಗೆ ನೀಡಿದ ಸ್ವಾಗತ, ತೋರಿದ ಆದರವನ್ನು ನೀವು ಸ್ಮರಿಸಿಕೊಳ್ಳಬೇಕು. ಅಮೇರಿಕದ ರಾಜಕಾರಣಿಗಳ ಬಗ್ಗೆಯೂ ರಾಜಕಾರಣದ ಬಗ್ಗೆಯೂ ನಮಗೆ ಅಸಮಾಧಾನವಿರಬಹುದು. ಆದರೆ ಅಮೆರಿಕನ್ ಜನತೆ ಭಾರತವನ್ನು ಪ್ರೀತಿಸುತ್ತಾರೆಂದೂ, ಭಾರತದ ಬಗ್ಗೆ ಗೌರವತಳೆದಿದ್ದಾರೆಂದೂ ಅಲ್ಲಿ ಕೆಲವು ವರ್ಷವಿದ್ದ ನಾನು ನಿಮಗೆ ಆಶ್ವಾಸನ ಕೊಡಬಲ್ಲೆ."

ಸಭಿಕರಲ್ಲಿ ಯಾರೋ 'ಕೇಳಿ - ಕೇಳಿ' ಎಂದರು.

"ನನ್ನೊಂದಿಗೆ ಬಂದಿರುವ ಅಮೆರಿಕನ್ ಮಿತ್ರರು ಸಾಂಸ್ಕೃತಿಕ ರಾಯಭಾರಿಗಳಾಗಿ ಬಂದಿದ್ದಾರೆ. ಅಮೆರಿಕದ ಜನತೆಯ ಪ್ರತಿನಿಧಿಗಳಾಗಿ ಬಂದಿದ್ದಾರೆ. ಭಾರತದ ಜನತೆಗೂ ಅಮೆರಿಕಾದ ಜನತೆಗೂ ಹೆಚ್ಚು ಮೈತ್ರಿ ಕಲ್ಪಿಸಬೇಕೆಂಬುದೇ ಅವರ ಉದ್ದೇಶ. ಅವರು ಭಾಷಣ ಮಾಡುವಾಗ ನಿಮ್ಮಲ್ಲಿ ಯಾರೋ ಕಮ್ಯೂನಿಸ್ಟರು ಸೇರಿಕೊಂಡು ಗಲಭೆ ಮಾಡಿದಿರಿ."

ಸಭೆಯ ಮಧ್ಯದಲ್ಲಿದ್ದ ಒಬ್ಬ ಸಭಿಕ 'ಷೇಮ್' ಎಂದ. ಅವನ ಸುತ್ತ ಮುತ್ತ ಸ್ವಲ್ಪ ಗಲಭೆಯಾಯಿತು. ಗಲಭೆಯಡಗಿದ ಮೇಲೆ ಚಂದ್ರಶೇಖರ

"ಅಮೇರಿಕಾ ಎಲ್ಲಾ ರೀತಿಯಿಂದಲೂ ಮುಂದುವರಿದಿರುವ ದೇಶ. ಆರ್ಥಿಕದೃಷ್ಟಿಯಿಂದ ಬಹಳ ಸಂಪದ್ಭರಿತವಾಗಿರುವ ದೇಶ. ಹಿಂದುಳಿದಿರುವ ರಾಷ್ಟ್ರಗಳಿಗೆ ಸಹಾಯ ಮಾಡಬೇಕೆಂಬ ಸದಿಚ್ಛೆಯಿಂದ ಅಮೇರಿಕಾ ಪ್ರೇರಿತವಾಗಿದೆ. ಅವರ ಸಹಕಾರ, ಸಹಾಯವನ್ನು ನಾವು ಉಪಯೋಗಿಸಿಕೊಂಡು ನಮ್ಮ ರಾಷ್ಟ್ರದ ಪ್ರಗತಿ ಸಾಧಿಸಬೇಕು. ಭಾರತ ಕೂಪಮಂಡೂಕದಂತೆ ತನ್ನಷ್ಟಕ್ಕೇ ಇರಲು ಸಾಧ್ಯವಿಲ್ಲ.

ವಿಶ್ವದ ಎಲ್ಲಾ ದೇಶಗಳಿಗಿಂತ ಅಮೇರಿಕಾದ ಜನರ ಜೀವನದ ಮಟ್ಟ ಮೇಲ್ತರಗತಿಯದು. ಕಾರು, ರೇಡಿಯೋ ಇಲ್ಲದಿರುವ ಮನೆಯೇ ಇಲ್ಲ. ಗೃಹ ಜೀವನಕ್ಕೆ ಅಮೆರಿಕನ್ನರು ತುಂಬ ಬೆಲೆಕೊಡುತ್ತಾರೆ. ಹೆಂಗಸರಿಗೆ ಅಲ್ಲಿ ಸಮಾನ

ಹಕ್ಕುಬಾಧ್ಯತೆಗಳಿವೆ. ಅಮೇರಿಕಾದ ಸ್ತ್ರೀ, ಭಾರತದ ಸ್ತ್ರೀಯಂತೆ ನಿರ್ಜೀವ ವಸ್ತುವಾಗಿಲ್ಲ. ವಿಜ್ಞಾನ, ರಾಜಕಾರಣ, ಸಾಹಿತ್ಯ, ಕಲೆ ಎಲ್ಲದರಲ್ಲಿಯೂ ಅಮೇರಿಕಾದ ಸ್ತ್ರೀಯರು ದೊಡ್ಡ ಸ್ಥಾನ ಗಳಿಸಿಕೊಂಡಿದ್ದಾರೆ.''

ಸಭಿಕರಲ್ಲಿ ಒಬ್ಬ 'ಅಮೇರಿಕಾದ ದಾಂಪತ್ಯವಿಚ್ಛೇದನದ (Divorce) ಬಗ್ಗೆ ಸ್ವಲ್ಪ ಹೇಳಿ' ಎಂದ.

''ಅಮೇರಿಕಾದಲ್ಲಿ ದಾಂಪತ್ಯವಿಚ್ಛೇದನ ಹೆಚ್ಚಾಗಿದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಇದರ ಮೂಲಕಾರಣ ನಮ್ಮ ಕಣ್ಣಮುಂದೆಯೇ ನಡೆದಿರುವ ಎರಡು ಮಹಾಯುದ್ಧಗಳು. ಅವರ ಜೀವನಕ್ರಮವನ್ನು ನಮ್ಮ ಮಾನದಂಡದಿಂದ ಅಳೆಯುವುದು ಸರಿಯಲ್ಲ.''

ಸಭಿಕರಲ್ಲೊಬ್ಬ 'ಮಿಸ್ ಮೇಯೋ, ಬುಲ್ಲಿಟ್, ಹ್ಯಾಮಿಲ್ಟನ್ ಅಳೆಯಬಹುದೋ' ಎಂದು ಕೇಳಿದ.

"ಅವರ ಅಪಪ್ರಚಾರವನ್ನು ಅಮೇರಿಕಾದ ಪ್ರತಿಷ್ಠಿತ ವ್ಯಕ್ತಿಗಳೇ ಖಂಡಿಸಿದ್ದಾರೆ. ಅವರು ತಪ್ಪು ಮಾಡಿದರೆಂದು ನಾವೂ ತಪ್ಪು ಮಾಡುವುದು ನ್ಯಾಯವೇ? ಮಿಸ್ ಮೇಯೋ ಭಾರತೀಯ ಸ್ತ್ರೀಯರ ಅವಹೇಳನ ಮಾಡಿದಳೆಂದು ಕನ್ಹಯ್ಯಲಾಲ್ ಘಾಬಾ ಅಮೇರಿಕಾದ ಸ್ತ್ರೀಯರ ಅವಹೇಳನ ಮಾಡಿದರು. ಇಂಥ ವಾದ, ಪ್ರತಿವಾದದಿಂದ ಏನು ಸಾರ್ಥಕ? ನಮ್ಮನ್ನು ಅಯೋಗ್ಯರೆಂದು ಕರೆದವರನ್ನು ನಾವು ಅಯೋಗ್ಯರೆಂದು ಕರೆದು ತೃಪ್ತರಾಗುವುದಕ್ಕಿಂತ, ನಮ್ಮ ಯೋಗ್ಯತೆಯನ್ನು ಸ್ಥಾಪಿಸುವುದು ಒಳ್ಳೆಯದಲ್ಲವೇ?

ವಿಶ್ವದಲ್ಲಿಂದು ಹಿರಿಯಸ್ಥಾನ ಗಳಿಸಿಕೊಂಡಿರುವ ಅಮೇರಿಕೆಯಿಂದ ನಾವು ಕಲಿಯಬೇಕಾದುದು ಬಹಳವಾಗಿದೆ. ವಾಷಿಂಗ್‌ಟನ್, ಅಬ್ರಹಾಂ ಲಿಂಕನ್, ಥಾಮಸ್ ಜಫರ್‌ಸನ್ ಅಮೇರಿಕೆಗಷ್ಟೇ ಅಲ್ಲ - ಜಗತ್ತಿಗೆ ಪೂಜ್ಯರಾಗಿದ್ದಾರೆ. ಅವರ ದಾರಿಯಲ್ಲಿ ಮುನ್ನಡೆದ ಅಮೇರಿಕಾ ವಿಶ್ವರಾಷ್ಟ್ರಗಳಲ್ಲಿ ಗಣ್ಯಸ್ಥಾನ ಗಳಿಸಿರುವಂತೆ ಭಾರತವೂ ಗಳಿಸಬೇಕೆಂದು ನನ್ನ ಆಕಾಂಕ್ಷೆ.''

ಸಭಾ ಮಂದಿರದಲ್ಲಿ ಮತ್ತೆ ಗೊಂದಲವೆದ್ದಿತು. ಎಲ್ಲಾ ಕಡೆಗಳಿಂದಲೂ ಪ್ರಶ್ನೆಗಳು ಸತತವಾಗಿ ಬಾಣಗಳಂತೆ ಬಂದುಬಿದ್ದವು.

"ಅಮೇರಿಕಾದಿಂದ ಭಾರತ ಕಲಿಯಬೇಕಾದುದು ಬಹಳವಿದೆಯೆಂದಿರಲ್ಲ. ಭಾರತದಿಂದ ಅಮೇರಿಕ ಕಲಿಯಬೇಕಾದುದು ಏನೂ ಇಲ್ಲವೋ?"

"ಭಾರತೀಯರಾಗಿ ನೀವು ಅಮೇರಿಕಾ ಪ್ರಚಾರ ಮಾಡುವುದಕ್ಕೆ ಏಕೆ ಬಂದಿರಿ ?"

"ಅಮೇರಿಕಾ ಪ್ರಚಾರ ಮಾಡುವುದಕ್ಕೆ ನಿಮಗೆ ಅಮೇರಿಕಾ ಏನು ಕೊಡುತ್ತಿದೆ ?"

"ಹ್ಯಾಮಿಲ್ಟನ್ ಬರೆದ ಅಯೋಗ್ಯ ಲೇಖನವನ್ನು ನೀವೇಕೆ ಸಮರ್ಥಿಸಿದಿರಿ ?"

ಚಂದ್ರಶೇಖರ ಅವುಗಳಿಗೆ ಉತ್ತರ ಕೊಡಬೇಕೆಂದು ಪ್ರಯತ್ನಿಸಿದ. ಪರಿಸ್ಥಿತಿ ವಿಕೋಪಕ್ಕೆ ಹೋಗುವುದೆಂದರಿತು ಸುಂದರರಾಯರು ಅವನನ್ನು ತಡೆದರು.

ಅಧ್ಯಕ್ಷರು ಮುಕ್ತಾಯ ಭಾಷಣ ಮಾಡುವುದಕ್ಕೆ ನಿಂತರೂ ಜನತೆಯಲ್ಲಿ ಶಾಂತಿ ಮೂಡಲಿಲ್ಲ. ಸುಂದರರಾಯರು ಕೈಯಲ್ಲಿ ಮೈಕ್ ಹಿಡಿದು ಗಟ್ಟಿಯಾಗಿ

"ನಾನು ಮಾತನಾಡಲೋ ಬೇಡವೋ ಹೇಳಿಬಿಡಿ" ಎಂದರು.

ಸಭಿಕರು ಶಾಂತರಾದರು. ಸುಂದರರಾಯರು ಮಾತು ಆರಂಭಿಸಿದ ಒಂದೆರಡು ನಿಮಿಷಗಳಲ್ಲಿ ಸಭೆಯಲ್ಲಿ ಸೂಜಿಬಿದ್ದ ಶಬ್ದ ಕೇಳುವಷ್ಟು ನಿಶ್ಶಬ್ದತೆ ವ್ಯಾಪಿಸಿತು.

"ಈ ದಿನದ ನಡೆವಳಿಕೆ ನಮ್ಮ ನಗರಕ್ಕಾಗಲಿ, ನಮ್ಮ ಕಾಲೇಜಿಗಾಗಲಿ, ನಮ್ಮ ಯೂನಿವರ್ಸಿಟಿಗಾಗಲಿ ಕೀರ್ತಿ ತರುವುದೆಂದು ಹೇಳಲಾರೆ. ಅಭಿಪ್ರಾಯ ಭೇದಗಳಿದ್ದರೂ, ಇತರರ ವಾಕ್ – ಸ್ವಾತಂತ್ರ್ಯಕ್ಕೆ ಭಂಗ ತರುವುದು ನಾಗರಿಕತೆಯ ಲಕ್ಷಣವಲ್ಲ. ಅತಿಥಿಗಳ ಬಗ್ಗೆ ಅನಾದರ ತೋರಿಸುವುದಂತೂ ಅಕ್ಷಮ್ಯ. ಇನ್ನು ಮುಂದಾದರೂ ಇಂಥ ನಡೆವಳಿಕೆ ನಿಮ್ಮಿಂದ ತೋರಿಬರದೆ ಇರಲಿ ಎಂದು ಹಾರೈಸುತ್ತೇನೆ.

ಅಮೇರಿಕಾಕ್ಕೂ ಭಾರತಕ್ಕೂ ನಿಕಟಸಂಬಂಧ ಬೆಳೆಯಬೇಕೆಂಬುದೂ, ಹಾಗೇ ಭಾರತಕ್ಕೂ ಇತರ ರಾಷ್ಟ್ರಗಳಿಗೂ ಮಧುರಸಂಬಂಧ ಬೆಳೆಯಬೇಕೆಂಬುದೂ ನಿರ್ವಿವಾದ. ಭಾರತ ಸರ್ಕಾರ ತನ್ನ ಎಂಬಾಸಿಗಳ (Embassy) ಮೂಲಕ ಈ ಕೆಲಸ ಸಾಧಿಸಲು ಪ್ರಯತ್ನಿಸುತ್ತಿದೆ.

ಒಂದು ರಾಷ್ಟ್ರದ ಜೀವನ ರೀತಿ ನೀತಿ ಇನ್ನೊಂದು ರಾಷ್ಟ್ರಕ್ಕೆ ಸರಿಹೋಗುತ್ತದೆ ಎಂದು ತಿಳಿಯಲು ಸಾಧ್ಯವಿಲ್ಲ. ಅಮೇರಿಕಾದಲ್ಲಿ ದಾಂಪತ್ಯವಿಚ್ಛೇದನ

ಸುನಂದ ಅತ್ತುಕೊಂಡು ಒಳಕ್ಕೆ ಹೋದಳು.

ಮಾರನೆಯ ದಿನ ಮಧ್ಯಾಹ್ನ ಚಂದ್ರಶೇಖರ ಬಂದು ತಂಗಿಯನ್ನು ಡ್ರೈವ್ ಕರೆದುಕೊಂಡ. ಗಂಡ ಮಾಡಿದ ಅವಿವೇಕಕ್ಕೆ ಅವಳು ಅವನ ಕ್ಷಮೆ ಬೇಡಿದಳು

"ನಾವು ನಾಳೆ ಹೊರಡುತ್ತೇನೆ ಸುನಂದಾ."

"ಎಲ್ಲಿಗೆ?"

"ಮುಂಬಯಿಗೆ ಹೋಗಿ ಅಲ್ಲಿಂದ ದೆಹಲಿಗೆ ಹೋಗುತ್ತೇವೆ."

"ಇಂಡಿಯಾ ಬಿಡುವ ಮುನ್ನ ಇಲ್ಲಿಗೆ ಬಂದು ಹೋಗುವೆಯಾ ?"

"ನೋಡುತ್ತೇನೆ. ಸಾಧ್ಯವಾದರೆ ಬರುತ್ತೇನೆ."

"ಅವರನ್ನು ಕಾಣುವುದಿಲ್ಲವೇ ?"

"ನನ್ನ ಬಗ್ಗೆ ಅವರ ಅಭಿಪ್ರಾಯ ತಿಳಿದಂತಾಯಿತಲ್ಲ."

"ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಡಣ್ಣಾ."

"ಇಲ್ಲಮ್ಮ."

"ಕಾಗದ ಬರೆಯುತ್ತಿರುತ್ತೀಯಾ ?"

"ನಿನಗೆ ಖಂಡಿತ ಕಾಗದ ಬರೆಯುತ್ತೇನೆ"

"ತಪ್ಪದೆ ಅಮ್ಮನಿಗೂ ಬರೆಯುತ್ತಿರು."

"ಹಾಗೇ ಆಗಲಿ."

"ನಿನ್ನ ಹೆಂಡತಿಯನ್ನು ಇನ್ನೊಮ್ಮೆ ಬರುವಾಗ ಕರೆದುಕೊಂಡು ಬರುವೆಯಾ ?"

"ಖಂಡಿತವಾಗಿ - ಇಂಡಿಯಾ ನೋಡಬೇಕೆಂದು ಆಕೆಯೂ ಆಸೆಪಡುತ್ತಿದ್ದಾಳೆ."

ಅಣ್ಣಾ ಹೊರಟುಹೋಗುವ ವಿಷಯ ಕೇಳಿ ಸುನಂದೆಯ ಮನಸ್ಸು ದುಃಖಕ್ಕೀಡಾಯಿತು. ಅವಳನ್ನು ಸಂತೈಸಿ ಚಂದ್ರಶೇಖರ ಮನೆಗೆ ಕರೆತಂದುಬಿಟ್ಟ.

ಮಾರನೆಯ ದಿನ ಚಂದ್ರಶೇಖರ, ಅವನ ಅಮೆರಿಕನ್ ಮಿತ್ರರು ಪ್ರಯಾಣ ಬೆಳಸಿದರು. ಅವರನ್ನು ಬೀಳ್ಕೊಡುವುದಕ್ಕೆ ರಾಘವಯ್ಯ ಬಂದಿದ್ದ. ಅಮೇರಿಕಾದ ಜನಜೀವನದ ಮೇಲೆ 'ಯುಗವಾಣಿ'ಗೆ ವಿಶೇಷ ಲೇಖನಗಳನ್ನು

ಬರೆದುಕೊಡಬೇಕೆಂದು ರಾಘವಯ್ಯ ಪ್ರಾರ್ಥಿಸಿದ. ಗಾರ್ಡನರ್ ಮಾತು ತೆಗೆದುಹಾಕಲಾರದೆ ಚಂದ್ರಶೇಖರ ಒಪ್ಪಿಕೊಂಡ.

ಅಂದಿನ 'ಯುಗವಾಣಿ' ಪತ್ರಿಕೆಯಲ್ಲಿ ಯೂನಿಯನ್‌ನಲ್ಲಿ ನಡೆದ ಭಾಷಣಗಳ ವರದಿಗಳು ಪ್ರಕಟವಾಗಿದ್ದುದಲ್ಲದೆ, ಸಂಪಾದಕೀಯ ಲೇಖನವಲ್ಲಿ ಅಧ್ಯಕ್ಷರ ಭಾಷಣದ ಮೇಲೆ ಕಟುಟೀಕೆ ಒಂದಿತ್ತು. ರಾಜಕೀಯ ವಿಚಾರ ಗಳನ್ನು ಪ್ರಸ್ತಾಪಿಸಿದ್ದ ಸುಂದರರಾಯರ ಮೇಲೆ ವಿಶ್ವವಿದ್ಯಾನಿಲಯ ಕ್ರಮ ತೆಗೆದುಕೊಳ್ಳಬೇಕೆಂದು ಮಾಸ್ಯ ಸಂಪಾದಕರು ಸೂಚಿಸಿದ್ದರು.

೧೭

ಒಂದು ದಿನ ಸಂಜೀವ, ಪುಷ್ಪನ ಮನೆಗೆ ಹೋಗಿ ಕುಳಿತ ಕೂಡಲೆ ಅವಳು ಕುಣಿದು ಕುಪ್ಪಳಿಸುತ್ತ ಅವನ ಬಳಿಗೆ ಬಂದಳು. ಅವಳ ಕೈಗಳನ್ನು ಹಿಡಿದು ಕೇಳಿದ

"ಇದೇನು ಡಾರ್ಲಿಂಗ್ - ಇವತ್ತು ಇಷ್ಟು ಹರ್ಷಚಿತ್ತಳಾಗಿದ್ದೀ ? "

"ಹೇಳಿ ನೋಡೋಣ"

"ನನಗೆ ಜೋತಿಷ್ಯ ಬಾರದಿಲ್ಲ"

"ಡ್ಯಾಡಿ (Daddy) ಊರಿಗೆ ಬಂದರು"

"ಅವಕ್ಕೋ ಇಷ್ಟು ಸಂತೋಷ."

"ಅವಕ್ಕೂ ಹೌದು - ಇನ್ನೂ ಒಂದು ಕಾರಣಕ್ಕೆ . . . ಏನಿರಬಹುದು ಊಹಿಸಿ."

"ನನಗೆ ಜೋತಿಷ್ಯ ಬರುವುದಿಲ್ಲವೆಂದು ಹೇಳಿದೆನಲ್ಲ."

"ಇನ್ನು ನಾವು ಬೇಕಾದಾಗ ಬೆಂಗಳೂರಿಗೆ ಹೋಗಬಹುದು. ಯಾವಾಗ ಹೊರಡೋಣ."

"ನಾಳೆಯೇ ಹೊರಡೋಣ. ಮಧ್ಯಾಹ್ನದ ಗಾಡೀಗೆ."

"ಆಗಬಹುದು. ನಮ್ಮ ಎಂಗೇಜ್‌ಮೆಂಟ್ (Engagement) ವಿಷಯ ನಿನ್ನ ಡ್ಯಾಡೀಗೆ ಹೇಳಿದೆಯಾ ? ಅವರು ಏನಂದರು ? "

"ಹೇಳಿದೆ. ಸಂತೋಷಪಟ್ಟರು. ನಿಮ್ಮನ್ನು ಕಾಣಲು ಉತ್ಸುಕರಾಗಿ ದ್ದಾರೆ. ಬನ್ನಿ ಅವರ ಪರಿಚಯ ಮಾಡಿಸುತ್ತೇನೆ,"

ಎಂದು ತಂದೆಯ ರೂಮಿಗೆ ಸಂಜೀವನನ್ನು ಕರೆದೊಯ್ದಳು.

ಜಾನ್ ಅಪ್ಪಾಜಿಯ ರೂಮ್ ನೋಡಿ ಸಂಜೀವನಿಗೆ ಗಾಬರಿಯೇ ಆಯಿತು. ಎತ್ತ ನೋಡಿದರೂ ಸುಟ್ಟ ಸಿಗರೇಟ್, ಬೀಡಿ ತುಂಡುಗಳು. ಗೋಡೆಯ ಪಕ್ಕದಲ್ಲಿ ಒಂದು ಮೇಜು. ಅದಕ್ಕೊಂದು ಕಾಲು ಊನವಾಗಿದ್ದುದರಿಂದ ಗೋಡೆಯನ್ನು ಆಶ್ರಯಿಸಿ ನಿಂತಿತ್ತು. ಅದರ ಪಕ್ಕದಲ್ಲಿ ಹರಿದು ಜೋತು ಬಿದ್ದಿದ್ದ ಬೆತ್ತದ ಕುರ್ಚಿ. ಒಂದು ಮೂಲೆಯಲ್ಲಿ ಮಣಕುಗಟ್ಟಿದ ಕ್ಯಾನ್‌ವ್ಯಾಸ್ ಧರಿಸಿದ್ದ ಒಂದು ಆರಾಮಾಸನ. ತುಂಬಿದ್ದ ಎರಡು ಬೀರ್ ಶೀಷೆಗಳು - ಒಂದು ಗ್ಲಾಸು - ಒಂದು ಬಿರಟೆ ತೆಗೆಯುವ ಆಯುಧ ಮೇಜಿನ ಮೇಲಿದ್ದವು. ರೂಮಿನ ಮತ್ತೊಂದೆಡೆಯಲ್ಲಿ ಒಂದು ಕಿರ್ಲೋಸ್ಕರ್ ಕಂಪೆನಿಯ ಕಬ್ಬಿಣದ ಮಂಚ. ಮಂಚದ ಸ್ಪ್ರಿಂಗುಗಳು ಹೋಗಿದ್ದು ಹಲಗೆ ಹಾಕಲ್ಪಟ್ಟಿತು. ಅದರ ಮೇಲೆ ಒಂದು ಕೊಳಕು ಹಾಸಿಗೆ. ಹಾಸಿಗೆಯ ಮೇಲಿದ್ದ ಕೊಳಕು ಬೆಡ್‌ಸ್ಪ್ರೆಡ್ ಒಂದೆಡೆ ಮುದುರಿಕೊಂಡು ಬಿದ್ದಿತ್ತು. ಅದೇ ಅವಸ್ಥೆ ಇನ್ನೊಂದೆಡೆಯಲ್ಲಿ ರಗ್ಗಿಗಾಗಿತ್ತು.

ಮಂಚದ ಕೆಳಗೆ ಖಾಲಿಯಾದ ಬೀರ್ ಶೀಷೆಗಳು ಜಿಮ್‌ನ್ಯಾಷಿಯಮ್ಮಿನ (Gymnasium) ಡಂಬ್ - ಬೆಲ್ (Dumb - bell) ಗಳಂತೆ ಬಿದ್ದಿದ್ದವು.

ಗೋಡೆಯ ಮೇಲೆ ಬಜಾರಿನಲ್ಲಿ ಸಿಕ್ಕುವ 'ಸಿಲುಬೆಗೆ ಹಾಕಿದ ಯೇಸುಸ್ವಾಮಿ'ಯ ಚಿತ್ರ, ವರ್ಜಿನ್ ಮೇರಿಯ ಚಿತ್ರ, ಇ. ಎಲ್. ಎಸ್. ಸೊಸೈಟಿಯ ಕ್ಯಾಲೆಂಡರ್.

ಜಾನ್ ರೂಮಿಗೆ ಬಂದದ್ದು ಸಂಜೀವನಿಗೆ ಜನಪ್ರವೇಶವಿಲ್ಲದ ಹಳೆಯ ದೇವಸ್ಥಾನದ ಗರ್ಭಗುಡಿ ಹೊಕ್ಕಂತಾಯಿತು. ಅದೇ ಘಮಟು ವಾಸನೆ, ಅದೇ ಅಶುದ್ಧ ವಾಯು, ಅದೇ ಅರೆಗತ್ತಲು.

ಪುಷ್ಪ ತಂದೆಯ ಮಂಚದ ಬಳಿಗೆ ಸಂಜೀವನನ್ನು ಕರೆದುಕೊಂಡು ಹೋಗಿ ಪರಸ್ಪರ ಪರಿಚಯ ಮಾಡಿಸಿದಳು. ಜಾನ್ ಕುಳಿತಲ್ಲಿಂದಲ್ಲೇ ಸಂಜೀವನಿಗೆ ನಮಸ್ಕಾರ ಮಾಡಿದ. ಸಂಜೀವ ಮಾತನಾಡದೆ ಬೆತ್ತದ ಕುರ್ಚಿಯನ್ನೆಳೆದುಕೊಂಡು ಅದರ ಅಂಚಿನಲ್ಲಿ ಕುಳಿತ.

"ನಿಮ್ಮ ನಿಶ್ಚಿತಾರ್ಥದ ವಿಷಯ ಪುಷ್ಪ - ಗರ್ಲ್ (Pushpa girl)

ಹೇಳಿದಳು. ತುಂಬ ಸಂತೋಷ. ನಿಮ್ಮಿಬ್ಬರಿಗೂ ದೇವರು ಒಳ್ಳೆಯದು ಮಾಡಲಿ."

"ಡ್ಯಾಡಿ - ನಾವಿಬ್ಬರೂ ನಾಳೆ ಬೆಂಗಳೂರಿಗೆ ಹೋಗಬೇಕೆಂದಿದ್ದೇವೆ."

"ಸಂತೋಷ - ಹೋಗಿ ಬನ್ನಿ. ಜ್ಯಾಡಿ ಮನೆಗೆ ಹೋಗಿ ಬನ್ನಿ."

ಸಂಜೀವ ಎದ್ದು ನಿಂತು ಕೈಮುಗಿದ. ಪುಷ್ಪ ಅವನನ್ನು ಕರೆದುಕೊಂಡು ತನ್ನ ರೂಮಿಗೆ ಬಂದು

"ಏಕೆ - ಡ್ಯಾಡಿಯ ಜತೆ ನೀವು ಮಾತನಾಡಲೇ ಇಲ್ಲ."

"ಹೊಸ ಪರಿಚಯದವರೊಂದಿಗೆ ಮಾತನಾಡುವುದು ನನಗೆ ಸ್ವಲ್ಪ ಕಷ್ಟ. ಅಲ್ಲದೆ ಅವರು ಸ್ವಲ್ಪ ಔಷಧ ಸೇವಿಸಿದಂತಿತ್ತು."

"ಹೌದು - ಅದೇ ಒಂದು ಅವರಲ್ಲಿರುವ ಕುಂದು. ನಿಮಗೆ ಬೇಸರ ವಾಯಿತೇ ?"

"ಅವರ ಅಭ್ಯಾಸದ ಬಗ್ಗೆ ಟೀಕೆ ಮಾಡಲು ನಾನು ಯಾರು ? ಅವರು ರೂಮ್ ನೋಡಿ ಬೇಸರವಾಯಿತು."

"ಹಾಗೇ ಇರಬೇಕಂತೆ. ರೂಮ್ ಸ್ವಚ್ಛ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ."

"ನಮ್ಮಲ್ಲಿ ಅವಧೂತರು ಹೀಗಿರುತ್ತಾರೆಂದು ಕೇಳಿದ್ದೇನೆ . . . ನಾಳೆ ಹೊರಡುವ ವಿಷಯ ನಿಮ್ಮ ತಾಯಿಗೆ ಹೇಳಿದ್ದೀಯಾ ?"

"ಇಲ್ಲ. ಅವರು ಮನೆಗೆ ಬರಲಿ, ಹೇಳುತ್ತೇನೆ."

"ಎಲ್ಲಿಗೆ ಹೋಗಿದ್ದಾರೆ."

"ಅವರ ಡಿಯರ್‌ಫ್ರೆಂಡ್ ಕನಕಮ್ಮನವರ ಮನೆಗೆ."

"ಅವರು ಯಾರು - ನಾನು ನೋಡಿಯೇ ಇಲ್ಲವೇ ?"

"ಇಲ್ಲಿಗೆ ಎಷ್ಟೋ ಸಲ ಬಂದಿದ್ದಾರೆ. ನೀವು ನೋಡಿಯೂ ಇರ ಬಹುದು - ಮರೆತಿರಬಹುದು."

ಹೆಲನ್ ಅಮ್ಮ ಮನೆಗೆ ಹಿಂದಿರುಗಿದ ಮೇಲೆ ಇಬ್ಬರೂ ಸ್ವಲ್ಪ ಹೊತ್ತು ವಾಂಕಿಂಗ್ ಹೋಗಿ ಬಂದರು.

ಬೆಳಿಗ್ಗೆ ಪುಷ್ಪ ಸಂಜೀವನ ಜತೆಯಲ್ಲಿಯೇ ಒಂಟಿಕೊಪ್ಪಲಿಗೆ ಹೋಗುವು

ದೆಂದೂ, ಅಲ್ಲಿಂದ ನೇರವಾಗಿ ಮಧ್ಯಾಹ್ನದ ರೈಲಿಗೆ ಸ್ಟೇಷನ್ನಿಗೆ ಹೋಗುವುದೆಂದೂ ನಿಶ್ಚಯವಾಯಿತು.

ಮಾರನೆಯ ಮಧ್ಯಾಹ್ನ ಸ್ಟೇಷನ್ ತಲುಪಿದ ಕೂಡಲೆ ಪುಷ್ಪ

"ಡ್ಯಾಡೀಗೆ ತಂತೀ ವರ್ತಮಾನ ಕೊಡಿ - ನಾವು ಬರುವ ವಿಷಯ."

"ಅವರ ಮನೆಯಲ್ಲಿ ಇಳಿದುಕೊಳ್ಳುವುದೇ."

"ಹೂ! ಆಗಬಾರದೇ?"

"ಬೇಡ - ಯಾವದಾದರೂ ಹೊಟೇಲಿನಲ್ಲಿ ಇಳಿದುಕೊಳ್ಳೋಣ. ಅವರ ಮನೆಗೆ ಹೋಗಿ ನೋಡಿಕೊಂಡು ಬಂದರಾಯಿತು."

ಎಂದು ಸಮಾಧಾನ ಹೇಳಿದ.

ಮದ್ದೂರು ಸ್ಟೇಷನ್ನಿನಲ್ಲಿ ಕಾಫಿ ಉಪಾಹಾರವಾಯಿತು. ಚನ್ನಪಟ್ಟಣ ಸ್ಟೇಷನ್ನಿನಲ್ಲಿ ಪುಷ್ಪ ನಾಲ್ಕು ಕುಚ್ಚು ಹೂವು ಕೊಂಡಳು.

ಬೆಂಗಳೂರು ಸ್ಟೇಷನ್ನಿನಲ್ಲಿ ಇಳಿದೊಡನೆಯೇ ಗಾಡಿಯವರು, ಕೂಲಿಯವರು, ಹೊಟೇಲಿನ ಏಜೆಂಟರು ಮುತ್ತಿದರು. ಮಾಡರ್ನ್ ಹಿಂದೂ ಹೊಟೇಲ್ - ಶಾಸ್ತ್ರೀಸ್ ಹೊಟೇಲ್ - ಎವರೆಸ್ಟ್ ಹೋಟೆಲ್ - ಸಿಲ್ವರ್ ಹೊಟೇಲ್ - ಸನ್‌ಷೈನ್ ಹೊಟೇಲ್ ಎಂದು ಏಜಂಟರು ಹೇಳುತ್ತಾ, ಹೊಟೇಲಿನ ಜಾಹೀರಾತುಗಳನ್ನು ಸಂಜೀವನ ಕೈಯಲ್ಲಿ ತುರುಕಿದರು. ಸಂಜೀವ ಪುಷ್ಪನನ್ನು

"ಯಾವ ಹೊಟೇಲಿಗೆ ಹೋಗೋಣ." ಎಂದು ಕೇಳಿದ.

"ಹೊಟೇಲುಗಳ ವಿಷಯ ನನಗೇನು ಗೊತ್ತು."

"ನನಗೂ ಗೊತ್ತಿಲ್ಲ. ಸಿಲ್ವರ್ ಹೊಟೇಲ್ ಎಲ್ಲಿದೆಯಯ್ಯಾ."

"ಶೇಷಾದ್ರಿಪುರದಲ್ಲಿ ಸಾರ್."

"ಸನ್‌ಷೈನ್ ಎಲ್ಲಿದೆ.

"ಗಾಂಧೀನಗರದಲ್ಲಿ."

"ಸಿಲ್ವರ್ ಬಹಳ ದೂರವಾಗುತ್ತದೆ - ಸನ್‌ಷೈನ್‌ಗೇ ಹೋಗೋಣ."

ಪುಷ್ಪ ನಿಟ್ಟುಸಿರುಬಿಟ್ಟಳು.

ಹೊಟೇಲಿನ ಟ್ಯಾಕ್ಸಿಯಲ್ಲಿಯೇ ಇಬ್ಬರೂ 'ಸನ್‌ಷೈನ್' ಸೇರಿದರು. ಮ್ಯಾನೇಜರ್ ಅವರನ್ನು ಮಹಡಿಯ ಮೇಲೆ ಕರೆದೊಯ್ದು ಕಾಮನ್‌ರೂಮ್,

ಸಿಂಗಲ್‌ರೂಮ್, ಡಬ್ಬಲ್ ರೂಮುಗಳನ್ನು ತೋರಿಸಿದ. ಸಂಜೀವ ಒಂದು ಡಬ್ಬಲ್‌ರೂಮ್ ಆರಿಸಿ

"ಅಟ್ಯಾಚ್ಡ್ ಬಾತ್‌ರೂಮ್ (attached bath - room) ಇದೆಯೇ ?"

"ಇದೆ ಸಾರ್. ತಣ್ಣೀರು, ಬಿಸಿನೀರು ಸದಾ ಬರುತ್ತಿರುತ್ತದೆ."

"ಈ ರೂಮ್ ಇರಲಿ. ನಮ್ಮ ಸಾಮಾನು ಮೇಲಕ್ಕೆ ಕಳಿಸಿಕೊಡಿ. ರೂಮಿಗೆಷ್ಟು ಚಾರ್ಜು."

"ದಿವಸಕ್ಕೆ ಆರೂವರೆ ಸಾರ್. ಊಟಕ್ಕೆ ಕೆಳಗೆ ಬರುವಿರೋ - ಇಲ್ಲೇ ಕಳಿಸಿಕೊಡಬೇಕೋ ?"

"ಇಲ್ಲೇ ಕಳಿಸಿಕೊಡಿ - ಅದಕ್ಕೆಷ್ಟು ಚಾರ್ಜು."

"ಒಂದೂಟಕ್ಕೆ ಒಂದೂವರೆ - ಎಕ್ಸ್ಪ್ರೆಸ್ ತೆಗೆದುಕೊಂಡರೆ ಅದಕ್ಕೆ ಬೇರೆ ಚಾರ್ಜು. ಟ್ಯಾಕ್ಸಿ ಇದೆ - ನೀವು ಬೇಕಾದಾಗ ಉಪಯೋಗಿಸಿಕೊಳ್ಳಬಹುದು."

"ಅದಕ್ಕೇನು ಚಾರ್ಜು."

"ಹೆಚ್ಚೇನೂ ಇಲ್ಲ - ಮೀಟರ್ ತೋರಿಸುವ ಚಾರ್ಜಷ್ಟೆ. ಸ್ವಲ್ಪ ಅಡ್ವಾನ್ಸ್ ಕೊಡಬೇಕು."

ಸಂಜೀವ ಒಂದು ನೂರು ರೂಪಾಯಿ ನೋಟು ಮ್ಯಾನೇಜರ ಕೈಯಲ್ಲಿ ಹಾಕಿ

"ಇಟ್ಟುಕೊಂಡಿರಿ. ಬಿಲ್ ಹಾಕಿದ ಮೇಲೆ ಹಣ ಉಳಿದರೆ ಕೊಡುವಿರಂತೆ."

ಎಂದ. ರೂಮಿನ ಅಚ್ಚುಕಟ್ಟು, ಶುಭ್ರತೆ, ಒಪ್ಪ ಓರಣ ಕಂಡು ಪುಷ್ಪನಿಗೆ ಸಂತೋಷವಾಗಿತ್ತು.

"ಹೊಟೇಲ್ ಚೆನ್ನಾಗಿದೆಯೇ ಡಾರ್ಲಿಂಗ್."

"ನೀವು ರಾಜಕುಮಾರರಾಗಿ ಹುಟ್ಟಬೇಕಾಗಿತ್ತು ದೊರೆ. ನಿಮ್ಮ ಅಭಿರುಚಿ ರಾಜೋಚಿತವಾದದ್ದು."

"ರಾಜಕುಮಾರಿ ಕೈಹಿಡಿದಿರುವುದರಿಂದ ನಾನು ರಾಜಕುಮಾರನೇ. ಪ್ರಿನ್ಸ್ - ಕಾನ್‌ಸಾರ್ಟ್ (Prince - Consort)"

"ನಾನೊಂದು ದರಿದ್ರದ್ದು - ನನ್ನನ್ನೇಕೆ ರಾಜಕುಮಾರಿ ಎನ್ನುವಿರಿ ?"

"ಪ್ರೇಮಕ್ಕೆ ಸರಿಹೋಲುವ ಸಂಪತ್ತೇ ಇಲ್ಲ ಸ್ವೀಟ್. ಪ್ರೇಮಕ್ಕಾಗಿ ಡ್ಯೂಕ್ ಆಫ್ ವಿಂಡ್‌ಸರ್ (Duke of Windsor) ಸಮ್ರಾಟಪದವಿಯನ್ನು ಕೂಡ ಬಿಟ್ಟುಬಿಡಲಿಲ್ಲವೇ ?"

"ಲೋಕ ಅಂಥವರನ್ನು ಏನನ್ನುವುದು ಬಲ್ಲಿರಾ ?"

"ಬಲ್ಲೆ - ಹುಚ್ಚ ಎನ್ನುವುದು. ಅಂಥ ಕೆಲವು ಹುಚ್ಚರೇ ಲೋಕವ ಕರಾಳ ಮುಖವನ್ನು ತಿದ್ದಿರುವವರು. ಅವರುಗಳ ಹುಚ್ಚು ನಡೆವಳಿಕೆಯಿಲ್ಲದಿದ್ದರೆ ಲೋಕವೊಂದು ಬರಡುಭೂಮಿ."

"ನಿಜವಾಗಿ ನೀವೂ ಹುಚ್ಚರೇ !"

"ಅಷ್ಟು ಯೋಗ್ಯತೆ ನನಗಿಲ್ಲ ಡಿಯರ್."

ಹೋಟೆಲ್ ಮಾಣಿ ಬಂದು 'ಊಟ ತರಲೇ ಸಾರ್' ಎಂದು ಕೇಳಿದ. ಸಂಜೀವ 'ತೆಗೆದುಕೊಂಡು ಬಾ' ಎಂದು ಹೇಳಿದ. ಊಟ ಬರುವಷ್ಟರಲ್ಲಿ ಪುಷ್ಪ ಮುಖಮಾರ್ಜನೆ ಮಾಡಿಕೊಂಡು, ಸೀರೆ ಬದಲಿಸಿ, ತಲೆಬಾಚಿಕೊಂಡು ತಲೆತುಂಬ ಚನ್ನಪಟ್ಟಣದ ಹೂ ಮುಡಿದುಕೊಂಡಳು.

ಸಂಜೀವ ತನ್ನ ಪ್ರೇಮದಧಿದೇವತೆಯನ್ನು ಕಣ್ತುಂಬ ನೋಡಿದ. 'ಗಂಡಿನ ಜೀವ ತುಂಬಲೆಂದಲ್ಲವೇ ಭಗವಂತ ಹೆಣ್ಣಿನಲ್ಲಿ ಸೌಂದರ್ಯ, ಲಾವಣ್ಯ ತುಂಬಿರುವುದು' ಎಂದುಕೊಂಡ. ಪ್ರಯಾಣದ ಆಯಾಸವಾಗಿದ್ದರೂ ಪುಷ್ಪನ ಮುಖದಲ್ಲಿ ಕಳೆ ಚಿಮ್ಮುತ್ತಿತ್ತು. ಅವಳು ಮುಖತೊಳೆದುಕೊಂಡು, ಸೀರೆ ಬದಲಿಸಿಕೊಂಡು ಬಂದ ಮೇಲಂತೂ ವಿಚಿತ್ರ ಆಕರ್ಷಣೆ ಪಡೆದಿದ್ದಳು. ತುಂಬ ಪುಕ್ಕ ತೆರೆದುಕೊಂಡು ಕುಣಿಯುವ ನವಿಲು ಕಂಡರೆ ಯಾರಿಗೆ ಸಂತೋಷವಾಗುವುದಿಲ್ಲ. ಸಂಜೀವನ ಕಣ್ಣುಗಳು, ಮನಸ್ಸು ತುಂಬಿತು. ಒಂದು ಬಗೆಯ ಮಧುರಯಾತನೆ ಅವನ ಮನಸ್ಸಿನಲ್ಲಿ ಮೂಡಿತು. 'ಈ ಜೀವ ತನ್ನ ಸರ್ವಸ್ವವನ್ನೂ ತ್ಯಾಗಮಾಡಿ ನನ್ನೊಂದಿಗೆ ಬಂದಿದೆ. ನಾಳೆ ಮದುವೆಯಾದ ಮೇಲೆ ತಾನು ಹುಟ್ಟಿ, ಬೆಳೆದ ಮನೆಯನ್ನೂ ಬಿಟ್ಟು ನನ್ನ ಮನೆಗೆ ಬರುತ್ತದೆ. ಪ್ರೇಮದಿಂದ - ತ್ಯಾಗದಿಂದ - ಸೇವೆಯಿಂದ ನನ್ನ ಬಾಳು ತುಂಬುತ್ತದೆ. ಈ ಮಹಾದಾನಕ್ಕೆ ನಾನು ಪ್ರತಿಯಾಗಿ ಕೊಡುವುದೇನು ? ವಸ್ತುವೇ - ಒಡವೆಯೇ - ನನ್ನ ಹೆಸರಿನ ರಕ್ಷಣೆಯೋ ? – ಹೆಣ್ಣಿನ ನಿಷ್ಕಲ್ಮಷ,

ನಿರ್ವ್ಯಾಜ, ನಿಶ್ಚಲ ಪ್ರೇಮಕ್ಕೆ, ತ್ಯಾಗಕ್ಕೆ ಪುರುಷನೇನು ಕೊಡಬಲ್ಲ. ಪರ್ವತೇಶ್ವರ ಮಗಳಾದ ಭುವನೇಶ್ವರಿಯು - ರಾಜರಾಜೇಶ್ವರಿಯು - ಪಾರ್ವತಿಯು ಕೈಹಿಡಿದವನು ಭಿಕಾರಿ ಶಿವ. ಸ್ಮಶಾನವಾಸಿಯಾದ ರುದ್ರನಿಗಾಗಿ ಆ ತಾಯಿ ಸರ್ವಸ್ವವನ್ನೂ ತ್ಯಾಗಮಾಡಿದಳು - ರಾಜ್ಯವೈಭವ ತೊರೆದು ಸುಡುಗಾಡಿನಲ್ಲಿ ಬಂದು ನೆಲಸಿದಳು - ತನ್ನ ಹೆಸರನ್ನೂ ಬಲಿದಾನಮಾಡಿದಳು - ಪಾರ್ವತಿ ಶಿವೆಯಾದಳು - ರುದ್ರೆಯಾದಳು - ಶಿವವಲ್ಲಭೆಯಾದಳು. ಅಂದು ಮಹಾದೇವಿ ಹಾಕಿಕೊಟ್ಟ ದಾರಿಯಲ್ಲಿಯೇ ಇಂದೂ ಹೆಣ್ಣು ಹೋಗುತ್ತಿವೆ' ಎಂದು ಸಂಜೀವ ಯೋಚಿಸುತ್ತಿರಲು, ಪುಷ್ಪ ಮೆಲ್ಲನೆ ಬಳಿಸಾರಿ

"ಅನ್ನ ಆರಿಹೋಗುತ್ತಿದೆ ದೊರೆ" ಎಂದಳು.

ಸಂಜೀವ ತನ್ನ ಭಾವನಾಪ್ರಪಂಚದಿಂದ ಹೊರಬಂದು

"ಮಾಣಿ ಊಟ ತಂದಿಟ್ಟನೇ" ಎಂದು ಕೇಳಿದ.

"ಅವನು ಊಟ ತಂದಿಟ್ಟುಹೋಗಿ ಬಹಳ ಹೊತ್ತಾಯಿತು."

ಎಂದು ಹೇಳಿದಳು. ವಿಸ್ಮೃತಿ ನೆನೆದು ಸಂಜೀವ ನಕ್ಕು ಊಟಕ್ಕೆ ಕೈಹಾಕಿದ. ಊಟ ಸಾಗಿರಲು ಪುಷ್ಪ ಕೇಳಿದಳು

"ಈಚೆಗೆ ಏನೋ ಯೋಚನೆಮಾಡುತ್ತ ನ್ನೈಮರೆಯುತ್ತೀರಿ"

"ಹೌದು. ಮಧುಪಾನಮಾಡಿದ ಭೃಂಗದಂತಾಗಿದೆ ನನ್ನ ಪಾಡು."

"ಭೃಂಗಕ್ಕೆ ಹಲವು ಹೂಗಳು ಬೇಕು."

"ಹಸಿವು ಹಿಂಗಿದ ಮೇಲೆ ಎದುರಿಗೆ ಪಶುಗಳು ಬಂದರೂ ಕೇಸರಿ, ಮುಟ್ಟುವುದಿಲ್ಲವಂತೆ."

"ಹಸಿವು ಹಿಂಗಿದ್ದರೂ ವ್ಯಾಘ್ರ ಪಶುಗಳನ್ನು ಕೊಲ್ಲುತ್ತ ಹೋಗುವುದಂತೆ."

"ಕವಿಗಳು ಉತ್ತಮಪುರುಷನನ್ನು ಸಿಂಹಕ್ಕೆ ಹೋಲಿಸುತ್ತಾರಲ್ಲವೆ ಹುಲಿಗೆ ಹೋಲಿಸುವುದಿಲ್ಲ."

"ತಪ್ಪಾಯಿತು ದೊರೆ. ಹಾಸ್ಯಕ್ಕಾಡಿದೆನಲ್ಲದೆ ನಿಜವಾಗಿ ಅಲ್ಲ. ಏನು ಯೋಚಿಸುತ್ತಿದ್ದರಿ."

"ನಿನಗೆ ಹೇಳಿಬಿಟ್ಟರೆ ಅದರ ಸ್ವಾರಸ್ಯ ಹೋಗುತ್ತದೆ."

"ಸ್ವಾರಸ್ಯ ಹೋಗದಂತೆ ಹೇಳಬಲ್ಲ ಜಾಣ್ಮೆ ನಿಮಗಿದೆ."

"ಇದು ಮುಖಸ್ತುತಿ."

"ನೋಡಿದಿರಾ - ವಿನಾಕಾರಣ ನನ್ನನ್ನು ಜಗಳಕ್ಕೆ ಕರೆಯುತ್ತಿರುವಿರಿ."

"ಒಮ್ಮೆ ಜಗಳವಾಡು ಸ್ವೀಟ್ - ನೋಡೋಣ ಹೇಗಿರುತ್ತದೋ ?"

"ನಿಮ್ಮೊಂದಿಗೆ ಜಗಳವಾಡಿ ನಾನು ಯಾವ ನರಕಕ್ಕೆ ಹೋಗಲಿ. – ಏನು ಯೋಚಿಸುತ್ತಿದ್ದೀರಿ ಹೇಳಿ."

"ಹೆಣ್ಣಿನ ತ್ಯಾಗಮಯ ಜೀವನವನ್ನು. ಸರ್ವಸ್ವವನ್ನೂ ತನ್ನ ಪುರುಷನಿಗರ್ಪಿಸಬಲ್ಲ ಅವಳ ಮಹಾಚೇತನವನ್ನು ಕುರಿತು ಯೋಚಿಸುತ್ತಿದ್ದೆ."

"ನೀವು ತಪ್ಪು ತಿಳಿದಿರುವಿರಿ. ಹೆಣ್ಣು ಸ್ವಾರ್ಥದ ಮುದ್ದೆ. ಒಡವೆ, ವಸ್ತ್ರ, ಆಭರಣವೆಂದರೆ ಹೆಣ್ಣು ಹೇಗೆ ಬಾಯಿಬಿಡುವುದು ನೋಡಿ."

"ಅದೂ ಅವಳ ತ್ಯಾಗಜೀವನದ ಒಂದು ಸ್ವರೂಪ ಸ್ವೀಟ್. ತನ್ನನ್ನು ತಾನು ಸಿಂಗರಿಸಿಕೊಂಡು, ಚೆಲುವಾಗಿ ಕಂಡರೆ ತನ್ನ ಪುರುಷನ ಹೃದಯ ಹಿಗ್ಗುವುದೆಂದು ಹೆಣ್ಣು ವಸ್ತ್ರ, ಆಭರಣಗಳಿಗಾಶೆಪಡುತ್ತದೆ."

"ಕತ್ತೆಯ ಪುನರಾವತಾರವೇ ಹೆಣ್ಣು. ಕತ್ತೆ ಅಗಸನ ಮೂಟೆ ಹೊರುತ್ತದೆ, ಹೆಣ್ಣು ಅಕ್ಕಸಾಲೆಯ ಚಿನ್ನ ಹೊರುತ್ತದೆ."

"ನಿಜ - ತಾನು ಹೊರುವ ಮೂಟೆಯಿಂದ ಕತ್ತೆಗೆ ಪ್ರಯೋಜನವಿಲ್ಲ. ಹಾಗೇ ತಾನೂ ಹೊರುವ ಚಿನ್ನದಿಂದ ಹೆಣ್ಣಿಗೂ ಪ್ರಯೋಜವಿಲ್ಲ."

"ದೊರೆ – ನೀವು ಸ್ತ್ರೀಪಕ್ಷಪಾತಿಗಳು."

"ಹೆಣ್ಣಿನ ಶತ್ರು ಪುರುಷನೆಂದು ಸಫ್ರಜಿಸ್ಟರು (Suffragist) ವಾದ ಮಾಡುತ್ತಾರೆ. ಇದು ಶುದ್ಧ ತಪ್ಪು - ಹೆಣ್ಣಿನ ಶತ್ರು ಹೆಣ್ಣೆ ! ! "

ಪುಷ್ಪಾ ಅವನ ವಾದಕ್ಕೆ ಗಹಗಹಿಸಿ ನಕ್ಕಳು. ತಟ್ಟೆ, ಬಟ್ಟಲನ್ನು ತಾವೇ ಒಯ್ದು ರೂಮಿನ ಹೊರಗಿಟ್ಟು ಇಬ್ಬರೂ ಬಂದರು.

ಮಾರನೆಯ ಬೆಳಿಗ್ಗೆ ಸಂಜೀವನಿಗೆ ಬೇಗ ಎಚ್ಚರವಾಯಿತು. ಗಾಢವಾದ ನಿದ್ರೆಯಲ್ಲಿ ಮೈಮರೆತಿದ್ದ ಪ್ರೇಯಸಿಯನ್ನು ನೋಡಿದ. ಅವಳಿಗೆಚ್ಚರವಾಗದಂತೆ ಮೆಲ್ಲನೆ ಮಂಚದಿಂದಿಳಿದು ತನ್ನ ಪ್ರಾತರ್ - ವಿಧಿಗಳನ್ನು ಪೂರೈಸಿಕೊಂಡ. ಕ್ಷೌರವಾಯಿತು, ಸ್ನಾನವಾಯಿತು, ಮೊದಲನೆಯ ಡೋಸ್ ಕಾಫಿಯೂ ಆಯಿತು. ಪುಷ್ಪ ಇನ್ನೂ ನಿದ್ರಾಧೀನಳಾಗಿದ್ದಳು.

ಹೊತ್ತೇರುತ್ತ ಬಂದಿತ್ತು. ಅವಳನ್ನು ಮೃದುವಾಗಿ ಅಲುಗಾಡಿಸಿ ಎಬ್ಬಿಸಿದ. ಅವನ ಕುತ್ತಿಗೆಗೆ ಹಾರದಂತೆ ತೋಳು ಸೇರಿಸಿ

"ಏಕೆ ಎಬ್ಬಿಸಿದಿರಿ ದೊರೆ" ಎಂದಳು.

ಅರೆನಿದ್ರೆಯೊಂದುಕಡೆ, ಮತ್ತಷ್ಟು ಹೊತ್ತು ಮಲಗಿರಬೇಕೆಂಬ ಆಸೆಯೊಂದುಕಡೆ ಅವಳನ್ನು ಆವರಿಸಿತ್ತು.

"ಹೊತ್ತಾಗುತ್ತಾ ಬಂತು - ಏಳುವುದಿಲ್ಲವೆ ? - ಪೇಟೆಯ ಕಡೆ ಕೆಲಸವಿದೆ."

"ಬನ್ನಿ - ಪೇಟೆಗೆ ನಿಧಾನವಾಗಿ ಹೋದರಾಯಿತು."

"ಏಳು ಸ್ವೀಟ್ - ಬೇಗ ಸ್ನಾನ ಮುಗಿಸು - ನಾನು ಸ್ವಲ್ಪ ಮ್ಯಾನೇಜರನ್ನು ನೋಡಿಬರುತ್ತೇನೆ"

ಎಂದು ಹೇಳಿ ಮ್ಯಾನೇಜರನ್ನು ಹುಡುಕಿಕೊಂಡು ಹೋದ.

ಸಂಜೀವ ಹಿಂದಿರುಗುವಷ್ಟರಲ್ಲಿ ಪುಷ್ಪ ಸ್ನಾನ ಮುಗಿಸಿ, ಅಲಂಕಾರ ಮಾಡಿಕೊಳ್ಳುತ್ತಿದ್ದಳು. ಅವಳು ಹೊರಡಲು ಸಿದ್ಧವಾಗಿದ್ದುದನ್ನು ಕಂಡು ಸಂಜೀವನಿಗೆ ತೃಪ್ತಿಯಾಯಿತು.

"ತಿಂಡಿ ಕಾಫಿ ತೆಗೆದುಕೊಂಡು ಹೊರಟುಬಿಡೋಣ. ಟ್ಯಾಕ್ಸಿ ರೆಡಿಯಾಗಿದೆ,"

"ನನಗೆ ಹಾಸಿಗೆ ಬಿಟ್ಟು ಏಳುವುದಕ್ಕೇ ಇಷ್ಟವಿರಲಿಲ್ಲ."

"ಅದನ್ನು ನಾನು ಬಲ್ಲೆ - ಸೋಮಾರಿ"

ಎಂದು ನಸುನಕ್ಕ.

"ಎಂಥಾ ಕನಸುಕಾಣುತ್ತಿದ್ದೆ ಬಲ್ಲಿರಾ ? ಅದಕ್ಕೆ ಭಂಗತಂದಿರಿ."

"ಹಗಲುಗನಸು ನಿಜವಾಗುವುದಿಲ್ಲವಂತೆ !"

"ದೊರೆ - ಹಾಗನ್ನಬೇಡಿ"

ಎಂದು ತಲೆ, ಎದೆಯ ಮೇಲೆ ಶಿಲುಬೆಯ ಚಿಹ್ನೆ ಮಾಡಿಕೊಂಡಳು.

"ಬೇಕಾದವರಲ್ಲಿ ಕನಸಿನ ವಿಷಯ ಹೇಳಿಕೊಂಡರೆ ನಿಜವಾಗುವುದಂತೆ !"

"ಹಾ ! ಹಾ ! ಬಲ್ಲೆ ನಿಮ್ಮ ಜಾಣತನ. ನೀವು ಏನು ಮಾಡಿದರೂ ನನ್ನ ಕನಸಿನ ವಿಷಯ ಹೇಳುವುದಿಲ್ಲ. ಅದು ನನ್ನ ಗುಟ್ಟು."

ಮಾಣಿ ಉಪಾಹಾರ ತಂದಿಟ್ಟು

"ಟ್ಯಾಕ್ಸಿ ಸಿದ್ಧವಾಗಿದೆ ಸಾರ್" ಎಂದ.

ಇಬ್ಬರೂ ಉಪಾಹಾರ ಮುಗಿಸಿದರು. ಸಂಜೀವ ಡ್ರೆಸ್ ಮಾಡಿಕೊಂಡು ಹೊರಡಲನುವಾದ.

ಟ್ಯಾಕ್ಸಿ ಅವರನ್ನು ನೇರವಾಗಿ ವಜ್ರದ ವ್ಯಾಪಾರಿಗಳಾದ ಗಂಜಾಂ ನಾಗಪ್ಪನವರ ಅಂಗಡಿಗೆ ಕರೆತಂದಿತು. ಕಾರು ಇಳಿಯುವ ಮುನ್ನ ಪುಷ್ಪ

"ಇಲ್ಲಿಗೇಕೆ" ಎಂದು ಕೇಳಿದಳು.

"ಪ್ರಶ್ನೆ ಕೇಳಬೇಡ, ಸುಳ್ಳು ಹೇಳುವುದಿಲ್ಲ. (Ask no Questions and you will be told no lies)"

ಮಾಲೀಕರು ಇಬ್ಬರಿಗೂ ಸ್ವಾಗತ ಬಯಸಿ

"ಸಂಜೀವರಾವ್ ನೀವೇ ಏನು ಸರ್."

"ಹೌದು"

"ಸನ್‌ಶೈನ್ ಹೊಟೇಲ್ ಮ್ಯಾನೇಜರ್ ರಾವ್ ಫೋನ್ ಮಾಡಿದ್ದರು. ಬನ್ನಿ ಸರ್."

"ಒಂದು ಜತೆ ವಜ್ರದ ಓಲೆ, ಮೂಗುಬಟ್ಟು ಬೇಕಾಗಿತ್ತು."

"ಮಧ್ಯವರ್ತಿ ಸೈಜು ಸಾಕು, ಅಷ್ಟೇನು ದೊಡ್ಡದು ಬೇಕಿಲ್ಲ."

ಎಂದು ಮಾಲಿಕರು ಒಂದು ಜತೆ ಓಲೆಗಾಗುವಷ್ಟು ವಜ್ರಗಳನ್ನು ಆರಿಸಿ ಬಂದು ಕಾಗದದ ಮೇಲಿಟ್ಟು ಸಂಜೀವನ ಕೈಗಿತ್ತರು. ಸಂಜೀವ ಅವುಗಳನ್ನು ಪುಷ್ಪನಿಗೆ ತೋರಿಸಿದ.

"ಬೇರೆ ಕಡೆ ಬೇಕಾದರೆ ತೋರಿಸಿ ಪರೀಕ್ಷೆಮಾಡಿಸಿ."

"ನಿಮ್ಮ ವಿಷಯ ರಾಯರು ಹೇಳಿದ್ದಾರೆ. ಯಾರಿಗೂ ತೋರಿಸಬೇಕಾದ ಅಗತ್ಯ ನನಗೆ ತೋರುವುದಿಲ್ಲ."

"ಇವುಗಳಲ್ಲಿ ದೋಷಕಂಡುಬಂದರೆ ವರ್ಷದ ಮೇಲೆ ತಂದುಕೊಡಿ. ಹಣ ಹಿಂದಿರುಗಿಸಲು ಸಿದ್ಧನಾಗಿದ್ದೇನೆ."

"ನೀವೇ ಕಟ್ಟಿಸಿಕೊಡಬೇಕು."

"ಆಗಬಹುದು. ನಿಮಗೆ ಯಾವಾಗಬೇಕು."

"ಎಷ್ಟು ಬೇಗ ಆದರೆ ಅಷ್ಟು ಒಳ್ಳೆಯದು. ನಾವು ಊರಿಗೆ ಬೇಗ ಹಿಂದಿರುಗಬೇಕಾಗಿದೆ."

"ನಾಡಿದ್ದು ಸಂಜೆಗೆ ಓಲೆಗಳನ್ನು ಸಿದ್ಧಮಾಡಿಸಿಟ್ಟಿರುತ್ತೇನೆ. ಮೂಗು ಬಟ್ಟು ಬೇಕೆಂದಿರಲ್ಲಾ.''

"ಹೌದು."

ಮಾಲಿಕರು ಒಂದು ಆರಿಸಿದ ವಜ್ರ ತೋರಿಸಿದರು. ಸಂಜೀವ, ಪುಷ್ಪ ಅವನ್ನೂ ಒಪ್ಪಿಕೊಂಡರು.

"ಬೆಲೆ ಎಷ್ಟಾಗುತ್ತದೆ."

ಮಾಲಿಕರು ವಜ್ರಗಳನ್ನು ತೂಗಿ, ಅವುಗಳ ಲೆಕ್ಕಾಚಾರ ಗುರುತುಹಾಕಿ

"ಓಲೆಗೆ ನಾವಿರದಾರುನೂರು, ಮೂಗುಬಟ್ಟಿಗೆ ಎಂಭತ್ತು ರೂಪಾಯಿ ಗಳಾಗುತ್ತವೆ."

ಸಂಜೀವ ಕಿಸೆಯಿಂದ ಪರ್ಸ್‌ತೆಗೆದು ಮಾಲಿಕರು ಹೇಳಿದಷ್ಟು ಹಣವನ್ನು ಅವರ ಮೇಜಿನ ಮೇಲಿಟ್ಟ.

"ಹಣಕ್ಕೆ ಅವಸರವಿಲ್ಲ. ನಿಧಾನವಾಗಿ ಕೊಡಬಹುದು."

"ಕೊಡಬೇಕಾದುದನ್ನು ಕೊಟ್ಟುಬಿಡುವುದೊಳ್ಳೆಯದು. ಹಣ ಕಾಯುವ ಕಷ್ಟ ತಪ್ಪುತ್ತದೆ. ನಾಡಿದ್ದು ತಪ್ಪುವುದಿಲ್ಲವಷ್ಟೆ.''

"ನಾಡಿದ್ದು ಸಂಜೆಗೆ ನಿಮ್ಮ ಓಲೆ, ಮೂಗುಬಟ್ಟು ಸಿದ್ಧವಾಗಿರುತ್ತದೆ ಸರ್. ಯೋಚನೆಮಾಡಬೇಡಿ '' ಎಂದು ಮಾಲಿಕರು ಧೈರ್ಯಹೇಳಿದರು

ಕಾರಿನಲ್ಲಿ ಬಂದು ಕುಳಿತ ಮೇಲೆ ಪುಷ್ಪ ಮೆಲ್ಲನೆ

''ಇದೇನು ದೊರೆ - ನಿಮ್ಮ ವ್ಯವಹಾರ" ಎಂದಳು.

''ಬರಿಗೈಯಲ್ಲಿ ಕನ್ಯಾಪರಿಗ್ರಹಣ ಮಾಡುವುದು ನಮ್ಮ ಧರ್ಮಕ್ಕೆ ಅಸಮ್ಮತ ಸ್ವೀಟ್ '' ಎಂದು ಹೇಳಿದ.

"ನಿಮ್ಮ ವ್ಯಾಪಾರ ಮುಗಿಯಿತೋ ಇನ್ನೂ ಇದೆಯೋ."

"ಮುಗಿಯುವುದೆಲ್ಲಿಂದ ಬಂತು - ಇದೇ ಆರಂಭವಾಗಿದೆ."

ಡ್ರೈವರ್ ಕಾರನ್ನು ತಂದು ಸಜ್ಜನರಾಯರ ಚಿನ್ನದ ಅಂಗಡಿಯ ಮುಂದೆ ನಿಲ್ಲಿಸಿದ. ಅಲ್ಲಿ ಪುಷ್ಪನಿಗೆ ಎರಡು ಜತೆ ಬಳೆ, ಎರಡೆಳೆಯ ಸರಮಾಡಿ ಹಾಕಿ ಮುಂದೆ ಶಾಂತಿ ಸಿಲ್ಕ್‌ಹೌಸಿನಲ್ಲಿ ಒಂದು ಜತೆ ಧರ್ಮಾವರದ ಸೀರೆ, ಒಂದು ಜತೆ ವೈಸೂರು ಜಾರ್ಜೆಟ್ ಸೀರೆ, ಟವಲು, ಬೆಡ್‌ಶೀಟ್, ಕುಪ್ಪಸದ

ಸಿಲ್ಕ್, ಪ್ಲಾಸ್ಟಿಕ್ ಹ್ಯಾಂಡ್‌ಬ್ಯಾಗ್ ಇತ್ಯಾದಿ ಚಿಲ್ಲರೆ ಸಾಮಾನುಗಳನ್ನು ಕೊಂಡ. ಪುಷ್ಪ ಎಲ್ಲಾ ಅಂಗಡಿಗಳ ಬಿಲ್‌ಗಳನ್ನು ಸಂಗ್ರಹಿಸಿಕೊಂಡಳು.

ಹೊಟೇಲಿಗೆ ಹಿಂದಿರುಗಿದ ಕೂಡಲೆ ಪುಷ್ಪ ಬಿಲ್‌ಗಳನ್ನು ಮುಂದಿಟ್ಟು ಕೊಂಡು, ಕೂಡಿ, ಲೆಕ್ಕಹಾಕಿ

"ಇವತ್ತು ಎಷ್ಟು ಹಣ ನಿಮ್ಮ ಕೈಬಿಟ್ಟುಹೋಗಿದೆ ಬಲ್ಲರಾ" ಎಂದು ಕೇಳಿದಳು. ಸಂಜೀವ 'ಲೆಕ್ಕದ ವಿಷಯ ಈಗೇಕೆ' ಎಂಬಂತೆ

"ಎಷ್ಟು" ಎಂದು ಕೇಳಿದ.

"ಸರಿಯಾಗಿ ಮೂರು ಸಾವಿರದ ಮುನ್ನೂರೈವತ್ತು."

"ಇಷ್ಟೇತಾನೆ."

"ಹಣ ಎಲ್ಲಿತ್ತು ದೊರೆ?"

"ಕಳ್ಳತನ ಮಾಡಲಿಲ್ಲ ಸ್ವೀಟ್ - ನನ್ನ ಮದುವೆಗಾಗಿಯೇ ತಂದೆ ಯವರು ಐದು ಸಾವಿರ ರೂಪಾಯಿ ಮುಡುಪಾಗಿಟ್ಟಿದ್ದರು. ಆ ಹಣ ತರಿಸಿ ಕೊಂಡೆ."

"ಒಡವೆ, ವಸ್ತ್ರ ಇಲ್ಲದೆ ನಾನು ಇರಬಲ್ಲೆ"

"ಅದನ್ನು ನಾನು ಬಲ್ಲೆ - ಆದರೆ ಇರಬೇಕಾದ ಅಗತ್ಯವಿಲ್ಲ."

ಮಾತು ಮರೆಸುವುದಕ್ಕೆಂದು ಸಂಜೀವ

"ನಿಮ್ಮ ಅಕ್ಕನವರ ಮನೆಗೆ ಯಾವಾಗ ಹೋಗಿ ಬರೋಣ." ಎಂದು ಕೇಳಿದ. ಪುಷ್ಪ ತನ್ನ ಮುನಿಸನ್ನು ನಿಗ್ರಹಿಸಿಕೊಂಡು

"ಒಡವೆಗಳು ಬಂದುಬಿಡಲಿ. ಹೋಗೋಣ." ಎಂದಳು.

ತಾನು ಆಡಿದ ಮಾತು ಸರಿಯಾಯಿತೋ ಇಲ್ಲವೋ ಎಂದು ಸಂಶಯ ಗ್ರಸ್ತಳಾಗಿ

"ನಾನೆಷ್ಟು ಜಂಬದವಳು ಎಂದುಕೊಳ್ಳುವಿರೇನೋ?"

"ಇಲ್ಲ - ಹಾಗೇಕೆ ಭಾವಿಸಲಿ."

"ನಾನು ರಾಜಕುಮಾರನ ಕೈಹಿಡಿದಿದ್ದೇನೆಂಬುದನ್ನು ಅಕ್ಕಭಾವ ಅರ್ಥಮಾಡಿಕೊಳ್ಳಲಿ ಎಂದು ಆಸೆ" ಎಂದಳು.

ಬೆಂಗಳೂರಿನಲ್ಲಿರುವಷ್ಟು ಕಾಲ ದಿನಕ್ಕೆ ಒಂದೊಂದಾದರೂ ಸಿನೀಮಾ ಚಿತ್ರ ನೋಡಲು ಪುಷ್ಪ ನಿರ್ಧರಿಸಿದಳು. 'ಸನ್‌ಷೈನ್' ಹೊಟೇಲ್ ಸುತ್ತಮುತ್ತ

ಮೂವಿಲ್ಯಾಂಡ್, ಹಿಮಾಲಯ, ಗೀತಾ, ಮೆಜೆಸ್ಟಿಕ್, ಕೆಂಪೇಗೌಡ, ಸಾಗರ್, ಪ್ರಭಾತ್, ಸ್ಟೇಟ್ಸ್ ಥಿಯೇಟರುಗಳಿದ್ದುದು ಅವಳಿಗೆ ಸಮಾಧಾನವನ್ನುಂಟುಮಾಡಿತ್ತು.

ಪುಷ್ಪನಿಗೂ ಸ್ವಲ್ಪವೂ ಬೇಸರವಾಗಬಾರದೆಂದು ಸಂಜೀವ ನಿತ್ಯ ಒಂದೊಂದು ವಿಶೇಷ ಕಾರ್ಯಕ್ರಮ ನಿಯೋಜಿಸುತ್ತಿದ್ದ. ಸಮೀಪದಲ್ಲಿದ್ದ ಬನ್ನೇರುಘಟ್ಟ, ತಿಪ್ಪಗೊಂಡನಹಳ್ಳಿ, ಹೆಸರುಘಟ್ಟಕ್ಕೆ ಹೋಗಿಬಂದರು. ನಗರದಲ್ಲಿ ಮತ್ತು ಸುತ್ತಮುತ್ತಲಿದ್ದ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಬಂದರು. ಜತೆಗೆ ಪ್ರತಿನಿತ್ಯ ಸಂಜೆ ಯಾವುದಾದರೂ ಸಿನೀಮಾಕ್ಕೆ ಹೋಗಿಬರುತ್ತಿದ್ದರು.

ಹೇಳಿದ ದಿನ ಸರಿಯಾಗಿ ಓಲೆ, ಮೂಗುಬಟ್ಟು ಬಂದಿತು. ಅದನ್ನು ಕೂಡಲೆ ಪುಷ್ಪನ ಕೈಗೆಕೊಡದೆ ಸಂಜೀವ ತನ್ನ ಸೂಟ್‌ಕೇಸಿನಲ್ಲಿಟ್ಟ. ಮಾರನೆಯ ದಿನ ಸರ, ಬಳೆಗಳು ಬಂದಾಗ ಎಲ್ಲವನ್ನೂ ಒಂದು ತಟ್ಟೆಯಲ್ಲಿಟ್ಟು ಪುಷ್ಪನಿಗೆ ಅರ್ಪಿಸಿದ.

"ಹಾಕಿಕೊಳ್ಳಲೇ" ಎಂದು ಕೇಳಿದಳು.

''ನೀನು ಹಾಕಿಕೊಳ್ಳದಿದ್ದರೆ ನಾನು ನೋಡುವುದು ಹೇಗೆ ?''

''ಈಗ ಅಕ್ಕನ ಮನೆಗೆ ಹೋಗಿ ಬರೋಣವೇ ?''

''ಆಗಬಹುದು.''

''ಹಾಗಾದರೆ ನೀವು ಕ್ಷಣಕಾಲ ಹೊರಗೆ ನಿಲ್ಲಬೇಕು.''

''ಏಕೆ ?''

''ನಾನು ಒಡವೆ ಧರಿಸಿ ನಿಮ್ಮನ್ನು ಕರೆಯುತ್ತೇನೆ.''

''ಹಾಗೇ ಮಾಡು''

ಎಂದು ಹೇಳಿ ಸಂಜೀವ ಹೊರಗೆ ಬಂದು ನಿಂತ.

ಪುಷ್ಪ ಸುಸಜ್ಜಿತಳಾಗಬೇಕಾದರೆ ಅರ್ಧಗಂಟೆ ಬೇಕಾಯಿತು. ಮೆಲ್ಲನೆ ಬಾಗಿಲ ಅಗಣಿ ತೆಗೆದು 'ಬನ್ನಿ' ಎಂದಳು. ವಜ್ರದ ಹೊಳಪು, ಚಿನ್ನದ ಕಾಂತಿ, ಹೊಸ ಸೀರೆಯ ಬೆಡಗು ಸಂಜೀವನ ಕಣ್ಣು ಕೋರೈಸಿತು. ಅವಳನ್ನೇ ಆಪಾದಮಸ್ತಕ ದಿಟ್ಟಿಸಿನೋಡಿದ.

''ಈಗ ತೃಪ್ತಿಯಾಯಿತೇ'' ಎಂನು ಪುಷ್ಪ ಕೇಳಿದಳು.

ಸಂತೋಷವಾಯಿತೆಂದು ಸಂಜೀವ ಬಾಯಲ್ಲಿ ಹೇಳಲಿಲ್ಲ. ಅವನ ಕಣ್ಣುಗಳು ಸಾರಿಸಾರಿ ಹೇಳಿದವು. ಪುಷ್ಪನ ಕೈಹಿಡಿದು

"ಅಕ್ಕನನ್ನು ಈಗಲೇ ನೋಡಿಕೊಂಡು ಬರಬೇಕೇ ?"

"ಬೇಗ ಬಂದು ಬಿಡೋಣ - ನಾನೂ ಬಹಳ ಹೊತ್ತು ಕೂಡುವುದಿಲ್ಲ."

ಸಂಜೀವ ಅರೆಮನಸ್ಸಿನಿಂದ ಅವಳನ್ನು ಕರೆದುಕೊಂಡು, ಹೊಟೇಲ್ ಟ್ಯಾಕ್ಸಿಯಲ್ಲಿ ಹೊರಟ.

ಕಂಟೋನ್ಮೆಂಟಿನ ಕ್ಲೀವ್‌ಲೆಂಡ್ ಟೌನಿನ ಒಳ ಓಣಿಯೊಂದರಲ್ಲಿ ಪುಷ್ಪನ ಅಕ್ಕನ ಮನೆಯಿತ್ತು. ಓಣಿಗೆ ಕಾಲಿಟ್ಟ ಕೂಡಲೆ ಟರ್ಕಿ ಕೋಳಿಗಳೂ ದೇಶೀ ಕೋಳಿಗಳೂ ಬಂದು ಸ್ವಾಗತ ಬಯಸಿದವು.

ಜ್ಯೂಡಿಯ ಮನೆ ಚಿಕ್ಕದಾಗಿದ್ದರೂ ಚೊಕ್ಕವಾಗಿತ್ತು. ಬಾಗಿಲೆದುರಿಗೆ ಯೇಸು ಸ್ವಾಮಿಯ 'ಕೊನೆಯ ಪ್ರಾರ್ಥನೆ'ಯ ಚಿತ್ರ. ವೆರಾಂಡಾದ ಮೂಲೆಯೊಂದರಲ್ಲಿ ಎತ್ತರದ ಮೇಜಿನ ಮೇಲೆ ಕಾಗದದ ಹೂ ಸಿಕ್ಕಿಸಿದ ಕುಂಡ. ಜ್ಯೂಡಿಯ ಮನೆ ಬಡತನದ ಗಾಂಭೀರ್ಯವನ್ನು ಎತ್ತಿತೋರಿಸುತ್ತಿತ್ತು.

ಪುಷ್ಪ ಬಾಗಿಲು ತಟ್ಟಿದ ಕೂಡಲೆ ಒಳಗಿನಿಂದ ಜ್ಯೂಡಿ ಬಂದು ಪುಷ್ಪನನ್ನಪ್ಪಿ

"ಏನೇ ಇದು - ಹೇಳದೆ ಕೇಳದೆ ಬಂದೆ - ಮಿಂಚು ಸುಳಿದ ಹಾಗೆ." ಎಂದಳು.

"ಭಾವ ಎಲ್ಲಿ ?"

"ಅಂಗಡಿಯ ಹತ್ತಿರ ಹೋಗಿದ್ದಾರೆ - ಕುಳಿತುಕೋ. ಈಗ ಬಂದು ಬಿಡುತ್ತಾರೆ."

"ನನ್ನ ಯಜಮಾನರ ಪರಿಚಯ ಮಾಡಿಕೋ ಜ್ಯೂಡಿ."

ಎಂದು ಸಂಜೀವನ ಕಡೆ ತಿರುಗಿ

"ಇವರೇ ನನ್ನ ಅಕ್ಕ ಜ್ಯೂಡಿ" ಎಂದಳು.

ಸಂಜೀವ ಕೈಮುಗಿದ. ಜ್ಯೂಡಿಯೂ ಕೈಮುಗಿದಳು

"ಯಾವಾಗ ಬಂದೆ ಪುಷ್ಪ" ಎಂದು ಜ್ಯೂಡಿ ಕೇಳಿದಳು.

"ನಿಜ ಹೇಳಿದರೆ ಕೋಪಮಾಡಿಕೊಳ್ಳುವೆಯೋ ಏನೋ ?"

"ಇಲ್ಲ ಹೇಳು."

"ಬೆಂಗಳೂರಿಗೆ ಬಂದು ಇವತ್ತಿಗೆ ನಾಲ್ಕು ದಿವಸವಾಯಿತು."

"ನಾಲ್ಕು ದಿವಸದಿಂದ ಇತ್ತ ಸುಳಿಯುವುದಕ್ಕಾಗಲಿಲ್ಲವೇ ?''

ಎಂದು ಬಾಗಿಲಕಡೆ ನೋಡಿದಳು. ಯಜಮಾನರು ಮನೆಗೆ ಬೇಗ ಬಂದರೆ, ಅವರಿಗೂ ಸಂಜೀವನಿಗೂ ತಾಳಿಹಾಕಿ, ಪುಷ್ಪನನ್ನು ಒಳಕ್ಕೆ ಕರೆದೊಯ್ದು ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ಅರಿಯಬೇಕೆಂದು ಆತುರಳಾದಳು.

ಮಾರ್ಕೆಟ್ ವ್ಯಾಪಾರ ಮುಗಿಸಿಕೊಂಡು ಬಂದ ಸಾಮ್ಯುಯಲ್ ಹೊಸಬರು ಬಂದಿರುವುದನ್ನು ನೋಡಿ, ನೇರವಾಗಿ ಒಳಗೆ ಹೋಗಿ ತತ್ತಿಗಳನ್ನು, ತರಕಾರಿಗಳನ್ನೂ ಅಲ್ಲಿಟ್ಟು ಹೊರಗೆ ಬಂದ. ಪುಷ್ಪ ಎದ್ದುನಿಂತು ಭಾವನಿಗೆ ಸಂಜೀವನ ಪರಿಚಯ ಮಾಡಿಕೊಟ್ಟಳು.

ಎಲ್ಲರೂ ಕುಳಿತೊಡನೆಯೇ ಸಂಜೀವ, ಜ್ಯೂಡಿಯನ್ನುದ್ದೇಶಿಸಿ

"ನಿಮಗೆ ಆರೋಗ್ಯವಿರಲಿಲ್ಲವೆಂದು ಕೇಳಿದೆ. ಈಗ ಹೇಗಿದೆ ?'' ಎಂದು ಕೇಳಿದ.

''ಈಗ ಅರೋಗ್ಯವಾಗಿದ್ದೇನೆ" ಎಂದು ಜ್ಯೂಡಿ ಉತ್ತರಿಸಿದಳು.

ಜ್ಯೂಡಿ ಹೇಳಿದ್ದು ಸಾಮ್ಯುಯಲ್‌ಗೆ ಸಮಾಧಾನವಾಗಲಿಲ್ಲ.

"ಅವರಿಗೆ ಇದ್ದಕ್ಕಿದ್ದಂತೆ ಎದೆನೋವು ಬರುತ್ತದೆ. ಪ್ರತಿಸಲ ನೋವು ಬಂದಾಗಲೂ ಜೀವದ ಆಸೆಯನ್ನೇ ಬಿಡುವಂತಾಗುತ್ತದೆ.''

''ಡಾಕ್ಟರುಗಳು ಏನು ಹೇಳುತ್ತಾರೆ.''

''ನಿಶ್ಶಕ್ತಿ ಎಂದು ಹೇಳುತ್ತಾರೆ. ಕ್ಯಾಲ್‌ಷಿಯಂ, ಪೆನ್ಸಿಲಿನ್ ಇನ್‌ಜಕ್ಷನ್ ಚುಚ್ಚುತ್ತಾರೆ.''

''ಸರಿಯಾದ ಆಯುರ್ವೇದ ಪಂಡಿತರಿಗೆ ತೋರಿಸಿದರೆ ಒಳ್ಳೆಯದು."

"ತೋರಿಸಬೇಕು.''

''ಮೈಸೂರಿಗೆ ಬನ್ನಿ - ಅಲ್ಲಿ ದಕ್ಷರಾದ ಪಂಡಿತರಿದ್ದಾರೆ. ನಾನು ಎಲ್ಲಾ ವ್ಯವಸ್ಥೆ ಮಾಡುತ್ತೇನೆ.''

"ತುಂಬ ಥ್ಯಾಂಕ್ಸ್ (Thanks) - ವಿಚಾರಮಾಡಿ ತಿಳಿಸುತ್ತೇನೆ." ಎಂದ.

ಜ್ಯಾಡಿ ಎರಡು ನಿಮಿಷ ಅವರ ಜತೆ ಕುಳಿತ ಶಾಸ್ತ್ರಮಾಡಿ ಮೆಲ್ಲನೆ, ಪುಷ್ಪನನ್ನು ಜತೆಯಲ್ಲಿ ಕರೆದುಕೊಂಡು ಒಳಕ್ಕೆಹೋಗಿ ದೀಪದ ಕೆಳಗೆ ಪುಷ್ಪನನ್ನು ನಿಲ್ಲಿಸಿ ಆಪಾದಮಸ್ತಕ ಅವಳನ್ನು ಪರೀಕ್ಷೆ ಮಾಡಿದಳು. ಅವಳ ಆಶ್ಚರ್ಯ ಮುಗಿಲುಮುಟ್ಟಿತು.

''ಏನೇ ಇದು ನಿನ್ನ ಅವತಾರ ?''

"ಅವತಾರವೇನಕ್ಕ ?"

"ವಜ್ರದ ಓಲೆ, ವಜ್ರದ ಮೂಗುಬಟ್ಟು, ಕೈಗೆ ಬಳೆ, ಕೊರಳಿಗೆ ಸರ, ಹೊಸ ಸೀರೆ, ಪ್ಲಾಸ್ಟಿಕ್ ಬ್ಯಾಗ್ - ಯಾರೇ ಇವರು."

"ನನ್ನ ಫಿಯಾನ್ಸಿ (Fiancee)"

"ಸತ್ಯವಾಗಿ."

"ಸತ್ಯವಾಗಿ - ಪ್ರಮಾಣವಾಗಿ - ನಿನ್ನ ಆಣೆಗೂ ದಿಟ."

"ಇವರನ್ನು ಎಲ್ಲಿ ಹಿಡಿದೆಯೋ ?"

ಪುಷ್ಪ ಸೂಕ್ಷ್ಮವಾಗಿ ತನ್ನ ಪ್ರಣಯ ಕಥೆ ನಿರೂಪಿಸುತ್ತಲೂ ಜ್ಯಾಡಿ ಬೆಕ್ಕಸಬೆರಗಾಗಿ

"ನೀನು ಅಸಾಧ್ಯದೋಳೆ!—ಫಿಯಾನ್ಸಿ ಎಂದರೆ . . . ."

"ನನ್ನ ಲಗ್ನ ನಿಶ್ಚಯವಾಗಿದೆ."

"ಅಂಕಲ್‌ನೇನು (Uncle) ಮಾಡುತ್ತೀ"

ಪುಷ್ಪ 'ಶುಶ್' ಎಂದು ಬಾಯಿಯ ಮೇಲೆ ಬೆರಳಿಟ್ಟಳು.

"ನೀನು ತುಂಬ ಲಕಿ ಡಾಗ್ (Lucky Dog) ಕಣೇ!"

"ನಿನಗೆ ಸಂತೋಷವಾಯಿತೇ ಅಕ್ಕ."

"ಸಂತೋಷವಾಗದಿರುತ್ತದೆಯೇ ? – ಬಾ, ಕಾಫಿ ಮಾಡಿಕೊಡುತ್ತೇನೆ. ಹೊಸದಾಗಿ ಎಗ್ಸ್ (Eggs) ತಂದಿದ್ದಾರೆ - ಆಮ್ಲೆಟ್ ಮಾಡಿಕೊಡಲೇನೇ ?"

"ಬೇಡಕ್ಕಾ - ಅವರು ಮುಟ್ಟುವುದಿಲ್ಲ."

"ಸೀತಾದೇವಿ ಆಗಿಬಿಟ್ಟೆ."

"ಆಗಬೇಕಲ್ಲ."

ಇಬ್ಬರೂ ಪರಸ್ಪರ ಕ್ಷೇಮ ಸಮಾಚಾರ ಮಾತನಾಡುತ್ತ ಕುಳಿತರು.

ಹೊರಗೆ ಸಾಮ್ಯುಯಲ್ ಸಂಜೀವನನ್ನು ಮಾತನಾಡಿಸುತ್ತ ಕುಳಿತ. ಸಾಮ್ಯುಯಲ್ ಜತೆ ಏನು ಮಾತನಾಡಬೇಕೆಂಬುದೇ ಸಂಜೀವನಿಗೆ ತೋರಲಿಲ್ಲ. ಲೋಕಾಭಿರಾಮವಾಗಿ ಮಾತುಕತೆಯಾಯಿತು. ಆಹಾರ ಪರಿಸ್ಥಿತಿ - ರೇಷನ್ ಹೋಗುವ ವಿಚಾರ - ಮಂತ್ರಿಮಂಡಳ - ಯುದ್ಧದ ವಿಷಯ - ಆಟಂ ಬಾಂಬ್ - ಕೊನೆಗೆ ಕಂಟೋನ್ಮೆಂಟ್ ಥಿಯೇಟರುಗಳಲ್ಲಿ ನಡೆಯುತ್ತಿದ್ದ ಚಿತ್ರಗಳು.

ಜ್ಯೂಡಿ ಬೇಸರದಿಂದ ಪುಷ್ಪನಿಗೆ

"ಹೋಗೇ - ಹೀಗೆ ಬಂದು ಹಾಗೆ ಹೋಗುತ್ತೀ - ನಾನು ಎಷ್ಟೋ ಮಾತನಾಡಬೇಕಾಗಿದೆ."

"ಇನ್ನೊಮ್ಮೆ ನಿಧಾನವಾಗಿ ಬಂದು ನಾಲ್ಕುದಿವಸ ಇಲ್ಲೇ ಇರುತ್ತೇನೆ ಸುಮ್ಮನಿರು."

"ನಿನ್ನ ಫಿಯಾನ್ಸಿ ತುಂಬ ದುಡ್ಡಿನೋರೇನೇ ?"

"ಅದೊಂದು ವಿಷಯ ನಾನು ತನಿಖೆಮಾಡುವುದಕ್ಕೆ ಹೋಗಿಲ್ಲಕ್ಕ. ಮೈಸೂರಿನಲ್ಲಿ ಸ್ವಂತ ಮನೆಯಿದೆ. ಬ್ಯಾಂಕಿನಲ್ಲಿ ಸ್ವಲ್ಪ ದುಡ್ಡೂ ಇವೆಯೆಂದು ಕಾಣುತ್ತದೆ. ಬೆಂಗಳೂರಿಗೆ ಬಂದ ಮೇಲೆ ಸುಮಾರು ಮೂರಾವರೆ ಸಾವಿರ ರೂಪಾಯಿ ಖರ್ಚುಮಾಡಿದ್ದಾರೆ. ಅವರ ಮನಸ್ಸು ತುಂಬ ಧಾರಾಳ ಅಕ್ಕಾ - ಹೀಗೆ ದುಡ್ಡು ಖರ್ಚುಮಾಡುವವರನ್ನು ನಾನು ನೋಡಿಯೇ ಇಲ್ಲ."

"ಇವರನ್ನು ನಿಜವಾಗಿ ಪ್ರೀತಿಸುತ್ತೀಯೇನೇ ಪುಷ್ಪ ?"

"ನಿಜವಾದ ಪ್ರೀತಿಯೆಂದರೇನೆಂಬುದನ್ನು ಅವರೇ ಹೇಳಿಕೊಟ್ಟರು ಜ್ಯೂಡಿ. ಜತೆಯಲ್ಲಿರಲು ನಾನೇ ಬಲವಂತ ಮಾಡಿದೆನಲ್ಲದೆ ಅವರು ಪ್ರಯತ್ನಿಸಲಿಲ್ಲ.ನಾನು ಸ್ವರ್ಗದಿಂದ ಇಳಿದು ಬಂದ ದೇವತೆಯೆಂದು ತಿಳಿದುಕೊಂಡಿದ್ದಾರೆ."

"ನಿನ್ನ ದೇವತೆ ಎಂದು ಕರೆದವರು ಇವರೇ ಅಲ್ಲವಲ್ಲ."

"ಅದಕ್ಕೂ ಇದಕ್ಕೂ ತುಂಬ ವ್ಯತ್ಯಾಸವಿದೆ ಅಕ್ಕಾ. ತಮ್ಮ ಸ್ವಾರ್ಥಕ್ಕಾಗಿ ಇತರರು ನನ್ನ ದೇವತೆ ಎಂದು ಕರೆದಿರಬಹುದು. ಇಲ್ಲಿ ಸ್ವಾರ್ಥವಿಲ್ಲ. ನನಗೆ ಇವರು ತೋರಿಸುವ ಗೌರವ ನೋಡಿ ಭೂಮಿಗಿಳಿದು ಹೋಗುತ್ತೇನೆ. ನನ್ನ ಚರಿತ್ರೆಯನ್ನೆಲ್ಲಾ ಹೇಳಿಕೊಂಡು 'ಬೇಡಿ - ನನ್ನ ಸಹವಾಸ ಬಿಟ್ಟುಬಿಡಿ.

ನಿಮ್ಮ ಪಾದಧೂಳಿಯನ್ನು ಹೋಲುವ ಯೋಗ್ಯತೆಯೂ ನನಗಿಲ್ಲ' ಎಂದು ಪ್ರಾರ್ಥಿಸಿಕೊಳ್ಳಬೇಕೆಂದು ಮನಸ್ಸಾಗುತ್ತದೆ."

"ಹುಚ್ಚಿ - ಅಂಥ ಅವಿವೇಕವೆಲ್ಲಿಯಾದರೂ ಮಾಡೀಯೆ. ಇಂಥ ಅವಕಾಶ ಪ್ರತಿನಿತ್ಯ ಬೀದಿಯಲ್ಲಿ ದೊರಕುವುದಿಲ್ಲ. ಆದರೆ ಪುಷ್ಪಾ . . . ."

"ಏನಕ್ಕಾ ?"

"ನೀನು ಮದುವೆಯಾದರೆ ಡ್ಯಾಡಿ, ಮಮ್ಮಿಯ ಗತಿ ? ಅವರಿಗೆ ಸಹಾಯಮಾಡುವ ಯೋಗ್ಯತೆ ನನಗಿಲ್ಲ - ನೀನೂ ಅವರ ಕೈಬಿಟ್ಟರೆ . . . ."

"ಅವರ ಕೈಬಿಡುವುದಿಲ್ಲಕ್ಕಾ."

ಕೈಗಡಿಯಾರ ನೋಡಿಕೊಂಡು 'ಹೊತ್ತಾಯಿತಕ್ಕಾ' ಎಂದಳು. ಜ್ಯಾಡಿ ಟ್ರೇಯಲ್ಲಿ ಎಲ್ಲರಿಗೂ ಕಾಫಿಯಿಟ್ಟುಕೊಂಡು ತಂಗಿಯ ಜತೆ ಬಂದಳು.

ಎಲ್ಲರೂ ಕಾಫಿ ಸೇವಿಸುತ್ತಿದ್ದಾಗ ಸ್ಯಾಮುಯಲ್

"ಪುಷ್ಪಾ, ನಿನ್ನ ಫಿಯಾನ್ಸಿಯನ್ನು ಕರೆದುಕೊಂಡು ನಾಳೆ ಇಲ್ಲೇ ಊಟಕ್ಕೆ ಬಾ" ಎಂದು ಹೇಳಿದ.

ಸಂಜೀವ ಅವಳು ಉತ್ತರಕೊಡುವುದಕ್ಕೆ ಮುಂಚೆ

"ಕ್ಷಮಿಸಿ. ನಾವು ನಾಳೆ ಊರಿಗೆ ಹೋಗಲೇಬೇಕಾಗಿದೆ. ಇನ್ನೊಮ್ಮೆ ಬಂದಾಗ ಅವಶ್ಯಕವಾಗಿ ಬರುತ್ತೇವೆ." ಎಂದ.

ಜ್ಯಾಡಿ ಔಪಚಾರಿಕವಾಗಿ ಸಂಜೀವನಿಗೆ

"ನೀವು ನಮ್ಮ ಮನೆಯವರೇ ಆದಿರಿ. ಇನ್ನು ಮೇಲೆ ಬೆಂಗಳೂರಿಗೆ ಬಂದರೆ ಹೊಟೇಲಿಗೆ ಹೋಗಬೇಡಿ - ಬಡವರ ಮನೆಗೇ ಬನ್ನಿ" ಎಂದಳು.

ಸಂಜೀವ 'ಆಗಲಮ್ಮ' ಎಂದು ಹೇಳಿ ಹೊರಡಲು ಎದ್ದ.

ಸ್ಯಾಮ್ಯುಯಲ್ ಸಂಜೀವನ ಜತೆಯಲ್ಲಿ ಟ್ಯಾಕ್ಸಿಯವರೆಗೆ ಬಂದ. ಅವರ ಹಿಂದೆ ಜ್ಯಾಡಿ ಪುಷ್ಪ ಬಂದರು.

"ನಿಮ್ಮಿಬ್ಬರದೂ ಫೋಟೋ ತೆಗೆಸಿ ಕಳಿಸಿಕೊಡೇ."

"ತೆಗೆಸಿದ್ದೇನಕ್ಕಾ. ನಿನಗೆ ಎಂದು ಒಂದು ಕಾಪಿಯೂ ಇಟ್ಟಿದ್ದೇನೆ. ಜತೆಯಲ್ಲಿ ತರುವುದನ್ನು ಮರೆತುಬಿಟ್ಟೆ. ಊರಿಗೆ ಹೋದಕೂಡಲೆ ಕಳಿಸಿ ಕೊಡುತ್ತೇನೆ."

"ಮಮ್ಮಿ ಡ್ಯಾಡಿಗೆ ನನ್ನ ಲವ್ (Love) ತಿಳಿಸು."

ಪುಷ್ಪ ಜ್ಯಾಡಿ ಅಪ್ಪಿಕೊಂಡರು. ಸ್ಯಾಮ್ಯುಯಲ್ ಸಂಜೀವನ ಕೈಕುಲುಕಿದ. ಸಂಜೀವ ಟ್ಯಾಕ್ಸಿಯಲ್ಲಿ ಕುಳಿತು ಹೊರಡಲು ಸಾಮ್ಯುಯಲ್, ಜ್ಯಾಡಿ ಒಳಕ್ಕೆ ಬಂದರು.

ಟ್ಯಾಕ್ಸಿಯಲ್ಲಿ ಬರುವಾಗ ಪುಷ್ಪ

"ನಾಳೆ ಹೊರಡುವುದು ನಿಜವೇ ಡಾರ್ಲಿಂಗ್" ಎಂದು ಕೇಳಿದಳು.

"ಇಲ್ಲಿಗೆ ಬಂದ ಕೆಲಸ ಮುಗಿಯಿತಲ್ಲ. ಇನ್ನು ಊರಿಗೆ ಹೋಗೋಣ."

"ಸುನಂದನನ್ನು ನೋಡದೆ ಹೋಗುವುದೇ?"

"ಅವರನ್ನು ನೋಡಬೇಕೇನು?"

"ಬೆಂಗಳೂರಿಗೆ ಬಂದಾಗ ಖಂಡಿತ ಬರುವುದಾಗಿ ನೀವೇ ಹೇಳಿದಿರಿ"

"ನಾಳೆ ಅವರನ್ನು ನೋಡಿಕೊಂಡು ನಾಡಿದ್ದು ಊರಿಗೆ ಹೋಗೋಣ"

"ನಾಳೆ ಇಲ್ಲಿ ಇರುವ ಹಾಗಿದ್ದರೆ ಜ್ಯಾಡಿಯನ್ನು ಕರೆದುಕೊಂಡು ಎಲ್ಲಿಗಾದರೂ ಹೋಗಬಹುದಾಗಿತ್ತು."

"ಅವರ ಮನೆಯಲ್ಲಿಯೇ ಹೇಳಿದ್ದರೆ ಚೆನ್ನಾಗಿತ್ತಲ್ಲ."

"ಭಾವನ ಪ್ರೆಸ್ಸಿನಲ್ಲಿ ಫೋನ್ ಇದೆ - ಬೆಳಿಗ್ಗೆ ನೀವು ಫೋನ್ ಮಾಡಿ ತಿಳಿಸಿ."

"ಹಾಗೇ ಆಗಲಿ - ಸುನಂದಮ್ಮನ ಮನೆಗೆ ಹೋಗುವುದು ಯಾವಾಗ?"

"ಮಧ್ಯಾನ್ಹ ಬೇಗ ಹೊರಟು, ಸುನಂದನನ್ನು ನೋಡಿಕೊಂಡು ಜ್ಯಾಡಿ ಮನೆಗೆ ಹೋಗೋಣ."

'ಆಗಬಹುದು' ಎಂದು ಸಂಜೀವ ಒಪ್ಪಿಕೊಂಡ.

ಸಂಜೀವನ ಪ್ರತಿಯೊಂದು ಮಾತು, ನಡತೆ ಪ್ರೇಮಸೌಧದ ಅಸ್ತಿಭಾರವನ್ನು ಮತ್ತಷ್ಟು ಬಲಪಡಿಸುತ್ತಿತ್ತು. ಪುಷ್ಪನ ಹೃದಯ ಕೃತಜ್ಞತೆಯ ಭಾರದಿಂದ ತೊನೆಯಲಾರಂಭಿಸಿತು.

ಊಟ, ತಾಂಬೂಲಚರ್ವಣ ಮುಗಿದ ಮೇಲೆ ಸಂಜೀವ ಹಾಸಿಗೆಯ ಮೇಲೆ ಅಡ್ಡಾದ. ಪುಷ್ಪ ಬಂದು ಅವನೊತ್ತಿಗೆ ಕುಳಿತಳು. ಅವಳು ಮ್ಲಾನವದನಳಾಗಿದ್ದುದನ್ನು ಕಂಡು, ಸಂಜೀವ ಮೃದುವಾಗಿ

"ಆಯಾಸವಾಯಿತೇ ಸ್ವೀಟ್" ಎಂದು ಕೇಳಿದ.

"ಇಲ್ಲ" ಎಂದು ಕ್ಷೀಣಸ್ವರದಲ್ಲಿ ನುಡಿದು, ಪುಷ್ಪ ಅವನ ಕಾಲುಗಳನ್ನು ಮುಟ್ಟಿದಳು. ತಕ್ಷಣ ಅವಳ ಕಣ್ಣಲ್ಲಿ ನೀರೊಡೆಯಿತು. ಸಂಜೀವ ಗಾಬರಿಯಾಗಿ ದಿಗ್ಗನೆದ್ದು ಕುಳಿತು, ಅವಳ ಗಲ್ಲ ಹಿಡಿದು

"ಏಕೆ ಡಾರ್ಲಿಂಗ್ - ಏನಾಯಿತು?" ಎಂದು ಕೇಳಿದ.

"ನೀವೆಷ್ಟು ಒಳ್ಳೆಯವರು ದೊರೆ."

"ನಾನು ಒಳ್ಳೆಯವನು ಎಂದು ನೀನು ಕಣ್ಣೀರ್ಗರೆಯಬೇಕೇ?"

"ಅದಕ್ಕಲ್ಲ - ನಿಮ್ಮ ಯೋಗ್ಯತೆಗೆ ನಾನು ತಕ್ಕವಳಲ್ಲ."

"ನಿನ್ನ ಯೋಗ್ಯತೆ ಅಳೆದಿರುವವನು ನಾನು ಅದು ದೊಡ್ಡದೆಂದು ನನ್ನ ಅಂತರಾತ್ಮ ಹೇಳುತ್ತಿದೆ."

ಪುಷ್ಪನ ಹೃದಯಕ್ಕೆ ಮತ್ತಷ್ಟು ವೇದನೆಯಾಯಿತು.

"ನೀವು ಎಂದಿಗೂ ನನ್ನ ಕೈಬಿಡುವುದಿಲ್ಲವೇ?"

"ಕೈಬಿಡುವುದಕ್ಕಲ್ಲ ಕೈಹಿಡಿಯುವುದು. ಈ ಪ್ರಶ್ನೆ ಕೇಳಿ ನೀನು ನನ್ನ ಮನಸ್ಸಿಗೆ ನೋವುಂಟುಮಾಡುತ್ತೀ."

"ಕ್ಷಮಿಸಿ."

"ನಿನ್ನ ಮನಸ್ಸಿನಲ್ಲಿ ಏನಿದೆಯೆಂಬುವನ್ನಾದರೂ ಸ್ಪಷ್ಟವಾಗಿ ಹೇಳು."

"ಯಾವ ಕಾರಣಕ್ಕೂ ನಾವಿಬ್ಬರೂ ಅಗಲಬಾರದು"

"ಜಾತಿ, ಮತ, ಕುಲ, ಗೋತ್ರ, ಬಂಧುಬಳಗ ಯಾವದೂ ನಮ್ಮಿಬ್ಬರನ್ನು ಅಗಲಿಸಲು ಸಾಧ್ಯವಿಲ್ಲ ಪುಷ್ಪ - ನೀನು ನಿರಾಂತಕವಾಗಿರು."

'ಆದದ್ದಾಗಲಿ ಎಂದು ಈಗ ಸತ್ಯಸಂಗತಿ ಹೇಳಿ ಬಿಡಲೇ' ಎಂದು ಪುಷ್ಪ ಯೋಚಿಸಿದಳು. ಆದರೆ ಧೈರ್ಯವಾಗಲಿಲ್ಲ. 'ಗಂಡಸರ ಮನಸ್ಸು ಹೀಗೇ ಎಂದು ಹೇಳಲು ಸಾಧ್ಯವಿಲ್ಲ. ನನ್ನ ಮೇಲೆ ಇವರು ತಳೆದಿರುವ ಅಸೀಮ ಪ್ರೇಮಕ್ಕೆ ನಾನೇ ಏಕೆ ಕೊಡಲಿಹಾಕಲಿ.' ಎಂದುಕೊಂಡು, ಸಂಜೀವನ ಮುಖ ನೇವರಿಸುತ್ತಾ

"ನಿಮ್ಮನ್ನು ನನ್ನ ಹೃದಯಮಂದಿರದಲ್ಲಿಟ್ಟು ಪೂಜಿಸುತ್ತೇನೆ ದೊರೆ. ನೀವು ಸುಖವಾಗಿರುವುದೊಂದೇ ನನಗೆ ಬೇಕಾದದ್ದು. ತಿಳಿಯದೆ ನಾನು ತಪ್ಪುಮಾಡಿದರೆ ಕ್ಷಮಿಸಿಬಿಡಿ."

"ತಪ್ಪು ಯಾರು ಮಾಡುವುದಿಲ್ಲ. ಮನುಷ್ಯ ಮಾಡುವ ತಪ್ಪುಗಳನ್ನೆಲ್ಲಾ ನಾವು ಎಣಿಕೆ ಹಾಕುತ್ತ ಕೂಡಬಾರದು. ತಪ್ಪು, ಒಪ್ಪು ಒಂದಕ್ಕೊಂದು ಹೆಣೆದುಕೊಂಡೇ ಇರುತ್ತವೆ. ಬಲ್ಲವರು ತಪ್ಪುಗಳನ್ನು ಮರೆತು ಒಪ್ಪುಗಳನ್ನು ಗೌರವಿಸುತ್ತಾರೆ."

ಸಂಜೀವನ ಮಾತು ಪುಷ್ಪನ ಹೃದಯಕ್ಕೆ ಸಂಜೀವಿನಿಯನ್ನೆರೆಯಿತು.

ಮಾರನೆಯ ಬೆಳಿಗ್ಗೆ ಇ. ಎಲ್. ಎಸ್. ಸೊಸೈಟಿಯ ಪ್ರೆಸ್ಸಿಗೆ ಸಂಜೀವ ಫೋನ್‌ಮಾಡಿದ. ಸಾಮ್ಯುಯಲ್ ಬಂದು ರಿಸೀವರ್ ತೆಗೆದುಕೊಂಡು ಮಾತನಾಡಿದ. ಸಂಜೀವನ ಸಲಹೆ ಕೇಳಿ ಸಾಮ್ಯುಯಲ್

"ನನಗೆ ಇಂದು ಆರುಗಂಟೆಗೆ ಬಿಡುವಾಗುವುದಿಲ್ಲ. ಓವರ್‌ಟೈಮ್ ಕೆಲಸ ಬಿದ್ದಿದೆ. ನೀವು ಪುಷ್ಪ ಜ್ಯಾಡಿ ಪಿಕ್ಚರಿಗೆ ಹೋಗಿ ಬನ್ನಿ. ಪಿಕ್ಚರ್ ಮುಗಿಸಿಕೊಂಡು ಪ್ರೆಸ್ ಬಳಿಬಂದರೆ ನಾನೂ ಜತೆಯಲ್ಲಿ ಬರುತ್ತೇನೆ. ಅಷ್ಟು ಹೊತ್ತಿಗೆ ನನ್ನ ಕೆಲಸ ಮುಗಿಸಿಕೊಂಡಿರುತ್ತೇನೆ." ಎಂದು ಹೇಳಿದ.

ಸಂಜೀವ ಸಂಭಾಷಣೆಯನ್ನು ಪುಷ್ಪನಿಗೆ ವರದಿಮಾಡುತ್ತಾ

"ಸಾಮ್ಯುಯಲ್ ಹೇಳಿದ ಹಾಗೆ ನಾವು ಪಿಕ್ಚರಿಗೆ ಹೋಗಿ ಅನಂತರ ಸಾಮ್ಯುಯಲ್ ಅವರನ್ನೂ ಕರೆದುಕೊಂಡು ಇಲ್ಲಿಗೆ ಬರೋಣ. ಅವರಿಬ್ಬರೂ ಇಲ್ಲಿಯೇ ಊಟಮಾಡಲಿ."

"ಆಗಬಹುದು. ಅವರು ಮನೆಗೆ ಹಿಂದಿರುಗುವುದು ಹೇಗೆ ?"

"ಊಟ ಮುಗಿದ ಮೇಲೆ ನಾವಿಬ್ಬರೂ ಜತೆಯಲ್ಲಿ ಹೋಗಿ ಅವರನ್ನು ಕಳಿಸಿ ಬರೋಣ - ಟ್ಯಾಕ್ಸಿ ಇದ್ದೇ ಇರುತ್ತದೆ."

"ಸ್ಪ್ಲೆಂಡಿಡ್ (Splendid)" ಎಂದು ಪುಷ್ಪ ಹರ್ಷ ವ್ಯಕ್ತಮಾಡಿ

"ದೊರೆ, ನೀವು ಒಪ್ಪುವ ಹಾಗಿದ್ದರೆ ನಾನೊಂದು ಕೆಲಸಮಾಡಬೇಕೆಂದಿದ್ದೇನೆ"

"ಏನು ಹೇಳು."

"ಅಕ್ಕನಿಗೆ ಏನಾದರೂ ಪ್ರೆಸೆಂಟ್ (Present) ಕೊಡಬೇಕೆಂದು ಮನಸ್ಸಾಗಿದೆ. ನಿಮಗೆ ಅಸಮಾಧಾನವಾಗದಿದ್ದರೆ ನನ್ನ ಹೊಸಸೀರೆಗಳಲ್ಲಿ ಒಂದನ್ನು ಕೊಡುತ್ತೇನೆ."

"ಈ ವಿಷಯ ನನ್ನ ಕೇಳಬೇಕಾದ ಅಗತ್ಯವೇ ಇಲ್ಲ ಡಾರ್ಲಿಂಗ್. ಅಕ್ಕನಿಗೆ ನೀನು ಪ್ರೆಸೆಂಟ್ ಕೊಡುವುದಕ್ಕೆ ಬೇಡವೆನ್ನುತ್ತೇನೆಯೇ? ಆದರೆ ನಿನ್ನ ಸೀರೆ ಕೊಡಬೇಡ - ಮಧ್ಯಾಹ್ನ ಅವರ ಮನೆಗೆ ಹೋಗುವಾಗ ಒಂದು ಸೀರೆ ಹೊಸದಾಗಿ ಕೊಂಡರಾಯಿತು."

"ಹೇಗೂ ಅವರ ಮನೆಗೆ ಬೇಗ ಹೋಗುತ್ತೇವೆ. ಅವಳನ್ನೇ ಕರೆದು ಕೊಂಡು ಹೋಗಿ ಕಂಟೋನ್ಮೆಂಟಿನಲ್ಲಿಯೇ ಸೀರೆ ಕೊಡಿಸೋಣ."

"ಹಾಗೂ ಆಗಬಹುದು"

ಎಂದು ತನ್ನ ಸಮ್ಮತಿ ಸೂಚಿಸಿದ.

ಮಧ್ಯಾನ್ಹಾನಂತರ ಎರಡು ಗಂಟೆಗೆ ಹೊರಗೆ ಹೊರಡಲು ಇಬ್ಬರೂ ಸಿದ್ಧರಾದರು.

ಪುಷ್ಪ, ಸಂಜೀವ ಬರುವ ವಿಷಯ ಸುನಂದನಿಗೆ ಗೊತ್ತಿರಲಿಲ್ಲ. ಪುಷ್ಪನನ್ನು ನೋಡಿ ಅವಳು ಸಂತೋಷಯುತವಾದ ಆಶ್ಚರ್ಯ ವ್ಯಕ್ತಮಾಡಿದಳು. ಪುಷ್ಪನ ಅಲಂಕಾರ, ಉಡುಗೆ ತೊಡಿಗೆಯಲ್ಲಿ ಆಗಿದ್ದ ಮಾರ್ಪಾಟನ್ನು ಸುನಂದ ಕೂಡಲೆ ಗ್ರಹಿಸಿದಳು. ತನ್ನ ಒಳತೋಟಿಯನ್ನು ಹೊರಗೆಡವದೆ ನಗೆಮೊಗವನ್ನೇ ತಳೆದು ಸಂಜೀವನಿಗೆ

"ನೀವು ವಚನಭಂಗ ಮಾಡಿದಿರಿ" ಎಂದಳು.

"ವಚನಭಂಗವೇ!"

"ಹೌದು - ಬೆಂಗಳೂರಿಗೆ ಬಂದರೆ ನಮ್ಮ ಮನೆಗೇ ಬರುವುದಾಗಿ ಹೇಳಿರಲಿಲ್ಲವೇ?"

"ಸುಮ್ಮನೆ ತೊಂದರೆ ಕೊಡಬಾರದೆಂದು ಬರಲಿಲ್ಲ. ಸುಂದರರಾಯರೆಲ್ಲಿ?"

"ಕಾಲೇಜಿಗೆ ಹೋಗಿದ್ದಾರೆ."

ಸುನಂದ ಇಬ್ಬರನ್ನೂ ಕರೆದೊಯ್ದು ತನ್ನ ಮನೆ ತೋರಿಸಿದಳು.

"ನಿಮ್ಮ ಅಣ್ಣಾವರು ಹೊರಟುಹೋದರೇ?" ಎಂದು ಸಂಜೀವ ಕೇಳಿದ.

"ಅವತ್ತೇ ಪ್ರಯಾಣಮಾಡಿದರು. ಈಗ ದೆಹಲಿಯಲ್ಲಿದ್ದಾರೆ."

"ಅವರ ಭಾಷಣದ ವರದಿಯನ್ನು ಪತ್ರಿಕೆಗಳಲ್ಲಿ ಓದಿದೆ. ನನ್ನ ಅಭಿಪ್ರಾಯ, ನಿಮ್ಮ ಯಜಮಾನರ ಅಭಿಪ್ರಾಯ ಕೂಡುತ್ತದೆ."

"ಅಣ್ಣನಿಗೂ ಸ್ವದೇಶದ ಬಗ್ಗೆ ಪ್ರೀತಿ, ಗೌರವವಿದೆ. ನಮ್ಮ ಜನಗಳ ಗೊಡ್ಡು ಅಭಿಪ್ರಾಯಗಳನ್ನು ಮಾತ್ರ ಅವನು ಒಪ್ಪುವುದಿಲ್ಲ."

"ಅದು ಸರಿಯೇ. ಎಲ್ಲರೂ ಒಂದೇ ಅಭಿಪ್ರಾಯತಳೆಯಬೇಕೆಂದರೆ ಹೇಗೆ ಸಾಧ್ಯ."

ಅಣ್ಣನ ಬಗ್ಗೆ ಚರ್ಚೆ ಬೇಕಿಲ್ಲವೆಂದು ತೋರಿಸುವಂತೆ ಸುನಂದ ಪುಷ್ಪನ ಕಡೆ ತಿರುಗಿ

"ಯಾವಾಗ ನಿಮ್ಮ ಮದುವೆ."

"ಊರಿಗೆ ಹಿಂದಿರುಗಿದ ಕೂಡಲೆ ನಿಶ್ಚಯಿಸುತ್ತೇವೆ."

"ನನಗೆ ತಿಳಿಸುವುದನ್ನು ಮರೆಯಬೇಡಿ."

"ನಿಮ್ಮನ್ನು ಮರೆಯಲು ಹೇಗೆ ಸಾಧ್ಯ."

ಎಂದು ಪುಷ್ಪ ಎದ್ದು ನಿಂತಳು.

"ಇಷ್ಟುಬೇಗ ಹೊರಟುಬಿಡಬೇಕೇ ?"

"ಹೋಗಬೇಕಮ್ಮ. ನನ್ನ ಅಕ್ಕ ಜ್ಯಾಡಿಯನ್ನು ನೋಡಿಕೊಂಡು ಹೋಗಬೇಕು."

"ಅವರನ್ನು ಕಾಣುವುದಿಲ್ಲವೇ ?"

"ಮತ್ತೊಮ್ಮೆ ಬರುತ್ತೇವೆ."

"ನಿಮಗೆ ಕಾಫಿ ಕೂಡ ಕೊಡಲಿಲ್ಲ."

ಎಂದು ಸುನಂದ ಉಪಚಾರ ಹೇಳಿದಳು.

ಜ್ಯಾಡಿಯ ಮನೆಗೆ ಬರುತ್ತಾ ಕಾರಿನಲ್ಲಿ ಪುಷ್ಪ ದುಃಖತುಂಬಿದ ಧ್ವನಿಯಲ್ಲಿ

"ನಾವು ಸುನಂದನ ಮನೆಗೆ ಹೋಗಬಾರದಿತ್ತು."

"ಏಕೆ ?"

"ಅವಳಲ್ಲಿ ಇಷ್ಟು ಅಸೂಯೆ ತುಂಬಿದೆಯೆಂದು ನನಗೆ ಗೊತ್ತಿರಲಿಲ್ಲ."

"ಅಸೂಯೆ ಪಡುವುದಕ್ಕೆ ಕಾರಣ."

"ನನ್ನ ಓಲೆ, ಬಳೆ, ಸರ, ಸೀರೆ."

"ಹೆಂಗಸಿನ ಶತ್ರು ಹೆಂಗಸೆಂದು ನಾನು ಹೇಳಿಲ್ಲವೇ ! ಹೋಗಲಿಬಿಡು. ಅವರ ಜತೆ ನಾವು ಇರಬೇಕಾಗಿಲ್ಲವಲ್ಲ !"

ಎಂದು ಸಮಾಧಾನ ಹೇಳಿದ.

ಬೆಳಿಗ್ಗೆ ಫೋನ್‌ನಲ್ಲಿ ಸಂಜೀವನ ಜತೆ ಮಾತನಾಡಿದ ಮೇಲೆ ಸ್ಯಾಮ್ಯುಯಲ್ ಮನೆಗೆ ಸುದ್ದಿ ಕಳುಹಿಸಿ, ಸಂಜೀವ, ಪುಷ್ಪ ಬರುವ ವಿಷಯ ತಿಳಿಸಿದ್ದ. ಜ್ಯೂಡಿ ಮನೆಯಲ್ಲಿ ತಿಂಡಿ, ಕಾಫಿ ಮಾಡಿಟ್ಟು, ಇದ್ದುದರಲ್ಲೇ ಲಕ್ಷಣವಾಗಿದ್ದ ಕೆಂಪುವರ್ಣದ ಬೆಂಗಾಲ್ ಸಿಲ್ಕ್ ಸೀರೆ ಉಟ್ಟುಕೊಂಡು, ಅವರಿಗೆ ಸ್ವಾಗತಬಯಸಲು ಸಿದ್ಧಳಾಗಿದ್ದಳು.

ಮಾತಿಗೆ ಕೂಡಲು ಜ್ಯೂಡೀಗೆ ಅವಕಾಶಕೊಡಲಿಲ್ಲ, ಪುಷ್ಪ ಅವಸರ ಮಾಡಿ, ತಿಂಡಿ ಕಾಫಿ ವಿಧಿ ಪೂರೈಸಿ, ಅವಳನ್ನು ಹೊರಡಿಸಿದಳು.

ಟ್ಯಾಕ್ಸಿ ಡ್ರೈವರ್ 'ಚೆಟ್ಟಿಹಾಲ್' ಮುಂದೆ ಕಾರು ತಂದು ನಿಲ್ಲಿಸಿದ.

ಪುಷ್ಪ ಅಂಗಡಿಯವನಿಗೆ ಹೇಳಿ ಬೀರುವಿನಿಂದ ಬಗೆಬಗೆಯ ಸೀರೆಗಳನ್ನು ತೆಗೆಸಿ

"ನನಗೊಂದು ಒಳ್ಳೆಯ ಸೀರೆ ಆರಿಸು ಜ್ಯೂಡಿ" ಎಂದಳು.

ಪುಷ್ಪ, ಜ್ಯೂಡಿ ಇಬ್ಬರೂ ಹತ್ತಾರು ಸೀರೆಗಳ ಅಂಚು, ಒಡಲು, ಧಡೂತಿ ಪರೀಕ್ಷೆಮಾಡಿ ನೋಡಿ ಕೊನೆಗೆ ವಾಚಿಬಣ್ಣದ ಮೈಸೂರು ಸಿಲ್ಕಿನ ಸೀರೆ ಆರಿಸಿದರು. ಸೀರೆಯ ಧಾರಣೆ ನೂರಿಪ್ಪತ್ತೆಂಟು ರೂಪಾಯಿ ತೆತ್ತು ಸಂಜೀವ ಅದನ್ನು ಕೈಗೆ ತೆಗೆದುಕೊಂಡ.

ಪುಷ್ಪನ ಸೂಚನೆಯಂತೆ ಕಾರು ಮತ್ತೆ ಜ್ಯೂಡಿಯ ಮನೆಯ ಬಳಿಗೆ ಬಂದಿತು. ಸಂಜೀವನನ್ನು ಕಾರಿನಲ್ಲಿಯೇ ಇರಹೇಳಿ ಪುಷ್ಪ ಅಕ್ಕನನ್ನು ಕರೆದುಕೊಂಡು ಒಳಗೆ ಹೋದಳು.

"ಜ್ಯೂಡಿ - ಬೇಗ ಈ ಸೀರೆ ಉಟ್ಟುಕೋ"

ಜ್ಯೂಡಿ ಚಕಿತಳಾಗಿ

"ನಿನಗೇನು ಹುಚ್ಚೋ ಮೇರಿ - ಸೀರೆ ವ್ಯಾಪಾರಮಾಡಿದ್ದು ನನಗಾಗಿ ಎಂದು ಮೊದಲೇ ತಿಳಿಯಲಿಲ್ಲ."

"ತಿಳಿದಿದ್ದರೆ ?"

"ಖಂಡಿತ ನಿನ್ನ ಜತೆ ಅಂಗಡೀಗೆ ಬರುತ್ತಿರಲಿಲ್ಲ."

"ಹೊತ್ತಾಯಿತು. ಹೊರಗೆ ಕಾರಿನಲ್ಲಿ ನಮ್ಮ ಯಜಮಾನರು ಕಾಯು

ತ್ತಿದ್ದಾರೆ - ಪ್ರೆಸ್ಸಿನಲ್ಲಿ ನಿಮ್ಮ ಯಜಮಾನರು ಕಾಯುತ್ತಿದ್ದಾರೆ - ಸಿನೀಮಾ ವೇಳೆಯಾಗುತ್ತ ಬಂತು."

"ನಾನು ಖಂಡಿತವಾಗಿ ನಿನ್ನ ಪ್ರೆಸೆಂಟ್ (Present) ಸ್ವೀಕರಿಸುವುದಿಲ್ಲ ಮೇರಿ."

"ನೀನು ಸ್ವೀಕರಿಸದಿದ್ದರೆ ಪುನಃ ನಿನ್ನ ಮನೆಗೆ ನಾನು ಕಾಲಿಡುವುದಿಲ್ಲ"

"ಇದು ನ್ಯಾಯವಲ್ಲ. ನಾನು ಹಿರಿಯಳು - ನಾನು ನಿನಗೆ ಪ್ರೆಸೆಂಟ್ಸ್ ಕೊಡಬೇಕು - ನಿನ್ನಿಂದ ತೆಗೆದುಕೊಳ್ಳುವುದು ನಾಚಿಗೇಡು - ಸಣ್ಣಪುಟ್ಟ ದ್ದಾಗಿದ್ದರೆ ಹೋಗಲಿ ಎನ್ನಬಹುದು - ಇಷ್ಟು ಭಾರಿ ಉಡುಗೊರೆ ನಾನು ಮುಟ್ಟಲಾರೆ.''

"ಜ್ಯೂಡಿ - ನಮ್ಮೆಲ್ಲರನ್ನೂ ನೀನು ಸಾಕಿದ್ದು ಮರೆತುಹೋಯಿತೇ ? ನನ್ನ ಒಳ್ಳೆಯ ಅದೃಷ್ಟವೆಲ್ಲಾ ನಿನ್ನ ಬ್ಲೆಸಿಂಗ್ಸ್ (Blessings) ಫಲವಲ್ಲವೇ ?"

ಎನ್ನುತ್ತಿರುವಂತೆ ಪುಷ್ಪನ ಕಣ್ಣಲ್ಲಿ ಕೋಡಿಹರಿಯಿತು. ಜ್ಯೂಡಿ ತಂಗಿ ಯನ್ನು ತಬ್ಬಿಕೊಂಡು ಮುದ್ದಾಡಿದಳು. ಪುಷ್ಪ ತನ್ನ ದುಃಖ ನಿಗ್ರಹಿಸಿ ಕೊಂಡು, ಎದ್ದುನಿಂತು ಅಕ್ಕನಿಗೆ ತಾನೇ ಹೊಸ ಸೀರೆ ಉಡಿಸಿದಳು. ಅಕ್ಕ - ತಂಗಿ ಕ್ಷಣಕಾಲ ಅಪ್ಪಿಕೊಂಡು ಲೋಕವನ್ನೇ ಮರೆತರು. ಹೊರಗೆ ಕಾರ್ ಹಾರ್ನ್ ಶಬ್ದ ಕೇಳಿಸಿತು.

"ಯಜಮಾನರು ಅಲಾರಂ ಸಿಗ್ನಲ್ (Alaram - Signal) ಕೊಡು ತ್ತಿದ್ದಾರೆ''

ಎಂದು ಪುಷ್ಪ ಪರಿಹಾಸ್ಯಮಾಡಿದಳು. ಜ್ಯೂಡಿ ಹೊಸಸೀರೆ ಧರಿಸಿ ಬಂದದನ್ನು ಸಂಜೀವ ಗಮನಿಸಿದ.

ಸಂಜೀವ, ಪುಷ್ಪ, ಜ್ಯೂಡಿಯವರ ದಾರಿನೋಡುತ್ತ ಸ್ಯಾಮ್ಯುಯಲ್ ಪ್ರೆಸ್ಸಿನ ಬಾಗಿಲಿನಲ್ಲೇ ಕಾದಿದ್ದ. ಕಾರು ನಿಂತಕೂಡಲೆ ಅದರಲ್ಲಿ ಹತ್ತಿ ಕುಳಿತ. ಹೆಂಡತಿ ಧರಿಸಿದ್ದ ಹೊಸ ಸೀರೆ ಗಮನಿಸಿ 'ಏನಿದು' ಎಂದು ಕೇಳಿದ. 'ಮೇರಿಯ ಪ್ರೆಸೆಂಟ್' ಎಂದು ಜ್ಯೂಡಿ ಹೇಳಿದಳು.

'ಪ್ಲಾಜಾ' ಸಿನೀಮಾ ಮಂದಿರದಲ್ಲಿ ಗ್ರೀಯರ್ ಗಾರ್ಸನ್ ಅಭಿನಯಿ ಸಿದ್ದ 'ಮ್ಯಾಡಾಂ ಕ್ಯೂರಿ' ಚಿತ್ರ ನಡೆಯುತ್ತಿತ್ತು. ಆ ಚಿತ್ರಕ್ಕೇ ಹೋಗತಕ್ಕ ದೆಂದು ಎಲ್ಲರೂ ನಿರ್ಧರಿಸಿದರು.

ಚಿತ್ರ ಮುಗಿಸಿಕೊಂಡು ಹೊಟೇಲಿಗೆ ಹೋಗುವಾಗ ಜ್ಯೂಡಿ

"ಅದೂ ಇದೂ ಹಾಳು ಚಿತ್ರಗಳು ನೋಡುವುದಕ್ಕಿಂತ ಇಂಥ ಒಂದೆರಡು ಚಿತ್ರಗಳು ನೋಡಿದರೆ ಸಾಕು" ಎಂದಳು.

ಅವಳ ಅಭಿಪ್ರಾಯವನ್ನು ಹೃತ್ಪೂರ್ವಕವಾಗಿ ಅನುಮೋದಿಸುತ್ತಾ ಸಂಜೀವ ತುಂಟತನದಿಂದ

"ಕೇಳಿದೆಯಾ ಪುಷ್ಪ" ಎಂದ.

"ಮೇರೀಗೆ ಸಿನೇಮಾ ಕಂಡರೆ ಇಷ್ಟ"

ಎಂದು ಸ್ಯಾಮ್ಯುಯಲ್ ಅಡ್ಡಗೋಡೆಯ ದೀಪವಿಟ್ಟ ಹಾಗೆ ಹೇಳಿದ.

"ನೀವು ಚಿತ್ರಗಳನ್ನು ನೋಡುವುದಿಲ್ಲವೆ ಮಿಸಸ್. ಸ್ಯಾಮ್ಯುಯಲ್"

ಎಂದು ಸಂಜೀವ ಕೇಳಿದ.

"ನೋಡುವುದಿಲ್ಲ ಎಂದು ನಾನು ಶಪಥಮಾಡಿಲ್ಲ. ಒಳ್ಳೆಯ ಚಿತ್ರಗಳು ಬಂದರೆ ಇಬ್ಬರೂ ಹೋಗುತ್ತೇವೆ. ನನಗೆ ಚಿತ್ರಕ್ಕಿಂತ ಸಂಗೀತ ಕಂಡರೆ ಇಷ್ಟ."

"ಒಮ್ಮೊಮ್ಮೆ ಚಿತ್ರಗಳಲ್ಲಿಯೂ ಒಳ್ಳೆಯ ಸಂಗೀತ ಬರುತ್ತದೆ."

"ಚಿತ್ರದ ಸಂಗೀತ ಹೆಚ್ಚಾಗಿ ಜಾಜ್. (Jazz) ಅದು ನನಗೆ ಹಿಡಿಸುವುದಿಲ್ಲ."

"ಜ್ಯೂಡಿ ತುಂಬ ಹೈಬ್ರೊ (Highbrow) ಕಣ್ರೀ. ಅವಳಿಗೆ ಮೊಜಾರ್ಟ್, ಬೀಥೋವನ್, ಬಾಕ್, ಹೇಡನ್ ಇವರ ಸಂಗೀತವೇ ಬೇಕು."

ಎಂದು ಪುಷ್ಪ ಹೇಳಿದಳು. ಸಂಜೀವನಿಗೆ ಜ್ಯೂಡಿಯ ಅಭಿರುಚಿ ಕಂಡು ಆಶ್ಚರ್ಯವಾಯಿತು.

"ಭಾರತೀಯ ಸಂಗೀತ ಕಂಡರೆ ನಿಮಗಿಷ್ಟವಿಲ್ಲವೇ ಮಿಸಸ್ ಸ್ಯಾಮ್ಯುಯಲ್."

"ನಾನು ಸಣ್ಣವಳಿದ್ದಾಗ ಪಿಯಾನೊ (Piano) ಕಲಿಯುತ್ತಿದ್ದೆ. ಅದೇ ಅಭಿರುಚಿ ಬೆಳೆದುಬಂತು. ಕಂಟೋನ್ಮೆಂಟಿನಲ್ಲಿ ಭಾರತೀಯ ಸಂಗೀತ ಹೆಚ್ಚಾಗಿ ಕೇಳುವ ಅವಕಾಶವೂ ಇರಲಿಲ್ಲ. ಹೀಗಾಗಿ ಇಂಗ್ಲಿಷ್ ಸಂಗೀತದ ಮೇಲೆ ನನ್ನ ಪ್ರೀತಿ ಬೆಳೆಯಿತು . . . . ನಿಮಗೆ ಇಂಗ್ಲಿಷ್ ಸಂಗೀತ ಸೇರುವುದಿಲ್ಲವೇ ?"

"ಜಾಜ್ ನನಗೂ ಹಿಡಿಯುವುದಿಲ್ಲ. ಆದರೆ ಬೀಠೊವನ್ನನಂಥ ಕಲಾವಿದನ ಸಂಗೀತ ಸೇರುತ್ತದೆ. ಅರ್ಥವಾಗುವುದಿಲ್ಲ. ದೊಡ್ಡ ಕಲೆ ಯಾವದನ್ನು ಅರ್ಥಮಾಡಿಕೊಳ್ಳಬೇಕಾದರೂ ಸಾಧನೆ ಬೇಕಲ್ಲವೇ ?"

ಹೊಟೇಲ್ ಸಿಕ್ಕಿತು. ಸಂಜೀವ ಎಲ್ಲರನ್ನೂ ತನ್ನ ರೂಮಿಗೆ ಕರೆದೊಯ್ದು, ಕುಳ್ಳಿರಿಸಿ ಮಾಣಿಯನ್ನು ಕರೆದು ಊಟ ತೆಗೆದುಕೊಂಡು ಬರಲು ಹೇಳಿದ.

ಸ್ಯಾಮ್ಯುಯಲ್ ಸಂಕೋಚಪಟ್ಟುಕೊಳ್ಳುತ್ತಾ

"ನಾವು ನಿಮ್ಮನ್ನು ಊಟಕ್ಕೆ ಕರೆಯುವುದು ಬಿಟ್ಟು, ನಿಮ್ಮಲ್ಲಿಯೇ ಒಕ್ಕರಿಸಿದ್ದೇವೆ."

"ನಾವೂ ನೀವೂ ಒಂದೇ ಮನೆಯವರಾಗಿರುವಾಗ ಯಾರು ಎಲ್ಲಿ ಊಟಮಾಡಿದರೇನು ?"

ಅಕ್ಕ ಭಾವನಿಗೆ ಟವಲುಗಳನ್ನಿತ್ತು ಪುಷ್ಪ ಉಪಚರಿಸಿದಳು

ಮಾಣಿ ಬಂದು ರೂಮಿನ ಕೊನೆಯಲ್ಲಿದ್ದ ಮೇಜನ್ನು ಮಧ್ಯಕ್ಕೆಳೆದು, ಹೊರಗಿನಿಂದ ಎರಡು ಕುರ್ಚಿಗಳನ್ನು ಹಾಕಿ, ನಾಲ್ವರೂ ಊಟಕ್ಕೆ ಕೂಡಲು ಅಣಿಮಾಡಿದ. ಸ್ಯಾಮ್ಯುಯಲ್ ಎದುರಿಗೆ ಸಂಜೀವ, ಪುಷ್ಪನ ಎದುರಿಗೆ ಜ್ಯೂಡಿ ಊಟಕ್ಕೆ ಕುಳಿತರು.

ಮಾಣಿ ಊಟದ ತಟ್ಟೆ, ಬಟ್ಟಲುಗಳನ್ನು ನಾಲ್ವರಿಗೂ ತಂದಿಟ್ಟ. ಹೊಟೇಲಿನ ಯಥಾವಿಧಿಯ ಊಟದ ಜತೆಗೆ ಜಾಮೂನ್, ಬೋಂಡ, ಶಾವಿಗೆ ಕೀರು, ನಿಂಬೆಕಾಯಿ ಚಿತ್ರಾನ್ನವೂ ಇತ್ತು.

ಸ್ಯಾಮ್ಯುಯಲ್ ಊಟಮಾಡುತ್ತ

"ದೊಡ್ಡ ಫೀಸ್ಟೇ (Feast) ಮಾಡಿಸಿಬಿಟ್ಟಿರುವಿರಿ ?"

"ಇದೆಲ್ಲಾ ಏನು ಮಿ. ಸ್ಯಾಮ್ಯುಯಲ್. ನಿಮ್ಮ ಕೆಲಸದ ವಿಷಯ ಹೇಳಲೇ ಇಲ್ಲವಲ್ಲ."

"ನನ್ನದೇನು ಹೇಳಲಿ ಸರ್. ದುಡಿಮೆಯ ಜೀವನ. ಆದರೆ ನನ್ನ ಧಣಿ ತುಂಬ ಒಳ್ಳೆಯವರು."

"ನಿಮ್ಮದು ಅಮೆರಿಕನ್ ಮಿಷನ್ನೇ ? (American Mission)"

"ಅಲ್ಲ ಇಂಗ್ಲಿಷ್ ಮಿಷನ್ (English Mission). ನಮ್ಮ ಕೇಂದ್ರ ಆಫೀಸು ಕಲ್ಕತ್ತೆಯಲ್ಲಿದೆ. ಮುಂಬಯಿ, ಮದರಾಸ್, ಹೈದರಾಬಾದ್, ತಿರುಚೂರ್, ಕೊಟ್ಟಾಯಂ, ಕೊಯಿಮತ್ತೂರುಗಳಲ್ಲಿ ನಮ್ಮ ಶಾಖೆಗಳಿವೆ. ಮಿ. ಜಾನ್‌ಸ್ಟನ್ ಇಲ್ಲಿಯ ಮ್ಯಾನೇಜರ್."

"ಅವರೂ ಇಂಗ್ಲಿಷಿನವರೇನು ?"

"ಅವರು ಯೂರೇಷ್ಯನ್ (Eurasian). ಮನುಷ್ಯ ಬಹಳ ಖಂಡಿತ ವಾದಿ. ಕೆಲಸದಲ್ಲಿ ಸ್ವಲ್ಪವೂ ಹೆಚ್ಚು ಕಡಿಮೆಯಾಗಬಾರದು. ಆದರೆ ಅಷ್ಟೇ ಉದಾರಿ. ಕ್ರಿಸ್‌ಮಸ್ ಸೀಸನ್‌ನಲ್ಲಿ ನಮಗೆ ತುಂಬ ಕೆಲಸ. ನ್ಯೂ ಯಿಯರ್ ಡೇ (New Year Day) ದಿವಸ ಎಲ್ಲಾ ಕೆಲಸಗಾರರಿಗೂ ಕೈತುಂಬ ಬೋನಸ್ ಕೊಡುತ್ತಾರೆ."

"ಮಿ. ಜಾನ್‌ಸ್ಟನ್ ಸ್ಥಾನದಲ್ಲಿ ನಿಮ್ಮ ಮಾವನವರು ಇದ್ದರಲ್ಲವೇ ?"

"ಇಲ್ಲ. ಮಿ. ಜಾನ್‌ಸ್ಟನ್ ಸೊಸೈಟಿಯ ಮ್ಯಾನೇಜರಾಗಿದಾರೆ. ನಮ್ಮ ಮಾವನವರು ಪ್ರೆಸ್ಸಿನ ಮ್ಯಾನೇಜರಾಗಿದ್ದರು."

ಊಟ ಸಂತೋಷವಾಗಿ ಸಾಗಿತು. ತನ್ನ ಭಾವನಿಗೂ ಸಂಜೀವನಿಗೂ ಬೆಳೆದ ಮೈತ್ರಿ ಕಂಡು ಪುಷ್ಪನಿಗೆ ಅತ್ಯಾನಂದವಾಯಿತು.

ಊಟ ಮುಗಿದ ಮೇಲೆ ಮಾಣಿ ತಟ್ಟೆಯಲ್ಲಿ ಕಿತ್ತಿಲೆಹಣ್ಣು, ವೀಳೆಯದೆಲೆ ಅಡಿಕೆ, ಸಿಗರೇಟ್ ಪ್ಯಾಕೆಟ್, ಕಡ್ಡಿಪೊಟ್ಟಣ ತಂದಿಟ್ಟು ತಟ್ಟೆ ಬಟ್ಟಲುಗಳನ್ನು ತೆಗೆದು ಕೊಂಡು ಹೋದ.

ತಾಂಬೂಲ ಸವಿಯುತ್ತಾ ಸ್ಯಾಮ್ಯುಯಲ್

"ನಾಳೆ ಒಂದು ದಿವಸ ಇರುವುದಕ್ಕಾಗುವುದಿಲ್ಲವೇ ?"

"ಏಕೆ ?"

"ನಮ್ಮ ಮನೆಯಲ್ಲಿ ನೀವು ಊಟ ಮಾಡಿಕೊಂಡು ಹೋಗಬೇಕೆಂದು ಆಸೆ."

"ನಾಳೆ ಇದ್ದು ಬಿಡಿ"

ಎಂದು ಜ್ಯೂಡಿಯೂ ಗಂಡನ ಜತೆಗೆ ದನಿಸೇರಿಸಿದಳು.

"ಈ ಸಲ ದಯೆಯಿಟ್ಟು ಕ್ಷಮಿಸಿ. ಇನ್ನೊಮ್ಮೆ ಬಂದಾಗ ಖಂಡಿತ ಬರುತ್ತೇವೆ. ಊರಿನಲ್ಲಿ ತುಂಬ ಕೆಲಸವಿದೆ."

ಎಂದು ಸಂಜೀವ ಹೇಳಿದ. ಅವನ ಮಾತನ್ನೇ ವಿಸ್ತರಿಸಿ ಹೇಳಿ ಪುಷ್ಪ ಕ್ಷಮೆಬೇಡಿದಳು.

ಗಂಟೆ ಹನ್ನೊಂದಾಗುತ್ತ ಬಂದಿತ್ತು. ಸಂಜೀವ ಟ್ಯಾಕ್ಸಿ ಬರಹೇಳಿ, ಸ್ಯಾಮ್ಯುಯಲ್, ಜ್ಯಾಡಿಯನ್ನು ಅವರ ಮನೆಗೆ ಕರೆದೊಯ್ದ. ಜತೆಯಲ್ಲಿ ಪುಷ್ಪನೂ ಬಂದಳು.

ಜ್ಯಾಡಿಯ ಮನೆಯ ಮುಂದೆ ಕಾರಿನಿಂದ ಎಲ್ಲರೂ ಇಳಿದರು. ಮನೆಯೊಳಗೆ ಬಂದ ಮೇಲೆ ಪುಷ್ಪ ಜ್ಯಾಡಿಯನ್ನು ಒಳಕ್ಕೆ ಕರೆದೊಯ್ದು

"ನಮ್ಮ ಯಜಮಾನರು ಒಪ್ಪಿಗೆಯಾಯಿತೇ ಅಕ್ಕ" ಎಂದು ಕೇಳಿದಳು.

ಜ್ಯಾಡಿ ತಂಗಿಯನ್ನಪ್ಪಿ

"ದೇವರು ದೊಡ್ಡವನು ಮೇರಿ. ನಿನ್ನ ಬಾಳು ಇಷ್ಟು ಚೆನ್ನಾಗುತ್ತದೆಂದು ನಾನು ಕನಸಿನಲ್ಲಿಯೂ ಎಣಿಸಿರಲಿಲ್ಲ." ಎಂದಳು.

ಪುಷ್ಪನಿಗೆ ದೊಡ್ಡ ಬಳುವಳಿ ಸಿಕ್ಕಿದಂತಾಯಿತು.

ಸಂಜೀವ, ಪುಷ್ಪ, ಸ್ಯಾಮ್ಯುಯಲ್, ಜ್ಯಾಡಿಯಿಂದ ಬೀಳ್ಕೊಂಡು ಹೊಟೇಲ್ ಸೇರಿದರು.

ಮಲಗುವುದಕ್ಕೆ ಹೋಗುವ ಮುನ್ನ ಪುಷ್ಪ ಮತ್ತೊಮ್ಮೆ ತಾಂಬೂಲ ಸಿದ್ಧಗೊಳಿಸಿ ಸಂಜೀವನಿಗೂ ಕೊಟ್ಟು, ತಾನೂ ಸವಿದಳು.

ಸಂಜೀವ ಪ್ರೇಯಸಿಯನ್ನು ಬರಸೆಳೆದುಕೊಂಡು

"ಈಗ ಮನಸ್ಸಿಗೆ ನೆಮ್ಮದಿಯಾಯಿತೇ ಹನಿ (Honey) ?"

"ನಾನು ಕವಿಯಾಗಲಿಲ್ಲವಲ್ಲ ಎಂದು ವ್ಯಸನವಾಗುತ್ತಿದೆ."

"ಏಕೆ ?"

"ಸಂತೋಷ ವ್ಯಕ್ತಮಾಡುವುದಕ್ಕೆ ಶಬ್ದಗಳೇ ಬರುವುದಿಲ್ಲ. ಅಕ್ಕ, ಭಾವನನ್ನು ನೋಡಿ ನಿಮಗೇನನ್ನಿಸಿತು ?"

"ಒಳ್ಳೆಯ ಜನ - ನಿನ್ನ ಅಕ್ಕ ಇಷ್ಟು ರೂಪವತಿಯಿರಬಹುದೆಂದು ನಾನು ಊಹಿಸಿರಲಿಲ್ಲ."

"ನೀವು ಅವಳನ್ನು ಮೊದಲು ನೋಡಬೇಕಾಗಿತ್ತು. ತಾಪತ್ರಯಕ್ಕೆ ಸಿಕ್ಕಿ ಈಗ ಸ್ವಲ್ಪ ಬಡವಾಗಿದ್ದಾಳೆ. ಅಕ್ಕ ನಿಮ್ಮನ್ನು ಬಹಳ ಮೆಚ್ಚಿಕೊಂಡಳು."

"ಮೆಚ್ಚುಗೆ ಪರಸ್ಪರವೆಂದು ಕಾಣುತ್ತದೆ."

"ಅಕ್ಕನನ್ನು ಮೋಹಿಸಿದರೇನು ?"

"ಯಾಕಾಗಬಾರದು."

"ಹೋಗಿ - ನನ್ನ ಮಾತಾಡಿಸಬೇಡಿ - ನಾನು ಮಾಡಿದ್ದು ನನ್ನ ಪ್ರಾಣಕ್ಕೇ ಬಂತು."

ಎಂದು ಸಂಜೀವನಿಂದ ಸ್ವಲ್ಪ ದೂರ ಸರಿದು ಮುದುರಿಕೊಂಡಳು. ಸಂಜೀವ ಅವಳನ್ನು ಹತ್ತಿರ ಎಳೆದುಕೊಂಡು

"ಸೌಂದರ್ಯದಲ್ಲಿ ಗ್ರಾಹ್ಯ, ಅಗ್ರಾಹ್ಯವೆಂದು ಎರಡುಬಗೆಯಿದೆ ಪುಷ್ಪ."

"ಹಾಗಂದರೇನು ?"

"ಚರ್ಚುಗಳಲ್ಲಿ ಮೇರಿಯಮ್ಮನ ಮೂರ್ತಿ ನೋಡಿರುವೆಯಲ್ಲವೇ ?"

"ನೋಡಿದ್ದೇನೆ."

"ನಮ್ಮ ದೇವಸ್ಥಾನಗಳಲ್ಲಿರುವ 'ಅಮ್ಮನವರ' ವಿಗ್ರಹವೂ ತುಂಬ ಸುಂದರವಾಗಿರುತ್ತದೆ."

"ಹೌದು - ನಾನು ನೋಡಿದ್ದೇನೆ."

"ಆ ಸೌಂದರ್ಯ ನೋಡಿ ನಮಗೆ ಬಯಕೆಯಾಗುವುದಿಲ್ಲ - ಭಕ್ತಿ ಹುಟ್ಟುತ್ತದೆ. ಹಾಗೇ ಜ್ಯೂಡಿ ಸುಂದರಿಯೆಂದು ನಾನು ಹೇಳಿದರೆ ಆಕೆಯಲ್ಲಿ ಅನುರಕ್ತನಾದನೆಂದು ಭಾವಿಸುವುದು ಯಾವ ನ್ಯಾಯ ?"

"ನನ್ನ ಸಣ್ಣತನ ತೋರಿಸಿಕೊಂಡೆ ದೊರೆ - ಕ್ಷಮಿಸಿ . . . . ನಾಳೆ ಊರಿಗೆ ಹೋಗುವುದು ನಿಶ್ಚಯ ತಾನೆ."

"ಮಧ್ಯಾಹ್ನದ ಗಾಡಿಗೆ ಹೊರಟುಬಿಡೋಣ" ಎಂದು ಹೇಳಿದ.

ರೈಲಿನಲ್ಲಿ ಪ್ರಯಾಣಮಾಡುತ್ತಿದ್ದಾಗ ಪುಷ್ಪ

"ನನ್ನಿಂದ ನಿಮಗೆಷ್ಟು ಖರ್ಚು" ಎಂದಳು.

"ಹಣವಿರುವುದು ಖರ್ಚುಮಾಡುವುದಕ್ಕೆ. ಅದನ್ನೇ ನೋಡಿಕೊಂಡು ಸಾಯುವ ಮನುಷ್ಯ 'ಧನಪಿಶಾಚಿ'ಯಾಗಿ ಹುಟ್ಟುತ್ತಾನಂತೆ."

"ನಾನು ಸುಲಿದದ್ದು ಸಾಲದೆಂದು ಅಕ್ಕನಿಗೂ ಉಡುಗೊರೆ ಕೊಡಿಸಿದೆ."

"ನಿನ್ನ ಅಕ್ಕ ಈಗ ನನಗೆ ದೂರದವರಾಗಲಿಲ್ಲವಲ್ಲ. ನನಗೆ ಅಕ್ಕ ತಂಗಿ ಇಲ್ಲ. ಇದ್ದರೆ ಅವರಿಗೆ ಉಡುಗೊರೆ ಕೊಡುತ್ತಿದ್ದೆನೋ ಇಲ್ಲವೋ."

"ಬೆಂಗಳೂರಿನಲ್ಲಿ ನಾವಿದ್ದ ದಿವಸಗಳನ್ನು ಹೇಗ್ರೀ ಮರೆಯುವುದು ?"

"ಮರೆಯುವ ತಂಟೆಯೇ ಬೇಡ - ನೋಡು ಸ್ವೀಟ್ ಈಗ ನಾವು ಬೆಂಗಳೂರಿಗೆ ಹೋಗದಿದ್ದರೆ ಸದ್ಯಕ್ಕೆ ಹೋಗುವುದಕ್ಕೇ ಆಗುತ್ತಿರಲಿಲ್ಲ."

"ಏಕೆ ?"

"ಬಿಲ್‌ಕೊಟ್ಟು ಬರಲು ಹೋಟೇಲ್ ಕಛೇರಿಗೆ ಹೋಗಿದ್ದೆ. ಆಗ ಮ್ಯಾನೇಜರ್ ಒಂದು ಕಟ್ಟು ಕಾಗದ, ಟೆಲಿಗ್ರಾಂ ನೋಡುತ್ತಿದ್ದರು. ಅವುಗಳನ್ನು ನನ್ನ ಮುಂದೆ ಹಿಡಿದು 'ನೋಡಿ ಸಾರ್ - ರೇಸ್ ಹಾವಳಿ'- ಎಂದರು. 'ಯಾವಾಗ ರೇಸ್' ಎಂದೆ. 'ಮುಂದಿನ ವಾರ ಸರ್' ಎಂದು ಹೇಳಿ 'ಮುಂದಿನ ವಾರ ಬಂದು ನೋಡಿ - ಇಲ್ಲಿ ಸೂಜಿಯೂರುವುದಕ್ಕೆ ಸ್ಥಳ ವಿರುವುದಿಲ್ಲ' ಎಂದರು."

"ಈ ಹಾಳು ರೇಸ್ ಬಂದು ಎಷ್ಟು ಮನೆಗಳನ್ನು ಹಾಳುಮಾಡು ತ್ತದೋ" ಎಂದು ಪುಷ್ಪ ಹೇಳಿದಳು.

ಬೆಳಿಗ್ಗೆ ಇಬ್ಬರೂ ಮಾರ್ಕೆಟ್ಟಿಗೆ ಹೋಗಿ, ಮನೆಗೆ ಹೂವು, ಹಣ್ಣು, ತರಕಾರಿ ಕೊಂಡು ತಂದು ಮಧ್ಯಾಹ್ನದ ಗಾಡಿಗೆ ಹೊರಟು ಅದೇ ಸಂಜೆ ಮೈಸೂರು ಸೇರಿದರು

ರಾತ್ರಿ ಅಲ್ಲಿಯೇ ಇದ್ದು ಬೆಳಿಗ್ಗೆ ಒಂಟಿಕೊಪ್ಪಲಿಗೆ ಹೋಗುವುದೆಂದು ಪುಷ್ಪ ಸಂಜೀವನಿಗೆ ಆಣತಿಯಿತ್ತಳು.

ತಾಯಿಗೆ ಪುಷ್ಪ ಬೆಂಗಳೂರಿನಲ್ಲಿ ನಡೆದುದೆಲ್ಲವನ್ನೂ ಕೂಲಂಕಷವಾಗಿ ವರದಿ ಮಾಡಿದಳು. ಹೆಲನ್ ಅಮ್ಮ ಮಗಳ ಕಿವಿ, ಮೂಗು, ಕೊರಳು, ಕೈಗಳಲ್ಲಿದ್ದ ಆಭರಣಗಳನ್ನು ನೋಡಿ ಹಿಗ್ಗಿಹೋದಳು. ಜ್ಯೂಡಿಗೆ ಉಡುಗೊರೆ ಕೊಟ್ಟ ವಿಷಯ ಕೇಳಿದ ಮೇಲಂತೂ ಹೆಲನ್ ಅಮ್ಮ ತನ್ನ ಅಳಿಯ ಯೇಸು ಸ್ವಾಮಿಯ ಅಪರಾವತಾರ ಎಂದು ಭಾವಿಸಿದಳು.

ಜಾನ್ ಅಪ್ಪಾಜಿ ಅಳಿಯನನ್ನು

"ಬೆಂಗಳೂರು ಪ್ರವಾಸ ಚೆನ್ನಾಗಿ ಆಯಿತೇ" ಎಂದು ಕೇಳಿದರು.

ಸಂಜೀವ 'ಆಯಿತು' ಎಂದ.

## ೧೮

ಸುಂದರ ಮನೆಗೆ ಬೇಗ ಹೋಗಬೇಕೆಂದು ಆತುರಪಡಲು ಕಾರಣವಿತ್ತು. ಆದರೆ ಅವನ ಆಸೆ ಸಫಲವಾಗುವ ಸಂಭವವಿರಲಿಲ್ಲ. ಜತೆಯ ಲೆಕ್ಚರರು ಒಬ್ಬರು ರಜೆಯಮೇಲೆ ಹೋಗಿದ್ದುದರಿಂದ ಅವರ ತರಗತಿಗಳೂ ಸುಂದರನ ಪಾಲಿಗೇ ಬಿದ್ದಿದ್ದವು. ಕಾಲೇಜಿನ 'ಬಲವಂತದ ಮಾಘಸ್ನಾನ' ಮುಗಿಸಿ ಕೊಂಡು, ಅಂದಿನ ಟಪಾಲಿನಲ್ಲಿ ಬಂದಿದ್ದ 'ಕೆಮಿಕಲ್ ಏಜ್' (Chemical Age) ಪತ್ರಿಕೆ ಮತ್ತು 'ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿ'ಯಿಂದ (Royal Society of Chemistry) ಬಂದಿದ್ದ ಉದ್ದನೆಯ ಲಕೋಟೆ ಹಿಡಿದು ಮನೆಗೆ ಹೊರಟ.

ಸುನಂದ ಗಂಡನನ್ನು ನೋಡಿದ ಕೂಡಲೆ ಕ್ರೋಷಾ ತೆಗೆದಿಟ್ಟು

"ಇವತ್ತು ಎರಡು ಗಂಟೆಗೇ ಬರುತ್ತೇನೆಂದು ಹೇಳಿದ್ದಿರಿ" ಎಂದಳು.

"ಹೌದು. ನನ್ನ ಕೆಲಸ ಎರಡು ಗಂಟೆಗೇ ಮುಗಿಯಿತು - ಆದರೆ ಬೇರೆಯವರ ಪಾಠಗಳು ಗಂಟುಬಿದ್ದವು."

"ನೀವು ಎರಡು ಗಂಟೆಗೇ ಬರಬಹುದೆಂದು ತಿಂಡಿಮಾಡಿಟ್ಟಿದ್ದೆ."

ಎಂದು ಉಪ್ಪಿಟ್ಟು, ಕಾಫಿ ತಂದು ಗಂಡನ ಕೈಗಿತ್ತು

"ಅಣ್ಣಾ ಕಾಗದ ಬರೆದಿದ್ದಾನೆ."

"ಎಲ್ಲಿಂದ?"

"ಆಗ್ರಾದಿಂದ. ನಿಮಗೆ ನಮಸ್ಕಾರ ತಿಳಿಸಲು ಹೇಳಿದ್ದಾನೆ."

"ಸಂತೋಷ."

"ಸಂತೋಷವಿಲ್ಲದಿದ್ದರೂ ಸಂತೋಷವೆಂದೇಕೆ ಹೇಳುವಿರಿ."

"ನಿಮ್ಮಣ್ಣನ ಬಗ್ಗೆ ನೀನು ಹಿಮಾಲಯದಷ್ಟು ದೊಡ್ಡ ಅಭಿಪ್ರಾಯ ತಳೆಯಲು ನನ್ನದೇನೂ ಅಭ್ಯಂತರವಿಲ್ಲ."

"ನಮ್ಮಣ್ಣನ ಬಗ್ಗೆ ನಿಮ್ಮ ಅಭಿಪ್ರಾಯವೇನೆಂಬುದನ್ನು ಸ್ಪಷ್ಟವಾಗಿ ಹೇಳಿಯೇ ಇರುವಿರಲ್ಲಾ!"

"ಎಂದು?"

"ಅಂದು - ನಿಮ್ಮ ಅಧ್ಯಕ್ಷಭಾಷಣವಲ್ಲಿ."

"ಅದು ನಿಮ್ಮಣ್ಣನಿಗೆ ಅನ್ವಯಿಸುವುದಿಲ್ಲ, ಅಮೆರಿಕನ್ ಡಾಲರ್‌ಶಾಹಿಯ ಪ್ರಚಾರಕ ಚಂದ್ರಶೇಖರನಿಗೆ ಅನ್ವಯಿಸುತ್ತದೆ."

"ಅಣ್ಣನನ್ನು ಕಂಡರೆ ನಿಮಗೆ ಅಸೂಯೆ."

"ಏಕೆ ?"

"ಅವನು ದೇಶವಿದೇಶಗಳಲ್ಲಿ ಪ್ರಖ್ಯಾತನಾಗಿರುವನಲ್ಲಾ ಎಂದು."

"ಅಲ್ ಕೆಪಾನನೂ ಪ್ರಖ್ಯಾತನೇ - ವಾಲ್ಟ್ ವ್ಹಿಟ್‌ಮನ್ನೂ ಪ್ರಖ್ಯಾತನೇ ? ನಾನು ಅಲ್ ಕೆಪಾನಿನ ಸಂಪ್ರದಾಯದ ಪ್ರಖ್ಯಾತಿಗೆ ಎಂದೂ ಆಸೆಪಟ್ಟಿಲ್ಲ."

"ನಮ್ಮಣ್ಣನ ಪ್ರಖ್ಯಾತಿ ಆ ಬಗೆಯದೆಂದೋ ನಿಮ್ಮ ಅಭಿಪ್ರಾಯ."

"ಚಂದ್ರಶೇಖರ ನಿಮ್ಮಣ್ಣ ಎನ್ನುವುದನ್ನು ಕ್ಷಣಕಾಲ ಮರೆತು ಈ ವಿಷಯ ಯೋಚನೆಮಾಡು. ಹೆಂಗಸರೂ ವೈಜ್ಞಾನಿಕಮನೋಭಾವ ತಳೆಯುವುದರಲ್ಲಿ ತಪ್ಪಿಲ್ಲ."

"ನನಗೆ ನಿಮ್ಮ ವೈಜ್ಞಾನಿಕ ಮನೋಭಾವ ಬೇಕಿಲ್ಲ."

"ಕತ್ತಲೆಯಲ್ಲಿ ವಾಸಮಾಡುವವರಿಗೆ ಬೆಳಕು ಕಂಡರೆ ಆಗುವುದಿಲ್ಲ."

"ಬೆಳಕು ನಿಮ್ಮ ಗುತ್ತಿಗೆಯಲ್ಲ."

"ಖಂಡಿತವಾಗಿಯೂ ಅಲ್ಲ. ಬೆಳಕಿಲ್ಲದೆ ನಾನು ಬದುಕಲಾರೆ, ಬೆಳಕಿದ್ದರೆ ಕೆಲವರಿಗೆ ಬದುಕು ಸಾಧ್ಯವಿಲ್ಲ."

"ನಿಮ್ಮ ಅಹಂಕಾರಕ್ಕೆ ಮೇರೆಯೇ ಇಲ್ಲ."

"ಅಹಂ ಇಲ್ಲದ ಮನುಷ್ಯ ಗೊಡ್ಡು ಪಶು."

"ನನ್ನ ಮಾತುಗಳನ್ನು ಬಿಡಿಸಬೇಡ - ಇದು ನಿಮ್ಮ ಲ್ಯಾಬೊರೇಟರಿ ಅಲ್ಲ."

"ಜಗತ್ತೇ ನನ್ನ ಲ್ಯಾಬೊರೇಟರಿ."

"ಉಪ್ಪನ್ನು ವಿಭಜಿಸಿ ನೋಡುವ ನಿಮ್ಮ ಲ್ಯಾಬೊರೇಟರೀಗೂ ಜಗತ್ತಿಗೂ ಸಂಬಂಧವಿಲ್ಲ."

"ಮನುಷ್ಯನ ದೇಹದಲ್ಲಿ ಬೇಕಾದಷ್ಟು ಉಪ್ಪು ಇರುತ್ತದೆ."

"ಸಕ್ಕರೆ ರುಚಿ ಕಾಣದವರು ಉಪ್ಪನ್ನೇ ಶ್ರೇಷ್ಠವೆಂದು ತಿಳಿಯುತ್ತಾರೆ."

"ದೇಹದಲ್ಲಿ ಸಕ್ಕರೆಯಿದ್ದರೆ ಅದನ್ನು ಡಯಾಬೀಟೀಸ್ (Diabetes) ಎನ್ನುತ್ತಾರೆ."

"ಸಾಕುಮಾಡಿ ನಿಮ್ಮ ವೈಜ್ಞಾನಿಕ ಪ್ರತಿಭೆ."

"ಮೊದಲು ನೀನು ಸಣ್ಣಮಾತು ಆಡುವುದನ್ನು ಸಾಕುಮಾಡು. ನಿಮ್ಮಣ್ಣ ಬಂದು ಹೋದಾರಭ್ಯ ಅವನ ಗುಣಪ್ರಶಂಸೆ - ನನ್ನ ಭರ್ತ್ಸನೆ ಕೇಳಿ ಕೇಳಿ ನನಗೆ ಸಾಕಾಗಿದೆ. ನನ್ನ ಶಾಂತಿ, ಸಹನೆಯನ್ನು ದೌರ್ಬಲ್ಯದ ಚಿಹ್ನೆ ಯೆಂದು ನೀನು ತಿಳಿದಂತೆ ಕಾಣುತ್ತದೆ. ನನ್ನನ್ನು ನಿಷ್ಪ್ರಯೋಜಕನೆಂದು ತಿಳಿದಿರುವೆಯಲ್ಲವೇ ?"

"ನಾನು ಹಾಗೆ ಹೇಳಲಿಲ್ಲ"

"ಅಣ್ಣನ ಬಗ್ಗೆ ಅಸೂಯೆಯೆಂದರೇನು ಅರ್ಥ ? ನಿಷ್ಪ್ರಯೋಜಕರಿಗೇ ಅಸಹನೆ ಬರುವುದು."

"ನೀವು ಐನ್‌ಸ್ಟೈನರಿಗೆ ಸಮಾನರು ಎನ್ನುತ್ತೇನೆ - ಇನ್ನಾದರೂ ಶಾಂತ ರಾಗುವಿರಾ."

"ನೀನು ನನ್ನನ್ನು ಹೊಗಳಿದರೂ ಒಂದೇ - ತೆಗಳಿದರೂ ಒಂದೇ. ಜಗತ್ತೇ ನನ್ನನ್ನು ಹೊಗಳುವಾಗ ನೀನೂ ಹೊಗಳುವೆ. ಅದನ್ನು ನಾನು ಚೆನ್ನಾಗಿ ಬಲ್ಲೆ. ಬೇಕಾದರೆ ಈ ಕಾಗದ, ಈ ಪತ್ರಿಕೆ ನೋಡು."

ಎಂದು ಎರಡನ್ನೂ ಅವಳ ಮುಂದೆ ಒಗೆದು ಎದ್ದು ಹೋದ.

ಸುನಂದ ಕಿಡಿಕಿಡಿಯಾದಳು. ಸುಂದರ ಎಂದೂ ಈ ಬಗೆಯಲ್ಲಿ - ಇಷ್ಟು ಕಠಿಣವಾಗಿ - ತಿರಸ್ಕಾರದಿಂದ ಮಾತನಾಡಿರಲಿಲ್ಲ. 'ಕೈಯಲ್ಲಾಗದವರು ಮೈಪರಚಿಕೊಳ್ಳುವ ಹಾಗೆ ನನ್ನ ಮೇಲೆ ರೇಗುತ್ತಾರೆ' ಎಂದುಕೊಂಡು ಸಮಾಧಾನ ಮಾಡಿಕೊಳ್ಳಲೆತ್ನಿಸಿದಳು. ಸುಂದರ ಕೈಯಲ್ಲಾಗದವನೇ ? ಗಫೂರ್ ಅವನ ಬಗ್ಗೆ ಎಂಥ ಭಯಭಕ್ತಿಯಿಂದ ಮಾತನಾಡುತ್ತಾನೆ. – ಸುಂದರ ದೊಡ್ಡ ವಿಜ್ಞಾನಿಯೆಂದೂ ಮತ್ತೊಬ್ಬ ಮಿಲ್ಲಿಕನ್, ಜೀನ್ಸ್, ರಾಮನ್ ಎಂದು ಗಫೂರ್ ಭಾವಿಸಿರಬಹುದು. ಗಫೂರನ ಅಭಿಪ್ರಾಯ ಲೋಕ ಒಪ್ಪಿಕೊಳ್ಳಬೇಕಲ್ಲ. ಗಫೂರ್ ಸೇವಕ - ಸೇವಕ ವೃತ್ತಿಗನುಗುಣವಾದ ಸ್ವಾಮಿಭಕ್ತಿ ಅವನಲ್ಲಿದೆ. ಅವನ ಅಭಿಪ್ರಾಯಕ್ಕೆ ಬೆಲೆ ಕೊಡುವುದೇ ?

ಸುನಂದನಿಗೆ ಅಂದಿನ ಯೂನಿಯನ್ ಸಭೆ ನೆನಪಾಯಿತು. ಸುಂದರನ ಮಾತುಗಾರಿಕೆ ಅವಳನ್ನು ಅರೆಮೂಕಳನ್ನಾಗಿ ಮಾಡಿತ್ತು. ಚಂದ್ರಶೇಖರನಿಗಿಂತ ಸುಂದರ ಚೆನ್ನಾಗಿ ಮಾತನಾಡಿದ ಎನ್ನುವ ವಿಷಯದಲ್ಲಿ ಭಿನ್ನಾಭಿಪ್ರಾಯವಿರಲಿಲ್ಲ. ವಿಷಯಗಳನ್ನು ಅವನು ಪ್ರತಿಪಾದಿಸಿದ ರೀತಿ, ಭಾಷೆ, ಗಾಂಭೀರ್ಯ ಮೇಲ್ಮಟ್ಟದ್ದಾಗಿತ್ತು. ಅವನು ಆಡಿದ ಪ್ರತಿಯೊಂದು ಮಾತು ಸ್ವದೇಶಾಭಿಮಾನದಿಂದ ತುಂಬಿ ತುಳುಕುತ್ತಿತ್ತು. ಅಂದು ಸುಂದರ ವಿಜಯಧ್ವಜ ನೆಟ್ಟದೆಂಬುದು ನಿಜ - ಚಂದ್ರಶೇಖರನಿಗೆ ಪೂರಾ ತೇಜೋಭಂಗವಾಗಿತ್ತೆಂಬುದೂ ನಿಜ.

ಸುಂದರನ ಮಾತಿಗೆ ಜನ ತೋರಿಸಿದ ಪುರಸ್ಕಾರ, ಅಣ್ಣನ ಮಾತಿಗೆ ತೋರಿಸಿದ ತಿರಸ್ಕಾರ ನೆನೆದು ಸುನಂದನ ಮೈಯುರಿಯಿತು. 'ಅಣ್ಣನ ಯೋಗ್ಯತೆ ಇವಕ್ಕೇನು ಗೊತ್ತು ಪಾಪ! ಮಾಣಿಕ್ಯದ ದೀಪ್ತಿ ಕಾಣದವನು ಕೆಂಪುಗಾಜಿನ ಹೊಳಪಿಗೆ ಮರುಳಾಗುತ್ತಾನೆ' ಎಂದುಕೊಂಡಳು.

ಸುನಂದೆಯ ಮನಸ್ಸು ಚಂದ್ರಶೇಖರ - ಸುಂದರ ಇವರಿಬ್ಬರ ಗುಣದೋಷಗಳನ್ನು ವಿಮರ್ಶಿಸುತ್ತಿದ್ದಂತೆ ಅವಳ ಲಕ್ಷ್ಯ ನೆಲದ ಮೇಲೆ ಬಿದ್ದಿದ್ದ ಪತ್ರಿಕೆ, ಕಾಗದದ ಕಡೆಗೆ ಹೋಯಿತು. ಆಲಸ್ಯದಿಂದ ಪತ್ರಿಕೆಯನ್ನು ಕೈಯಲ್ಲೆತ್ತಿಕೊಂಡು ನೋಡಿದಳು. ಪ್ರಮುಖ ಲೇಖನಗಳ ಜತೆಯಲ್ಲಿ ಸುಂದರನ ಲೇಖನ ಪ್ರಕಟವಾಗಿತ್ತು. ಲೇಖನದ ತಲೆಯಮೇಲೆ ಸಂಪಾದಕರು ಟಿಪ್ಪಣಿ ಬರೆಯುತ್ತಾ

**'ಈ ಲೇಖನ ಬರೆದಿರುವವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿಜ್ಞಾನ ಶಿಕ್ಷಕರಾಗಿದ್ದಾರೆ. ಇವರ ಪ್ರಯೋಗ ಕಾರ್ಯೋನ್ಮುಖವಾದರೆ ವಿಜ್ಞಾನ ಪ್ರಪಂಚದಲ್ಲಿ ಮಾತ್ರವೇ ಅಲ್ಲ, ಇಡಿಯ ಲೋಕಕ್ಕೆ ಹಿತವಾಗುತ್ತದೆ. ಮಾನವ್ಯವನ್ನು ಎಷ್ಟು ಬೇಗ ನಾಶಮಾಡಬಹುದೆನ್ನುವುದನ್ನು ಇದುವರೆಗೆ ವಿಜ್ಞಾನ ಸಾಧಿಸುತ್ತ ಬಂದಿದೆ. ಪಾಶ್ಚಾತ್ಯರ ವೈಜ್ಞಾನಿಕ ತತ್ತ್ವಗಳಿಗೆ ಸವಾಲು ಹಾಕಿದಂತೆ ಈ ಪ್ರಾಚ್ಯ ವಿಜ್ಞಾನಿಗಳು ಲೋಕರಕ್ಷಣೆಯ ಮಾರ್ಗ ನಿರ್ದೇಶನಮಾಡಿದ್ದಾರೆ. ಹಿಂದೆ ನಮಗೆ ಪ್ರಾಚ್ಯದಿಂದ ಬೆಳಕು ಬಂದಿತು – ಈಗಲೂ ಅಲ್ಲಿಂದಲೇ ಬೆಳಕು ಬರುತ್ತಿರಬಹುದೇ? ಈ ಲೇಖನದ ಮೇಲೆ ಬರುವ ಅಭಿಪ್ರಾಯಗಳಿಗೆ ನಾವು ಸ್ವಾಗತ ಬಯಸುತ್ತೇವೆ.'**

ಲೇಖನವನ್ನು ಸುನಂದ ಓದಲೆತ್ನಿಸಿದಳು. ಅದರಲ್ಲಿ ತುಂಬಿದ ಪಾರಿಭಾಷಿತ ಶಬ್ದಗಳ ಗೊಂಡಾರಣ್ಯ ದಾಟುವುದು ಅವಳಿಗೆ ದುಸ್ಸಾಧ್ಯ ವಾಯಿತು. 'ಕೆಮಿಕಲ್ ಏಜ್' ಪತ್ರಿಕೆಯ ಸಂಪಾದಕರು ಬರೆದಿದ್ದ ಟಿಪ್ಪಣಿ ಅವಳಲ್ಲಿ ಕುತೂಹಲವನ್ನು ಕೆರಳಿಸಿತ್ತು. ಉದ್ದನೆಯ ಲಕೋಟೆಯನ್ನು ಕೈಗೆ ತೆಗೆದುಕೊಂಡು, ಅದರ ಒಳಗಿದ್ದ ಕಾಗದ ಎಳೆದುಕೊಂಡು ಓದಲು ಮೊದಲುಮಾಡಿದಳು.

"ನಿಮ್ಮ ಕೋರಿಕೆಯಂತೆ 'ಕೆಮಿಕಲ್ ಏಜ್' ಸಂಪಾದಕರು ನಮಗೆ ನಿಮ್ಮ ಲೇಖನದ ಪ್ರೂಫ್‌ಗಳನ್ನು ಪ್ರಕಟನಕ್ಕೆ ಪೂರ್ವದಲ್ಲಿಯೇ ಕಳುಹಿಸಿಕೊಟ್ಟರು. ಅದನ್ನು ಕೂಲಂಕಷವಾಗಿ ವಿಮರ್ಶೆಮಾಡಿ ನೋಡಿದೆವು. ಇಂಥ ಅಪೂರ್ವ ಶೋಧಮಾಡಿರುವ ನಿಮ್ಮನ್ನು ತಜ್ಞರ ಸಮಿತಿಯ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ತಮ್ಮ ಸಂಶೋಧನೆಯ ವಿಷಯ ಕುರಿತು ನಮ್ಮ ಸೊಸೈಟಿ ಯಲ್ಲಿ ಕೆಲವು ಭಾಷಣಗಳನ್ನು ಮಾಡಬೇಕಾಗಿ ಪ್ರಾರ್ಥಿಸುತ್ತೇನೆ. ತಮ್ಮ ಸಮಸ್ತ ವೆಚ್ಚವನ್ನೂ ಸೊಸೈಟಿ ಹೊರಲು ಸಿದ್ಧವಾಗಿದೆ."

ತಾನು ಕಾಣುತ್ತಿರುವುದು ಕನಸನ್ನೋ ಸತ್ಯವನ್ನೋ ಎಂದು ಸುನಂದ ತನ್ನನ್ನೇ ಚಿವುಟಿಕೊಂಡಳು. ಗಫೂರ್ ಹೇಳಿದ್ದು ನಿಜ - ಸುಂದರ ನಿಜವಾಗಿ ಶ್ರೇಷ್ಠ ವಿಜ್ಞಾನಿ! ಮರುಕ್ಷಣವೇ ಅವಳ ಮನಸ್ಸು ಅಳುಕಿತು. ಅವರ ಯೋಗ್ಯತೆ ನಾನು ಸರಿಯಾಗಿ ಅಳೆಯಲಿಲ್ಲವಲ್ಲ - ನನಗಿಂತ ನಿರಕ್ಷರಕುಕ್ಷಿ ಗಫೂರ್ ಲೇಸಾದನಲ್ಲ ಎಂದು ಮರುಗಿದಳು.

ಇದು ತನ್ನ ಮತ್ತು ಸುಂದರನ ಭವಿಷ್ಯತ್ - ಜೀವನ ನಿರ್ಧರಿಸುವ ದಿನವೆಂದು ಸುನಂದೆಗೆ ಭಾಸವಾಯಿತು. ತಾನು ಮಾಡಿದ ಅಪಚಾರದ ಪೂರ್ಣಚಿತ್ರ ಅವಳ ಮುಂದೆ ಬಂದು ನಿಂತಿತು. 'ನನಗೆ ಯಾವ ಮಂಕು ಕವಿಯಿತು - ಅವರಿಗೇಕೆ ಹಾಗೆ ಮನಸ್ಸು ಬಂದಂತೆ ಆಡಿದೆ' ಎಂದು ಮಮ್ಮಲ ಮರುಗಿದಳು.

ಸುನಂದನ ಮನಸ್ಸಿನ ಗಡಿಯಾರದ ಮುಳ್ಳು ಹಿಂದಕ್ಕೆ ತಿರುಗಿ, ಬಹಳ ದಿವಸಗಳಿಂದ ಸುಪ್ತವಾಗಿದ್ದ ನೆನಪನ್ನು ಮರುಕಳಿಸಿತು. ತಂದೆ ಹೋದಾಗ ಸುಂದರ ಧಾವಿಸಿ ಓಡಿಬಂದದ್ದು - ಅವನೇ ನಿಂತುಕೊಂಡು ಕರ್ಮಾಂತರ ಮುಗಿಸಿದ್ದು - ತನ್ನನ್ನು ಮೈಸೂರಿನಲ್ಲಿ ಓದುವುದಕ್ಕೆ ಬಿಟ್ಟಿದ್ದು - ಸ್ವಂತ

ಖರ್ಚಿಗೆಷ್ಟು ಬೇಕೋ ಅಷ್ಟನ್ನು ಇಟ್ಟುಕೊಂಡು ಉಳಿದೆಲ್ಲ ಹಣವನ್ನು ತನಗೆ ಕಳುಹಿಸಿಕೊಡುತ್ತಿದ್ದುದು - ಕಾನ್‌ವೊಕೇಷನ್ ದಿನ ಅವನು ಬರಲಿಲ್ಲವೆಂದು ತಾನು ಗೋಳಾಡಿದ್ದು - ಆಗ ಪುಷ್ಪ, ಶಾಂತಾ, ರಾಜಮಣಿ ತನ್ನನ್ನು ಅಪಹಾಸ್ಯ ಮಾಡಿದ್ದು - ತಾನು ಬೆಂಗಳೂರಿಗೆ ಬಂದು ಸಂಸಾರ ಹೂಡಿದ್ದು ಎಲ್ಲ ಚಿತ್ರಗಳೂ ಅವಳ ಹೃತ್ಪಟಲದ ಮೇಲೆ ಸುಳಿದಾಡಿದವು.

'ನಾನು ತಪ್ಪುಮಾಡಿದೆ - ನಿಷ್ಕಾರಣವಾಗಿ ಅವರ ಮನಸ್ಸು ನೋಯಿಸಿದೆ. ಅವರ ಪಾದದ ಮೇಲುರುಳಿ ಕ್ಷಮೆ ಬೇಡಬೇಕು' ಎಂದುಕೊಂಡು ಲ್ಯಾಬೊರೇಟರಿ ಬಳಿಗೆ ಧಾವಿಸಿದಳು. ಸುಂದರ ಅಲ್ಲಿ ಇರಲಿಲ್ಲ - ಬಾಗಿಲಿಗೆ ಬೀಗ ಬಡಿದಿತ್ತು.

ಕಾಲೆಳೆದುಕೊಂಡು ಬಂದು ಮನೆಯಲ್ಲಿ ಕುಳಿತಳು. ಚಿತ್ರ ಬದಲಾಯಿಸಿತು - ಅಣ್ಣನ ಬಗ್ಗೆ ಸುಂದರ ವ್ಯಕ್ತಮಾಡಿದ ಅಭಿಪ್ರಾಯಗಳು - ಯೂನಿಯನ್ ಪ್ರಕರಣ ಮನಸ್ಸನ್ನು ವ್ಯಾಪಿಸಿದವು. ಅವರ ಅಹಂಕಾರಕ್ಕೆ ಕೊನೆಯೇ ಇಲ್ಲ. ನಾನು ಕ್ಷಮೆ ಬೇಡಿದರೆ ಅವರು ಮತ್ತಷ್ಟು ಅಹಂಕಾರ ಪ್ರದರ್ಶಿಸುತ್ತಾರೆ. –'ನೀನು ನನ್ನನ್ನು ಹೊಗಳಿದರೂ ಒಂದೇ, ತೆಗಳಿದರೂ ಒಂದೇ. ಜಗತ್ತೇ ನನ್ನನ್ನು ಹೊಗಳುವಾಗ ನೀನೂ ಹೊಗಳುವೆ. ಅದನ್ನು ನಾನು ಚೆನ್ನಾಗಿ ಬಲ್ಲೆ'- ಸುಂದರನ ಈ ಕಠೋರಶಾಸನ ಅವಳ ಹೃದಯವನ್ನಿರಿಯತೊಡಗಿತು. 'ನಾನು ಈಗ ಅವರ ಕ್ಷಮೆಬೇಡಿದರೆ, ಕೆಮಿಕಲ್ ಏಜ್ ಮತ್ತು ರಾಯಲ್ ಸೊಸೈಟಿಯ ಕಾಗದ ಇವಳ ಮನಸ್ಸನ್ನು ತಿದ್ದಿದವು ಎಂದು ಭಾವಿಸಿಕೊಳ್ಳುತ್ತಾರೆ. ಬೇಡ ಬೇಡ - ನಾನು ಮಾಡಿದ ಅಪರಾಧವೇನು? ಅಣ್ಣನನ್ನು ಹೀಗಳೆದವರು ಅವರು - ನನ್ನನ್ನು ಹೀಗಳೆದವರು ಅವರು. ಅವರು ತಪ್ಪುಮಾಡುವುದು, ನಾನು ಕ್ಷಮೆಬೇಡುವುದು - ಯಾವ ನ್ಯಾಯ?' ಎಂದು ವಾದಿಸಿಕೊಂಡಳು.

ಕತ್ತಲೆಯ ಮರೆಯಲ್ಲಿ ನಿಂತಿದ್ದ ಕಳ್ಳನಂತೆ ಜಾನಕಿಯ ಜೀವನದ ನೆನಪು, ಸಮಯ ನೋಡಿ ಅವಳ ಹೃದಯದ ಮೇಲೆ ಧಾಳಿ ನಡೆಸಿತು. ಸುನಂದ ಗಡಗಡನೆ ನಡುಗಿದಳು - ಭಯದಿಂದ ಅವಳ ದೇಹಾದ್ಯಂತವೂ ಬೆವರಿತು. ಜಾನಕಿಯ ಅನುಭವ ಕ್ರಮಕ್ರಮೇಣ - ದೌರ್ಬಲ್ಯದಿಂದ ತನ್ನದಾಗುತ್ತಿದೆ ಎನ್ನುವ ಸತ್ಯ ಸುನಂದೆಗೆ ಹೊಳೆಯಲಿಲ್ಲ.

ಎಲ್ಲ ಕಹಿನೆನಪುಗಳನ್ನು ಕ್ರೋಷೆಯಲ್ಲಿ ಮರೆಯುತ್ತಿಸಿದಳು.

ಸುನಂದೆಯ ವಾದವಿವಾದದಿಂದ ಬೇಸತ್ತು ಸುಂದರ ತನ್ನ ಲ್ಯಾಬೊರೇಟರಿಯ ಕಡೆ ಸುಳಿಯಲಿಲ್ಲ. ಬೆಟ್ಟದ ಮೇಲೆ ಸೊಗಸಾದ ದೇವಾಲಯವಿದೆಯೆಂದು ನಂಬಿಕೊಂಡು, ಪ್ರಯಾಸಪಟ್ಟು ಬೆಟ್ಟವೇರಿದವನಿಗೆ ಹಾಳುಮಂಟಪ ಕಣ್ಣಿಗೆ ಬಿದ್ದಂತಾಗಿತ್ತು. ಮಧ್ಯಾಹ್ನ ಟಪಾಲಿನಲ್ಲಿ ಕಾಗದ, ಪತ್ರಿಕೆ ಬಂದಾಗ 'ಇದನ್ನು ಸುನಂದ ನೋಡಿದರೆ ಎಷ್ಟು ಸಂತೋಷ ಪಡುತ್ತಾಳೆ' ಎಂದುಕೊಂಡ. ಕಾಲೇಜಿನ ಕಾಮನ್ ರೂಮಿನಲ್ಲಿ ಕುಳಿತಿದ್ದಾಗಲೇ ಕಾಗದ, ಪತ್ರಿಕೆ ಬಂದಿದ್ದುದು. ಜತೆಯ ಅಧ್ಯಾಪಕರು ಅದು ಏನೆಂದು ಕೇಳಿದರು. 'ಯಾವುದೋ ಪತ್ರಿಕೆ' ಎಂದು ಮಾತು ತೇಲಿಸಿದ. ಅವುಗಳನ್ನು ಕೂಡಲೆ ಪ್ರಿನ್ಸಿಪಾಲ್ ನಾಯಿಡು ಅವರಲ್ಲಿ ತೆಗೆದುಕೊಂಡು ಹೋಗಿ 'ಇಲ್ಲಿ ನೋಡಿ - ನೀವಂತೂ ನನಗೆ ಅನ್ಯಾಯಮಾಡಿದಿರಿ. ದೇವರು ಅನ್ಯಾಯಮಾಡುವುದಿಲ್ಲ.' ಎಂದು ಹೇಳಬೇಕೆಂದು ಮನಸ್ಸು ತಹತಹಪಟ್ಟಿತು. 'ಛೆ' ಛೆ! ಸುನಂದನಿಗೆ ಸಂತೋಷದ ಸುದ್ದಿ ಮೊದಲು ತಿಳಿಸದೆ ಉಳಿದವರಿಗೆ ಹೇಳುವುದೇ' ಎಂದುಕೊಂಡ. ಕಾಲೇಜ್ ಮುಗಿವರೆ ಸಾಕೆಂದು ಮನೆಗೆ ಮಕ್ಕಳಂತೆ ಓಡಿಬಂದಿದ್ದ.

ಮನೆಯಲ್ಲಿ ಆದುದೇನು - ಮುಖಭಂಗ!

'ಅಣ್ಣಾನ ಯೋಗ್ಯತೆ ನಿಮಗಿಲ್ಲ' ಎನ್ನುವ ನಿತ್ಯಪಲ್ಲವಿ.

ಹೌದು! ಚಂದ್ರಶೇಖರ ಬಂದುಹೋದ ಮೇಲೆ ಸುನಂದನಿಗೆ 'ಅಣ್ಣಾಭೂತ' ಹಿಡಿದಿತ್ತು. ದಿನಕ್ಕೆ ನೂರು ಸಲವಾದರೂ ಅವಳು ಅಣ್ಣಾನನ್ನು ಜ್ಞಾಪಿಸಿಕೊಳ್ಳಬೇಕು. ಅವನನ್ನು ಸಮಯ ಸಂದರ್ಭವಿಲ್ಲದಿದ್ದರೂ ಹೊಗಳಬೇಕು.

ಹೊಗಳಲಿ! - ಅಣ್ಣಾನನ್ನು ತಂಗಿ ಹೊಗಳದೆ ಇನ್ನು ಯಾರು ಹೊಗಳಬೇಕು. ವಿದೇಶದಲ್ಲಿ ಖ್ಯಾತಿಪಡೆದ ಅಣ್ಣಾನನ್ನು - ಆ ಖ್ಯಾತಿ ಯಾವದೇ ಬಗೆಯದಾಗಿರಲಿ - ತಂಗಿ ಹೊಗಳಬೇಕಾದುದು ಸಹಜವೇ! ಆದರೆ ಅದರ ಜತೆಯಲ್ಲಿಯೇ ತನ್ನನ್ನು ತೆಗಳುವುದೇಕೆ? ಪ್ರತಿಯೊಂದು ಮಾತನ್ನೂ ಚುಚ್ಚಿ ಆಡುವುದೇಕೆ?

ಸುನಂದ ಹೇಳಿದಂತೆ ತನಗೆ ಚಂದ್ರಶೇಖರನನ್ನು ಕಂಡರೆ ಅಸೂಯೆಯೇ? ಈಗ ಕೆಲವೇ ತಿಂಗಳ ಹಿಂದೆ ಚಂದ್ರಶೇಖರ ಯಾವ ಊರ ಒಕ್ಕಲು ಎಂದು

ತನಗೆ ತಿಳಿದಿರಲಿಲ್ಲ. ಆಗಿಲ್ಲದ ಅಸೂಯೆ ಈಗ ಎಲ್ಲಿಂದ ಬಂತು ? ಇತರರನ್ನು ಅಸೂಯಾಗ್ರಸ್ತರನ್ನಾಗಿ ಮಾಡುವ ಗುಣಗಳಾದರೂ ಚಂದ್ರಶೇಖರನಲ್ಲಿ ಯಾವದಿವೆ ?

ನಾನು ಮಾಡುವ ಸೇವೆ - ದುಡಿಮೆ – ಅದರಿಂದ ಸಿಕ್ಕಬಹುದಾದ ಸಿದ್ಧಿ ಸುನಂದನಿಗೆ ಬೇಕಾಗಿಲ್ಲ. ಅವಳಿಗೆ ಕೀರ್ತಿಬೇಕು - ಸಂಪತ್ತು ಬೇಕು - ಬೆಡಗುಬೇಕು.

ತನ್ನ ಜೀವನದ ಮೇಲೆ ನಡೆದಿದ್ದ ಆಘಾತಕಂದು ಸುಂದರನಿಗೆ ವ್ಯಸನವೂ ಆಗಿತ್ತು - ಕೋಪವೂ ಬಂದಿತ್ತು.

ಕಾಲೇಜಿನಲ್ಲಾಗುತ್ತಿದ್ದ ಹಿಂಸೆಯನ್ನು ಸಹಿಸಿಕೊಳ್ಳಬಹುದು - ನಿರ್ದಿಷ್ಟ ಗುರಿಮುಟ್ಟಲಿಲ್ಲವಲ್ಲ ಎನ್ನುವ ಆಂಪತಿಯನ್ನೂ ಸಹಿಸಿಕೊಳ್ಳಬಹುದು - ಆದರೆ ಮನೆಯೊಳಗಣ ಈ ಹಿಂಸೆ - ಈ ಭರ್ತ್ಸನೆ - ಈ ಕ್ರೌರ್ಯ ಸಹಿಸಿಕೊಳ್ಳುವುದು ಹೇಗೆ ?

ಸುಂದರ ಕಾಲು ಸೋಲುವವರೆಗೆ ಸುತ್ತಾಡಿದ. ರಾತ್ರಿಯ ಕತ್ತಲು ಬೆಳೆಯುತ್ತಿತ್ತು. ಬೆಳಗು ಹರಿಯುವವರೆಗೆ ಹೀಗೇ ಸುತ್ತಾಡಲು ಸಾಧ್ಯವಿಲ್ಲ - ಮನೆಗೆ ಹೋಗಲೇಬೇಕು.

ಮನೆ - ಅಲ್ಲಿ ಶಾಂತಿಯಿದೆ, ನನ್ನ ಕೆಲಸ ಕಾದಿದೆ, ಲ್ಯಾಬೊರೇಟರಿ ನನ್ನ ದಾರಿನೋಡುತ್ತಿದೆ - ನನ್ನ ಸುನಂದ ಕ್ಷಣಗಳನ್ನು ಎಣಿಸುತ್ತಿದ್ದಾಳೆ ಎಂದುಕೊಂಡು ಕಾಲೇಜ್ ಮುಗಿದೊಡನೆ ಮನೆಗೆ ಹಾರುತ್ತಿದ್ದ ಮನಸ್ಸಿನ ಸ್ಥಿತಿಯನ್ನು ಜ್ಞಾಪಿಸಿಕೊಂಡ.

ಈಗಲೂ ಅದೇ ಮನೆಯಿದೆ - ಅದೇ ಲ್ಯಾಬೊರೇಟರಿ ಇದೆ - ಅದೇ ಸುನಂದ ಕ್ಷಣಗಳನ್ನು ಎಣಿಸುತ್ತಿದ್ದಾಳೆ - ಸಂತೈಸುವುದಕ್ಕಲ್ಲ – ಸಂತೋಷ ಪಡಿಸುವುದಕ್ಕಲ್ಲ - ಸಂತಾಪಪಡಿಸುವುದಕ್ಕೆ !

ಸುಂದರ ಮನೆಯ ಕಡೆ ತಿರುಗಿದ. ಅವನ ಅಂತರಂಗದಲ್ಲಡಗಿದ್ದ ಹಿರಿಯತನ ಹೇಳಿತು 'ಅಣ್ಣನ ಖ್ಯಾತಿಗೆ ಮರುಳಾದ ಹುಚ್ಚುಹೆಣ್ಣು ನಾಲ್ಕು ದಿನ ಅವಿವೇಕವಾಗಿ ವರ್ತಿಸುತ್ತದೆ ತಪ್ಪು ಮಾತು ಆಡುತ್ತದೆ. ಅದನ್ನು ಮರೆಯಲು ನಿನಗೆ ಸಾಧ್ಯವಿಲ್ಲವೇ ? ಮಗು ತಪ್ಪು ಆಡಿತೆಂದು ಯಾರಾದರೂ ಛಲ ಸಾಧಿಸುತ್ತಾರೆಯೇ ? – ಸುನಂದ ಯಾರು ? ನಿನ್ನ ಹೆಂಡತಿಯಲ್ಲವೇ !

ನೀನೇ ಅವಳ ಸರ್ವಸ್ವವಲ್ಲವೇ? ನೀನು ಅವಳನ್ನು ದೂರಮಾಡಿದರೆ ಅವಳಿಗೆ ದಿಕ್ಕುಯಾರು? – ಹೆಣ್ಣಿನ ಮೇಲೆ ಕ್ಷಾತ್ರ ಸಾಧಿಸುವುದು ಗಂಡಸುತನವೇ.'

ಕೋಪೋದ್ದೀಪನದಿಂದ ಜ್ವಲಂತವಾಗಿದ್ದ ಸುಂದರನ ಮನಸ್ಸಿನ ಮೇಲೆ ತಂಗಾಳಿ ಬೀಸಿದಂತಾಯಿತು. ಅರೆನಿಮಿಷದಲ್ಲಿ ಸ್ವಾಭಿಮಾನವನ್ನು ಬದಿಗೊತ್ತಿದ. ಸುನಂದನನ್ನು ಕಾಣಬೇಕೆಂಬ ತವಕವೂಡಿತು. ನಡೆಯ ವೇಗ ಹೆಚ್ಚಿಸಿ ಮನೆ ಸೇರಿದ.

ಬಟ್ಟೆ ಬದಲಾಯಿಸಿಕೊಂಡು ಬಂದು ತೊಟ್ಟಿಯಲ್ಲಿ ಕುಳಿತ. ಯಥಾಕ್ರಮದಂತೆ ಸುನಂದ ಬಂದು ಮಾತನಾಡಿಸುತ್ತಾಳೆ ಎಂದು ನಿರೀಕ್ಷಿಸಿದ. ಅವಳು ಒಳಗಿನ ಕೋಣೆಯಲ್ಲಿ ಕ್ರೋಷಾ ಹಿಡಿದು ಕುಳಿತುಬಿಟ್ಟಿದ್ದಳು. 'ನೆತ್ತಿಯ ಕಾವು ಇನ್ನೂ ಇಳಿದಿಲ್ಲ' ಎಂದುಕೊಂಡ. ಎದ್ದು ಲ್ಯಾಬೊರೇಟರಿಗೆ ಹೋಗುವ ಮನಸ್ಸಾಯಿತು. 'ಇದೇ ನಿನ್ನ ಪರೀಕ್ಷಾ ಸಮಯ ಸುಂದರ' ಎಂದು ಯಾರೋ ಕಿವಿಯಲ್ಲಿ ಗಟ್ಟಿಸಿ ಹೇಳಿದಂತಾಯಿತು. ಅಸ್ಥಿರವಾಗಿದ್ದ ಮನಸ್ಸು ಸ್ಥಿರವಾಯಿತು ಕೈಯಲ್ಲಿ 'ಕೆಮಿಕಲ್ ಏಜ್' ಪತ್ರಿಕೆ ಹಿಡಿದು ಹಾಳೆಗಳನ್ನು ತಿರುವುತ್ತಾ

"ಸುನಂದಾ" ಎಂದು ಕೂಗಿದ.

ಒಳಗಿನಿಂದ ಮಾರುತ್ತರ ಬರಲಿಲ್ಲ

"ಸುನಂದಾ" ಎಂದು ಮತ್ತೊಮ್ಮೆ ಕೂಗಿದ.

ಸುನಂದ ಎದ್ದು ಬಂದು ಬಾಗಿಲ ಬಳಿ ನಿಂತಳು

"ಬಾ - ಕುಳಿತುಕೋ"

ಯಂತ್ರದ ಗೊಂಬೆಯಂತೆ ಸ್ವಸ್ಥಾನದಲ್ಲಿ ಕುಳಿತಳು.

"ಈ ಪತ್ರಿಕೆ ನೋಡಿದೆಯಾ?"

"ನೋಡಿದೆ."

"ನನ್ನ ಲೇಖನ ಪ್ರಕಟವಾಗಿದೆ."

"ಹೌದು."

"ಸಂಪಾದಕರ ಟಿಪ್ಪಣಿ ನೋಡಿದೆಯಾ?"

"ನೋಡಿದೆ."

"ರಾಯಲ್ ಸೊಸೈಟಿಯಿಂದ ಕಾಗದ ಬಂದಿದೆ."

"ನೋಡಿದೆ."
"ನಿನಗೇನನ್ನಿಸಿತು ?"
ಸುನಂದ ಉತ್ತರಕೊಡಲಿಲ್ಲ
"ಮಾತನಾಡಲೊಲ್ಲೆಯಾ ?"
"ಏನುಮಾತನಾಡಲಿ."
"ಮಾತನಾಡುವುದನ್ನು ನಾನು ಕಲಿಸಿಕೊಡಬೇಕೇನು ?"
"ಹಾಗೇ ಆಗಿದೆ - ನಾನು ಏನು ಆಡಿದರೂ ತಪ್ಪಾಗುತ್ತದೆ."
"ಹೀಗೆ ವ್ಯಾಜ್ಯವಾಡುವುದರಿಂದ ಇಬ್ಬರಿಗೂ ಸುಖವಿಲ್ಲ."
"ಅದನ್ನು ನಾನೇನು ಬಲ್ಲೆ."
"ಇನ್ನು ಯಾರು ಬಲ್ಲರು ?"
"ನೀವು."
"ನನ್ನ ಮನಸ್ಸನ್ನು ನೀನು ಅರಿಯೆಯಾ ?"
"ಅರಿಯಲಾರೆ ಎಂದು ನೀವೇ ಹೇಳಿರುವಿರಿ."
"ಅದು ಕೋಪದಲ್ಲಿ ಆಡಿದ ಮಾತು."
"ಹೌದು ! ಅತ್ತೆ ಒಡೆದ ಮಡಿಕೆಗೆ ಬೆಲೆಯಿಲ್ಲ."
"ಕೋಪ ಬರಿಸಿದವಳು ನೀನು."
"ಹೌದು ! ಅನಿಷ್ಟಕ್ಕೆ ಶನೀಶ್ವರ ಗುರಿ."
"ಇಬ್ಬರದೂ ತಪ್ಪಾಗಿದೆ. ನಿನ್ನ ಭಾಗ ನೀನೇಕೆ ಒಪ್ಪಿಕೊಳ್ಳುವುದಿಲ್ಲ."
"ನಾನು ಮಾಡಿದ ತಪ್ಪೇನು ತಿಳಿಸಿ."
"ನನ್ನನ್ನು ಕಡೆಗಾಣಿಸಿದ್ದು."
"ಅಣ್ಣಾನನ್ನು ಕಡೆಗಾಣಿಸಿದವರು ನೀವು."
"ಅವರ ವಿಷಯ ನಾನು ಪ್ರಸ್ತಾಪಿಸಲಿಲ್ಲ."
"ನಾನೇ ಪ್ರಸ್ತಾಪಿಸಿದ್ದು – ನಿಮಗೇಕಷ್ಟು ಅಸಹನೆ."
"ಅಸೂಯೆ - ಅಸಹನೆ."
"ಹೌದು."
"ಎರಡೂ ಇಲ್ಲವೆಂದು ಹೇಳಲಿಲ್ಲವೇ ?"
"ಬಾಯಲ್ಲಿ ನೀವು ಹೇಳಿದ್ದೊಂದು - ಕೃತಿಯಲ್ಲಿ ಮಾಡಿದ್ದೊಂದು."

"ತಪ್ಪನ್ನೇ ಸಮರ್ಥಿಸುವುದು ಮೂರ್ಖತನ."

"ನಾನು ಮೂರ್ಖಳು."

'ಅದರಲ್ಲಿ ಸಂದೇಹವೇ ಇಲ್ಲ' ಎನ್ನುತ್ತಾ ಎದ್ದು ಲ್ಯಾಬೊರೇಟರಿಯ ಬೀಗದಕ್ಕೆ ತೆಗೆದುಕೊಂಡು ಹೊರಟುಬಿಟ್ಟ.

೧೯

ಸಂಜೀವ, ಪುಷ್ಪ ಮೈಸೂರಿಗೆ ಹಿಂದಿರುಗಿದ ಮಾರನೆಯ ದಿನವೇ ಅನಂತಯ್ಯನಿಗೆ ಅವರ ಪ್ರವಾಸದ ವಿಷಯ ವೆಂಕಟಾಚಲ - ಕನಕಮ್ಮ ಇವರ ಮೂಲಕ ಮುಟ್ಟಿತು. ಪುಷ್ಪನಿಗೆ ಮೂರು ನಾಲ್ಕು ಸಾವಿರ ರೂಪಾಯಿ ಒಡವೆ ಕೊಂಡುಕೊಟ್ಟಿರುವ ಸಂಗತಿ ಕೇಳಿದ ಮೇಲಂತೂ ಅನಂತಯ್ಯ ಮತ್ತಷ್ಟು ವ್ಯಗ್ರಚಿತ್ತನಾದ. ಸೋಮಶೇಖರರಾಯರಿಗೆ ಅವನಿಂದ ಪೂರ್ಣ ವರದಿ ಹೋಯಿತು. ರಾಯರು ಅವನನ್ನೇ ನಂಜನಗೂಡಿಗೆ ಬರಮಾಡಿಕೊಂಡರು.

"ನಮ್ಮ ಪ್ರಯತ್ನವೆಲ್ಲಾ ನಿಷ್ಫಲ ಸ್ವಾಮಿ. ಪುಷ್ಪ ಸಂಜೀವನಿಗೆ ಜಿಗಣೆ ಅಂಟಿದ ಹಾಗೆ ಅಂಟಿಬಿಟ್ಟಿದ್ದಾಳೆ."

"ಮದುವೆ ಯಾವಾಗಂತೆ!"

"ಅದೇ ಗೊತ್ತಾಗಿಲ್ಲ ನೋಡಿ, ಅದನ್ನವರು ನಿರ್ಧರಿಸಿಯೇ ಇಲ್ಲವೋ, ನಿರ್ಧರಿಸಿ ಗುಟ್ಟಾಗಿ ಇಟ್ಟುಕೊಂಡಿದ್ದಾರೋ ಒಂದೂ ತಿಳಿಯುವ ಹಾಗಿಲ್ಲ."

"ಆ ಕೆ. ಜಿ. ಎಫ್. ಅಂಕಲ್ (K. G. F. uncle) ಹಿಡಿಯದಿದ್ದರೆ ನಮ್ಮ ಕೆಲಸ ಆಗುವುದಿಲ್ಲ ಅನಂತಯ್ಯ. ಈ ಗಂಡಾಂತರ ಅವನೊಬ್ಬನೇ ತಪ್ಪಿಸಲು ಸಾಧ್ಯ."

"ಅವನ ಪರಿಚಯವೇ ನನಗಿಲ್ಲವಲ್ಲ ಸ್ವಾಮಿ."

"ಪರಿಚಯ ನಾನು ಮಾಡಿಸಿಕೊಡುತ್ತೇನೆ. ಬೆಂಗಳೂರು ಕಂಟೋನ್ಮೆಂಟನಲ್ಲಿ ನನ್ನ ಸ್ನೇಹಿತ ಡೊಮಿಂಗೋ ಲಾಯರು. ಚಿನ್ನದ ಗಣಿಯ ವರಿಗೆ ಅವನೇ ಲಾಯರೂಂತ ಕಾಣುತ್ತದೆ. ಒಂದು ವೇಳೆ ಅವನು ಲಾಯರಾಗಿರದಿದ್ದರೂ, ಗಣಿ ಲಾಯರ ಪರಿಚಯ ನಿಮಗೆ ಮಾಡಿಸಿಕೊಡುತ್ತಾನೆ.... ಊರಿನ ಕಡೆ ಏನು ಸಮಾಚಾರ ಅನಂತಯ್ಯ? ನಿಮ್ಮ ಸ್ನೇಹಿತ ರಂಗಣ್ಣ ಹೇಗಿದ್ದಾನೆ?"

"ಅವನ ರಾಮಾಯಣ ಬಿಡಿಸ್ವಾಮಿ - ಹತ್ತಲಿಲ್ಲ ಹರಿಯಲಿಲ್ಲ."

"ಈಗೆಲ್ಲಾ ಸರಿಹೋಗಿರಬೇಕಲ್ಲರೀ. ಪುನಃ ಮದುವೆಯೂ ಆಯಿತು. ....ಹೆಂಡತಿ ಮನೆಗೂ ಬಂದಳು."

"ಎಲ್ಲಾ ಆಯಿತು. ಆ ನಿರ್ಭಾಗ್ಯ...ಮಗನಿಗೆ ಕಂಕಣಬಲವೇ ಇರುವ ಹಾಗೆ ಕಾಣುವುದಿಲ್ಲ. ಈ ಹೆಂಡತಿಗೆ ನಿತ್ಯರೋಗ - ಬೆಳಗಾಗೆದ್ದು ಆಸ್ಪತ್ರೆ ಅಲೆಯೋದು ರಂಗಣ್ಣನ ಕೆಲಸವಾಗಿದೆ."

"ಜಾನಕಮ್ಮ ಮೇಲಿಂವ ಮೇಲೆ ಕಾಗದ ಬರೆಯುತ್ತಿದ್ದಾಳೆ. ಅವರಿಗೆ ಕೊಡಬೇಕಾದುದನ್ನು ಕೊಟ್ಟುಬಿಡು ಎಂದು ನೀವು ಹೇಳಬಾರದೆ ?"

"ಹೇಳಿದರೆ 'ಆಗಲಿ - ಆಗಲಿ' ಎಂದು ಬಾಯಲ್ಲಿ ಹೇಳುತ್ತಾನೆ."

"ನಾನೂ ಎರಡು ಕಾಗದ ಬರೆದೆ - ಒಂದಕ್ಕೂ ಅವನಿಂದ ಜವಾಬಿಲ್ಲ."

"ಶುದ್ಧ ತರಲೆ ಆಸಾಮಿ. ಆಸ್ತಿ ವಿಷಯ ಅಷ್ಟು ಸುಲಭವಾಗಿ ಇತ್ಯರ್ಥ ಆಗುತ್ತದೆ ಎಂದು ನೀವು ತಿಳಿಯಬೇಡಿ. ಈ ವಿಷಯದಲ್ಲಿ ನೀವು ಪಟ್ಟು ಹಿಡಿದ ಹೊರತೂ ಗತ್ಯಂತರವೇ ಇಲ್ಲ."

"ಅದಕ್ಕೆ ನಾನು ಮೈಸೂರು, ಚಾಮರಾಜನಗರ ಹೋಗಿಬರಬೇಕು - ನನಗೂ ಒಂದು ಘಳಿಗೆ ಪುರಸತ್ತಿಲ್ಲ."

" ಎರಡು ದಿವಸ ಪುರಸತ್ತು ಮಾಡಿಕೊಂಡು ಈ ಕೆಲಸ ಮುಗಿಸಿ ಬಿಡಿ ಸ್ವಾಮಿ. ಪಾಪ ಜಾನಕಮ್ಮ - ಹೆಣ್ಣು ಹೆಂಗಸು - ಎರಡು ಮಕ್ಕಳನ್ನು ಕಟ್ಟಿಕೊಂಡು ಆಕೆ ಪೂರೈಸುವುದು ಹೇಗೆ ?"

"ಆಗಲಪ್ಪಾ. ಈ ವಾರದ ಕೊನೆಗೆ ಮೈಸೂರಿಗೆ ಹೋಗಿಬಂದು ರಂಗಣ್ಣನನ್ನು ನಾನೇ ನೋಡಿ ಮಾತನಾಡುತ್ತೇನೆ. ನೀವು ಬೆಂಗಳೂರಿಗೆ ಯಾವಾಗ ಹೊರಡುವಿರಿ."

"ಮೈಸೂರಿನ ಸ್ಥಿತಿಗತಿ ನೋಡಿಕೊಂಡು ಹೋಗುತ್ತೇನೆ. ಡೊಮಿಂಗೋಗೆ ಕಾಗದ ಬರೆದುಕೊಡಿ."

ಅನಂತಯ್ಯ ಕಾಗದ ಬರೆಸಿಕೊಂಡು ಮೈಸೂರು ಸೇರಿ ತನ್ನ ಕಾಪಿನ ಕೆಲಸ ಮುಂದುವರಿಸಿದ.

ಐದು ದಿನಗಳು ಕಳೆದವು. ಒಂದು ಬೆಳಿಗ್ಗೆ ಪುಷ್ಪ ಹೊತ್ತಿಗೆ ಮುಂಚೆ

ಸಂಜೀವನ ಮನೆಗೆ ಬಂದಳು. ಸ್ನಾನ ಮುಗಿಸಿಕೊಂಡು ಬಂದ ಸಂಜೀವ, ಪುಷ್ಪನನ್ನು ನೋಡಿ

"ಇದೇನು ಡಾರ್ಲಿಂಗ್, ಇಷ್ಟು ಬೇಗ ಬಂದುಬಿಟ್ಟೆ ?" ಎಂದು ಕೇಳಿದ.

ಪುಷ್ಪ ನಪ್ಪೆಮೋರೆ ಹಾಕಿಕೊಂಡು ಮೌನವಾಗಿ ಕುಳಿತಳು. ಸಂಜೀವನ ಮನಸ್ಸಿಗೆ ಆತಂಕವಾಯಿತು. ಏನೋ ಅನಾಹುತವಾಗಿದೆಯೆಂದು ಭಾವಿಸಿದ. ಪುಷ್ಪನನ್ನು ನೇವರಿಸುತ್ತಾ ಮೃದುವಾಗಿ

"ಏನು ಆಯಿತು ಹೇಳು. ಸುಮ್ಮನೆ ಚಿಂತೆಮಾಡಿದರೆ ಪ್ರಯೋಜನ ವಿಲ್ಲ."

ಮಾತನಾಡಲು ಬಾಯಿತೆರೆದು ಪುಷ್ಪ 'ಅಕ್ಕ' ಎಂದಳು. ಅವಳ ಕಣ್ಣಿಂದ ಪ್ರವಾಹವೇ ಹೊರಟುಬಿಟ್ಟಿತು. ಅವಳು ದುಃಖದಾವೇಗವನ್ನು ಜೀರ್ಣಿಸಿಕೊಳ್ಳುವುದಕ್ಕೆ ಅವಕಾಶವಿತ್ತು

"ನಿನ್ನ ಅಕ್ಕಾವರಿಗೆ ಏನಾಗಿದೆ ?" ಎಂದು ಕೇಳಿದ.

"ಪುನಃ ಹಾರ್ಟ್ - ಅಟ್ಯಾಕ್ (Heart – attack) ಆಗಿದೆಯಂತೆ !"

"ಕಾಗದ, ಟೆಲಿಗ್ರಾಂ ಏನಾದರೂ ಬಂತೇ ?"

"ಅಂಕಲ್ (Uncle) ಬೆಂಗಳೂರಿಗೆ ಹೋಗಿದ್ದರಂತೆ. ಅವರನ್ನೇ ಇಲ್ಲಿ ಕಳುಹಿಸಿಕೊಟ್ಟಿದ್ದಾರೆ - ಕೂಡಲೆ ನನ್ನ ಕರೆದುಕೊಂಡು ಬರಬೇಕೆಂದು ಹೇಳಿಕಳಿಸಿದ್ದಾರೆ.''

"ಹೃದ್ರೋಗ ಬಹಳ ಕೆಟ್ಟ ಕಾಹಿಲೆ. ಅದರ ಸ್ವರೂಪವೇ ಅರ್ಥವಾಗು ವುದಿಲ್ಲ ಯೋಚನೆಮಾಡಿ ಏನು ಸಾರ್ಥಕ. ಅವಶ್ಯಕವಾಗಿ ಹೋಗಿ ನೋಡಿಕೊಂಡು ಬಾ."

"ನಿಮ್ಮೊಬ್ಬರನ್ನೇ ಬಿಟ್ಟುಹೋಗಬೇಕಲ್ಲ."

"ಚಿಂತೆಯಿಲ್ಲ. ತಪ್ಪದೆ ದಿನವೂ ಕಾಗದ ಬರೆಯುತ್ತಿರು."

"ನಾನು ಹೋಗುವ ಹೊತ್ತಿಗೆ . . . ."

"ಏನೂ ಆಗಿರುವುದಿಲ್ಲ. ಹೋಗಿಬಾ. ದೇವರು ಒಳ್ಳೆಯದು ಮಾಡು ತ್ತಾನೆ. ಮಧ್ಯಾಹ್ನವೇ ಹೊರಟುಬಿಡುತ್ತೀಯಾ ?"

"ಹೂ ! ಹೊರಡಬೇಕಾಗಿದೆ."

ಕಾಲ ವಿಳಂಬಮಾಡುವ ಹಾಗಿಲ್ಲ. ನೀನಿನ್ನೂ ಹೊರಡುವ ಸಿದ್ಧತೆ ಮಾಡಿಕೊಳ್ಳಬೇಕೆಂದು ಕಾಣುತ್ತದೆ - ತಡಿ, ನಾನೂ ಜತೆಯಲ್ಲಿ ಬರುತ್ತೇನೆ."

"ಮನೆಯಲ್ಲಿ ಅಂಕಲ್ ಇದ್ದಾರೆ."

"ಇದ್ದರೇನಂತೆ !"

"ನಮ್ಮ ಎಂಗೇಜ್‌ಮೆಂಟ್ ವಿಷಯ ಅವರಿಗೆ ಇನ್ನೂ ತಿಳಿಸಿಲ್ಲ. ಅವರು ಸ್ವಲ್ಪ ಹಳೆಯಕಾಲದವರು."

"ಹಾಗಾದರೆ ನಾನು ಇಲ್ಲೇ ನಿನಗೆ ಗುಡ್ - ಬಯ್ (Good-Bye) ಹೇಳಿಬಿಡಬೇಕು."

"ಇನ್ನೂ ಹೊತ್ತಿದೆ. ಒಂದು ಗಂಟೆಕಾಲ ನಾನು ಇಲ್ಲಿದ್ದು ಹೋಗ ಬಹುದು."

"ಬೇಡ ಡಾರ್ಲಿಂಗ್ - ನಾಲ್ಕೈದು ದಿವಸಗಳಲ್ಲಿ ನನಗೇನೂ ಪ್ರಾಣ ಹೋಗುವುದಿಲ್ಲ."

"ಕೋಪಬಂತೇ ದೊರೆ."

"ಕೋಪ ಏಕೆ ಬರಬೇಕು."

"ನನ್ನ ತಾಪತ್ರಯ ನೋಡಿ."

"ನಿನ್ನ ಸುಖ ದುಃಖ ಎರಡೂ ನನ್ನದಲ್ಲವೇ !"

"ಬಹಳ ದಿವಸ ನಿಲ್ಲುವುದಿಲ್ಲ ದೊರೆ. ನನ್ನ ದೇಹ ಅಲ್ಲಿದ್ದರೂ ಮನಸ್ಸೆಲ್ಲಾ ಇಲ್ಲೇ ಇರುತ್ತದೆ. ಅಕ್ಕನಿಗೆ ಸ್ವಲ್ಪ ಗುಣವಾದ ಕೂಡಲೆ ಬಂದು ಬಿಡುತ್ತೇನೆ."

"ಹಾಗೇ ಮಾಡು"

ಎಂದು ಡ್ರಾಯರ್ ತೆಗೆದು ಇನ್ನೂರು ರೂಪಾಯಿಗಳಷ್ಟು ನೋಟನ್ನು ಪುಷ್ಪನ ಕೈಯಲ್ಲಿಟ್ಟ.

"ಇದೇಕೆ ?"

"ಕಾಹಿಲೆಯವರನ್ನು ನೋಡುವುದಕ್ಕೆ ಹೋಗುವಾಗ ಬರಿಗೈಯಲ್ಲಿ ಹೋಗಬಾರದು. ಔಷಧಿ ಪಥ್ಯದ ಖರ್ಚಿಗೆ ಹಣಬೇಕಾಗುತ್ತದೆ. ನಿಮ್ಮ ಭಾವನಿಗೆ ಧೈರ್ಯ ಹೇಳು. ನಾನು ಬರಬೇಕಾದರೆ ವೈರ್ (Wire) ಮಾಡು - ಕೂಡಲೆ ಹೊರಟುಬರುತ್ತೇನೆ."

ನೀರು ತುಂಬಿಕೊಂಡು ಪುಷ್ಪನ ಕಣ್ಣುಗಳು ಮಂಜಾದವು. ಮರುಕ್ಷಣವೇ ಸಂಜೀವನ ಪಾದಗಳ ಮೇಲೆ ಉರುಳಿದಳು. ಅವಳ ಕಣ್ಣೀರು ಅವನ ಪಾದ ಗಳನ್ನು ತೋಯಿಸಿದವು. ಸಂಜೀವ ನಮ್ರತೆಯಿಂದ ಅವಳನ್ನು ಹಿಡಿದೆತ್ತಿ ಸಂತೈಸಿದ.

"ಕಾಗದ ಬರೆಯುತ್ತೀರಾ ?''

''ಖಂಡಿತ ಬರೆಯುತ್ತೇನೆ.''

''ಅಕ್ಕನ ವಿಳಾಸ ಗೊತ್ತಿದೆಯೇ.''

''ಕಾಗದದ ಮೇಲೆ ಗುರುತು ಹಾಕಿಕೊಡು.''

ಮೇಜಿನ ಮೇಲಿದ್ದ ಪ್ಯಾಡ್ ತೆಗೆದುಕೊಂಡು ಅವಳು ಹೇಳಿದ ವಿಳಾಸ ವನ್ನು ಸಂಜೀವ ಗುರುತು ಹಾಕಿಕೊಂಡು

"ನಿನಗೆ ಹೊತ್ತಾಗುತ್ತ ಬಂದಿತು.''

''ಆವರಾಗಲಿ.''

''ರೈಲಿಗೆ ಹೋಗುವುದೆಂದು ನಿಶ್ಚಯವಾದ ಮೇಲೆ ವೇಳೆಗೆ ಸರಿಯಾಗಿ ಹೋಗುವುದು ಒಳ್ಳೆಯದು.''

ಒಬ್ಬರನ್ನೊಬ್ಬರು ಬೀಳ್ಕೊಳ್ಳಬೇಕಾದರೆ ಸ್ವಲ್ಪ ಕಾಲ ಹಿಡಿಯಿತು. ಸಂಜೀವ ಅವಳ ಜತೆ ಸ್ವಲ್ಪದೂರ ಹೋಗಿ ಒಂದು ಗಾಡಿ ಗೊತ್ತುಮಾಡಿಕೊಟ್ಟು ಕಳುಹಿಸಿದ.

ಪುಷ್ಪ, ಅವಳ 'ಅಂಕಲ್' ಅಂದೇ ಹನ್ನೆರಡು ಗಂಟೆಯ ಪ್ಯಾಸೆಂಜರ್ ಗಾಡಿಯಲ್ಲಿ ಬೆಂಗಳೂರಿಗೆ ಪ್ರಯಾಣ ಬೆಳಸಿದರು.

ಅದೇ ಗಾಡಿಯಲ್ಲಿ ಅನಂತಯ್ಯನೂ ಬೆಂಗಳೂರಿಗೆ ಪ್ರಯಾಣ ಬೆಳಸಿದ.

ಮಾರನೆಯ ಬೆಳಿಗ್ಗೆ ಒಂಭತ್ತು ಗಂಟೆಗೆ ಬಂದ ಅಂಚೆಯಾಳು ಸಂಜೀವನ ಕೈಯಲ್ಲಿ ಒಂದು ಕಾಗದವಿತ್ತ. ಪುಷ್ಪನ ಅಕ್ಷರವಿದ್ದ ಹಾಗಿತ್ತು ಅವಳದೇ ಕಾಗದ.

''ಹೃದಯೇಶ್ವರಾ,

ನಿಮ್ಮನ್ನು ಬಿಟ್ಟು ಮನೆಗೆ ಬಂದ ಕೂಡಲೆ ನನಗೆ ಏನೂಬೇಡವಾಯಿತು. ನಿಮಗೆ ಕಾಗದ ಬರೆದರೆ ಸಮಾಧಾನವಾಗುವುದೆಂದು ಕುಳಿತೆ. 'ಪ್ರೇಮಿಗಳ

ಹಾದಿ ಸುಗಮವಾದುದಲ್ಲ' ಎಂಬ ಗಾದೆ ನಮ್ಮ ವಿಷಯದಲ್ಲಿ ನಿಜವಾಗಿ ಪರಿಣಮಿಸಿದೆ.

ಒಂದೇ ವಾರದ ಒಳಗೆ ನಾವಿಬ್ಬರೂ ಬೆಂಗಳೂರಿಗೆ ಪ್ರಯಾಣಮಾಡಿದೆವು. ಜತೆಯಲ್ಲಿದ್ದೆವು. ಜತೆಯಲ್ಲಿಯೇ ಹಿಂದಿರುಗಿದೆವು. ಈಗ ನಾನು 'ಅಂಕಲ್' ಜತೆ ಪ್ರಯಾಣ ಮಾಡುತ್ತಿದ್ದೇನೆ. ನಿಮ್ಮ ಜತೆ ಪ್ರಯಾಣ ಮಾಡುತ್ತಿದ್ದಾಗ ಹಕ್ಕಿಯ ಹಾಗಿತ್ತು ನನ್ನ ಮನಸ್ಸು; ಈಗ ಗುಂಡಿನಂತೆ ಭಾರವಾಗಿದೆ.

ನೀವು ನನ್ನ ಜತೆಯಲ್ಲಿ ಇಲ್ಲದಿದ್ದರೂ ನಿಮ್ಮ ಭಾವಚಿತ್ರ ಇದೆ. ಅದನ್ನೇ ಎದೆಗಪ್ಪಿಕೊಳ್ಳುತ್ತೇನೆ.

ನಿನ್ನೆಯ ಬೆಳಿಗ್ಗೆ ನಾನು ಬಂದಾಗ ನೀವೇಕೆ ಅಷ್ಟು ಆತುರವಾಗಿ ಕಳಿಸಿಬಿಟ್ಟಿರಿ. ಹಾಗೂ ನಾನು ಸೂಚಿಸಿದೆ. 'ಇನ್ನೂ ಹೊತ್ತಿದೆ' ಎಂದು ಹೇಳಿದೆ. 'ನಾಲ್ಕೈದು ದಿವಸಗಳಲ್ಲಿ ಪ್ರಾಣ ಹೋಗುವುದಿಲ್ಲ' ಎಂದಿರಿ. ಆಗ ನನಗೇಕೆ ಮಂಕು ಕವಿಯಿತು. ಹನ್ನೆರಡರ ರೈಲು ತಪ್ಪಿದರೆ ಮೂರುವರೆಯ ರೈಲು ಇದ್ದೇ ಇತ್ತು.

ಪ್ರಭೂ-ನನ್ನನ್ನು ನಿರ್ಲಜ್ಜಳೆಂದು ನೀವು ಭಾವಿಸಬಹುದು. ನಿರ್ಲಜ್ಜಳೇ ಹೌದು. ನನ್ನ ಮನಸ್ಸು-ದೇಹ ಎರಡನ್ನೂ ನಿಮಗೆ ಅರ್ಪಿಸಿದೆ. ನೀವು ಅವುಗಳನ್ನು ಸ್ವೀಕರಿಸಿ ನನ್ನನ್ನು ಉದ್ಧಾರಮಾಡಿದಿರಿ.

ಅಕ್ಕನಿಗೆ ಸ್ವಲ್ಪ ಗುಣಮುಖವಾದ ಕೂಡಲೆ ಬಂದು ಬಿಡುತ್ತೇನೆ. ದಾಸಿಯ ಅಪರಾಧ ಕ್ಷಮಿಸಿ

ಬುಧವಾರ ಪುಷ್ಪ."

'ಅಯ್ಯೋ ಪ್ರಾಣಿ' ಎಂದುಕೊಂಡು ಸಂಜೀವ ಲಕೋಟೆಯನ್ನು ತಿರುಗಿಸಿನೋಡಿದ. 'ಇಲ್ಲಿಂದ ಮನೆಗೆ ಹೋದವಳೇ ಕಾಗದ ಬರೆದು ರೈಲ್ವೆ ಸ್ಟೇಷನ್ನಿನಲ್ಲಿ ಅಂಚೆಗೆ ಹಾಕಿದ್ದಾಳೆ' ಎಂದುಕೊಂಡು ಅವಳಿಗೆ ಉತ್ತರ ಬರೆಯಲು ಕುಳಿತ.

ಬುಧವಾರ ಸಂಜೆಯೇ ಪುಷ್ಪ, 'ಅಂಕಲ್' ಬೆಂಗಳೂರು ಸೇರಿದರು. ಅಂಕಲ್ ಟ್ಯಾಕ್ಸಿ ಬರಮಾಡಿಕೊಂಡು ಪುಷ್ಪನನ್ನು ಹೊಟೇಲಿಗೆ ಕರೆದೊಯ್ದ. ಅವನು ಮೊದಲೇ 'ರಿಸರ್ವ್' ಮಾಡಿದ್ದ ಹನ್ನೆರಡನೆಯ ರೂಮು ಅವರದಾಯಿತು.

ಐದನೆಯ ನಂಬರು ರೂಮಿನಲ್ಲಿ ಅನಂತಯ್ಯ ತಳವೂರಿದ.

ಬೆಳಿಗ್ಗೆ ಎದ್ದಕೂಡಲೆ ಅಂಕಲ್‌ಗೆ ಪುಷ್ಪ "ನಾನು ಅಕ್ಕನ ಮನೆಗೆ ಹೋಗಿಬಿಟ್ಟು ಬರುತ್ತೇನೆ" ಎಂದಳು.

"ಈಗ ನೀನು ಹೋದರೆ ಬರುವುದು ಯಾವಾಗ ?"

"ಹನ್ನೆರಡು ಗಂಟೆಗೆ ಬಂದುಬಿಡುತ್ತೇನೆ."

"ರೇಸ್ ಆರಂಭವಾಗುವುದು ಎರಡು ಗಂಟೆಗೆ,"

"ತಡಮಾಡುವುದಿಲ್ಲ. ಬೇಗ ಬಂದು ಬಿಡುತ್ತೇನೆ."

"ಟ್ಯಾಕ್ಸಿ ತೆಗೆದುಕೊಂಡು ಹೋಗು. ಬೇಗ ಬಾ"

ಎಂದು ಅಂಕಲ್ ಹೇಳಿದ.

ಪುಷ್ಪನ ಮುಖ ಕಂಡಕೂಡಲೆ ಜ್ಯಾಡಿ ಬೆಕ್ಕಸಬೆರಗಾಗಿ

"ಇದೇನೇ - ಯಾವಾಗ ಬಂದೆ" ಎಂದಳು.

"ಎಲ್ಲಾ ಹೇಳುತ್ತೇನೆ. ಟಪಾಲು ಬಂತೇ ?"

"ಬಂದಿಲ್ಲ - ಇನ್ನೇನು ಬರಬಹುದು. ಏನು ಸಮಾಚಾರ - ಏಕೆ ಇಷ್ಟು ಗಾಬರಿಯಾಗಿರುವೆ ?"

"ಭಾವ ಮನೆಯಲ್ಲಿಲ್ಲವಲ್ಲ."

"ಬೆಳಿಗ್ಗೆ ಅವರಿಗೆ ಪ್ರೆಸ್ ಡ್ಯೂಟಿ ಇರುವುದು ಮರೆತುಬಿಟ್ಟೆಯಾ ?"

"ಜ್ಯಾಡಿ ನಾನು ಮಹಾಪಾಪಿ."

"ಏಕೇ ? ಏನು ಮಾಡಿದೆ ? ಜತೆಯಲ್ಲಿ ಯಾರು ಬಂದಿದ್ದಾರೆ ?"

"ಅಂಕಲ್"

ಜ್ಯಾಡಿ ಹೃದಯಕ್ಕೆ ಶಲ್ಯನೆಟ್ಟಂತಾಯಿತು

"ನಿನ್ನ ಬುದ್ಧೀಗೆ ನಾನು ಏನು ಹೇಳಲೇ ಮೇರಿ. ಕೈಯಲ್ಲಿ ಚಿನ್ನ ಇಟ್ಟುಕೊಂಡು ಹಿತ್ತಾಳಿಗೆ ಆಸೆಪಡುವೆಯಲ್ಲ.''

"ಇಲ್ಲಕ್ಕ - ಹಾಗಲ್ಲ. ಮೊನ್ನೆ ರಾತ್ರಿ - ಹೌದು ಮಂಗಳವಾರ ರಾತ್ರಿ ಇದ್ದಕ್ಕಿದ್ದಂತೆ ಅಂಕಲ್ ಇಳಿದುಬಿಟ್ಟ. 'ನಾಳೆ ಬೆಳಿಗ್ಗೆ ಬೆಂಗಳೂರಿಗೆ ಹೊರಡಬೇಕು - ಗುರುವಾರದಿಂದ ರೇಸು' ಎಂದು ಹೇಳಿದ. ನಾನು ಇದ್ದ ಸಮಾಚಾರ ತಿಳಿಸಿದೆ. ನನ್ನ 'ಎಂಗೇಜ್‌ಮೆಂಟ್' ವಿಷಯವನ್ನೂ ತಿಳಿಸಿದೆ. ಅಂಕಲ್ ರೇಗಿಬಿದ್ದು 'ಇದುವರೆಗೆ ನಾನು ಬೇಕಾಗಿತ್ತು. ಈಗ ಬೇಡವಾದೆ ನಲ್ಲವೇ' ಎಂದು ರಾದ್ಧಾಂತ ಮಾಡಿದ. ನಾನೂ ಮಮ್ಮಿ ಅವನ ಕಾಲು

ಹಿಡಿದು ಬೇಡಿಕೊಂಡೆವು. 'ನನ್ನ ಜೀವನ ಒಂದು ರೂಪಕ್ಕೆ ಬರುತ್ತಿದೆ. ಈಗ ನನ್ನ ಮೇಲೆ ಕನಿಕರ ತೋರಿಸಿ ಕಾಪಾಡಿ. ನನ್ನನ್ನು ಮರೆತುಬಿಡಿ. ನನ್ನಂಥವರು ನಿಮಗೆ ಬೇಕಾದಷ್ಟು ಮಂದಿ ಸಿಕ್ಕುತ್ತಾರೆ' ಎಂದು ಪ್ರಾರ್ಥಿಸಿದೆ."

"ಕೊನೆಗೆ . . . . ?'

"ಅವನೂ ಬಹಳ ಹೊತ್ತು ಯೋಚನೆ ಮಾಡಿ - 'ನಾನು ಕಾಲಿಟ್ಟ ಮನೆಗೆ ಒಳ್ಳೆಯದಾಗುತ್ತೆ - ನನಗೆ ಮಾತ್ರ ಕೇಡಾಗುತ್ತದೆ. ತನ್ನ ಹಣೇ ಬರಹಕ್ಕೆ ಯಾರೇನು ಮಾಡುವುದಕ್ಕಾಗುತ್ತದೆ' ಎಂದ. ಗ್ರಹಚಾರ ತಪ್ಪಿ ಹೋಗುತ್ತದೆ ಎಂದು ನಂಬಿದೆ. ನನ್ನದು ತಿರುಕನ ಕನಸಾಯಿತು. ಅವನು ಒಂದು ಕರಾರು ಹಾಕಿದ."

"ಕರಾರೇ! ಏನದು ?"

"ನಾನು ಬಂದುದಂತೂ ಆಯಿತು. ನಿನ್ನನ್ನು ಬಿಟ್ಟು ಬೆಂಗಳೂರಿಗೆ ಹೋಗುವುದಿಲ್ಲ. ನಾಳೆ ನನ್ನ ಜತೆ ಹೊರಟು, ಮೂರು ದಿವಸ ನನ್ನೊಂದಿಗಿದ್ದು ಹಿಂದಿರುಗಿ ಬಂದುಬಿಡಿ. ಪುನಃ ನಿನ್ನ ತಂಟೆಗೆ ಬರುವುದಿಲ್ಲ' ಎಂದು ಹೇಳಿದ. ಅವನ ಕರಾರು ಕೇಳಿ ನನ್ನ ಎದೆಬಿಚ್ಚಿಹೋಯಿತು. ಆದರೇನು ಮಾಡುವುದು -`ಅದೊಂದೇ ಮಾರ್ಗವಿದ್ದದ್ದು. ನಿನ್ನೆಯು ಬೆಳಿಗ್ಗೆ ಒಂಟಿಕೊಪ್ಪಲಿಗೆ ಹೋಗಿ ಅವರ ಅಪ್ಪಣೆ ಪಡೆದು ಬಂದೆ."

"ಅವರಿಗೇನು ಹೇಳಿದೆ."

"ನಿನಗೆ ಹೃದ್ರೋಗವೆಂದೂ, ಕರೆದೊಯ್ಯಲು ಅಂಕಲ್ ಬಂದಿದ್ದಾರೆಂದೂ ಹೇಳಿದೆ."

''ಭಗವಂತ ನಿನ್ನ ಕಾಪಾಡಲಿ ಮೇರಿ.''

''ಅವರ ಕಿವಿಗೆ ಈ ಸುದ್ದಿ ಬೀಳದಿದ್ದರೆ ಸಾಕು."

ಅಂಚೆಯಾಳು ಬಂದು ಪುಷ್ಪನ ಹೆಸರಿಗೆ, ಜ್ಯೂಡಿಯ ವಿಳಾಸಕ್ಕೆ ಬಂದಿದ್ದ ಕಾಗದವನ್ನು ಕೊಟ್ಟು ಹೋದ.

ಕಾಗದವನ್ನು ಒಡೆದು ನೋಡದೆಯೇ ಅದರಲ್ಲಿ ಏನಿದೆಯೆಂಬುದನ್ನು ಗ್ರಹಿಸಲು ಪುಷ್ಪ ಶಕ್ತಳಾಗಿದ್ದಳು. ಕಾಗದ ಸಂಜೀವನದೇ ಆಗಿತ್ತು.

"ಡಾರ್ಲಿಂಗ್,

ನಿನ್ನ ಕಾಗದ ನೋಡಿ ಮನಸ್ಸಿಗೆ ತುಂಬ ವ್ಯಥೆಯಾಯಿತು. ಇಷ್ಟೇಕೆ

ಧಾವತಿಪಟ್ಟುಕೊಳ್ಳುವೆ ಹನಿ (Honey). ಈ ಸಂಜೀವ ಎಂದಿದ್ದರೂ ನಿನ್ನವನೇ ಅಲ್ಲವೇ? ಅಕ್ಕನಿಗೆ ಕಾಹಿಲೆಯೆಂದರೆ ನೀನು ಹೋಗದಿದ್ದರಾಗುತ್ತದೆಯೇ? ಸ್ಟೇಷನ್‌ವರೆಗೆ ಬಂದು ನಿನ್ನನ್ನು ಬೀಳ್ಕೊಳ್ಳಲಿಲ್ಲವಲ್ಲ ಎನ್ನುವುದೊಂದೇ ನನ್ನ ದುಃಖ.

ಮನಸ್ಸಿನಲ್ಲಿ ಯಾವ ಚಿಂತೆಯನ್ನು ತಳೆಯದೆ ಅಕ್ಕನನ್ನು ನೋಡಿಕೊಂಡು ಬಾ - ನಾಲ್ಕು ದಿವಸ ಹೆಚ್ಚು ಕಡಿಮೆಯಾದರೂ ಚಿಂತೆಯಿಲ್ಲ. ನನ್ನಿಂದ ಏನಾದರೂ ಪ್ರಯೋಜನವಾಗುವ ಹಾಗಿದ್ದರೆ ತಿಳಿಸು. ಬರುತ್ತೇನೆ.

ಹೆಣ್ಣಿನ ಜೀವನವೇ ತ್ಯಾಗಮಯವಾದುದು. ನೀನು ಕಾಗದದ ಕೊನೆಯಲ್ಲಿ ಬರೆದ ಪಂಕ್ತಿ ಓದಿ ಮನಸ್ಸಿಗೆ ತುಂಬ ದುಃಖವಾಯಿತು. ನಿನ್ನನ್ನು ನಾನು ಉದ್ಧಾರಮಾಡಿದೆನೋ ನನ್ನನ್ನು ನೀನು ಉದ್ಧಾರಮಾಡಿರುವೆಯೋ ಅದನ್ನು ಹೇಗೆ ಬರೆಯಲಿ?

ನಮ್ಮ ಪ್ರೇಮ ಅನಂತವಾಗಿ, ಅಮರವಾಗಿರಬೇಕೆಂಬುದೇ ನನ್ನ ಆಕಾಂಕ್ಷೆ.

ಗುರುವಾರ ಇಂತು ಸದಾ ನಿನ್ನ ಸಂಜೀವ.''

ಪುಷ್ಪ ನಾಲ್ಕಾರು ಬಾರಿ ಕಾಗದವನ್ನೋದಿಕೊಂಡು, ಅದಕ್ಕೆ ಮುದ್ದಿಟ್ಟು ಎದೆಗಪ್ಪಿಕೊಂಡಳು. ಜ್ಯೂಡಿ ತಂಗಿಯ ಸಮೀಪಕ್ಕೆ ಬಂದು

"ಅವರನ್ನು ಅಷ್ಟು ಪ್ರೀತಿಸುತ್ತೀಯಾ ಮೇರಿ" ಎಂದು ಕೇಳಿದಳು.

ಪುಷ್ಪ ಎದುರಿಗಿದ್ದ ಯೇಸುಸ್ವಾಮಿಯ ಚಿತ್ರದ ಕಡೆ ಕೈಮಾಡಿ

"ಭಗವಂತನನ್ನು ಪ್ರೀತಿಸದಿರಲು ಸಾಧ್ಯವೇ?"

"ಅವರನ್ನು ಯೇಸುಸ್ವಾಮಿಗೆ ಹೋಲಿಸುವುದೇ ಮೇರಿ?"

"ಅವರ ಗುಣ ನೀನು ಕಾಣೆ ಜ್ಯೂಡಿ - ಅವರ ಪ್ರತಿಯೊಂದು ಮಾತು, ನಡತೆ ದೇವತಾಂಶದಿಂದ ಕೂಡಿದೆ. ಇಲ್ಲಿ ನೋಡು ಜ್ಯೂಡಿ - ನಿನಗೆ ಮೈಯಲ್ಲಿ ಸರಿಯಾಗಿಲ್ಲ. ನಾನು ಬೆಂಗಳೂರಿಗೆ ಹೋಗಬೇಕು ಎಂದು ಹೇಳಿದೊಡನೆಯೇ ಕೈಗೆ ಇನ್ನೂರು ರೂಪಾಯಿಕೊಟ್ಟು 'ಅಕ್ಕನ ಆರೋಗ್ಯ ಚೆನ್ನಾಗಿ ನೋಡಿಕೋ. ನಾನು ಬರಬೇಕಾದರೆ ಬರಿ. ಕೂಡಲೆ ಹೊರಟುಬರುತ್ತೇನೆ' ಎಂದರು. ಯಾವ ರೀತಿಯಲ್ಲಿಯೂ ಸಣ್ಣತನ ತೋರಿಸದಿರುವವರನ್ನು ನಾನು ವಂಚಿಸುತ್ತಿದ್ದೇನೆ."

"ಆಗಿಹೋದುದನ್ನು ಕುರಿತು ಚಿಂತಿಸಿದರೆ ಏನು ಸಾರ್ಥಕ ಮೇರಿ."

"ಜ್ಯೂಡಿ, ನನಗೊಂದು ಪೋಸ್ಟ್ ಕವರ್ ಕೊಡುವೆಯಾ?"

"ಅವರಿಗೆ ಕಾಗದ ಬರೆಯುತ್ತೀಯಾ?"

"ಹೂ."

"ನೀನು ಕಾಗದ ಬರಿ. ನಾನು ಕವರ್ ತಂದುಕೊಡುತ್ತೇನೆ. ಪಕ್ಕದ ಸ್ಟೋರ್ಸ್‌ನಲ್ಲಿ ಸಿಕ್ಕುತ್ತದೆ"

ಎಂದು ಹೇಳಿ ಪುಷ್ಪನ ಕೈಗೆ ತನ್ನ ಲೆಟರ್‌ಪ್ಯಾಡ್ ಕೊಟ್ಟಳು. ಪುಷ್ಪ ಕಾಗದ ಬರೆದು, ಜ್ಯೂಡಿ ತಂದುಕೊಟ್ಟ ಕವರಿನಲ್ಲಿ ಹಾಕಿ

"ನೀನೇ ಪೋಸ್ಟ್‌ಮಾಡಬೇಕು ಜ್ಯೂಡಿ."

"ಕೊಡು - ನಾನೇ ಪೋಸ್ಟ್ ಮಾಡುತ್ತೇನೆ."

"ಇನ್ನೊಂದು ಮಾತು ಜ್ಯೂಡಿ. ನಾನು ಇಲ್ಲಿಂದ ಯಾವಾಗ ಹೊರಡುತ್ತೇನೆಯೋ ಗೊತ್ತಿಲ್ಲ. ಅಂಕಲನ್ನು ಒಪ್ಪಿಸಿ ಸಾಧ್ಯವಾದರೆ ನಾಳೆಯೇ ಹೊರಡಲು ಏರ್ಪಾಟುಮಾಡುತ್ತೇನೆ. ನಾನು ಹೋದ ಮೇಲೆ ಇಲ್ಲಿಗೆ ಕಾಗದ ಬಂದರೆ ಮೈಸೂರಿಗೆ ತಪ್ಪದೆ ಕಳಿಸಿಕೊಡು."

"ಖಂಡಿತ ಕಳಿಸಿಕೊಡುತ್ತೇನೆ ಡಿಯರ್. ಯೋಚನೆಮಾಡಬೇಡ."

ಎಂದು ಜ್ಯೂಡಿ ಆಶ್ವಾಸನವಿತ್ತಳು.

ಪುಷ್ಪ ಹೊಟೇಲಿಗೆ ಹಿಂದಿರುಗುವ ವೇಳೆಗೆ ಅಂಕಲ್ ಹೊತ್ತಾಯಿತೆಂದು ತಹತಹಪಡುತ್ತಿದ್ದ. ಪುಷ್ಪ ಬಂದೊಡನೆಯೇ ಊಟ ಮುಗಿಸಿ, ರೇಸ್ ಕೋರ್ಸಿಗೆ ಹೊರಟ.

ಅವರನ್ನು ಹಿಂಬಾಲಿಸಿ ಹೋದ ಟ್ಯಾಕ್ಸಿಯಲ್ಲಿ ಅನಂತಯ್ಯ ಇದ್ದ.

ತನ್ನ ಕೈಸೇರಿದ ಕಾಗದವನ್ನು ಸಂಜೀವ ಓದಿಕೊಂಡ. 'ಇಷ್ಟು ಧೈರ್ಯ ಹೇಳಿದರೂ ಪುಷ್ಪ ಏಕೆ ಅಧೀರಳಾಗಿದ್ದಾಳೆ. ಅಕ್ಕನ 'ಸ್ಥಿತಿ ಸುಧಾರಿಸುತ್ತಿದೆಯೆಂದು ಬರೆದಿದ್ದಾಳೆ. ಈ ತಳಮಳವೇಕೆ' ಎಂದುಕೊಂಡ.

**"ನನ್ನ ಸ್ವಾಮಿ,**

**ನಿಮ್ಮ ಪ್ರೇಮಪೂರ್ಣ ಪತ್ರ ಕೈಸೇರಿತು. ಅದರ ಕೆಲವು ಭಾಗಗಳನ್ನು ಜ್ಯೂಡಿಗೆ ಓದಿಹೇಳಿದೆ. ಈ ಕಾಗದವನ್ನು ಅವಳ ಹಾಸಿಗೆಯ ಮೇಲೆ ಕುಳಿತೇ ಬರೆಯುತ್ತಿದ್ದೇನೆ. ಜ್ಯೂಡಿ ತುಂಬ ದುರ್ಬಲವಾಗಿದ್ದಾಳೆ. ಎದೆಯ ನೋವು ಕಡಿಮೆಯಾಗಿದೆ. 'ಗಂಡಾಂತರ ಪಾರಾಯಿತು - ಆದರೂ ಎಚ್ಚರಿಕೆಯಿಂದಿರಬೇಕು' ಎಂದು ಡಾಕ್ಟರು ಹೇಳಿದ್ದಾರೆ. ಜ್ಯೂಡಿಯ ಬಗ್ಗೆ ನೀವು ಬರೆದಿರುವುದನ್ನು ಕೇಳಿ ಅವಳು ಕಣ್ಣೀರು ಹಾಕಿದಳು. ನೂರು ಡಾಕ್ಟರು ಮಾಡಲಾಗದ ಕೆಲಸ ನಿಮ್ಮ ಒಂದು ಪಂಕ್ತಿ ಮಾಡಿತು.**

ಪ್ರಭೂ - ಹೆಣ್ಣಿನ ಕಷ್ಟ ಸುಖ ಎಷ್ಟು ಚೆನ್ನಾಗಿ ಅರ್ಥಮಾಡಿಕೊಂಡಿರುವಿರಿ. ತ್ಯಾಗಮಯ ಜೀವನದಲ್ಲಿ ನೀವು ನನ್ನನ್ನು ಸೋಲಿಸಿರುವಿರಿ. ನಾನು ಎಂಬ ಶಬ್ದವನ್ನು ನಿಮ್ಮ ಶಬ್ದಕೋಶದಿಂದ ತೆಗೆದು ಹಾಕಿರುವಿರಾ ?

ನಾಳೆ ಜ್ಯೂಡಿಯ ಸ್ಥಿತಿ ನೋಡಿಕೊಂಡು ನಾನು ಹೊರಡುವ ವಿಷಯ ನಿಶ್ಚಯಿಸುತ್ತೇನೆ. 'ನೀನು ಹೊರಡು - ಪರವಾಗಿಲ್ಲ' ಎಂದು ಜ್ಯೂಡಿ ಹೇಳುತ್ತಿದ್ದಾಳೆ. ಆದರೆ ಅವಳನ್ನು ಈ ಸ್ಥಿತಿಯಲ್ಲಿ ಬಿಟ್ಟುಹೋಗಲು ಮನಸ್ಸಿಲ್ಲ. ನನ್ನ ಆತ್ಮ ಬೆಂಗಳೂರು - ಮೈಸೂರು ಮಧ್ಯೆ ತೂಗಲಾಡುತ್ತಿದೆ.

ಬೇಸರಪಟ್ಟುಕೊಳ್ಳಬೇಡಿ ಸ್ವಾಮಿ - ಬೇಗ ಬರುತ್ತೇನೆ. ಸರಿಯಾಗಿ ಊಟ ಮಾಡುತ್ತಿರುವಿರಾ ? ಒಳ್ಳೆಯ ಪಿಕ್ಚರ್ ಇದ್ದರೆ ಹೋಗಿ. ಕನ್ನಂಬಾಡಿಗೆ ಹೋಗಿ ಬನ್ನಿ. ನಮ್ಮ ಮನೆಗೆ ಹೋಗಿಬನ್ನಿ. ಅಲ್ಲಿರುವ ಕೆಟ್ಟ ಪುಷ್ಪನ ಚಿತ್ರನೋಡಿ ಒಮ್ಮೆ ಚೆನ್ನಾಗಿ ಛೀಮಾರಿಮಾಡಿ. ಛೀಮಾರಿ ಮಾಡಿದಕೂಡಲೆ ನನ್ನನ್ನು ಅಪ್ಪಿಕೊಂಡು 'ಡಾರ್ಲಿಂಗ್' ಎನ್ನುವಿರಲ್ಲವೇ ?

ಅಯ್ಯೋ ! ಆ ಸ್ವರ್ಗೀಯ ಶಬ್ದ 'ಡಾರ್ಲಿಂಗ್' ನಿಮ್ಮ ಬಾಯಿಂದ ಕೇಳಿ ಎಷ್ಟೋ ಯುಗವಾದಂತಿದೆ. ಅಲ್ಲಿಯೇ ಒಮ್ಮೆ 'ಡಾರ್ಲಿಂಗ್' ಅನ್ನಿ ದೊರೆ - ಇಲ್ಲಿಗೆ ನನಗ ಕೇಳಿಸುತ್ತದೆ.

ಶುಕ್ರವಾರ ನಿಮ್ಮ ಚರಣದಾಸಿ ಪುಷ್ಪ."

ಪುಷ್ಪನ ಕಾಗದವನ್ನು ಕಿಸೆಯಲ್ಲಿ ಹಾಕಿಕೊಂಡು ಸಂಜೀವ ನೇರವಾಗಿ ಪುಷ್ಪನ ಮನೆಗೆ ಬಂದ. ಹಲನ್ ಅಮ್ಮ ಅವನಿಗೆ ಸ್ವಾಗತ ಬಯಸಿದಳು. ಸಂಜೀವ ಪುಷ್ಪನ ಕಾಗದ ತೆಗೆದು

"ಪುಷ್ಪ ಕಾಗದ ಬರೆದಿದ್ದಾಳಮ್ಮ. ನಿಮ್ಮ ದೊಡ್ಡ ಮಗಳಿಗೆ ಗುಣವಾಗುತ್ತಿದೆಯಂತೆ. ನಾಳೆ ನಾಡಿದ್ದರಲ್ಲಿ ಬರುವುದಾಗಿ ತಿಳಿಸಿದ್ದಾಳೆ."

"ನನಗೂ ಕಾಗದ ಬರೆದಿದ್ದಾಳೆ. ದೇವರು ದೊಡ್ಡವನು, ಜ್ಯೂಡಿಯನ್ನು ಕಾಪಾಡಿದ"

ಎಂದು ಹೇಳಿ ಒಳಗೆ ಹೋಗಿ ಪುಷ್ಪನ ರೂಮಿನ ಬೀಗ ತೆಗೆದಳು. ಸಂಜೀವ ಒಳಗೆ ಪ್ರವೇಶಿಸಿ, ಪುಷ್ಪನ ಕಾಗದವನ್ನು ಮತ್ತೊಮ್ಮೆ ಓದಿಕೊಂಡ. ಅವಳ ಭಾವಚಿತ್ರವನ್ನು ದಿಟ್ಟಿಸಿ ನೋಡಿ

"ನಿನ್ನ ರೂಮಿನಲ್ಲೇ ಕುಳಿತುಕೊಂಡು ನಿನಗೆ ಕಾಗದ ಬರೆಯುತ್ತೇನೆ ಡಾರ್ಲಿಂಗ್"

ಎಂದು ಹೇಳಿ ಪುಷ್ಪನ ಡ್ರಾಯರಿನಲ್ಲಿದ್ದ ಲೆಟರ್‌ಪ್ಯಾಡ್ ತೆಗೆದು

ಕೊಂಡು ಅವಳಿಗೆ ಕಾಗದ ಬರೆಯಲಾರಂಭಿಸಿದ. ಹೆಲನ್‌ಅಮ್ಮ ಕಾಫಿ ಮಾಡಿ ತಂದು ಮೇಜಿನ ಮೇಲಿಟ್ಟಳು.

"ಇದೇಕಮ್ಮ ಈಗ - ಸುಮ್ಮನೆ ತೊಂದರೆಯಾಯಿತು ನಿಮಗೆ."

"ಇಷ್ಟಕ್ಕೇ ನನಗೆ ತೊಂದರೆಯಾದರೆ ನಿಮ್ಮಗೆಷ್ಟು ತೊಂದರೆಯಾಗಿರಬೇಕಪ್ಪಾ."

"ತನಗೆ ಅಪ್ರಿಯವಾದುದನ್ನು ಮಾಡುವಾಗಷ್ಟೇ ಮನುಷ್ಯನಿಗೆ ತೊಂದರೆ"

ಎಂದು ಹೇಳಿ ಕಾಫಿ ಕುಡಿದು ಮುಗಿಸಿದ. ಹೆಲನ್‌ಅಮ್ಮ ಕಪ್ಪು ಸಾಸರು ಕೈಗೆತ್ತಿಕೊಂಡಳು.

"ಪುಷ್ಪನಿಗೆ ಕಾಗದ ಬರೆಯುತ್ತಿದ್ದೇನೆ. ಏನಾದರೂ ತಿಳಿಸಬೇಕೇ ?"

"ಏನೂ ಇಲ್ಲ. ಸಾಧ್ಯವಾದರೆ ಜ್ಯೂಡಿಯನ್ನು ಜತೆಯಲ್ಲಿ ಕರೆದುಕೊಂಡು ಬರುವಂತೆ ಬರೆಯಿರಿ"

ಸಂಜೀವ ಕಾಗದ ಮುಗಿಸಿ, ಅದನ್ನು ಕಿಸೆಯಲ್ಲಿಟ್ಟುಕೊಂಡು ಹೊರಡಲನುವಾದ.

ಹೆಲನ್‌ಅಮ್ಮ ಒಳಗಿನಿಂದ ಬರುವವರೆಗೆ ವೆರಾಂಡದಲ್ಲಿ ಕಾದಿದ್ದು

"ಬಾಗಿಲು ಹಾಕಿಕೊಳ್ಳಿ - ನಾನು ಹೋಗಿಬಿಟ್ಟು ಬರುತ್ತೇನೆ."

"ಇಷ್ಟು ಬೇಗ ಹೊರಟುಬಿಡುತ್ತೀರಾ ?"

"ನಾಳೆ ಬರುತ್ತೇನೆ."

'ನಿಮ್ಮ ಪ್ರಿಯವಸ್ತು ಇಲ್ಲಿಲ್ಲ - ನೀವೇಕೆ ನಿಲ್ಲುವಿರಿ' ಎನ್ನುವಂತೆ ಹೆಲನ್‌ಅಮ್ಮ ಮುಗುಳ್ನಗೆ ನಕ್ಕಳು.

ಮಾರನೆಯ ದಿನ ಹೇಗಾದರೂ ಮಾಡಿ ಜ್ಯೂಡಿಯ ಮನೆಗೆ ಹೋಗಿ ತನ್ನ ಕಾಗದ ತರಬೇಕೆಂದು ಪುಷ್ಪ ಪ್ರಯತ್ನಿಸಿದಳು. ಅವಳು ಅಳ್ಳಾಡುವುದಕ್ಕೆ ಅಂಕಲ್ ಅವಕಾಶಕೊಡಲಿಲ್ಲ. ಪುಷ್ಪನಿಗೆ ನರಕಯಾತನೆಯುಂಟಾಯಿತು. ಶನಿವಾರ ತನ್ನ ಒಳ್ಳೆಯ ವಾರವೆಂದು ಅಂಕಲ್ ತಿಳಿಸಿ, ವೇಳೆಗೆ ಸರಿಯಾಗಿ ಪುಷ್ಪನನ್ನು ರೇಸ್‌ಕೋರ್ಸಿಗೆ ಕರೆದುಕೊಂಡು ಹೋದ. ರೇಸ್‌ಕೋರ್ಸಿನಲ್ಲಿ ಸಾವಿರ ರೂಪಾಯಿ ನೋಟುಗಳನ್ನು ತೆಗೆದು

"ನೋಡು ಪುಷ್ಪಾ, ಇವತ್ತು ಸಾವಿರರೂಪಾಯಿ ಆಡುತ್ತೇನೆ. ಐನೂರು

ನಿನ್ನ ಹೆಸರಿನಲ್ಲಿ - ಐ.
ಅಕೌಂಟ್ ಮಾಡೋಣ.

"ಅಷ್ಟೂ ಹೋದರೆ.

"ಹೋದರೆ ನನಗೆ ಹೋ।
ಬೇಕಾಗಿಲ್ಲ"

ಮೊದಲನೆಯ ಆವರಣದಲ್ಲಿದ್ದರೂ ಪು . ಆಟದ ಮೇಲಿರ ಲಿಲ್ಲ - ಅಂಕಲ್ ಗೆದ್ದರೆ ತನಗೆ ಬರುವ ಹಣದ ಕಡೆಗೂ ಅವಳ ಲಕ್ಷ್ಯ ಹೋಗಲಿಲ್ಲ. ರೇಸ್‌ಕೋರ್ಸಿನಲ್ಲಿ ತಮ್ಮ ಸೀರೆ, ಕುಪ್ಪಸ, ಒಡವೆ ಮೆರೆಸಲು ಬಂದಿದ್ದ ಸುಸಂಸ್ಕೃತ ನಾರೀರತ್ನಗಳನ್ನು ಅವಳು ಕತ್ತೆತ್ತಿ ನೋಡಲಿಲ್ಲ. ಅವಳ ಮನಸ್ಸಿನಲ್ಲಿ ಒಂದೇ ಚಿಂತೆ - ಇಲ್ಲಿಂದ ಪಾರಾಗುವುದು ಹೇಗೆ ?

ಸಂಜೀವನ ಧ್ಯಾನಮಾಡುತ್ತ ಪುಷ್ಪ ಕುಳಿತುಬಿಟ್ಟಳು. ನಾಲ್ಕಗಂಟೆಗೆ ಅಂಕಲ್ ಒಳ್ಳೇ ಉತ್ಸಾಹದಲ್ಲಿ ಹಿಂದಿರುಗಿದ. ಅವನ ನಗೆಮೊಗದಲ್ಲಿಯೂ, ಬಾಯಿಂದ. ಸೂಸುತ್ತಿದ್ದ ಮದ್ಯದ ವಾಸನೆಯಿಂದಲೂ ಅವನ ಉತ್ಸಾಹ ಚಿಮ್ಮುತ್ತಿತ್ತು.

ಹೊಟೇಲಿಗೆ ಹಿಂದಿರುಗಿದ ಮೇಲೆ ಅಂಕಲ್ ಕಿಸೆಯಿಂದ ನೋಟಿನ ಕಂತೆಗಳನ್ನು ತೆಗೆದು ಹಾಸಿಗೆಯ ಮೇಲೆ ಎಸೆದು

"ನೀನು ತುಂಬ ಅದೃಷ್ಟಶಾಲಿ ಪುಷ್ಪ'' ಎಂದ.

"ಏಕೆ ?"

"ಅಲ್ಲಿ ನೋಡು - ನನ್ನ ಹೆಸರಿನಲ್ಲಿ ಆಡಿದ ಐದುನೂರು ಮುಳುಗಿ ಹೋಯಿತು - ನಿನ್ನ ಹೆಸರಿನಲ್ಲಿ ಆಡಿದ ಐದುನೂರಿಗೆ ಎರಡೂವರೆ ಸಾವಿರ ಬಂದಿತು. ಒನ್ ಟು ಫೈವ್ (One to Five) ಬಿಗಿನರ್ಸ್ ಲಕ್ (Beginner's Luck) ಎಂದು ಹೇಳುವುದು ನಿಜವೆಂದು ಕಾಣುತ್ತದೆ. ಲೆಕ್ಕ ಮಾಡು."

ಪುಷ್ಪ ನೋಟುಗಳನ್ನೆಣಿಸಿ "ಎರಡೂವರೆ ಸಾವಿರ ಸರಿಯಾಗಿದೆ." ಎಂದಳು.

"ಸರಿಯಾಗಿ ಅದನ್ನು ಎರಡು ಅರ್ಧಮಾಡು."

ಪುಷ್ಪ ಸಾವಿರದ ಇನ್ನೂರೈವತ್ತರ ಎರಡು ಕಂತೆ ತೆಗೆದಿಟ್ಟಳು.

ಎಂದು ಹೇಳಿದಿರಿ. ಬಂದುದು ಎರಡು ಸಾವಿ [illegible] ಸಾವಿರ - ಉಳಿದುದು ಸಾವಿರದೈನೂರು. ಅದರಲ್ಲಿ ಅರ್ಧವೆಂದರೆ [illegible] ಏಳುನೂರೈವತ್ತು ಬರಬೇಕು."

"ಚಿಂತೆಯಿಲ್ಲ ಸಾವಿರದೈನೂರು ತೆಗೆದುಕೋ. ನ್ಯಾಯವಾಗಿ ಅಷ್ಟು ನಿನಗೇ ಸೇರಬೇಕು."

"ನನಗೊಂದು ಉಪಕಾರಮಾಡಿ."

"ಹೇಳು."

"ಈ ರಾತ್ರಿ ನಾನು ಹೊರಡಲು ಅಪ್ಪಣೆಕೊಡಿ. ಈ ದುಡ್ಡೂ ನನಗೆ ಬೇಕಾಗಿಲ್ಲ. ನೀವೇ ತೆಗೆದುಕೊಳ್ಳಿ - ಈ ರಾತ್ರಿ ನನ್ನ ರೈಲಿನಲ್ಲಿ ಕೂಡಿಸಿ ಬಿಟ್ಟರೆ ನೀವು ಮಹೋಪಕಾರ ಮಾಡಿದಂತಾಗುತ್ತದೆ."

"ನಾನು ನಿನಗೆ ಯಾವ ಅಪಕಾರವನ್ನು ಮಾಡಿಲ್ಲ."

"ಅಪಕಾರಮಾಡಿದ್ದೀರೆಂದು ನಾನು ಯಾವ ಬಾಯಲ್ಲಿ ಹೇಳಲಿ ಈಗ ನಾನು ಕೇಳುತ್ತಿರುವುದು ಎಲ್ಲಕ್ಕಿಂತ ದೊಡ್ಡ ಉಪಕಾರ."

ಅಂಕಲ್ ಕ್ಷಣಕಾಲ ಯೋಚನೆಮಾಡಿ

"ಈ ರಾತ್ರಿ ಬೇಡ - ನಾಳೆ ಬೆಳಿಗ್ಗೆ ಹೊರಟುಬಿಡು" ಎಂದ.

ಅವನಿದ್ದ ಸ್ಥಿತಿಯಲ್ಲಿ ಚರ್ಚೆಮಾಡಿ ಪ್ರಯೋಜನವಿಲ್ಲವೆಂದು ಪುಷ್ಪ ಸುಮ್ಮನಾದಳು.

ಆ ಕಾಳರಾತ್ರಿಯನ್ನು ಕಳೆಯುವುದು ಪುಷ್ಪನಿಗೆ ದೊಡ್ಡ ಸಮಸ್ಯೆಯಾಗಿತ್ತು. ಆದರೆ ಕಳೆಯಲೇ ಬೇಕಾಗಿತ್ತು - ನಟಿಸಿಯಾದರೂ ಸಂತೋಷ ಪ್ರಕಟಿಸಬೇಕಾಗಿತ್ತು – ಕಿವಿಗೆ ಬೇಡವಾದ ಲಲ್ಲೆಮಾತುಗಳನ್ನು ಸಹಿಸಿಕೊಳ್ಳಬೇಕಾಗಿತ್ತು – ಹೃದಯ ಒಡೆದು ಸಿಡಿಯುತ್ತಿದ್ದರೂ ಅಸಹ್ಯ ಪ್ರಣಯಚೇಷ್ಟೆಗಳನ್ನು ಅನುಭವಿಸಬೇಕಾಗಿತ್ತು.

ಕ್ಷಣಕ್ಷಣಗಳನ್ನೆಣಿಸುತ್ತ ಪುಷ್ಪ ಮಲಗಿದಳು. ಯಾವದೋ ಝಾಮುದಲ್ಲಿ

ಶ್ರೀ

ಮಳೆ ಬೀಳತೊಡಗಿತು. ಪ್ರಕೃತಿದೇವಿಗ
ದಿದ್ದ - ಪುಷ್ಪನ ಹೃದಯಕ್ಕೆ ತಂಪೆಸೆಯಿತ
ಪುಷ್ಪ ಎದ್ದವಳೇ ಗಡಿಯಾರ ತೆಗೆದು
ರೈಲು ಹೊರಡಲು ಇನ್ನೂ ಎರಡು ಗಂಟೆಗಳಿದ್ದವು
ಕೊಂಡು, ವಸ್ತ್ರಧರಿಸಿ ಹೊರಡಲನುವಾದಳು. ಇನ್
ಅಂಕಲನ್ನು ತಾನೇ ಎಬ್ಬಿಸಿದಳು.

"ಗಂಟೆಯೆಷ್ಟು ?" ಎಂದು ಕೇಳಿದ.

"ಆರು ಹೊಡೆಯಿತು."

"ಈಗ ನೀನು ಹೊರಡಲೇಬೇಕೇ ?"

"ಆ ವಿಷಯ ನಿನ್ನೆಯೇ ನಿಶ್ಚಯಿಸಿದ್ದೆವಲ್ಲ."

"ನಿನ್ನೆಯ ಮಾತು ಇರಲಿ. ಇವತ್ತಿನ ವಿಷಯ ಹೇಳು."

"ಹೊರಡಲೇ ಬೇಕು."

ಅಂಕಲ್ ಎದ್ದವನೇ ಮುಖಮಾರ್ಜನೆ ತೀರಿಸಿಕೊಂಡು ಕಾಫಿ ಸೇವಿಸುತ್ತ

"ಮನಸ್ಸು ಬದಲಾಯಿಸಲು ಸಾಧ್ಯವಿಲ್ಲವೇ ?" ಎಂದು ಕೇಳಿದ.

"ಮನಸ್ಸು ಬದಲಾಯಿಸುವುದರಿಂದ ತುಂಬ ಅನರ್ಥಗಳಾಗುತ್ತವೆ."

"ನಿನ್ನ ವಿಚಾರವಷ್ಟೆ ನೀನು ಯೋಚಿಸುತ್ತಿರುವುದು - ನನ್ನ ವಿಷಯ ನಿನಗೆ ಬೇಡವಾಗಿದೆ."

"ಇದರಿಂದ ಎಲ್ಲರಿಗೂ ಶ್ರೇಯಸ್ಸು."

ಅಂಕಲ್ ಮುಖದ ಮೇಲೆ ನೋವಿನ ಗೆರೆಗಳು ಮೂಡಿದವು.

"ಇನ್ನು ಮೇಲೆ ನಾನು ನಿನ್ನನ್ನು ನೋಡಲೇಕೂಡದೇ ?"

ಅದಕ್ಕೆ ಉತ್ತರ ಹೇಳಲೆತ್ನಿಸುವುದು ವಿವೇಕವಲ್ಲ ಎಂದು ಪುಷ್ಪ ಸುಮ್ಮನಿದ್ದಳು.

"ನಾನು ನಿನ್ನನ್ನು ನೋಡದೆ ಇರಲಾರೆ."

ಪುಷ್ಪನ ಮನಸ್ಸಿನಲ್ಲಿ ಭೀತಿ ಹುಟ್ಟಿತು.

"ನೀವು ಕಟ್ಟಿದ ಮನೆಯನ್ನು ನೀವೇ ಕೆಡವುತ್ತೀರಾ."

"ನಾನೇನು ಮಾಡುತ್ತೇನೆಯೊ ನನಗೇ ಗೊತ್ತಿಲ್ಲ."

ನ ಕಾರ್ಯಗಳಲ್ಲಿ ಮರೆತುಹೋಗುತ್ತದೆ.

ಲಭವಲ್ಲ ಪುಷ್ಪ."

ತ್ತ ಬಂತು. ಕೈಜೋಡಿಸಿ ಬೇಡಿಕೊಳ್ಳುತ್ತೇನೆ -

ಪ್ಪಿಸಬೇಡಿ."

"ರೈಲು ಹೋದರೆ ಹೋಗಲಿ - ಟ್ಯಾಕ್ಸಿಮಾಡಿ ಮೈಸೂರಿಗೆ ಕರೆದುಕೊಂಡು ಹೋಗಿಬಿಡುತ್ತೇನೆ."

"ಅಷ್ಟು ತೊಂದರೆಯೇಕೆ ?"

"ನಿನ್ನ ಜತೆ ನಾನು ಮೈಸೂರಿಗೆ ಬರುವುದು ನಿನಗೆ ಬೇಕಿಲ್ಲ."

ಪುಷ್ಪ ಹತಾಶಳಾದಳು. ತನ್ನ ಸಮಾಧಿ ಮಾಡಲು ವಿಧಿ ನಿಶ್ಚಯಿಸಿದೆಯೆಂದು ಭಾವಿಸಿದಳು. ಆದರಾಗ ತನ್ನ ಹಿತ - ಸುಖ - ಭವಿಷ್ಯ ಅವಳಿಗೆ ಪ್ರಧಾನವಾಗಿ ಕಾಣಲಿಲ್ಲ. 'ನನ್ನನ್ನು ಸಂಪೂರ್ಣವಾಗಿ ನಂಬಿರುವ ಅವರ ಗತಿಯೇನು ? ಅವರನ್ನು ನಾನೇ ಕೈಯಾರೆ ಕೊಂದಂತೆ ಆಗುವುದಲ್ಲ' ಎಂದು ಯೋಚಿಸಿದಳು. ಅವಳಿಗೆ ದುಃಖ ತಡೆಯಲಾಗಲಿಲ್ಲ. ತಡಸಲಿನಂತೆ ಧುಮ್ಮಿಕ್ಕುತ್ತಾ ಕಣ್ಣೀರು ಹರಿಯಿತು.

ಅಂಕಲ್ ಎದ್ದು ನಿಂತು.

"ಹೊರಡು - ರೈಲು ತಪ್ಪಿಹೋದೀತು" ಎಂದು ಹೇಳಿದ.

ಅಂಕಲ್ ಪುಷ್ಪನನ್ನು ಸ್ಟೇಷನ್ನಿಗೆ ಕರೆತಂದು, ಸೆಕೆಂಡ್‌ಕ್ಲಾಸಿನಲ್ಲಿ ಕೂಡಿಸಿ, ಟಿಕೆಟ್ ತಂದುಕೊಟ್ಟ. ರೈಲು ಹೊರಡಲಿನ್ನೂ ವೇಳೆಯಿತ್ತು. ಅವನ ಹೃದಯವೂ ಭಾರವಾಗಿದ್ದುದನ್ನು ಕಂಡು

"ವ್ಯಥೆಪಡಬೇಡಿ - ನನ್ನ ಅಪರಾಧ ಕ್ಷಮಿಸಿ - ದೇವರು ನಿಮ್ಮನ್ನು ಚೆನ್ನಾಗಿಟ್ಟಿರಲಿ"

"ನೀನು ಬರುವ ವಿಷಯ ಮನೆಗೆ ವೈರ್ (Wire) ಮಾಡಲೇ ?"

"ಏನೂ ಬೇಡಿ - ಹನ್ನೆರಡೂವರೆಗೇ ಮೈಸೂರು ಸೇರುತ್ತೇನಲ್ಲ"

"ದುಡ್ಡು ತೆಗೆದಿಟ್ಟುಕೊಂಡೆಯಾ ?"

"ತೆಗೆದಿಟ್ಟುಕೊಂಡಿರುವೆ."

"ನಿನಗೇನಾದರೂ ಬೇಕಾದರೆ ಬರಿ."

"ಆಗಲಿ."

"ಯಾವಾಗಲಾದರೊಮ್ಮೆ ಬಂದು ನೋಡಿಕೊಂಡು ಹೋಗಬಹುದಷ್ಟೆ ?"

"ಊರಿಗೆ ಹೋದ ಸ್ವಲ್ಪ ದಿವಸಗಳಲ್ಲಿ ನನ್ನ ಮದುವೆಯಾಗುತ್ತದೆ."

ರೈಲು ಹೊರಡುವ ವೇಳೆಯಾಯಿತು. ಮೊದಲನೆಯ ಗಂಟೆಯನ್ನು ಕೇಳಿದೊಡನೆಯೇ ಪುಷ್ಪ ಕೆಳಗಿಳಿದು ಬಂದು ಅಂಕಲ್‌ನ ಎರಡೂ ಪಾದಗಳನ್ನೂ ಹಿಡಿದು ನಮಸ್ಕರಿಸಿದಳು. ಅಂಕಲ್‌ಗೆ ಅವಳನ್ನು ನೋಡುವ ಧೈರ್ಯ ವಾಗಲಿಲ್ಲ. ಮುಖವನ್ನತ್ತ ತಿರುಗಿಸಿದ. ಪುಷ್ಪ ಸ್ವಸ್ಥಾನದಲ್ಲಿ ಬಂದು ಕುಳಿತಳು. ಅಂಕಲ್ ಕಣ್ಣಲ್ಲಿ ನೀರು ನಿಂತಿದ್ದುದನ್ನು ಗಮನಿಸಿ ಅವಳು ಕಿಟಕಿಯಿಂದಾಚೆ ಕೈನೀಡಿದಳು. ಅಂಕಲ್ ಅದನ್ನು ಹಿಡಿದು ಕಣ್ಣಿಗೆ ಒತ್ತಿ ಕೊಂಡು, ಮುದ್ದಿಟ್ಟ.

ರೈಲು ಮುಂದಕ್ಕೆ ಹೊರಟಿತು.

ಪುಷ್ಪ, ಅಂಕಲ್ ಇವರ ಸಂಭಾಷಣೆ ಕೇಳುತ್ತ ನಿಂತಿದ್ದ ಅನಂತಯ್ಯ ಅಲ್ಲಿಂದ ಮೆಲ್ಲನೆ ಹೊರಬಿದ್ದ.

ಅಂಕಲ್ ಸಾಲಭಂಜಿಕೆಯಂತೆ ನಿಂತಲ್ಲಿಯೇ ನಿಂತಿದ್ದ. ರೈಲು ಸಿಗ್ನಲ್ ಪೋಸ್ಟ್ ದಾಟಿ ಮುಂದಕ್ಕೆ ಹೋಯಿತು.

ಅವನು ನಿಂತೇ ಇದ್ದ - ರೈಲು ಹೋಗುತ್ತಲೇ ಇತ್ತು.

ಪುಷ್ಪ ದೀರ್ಘವಾಗಿ ನಿಟ್ಟುಸಿರುಬಿಟ್ಟಳು.

ರೈಲು ಚೆನ್ನಪಟ್ಟಣ ಸ್ಟೇಷನ್ನಿಗೆ ಬಂದು ನಿಂತಿತು.

ಏನೋ ನೆನಪಾಗಿ ಪುಷ್ಪ ಹೂವು ಕೊಂಡು, ತಲೆಯ ತುಂಬ ಮುಡಿದು ಕೊಂಡಳು. 'ಒಂಟಿಕೊಪ್ಪಲಿಗೆ ವೈರ್ ಮಾಡಿದರೆ, ಅವರು ಸ್ಟೇಷನ್ನಿಗೆ ಬರುತ್ತಾರೆ. ಅವರ ಜತೆಯಲ್ಲಿಯೇ ಹೋಗಬಹುದು' ಎಂದು ಯೋಚಿಸಿ ಕೊಂಡಳು. ಥಟ್ಟನೆ ಬೆಂಗಳೂರಿನಲ್ಲಿ ಕಳೆದುಬಂದಿದ್ದ ಮೂರು ಕಾಳರಾತ್ರಿಗಳ ನೆನಪಾಯಿತು. 'ಬೇಡ - ಮೊದಲು ಮನೆಗೆ ಹೋಗೋಣ' ಎಂದುಕೊಂಡಳು.

ಮೈಸೂರು ಸ್ಟೇಷನ್ನಿಗೆ ರೈಲು ಬಂದು ನಿಲ್ಲುವುದಕ್ಕೂ ಪುಷ್ಪನಿಗೆ ವ್ಯವಧಾನವಿಲ್ಲ. ರೈಲು ಪ್ಲ್ಯಾಟ್‌ಫಾರ್ಮಿಗೆ ಬರುತ್ತಿದ್ದಂತೆ ತನ್ನ ಕಂಪಾರ್ಟ್‌ಮೆಂಟಿನ ಬಾಗಿಲು ತೆಗೆದು ನಿಂತುಕೊಂಡಳು. ರೈಲು ನಿಲುಗಡೆಗೆ ಬರುತ್ತಿದ್ದಂತೆಯೇ ಕೆಳಗೆ ಧುಮಿಕಿ, ಕೂಲಿಯ ಕೈಯಲ್ಲಿ ಸಾಮಾನು ತೆಗೆಸಿ

ಕೊಂಡು, ಟಾಂಗಾ ಹತ್ತಿ ಕುಳಿತಳು. ಬಾಡಿಗೆ ಗೊತ್ತುಮಾಡುವುದೂ ಅವಳಿಗೆ ಬೇಕಾಗಿರಲಿಲ್ಲ. ಮನೆಯ ಮುಂದೆ ಇಳಿದೊಡನೆಯೇ ಪುಷ್ಪ ಎರಡು ರೂಪಾಯಿ ನೋಟು ತೆಗೆದು ಗಾಡಿಯವನಿಗಿತ್ತು ಒಳಗೆ ಧಾವಿಸಿದಳು. ಗಾಡಿಯವನು ಅವಳ ಸಾಮಾನು ತಂದು ಒಳಗಿಟ್ಟ.

ಒಳಕ್ಕೆ ಬಂದೊಡನೆಯೇ ತಾಯಿಯನ್ನು

"ಅವರು ಬಂದಿದ್ದರೇ ಮಮ್ಮಿ" ಎಂದು ಕೇಳಿದಳು.

"ಬಂದಿದ್ದರು. ದಿನವೂ ಒಮ್ಮೆಯಾದರೂ ಬಂದು ಹೋಗುತ್ತಾರೆ."

"ಏನು ಹೇಳಿದರು."

"ಹೆಚ್ಚೇನೂ ಹೇಳಲಿಲ್ಲ. ನಿನ್ನ ರೂಮಿನಲ್ಲಿ ಒಂದು ಗಳಿಗೆ ಕುಳಿತಿದ್ದು ಹೋಗುತ್ತಾರೆ. ಮೊನ್ನೆ ಇಲ್ಲಿಯೇ ಕುಳಿತು ನಿನಗೆ ಕಾಗದ ಬರೆದರು."

"ಮಮ್ಮಿ - ಬೆಂಗಳೂರಿನಿಂದ ರಿಡೈರೆಕ್ಟಾಗಿ (Re direct) ನನಗೆ ಕಾಗದ ಬಂದಿದೆಯೇ ?"

"ಒಂದು ಕಾಗದ ಬಂದಿದೆ"

ಎಂದು ಹೆಲನ್‌ಅಮ್ಮ ಮಗಳ ಕೈಗೆ ಕಾಗದ ತಂದುಕೊಟ್ಟಳು. ಲಕೋಟೆ ಮೇಲೆ ಸಂಜೀವ ಹಾಕಿದ್ದ ಎಕ್ಸ್‌ಪ್ರೆಸ್ ಡಿಲಿವರಿಯ (Express Delivery) ಹೆಚ್ಚಿನ ಸ್ಟಾಂಪುಗಳೂ, ಅದನ್ನು ಹಿಂದಿರುಗಿಸುವಾಗ ಜ್ಯಾಡಿ ಅಂಟಿಸಿದ್ದ ಹೆಚ್ಚಿನ ಸ್ಟಾಂಪುಗಳು ಕಂಗೊಳಿಸಿದವು

ಪುಷ್ಪ ತನ್ನ ರೂಮಿಗೆ ಹೋಗಿ ಕುಳಿತು ಕಾಗದವನ್ನೊಡೆದು ಓದಿಕೊಂಡಳು

**"ಡಾರ್ಲಿಂಗ್,**

**ಈ ಕಾಗದವನ್ನು ನಿನಗೆ ಎಲ್ಲಿಂದ ಬರೆಯುತ್ತಿರುವೆ ಬಲ್ಲೆಯಾ. ನಿನ್ನ ಮನೆಯಲ್ಲಿ - ನಿನ್ನ ರೂಮಿನಲ್ಲಿ ಕುಳಿತು ಬರೆಯುತ್ತಿದ್ದೇನೆ. ತಮ್ಮ ಈ ಸ್ಥಿತಿಯಲ್ಲಿಯೂ ನೀನು ಹೊರಡಲು ಅಪ್ಪಣೆಕೊಟ್ಟಿರುವ ನಿನ್ನಕ್ಕ ಜ್ಯಾಡಿಯವರ ತಿಳುವಳಿಕೆ ನನ್ನನ್ನು ಮೂಕನನ್ನಾಗಿ ಮಾಡಿದೆ - ನಿನ್ನ ಕಾಗದ ನೋಡಿದಕೂಡಲೆ ಇಲ್ಲಿಗೆ ಬಂದೆ. ನೀನು ಹೇಳಿದಂತೆಯೇ ಮಾಡಿದೆ. ನಾನು 'ಡಾರ್ಲಿಂಗ್' ಎಂದು ಕೂಗಿದುದು ನಿನಗೆ ಕೇಳಿಸಿತೇ ?**

**ನನ್ನ ಹುಚ್ಚು ನೋಡಿ ನಗುವೆಯೋನೋ? ನೀನು ನಕ್ಕರೂ ಚಿಂತೆಯಿಲ್ಲ ಪ್ರೇಯಸಿ. ನಿನ್ನೊಲವು ನನ್ನನ್ನು ಹುಚ್ಚನನ್ನಾಗಿ ಮಾಡಿದೆ ಎನ್ನುವುದರಲ್ಲಿ**

ಸಂದೇಹವೇ ಇಲ್ಲ. ಈ ಹುಚ್ಚನಿಗೆ ನಿನ್ನ ನಗೆಬೇಕು. ಆ ನಿನ್ನ ಸುಂದರ ಮುಖಮುದ್ರೆ ಎಂದೆಂದಿಗೂ ದುಃಖದಿಂದ ಕಂಗೆಡಬಾರದು. ನಿನ್ನ ಮುಖದಿಂದ ನಗೆಯಳಿಸಿಹೋಗದ ಹಾಗೆ ನಾನು ಶಕ್ತಿಮೀರಿ ಪ್ರಯತ್ನಿಸುತ್ತೇನೆ.

ಭಗವದ್ಗೀತೆಯಲ್ಲಿ ಓದಿದ್ದೆ ಹನಿ (Honey) – ಭಗವನ್ನಾಮಸ್ಮರಣೆಯಿಂದ ಮೂಕ ಮಾತಾಳಿಯಾಗುವನಂತೆ, ಕುಂಟ ಪರ್ವತ ಹಾರುವನಂತೆ † ಆ ಮಾತು ಎಷ್ಟು ಸತ್ಯ ! ಪ್ರೇಮವೇ ಭಗವಂತ (Love is God) ಎಂದು ಹೇಳಿದ ಯೇಸು ಸ್ವಾಮಿ ಈ ಸತ್ಯವನ್ನು ಎಷ್ಟು ಹಾರ್ದಿಕವಾಗಿ ಒಪ್ಪಿಕೊಂಡಿದ್ದಾನೆ. ಭಗವತ್ಸ್ವರೂಪಿಯಾದ ಯೇಸುವಿಗೆ ನನ್ನನ್ನು ನಾನು ಹೋಲಿಸಿಕೊಳ್ಳಲಾರೆ. ಆದರೆ ಸಣ್ಣ ಪ್ರಮಾಣದಲ್ಲಿ ನನ್ನ ಅನುಭವವೂ ಅದೇ ಆಗಿದೆ. ಪ್ರೇಮದ ವಿದ್ಯುತ್ಸಂಚಾರದಿಂದ ನನ್ನ ರಕ್ತಸಂಚಾರದ ವೇಗ ಹೆಚ್ಚಿರುವುದು ವಿಶೇಷವಲ್ಲ. ಆದರೆ ಮನಸ್ಸನ್ನು ಎಂಥ ಅವ್ಯಕ್ತ ಶಾಂತಿ, ತೃಪ್ತಿ, ಆನಂದ ತುಂಬಿದೆ ಬಲ್ಲೆಯಾ ? ನನ್ನನ್ನು ತನ್ನದು ಮಾಡಿಕೊಂಡು, ನನಗೆ ತನ್ನನ್ನು ಅರ್ಪಿಸಿಕೊಂಡ, ನಾನು ತಾನು ಬೇರೆಯಲ್ಲ ಎಂದು ಭಾವಿಸುವ ಒಂದು ಜೀವ ಇದೆ ಎನ್ನುವ ತೃಪ್ತಿ ದೈವಿಕವಾದುದಲ್ಲವೇ ? ಇದನ್ನು ಪಾಶ್ಚಾತ್ಯರು ಕೆಮಿಸ್ಟ್ರಿ ಆಫ್ ಲವ್ (Chemistry of Love) ಎಂದು ಕರೆದಿದ್ದಾರೆ. ಅದನ್ನು ನಾನು ಒಪ್ಪಲಾರದೆ – ಸೂಫಿಗಳದನ್ನೇ ಆಲ್‌ಕೆಮಿ ಆಫ್ ಲವ್ (Alchemy of Love) ಎಂದು ಕರೆದಿದ್ದಾರೆ. ಪ್ರೇಮದ ಕ್ರಿಯೆ ರಸಾಯನಿಕ ಕ್ರಿಯೆಯಲ್ಲ ; ಅದು ರಸಸಿದ್ಧಿ ಕ್ರಿಯೆ. ಎರಡು ದ್ರವಗಳ ಸಂಗೋಪನದಿಂದ, ಉಭಯ ಗುಣಗಳನ್ನವಲಂಬಿಸಿದ ವಸ್ತು ನಿರ್ಮಾಣವಾಗುತ್ತದೆಯೆಂದು ಪಾಶ್ಚಾತ್ಯರು ಹೇಳಿದರು. ಸೂಫಿಗಳು ಹೇಳುವಂತೆ ಪ್ರೇಮ ಅದಕ್ಕೂ ಮುಂದೆ ಹೋಗಿದೆ. ಉಭಯ ವಸ್ತುಗಳ ಗುಣಗಳನ್ನತಿಕ್ರಮಿಸಿ ಪ್ರೇಮ ನಿಲ್ಲುತ್ತದೆ. ಹಿತ್ತಾಳೆ ಅಚ್ಚಬಂಗಾರವಾಗುತ್ತದೆ.

ಹುಚ್ಚು ಹೊಳೆಯಂತೆ ಸಾಗಿದೆಯಲ್ಲವೇ ನನ್ನ ವಿಚಾರಲಹರಿ.

ಪಿಕ್ಚರ್‌ಗೆ ಹೋಗಿಬನ್ನಿ – ಕನ್ನಂಬಾಡಿಗೆ ಹೋಗಿಬನ್ನಿ ಎಂದು ಎಷ್ಟು ಸುಲಭವಾಗಿ ಹೇಳುವೆ ಸ್ವೀಟ್. ಪಿಕ್ಚರ್‌ಗೆ ಹೋಗಿ ನಾನು ಕುಳಿತುಕೊಂಡರೆ ನನ್ನ ಎದುರಿಗೆ ನಡೆಯುವುದೇನು ಬಲ್ಲೆಯಾ – ನಮ್ಮಿಬ್ಬರ ಚಿತ್ರಚರಿತ್ರೆ. ನೀನಿಲ್ಲದ ಬೃಂದಾವನ ನನಗೆ ಬೆಂಗಾಡು.

---

† ಮೂಕಂ ಕರೋತಿ ವಾಚಾಲಂ
ಪಂಗುಂ ಲಂಘಯತೇ ಗಿರಿಮ್ ॥
ಯತ್ಕೃಪಾ ತಮಹಂ ವಂದೇ
ಪರಮಾನಂದಮಾಧವಮ್ ॥

ನೀನೂ ಬಾ, ಹೋಗೋಣ – ಎಲ್ಲಿಗೆ ಬೇಕಾದರೂ ಹೋಗೋಣ – ಉತ್ತರ ಧ್ರುವಕ್ಕೆ ಹೋಗಲೂ ನಾನು ಸಿದ್ಧನಾಗಿದ್ದೇನೆ.

ಶನಿವಾರ ಇಂತು ನಿನ್ನ ಪ್ರೇಮೋಪಜೀವಿ – ಸಂಜೀವ.''

'ನನ್ನ ದೊರೆ - ನನ್ನ ಸ್ವಾಮಿ - ನನ್ನ ದೇವರೆ' ಎಂದುಕೊಂಡು ಪುಷ್ಪ ಕಾಗದವನ್ನಪ್ಪಿ, ಮುದ್ದಿಟ್ಟು, ಕುಣಿದಾಡಿದಳು.

ಸ್ನಾನ, ಊಟ ಮುಗಿಸಿದೊಡನೆಯೇ ಪುಷ್ಪ

"ಮಮ್ಮಿ - ಅವರು ಎಷ್ಟು ಹೊತ್ತಿಗೆ ಬರುತ್ತೇನೆಂದರು."

"ಏನೂ ಹೇಳಲಿಲ್ಲ. ನೀನು ಬರುವುದನ್ನು ಅವರಿಗೆ ತಿಳಿಸಿದ್ದೆಯಾ ?"

"ಇಲ್ಲ"

"ಹಾಗಾದರೆ ಸಂಜೆಗೇ ಬರುವುದು."

ಪುಷ್ಪ ತನ್ನ ಟ್ರಂಕ್ ತೆಗೆದು, ಅಂಕಲ್ ಕೊಟ್ಟಿದ್ದ ಸಾವಿರದಿನ್ನೂ ರೈವತ್ತು ರೂಪಾಯಿಗಳನ್ನು ತಾಯಿಯ ಕೈಯಲ್ಲಿ ಹಾಕಿ ಅವರ ಕಥೆಯನ್ನು ಸಂಕ್ಷೇಪವಾಗಿ ವಿವರಿಸಿದಳು.

"ಕೊನೆಗೆ ಅವರೇನಂದರು ?"

"'ಯಾವಾಗಲಾದರೊಮ್ಮೆ ಬಂದು ನೋಡಿಕೊಂಡು ಹೋಗಬಹುದಷ್ಟೇ' ಎಂದು ಕೇಳಿದರು."

"ನೀನೇನು ಹೇಳಿದೆ."

"'ಊರಿಗೆ ಹೋದ ಸ್ವಲ್ಪ ದಿವಸಗಳಲ್ಲಿ ನನ್ನ ಮದುವೆಯಾಗುತ್ತದೆ' ಎಂದು ಹೇಳಿದೆ."

"ಹಾಗೇಕೆ ಹೇಳಿದೆ"

"ಮಮ್ಮಿ - ಇನ್ನು ಮೇಲೆ ನಾನು ಮೇರಿ ಪುಷ್ಪನಲ್ಲ - ಪುಷ್ಪ ಸಂಜೀವ."

ಹೆಲನ್ ಅಮ್ಮ ಮಗಳನ್ನೊಮ್ಮೆ ನೋಡಿ ನೋಟ ಬದಲಾಯಿಸಿದಳು.

ಮನೆಯಲ್ಲಿ ಹೆಚ್ಚುಹೊತ್ತು ನಿಲ್ಲಲು ಪುಷ್ಪನಿಗೆ ಮನಸ್ಸು ತಡೆಯಲಿಲ್ಲ. 'ಸಂಜೆಗೆ ಬರುತ್ತಾರೆ - ಈಗಿನ್ನೂ ಒಂದೂವರೆ - ಇನ್ನು ನಾಲ್ಕು ಗಂಟೆಗಳು - **ನಾಲ್ಕು ಗಂಟೆಗಳು** ಅವರನ್ನು ಕಾಣದಿರಬೇಕೇ' ಎಂದು ಹೊರಡುವ ಸಿದ್ಧತೆ ಮಾಡಿಕೊಂಡಳು. ಅದುವರೆವಿಗೆ ಧರಿಸದಿದ್ದ ನೀಲಿ ಜಾರ್ಜೆಟ್ ಸೀರೆ ಧರಿಸಿ, ಮೊಗ್ಗೆಯ ಕಸೂತಿ ಮಾಡಿದ ಕೆಂಪು ಕುಪ್ಪಸ ತೊಟ್ಟಳು.

ತುಟಿಗೆಂಪನ್ನೇ ತೆಗೆದುಕೊಂಡು ಹಚ್ಚಿಗಿಟ್ಟುಕೊಂಡಳು. ಕಾಣುತ್ತದೋ ಇಲ್ಲವೋ ಎಂಬಂತೆ ಮುಖಕ್ಕೆ ತೆಳುವಾಗಿ ಪೌಡರ್ ಪೂಸಿಕೊಂಡಳು. ಹತ್ತು ಬಾರಿ ಕನ್ನಡಿಯಲ್ಲಿ ತನ್ನ ಅಲಂಕಾರ ನೋಡಿ ಪರೀಕ್ಷೆಮಾಡಿಕೊಂಡಳು.

ಅಲಂಕಾರ ಮುಗಿದೊಡನೆಯೇ ತಾಯಿಗೆ ತಿಳಿಸಿ ಮನೆಬಿಟ್ಟು ನಡೆದಳು. ನೆತ್ತಿ ಸಿಡಿದುಹೋಗುವಂತೆ ಬಿಸಿಲು ಉರಿಯುತ್ತಿತ್ತು. ಬಿಸಿಲಿನ ಝಳಕ್ಕೆ ಕಣ್ಣು ಮಿಡುಕಿತು. ಕಣ್ಣಿಗೆ ಅಡ್ಡವಾಗಿ ತನ್ನ ಹ್ಯಾಂಡ್‌ಬ್ಯಾಗ್ ಹಿಡಿದು ಟಾಂಗಾ ಸ್ಟ್ಯಾಂಡಿನ ವರೆಗೆ ಬಂದು, ಅಲ್ಲಿ ಗಾಡಿ ಗೊತ್ತುಮಾಡಿಕೊಂಡು ಒಂಟಿಕೊಪ್ಪಲಿನ ಕಡೆ ನಡೆದಳು.

ಪುಷ್ಪನ ಮನಸ್ಸಿನಲ್ಲಿ ಎಲ್ಲೂ ಇಲ್ಲದ ದುಗುಡ - ಆತಂಕ.

'ಅವರು ಮನೆಯಲ್ಲಿಲ್ಲದಿದ್ದರೇನು ಗತಿ '

'ಅಲ್ಲೇ ಕಾದರಾಯಿತು.'

'ನಾನು ಬರುವ ವಿಷಯ ತಿಳಿಸಿದರೆ ಚೆನ್ನಾಗಿತ್ತೇನೋ!'

'ಇಲ್ಲ - ಈಗ ಮಾಡಿದ್ದೇ ಒಳ್ಳೆಯದಾಯಿತು.'

'ಅವರನ್ನು ಕೇಳಿ ಮನೆಯ ಬೀಗದಕೈ ತೆಗೆದುಕೊಳ್ಳಬೇಕು - ಅವರು ಹೊರಗೆ ಹೋಗಿದ್ದರೂ ನಾನು ಒಳಗೆ ಹೋಗಲು ಸಾಧ್ಯವಾಗುತ್ತದೆ.'

'ಅಂಕಲ್ ದ್ರೋಹ ಬಗೆದಾನೇ ?'

'ಬಗೆಯಲಾರ - ಅವನು ಜಂಟಲ್‌ಮನ್ (Gentleman)"

'ದೇವರನ್ನು ನಂಬಿದ್ದೇನೆ - ಅವನು ಮಾಡಿಸಿದಂತಾಗಲಿ '

ಗಾಡಿ ಸಂಜೀವನ ಮನೆ ಸಮೀಪಿಸುತ್ತಿದ್ದಂತೆಯೇ ಪುಷ್ಪ ಬಗ್ಗಿ ನೋಡಿದಳು. ಅವನ ಮನೆಯ ಕಿಟಕಿಗಳು ತೆಗೆದಿದ್ದವು ಗಾಳಿಗೆ ಕಿಟಕಿಯ ರೆಕ್ಕೆಗಳು ಹಾರಾಡುತ್ತಿದ್ದವು

'ಮನೆಯಲ್ಲಿ ಇರುವ ಹಾಗಿದೆ ' ಎಂದುಕೊಂಡಳು.

ಗಾಡಿಯನ್ನು ಕಳುಹಿಸಿ, ಸಂಜೀವನ ಮನೆಯ ಬಾಗಿಲಿಗೆ ಬಂದಳು. ಬೀಗ ಹಾಕಿರಲಿಲ್ಲ. 'ಸದ್ಯ . . . . ' ಎಂದುಕೊಂಡು ಮೆಲ್ಲನೆ ಬಾಗಿಲು ತಟ್ಟಿದಳು, ಒಳಗಿನಿಂದ ಉತ್ತರ ಬರಲಿಲ್ಲ. ಪುಷ್ಪನ ಮನಸ್ಸಿಗೆ ಭಯ ವಾಯಿತು. ತನ್ನ ಅವಿಚಾರಕ್ಕೆ ತಾನೇ ಪಶ್ಚಾತ್ತಾಪಪಟ್ಟುಕೊಂಡು ಮತ್ತೆ ಬಾಗಿಲು ಬಡಿದಳು

'ಯಾರು ?' ಎಂದು ಮರುದನಿ ಬಂದಿತು.

ಪುಷ್ಪ ಉತ್ತರಿಸದೆ ನಿಂತಳು

'ಯಾರು' ಎಂದು ಮರುದನಿ ಬಿರುಸಾಗಿ ನುಡಿಯಿತು.

'ನಾನು' ಎಂದು ಕ್ಷೀಣಸ್ವರದಲ್ಲಿ ನುಡಿದಳು.

'ಪುಷ್ಪನೇ' ಎಂದು ಒಳಗಿನಿಂದ ಧ್ವನಿ.

'ಹೌದು' ಎಂದಳು.

ಒಳಗಿನಿಂದ ಸಂಜೀವ ಓಡಿಬಂದು ಬಾಗಿಲು ತೆಗೆದ.

## ೨೦

ಕಾಲೇಜಿನ ವಿಳಾಸಕ್ಕೆ ತನಗೆ ಬಂದಿದ್ದ ಕಾಗದ ನೋಡಿಕೊಂಡು ಸುಂದರರಾಯ, ಪ್ರಿನ್ಸಿಪಾಲರನ್ನು ಉಪಾಹಾರದ ಅವಧಿಯಲ್ಲಿ ನೋಡ ಬೇಕೆಂದು ನಿರ್ಧರಿಸಿಕೊಂಡಿದ್ದ. ಅವನು ತರಗತಿಯಲ್ಲಿ ಪಾಠಮಾಡುತ್ತಿರು ವಾಗಲೇ ಎರಡು ಗಂಟೆಗೆ ತಮ್ಮನ್ನು ಬಂದು ನೋಡಬೇಕೆಂದು ಪ್ರಿನ್ಸಿಪಾಲ ರಿಂದ ನಿರೂಪಬಂದಿತ್ತು. 'ನನ್ನನ್ನೇಕೆ ಬರಮಾಡುತ್ತಿದ್ದಾರೆ' ಎಂದುಕೊಂಡೇ ಪಾಠ ಮುಂದುವರಿಸಿದ.

ಎರಡು ಗಂಟೆಗೆ ಸರಿಯಾಗಿ ಪ್ರಿನ್ಸಿಪಾಲರನ್ನು ನೋಡಲು ಹೋಗದೆ ಅರ್ಧ ಗಂಟೆ ತಡೆಮಹೋದ. ಪ್ರಿನ್ಸಿಪಾಲರು ತಮ್ಮ 'ಲಂಚ್' (Lunch) ಆದೇ ಮುಗಿಸಿದ್ದರು.

"ಎರಡು ಗಂಟೆಗೇ ಏಕೆ ಬರಲಿಲ್ಲ ಸುಂದರರಾವ್. ಜತೆಯಲ್ಲಿ ಟೀ ಕುಡಿಯಬಹುದಾಗಿತ್ತು"

ಎಂದು ಪ್ರಿನ್ಸಿಪಾಲರು ತಮ್ಮ ಸೌಜನ್ಯ ತೋರಿಸಿದರು.

"ಬರಮಾಡಿದ್ದೇಕೆ ಸರ್" ಎಂದು ಸುಂದರರಾಯ ಕೇಳಿದ.

"ಕುಳಿತುಕೊಳ್ಳಿ. ಸಾವಕಾಶವಾಗಿ ನಿಮ್ಮಲ್ಲಿ ಮಾತನಾಡಬೇಕಾಗಿದೆ."

ಸುಂದರರಾಯರ ಪ್ರಿನ್ಸಿಪಾಲರ ಸಮೀಪದಲ್ಲಿದ್ದ ಕುರ್ಚಿಯ ಮೇಲೆ ಕುಳಿತ ತರುವಾಯ

"ಈಗಿನ ಕಾಲ ಬಹಳ ನಾಜೂಕಾಗುತ್ತಿದೆ ಸುಂದರರಾವ್."

"ಹೌದು ಸರ್,"

"ನನಗೆ ಯಾವ ಸ್ವಾತಂತ್ರ್ಯವೂ ಉಳಿದಿಲ್ಲ. ನೌಕರಿ ಸೇರಿದ ಮೇಲೆ ನಾವು ನಮ್ಮ ಆತ್ಮವನ್ನೇ ಮಾರಿಕೊಂಡಂತಾಗುತ್ತದೆ."

"ತಾವು ಯಾವುದಕ್ಕೆ ಅನ್ವಯಿಸಿ ಮಾತನಾಡುತ್ತಿರುವಿರೋ ತಿಳಿಯುಲಿಲ್ಲ ಸರ್."

"ವೈಸ್ ಛಾನ್ಸಲರ್ ಸಾಹೇಬರು ನನಗೊಂದು ಗುಪ್ತ ಕಾಗದ ಬರೆದು ನಿಮ್ಮ ವಿಷಯ ಕೇಳಿದ್ದಾರೆ."

"ನನ್ನ ವಿಷಯವೆಲ್ಲಾ ಬಹಿರಂಗವಾಗಿಯೇ ಇದೆಯಲ್ಲಾ !"

" 'ಯುಗವಾಣಿ ' ಪತ್ರಿಕೆಯ ಸಂಪಾದಕೀಯ ಲೇಖನ ನೋಡಿದಿರಷ್ಟೆ. ಅವನ್ನು ನೋಡಿದ ವೈಸ್ ಛಾನ್ಸಲರ್ ನೀವು ಕಮ್ಯುನಿಷ್ಟರೆಂದು ಭಾವಿಸಿದ್ದಾರೆ."

"ಆ ಅಭಿಪ್ರಾಯ ಬರುವಂತೆ ಸಂಪಾದಕರು ತಮ್ಮ ಲೇಖನ ಬರೆದಿದ್ದಾರೆ. ಅದರ ಜತೆಯಲ್ಲಿಯೇ ನನ್ನ ಭಾಷಣ ಪ್ರಕಟವಾಗಿದೆಯಲ್ಲ. ಅದನ್ನು ನೋಡಿದರೆ ನಾನು ಕಮ್ಯುನಿಸ್ಟೋ, ಫ್ಯಾಸಿಸ್ಟೋ, ನ್ಯಾಷನಲಿಸ್ಟೋ ಗೊತ್ತಾಗುತ್ತದೆ."

"ನಾನು ಸಮಂಜಸವಾಗಿ ಉತ್ತರ ಬರೆಯುತ್ತೇನೆ – ನೀವು ಯೋಚನೆ ಮಾಡಬೇಕಾಗಿಲ್ಲ. ನಿಮ್ಮ ಲೇಖನವೊಂದು 'ಕೆಮಿಕಲ್ ಏಜ್ ' ಪತ್ರಿಕೆಯಲ್ಲಿ ಪ್ರಕಟವಾಗಿದೆಯಂತೆ."

"ಆಗಿದೆ ಸರ್."

"ಇಲ್ಲಿ ನೀವು ಮಾಡುವ ರಿಸರ್ಚ್‌ಗಳ ಲಾಭ ಈ ಯೂನಿವರ್ಸಿಟಿಗೆ ಮೊದಲು ಆಗಬೇಕಲ್ಲವೇ ?"

"ಅವುಗಳ ಲಾಭ ಈ ಯೂನಿವರ್ಸಿಟಿಗೆ ಬೇಕಿಲ್ಲ ಸರ್."

"ನೌಕರಿಯಲ್ಲಿದ್ದ ಮೇಲೆ ಅವರ ಸಮಯಾಚಾರಗಳನ್ನು (Conventions) ಗೌರವಿಸಬೇಕು ಮಿ. ಸುಂದರರಾವ್."

"ನನ್ನ ಸಹನೆಗೂ ಮಿತಿಯಿದೆ ಸರ್. ಇಲ್ಲಿ ನನಗಾಗುತ್ತಿರುವ ಅನ್ಯಾಯ ನಾನು ಸಹಿಸಲಾರೆ."

"ನಿಮಗೂ ಯಾರೂ ಅನ್ಯಾಯಮಾಡಿಲ್ಲ ಮಿ. ಸುಂದರರಾವ್."

"ಹೋಗಲಿ - ಆ ವಿಷಯ ಚರ್ಚೆಮಾಡಿ ಏನು ಪ್ರಯೋಜನ ಸರ್. ಇಂದು ನಮ್ಮ ಯೋಗ್ಯತೆಗೂ ಬೆಲೆಯಿಲ್ಲವಾಗಿದೆ - ನಮ್ಮ ಅಭಿಮಾನಕ್ಕೂ ಬೆಲೆಯಿಲ್ಲವಾಗಿದೆ. ನಾನು ಮಾಡುವ ಕೆಲಸದ ಕೀರ್ತಿ ನನ್ನ ಕಾಲೇಜಿಗೆ ಸಲ್ಲಬೇಕೆಂದು ಬಯಸಿದ್ದೇ ನನ್ನ ತಪ್ಪು."

"ನಿಮ್ಮ ಕಾಲ ನೀವು ಕಾಯಬೇಕು ಮಿ. ಸುಂದರರಾವ್. ಸುಮ್ಮನೆ ಅವಸರಪಟ್ಟರಾಗುತ್ತದೆಯೇ ?"

"ಆ ಕಾಲ ಬರುವುದರೊಳಗೆ ನಾನು ಕಾಲಾಧೀನನಾಗಿರುತ್ತೇನೆ ಸರ್"

ಪ್ರಿನ್ಸಿಪಾಲರು ಗಂಟುಮೋರೆ ಮಾಡಿಕೊಂಡು ಕುಳಿತರು. ಸುಂದರರಾಯ

"ನನಗೆ ಮೂರು ತಿಂಗಳ ರಜಾಬೇಕು ಸರ್. ತಮ್ಮನ್ನು ಕೇಳಿ ಅಪ್ಲಿಕೇಷನ್ ಕೊಡಬೇಕೆಂದಿದ್ದೆ."

"ಮೂರು ತಿಂಗಳೇ - ಏಕೆ? ಹುಡುಗರ ಪರೀಕ್ಷೆ ಸಮೀಪಕ್ಕೆ ಬಂದಿತಲ್ಲ!"

ಸುಂದರರಾಯ ಮರುಮಾತನಾಡದೆ ತನ್ನ ಕಿಸೆಯಿಂದ ಉದ್ದನೆಯ ಲಕೋಟೆ ತೆಗೆದು ಪ್ರಿನ್ಸಿಪಾಲರ ಕೈಯಲ್ಲಿಟ್ಟ. ಕಾಗದ ಓದುತ್ತ ಓದುತ್ತ ಪ್ರಿನ್ಸಿಪಾಲರ ಮುಖ ವಿವರ್ಣವಾಯಿತು. ಕಾಗದವನ್ನು ಮಡಿಚಿ ಸುಂದರರಾಯನಿಗೆ ಹಿಂದಿರುಗಿಸುತ್ತಾ

"ನೀವು ಹೋಗುತ್ತಿರುವ ಮಾರ್ಗ ಕ್ರಮಬದ್ಧವಾದುದಲ್ಲ ಮಿ. ಸುಂದರರಾವ್."

"ಏಕೆ ಸರ್."

"ಸೆಂಟ್ರಲ್ ಗೌರ್ನಮೆಂಟ್ ಜತೆಯಲ್ಲಿ ನೇರವಾಗಿ ಪತ್ರವ್ಯವಹಾರ ಮಾಡುವ ಅಧಿಕಾರ ನಿಮಗಿಲ್ಲ. ನಿಮ್ಮ ಕಾಗದಗಳು ಪ್ರಿನ್ಸಿಪಾಲ್, ವೈಸ್ ಛಾನ್ಸಲರ್ ಮತ್ತು ಸರ್ಕಾರದ ಮೂಲಕವೇ ಹೋಗಬೇಕು."

"ಹೋಗಬೇಕಾದ್ದು ಹೋಗಿಬಿಟ್ಟಿದೆ. ಆಹಾರ ಸಚಿವರ ಕಾಗದಕ್ಕೆ ಪ್ರತ್ಯುತ್ತರವೇನು ಬರೆಯಲಿ ?"

"ನಿಮ್ಮಿಷ್ಟ ಬಂದುದು ಬರೆಯಿರಿ."

"ಪ್ರಿನ್ಸಿಪಾಲರು ರಜಾಕೊಡಲಿಲ್ಲ - ಬರುವುದಿಕ್ಕಾಗುವುದಿಲ್ಲ ಎಂದು ಬರೆಯುತ್ತೇನೆ."

"ನೀವು ಉದ್ದೇಶಪೂರ್ವಕವಾಗಿ ನನ್ನ ಮೇಲೆ ಕತ್ತಿಕಟ್ಟಿ ನಿಂತಿರುವಿರಿ?"

"ಕೇಂದ್ರ ಸರ್ಕಾರದ ಆಹಾರ ಸಚಿವರಿಗೆ ಪತ್ರ ಬರೆದಿರುವವನು ನಾನಲ್ಲ ಸರ್ - ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್."

"ರಜಾಕೊಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ - ಆದರೆ ಈ ಸಂದರ್ಭವನ್ನು ನಾನು ವೈಸ್ ಛಾನ್ಸಲರಿಗೆ ರಿಪೋರ್ಟ್ ಮಾಡಬೇಕಾಗುತ್ತದೆ."

"ಮಾಡಿ ಸರ್. ಅವರ ಜತೆಯಲ್ಲಿ ನನ್ನ ರಾಜಿನಾಮೆ ಪತ್ರವನ್ನೂ ಕಳುಹಿಸಿಕೊಡಿ."

ಪ್ರಿನ್ಸಿಪಾಲರು ತಮ್ಮ ಪೀಠಬಿಟ್ಟೆದ್ದು ಬಂದು, ವಿಶ್ವಾಸಪೂರ್ವಕವಾಗಿ ಸುಂದರರಾಯನ ಕೈಹಿಡಿದು

"ಹೋಗಿಬನ್ನಿ ಮಿ. ಸುಂದರರಾವ್. ನಾನು ಸದಾ ನಿಮ್ಮ ಹಿತೈಷಿಯೆಂಬುದನ್ನು ನೀವು ಬಲ್ಲಿರಿ. ದೇವರು ನಿಮಗೆ ಒಳ್ಳೆಯದು ಮಾಡಲಿ. ಯಾರಿಗಾದರೂ ಪರಿಚಯ ಪತ್ರ ಬೇಕಿದ್ದರೆ ತಿಳಿಸಿ - ಸಂತೋಷವಾಗಿ ಬರೆದು ಕೊಡುತ್ತೇನೆ" ಎಂದರು.

ಸುಂದರರಾಯನಿಗೆ ಕೇಂದ್ರ ಸರ್ಕಾರದ ಆಹಾರ ಸಚಿವರಿಂದ ಬಂದಿರುವ ಕರೆಯ ವಿಷಯ ಕೇಳಿ ಅವನ ಸಹ - ಶಿಕ್ಷಕರು ಸಂತೋಷಪಟ್ಟರು. ಜಯರಾಮ್ ಅವನಿಗೆ ಹೃತ್ಪೂರ್ವಕ ಅಭಿನಂದನೆ ಅರ್ಪಿಸಿದ. ಪ್ರೊ. ಕೇಶವಯ್ಯ ಅವನನ್ನು ಅಭಿನಂದಿಸುತ್ತಾ

"ಇಲ್ಲಿನ ವ್ಯವಹಾರ ಸಚಿವರಿಗೆ ಸೂಕ್ಷ್ಮವಾಗಿ ತಿಳಿಸಿ ಮಿ. ಸುಂದರರಾವ್" ಎಂದರು.

ಸುಂದರರಾಯ ದೀರ್ಘವಾಗಿ ಆಲೋಚಿಸಿ

"ಮನೆಜಗಳ ಹೊರಗಿನವರ ಮುಂದೆ ಪ್ರದರ್ಶಿಸುವುದು ನ್ಯಾಯವಲ್ಲ" ಎಂದು ಉತ್ತರಿಸಿದ.

ಮನೆಗೆ ಬಂದೊಡನೆಯೇ ಸುಂದರರಾಯ ಸುನಂದೆಯನ್ನು ಕರೆದು

ಕಾಗದದ ವಿಷಯ, ಪ್ರಿನ್ಸಿಪಾಲರೊಂದಿಗೆ ನಡೆದ ಸಂಭಾಷಣೆಯ ವಿಷಯ ನಿರೂಪಿಸಿದ.

ಸುನಂದೆ ಯಾವ ಉತ್ಸಾಹವನ್ನೂ ವ್ಯಕ್ತಪಡಿಸದೆ

"ಹೋಗಿಬನ್ನಿ - ಸಂತೋಷ" ಎಂದಳು.

ಅವಳ ಶುಷ್ಕ ಅಭಿನಂದನೆ ಸುಂದರರಾಯನಿಗೆ ಬೇಕಾಗಲಿಲ್ಲ.

ಲ್ಯಾಬೊರೇಟರಿಯಲ್ಲಿ ಹೋಗಿ ಕುಳಿತರೂ ಸುಂದರರಾಯನ ಮನಸ್ಸು ಸ್ಥಿಮಿತಕ್ಕೆ ಬರಲಿಲ್ಲ. ತನ್ನ, ಸುನಂದನ ವೈವಾಹಿಕ ಸಂಬಂಧ ತೆಗೆದುಕೊಳ್ಳುತ್ತಿದ್ದ ಸ್ವರೂಪ ಅವನಲ್ಲಿ ಜಿಗುಪ್ಸೆಯನ್ನೂ ಭಯವನ್ನೂ ಉಂಟುಮಾಡಿತ್ತು. 'ಇದಕ್ಕೆ ಕೊನೆಯಲ್ಲಿ' ಎಂಬ ಯೋಚನೆ ಅವನನ್ನು ವ್ಯಾಪಿಸಿತು.

ಗಫೂರ್ ಮೆಲ್ಲನೆ ಬಂದು ಒಂದೆಡೆ ನಿಂತ. ಅವನು ಬಂದುದನ್ನು ನೋಡಿದ್ದರೂ ಸುಂದರರಾಯ ಕೂಡಲೆ ಮಾತನಾಡಿಸಲಿಲ್ಲ. ಸ್ವಲ್ಪಕಾಲ ಕಳೆದ ಮೇಲೆ

"ಏನು ಗಫೂರ್" ಎಂದ.

"ಏನೂ ಇಲ್ಲ ಸರ್ಕಾರ್ - ಸುಮ್ಮನೆ ಬಂದೆ - ಖಾನಾ ಮಾಡುವುದಿಲ್ಲವೇ ಸರ್ಕಾರ್."

"ಮಾಡಿದರಾಯಿತು."

"ಅಮ್ಮಾಜಿ ತುಂಬ ಅಳುತ್ತಾರೆ ಸರ್ಕಾರ್."

"ಏಕೆ?"

"ಇವತ್ತಾದರೂ ಬೇಗ ಖಾನಾಮಾಡಿ ಸರ್ಕಾರ್"

ಸುಂದರ ನೀರವನಾಗಿ ಕುಳಿತಿದ್ದುದನ್ನು ಕಂಡು ಗಫೂರ್ ಅಲ್ಲಿ ನಿಲ್ಲದೆ ಹೊರಟುಹೋದ. ಗಫೂರನ ಒಂದೇ ಮಾತು ಸುಂದರನ ಮನಸ್ಸಿನಲ್ಲಿ ಸುಪ್ತವಾಗಿದ್ದ ಭಾವನಾತರಂಗಗಳನ್ನು ಹೊಡೆದೆಬ್ಬಿಸಿದವು.

'ನಾನೇ ತಪ್ಪುಮಾಡುತ್ತಾ ಸುನಂದೆಯ ಮೇಲೆ ವೃಥಾ ಕೋಪಮಾಡಿಕೊಳ್ಳುತ್ತಿರುವೆನೇ? ಅವಳು ಹೇಳುವುದು ನಿಜ - ನನ್ನ ಸಂಶೋಧನೆಗಳ ಅವಾಂತರದಲ್ಲಿ ಅವಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಿರುವೆ. ಗಂಡ ತನ್ನ ಪ್ರೀತಿಸಬೇಕು. ಆರಾಧಿಸಬೇಕು - ತನ್ನ ಆಶೋತ್ತರಗಳನ್ನು ಪೂರೈಸಬೇಕು ಎಂದು ಹೆಣ್ಣು ಬಯಸುವುದು ಸ್ವಾಭಾವಿಕ. - ಅವಳ ಆಸೆಗಳನ್ನು ಬಯಕೆ

ಗಳನ್ನು ನಾನು ಪೂರೈಸುತ್ತಿಲ್ಲ – ನಾನಾಯಿತು ನನ್ನ ಲ್ಯಾಬೊರೇಟರಿಯಾಯಿತು. - ಇತರ ಹೆಣ್ಣು ಮಕ್ಕಳಂತೆ ಸುನಂದಾ ಅಜ್ಞಳಲ್ಲ, ಅನಕ್ಷರಜ್ಞಳಲ್ಲ - ಅವಳೂ ಓದಿದವಳು. ನನ್ನ ಕೆಲಸದ ಲಕ್ಷಣವನ್ನು ಅರ್ಥ ಮಾಡಿಕೊಳ್ಳುವ ಯೋಗ್ಯತೆ ಅವಳಿಗಿದೆ. ನನ್ನ ಸಂಪೂರ್ಣ ವೇಳೆಯನ್ನು ಕೆಲಸಕ್ಕೆ ವಿನಿಯೋಗಮಾಡದಿದ್ದರೆ ನಾನು ಕೃತಕೃತ್ಯತೆ ಪಡೆಯುವುದು ಹೇಗೆ? ವಿದ್ಯಾ, ಕಲೆ, ವಿಜ್ಞಾನ ಮನುಷ್ಯನ ಸಮಸ್ತ ಚೇತನವನ್ನೂ ಹೀರುತ್ತದೆಂಬುದು ಸುನಂದನಿಗೆ ಗೊತ್ತಿಲ್ಲವೇ? ಸಣ್ಣಪುಟ್ಟ ವಿಷಯಗಳಿಗೆ ಅವಳೇಕೆ ಹಟ ಹಿಡಿಯಬೇಕು. - ಅಣ್ಣನ ಬಗ್ಗೆ ತಂಗಿಗೆ ಪ್ರೇಮ, ಗೌರವ ಇರಬೇಕಾದುದು ಸಹಜ - ನ್ಯಾಯ. ಆದರೆ ಅಣ್ಣನಿಗೆ ನನ್ನನ್ನೇಕೆ ಹೋಲಿಸಿ, ನಾನು ನಿಷ್ಪ್ರಯೋಜಕನೆಂದು ಭಾವಿಸಬೇಕು. ಅವನ ದಾರಿಯಲ್ಲಿ ನಾನು ನಡೆಯಬೇಕೆಂದು ಅವಳು ಹಟಹಿಡಿಯುವುದು ಧರ್ಮವೇ? ಲೋಕದಲ್ಲಿ ಏನಕೇನ ಪ್ರಕಾರೇಣ ಪಡೆದ ಪ್ರಸಿದ್ಧಿಯೇ ಮುಖ್ಯವಾದುದೇ? ನಾನು ಕೇವಲ ನಿರುಪಯೋಗಿಯಾಗಿರಬಹುದು - ಆದರೆ ಸುನಂದೆಯ ಗಂಡನಲ್ಲವೇ? ಗಂಡ ಹೆಂಡತಿಯಲ್ಲಿ, ಹೆಂಡತಿ ಗಂಡನಲ್ಲಿ ವಿಶ್ವಾಸ, ಗೌರವ ತಳೆಯದಿದ್ದರೆ ಸಂಸಾರ ಸಾಗುವುದು ಹೇಗೆ? ಇಬ್ಬರೂ ಬೆಳಿಗ್ಗೆಯಿಂದ ಸಂಜೆಯವರೆಗೆ ನಾಯಿ ಬೆಕ್ಕುಗಳಂತೆ ಕಾದಾಡುತ್ತಿದ್ದರೆ ಮನೆ ಕುರುಕ್ಷೇತ್ರವಾಗುವುದಿಲ್ಲವೇ? ಹೆಣ್ಣು - ಗಂಡು ಜತೆಯಲ್ಲಿ ಬಾಳ್ವೆಮಾಡುವಾಗ ಸಾವಿರ ಮಾತು ಬರುತ್ತದೆ - ಸಾವಿರ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಹುಟ್ಟುತ್ತದೆ. ಆದರೆ ಅವನ್ನೇ ಬೆಳಸಿಕೊಂಡು ಹೋದರೆ ಅವರ ಬಾಳ್ವೆಯಲ್ಲಿ ಶಾಂತಿ ಉಳಿಯುವುದೆಂತು? ಅಶಾಂತಿಯ ವಿಪ್ಲವಕ್ಕೊಳಗಾದ ಬಾಳ್ವೆ ಬಾಳ್ವೆಯೇ?'

ಎಂದು ವಿಚಾರಮಾಡುತ್ತಿರುವಂತೆ ಸುಂದರನಿಗೆ ಥಟ್ಟನೆ ಏನೋ ಹೊಳೆದಂತಾಯಿತು.

'ಸುನಂದನನ್ನು ನಾನು ಪ್ರೀತಿಸುವುದಿಲ್ಲವೇ? ಪ್ರೀತಿಸುವುದಿಲ್ಲವೆಂದು ಅವಳು ತಿಳಿದುಕೊಂಡಿದ್ದಾಳೇನೋ? ನನ್ನ ಸಮಸ್ತ ದುಡಿಮೆ, ಯಶಸ್ಸು, ಸಂಪಾದನೆ ಅವಳಿಗಾಗಿಯೇ ಎನ್ನುವುದನ್ನು ಅವಳು ಅರಿಯಳು.'

'ನಾನೂ ಹಟಮಾಡಿದೆ - ಅವಳ ತಪ್ಪುಮಾತು ಕೇಳಲಾಗದೆ ಕೋಪ ಮಾಡಿಕೊಂಡೆ – ನನಗೇಕೆ ಇಂಥ ಮಂಕು ಕವಿಯಿತು? ಅವಳ ಕೋಪವನ್ನು

ನಾನು ಶಾಂತಿಯಿಂದ ಇದಿರಿಸಬೇಕಾಗಿತ್ತು. ಅವಳ ಭರ್ತ್ಸನೆಯನ್ನು ಪ್ರಿಯ ವಾಕ್ಕಿನಿಂದ ಪ್ರತಿಭಟಿಸಬೇಕಾಗಿತ್ತು. ಅವಳ ಅಸಂತೋಷವನ್ನು ಹೋಗಲಾಡಿಸುವುದು ನನ್ನ ಕರ್ತವ್ಯವಾಗಿತ್ತು.'

'ನಾನು ತಪ್ಪಿತಸ್ಥ' ಎನ್ನುವ ನಿರ್ಧಾರಕ್ಕೆ ಬಂದ.

ಗಫೂರ್ ಹೇಳಿದ ಬುದ್ಧಿಯ ಮಾತೂ ನೆನಪಾಯಿತು. ಲ್ಯಾಬೊರೇಟರಿ ಬಿಟ್ಟಿದ್ದು ಮನೆಯೊಳಗೆ ಬಂದ. ಸುನಂದಾ ಯಾವದೋ ಕಾದಂಬರಿ ಓದುತ್ತ ಕುಳಿತಿದ್ದಳು. ಸುಂದರನೂ ಒಂದು ಕುರ್ಚಿ ಆಶ್ರಯಿಸಿ ಕುಳಿತ. ಸುನಂದ ಮಾತನಾಡಿಸುವಳೇನೋ ಎಂದು ನಿರೀಕ್ಷಿಸಿದ. ಅವಳು ಕತ್ತೆತ್ತಿ ನೋಡಲಿಲ್ಲ - ಕಾದಂಬರಿಯಲ್ಲಿ ತಲ್ಲೀನಳಾಗಿದ್ದಳು. ಸುಂದರನೇ ಮಾತನಾಡಿಸಿದ

"ಊಟ ಮಾಡಿ ಕುಳಿತುಕೊಳ್ಳೋಣ."

ಸುನಂದಾ ಉತ್ತರಕೊಡದೆ ಪುಸ್ತಕ ಮುಚ್ಚಿಟ್ಟು ಯಂತ್ರದಂತೆ ಎದ್ದು ನಿಂತಳು.

"ಇಬ್ಬರೂ ಜತೆಯಲ್ಲಿ ಊಟ ಮಾಡೋಣ."

"ನಿಮ್ಮಿಷ್ಟದಾಗಲಿ."

"ಇನ್ನೂ ಕೋಪವೇ? ಗಂಡ ಹೆಂಡಿರ ಜಗಳ ಉಂಡೂ . . . . ಎನ್ನುವ ಗಾದೆ ಕೇಳಿಲ್ಲವೇ?"

ಗಾದೆ ಕೇಳಿ ಸುನಂದ ಮುಗುಳ್ನಗೆ ನಕ್ಕಳು. ಸುಂದರನ ಹೃತ್ಕುಮುದ ಬಿರಿಯಿತು.

"ನೀನು ನಕ್ಕದ್ದು ನೋಡಿ ಬಹಳ ದಿವಸವಾಗಿತ್ತು ಸುನೂ."

"ನೀವು ಮುಖಕ್ಕೆ ಗಡಿಗೆ ಕಟ್ಟಿಕೊಂಡೇ ಇರುತ್ತೀರಿ."

ಸುಂದರ ಅವಳ ಟೀಕೆಯನ್ನು ಕೇಳಿಸಿಕೊಳ್ಳದೆ ಎದ್ದು ಅಡಿಗೆಯ ಮನೆಗೆ ಬಂದ. ಸುನಂದೆಯ ಹಟಮಾರಿತನವನ್ನು ಸುಂದರ ನಡೆಯಗೊಡಲಿಲ್ಲ. ಇಬ್ಬರೂ ಜತೆಯಲ್ಲಿ ಕುಳಿತು ಊಟ ಮುಗಿಸಿದರು. ಗಫೂರನಿಗೆ ಊಟಕ್ಕೆ ಬಡಿಸಿ, ಅಡಿಗೆಯ ಮನೆ ಕೆಲಸ ಮುಗಿಸಿಕೊಂಡು ಬರಲು ಸುನಂದ ಅಲ್ಲಿಯೇ ನಿಂತಳು. ಸುಂದರ ಎದ್ದು ಹೊರಗೆ ಬಂದು ಕುಳಿತು ಅಂದಿನ 'ಯುಗವಾಣಿ' ಕೈಯಲ್ಲಿ ಹಿಡಿದ. ಪತ್ರಿಕೆಯಲ್ಲಿದ್ದ ಪಂಕ್ತಿಗಳ ಮೇಲೆ ಕಣ್ಣು ಓಡಿಯಾಡಿತೇ ವಿನಾ ಮನಸ್ಸಿಗೆ ಒಂದೂ ಹಿಡಿಯಲಿಲ್ಲ.

ಸುಂದರನಿಗೆ ಮನೆ ಏಕೋ ಶೂನ್ಯವಾಗಿ ಕಂಡಿತು. 'ಮನೆಯಲ್ಲಿ ನಾನಿರುವ ಒಂದು ಗಳಿಗೆಯೇ ಹೀಗೆ ನನಗೆ ಶೂನ್ಯವಾಗಿ ತೋರಿದರೆ ಸದಾ ಮನೆಯಲ್ಲಿರುವ ಸುನಂದನಿಗೆ ಎಷ್ಟು ಬೇಸರವಾಗಿರಬಹುದು' ಎಂದುಕೊಂಡ.

ಕೈಯಲ್ಲಿ ಹಿಡಿದಿದ್ದ 'ಯುಗವಾಣಿ' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಮೆಲಿನ್ಸ್ ಫುಡ್ (Mellin's Food) ಜಾಹೀರಾತಿನ ಕಡೆ ಅವನ ಲಕ್ಷ್ಯ ಹೋಯಿತು. ನಗೆಮಲ್ಲಿಗೆಯನ್ನು ಚೆಲ್ಲುತ್ತಿದ್ದ ದಷ್ಟಪುಷ್ಟ ಮಗುವೊಂದು ಕುಳಿತಿತ್ತು. ಅದರ ತಲೆಯ ಮೇಲೆ ಕಿರೀಟ. ಆ ಚಿತ್ರವನ್ನು ನೂರಾರು - ಸಾವಿಸಾರು ಸಲ ನೋಡಿದ್ದ. ಪ್ರತಿಯೊಂದು ಪತ್ರಿಕೆಯಲ್ಲಿಯೂ ಮೆಲಿನ್ಸ್ ಫುಡ್ ಜಾಹಿರಾತು - ಅದರಲ್ಲಿ ಮಗುವಿನ ಚಿತ್ರ. ಆದರಿಂದು ಚಿತ್ರ ಅವನ ಭಾವನೆಯನ್ನು ಕೆರಳಿಸಿತು.

'ಮನೆಯಲ್ಲಿ ಮಗುವೊಂದಿದ್ದರೆ ನಾವಿಷ್ಟು ಬೇಸರಪಟ್ಟುಕೊಳ್ಳುತ್ತಿದ್ದೆವೆ? ಸುನಂದ ಹೀಗೆ ಮಾತುಮಾತಿಗೂ ಕನಲುತ್ತಿದ್ದಳೇ? ನಾನು ಮನೆಗೆ ಬಂದೊಡನೆಯೇ ಮಗುವಿನ ಆಟಪಾಟ, ಚೇಷ್ಟೆ, ರಗಳೆಗಳ ಬಗ್ಗೆ ಅವಳೆಷ್ಟು ಹೇಳುತ್ತಿದ್ದಳು. ನಮ್ಮ ಜೀವನವನ್ನು ಮಗು ಎಷ್ಟು ಬೆಸೆಯುತ್ತಿತ್ತು'

ಎಂದುಕೊಂಡ. ಆ ಭಾವನೆ ಸುಂದರನ ಮನಸ್ಸಿಗೆ ಸೂಕ್ಷ್ಮವಾದ ವೇದನೆಯನ್ನೂ ಕೊಟ್ಟಿತ್ತು - ಸಂತೋಷವನ್ನೂ ತಂದಿತ್ತು.

ತನ್ನ ಕೆಲಸ ಮುಗಿಸಿಕೊಂಡು ಸುನಂದ ತೊಟ್ಟಿಗೆ ಬಂದು ಗಂಡನನ್ನು ಕುರಿತು

"ಎಲಡಿಕೆ ಹಾಕಿಕೊಳ್ಳುತ್ತೀರಾ?" ಎಂದಳು.

"ಕೊಟ್ಟರೆ ಹಾಕಿಕೊಳ್ಳುತ್ತೇನೆ."

ಎಲೆಗೆ ಸುಣ್ಣ ಸವರಿ, ತಾಂಬೂಲ ಸಿದ್ಧಗೊಳಿಸುತ್ತಾ ಸುನಂದ

"ಎಲಡಿಕೆ ಹಾಕಿಕೊಳ್ಳಿ ಎಂದರೆ ಎಲ್ಲಿ ತಪ್ಪಾಗುವುದೋ ಎಂದು ಸುಮ್ಮ ನಿರುತ್ತಿದ್ದೆ."

"ನಾನಷ್ಟು ಜಗಳಕಂಟಕನೇ?"

"ಜಗಳಕಂಟಕರಲ್ಲ. ಆದರೆ ನೀವು ನನಗೆ ಪ್ರವೇಶವಿಲ್ಲದ ಯಾವದೋ ಪ್ರಪಂಚದಲ್ಲಿ ವಾಸಮಾಡುತ್ತಿರುವೆಂದು ನನಗೆ ಭಾಸವಾಗುತ್ತದೆ."

"ಹೆಣ್ಣಿನ ಸಹಜಗುಣ (Instinct) ಕವಿ, ರವಿ ಕಾಣಲಾಗದುದನ್ನೂ ಕಾಣುತ್ತದೆ ಎನ್ನುವುದು ಸುಳ್ಳಲ್ಲ ಸುನೂ. ನೀನು ಹೇಳಿದ್ದು ನಿಜ. ನಾನು ಪ್ರತ್ಯೇಕ ಪ್ರಪಂಚದಲ್ಲಿಯೇ ವಾಸಮಾಡುತ್ತಿದ್ದೇನೆ. ಅದರಲ್ಲಿ ಬರಿಯ ಸೂಕ್ಷ್ಮದರ್ಶಕ ಯಂತ್ರ, ಗಾಜಿನ ಕೊಳವೆಗಳು, ದ್ರಾವಕಗಳ ಶೀಷೆಗಳು ತುಂಬಿವೆ. ಆದರೆ ಆ ಪ್ರಪಂಚದಿಂದ ನೀನು ನನ್ನನ್ನು ಆಗಾಗ್ಗೆಯಾದರೂ ಹೊರಗೆ ಎಳೆತರಬೇಕು. ಇಲ್ಲದಿದ್ದರೆ ಈ ಪ್ರಪಂಚವನ್ನೇ ನಾನು ಮರೆತು ಬಿಡಬಹುದು."

"ನನಗಷ್ಟು ಸ್ವಾತಂತ್ರ್ಯ ನೀವು ಕೊಟ್ಟಿಲ್ಲ."

"ಸ್ವಾತಂತ್ರ್ಯ ಕೊಡಬೇಕೆಂದು ನಿರೀಕ್ಷಿಸಬಾರದು - ಅದನ್ನು ತೆಗೆದು ಕೊಳ್ಳಬೇಕು."

ಸುನಂದಾ ಅವನಿಗೆ ತಾಂಬೂಲ ನೀಡಿದಳು. ಅವಳು ಕೊಟ್ಟ ತಾಂಬೂಲ ಭುಜಿಸುತ್ತಾ

"ವಿಜ್ಞಾನಿಗಳು, ಕಲಾವಿದರು, ಸಾಹಿತಿಗಳು, ಸಾಧಕರು ಇವರನ್ನು ನಿತ್ಯರೋಗಿಗಳೆಂದು ಭಾವಿಸಬೇಕು. ಹೆಣ್ಣು ಧಾತ್ರಿಯಾಗಿ ಅವರ ಯೋಗ ಕ್ಷೇಮ ನೋಡಿಕೊಳ್ಳದಿದ್ದರೆ ಲೋಕಕ್ಕೆ ತುಂಬ ಅನ್ಯಾಯವಾಗುತ್ತದೆ."

"ಲೋಕಕ್ಕೇನು ಅನ್ಯಾಯ ?"

"ಲೋಕಕ್ಕೆ ಅವರ ಪ್ರತಿಭೆಯಿಂದಾಗಬೇಕಾದ ಸೇವೆಗೆ ಕುಂದುಂಟಾಗು ತ್ತದೆ."

"ಇದು ತುಂಬ ಹಳೆಯ ಭಾವನೆಯಲ್ಲವೇ ?"

"ಭಾವನೆ ಹಳೆಯದೋ ಹೊಸದೋ ಮುಖ್ಯವಲ್ಲ - ಅದು ಸತ್ಯವೋ ಅಸತ್ಯವೋ ಎಂದು ನಾವು ವಿಚಾರಮಾಡಬೇಕು. ಇಂದು ಆಕಾಶದಲ್ಲಿ ಮೂಡುವ ಸೂರ್ಯ, ಚಂದ್ರ, ನಕ್ಷತ್ರಗಳು ಹೊಸವಲ್ಲ. ಸಹಸ್ರಾರು ವರ್ಷಗಳಿಂದ ಅದೇ ಸೂರ್ಯ, ಅದೇ ಚಂದ್ರ,' ಅದೇ ನಕ್ಷತ್ರಗಳು ಮೂಡುತ್ತಿವೆ. ಸೂರ್ಯ ಚಂದ್ರರು ಹಳೆಯ ಕಾಲದವರೆಂದು ನಾವು ಅವರನ್ನು ನಿರಾಕರಿಸಿಲ್ಲ."

"ವಿಜ್ಞಾನಿಗಳು ದಾರ್ಶನಿಕರಾಗುತ್ತಿದ್ದಾರೆ."

"ವ್ಯಕ್ತಪ್ರಪಂಚಜ್ಞಾನವೇ ವಿಜ್ಞಾನ, ಅವ್ಯಕ್ತಪ್ರಪಂಚಜ್ಞಾನವೇ ದರ್ಶನ."

"ನನಗೆ ಗೊತ್ತಿರುವುದು ಒಂದೇ ಪ್ರಪಂಚ - ಅಜ್ಞಾನ ಪ್ರಪಂಚ."

"ಹಾಗೆ ಹೇಳಿದವರು ಯಾರು?"

"ಯಾರೂ **ಹೇಳಲಿಲ್ಲ.**"

"ನೀನು ಅಜ್ಞಾನಿ ಎಂದು ನಾನು ಭಾವಿಸುತ್ತಿಲ್ಲ ಸುನೂ. ನಾನೆಂದೂ ಮನಸ್ಸನ್ನು ಅಹಂಕಾರಕ್ಕೆ ಮಾಸಲುಮಾಡಿಲ್ಲ. ನಿಷ್ಕಾರಣವಾಗಿ ನಮ್ಮಲ್ಲಿ ಅಂತರ ಬೆಳೆಯುತ್ತಿದೆ. ಅದಕ್ಕಾಗಿ ನಾನೆಷ್ಟು ದುಃಖಿಸುತ್ತಿರುವೆ ಬಲ್ಲೆಯಾ? ನಿಮ್ಮಣ್ಣ ಅಸಂತುಷ್ಟಿಯ ಬಿರುಗಾಳಿ ಬೀಸಿಹೋದರು. ಇಂದಲ್ಲ - ನಾಳೆಯಾದರೂ ನಾನೂ ಒಬ್ಬ ಗಣ್ಯವ್ಯಕ್ತಿಯಾಗುವೆನೆಂಬ ಭರವಸೆಯಿದೆ. ಆ ಆಶಾವೃಕ್ಷಕ್ಕೆ ನೀರೆರೆದು ಪೋಷಿಸಬೇಕಾದವಳು ನೀನು. ನನಗೂ ಆಸೆಯಿದೆ ಸುನೂ - ನನ್ನ ಹೆಂಡತಿ ಸುಖಿಯಾಗಿರಬೇಕು. ನಮ್ಮ ಮಕ್ಕಳು ಪವಿತ್ರವಾದ ಪ್ರೇಮಮಯ ವಾತಾವರಣದಲ್ಲಿ ಬೆಳೆಯಬೇಕೆಂದು ನಾನೂ ತ್ರಿಕರಣಪೂರ್ವಕವಾಗಿ ಬಯಸುತ್ತೇನೆ."

ಸುಂದರನ ಕಳಕಳಿಯ ನುಡಿ ಸುನಂದೆಯ ಮನಸ್ಸನ್ನು ಮಾರ್ದವಗೊಳಿಸಿತು. ಸುಕುಮೋಲ ರಸಭಾವವೊಂದು ಅವಳ ಮೈ, ಮನಸ್ಸುಗಳನ್ನು ವ್ಯಾಪಿಸಿತು.

ಸುಂದರ ಆಡಿದ ಮಾತಿನಲ್ಲಿದ್ದ ಒಂದು ಶಬ್ದ ಅವಳನ್ನು ಚಕಿತಳನ್ನಾಗಿ ಮಾಡಿತು. ಅವಳ ಸುಕೋಮಲತೆ ವಜ್ರಕಾಠಿಣ್ಯಕ್ಕೆಡೆಕೊಟ್ಟಿತು . . . ನಮ್ಮ ಮಕ್ಕಳು . . . . ನಮ್ಮ ಮಕ್ಕಳು . . . . ಅಕ್ಕ ಜಾನಕಿಯ ಚಿತ್ರಚರಿತ್ರೆ ಅವಳ ಹೃದ್ಪಟದ ಮೇಲೆ ಹಾದುಹೋಯಿತು. 'ನನಗೆ ಮಕ್ಕಳು ಬೇಕಾಗಿಲ್ಲ - ಇವರೇಕೆ ಮಕ್ಕಳ ಸುದ್ದಿ ತೆಗೆಯುತ್ತಾರೆ.' ತಕ್ಷಣವೇ ಸತ್ಯ ಶೂಲದಂತೆ ಬಂದು ಅವಳ ಎದೆಯಿರಿಯಿತು. 'ಅವರಿಗೆ ಮಕ್ಕಳು ಬೇಕು. ಮಕ್ಕಳಿಗಾಗಿ ಹಂಬಲಿಸುತ್ತಿದ್ದಾರೆ' ಎಂದುಕೊಂಡಳು. ಅವಳ ಮೈ ಧನುರ್ಮಾಸದ ಚಳಿಗೆ ಸಿಕ್ಕಿದಂತೆ ನಡುಗಿತು.

ಸುಂದರ ಎದ್ದು ಹೆಂಡತಿಯ ಕೈ ಹಿಡಿದೆಬ್ಬಿಸಿ ಒಳಕ್ಕೆ ಕರೆದೊಯ್ದ.

ಸುಂದರ, ಸುನಂದೆಯ ಭವಿಷ್ಯವನ್ನು ನಿರ್ಧರಿಸುವ ಮಹಾರಾತ್ರಿಯಾಯಿತು ಆ ರಾತ್ರಿ.

ಬೆಳಿಗ್ಗೆ ಎದ್ದವನೇ ಸುಂದರ, ದುಸ್ಸ್ವಪ್ನ ಕಂಡವನು ದೇವರ ಮನೆಗೆ ಧಾವಿಸುವಂತೆ ಲ್ಯಾಬೊರೇಟರಿಗೆ ಧಾವಿಸಿದ.

ಅದೇ ಆಲಸ್ಯದಿಂದ ಸುನಂದ ತನ್ನ ನಿತ್ಯಗೆಲಸ ಸಾಗಿಸಿದಳು

ಅವರಿಬ್ಬರ ಮಧ್ಯೆ ಯೋಜನ ಯೋಜನಗಳ ಅಂತರವೇರ್ಪಟ್ಟಿತು.

## ೨೧

ಸಂಜೀವನ ಮನೆಯ ತೊಟ್ಟಿಯಲ್ಲಿ ಕಾಲಿಟ್ಟ ಒಡನೆಯೇ ಪುಷ್ಪನ ಕಣ್ಣು ಸೆಳೆದುದು ಯೇಸುಸ್ವಾಮಿ, ಶ್ರೀ ರಾಮಕೃಷ್ಣರು, ಸ್ವಾಮಿ ವಿವೇಕಾನಂದರ ಪಠಗಳ ಮೇಲೆ ಬೆಳಗುತ್ತಿದ್ದ ಮಲ್ಲಿಗೆಯ ಮಾಲೆಗಳು ಅವಳು ಆಶ್ಚರ್ಯ ಚಕಿತಳಾಗಿ

"ಇದೇನು ಡಿಯರ್" ಎಂದಳು.

"ಹೇಳುತ್ತೇನೆ - ಮೊದಲು ಅಕ್ಕ ಜ್ಯಾಡಿಗೆ ಹೇಗಿದೆ ತಿಳಿಸು."

"ಗುಣವಾಗುತ್ತಿದೆ. ಪ್ರಾಣಾಪಾಯವಿಲ್ಲವೆಂದು ಡಾಕ್ಟರು ಹೇಳಿದರು."

"ನೀನು ಯಾವಾಗ ಬಂದೆ?"

"ಇದೇ ಮಧ್ಯಾಹ್ನ."

"ನನಗೆ ವೈರ್ ಮಾಡಿದ್ದರೆ ಸ್ಟೇಷನ್ನಿಗೆ ಬರುತ್ತಿದ್ದೆ"

"ಎಷ್ಟು ತೊಂದರೆ ಕೊಡುವುದೆಂದು ಸುಮ್ಮನಾದೆ."

"ಜತೆಯಲ್ಲಿ ಅಂಕಲ್ ಬಂದರೇ?"

"ಇಲ್ಲ - ನಾನೊಬ್ಬಳೇ ಬಂದೆ."

"ನನ್ನ ಶನಿವಾರದ ಕಾಗದ ಕೈಸೇರಿತೇ?"

"ಇಲ್ಲಿಗೆ ರೀ - ಡೈರೆಕ್ಟ್ (re-direct) ಆಗಿ ಬಂತು. ಮನೆಗೆ ಬಂದೊಡನೆಯೇ ನೋಡಿದೆ."

"ನಿಮ್ಮಕ್ಕನಿಗೆ ಗುಣವಾದದ್ದು ಕೇಳಿ ತುಂಬ ಸಂತೋಷವಾಯಿತು ಸ್ವೀಟ್."

"ಹಾರಗಳ ವಿಷಯ ಹೇಳಲೇ ಇಲ್ಲವಲ್ಲ."

"ಮೊನ್ನೆ ನಿಮ್ಮ ಮನೆಗೆ ಹೋಗಿದ್ದೆ - ಅಲ್ಲಿಯೇ ಕುಳಿತುಕೊಂಡು ನಿನಗೆ ಕಾಗದ ಬರೆದೆ - ಮನಸ್ಸಿಗೇಕೋ ತುಂಬ ವ್ಯಥೆಯಾಗಿತ್ತು - ಮನೆಗೆ ಬರುವಾಗ ಹಾರಗಳನ್ನು ಕೊಂಡುತಂದು ನನ್ನ ಆರಾಧ್ಯಮೂರ್ತಿಗಳ ಚರಣಗಳಿಗರ್ಪಿಸಿದೆ."

"ಜ್ಯೂಡಿಗೆ ಗುಣವಾಗಲೆಂದು ಪ್ರಾರ್ಥಿಸಿದಿರಾ?"

"ಹೌದು."

ಮುಖ ಮುಚ್ಚಿಕೊಂಡು ಪುಷ್ಪ ಬಿಕ್ಕಿ ಬಿಕ್ಕಿ ಅತ್ತಳು. ಅವಳು ಸಮಾಧಾನಗೊಳ್ಳುವವರೆಗೆ ತಡೆದು ಸಂಜೀವ

"ಏಕೆ ಡಾರ್ಲಿಂಗ್ - ಅದಕ್ಕೇಕೆ ಇಷ್ಟು ಅಳಬೇಕು."

"ಜ್ಯೂಡಿಗೆ ಗುಣವಾದದ್ದು ಡಾಕ್ಟರ್ ಇಂಜಕ್ಷನ್ನಿಂದಲ್ಲ ದೊರೆ - ನಿಮ್ಮ ಪ್ರಾರ್ಥನೆಯಿಂದ. ನನ್ನಿಂದ ನಿಮಗೆಷ್ಟು ತೊಂದರೆ."

"ಹಾಗೆ ನೀನು ಹೇಳಲೇಬಾರದು."

"ಈ ಮೂರು ದಿವಸ ಏನು ಮಾಡಿದಿರಿ? ಪಿಕ್ಚರಿಗೆ ಹೋಗಿದ್ದಿರಾ?"

"ಪಿಕ್ಚರ್‌ಹೌಸಿನಲ್ಲಿ ಕೂಡಲು ಮನಸ್ಸಾಗುತ್ತದೆಯೇ? ಮನೆಯಾಯಿತು - ನಾನಾಯಿತು. ಮನೆ ಬೇಸರವಾದರೆ ನಿಮ್ಮ ಮನೆಗೆ ಹೋಗಿ ಸ್ವಲ್ಪ ಹೊತ್ತು ನಿನ್ನ ರೂಮಿನಲ್ಲಿ ಕುಳಿತಿದ್ದು ಬರುತ್ತಿದ್ದೆ. ನೀನೇನು ಮಾಡುತ್ತಿದ್ದೆ ಡಾರ್ಲಿಂಗ್?"

"ಅಕ್ಕನ ಜತೆಬಿಟ್ಟು ಕದಲಲಿಲ್ಲ. ಭಾವ ಒಂದು ದಿನ ಬಲವಂತದಿಂದ ಪಿಕ್ಚರಿಗೆ ಕರೆದುಕೊಂಡು ಹೋಗಿದ್ದರು - ಅದು ಯಾವ ಪಿಕ್ಚರೋ ಗಮನಿಸಲೂ ಇಲ್ಲ."

"ಸದ್ಯ ದೇವರ ದಯೆಯಿಂದ ಜ್ಯೂಡಿ ಗಂಡಾಂತರದಿಂದ ಪಾರಾದರಲ್ಲ ಅಷ್ಟೇ ಸಾಕು."

"ದೇವರ ದಯೆಯಲ್ಲ - ನಿಮ್ಮ ದಯೆ. ಜ್ಯೂಡಿಯೂ ಅದೇ ಹೇಳಿದಳು. ನಿಮ್ಮ ವಿಷಯ ನಾವಿಬ್ಬರೂ ಎಷ್ಟು ಮಾತನಾಡಿದೆವೋ?"

"ಬೇರೆ - ಅದಕ್ಕೂ ಒಳ್ಳೆಯ ವಿಷಯವಿರಲಿಲ್ಲವೇ?"

"ನನಗಿರಲಿಲ್ಲ ದೊರೆ. ಜ್ಯೂಡಿಗೂ ಇರಲಿಲ್ಲವೆಂದು ಕಾಣುತ್ತದೆ. ನಾನು ಯಾವ ವಿಷಯ ತೆಗೆದರೂ ನಿಮ್ಮ ವಿಷಯವನ್ನೇ ಕೇಳುತ್ತಿದ್ದಳು."

"ನಿಮ್ಮ ಭಾವ ಸುಮ್ಮನಿರುತ್ತಿದ್ದರೇ ?"

"ಭಾವನಿಗೇಕೆ ಅಸಮಾಧಾನವಾಗಬೇಕು."

"ನಾನು ಪ್ರತಿಕಕ್ಷಿಯಾದೆನೆಂದು ?"

"ಹೋಗಿ ದೊರೆ - ಸುಮ್ಮನೆ ನನ್ನನ್ನೇಕೆ ರೇಗಿಸುವಿರಿ ?"

"ನಾಳೆ - ಒಂದು ವೇಳೆ ನಾನು ಅಡ್ಡಹಾದಿ ಹಿಡಿದರೆ ?"

"ನೀವು ಅಡ್ಡಹಾದಿ ಹಿಡಿಯುವವರಲ್ಲ ಎಂದು ನನಗೆ ನಂಬಿಕೆಯಿದೆ."

"ಅದು ಸರಿ - ಒಂದು ವೇಳೆ ನಾನು ದಾರಿ ತಪ್ಪಿದರೆ ?"

"ಬೇಡವೆಂದು ಹೇಳಲು ನಾನು ಯಾರು ?"

"ನೀನು ಏನು ಮಾಡುವೆ."

"ಅತ್ತುಕೊಂಡು ಕೂಡುತ್ತೇನೆ. ಅನ್ನ ಸತ್ಯಾಗ್ರಹ ಮಾಡುತ್ತೇನೆ."

"ಅಲ್ಲಿಗೂ ನಾನು ದಾರಿಗೆ ಬರದಿದ್ದರೆ ?"

"ಸಂತೋಷವಿದ್ದಂತೆ ಮಾಡಲಿ ಎಂದುಕೊಂಡು ಸುಮ್ಮನಾಗುತ್ತೇನೆ."

"ನಿಜವಾಗಿ !"

"ಹೂ ! ನನ್ನ ವಸ್ತುವನ್ನು ನಾನಷ್ಟು ಸುಲಭವಾಗಿ ಬಿಟ್ಟುಕೊಡುತ್ತೇನೆಂದು ಭಾವಿಸಿರುವಿರಾ ?. . , ಆದರೆ ಹಾಗೆ ಮಾಡುವಿರಾ ದೊರೆ ?"

"ಹುಚ್ಚಿ ! ಪರಿಹಾಸ್ಯವನ್ನು ನಿಜವೆಂದು ಭಾವಿಸಿವೆಯಾ ? ಹೃದಯವನ್ನು ಹರಿದು ಹಂಚುವುದಕ್ಕೆ ಅದೇನು ಹಳೀ ನ್ಯೂಸ್‌ಪೇಪರ್ ಕೆಟ್ಟುಹೋಯಿತೇ ? - ನನ್ನ ಮನೋಭಾವ - ಅಭಿರುಚಿಗನುಗುಣವಾದ ಜೀವಗೆಳತಿ ಬೇಕೆಂದು ಹಾರೈಸುತ್ತಿದ್ದೆ. ಗುರುಕಟಾಕ್ಷದಿಂದ ನೀನು ನನಗೆ ಲಭಿಸಿದೆ."

"ನಾನು ನಿಮ್ಮ ಜೀವಗೆಳತಿಯಾಗಬಲ್ಲೆನೆಂದು ಯಾವ ನಂಬಿಕೆ."

"ಉಮರ್‌ಖಯ್ಯಂ ಅದನ್ನು 'ಕುರುಡು ನಂಬಿಕೆ' (Blind undertanding) ಎಂದು ಕರೆಯುತ್ತಾನೆ- ವಿಚಾರಕ್ಕೆ ಎಟುಕದ ತಿಳುವಳಿಕೆ ಒಂದಿದೆ. ಅದನ್ನೇ ಅನುಭಾವಿಗಳು ಅಪರೋಕ್ಷಾನುಭೂತಿ ಎಂದು ಕರೆಯುತ್ತಾರೆ. ಪ್ರತಿಯೊಬ್ಬ ಮಾನವನಲ್ಲಿಯೂ ಅನುಭೂತಿ ಸುಪ್ತವಾಗಿರುತ್ತದೆ. ಇದು ನಮ್ಮ ಜೀವನಕ್ಕೆ ಬೇಕಾದ ಮಾರ್ಗದರ್ಶನ ಮಾಡುತ್ತಿರುತ್ತದೆ. ಮಾನವ ಅಜ್ಞಾನದಿಂದಲೊ ಅಹಂಕಾರದಿಂದಲೋ ಕಿವಿ ಮುಚ್ಚಿಕೊಳ್ಳುತ್ತಾನೆ.

ಬುದ್ಧಿಯೇ ಎಲ್ಲಕ್ಕೂ ಮಿಗಿಲಾದುದು ಎಂದು ನಂಬುತ್ತಾನೆ. ಬುದ್ಧಿ ಅವನನ್ನು ಎಲ್ಲಿಗೋ ಒಯ್ದು ದಾರಿತಪ್ಪಿಸಿ ಕೈಬಿಡುತ್ತದೆ."

"ಬುದ್ಧಿ - ವಿಚಾರ ಮಾನವನಿಗೆ ಬೇಡವೇ ?"

"ಬೇಡವೆಂದವರು ಯಾರು ? ವೈದ್ಯನಾಗುವವನು ದೇಹಶಾಸ್ತ್ರ ಅಭ್ಯಾಸ ಮಾಡಿಕೊಳ್ಳಬೇಕು. ದೇಹಶಾಸ್ತ್ರದ ಜ್ಞಾನವೇ ಅವನ ಗಮ್ಯವಲ್ಲ. ಅದು ಗತಿ ಮಾತ್ರ. ಹಾಗೇ ಬುದ್ಧಿಯು ಗತಿಯಲ್ಲಿ ಮಾನವ ಅನಂತಜ್ಞಾನವನ್ನರಸಬೇಕು."

"ನೀವು ಮಾತನಾಡುವುದು ಕೇಳಿದರೆ, ಯಾವವೊ ಜನ್ಮದಲ್ಲಿ ನೀವು ಸನ್ಯಾಸಿಗಳಾಗಿರಬಹುದು ಎಂದೆನಿಸುತ್ತದೆ."

"ಇರಬಹುದು - ಆದರೆ ಈ ಜನ್ಮದಲ್ಲಿ ನಾನು ಗೃಹಸ್ಥ. ಎಲ್ಲವನ್ನೂ ತೊರೆದು ಸನ್ಯಾಸಿಯಾಗುವುದು ಸುಲಭ - ಎಲ್ಲವನ್ನೂ ಕಟ್ಟಿಕೊಂಡು ಸನ್ಯಾಸಿಯಾಗುವುದು ಕಷ್ಟ."

"ನಿಮ್ಮ ಮಾತು ಕೇಳಿದರೆ ವೀಣಾಗಾನ ಕೇಳಿದಂತಾಗುತ್ತದೆ."

"ಆ ವೀಣೆ ನುಡಿಸುತ್ತಿರುವವಳು ನೀನೇ !"

"ದೊರೆ - ಪ್ರೇಮ, ಭಯಗಳೇಕೆ ಒಂದನ್ನೊಂದು ಅನುಸರಿಸುತ್ತವೆ."

"ಯಾವದಕ್ಕೂ ನೀನು ಭಯಪಡಬೇಕಾಗಿಲ್ಲವಲ್ಲ."

"ಒಮ್ಮೊಮ್ಮೆ ಭಯವಾಗುತ್ತದೆ. ದೈವಿಕವಾದ ನಿಮ್ಮ ಸರಳ ಸೌಜನ್ಯ ನೋಡಿ ಇದಕ್ಕೆ ನನ್ನ ಪ್ರೇಮ ಸರಿಯಾಗಬಲ್ಲುದೇ ಎಂದು ಯೋಚಿಸುತ್ತೇನೆ."

"ವಿರಾಟ್‌ಸ್ವರೂಪವಾದ ಪ್ರೇಮದ ಪ್ರಮಾಣ ಕಂಡು ಹಿಡಿಯಲು ಯಾರು ಸಮರ್ಥರಾಗಿದ್ದಾರೆ ? ಅವರ ಶಕ್ತಿಯ ವ್ಯಾಪ್ತಿಯನ್ನು ನಮ್ಮ ಅನುಭವದ ಅಳತೆಗೋಲಿನಿಂದ ಅಳೆಯಲು ಸಾಧ್ಯವೇ ? ಯೇಸುವಿನ ಪ್ರೇಮವನ್ನೇ ನೋಡು - ಅದು ಹೇಗೆ ಕಾಲ, ದೇಶ, ವರ್ತಮಾನಗಳನ್ನು ಮೀರಿನಿಂತಿದೆ."

"ಎಲ್ಲಿ ಯೇಸು ? - ಎಲ್ಲಿ ನಾನು !"

"ನೀನು, ನಾನು, ವಿಶ್ವ - ನಮ್ಮೆಲ್ಲರ ಪ್ರೇಮ, ತ್ಯಾಗ, ಸೇವೆಯ ಮೊತ್ತವೇ ಯೇಸು. ನಿನ್ನನ್ನು ಬಿಟ್ಟು ಯೇಸುವಿಲ್ಲ - ಯೇಸುವನ್ನು ಬಿಟ್ಟು ನೀನಿಲ್ಲ."

ಭಗವದ್ವಾಣಿಯೇ ತನ್ನ ಕಿವಿಯ ಮೇಲೆ ಬೀಳುತ್ತಿದೆ ಎಂದು ಪುಷ್ಪ ಭಾವಿಸಿದಳು. ಬೈಬಲ್ಲಿನ ಮೇರಿ ಮಾಗ್ಡಾಲಾ ಕಥೆ ಅವಳಿಗೆ ನೆನಪಾಯಿತು. ಭಗವಂತನ ಆ ದಯಾದ್ರ್ರನುಡಿಗಳು - 'ಹೆಣ್ಣೇ ತಪ್ಪು ಮಾಡಿರುವೆ, ಮತ್ತೊಮ್ಮೆ ತಪ್ಪು ಮಾಡಬೇಡ.' ಆ ಅವನೇ ಸಂಜೀವನ ಬಾಯಲ್ಲಿ ಈ ಮಾತು ಆಡಿಸುತ್ತಿರುವನೇ ?

ಅನಿರ್ವಚನೀಯ ಭಕ್ತಿಭಾವದಲ್ಲಿ ಪುಷ್ಪ ಪರವಶಳಾದಳು. ಸಹಜ ಶ್ರದ್ಧಾಭಕ್ತಿಗಳಿಂದ ಸಂಜೀವನ ಪಾದಗಳ ಮೇಲೆ ಉರುಳಿ ಅದಕ್ಕೆ ಮುದ್ದಿಟ್ಟಳು. ಸಂಜೀವ ಅವಳನ್ನು ಅಕ್ಕರೆಯಿಂದ ಎಬ್ಬಿಸಿ ಅಪ್ಪಿ ಮುದ್ದಿಟ್ಟ. ಕ್ಷಣಕಾಲ ಹಿಂದೆ ಪುಷ್ಪನ ಮನಸ್ಸಿನಲ್ಲೆದ್ದಿದ್ದ ಬಿರುಗಾಳಿ ಶಾಂತವಾಗಿ ತಂಬೆಲರು ಬೀಸಿತು.

೨೨

ಸೋಮಶೇಖರರಾಯರು ತಾವೇ ಚಾಮರಾಜನಗರಕ್ಕೆ ಹೋಗಿ ಬರಬೇಕೆಂದು ವಿಚಾರಮಾಡುತ್ತಿರುವಲ್ಲಿ ರಂಗಣ್ಣನ ಕಾಗದವೂ ಬಂದಿತು. ರಾಯರನ್ನು ಕಾಣಲು ಬಂದಿದ್ದ ಅನಂತಯ್ಯ ಬೆಂಗಳೂರಿನ ವಿದ್ಯಮಾನಗಳು ವರದಿ ಒಪ್ಪಿಸಿದ್ದ. ರಾಯರು ಅವನು ತಿಳಿಸಿದ ವಿವರಗಳನ್ನು ಕೇಳಿ ಚಕಿತ ರಾದರು.

"ನಾವು ತಿಳಿದುಕೊಂಡಿದ್ದುದಕ್ಕಿಂತಲೂ ಘಾಟಿ ಈ ಹುಡುಗಿ ಅನಂತಯ್ಯ."

"ಸುಭಾಷಿತ ಕೇಳಿಲ್ಲವೇ ಸ್ವಾಮಿ - ಔದುಂಬರಾಣಿ ಪುಷ್ಪಾಣಿ . . ."

"ಒಳ್ಳೆಯ ಗ್ರಹಚಾರಕ್ಕೆ ಬಂತಲ್ರೀ - ಈಗೇನು ಮಾಡುವುದು."

"ನೀವು ಮೊದಲು ಚಾಮರಾಜನಗರಕ್ಕೆ ಹೋಗಿಬನ್ನಿ, ಕೊನೆಯ ಪ್ರಯತ್ನ ಮಾಡಿಬಿಡೋಣ."

"ಏನು ಮಾಡುವುದು ?"

"ಸಂಜೀವನನ್ನು ಕಂಡು ಅವನ ಕಣ್ಮಣಿಯ ವಿಷಯ ತಿಳಿಸೋಣ. ಅವನಿಗೆ ಸಾಕ್ಷಿ ಒದಗಿಸುವುದು ಕಷ್ಟವಾಗಿಲ್ಲ - ಕನಕಮ್ಮನೂ ನಮಗೆ ಸಹಾಯಕಳಾಗಿದ್ದಾಳೆ."

"ಪರಿಣಾಮ ಒಂದು ಹೋಗಿ ಒಂದಾದರೇನುಮಾಡುವುದು ?"

"ಏನಾಗುತ್ತದೆ ಸ್ವಾಮಿ."

"ರಂಗಣ್ಣ ಹಯಬರಟ - ನಾಲ್ಕು ಮಾತು ಆಡಲೂ ಬಲ್ಲ, ಆಡಿಸಿಕೊಳ್ಳಲೂ ಬಲ್ಲ. ಸಂಜೀವ ಹಾಗಲ್ಲ. ಮೊದಲಿನಿಂದಲೂ ಬಹಳ ಸೂಕ್ಷ್ಮ ಪ್ರಕೃತಿ ಅವನದು. ನಾವು ಹೇಳಿದ್ದು ಕೇಳಿ ಅವನ ತಲೆಕೆಟ್ಟರೆ ಏನುಮಾಡುವುದು ?"

"ಪುಷ್ಪನನ್ನು ಕಟ್ಟಿಕೊಂಡು ಅವನು ಪಡುವ ಪಾಡಿಗಿಂತ ಇದು ಮೇಲಲ್ಲವೇ ?"

"ನಾನು ಚಾಮರಾಜನಗರಕ್ಕೆ ಹೋಗಿಬರುತ್ತೇನೆ. ಆಮೇಲೆ ಮಾತನಾಡೋಣ – ರಂಗಣ್ಣನ ಹೆಂಡತಿಗೆ ಏನಾಗಿತ್ತು ಅನಂತಯ್ಯ."

"ಕ್ಷಯವೆಂದು ಕಾಣುತ್ತದೆ ಸ್ವಾಮಿ."

"ನಿರ್ಭಾಗ್ಯ ದಾಮೋದರ - ಅವನಿಗೆ ಕಂಕಣಬಲವಿಲ್ಲ, ಮದುವೆ ಹುಚ್ಚು ಬಿಡುವಹಾಗಿಲ್ಲ. ಜತೆಯಲ್ಲಿ ನೀವೂ ಬರುವಿರೇನು ?"

"ನಾನೇಕೆ ಸ್ವಾಮಿ. ನಾನು ಇಲ್ಲಿಯೇ ಇರುತ್ತೇನೆ. ನೀವು ಹೋಗಿ ಬನ್ನಿ" ಎಂದು ಹೇಳಿದ.

ಸೋಮಶೇಖರರಾಯರು ಮಾರನೆಯ ಬೆಳಿಗ್ಗೆಯ ಗಾಡಿಗೆ ಹೊರಟು ರಂಗಣ್ಣನ ಕೈಯಲ್ಲಿ ಮಾತನಾಡಿಕೊಂಡು ಅದೇ ಸಂಜೆ ನಂಜನಗೂಡು ತಲುಪಿದರು. ಅನಂತಯ್ಯ ಅವರ ದಾರಿಯನ್ನೇ ನೋಡುತ್ತಿದ್ದ.

ಇಬ್ಬರೂ ಜತೆಗೂಡಿ ಮಾರನೆಯ ಬೆಳಿಗ್ಗೆ ಮೈಸೂರಿಗೆ ಪ್ರಯಾಣ ಬೆಳಸಿದರು.

ರಾಯರ ಮುಖ ನೋಡಿದ ಕೂಡಲೆ ಜಾನಕಮ್ಮನಲ್ಲಿ ಸುಪ್ತವಾಗಿದ್ದ ಕ್ರೋಧ ಉಕ್ಕೇರಿಬಂತು. ರಾಯರು ಸಾವಧಾನದಿಂದ ಮಾತು ಆರಂಭಿಸಿದರು.

"ಚಾಮರಾಜನಗರಕ್ಕೆ ಹೋಗಿ ಬಂದೆನಮ್ಮ. ನಿನ್ನ ಯಜಮಾನರನ್ನು ಕಂಡುಬಂದೆ."

"ಏನು ಹೇಳಿದರು ?"

"ಹೆಂಡತಿ ಹೋದ ದುಃಖದಲ್ಲಿದ್ದ."

"ದುಃಖ - ಅವರಿಗೆಂಥ ದುಃಖ. ಈಗಾಗಲೇ ಇನ್ನೊಂದು ಮದುವೆ ಪ್ರಯತ್ನ ನಡೆಸಿರಬಹುದು."

"ಬಹಳ ಬಿರುಸುಮಾತನಾಡುತ್ತೀ ಜಾನಕಮ್ಮ."

"ನಯವಾಗಿ ಮಾತನಾಡುವುದು ನನಗೆ ಸಾಧಿಸಿಲ್ಲ. ಆಕೆಗೆ ಏನಾಗಿತ್ತಂತೆ?"

"ಕ್ಷಯವಂತೆ!"

"ಕ್ಷಯ!"

"ನಿನಗೆ ನಂಬಿಕೆಯಾದಂತಿಲ್ಲ"

"ಆ ಹುಡುಗಿ ಬದುಕುವುದಿಲ್ಲ ಎನ್ನುವ ವಿಷಯ ಮೊದಲೇ ನಂಬಿಕೆಯಾಗಿತ್ತು."

"ರಂಗಣ್ಣನ ಮೇಲೆ ಕೊಲೆಯ ಅಪಾದನೆ ಹೊರಿಸುವೆಯೇನು?"

"ಕತ್ತುಹಿಸುಕಿಕೊಂದರೆ ಮಾತ್ರ ಕೊಲೆಯೇ? ಅವರು ಮಾಡಿದ ಕರ್ಮ ಅವರು ಅನುಭವಿಸುತ್ತಾರೆ. ಅವನ್ನು ಕಟ್ಟಿಕೊಂಡು ನನಗೇನಾಗಬೇಕು - ನನ್ನ ಮಕ್ಕಳ ವಿಷಯ ಏನುಮಾಡಿದಿರಿ ಸ್ವಾಮಿ."

"ರಂಗಣ್ಣನ ಹತ್ತಿರ ಮಾತನಾಡಿದ್ದೇನೆ. ಆಗಬಹುದು ಎಂದು ಅವನು ಹೇಳಿದ್ದಾನೆ."

"ಆಗಬಹುದು ಎನ್ನುವ ಮಾತು ಹೇಳುತ್ತಲೇ ಇದ್ದಾರೆ. ಆದರೆ ಇದು ಇತ್ಯರ್ಥವಾಗುವುದು ಯಾವಾಗ? ಇಬ್ಬರು ಮಕ್ಕಳನ್ನು ಕಟ್ಟಿಕೊಂಡು ನಾನು ಪೂರೈಸುವುದು ಹೇಗೆ? ನನ್ನ ವಿಷಯ ನೀವೂ ಉದಾಸೀನ ಮಾಡುವಿರೆಂದು ನಾನು ತಿಳಿದಿರಲಿಲ್ಲ ಸೋಮಶೇಖರರಾಯರೇ. ನಿಮ್ಮ ಮಗಳಿಗೆ ಈ ಸ್ಥಿತಿ ಬಂದು, ಅವಳು ನಾನು ಅನುಭವಿಸುತ್ತಿರುವಂತೆ ಅನುಭವಿಸುತ್ತಿದ್ದರೆ ನೀವು ಸುಮ್ಮನೆಕೂಡುತ್ತಿದ್ದಿರಾ? ಕೋರ್ಟು ಕಛೇರಿ ಹತ್ತಬಾರದು ಎಂದು ನಾನು ತಡೆದುಕೊಂಡಿದ್ದೇನೆ. ನೋಡಿ ಸ್ವಾಮಿ - ನೀವು ಬೇಗ ಇತ್ಯರ್ಥಮಾಡದಿದ್ದರೆ ನಾನು ಬೇರೆ ಲಾಯರಿಟ್ಟು ಕೋರ್ಟಿನಲ್ಲಿ ಇತ್ಯರ್ಥಮಾಡಿಸುತ್ತೇನೆ."

"ಆ ವಿಷಯ ಮಾತನಾಡುವುದಕ್ಕೇ ಇಲ್ಲಿಗೆ ಬಂದೆನಮ್ಮಾ."

"ಏನು ಯೋಚನೆಮಾಡಿದ್ದೀರಿ ಅದನ್ನಾದರೂ ತಿಳಿಸಿ."

"ನಿನ್ನ ಯಜಮಾನನಿಗೂ ನನಗೂ ಆದ ಮಾ
ತಿಳಿಸಲೋ?.

"ತಿಳಿಸಿ ಸ್ವಾಮಿ."

"ನೀನೂ ಮಕ್ಕಳೂ ಚಾಮರಾಜನಗರಕ್ಕೇ ಹೋಗ
ಅಭಿಲಾಷೆ. ಏನೋ ಕಳೆದುಹೋದದ್ದು ಹೋಯಿತು - ನೀವಿಬ್ಬ
ವಾಗಿ ಬಾಳುವೆ ಮಾಡುವುದು ಎಲ್ಲರಿಗೂ ಸಂತೋಷವನ್ನುಂಟುಂ

"ನಾನು ಚಾಮರಾಜನಗರಕ್ಕೆ ಹೋಗಿ ಅವರ ಜತೆ ಸಂಸಾ
ವಿಷಯ ಮುಗಿದುಹೋಯಿತೆಂದು ಅವತ್ತೇ ತಿಳಿಸಿದೆನಲ್ಲ. ಮಂದಾಸನದಲ್ಲಿ ನನ್ನನ್ನಿಟ್ಟು ಪೂಜೆ ಮಾಡಿದರೂ ನಾನು ಅಲ್ಲಿಗೆ ಹೋಗ
ಸಿದ್ಧವಾಗಿಲ್ಲ."

"ಇದೇ ಕೊನೆಯ ಮಾತೇ?"

"ನಿಸ್ಸಂದೇಹವಾಗಿ. ಮಕ್ಕಳ ಆಸ್ತಿಯ ಇತ್ಯರ್ಥಮಾಡುವುದು ನಿಮ್ಮಿಂದ ಸಾಧ್ಯವೋ ಸಾಧ್ಯವಿಲ್ಲವೋ ಹೇಳಿಬಿಡಿ ಸ್ವಾಮಿ."

"ನಿನ್ನ ಇಷ್ಟದಂತೆಯೇ ಆಗಲಮ್ಮ. ಈ ಸಾರಿ ನಾನೇ ಚಾಮರಾಜನಗರಕ್ಕೆ ಹೋಗಿ ಅಲ್ಲಿಯೇ ಕುಳಿತುಕೊಂಡು ಈ ವಿಷಯ ವ್ಯವಸ್ಥೆಮಾಡಿಸುತ್ತೇನೆ. ನನ್ನ ಮಾತು ಅವನು ಕೇಳದಿದ್ದರೆ ಕೋರ್ಟು ಇದ್ದೇ ಇದೆ."

ಜಾನಕಮ್ಮನ ಮನಸ್ಸಿಗೆ ನೆಮ್ಮದಿಯಾಯಿತು.

"ನಾನು ಒರಟಾಗಿ ಏನಾದರೂ ಅಂದಿದ್ದರೆ ಕ್ಷಮಿಸಿ ಸ್ವಾಮಿ."

"ನಿನ್ನ ಸಂಕಟ ನಾನು ಬಲ್ಲೆ ಜಾನಕಮ್ಮ. ಇಂಥ ಸಂದರ್ಭಗಳಲ್ಲಿ ಆತುರಪಟ್ಟರೆ ಕೆಲಸ ಕೆಟ್ಟುಹೋಗುತ್ತದೆ. ನಿನಗೂ ನಿನ್ನ ಯಜಮಾನನಿಗೂ ರಾಜಿಮಾಡಿಸುವುದು ನನ್ನ ಕರ್ತವ್ಯ. ನಿಮ್ಮ ವೈಮನಸ್ಯ ಹೆಚ್ಚಿಸಿ ಸಂಸಾರದ ವಿಷಯ ಕೋರ್ಟಿಗೆಳೆಯುವುದಕ್ಕೆ ನಾನು ಇಷ್ಟಪಡಲಿಲ್ಲ. ಅದಕ್ಕೇ ನಾಲ್ಕು ದಿವಸ ಕಳೆಯಲಿ ಎಂದು ತಡಮಾಡಿದೆ."

"ಇನ್ನು ನಿಮ್ಮನ್ನು ಆಕ್ಷೇಪಣೆ ಮಾಡುವುದಿಲ್ಲ. ನಾನು ಹಿಂದಿರುಗಿ ಚಾಮರಾಜನಗರಕ್ಕೆ ಹೋಗಿ ಅವರ ಜತೆ ಸಂಸಾರ ಮಾಡುವ ವಿಷಯವೊಂದು ಹೇಳಬೇಡಿ. ಉಳಿದ ವಿಷಯ ನೀವು ಹೇಗೆ ಇತ್ಯರ್ಥಮಾಡಿಸಿದರೂ ನನಗೆ ಸಂತೋಷವೇ."

ಖ್ಯ ವಿಷಯ ನಿನ್ನ ಹತ್ತಿರ ಯೋಚನೆಮಾಡುವುದಕ್ಕೆ

. ಯಾರ ವಿಷಯ ?"

ನನ ವಿಷಯು."

ಮಾಡಿದ್ದಾನೆ."

ಶ್ಚಿಯನ್ ಹುಡುಗಿಯನ್ನು ಕಟ್ಟಿಕೊಳ್ಳುವುದಕ್ಕೆ ಹೊರಟಿರುವ ಗೊತ್ತಿರಬಹುದು."

ದೆ."

ಲಗ್ನ ಸಾಧಿಸಿದರೆ ಹುಡುಗನ ಭವಿಷ್ಯ ಹಾಳಾಗಿಹೋಗುತ್ತದೆ."

"ಪುಷ್ಪನನ್ನು ಅವನು ಕೈಬಿಡುವಂತಿಲ್ಲ."

"ಆ ಹುಡುಗಿ ಚರಿತ್ರೆ ನಿನಗೆ ಗೊತ್ತಿಲ್ಲವೆಂದು ಕಾಣುತ್ತದೆ. ಅನಂತಯ್ಯನವರನ್ನು ಕೇಳು ಎಲ್ಲಾ ವಿಶದವಾಗುತ್ತದೆ."

ಅನಂತಯ್ಯ ತಾನು ಪತ್ತೆಹಚ್ಚಿದ್ದ ಎಲ್ಲ ವಿಷಯಗಳನ್ನೂ ನಿರೂಪಿಸಿದ. ಜಾನಕಮ್ಮ ಅವನ ಹೇಳಿಕೆ ಕೇಳಿ ಅವಾಕ್ಕಾದಳು.

"ಈಗೇನಮ್ಮ ಹೇಳುತ್ತೀ ?" ಎಂದು ರಾಯರು ಕೇಳಿದರು.

"ಅದು ಇಷ್ಟು ಕೆಟ್ಟ ಹುಡುಗಿ ಎಂದು ನನಗೆ ಗೊತ್ತಿರಲಿಲ್ಲ"

"ನೀವು ಹೇಳುತ್ತಿರುವುದು ನಿಜವೇ ?"

"ಯಾವದೋ ಹುಡುಗಿಯ ಮೇಲೆ ನಾನೇಕಮ್ಮ ಇಲ್ಲಸಲ್ಲದ್ದನ್ನು ಹೇಳಬೇಕು."

"ಈಗ ನಾನೇನು ಮಾಡಬೇಕು."

"ಈ ಲಗ್ನ ನಿಲ್ಲಿಸಲು ಪ್ರಯತ್ನಿಸಲೇ ಬೇಕು."

"ನಾನು ಅನಂತಯ್ಯ ಸಂಜೀವನ ಮನೆಗೇ ಹೋಗಿ ಈ ವಿಷಯ ಪ್ರಸ್ತಾಪಿಸುತ್ತೇವೆ. ಅವನು ನಮ್ಮ ಮಾತು ಕೇಳುವ ಸಂಭವ ಕಡಿಮೆ. ನಿನ್ನ ಸಲಹೆ ಏನಾದರೂ ಕೇಳಿದರೆ ಅವನಿಗೆ ಸರಿಯಾಗಿ ಬುದ್ಧಿ ಹೇಳಬೇಕು."

"ಖಂಡಿತವಾಗಿ ಹೇಳುತ್ತೇನೆ"

ಎಂದು ಜಾನಕಮ್ಮ ಆಶ್ವಾಸನಕೊಟ್ಟಳು. ಪುಷ್ಪನನ್ನು ಲಗ್ನವಾಗುವ ವಿಷಯದಲ್ಲಿ ಸಂಜೀವ ತಳೆದಿದ್ದ ಧೋರಣೆಯನ್ನು ನೆನಪುಮಾಡಿಕೊಂಡು

ಜಾನಕಮ್ಮ ಗಡಗಡನೆ ನಡುಗಿದಳು. 'ಯಾವ ಗ್ರಹ ಇಷ್ಟು ಕ್ರೂರವಾಗಿ ಸಂಜೀವನನ್ನು ಕಾಡುತ್ತಿದೆ' ಎಂದುಕೊಂಡು ಮಮ್ಮಲ ಮರುಗಿದಳು.

ರಾಯರನ್ನೂ, ಅನಂತಯ್ಯನನ್ನೂ ಸಂಜೀವ ವಿಶ್ವಾಸದಿಂದ ಬರಮಾಡಿಕೊಂಡ. ಕೆಲವೇ ದಿವಸಗಳ ಹಿಂದೆ ತನಗೂ ಅವರಿಗೂ ಆದ ಘರ್ಷಣೆಯನ್ನು ಅವನು ಮನಸ್ಸಿನಲ್ಲಿಟ್ಟುಕೊಂಡಿರಲಿಲ್ಲ. ಲಗ್ನದ ದಿನವನ್ನು ನಿರೀಕ್ಷಿಸುತ್ತಿದ್ದ ಅವನ ಮನಸ್ಸು ಉಲ್ಲಾಸಗೊಂಡಿತ್ತು. ತನ್ನ ಆನಂದದಲ್ಲಿ ಬೆರೆತು ಜಗತ್ತೇ ಉಲ್ಲಸಿತವಾದಂತಿತ್ತು ಅವನಿಗೆ.

ರಾಯರಿಗೂ, ಅನಂತಯ್ಯನಿಗೂ ತಾನೇ ಕಾಫಿಮಾಡಿ ತಂದಿತ್ತು ಜತೆಯಲ್ಲಿ ಕುಳಿತುಕೊಂಡು

''ಏನು ಸ್ವಾಮಿ, ಇಷ್ಟು ದೂರ ದಯೆಮಾಡಿಸಿದಿರಿ'' ಎಂದ.

''ಕೋರ್ಟಿನ ಕೆಲಸವಿತ್ತು ಬಂದಿದ್ದೆ. ಮೈಸೂರಿಗೆ ಬಂದಮೇಲೆ ನಿನ್ನ ನೋಡದೆ ಊರಿಗೆ ಹೋಗುವುದಕ್ಕೆ ಮನಸ್ಸೊಪ್ಪಲಿಲ್ಲ''

ಲಗ್ನದ ವಿಷಯ ತಾವು ಪ್ರಸ್ತಾಪಿಸಬಾರದೆಂದೂ, ಮಾತಿನ ಸುಳಿಯಲ್ಲಿ ಅವಕಾಶ ಸಿಕ್ಕಿದರೆ ಅದನ್ನು ಉಪಯೋಗಿಸಿಕೊಳ್ಳಬೇಕೆಂದೂ, ರಾಯರು ನಿರ್ಧರಿಸಿದ್ದರು. ಆದರೆ ರಾಯರ 'ಕ್ರಿಮಿನಲ್ ಲಾಯರಿಕೆ' ಪ್ರಯೋಜನಕ್ಕೆ ಬರಲಿಲ್ಲ. ಸಂಜೀವ ಎಲ್ಲ ವಿಷಯಗಳ ಮೇಲೂ ಮಾತನಾಡುತ್ತ ಕುಳಿತ, ಲಗ್ನದ ವಿಷಯ ಮಾತ್ರ ಬಹಳ ಎಚ್ಚರಿಕೆಯಿಂದ ದೂರಮಾಡಿದ್ದ.

ರಾಯರು ಮಾತಾಡಿ ಆಡಿ ಬೇಸತ್ತು ಕೊನೆಗೆ ತಮ್ಮ ಸೋಲನ್ನು ಮಾನಸಿಕವಾಗಿ ಒಪ್ಪಿಕೊಳ್ಳಬೇಕಾಯಿತು. ಅವರ ಸಂಕಟ ನೋಡಲಾರದ ಅನಂತಯ್ಯ,

''ನಿನ್ನ ಲಗ್ನ ಯಾವಾಗ ಸಂಜೀವ'' ಎಂದು ಕೇಳಿದ.

''ರಿಜಿಸ್ಟ್ರಾರರಿಗೆ ಅರ್ಜಿ ಕೊಟ್ಟಿದ್ದೇನೆ. ಅವರ ಉತ್ತರ ಬಂದಕೂಡಲೆ ಹೋಗಿಬರುತ್ತೇವೆ.''

''ಆರ್ಯ ಸಮಾಜ, ಬ್ರಹ್ಮ ಸಮಾಜವೂ ಇಂಥ ಮದುವೆ ಮಾಡಿಸುವುದಂತೆ!''

''ಹೌದು - ಮಾಡಿಸುತ್ತವೆ. ಪುಷ್ಪ ಜಾತಿ ಬದಲಾಯಿಸುವುದು ನನಗೆ

ಸಮ್ಮತವಿಲ್ಲ. ಅವರವರ ನಂಬಿಕೆ ಅವರಿಗೆ ದೊಡ್ಡದು. ಅದನ್ನು ಗೌರವಿಸ ಬೇಕಾದುದು ನಮ್ಮ ಧರ್ಮ.''

''ಕೊನೆಗೂ ನಮ್ಮೆಲ್ಲರ ಮಾತನ್ನೂ ಧಿಕ್ಕರಿಸಿಬಿಟ್ಟೆ''

ಎಂದು ರಾಯರು ನುಡಿದರು.

''ಧಿಕ್ಕರಿಸಿದೆ ಎಂದು ನೀವು ಭಾವಿಸುವುದೇ ತಪ್ಪು ರಾಯರೇ. ನನ್ನ ಜೀವನದಲ್ಲಿ ಪುಷ್ಪಳಿಗೆ ಸ್ಥಾನ ಕೊಡಬೇಕಾದರೆ ಇತರರನ್ನು ಹೊರದೂಡ ಬೇಕಾದ ಅಗತ್ಯವಿಲ್ಲ.''

''ನಿನ್ನ ಆದರ್ಶಕ್ಕೂ ಆಚರಣೆಗೂ ಸಂಬಂಧವಿಲ್ಲದಂತಾಗಿದೆ ಸಂಜೀವ.''

''ಆದರ್ಶ, ಆಚರಣೆಯನ್ನು ನಾನು ಮೇಳವಿಸಿರುವುದೇ ನಿಮ್ಮ ಅಸಮಾಧಾನಕ್ಕೆ ಕಾರಣವಾಗಿದೆ.''

''ಹೋಗಲಿ - ಬ್ರಹ್ಮಲಿಪಿ ತಪ್ಪಿಸಲು ಯಾರಿಂದ ಶಕ್ಯ. ಒಳ್ಳೆಯ ಮನೆತನಸ್ಥರ ಹುಡುಗಿಯ ಕೈ ನೀನು ಹಿಡಿದಿದ್ದರೆ - ಅವಳ ಗುಣ, ಶೀಲ ನೋಡಿ ಜಾತಿಯನ್ನು ಮರೆಯಬಹುದಾಗಿತ್ತು. ಆದರೆ ನೀನು ಕೈಹಿಡಿಯು ತ್ತಿರುವ ಹೆಣ್ಣಿಗೆ ಕುಲ, ಶೀಲ, ಜಾತಿ ಒಂದೂ ಇಲ್ಲವಲ್ಲಾ ಎನ್ನುವುದೇ ನಮ್ಮ ದುಃಖ.''

ಸಂಜೀವನ ಮುಖ ಕೆಂಪೇರಿತು. ಆಥಿತೇಯನ ಸದ್ವಿನಯವನ್ನೂ ಮರೆತು ರಾಯರನ್ನು ಹೊರದೂಡಬೇಕೆಂದು ಮನಸ್ಸಾಯಿತು. ಅತಿ ಪ್ರಯಾಸ ದಿಂದ ಸಂಯಮತಂದುಕೊಂಡು

''ನಿಮ್ಮಂಥ ದೊಡ್ಡವರ ಬಾಯಲ್ಲಿ ಕೀಳುಮಾತು ಬರಬಾರದು.''

ಎಂದು ಹೇಳಿದ. ರಾಯರೂ ಉದ್ವೇಗಗೊಂಡು

''ಸಂಜೀವ, ನಿನ್ನ ಮನಸ್ಸು ನೋಯಿಸುವುದಕ್ಕೆ ನನಗೆ ಇಷ್ಟವಿಲ್ಲ. ಕನಸು ಮನಸಿನಲ್ಲಿಯೂ ನಾನು ನಿನಗೆ ಅಕಲ್ಯಾಣಮಾಡುವವನಲ್ಲ ಎಂದು ನಿನಗೇ ಗೊತ್ತಿದೆ. ಇರುಳು ಕಂಡ ಭಾವಿಯಲ್ಲಿ ನೀನು ಹಗಲು ಬೀಳುತ್ತಿರುವೆ. ಇದನ್ನು ನೋಡಿ ಸಹಿಸಲು ನನ್ನಿಂದ ಸಾಧ್ಯವಿಲ್ಲ. ಈಗಲೂ ನನ್ನ ಮಾತು ಕೇಳು - ಈ ಮದುವೆ ನಿಲ್ಲಿಸು. ನಿನ್ನ ಪುಷ್ಪನ ರಹಸ್ಯಜೀವನ ಭೇದಿಸುವ ಯತ್ನಮಾಡಬೇಡ. ಅದೊಂದು, ಕೆಟ್ಟಕನಸೆಂದು ಮರೆತುಬಿಡು. ನಿನಗೊಪ್ಪಿಗೆ ಯಾಗುವ ಹೆಣ್ಣು ಹುಡುಕಿ ತಂದು ನಿನಗೆ ಮದುವೆ ಮಾಡುವ ಜವಾಬ್ದಾರಿ

ನನಗಿರಲಿ. ನಮಗಾಗಿಯಲ್ಲ - ನಿನಗಾಗಿ - ನಿನ್ನ ಕಲ್ಯಾಣಕ್ಕಾಗಿ - ನಿನ್ನ ಮನಃಶಾಂತಿಗಾಗಿ ಈ ಮದುವೆ ನಿಲ್ಲಿಸು.''

''ಅವಳ ಮೇಲೆ ನಿಮ್ಮದೇನು ಆಕ್ಷೇಪಣೆ ?''

''ಅವಳ, ಅವರಕ್ಕನ, ಅವರಮ್ಮನ ಪಾಪಜೀವನ ಲೋಕಕ್ಕೇ ತಿಳಿದಿದೆ.''

''ಲೋಕದ ಬಾಯಲ್ಲಿರುವುದು ಎಲುಬಿಲ್ಲದ ನಾಲಗೆ - ಅದು ಬೇಕಾದತ್ತ ಹೊರಳುತ್ತದೆ.''

''ಲೋಕ ಆಡುತ್ತಿರುವುದು ಸತ್ಯವಾಗಿದ್ದರೆ!''

''ಋಜುವಾತುಪಡಿಸುತ್ತೀರಾ ?''

''ಪಡಿಸುತ್ತೇನೆ ಆ ಹೊಲಸು ಕಥೆಯನ್ನು ನಿನಗೆ ಕೇಳಿಸಬಾರದೆಂದಿದ್ದೆ. ಈಗ ನೀನೇ ಕೇಳಲು ಬಯಸುತ್ತಿರುವೆ.''

''ಏನು ಹೇಳುವಿರೋ ಹೇಳಿ ಸ್ವಾಮಿ - ಕೇಳಲು ಸಿದ್ಧನಾಗಿದ್ದೇನೆ.''

''ಹೇಳಿ ಅನಂತಯ್ಯ'' ಎಂದು ರಾಯರು ಆಜ್ಞೆಮಾಡಿದರು.

ಅನಂತಯ್ಯ ಚಾ - ಚೂ ತಪ್ಪದೆ ಪುಷ್ಪನ ತಾಯಿಯ ಕಥೆ, ಅಕ್ಕನ ಕಥೆಯನ್ನು ನಿರೂಪಿಸಿ ಪುಷ್ಪ - ಅಂಕಲ್ ಇವರಿಗಿದ್ದ ಸಂಬಂಧವನ್ನು ವಿವರಿಸಿದ.

ಸಂಜೀವನ ತಲೆ ಸುತ್ತುತ್ತ ಬಂದಿತು. ಅರ್ಧನಿಮೀಲಿತವಾಗಿದ್ದ ಅವನ ಕಣ್ಣುಗಳು ಹಾಗೇ ಮುಚ್ಚಿಕೊಂಡವು. ಕ್ಷಣಾರ್ಧದಲ್ಲಿ ಕಣ್ಣುಗಳಿಂದ ಒಂದೊಂದೇ ಹನಿಗಳುದುರಿದವು. ಸಂಜೀವ ಶೋಕಾರ್ತನಾಗಿ ಕೂಡಲಿಲ್ಲ. ವಿಕ್ಷಿಪ್ತವಾಗಿದ್ದ ಮನಸ್ಸನ್ನು ಹತೋಟಿಗೆ ತಂದುಕೊಂಡು

''ಇದಿಷ್ಟೂ ಕಟ್ಟುಕಥೆ - ಒಂದು ಶಬ್ದವನ್ನೂ ನಾನು ನಂಬುವುದಿಲ್ಲ''

ಎಂದು ಹೇಳಿದ. ಅನಂತಯ್ಯ ಕೆರಳಿ

''ಪುಷ್ಪ, ಅಂಕಲ್ ಇಳಿದುಕೊಂಡಿದ್ದ ಹೊಟೇಲಿದೆ - ಪುಷ್ಪನ ಭಾವ ಇದ್ದಾನೆ - ಅಂಕಲ್ ಇನ್ನೂ ಜೀವಂತವಾಗಿದ್ದಾನೆ - ಅವರನ್ನೂ ಕೇಳಿ ನೋಡಬಹುದಲ್ಲ.'' ಎಂದ.

ಸಂಜೀನ ಶೋಕತಪ್ತವಾದ ತನ್ನ ಕಣ್ಣುಗಳನ್ನೆತ್ತಿ ಗಡಿಯಾರ ನೋಡಿ

"ಇನ್ನು ಅರ್ಧಗಂಟೆಗೆ ಬೆಂಗಳೂರಿಗೆ ಗೌರ್ನ್ಮೆಂಟ್ ಬಸ್ ಇದೆ ನನ್ನ ಜತೆ ಬರುವಿರಾ ಅನಂತಯ್ಯನವರೇ" ಎಂದು ಕೇಳಿದ.

"ಸಿದ್ಧವಾಗಿದ್ದೇನೆ" ಎಂದು ಅನಂತಯ್ಯ ಉತ್ತರಿಸಿದ.

ಪ್ರಯಾಣಕ್ಕೆ ಸಿದ್ಧನಾಗಲು ಸಂಜೀವ ಒಳಗೆದ್ದು ಹೋದ. ರಾಯುದು ಅನಂತಯ್ಯನಿಗೆ ಕಾರ್ಯಕ್ರಮ ಸೂಕ್ಷ್ಮವಾಗಿ ವಿವರಿಸಿ ಸಂಜೀವನ ಅಪ್ಪಣೆ ಪಡೆಯದೆ ಎದ್ದು ಹೋದರು.

ಅನಂತಯ್ಯ ಸಂಜೀವನನ್ನು ಬೆಂಗಳೂರಿಗೆ ಕರೆತಂದವನೇ ನೇರವಾಗಿ 'ಸಿಲ್ವರ್ ಹೊಟೇಲಿ'ಗೆ ಕರೆದೊಯ್ದು ಹನ್ನೆರಡನೆಯ ನಂಬರು ರೂಮಿನಲ್ಲಿಯೇ ಬಿಡಾರಮಾಡಿದ.

ಅದೇ ರಾತ್ರಿ ಹೊಟೇಲ್ ಮ್ಯಾನೇಜರ ತನಿಖೆಯಾಯಿತು. ಮ್ಯಾನೇಜರ್ ಅತಿಥಿಗಳ ಆಗಮನ, ನಿರ್ಗಮನದ ಪುಸ್ತಕ ತಂದು ತೋರಿಸಿದ. ಅದರಲ್ಲಿ 'ಮುನಿಸ್ವಾಮಯ್ಯ ಮತ್ತು ಪತ್ನಿ' ಎಂದು ಉಲ್ಲಿಖಿತವಾಗಿದ್ದುದನ್ನು ಸಂಜೀವ ಗಮನಿಸಿದ - ತಾರೀಖು ನೋಡಿದ - ಅದೇ ತಾರೀಖು - ಪುಷ್ಪ ಬೆಂಗಳೂರಿಗೆ 'ಅಂಕಲ್' ಜತೆ ಹೋದ ತಾರೀಖು.

ತೃಪ್ತಿಗೊಂಡ ಅನಂತಯ್ಯ ರಾತ್ರಿ ಸುಖವಾಗಿ ಮಲಗಿ ನಿದ್ರಿಸಿದ, ಸಂಜೀವ ದಳ್ಳುರಿಗೆ ಸಿಕ್ಕಿದ ಹುಲ್ಲೆಯಂತೆ ಹಾಸಿಗೆಯ ಮೇಲೆ ಹೊರಳಾಡಿದ.

ಬೆಳಿಗ್ಗೆ ಎದ್ದಕೂಡಲೆ ಸಂಜೀವ

"ಇವತ್ತು ಯಾವ ಸಾಕ್ಷಿ ಕಾಣಬೇಕು ಅನಂತಯ್ಯನವರೇ" ಎಂದು ಕೇಳಿದ.

ಅನಂತಯ್ಯ ಸಾವಕಾಶವಾಗಿ

"ತನ್ನ ಅಕ್ಕ ಜ್ಯಾಡಿಗೆ ಕಾಹಿಲೆಯೆಂದಲ್ಲವೇ ಪುಷ್ಪ ಅಂಕಲ್ ಜತೆಯಲ್ಲಿ ಬೆಂಗಳೂರಿಗೆ ಬಂದದ್ದು?"

"ಹೌದು."

"ಆ ಕಾಲದಲ್ಲಿ ಜ್ಯಾಡಿ ಕಾಹಿಲೆಯಿದ್ದಳೇ ಇಲ್ಲವೇ ಎನ್ನುವುದನ್ನು ನೀನು ತಿಳಿಯುವುದೊಳ್ಳೆಯದು."

"ಹೇಗೆ ತಿಳಿಯುವುದು?"

"ಇ. ಎಲ್. ಎಸ್ ಪ್ರೆಸ್ಸಿಗೆ ಹೋಗಿ ಸ್ಯಾಮ್ಯುಯಲ್ ಭೆಟ್ಟಿಯಾದರೆ ತಿಳಿಯುತ್ತದೆ."

"ಹೋಗಿ ಬರುತ್ತೇನೆ - ನೀವು ?"

"ನಾನು ಲಾಯರ್ ಡೊಮಿಂಗೋ ಅವರನ್ನು ಕಂಡು 'ಅಂಕಲ್'ಗೆ ಪರಿಚಯ ಪತ್ರ ತೆಗೆದುಕೊಂಡು ಬರುತ್ತೇನೆ."

ಇಬ್ಬರೂ ತಮ್ಮ ತಮ್ಮ ಕೆಲಸ ಮುಗಿಸಿಕೊಂಡು ಮಧ್ಯಾನ್ಹ ಊಟದ ವೇಳೆಗೆ ಹೊಟೇಲ್ ಸೇರಿದರು. ಸಂಜೀವ ಹೋದ ಕೆಲಸವೇನಾಯಿತೆಂದು ಅನಂತಯ್ಯ ಕೇಳಲಿಲ್ಲ.

"ಬಂಗಾರಪೇಟೆಗೆ ಹೋಗಿಬರೋಣವೇ ?"

"ಏಕೆ ?"

"ಅಂಕಲ್ ಇರುವುದು ಅಲ್ಲಿಯೇ."

ಸಂಜೀವ ಯಂತ್ರದಂತೆ ಅನಂತಯ್ಯನನ್ನು ಹಿಂಬಾಲಿಸಿದ.

ಬಂಗಾರುಪೇಟೆಯಲ್ಲಿ ಗಣಿ ಕಂಟ್ರ್ಯಾಕ್ಟರ್ ಮುನಿಸ್ವಾಮಯ್ಯನ ಮನೆ ಪತ್ತೆ ಹಚ್ಚುವುದು ಅವರಿಗೆ ತಡವಾಗಲಿಲ್ಲ. ಸೊಗಸಾದ ಕೈತೋಟದಿಂದ ಕೂಡಿದ ಭವ್ಯವಾದ ಅವನ ಮನೆಗೆ ಅನಂತಯ್ಯ, ಸಂಜೀವ ಬಂದಾಗ ಎರಡು ಅಲ್‌ಸ್ಯಾಷಿಯನ್ ನಾಯಿಗಳು ಅವರಿಗೆ ಸ್ವಾಗತಬಯಸಿದವು. ಮಾಲಿ ಬಂದು ನಾಯಿಗಳನ್ನು ಹಿಡಿದುಕೊಂಡ. ಅನಂತಯ್ಯ

"ಸಾಹುಕಾರರು ಮನೆಯಲ್ಲಿದ್ದಾರೇನಯ್ಯ" ಎಂದು ಕೇಳಿದ.

"ಆವ್ರೆ ಬುದ್ಧಿ - ಯಾರು ಬಂದವ್ರೆ ಅಂತ ಏಳ್ಬೇಕು."

"ಲಾಯರು ಡೊಮಿಂಗೋ ಅವರ ಕಡೆಯಿಂದ ಯಾರೋ ಬಂದಿದ್ದಾರೆ ಎಂದು ತಿಳಿಸು."

"ಒಳಗೆ ಬನ್ನಿ ಬುದ್ದಿ"

ಎಂದು ಮಾಲಿ ಅವರಿಬ್ಬರನ್ನೂ ಕರೆದೊಯ್ದು ವೆರಾಂಡದಲ್ಲಿ ಕುಳ್ಳಿರಿಸಿ ಒಳಗೆ ಸಾಹುಕಾರರಿಗೆ ಸುದ್ದಿ ಮುಟ್ಟಿಸಲು ಹೋದ.

ಸಾಹುಕಾರನ ಮನೆಯ ವೈಭವ ಮೆಚ್ಚುತ್ತಾ ಅನಂತಯ್ಯ ಕುಳಿತಿದ್ದ, ಜೀವಶವದಂತೆ ಸಂಜೀವ ಕತ್ತು ತಗ್ಗಿಸಿ ಕುಳಿತಿದ್ದ.

ಸ್ವಲ್ಪ ಹೊತ್ತಿನಲ್ಲಿಯೇ ಮುನಿಸ್ವಾಮಯ್ಯ ಒಳಗಿನಿಂದ ಬಂದು

"ಯಾರು ನೀವು" ಎಂದು ಕೇಳಿದ.

ಅನಂತಯ್ಯ ಅವನ ಕೈಗೆ ಲಾಯರ್ ಡೊಮಿಂಗೋ ಕಾಗದಕೊಡಲು, ಅದನ್ನೋಡಿದಮ ನೋಡಿಕೊಂಡು

"ಮಹಡಿಯ ಮೇಲಕ್ಕೇ ಬನ್ನಿ" ಎಂದು ಅವರನ್ನು ಕರೆದೊಯ್ದ.

ಮಹಡಿಯ ಮೇಲಣ ಹಜಾರ ಅನಂತಯ್ಯನ ಕಣ್ಣು ಕೋರೈಸಿತು. ನೆಲಕ್ಕೆ ಹಾಸಿದ್ದುದು ಅಮೃತಶಿಲೆಯ ಹಲಗೆಗಳು, ಹಜಾರದ ತುಂಬ ಸೊಗಸಾದ ಫರ್ನೀಚರು. ಕಿಟಕಿ, ಬಾಗಿಲುಗಳಿಗೆ ಸಿಲ್ಕ್ ತೆರೆಗಳು. ಮುನಿಸ್ವಾಮಯ್ಯ ಲಕ್ಷ್ಮೀಕುಮಾರನಾಗಿದ್ದ ಸಂಗತಿಯನ್ನು ಅವನ ಹಜಾರದ ಪ್ರತಿಯೊಂದು ಸಾಮಾನೂ ಸಾರಿ ಸಾರಿ ಹೇಳುತ್ತಿದ್ದವು.

ಎಲ್ಲರೂ ಕುಳಿತ ಮೇಲೆ ಅನಂತಯ್ಯ ತನ್ನ ಮತ್ತು ಸಂಜೀವನ ಪರಿಚಯ ಮಾಡಿಕೊಟ್ಟ.

"ನನ್ನಿಂದ ನಿಮಗೆ ಏನಾಗಬೇಕಾಗಿತ್ತು ?"

"ಕೆಲವು ವಿಷಯಗಳು ತಿಳಿಯಬೇಕಾಗಿತ್ತು."

"ಕೇಳಿ."

"ಅವು ನಿಮ್ಮ ಜೀವನಕ್ಕೂ ಸಂಬಂಧಪಟ್ಟವು."

"ನನ್ನ ಜೀವನದ ವಿಷಯ ಕಟ್ಟಿಕೊಂಡು ನಿಮಗೆ ಆಗಬೇಕಾದುದೇನು ?"

"ನಿಮ್ಮ ಜೀವನಕ್ಕೂ - ಇವರ ಜೀವನಕ್ಕೂ ಕುಣಿಕೆಬಿದ್ದಿದೆ."

"ಕುಣಿಕೆ ! ನೀವು ಆಡುತ್ತಿರುವ ಮಾತು ನನಗರ್ಥವಾಗುವುದಿಲ್ಲ"

"ಎಲ್ಲವನ್ನೂ ವಿವರಿಸುತ್ತೇನೆ. ನೀವು ಬೇಸರಪಟ್ಟುಕೊಳ್ಳಬಾರದು ಮುನಿಸ್ವಾಮಯ್ಯನವರೇ. ನಿಮ್ಮ ಜೀವನ ಕೆದಕಿನೋಡುವ ಅಧಿಕಾರ ನಮಗಿಲ್ಲ - ಅದಕ್ಕೇ ಅಂಜಿಕೆಯಾಗಿದೆ."

"ನಿಮಗೆ ಸಹಾಯಮಾಡಬೇಕೆಂದು ನಮ್ಮ ಲಾಯರು ಬರೆದುಕಳುಹಿಸಿದ್ದಾರೆ. ಅವರ ಮಾತಿಗೆ ಗೌರವಕೊಡುವುದು ನನ್ನ ಕರ್ತವ್ಯ. ಡೊಮಿಂಗೋ ಅವರು ನಿಮಗೆ ಹೇಗೆ ಗೊತ್ತು."

"ನನಗೆ ಈಚಿನ ಪರಿಚಯ. ನನ್ನ ಸ್ನೇಹಿತರು ಸೋಮಶೇಖರರಾಯರಿಗೂ ಅವರಿಗೂ ತುಂಬ ಸ್ನೇಹ."

"ಡೊಮಿಂಗೋ ನನಗೆ ತುಂಬ ಉಪಕಾರಮಾಡಿದ್ದಾರೆ. ಅವರ ಮಾತೆಂದರೆ ನನಗೆ ವೇದವಾಕ್ಯ."

"ಅದು ನಿಮ್ಮ ದೊಡ್ಡಸ್ತಿಕೆಯ ಗುರುತು."

"ನೀವು ಬಂದ ಕೆಲಸ ಹೇಳಲೇ ಇಲ್ಲವಲ್ಲ."

"ಈ ನನ್ನ ಸ್ನೇಹಿತರು ಲಗ್ನವಾಗಬೇಕೆಂದಿದ್ದಾರೆ."

"ಬಹಳ ಸಂತೋಷ - ನನ್ನಿಂದ ಏನಾದರೂ ಸಹಾಯಬೇಕಾಗಿತ್ತೇನು ?"

"ವಧು ಯಾರು ಎಂದು ನಾನು ನಿಮಗೆ ಹೇಳಿಲ್ಲ."

"ವಧು ಯಾರು ?"

"ಜಾನ್ ಅಪ್ಪಾಜಿಯ ಮಗಳು ಪುಷ್ಪ."

"ಪುಷ್ಪ !"

ಮುನಿಸ್ವಾಮಯ್ಯ ಚಕಿತನಾದ.

"ನಿಮ್ಮನ್ನೋ ಪುಷ್ಪ ಮದುವೆ ಮಾಡಿಕೊಳ್ಳುವುದು."

"ಪುಷ್ಪನನ್ನು ನೀವು ಬಲ್ಲಿರಾ ?"

"ಚೆನ್ನಾಗಿ ಬಲ್ಲೆ.'

"ನಿಮ್ಮ ಪುಷ್ಪನ ಸ್ನೇಹದ ವಿಷಯ ಹೇಳಲು ಸಾಧ್ಯವೇ ?"

"ಆ ವಿಷಯ ಈಗೇಕೆ ಕೆದಕುವಿರಿ. ಕಳೆದುಹೋದದ್ದು ಹೋಯಿತು. ಅವಳ ಮದುವೆಗೆ ನಾನೇಕೆ ಅಡ್ಡಬರಲಿ."

"ನೀವು ಹೇಳದಿದ್ದರೆ ಸಂದೇಹ ಇವರ ಮನಸ್ಸನ್ನು ಹುಳುಕೊರೆದಂತೆ ಕೊರೆಯುತ್ತದೆ. ಸಂದೇಹಕ್ಕೆ ಮನಸ್ಸುತೆತ್ತು ಕೊರಗುವುದಕ್ಕಿಂತ ಸತ್ಯವನ್ನೆದುರಿಸುವುದು ಲೇಸಲ್ಲವೇ ?"

"ನೀವು ನನಗೆ ತುಂಬ ಅಪ್ರಿಯವಾದ ಕೆಲಸ ವಿಧಿಸುತ್ತಿರುವಿರಿ."

ಸಂಜೀವ ಮಧ್ಯೆ ಬಾಯಿಹಾಕಿ

"ಹೇಳಿ ಮುನಿಸ್ವಾಮಯ್ಯನವರೇ - ದಯೆಯಿಟ್ಟು ಸತ್ಯಸಂಗತಿ ತಿಳಿಸಿ."

"ಪುಷ್ಪನ ಅಕ್ಕ ಜ್ಯುಡಿಗೂ ನನಗೂ ಬಹಳ ದಿವಸಗಳ ಸ್ನೇಹವಿತ್ತು. ಅವಳು ಮದುವೆಮಾಡಿಕೊಂಡ ಮೇಲೆ ಪುಷ್ಪನಿಗೂ ನನಗೂ ಸ್ನೇಹ ಬೆಳೆಯಿತು.

ತನ್ನ ಮದುವೆ ನಿಶ್ಚಯವಾಗಿರುವ ವಿಷಯ ಪುಷ್ಪ ತಿಳಿಸಿ, ನಾನು ದೂತವಾಗ ಬೇಕೆಂದು ಪ್ರಾರ್ಥಿಸಿದಳು. ಅವಳ ಸ್ನೇಹಕ್ಕೊ ನಾನು ತಿಲೋದಕಬಿಟ್ಟೆ."

ವಿಷಣ್ಣವದನನಾಗಿ ಕುಳಿತಿದ್ದ ಸಂಜೀವನನ್ನು ಮುನಿಸ್ವಾಮಯ್ಯ ದಿಟ್ಟಿಸಿ ನೋಡಿದ. ಸಂಜೀವನ ಮನಸ್ಸಿನಲ್ಲಾಗುತ್ತಿದ್ದ ಹೋರಾಟ ಗ್ರಹಿಸಿ

"ಮಿ. ಸಂಜೀವ - ನೀವು ಪುಷ್ಪನನ್ನು ಮದುವೆಯಾಗುವುದು ಕೇಳಿ ನನಗೆ ಸಂತೋಷವಾಗಿದೆ. ಕನ್‌ಗ್ರ್ಯಾಜುಲೇಷನ್ಸ್ (Congratulations) - ಅವಳು ಒಳ್ಳೆಯ ಹುಡುಗಿ - ನಿಮ್ಮ ಜೀವನ ಸುಖಕರವಾಗಲೆಂದು ಹಾರೈಸುತ್ತೇನೆ" ಎಂದು ಹೇಳಿದ.

ಸಂಜೀವನ ಬಾಯಲ್ಲಿ ಮಾತು ಹೊರಡಲಿಲ್ಲ. ಎದ್ದವನೇ ಅಲ್ಲಿಂದ ಹೊರಟುಬಿಟ್ಟ. ಅನಂತಯ್ಯ ಅವನನ್ನನುಸರಿಸಿದ.

ಇಬ್ಬರೂ ಮಾರನೆಯ ದಿನ ಮೈಸೂರಿಗೆ ಹಿಂದಿರುಗಿದರು. ಸಂಜೀವ ಧೈರ್ಯತಂದುಕೊಂಡು,

"ಸಾಕ್ಷ್ಯಗಳು ಇನ್ನೂ ಉಳಿದಿವೆಯೇ ಅನಂತಯ್ಯನವರೇ."

ಎಂದು ಕೇಳಿದ.

"ಇನ್ನೂ ನಂಬಿಕೆ ಹುಟ್ಟಿಲ್ಲವೇ ?"

"ನಂಬಿಕೆಯ ಮಾತು ಹಾಗಿರಲಿ - ನಿಮ್ಮ ಸಾಕ್ಷಿಗಳನ್ನು ಮುಗಿಸಿಬಿಡಿ."

ಸಂಜೀವನಿಗೆ ನಂಬಿಕೆ ಹುಟ್ಟಿಲ್ಲವೆಂದು ಭಾವಿಸಿಕೊಂಡು ಅನಂತಯ್ಯ ಅವನನ್ನು ನರ್ಸ್ ಕನಕಮ್ಮನ ಮನೆಗೆ ಕರದೊಯ್ದು, ಪುಷ್ಪ ಮೈಯಿಳಿಸಿಕೊಂಡ ವಿಷಯವನ್ನು ಅವಳಿಂದ ಹೇಳಿಸಿದ.

ಕನಕಮ್ಮನ ಮನೆಬಿಟ್ಟು ಹೊರಬಂದ ಕೂಡಲೆ ಸಂಜೀವ, ಅನಂತಯ್ಯನ ಕಡೆ ಮಿಂಚಿನಂತೆ ತಿರುಗಿ

"ನಿಮ್ಮ ಕೆಲಸ ಮುಗಿಯಿತಲ್ಲವೇ ?"

"ಮುಗಿದಂತಾಯಿತು."

"ನಿಮ್ಮ ಉದ್ದೇಶ ಸಫಲವಾಯಿತೆಂಬ ತೃಪ್ತಿಯಿಂದ ನೀವು ಹೋಗಬಹುದು."

"ಮನಸ್ಸಿಗೆ ಬೇಸರಮಾಡಿಕೊಳ್ಳಬೇಡ ಸಂಜೀವ."

"ನನಗೊಂದು ಉಪಕಾರಮಾಡುವಿರಾ ?"

"ಏನು ಹೇಳು."

"ಇನ್ನು ಮೇಲೆ ನೀವಾಗಲಿ, ನಿಮ್ಮ ಮಿತ್ರರು ಸೋಮಶೇಖರರಾಯರಾಗಲಿ ನನಗೆ ಮುಖತೋರಿಸಬೇಡಿ."

ಎಂದವನೇ ಭ್ರಮಿಷ್ಠನಂತೆ ಅಲ್ಲಿಂದ ನಡೆದುಬಿಟ್ಟ. ಅನಂತಯ್ಯನಿಗೆ ದಿಕ್ಕೇ ತೋರದಂತಾಯಿತು. ತಾನು ನಿರ್ವಹಿಸಿದ ಕೆಲಸದ ವರದಿ ಒಪ್ಪಿಸಲು ನಂಜನಗೂಡಿಗೆ ಹೊರಡಲು ನಿಶ್ಚಯಿಸಿ, ಬಸ್‌ಸ್ಟ್ಯಾಂಡಿಗೆ ಹೋದ.

ಸಂಜೀವ ರಸ್ತೆಯಲ್ಲಿ ಸಿಕ್ಕಿದ ಗಾಡಿಯನ್ನೇರಿ ಮನೆ ತಲುಪಿ ತೊಟ್ಟಿಯಲ್ಲಿದ್ದ ಸೋಫಾದ ಮೇಲೆ ಬಂದು ಬಿದ್ದ. ಅದುವರೆಗೆ ತಡೆದಿದ್ದ ದುಃಖದ ಹೊನಲು ಹುಚ್ಚುಹೊಳೆಯಾಗಿ ಹರಿಯಿತು.

'ಪುಷ್ಪ ಮಾನಗಾತಿಯೋ - ದುಶ್ಶೀಲಳೋ - ಪಾಪಿಯೋ'

ಎಂದು ಅವನ ಮನಸ್ಸಿನಲ್ಲಿ ಮೊರೆಯೆದ್ದಿತು.

ತೇವಗೊಂಡ ಕಣ್ಣು ಮಂಜಾಗಿತ್ತು.

ಕತ್ತೆತ್ತಿ ನೋಡಿದ - ಎದುರಿಗೆ ಪರಮಗುರು ಶ್ರೀ ರಾಮಕೃಷ್ಣ ಪರಮಹಂಸರ ಭಾವಚಿತ್ರ - ಅದರ ಪಕ್ಕದಲ್ಲಿ ಯೇಸುಸ್ವಾಮಿಯ ಕಲ್ಪನಾಚಿತ್ರ.

'ಯಾವ ಅಪರಾಧಕ್ಕೆ ನನಗೆ ಈ ಶಿಕ್ಷೆ'

'ಗುರುದೇವ ಪವಾಡಪುರುಷ - ಪುಷ್ಪನ ಬಗ್ಗೆ ನಾನು ತಿಳಿದಿರುವುದನ್ನು ಅವನು ಮರೆಸಲಾರನೇಕೆ - ಅದನ್ನು ಸುಳ್ಳುನಿಸಲಾರನೇಕೆ ?'

'ಪ್ರಪಂಚವೇ ಸುಳ್ಳು - ಅದೊಂದು ಮೋಸದ ಮೊಟ್ಟೆ - ಪುಷ್ಪನಲ್ಲಿಯೇ ಇಷ್ಟು ಮೋಸವಿರುವಾಗ ಉಳಿದವರಲ್ಲಿ ಇನ್ನೆಷ್ಟು ಮೋಸವಿರಬೇಕು !'

'ಯಾವ ಸುಖ - ಯಾವ ಶಾಂತಿಗಾಗಿ ಈ ಲೋಕದಲ್ಲಿ ಬಾಳಬೇಕು'

ಇಡಿಯ ವಿಶ್ವವೇ ಅಂಧಕಾರದಲ್ಲಿ ಮುಳುಗಿದಂತೆ ಸಂಜೀವನಿಗೆ ಭಾಸವಾಯಿತು. ಚಿಂತೆಯ ಕಟುತಾಪದಲ್ಲಿ ಅವನ ವಿಚಾರಶಕ್ತಿಗೆ ಪ್ರಬಲ ಧಕ್ಕೆ ತಗುಲಿತ್ತು. ಒಮ್ಮೊಮ್ಮೆ ಮೆದುಳು ತಿಳಿಯಾಗುತ್ತಿತ್ತು. ಸುಸಂಬದ್ಧವಾಗಿ ಸಾಗುತ್ತಿದ್ದ ವಿಚಾರಶ್ರೇಣಿ ಒಮ್ಮೆಲೇ ಕುಸಿದುಬೀಳುತ್ತಿತ್ತು. ಬುದ್ಧಿ ನಿರಾಶ್ರಿತೆಯಂತೆ ದಿಕ್ಕೆಟ್ಟು ಅಲೆಯುತ್ತಿತ್ತು. ವರ್ಷಾಕಾಲದ ಕಾರ್ಮೋಡಗಳಂತೆ ಶೂನ್ಯತೆ ಎಲ್ಲೆಡೆಯಿಂದಲೂ ಬಂದು ಅವನ ಹೃದಯವನ್ನು ವ್ಯಾಪಿಸುತ್ತಿತ್ತು.

ಪುಷ್ಪನನ್ನು ಸ್ಮರಿಸಿಕೊಂಡು ಕಟಕಟನೆ ಹಲ್ಲುಕಡಿಯುವನು - ಸೋಫಾದ ಕೈಗೆ ಹಣೆಚಚ್ಚುವನು - ಅವನ ಹೃದಯದಲ್ಲಿ ಭಯಂಕರ ಚೀತ್ಕಾರ - ಅಸಹನೀಯ ವೇದನೆ.

ಮರುಕ್ಷಣವೇ ಎತ್ತಣಿಂದಲೋ ಶಾಂತಿಯ ತಂಗಾಳಿ ಬೀಸುತ್ತಿತ್ತು. ತನ್ನನ್ನೇ ಹಳಿದುಕೊಳ್ಳುವನು - ತನ್ನಲ್ಲಿ ನೆಲಸಿದ್ದ ಕೊರತೆ, ದೌರ್ಬಲ್ಯ, ಅತಿಯಾಸೆಗಾಗಿ ಪಶ್ಚಾತ್ತಾಪಪಡುವನು.

ಅಂದಿನ ಸ್ಥಿತಿ ಸಂಜೀವನ ಮುಂದೆ ದೊಡ್ಡ ಪ್ರಶ್ನಾರ್ಥಕ ಚಿನ್ಹೆಯನ್ನಿಟ್ಟಿತ್ತು. ಮುಂದೇನುಮಾಡುವುದು ?

ಮೈಸೂರನ್ನು ಬಿಟ್ಟು ದೂರ - ಬಹಳ ದೂರಹೋಗಲು ನಿಶ್ಚಯಿಸಿದ.

ಎಲ್ಲಿಗೆ ?

'ಬದುಕಿನಲ್ಲಿ ಆಸೆಯಿರುವವನು ಎಲ್ಲಿಗೆ ಎಂದು ಯೋಚಿಸಬೇಕು - ನಾನೇಕೆ ಯೋಚಿಸಲಿ '

'ಹೋಗುವ ಮುನ್ನ ಒಮ್ಮೆ ಪುಷ್ಪನನ್ನು ನೋಡಲೇ - ಹೀಗೇಕೆ ಮಾಡಿದೆಯೆಂದು ಅವಳನ್ನು ಕೇಳಲೇ ?'

'ಕೇಳಿದರೆ ಏನು ಪ್ರಯೋಜನ ? – ಅವಳು ನಿರಾಕರಿಸುವಳು - ಎಲ್ಲವೂ ಸುಳ್ಳೆಂದು ಹೇಳುವಳು - ಸುಳ್ಳಿಗೆ ಸುಳ್ಳು ಸೇರಿಸುವಳು.'

'ಸುಳ್ಳು - ಸುಳ್ಳು - ಜಗತ್ತೇ ಸುಳ್ಳಿನನಂತಾನ.'

'ಪುಷ್ಪನನ್ನು ನೋಡದೆ ಹೋಗುವುದು ಹೇಡಿತನವಲ್ಲವೇ ? ಅವಳು ಅಪರಾಧಿನಿ - ಮೋಸಗಾತಿ - ಅದರಲ್ಲಿ ಸಂದೇಹವೇ ಇಲ್ಲ. ಅದರೆ ತನ್ನ ನಡತೆಯ ಬಗ್ಗೆ ಅವಳು ಕೊಡುವ ವಿವರಣೆ ಕೇಳಬೇಕಲ್ಲವೇ ?'

ಸಂಜೀವನ ಮನಸ್ಸಿನಲ್ಲಿ ಭಯಂಕರ ಮಂಥನವಾರಂಭವಾಯಿತು. ಸುಪ್ತ ತಾಮಸಶಕ್ತಿ ಅವನೆದುರು ನಿಂತು

'ಮೂರ್ಖಾ - ಆ ಕುಲಟೆಯ ಮುಖ ಪುನಃ ನೋಡುವೆಯಾ - ನಿನಗೆ ಆತ್ಮಗೌರವವಿಲ್ಲವೇ - ಬೇರೊಬ್ಬನ ತೋಳತೆಕ್ಕೆಯಲ್ಲಿ ಬಿದ್ದಿದ್ದ ಹೆಣ್ಣನ್ನು ನಿನ್ನ ಪ್ರೇಯಸಿ ಎಂದು ಕರೆಯುವೆಯಾ - ಅವಳನ್ನು ತೊರೆದು, ಮರೆತು ಇಲ್ಲಿಂದ ಹೊರಡು ' ಎಂದು ಹೇಳುತ್ತಿತ್ತು.

ಮರುಕ್ಷಣವೇ ಸಾತ್ವಿಕಶಕ್ತಿಯೊಂದು ಅವನ ಬಳಿ ಬಂದು,

'ಮಗೂ, ಹೆಣ್ಣು ತಪ್ಪುಮಾಡಿದೆ. ನಿನ್ನ ಕನಸನ್ನು ತುಮುರು ತುಮುರಾಗಿ ಒಡೆದಿದೆ. ನಿನ್ನ ಅವ್ಯಾಜ ಅಂತಃಕರಣವನ್ನು ಕಾಲಿನ ಕಸದಂತೆ ಕಂಡಿದೆ. ಅದಕ್ಕೆಲ್ಲಾ ಕಾರಣವಿರಬೇಕಷ್ಟೆ. ಪುಷ್ಪ ನಿನ್ನನ್ನು ಪ್ರೀತಿಸಲಿಲ್ಲ ವೆಂದು ಭಾವಿಸಿರುವೆಯಾ - ನಿನ್ನ ಪ್ರೀತಿಗಿಂತ ಅವಳ ಪ್ರೀತಿ ಯಾವ ರೀತಿ ಯಲ್ಲಿಯೂ ಕಡಿಮೆಯಾದುದಲ್ಲ - ಆದರೂ ತಪ್ಪಿ ನಡೆದಿದ್ದಾಳೆ. ಅವಳ ಬಳಿಹೋಗು - ಕಾರಣವೇನೆಂದು ಕೇಳು - ತಪ್ಪನ್ನು ಒಪ್ಪುಮಾಡುವುದಕ್ಕೆ ಸಾಧ್ಯವಿಲ್ಲವೇ ವಿಚಾರಮಾಡು. ಪ್ರೇಮವಿದ್ದಲ್ಲಿ ಯಾವ ಅಪರಾಧವೂ ಅಕ್ಷಮ್ಯವಲ್ಲವೆಂಬುದನ್ನು ತಿಳಿ ?' ಎಂದು ಹೇಳುತ್ತಿತ್ತು.

ಸಂಜೆಗಳೆದು ರಾತ್ರಿ ಮೆಲ್ಲಡಿಯಿಡುತ್ತಿತ್ತು. ಮುಸುಕುಮುಸುಕಾಗಿ ಕತ್ತಲೆ ಕವಿದಿತ್ತು.

ಸಂಜೀವ ಎದ್ದು ಮನೆಯಬಾಗಿಲಿಗೆ ಬೀಗ ಹಾಕಿಕೊಂಡು ಹೊರಗೆ ಹೊರಟ. ಅನೈಚ್ಛಿಕವಾಗಿ ಕಾಲುಗಳು ಕುಕ್ಕನಹಳ್ಳಿಕೆರೆಯ ದಂಡೆಗೆ ಕರೆದೊಯ್ದುವು.

ಹಿಂದಿನ ನೆನಪು ಶೂಲದಂತೆ ಬಂದು ಹೃದಯಕ್ಕೆ ನೆಟ್ಟಿತು. ಯಾವದೋ ಭೂತಕಂಡು ಅಂಜಿದವನಂತೆ ಆ ಸ್ಥಳಬಿಟ್ಟು ಹೊರಟ.

ಕಾಲು ಎಳೆದೊಯ್ದಲ್ಲಿಗೆ ಹೋಗುತ್ತಿದ್ದ. ನಡೆಯುವಲ್ಲಿ ಗುರಿಯಿರಲಿಲ್ಲ.

ಚಾಮುಂಡಿ ವಿಸ್ತರಣದ ಕಡೆ ತಿರುಗಿದ. ಚಿರಪರಿಚಿತವಾಗಿದ್ದ ಆ ರಸ್ತೆ ಅವನಿಗೆ ಹೊಸದಾಗಿ ಕಂಡುಬಂದಿತು.

ನಡೆಯುತ್ತ ಬಂದವನೇ ಒಂದು ಮನೆಯ ಮುಂದೆ ನಿಂತ. ಕತ್ತೆತ್ತಿ ನೋಡಿದ - ಅದೇ - ಪುಷ್ಪನ ಮನೆ! ಮರುಕ್ಷಣವೇ ಅಲ್ಲಿಂದ ಕಾಲುಕೀಳ ಲೆತ್ನಿಸಿದ. ಕಾಲು ಅವನಿಚ್ಛೆಯನ್ನು ನಿರಾಕರಿಸಿತು.

ಬಾಗಿಲು ಬಳಿಯಲ್ಲಿಯೇ ಸ್ವಲ್ಪ ಹೊತ್ತು ನಿಂತಿದ್ದ. ಅನೈಚ್ಛಿಕವಾಗಿ ಬಾಗಿಲು ತಟ್ಟಿದ.

ಪುಷ್ಪ ಒಳಗಿನಿಂದ ಬಂದು ಬಾಗಿಲು ತೆಗೆದು ಅವನಿಗೆ ಸುಸ್ವಾಗತ ಬಯಸಿದಳು.

## ೨೩

ಸುಂದರರಾಯ ತನ್ನ ಡೆಲ್ಲಿಯಾತ್ರೆ ಮುಗಿಸಿಕೊಂಡು ಬಂದಿದ್ದ. ಅಲ್ಲಿ ಸಿಕ್ಕಿದ್ದ ಸ್ವಾಗತ ಅವನ ಮನಸ್ಸನ್ನು ಮುದಗೊಳಿಸಿತ್ತು. ಅದು ತನ್ನ ಭಾಗ್ಯರವಿಯ ಉದಯದ ಚಿನ್ಹೆಯೆಂದು ಅವನು ಭಾವಿಸಿದ್ದ.

ತನಗೂ ತನ್ನ ಸಂಶೋಧನೆಗಳಿಗೂ ದೊರೆಯುತ್ತಿದ್ದ ಗೌರವ ಕಂಡು ಸುಂದರರಾಯನಿಗೆ ಸಂತೋಷವಾಗಿದ್ದರೂ ಅದು ನಿರ್ವಿಕಲ್ಪತೆಯಿಂದ ಕೂಡಿರಲಿಲ್ಲ. 'ಎಷ್ಟು ಕೀರ್ತಿ ಬಂದರೇನು - ಎಷ್ಟು ಸಂಪತ್ತು ಕೂಡಿದರೇನು - ಸುನಂದನಿಗೆ ಅವು ಬೇಡವಾದ ಮೇಲೆ' ಎಂದು ಚಿಂತಿಸಿದ

ದಿನಗಳೆದಂತೆ ಸುಂದರರಾಯ, ಸುನಂದ ಇವರ ಜೀವನ ಬೇರೆ ಬೇರೆ ಮಾರ್ಗಗಳನ್ನರಸಿಕೊಳ್ಳುತ್ತಿದ್ದವು. ತನ್ನ ವೈವಾಹಿಕಜೀವನ ತಳೆಯುತ್ತಿದ್ದ ಸ್ವರೂಪವನ್ನು ಸುಂದರರಾಯ ಸೂಕ್ಷ್ಮವಾಗಿ ಅನುಲಕ್ಷಿಸಿದ್ದ, ಸುನಂದೆಗೂ ಅದು ಸುಪರಿಚಿತವಾಗಿತ್ತು. ಈ ವಿಷಣ್ಣಪರಿಸ್ಥಿತಿ ಸುಧಾರಿಸಬಹುದೆಂಬ ನಂಬಿಕೆ ಸುನಂದೆಯಲ್ಲಿ ಉಳಿದಿರಲಿಲ್ಲ - ಅದನ್ನು ಸುಧಾರಿಸಲು ಪ್ರಯತ್ನಿಸಬೇಕೆಂಬ ಆಸೆಯೂ ಅವಳಲ್ಲಿರಲಿಲ್ಲ.

ಆದರೆ ಸುಂದರರಾಯ ನಿರಾಶನಾಗಿರಲಿಲ್ಲ

'ಭವಿಷ್ಯವನ್ನು ನಾನು ಸರಿಯಾಗಿ ರೂಪಿಸಿಕೊಳ್ಳುತ್ತಿಲ್ಲವೆಂದು ಸುನಂದಾ ಅಸಮಾಧಾನ ವ್ಯಕ್ತಮಾಡಿದಳು. ಯಾವಜ್ಜೀವನವೂ ನಾನು ಕಾಲೇಜಿನ ಲೆಕ್ಚರರಾಗಿ ಕೊಳೆಯಬಾರದೆಂದು ಅವಳ ಇಚ್ಛೆ - ಅವಳು ಹಾಗೆ ಇಚ್ಛಿಸುವುದು ನ್ಯಾಯವಾಗಿಯೇ ಇದೆ - ಗಂಡನ ಭವಿಷ್ಯ ಸುಧಾರಿಸಬೇಕೆಂದು ಹೆಂಡತಿ ಬಯಸುವುದರಲ್ಲಿ ತಪ್ಪೇನಿದೆ? ನನ್ನ ಭವಿಷ್ಯ ಸುಧಾರಿಸುತ್ತಿದೆಯಲ್ಲ - ಇನ್ನಾದರೂ ಸುನಂದ ಸಂತೋಷವಾಗಿರಲು ಅಡ್ಡಿಯೇನು?' ಎಂದು ಯೋಚಿಸಿದ.

ಆದರೆ ಸಮಸ್ಯೆ ಅವನು ತಿಳಿದುಕೊಂಡಿದ್ದಷ್ಟು ಸುಲಭವಾಗಿರಲಿಲ್ಲ.

ಡೆಲ್ಲಿಯಿಂದ ತಾನು ಹೊರಟು ಬೆಂಗಳೂರು ಸೇರುವ ದಿನವನ್ನು ಮೊದಲೇ ಸುನಂದೆಗೆ ತಿಳಿಸಿದ್ದ. ಪ್ಲೇನು ಬಂದು ಏರಿಯೋಡ್ರೋಮಿನಲ್ಲಿ (Aerodrome) ಇಳಿದಾಗ ಸುಂದರರಾಯನ ಕಣ್ಣುಗಳು ಸುನಂದೆಯನ್ನರಸಿದವು. ಸುಂದರರಾಯನಿಗೆ ಸ್ವಾಗತ ಬಯಸಿದವನು ಗಫೂರ್.

"ಅಮ್ಮಾವರು ಬರಲಿಲ್ಲವೇ ಗಫೂರ್" ಎಂದು ಆತುರದಿಂದ ಕೇಳಿದ.

"ಇಲ್ಲ ಸರ್ಕಾರ್. ಟ್ಯಾಕ್ಸಿ ತೆಗೆದುಕೊಂಡು ನೀನು ಹೋಗಿ ಬಾ ಎಂದು ಹೇಳಿದರು."

"ಮನೆಯಲ್ಲಿ ಏನುಮಾಡುತ್ತಿದ್ದರು ?"

"ಮೈಯಲ್ಲಿ ಸರಿಯಿಲ್ಲವೆಂದು ಹೇಳಿದರು."

"ಏನಾಗಿದೆ ?"

"ತಲೆಗೆ ಬಟ್ಟೆ ಬಿಗಿದುಕೊಂಡಿದ್ದರು ಸರ್ಕಾರ್."

ಸುಂದರರಾಯ ಮನೆಗೆ ಬಂದವನೇ ಸುನಂದೆಯನ್ನು ಕೂಗಿದ. ಅವಳು ಬಂದು ಎದುರಿಗೆ ನಿಲ್ಲಲು

"ಮೈಯಲ್ಲಿ ಹೇಗಿದೆ ?" ಎಂದು ಕೇಳಿದ.

"ನನಗೇನಾಗಿದೆ"

"ತಲೆನೋವು ಬಂದಿದೆಯೆಂದು ಗಫೂರ್ ಹೇಳಿದ."

"ಅವನೊಬ್ಬ ಓಲ್ಡ್ ಫೂಲ್ (Old fool)"

"ಏರಿಯೋಡ್ರೋಮಿಗೆ ನೀನು ಬಂದಿರುತ್ತೀಯೆಂದು ಭಾವಿಸಿಕೊಂಡಿದ್ದೆ."

"ತಲೆ ಸಿಡಿದುಹೋಗುತ್ತಿತ್ತು ಬರಲಾಗಲಿಲ್ಲ."

ಎಂದವಳೇ ಒಳಗೆ ಹೋಗಿ ಕಾಫಿ ಬೆರಸಿ ತಂದು ಸುಂದರರಾಯನ ಕೈಗಿತ್ತು

"ಹೋದ ಕೆಲಸವೇನಾಯಿತು ?"

"ಯಶಸ್ವಿಯಾಯಿತು. ನನ್ನ ಸಂಶೋಧನೆ ಕಂಡು ಆಹಾರಮಂತ್ರಿಗಳು ಸಂತೋಷಪಟ್ಟುಕೊಂಡರು. ವಿಲಾಯಿತಿಗೆ ಹೋಗಿ ಬರುವುದು ಒಳ್ಳೆಯ ದೆಂದು ಅವರೂ ಸೂಚಿಸಿದರು."

"ಮುಂದೆ ?"

"ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯಲ್ಲಿ (Indian Institute of Science) ಅವಕಾಶಮಾಡಿಕೊಟ್ಟರೆ ಸಂಶೋಧನೆಗಳನ್ನು ಮುಂದುವರಿಸುವುದಾಗಿ ತಿಳಿಸಿದೆ."

"ಅದಕ್ಕೇನು ಹೇಳಿದರು."

"ಆಗಬಹುದೆಂದರು."

"ಹಾಗಾದರೆ ಕಾಲೇಜಿಗೆ ರಾಜಿನಾಮೆಕೊಡಬೇಕಾಗುತ್ತದೆ."

"ಬೇಕಿಲ್ಲ - ಇಲ್ಲಿಂದಲೇ ಎರವಲು ಹೋಗಬಹುದು."

"ಸಂಬಳ ಸಾರಿಗೆ ಹೆಚ್ಚಾಗುವ ಸಂಭವವಿದೆಯೇ ?"

"ಅದು ನನ್ನ ವಿಲಾಯಿತಿಯಾತ್ರೆಯನ್ನವಲಂಬಿಸುತ್ತದೆ."

"ಸರಿ !"

"ಈಗ ಸಂತೋಷವಾಯಿತೇ ಸುನೂ."

"ನಿಮಗೆ ಸಂತೋಷವಾಗಿದ್ದರೆ ಸರಿ."

"ಇನ್‌ಸ್ಟಿಟ್ಯೂಟಿನಲ್ಲಿ ಕೆಲಸ ಮಾಡಬೇಕೆಂಬುದು ನನ್ನ ಬಹಳ ದಿವಸಗಳ ಬಯಕೆಯಾಗಿತ್ತು."

"ಅದು ಫಲಿಸಿದಂತಾಯಿತಲ್ಲ."

"ಯಾವದು ಫಲಿಸಬೇಕೋ ಅದು ಫಲಿಸಲಿಲ್ಲ."

"ಯಾವದದು ?"

"ನಿನ್ನ ವಿಶ್ವಾಸ."

"ವಿಜ್ಞಾನಿಗಳಿಗೆ ವಿಶ್ವಾಸದ ಅಗತ್ಯವಿಲ್ಲ."

"ಅದು ಅಜ್ಞಾನಿಗಳು ಆಡುವಮಾತು."

"ನಾನು ಅಜ್ಞಾನಿ."

"ನೀನು ಅಜ್ಞಾನಿಯಲ್ಲ - ಆದರೆ ಅಜ್ಞಾನಿಯಾಗಲು ಪ್ರಯತ್ನಿಸುತ್ತಿರುವೆ."

"ಚಿಂತೆಯಿಲ್ಲ."

"ನಿನಗಿಲ್ಲದಿರಬಹುದು - ನನಗಿದೆ. ಹೋಗಲಿ ಬಿಡು. ಮಾತಿನ ಚಕಮಕಿಯಿಂದ ಬೆಂಕಿ ಹುಟ್ಟಿಸುವುದು ಬೇಡ. ನನ್ನ ಪ್ರಯಾಣ ಬಹಳ ದೂರ ಉಳಿದಿಲ್ಲ. ಆರು ತಿಂಗಳೋ ವರ್ಷವೋ ನಾವು ಅಗಲಿರಬೇಕು. ಈ ನಾಲ್ಕುದಿನವೂ ಜಗಳದಲ್ಲಿ ಮುಗಿಸುವುದು ಯಾವ ನ್ಯಾಯ ? "

"ನೀವು ವಿಲಾಯಿತಿ ಪ್ರವಾಸ ಮುಗಿಸಿಕೊಂಡು ಬರುವವರೆಗೆ ನಾವು ಮೈಸೂರಿನಲ್ಲಿರುತ್ತೇನೆ."

"ಇಲ್ಲಿ ನಿನಗೇನು ತೊಂದರೆಯಾಗಿದೆ."

"ನಾನು ಒಬ್ಬಂಟಿಗಳು - ಅಲ್ಲಿ ಜತೆಗೆ ಅಮ್ಮ ಇರುತ್ತಾರೆ."

"ಹಾಗೇ ಮಾಡು ಗಫೂರ ಮನೆ ನೋಡಿಕೊಳ್ಳುತ್ತಾನೆ."

"ಸುಮ್ಮನೆ ಕೂತು ಹೊತ್ತು ಕಳೆಯುವುದಕ್ಕೆ ನನಗೆ ಬೇಸರ."

"ಅದಕ್ಕೇನು ಮಾಡಬೇಕೆಂದಿರುವೆ ?"

"ಪ್ರಯತ್ನಮಾಡಿದರೆ ನನಗೊಂದು ಕೆಲಸ ಸಿಕ್ಕಬಹುದು."

"ನೀನು ಸಂಪಾದನೆ ಮಾಡಬೇಕಾದ ಅಗತ್ಯವಿಲ್ಲವಲ್ಲ!"

"ಏಕಿಲ್ಲ ? ನಾನು ಸ್ವಾವಲಂಬಿಯಾಗಬಾರದೇನು ?"

"ಸ್ವಾವಲಂಬನವೆಂದರೇನು ?"

"ಕೆಲಸಕ್ಕೆ ಸೇರಿದರೆ ನನಗೆ ಎಪ್ಪತ್ತೈದು, ನೂರು ರೂಪಾಯಿ ಸಿಕ್ಕುತ್ತದೆ. ನಿಮ್ಮ ಮೇಲಿನ ಹೊರೆ ಕಡಿಮೆಯಾಗುತ್ತದೆ."

"ನನ್ನ ಹೆಂಡತಿ ಯೋಗಕ್ಷೇಮ ನೋಡಿಕೊಳ್ಳುವುದು ನನಗೊಂದು ಹೊರೆಯೇ ? ಹಣಕಾಸಿನ ವಿಷಯದಲ್ಲಿ ನಾನು ಯಾವಾಗಲೂ ಅಲ್ಪತನ ತೋರಿಲ್ಲವಲ್ಲ"

"ನೀವು ಅಲ್ಪತನ ತೋರಿದ್ದೀರೆಂದು ನಾನು ಹೇಳಲಿಲ್ಲ."

"ನನ್ನ ವಿಲಾಯಿತಿಯಾತ್ರೆಗೆ ಕೈಯಿಂದ ಖರ್ಚು ಮಾಡಬೇಕಾದ ಅಗತ್ಯವಿಲ್ಲ. ನನ್ನ ಸಂಬಳವೆಲ್ಲಾ ನೀನೇ ತೆಗೆದುಕೊಳ್ಳಬಹುದು."

"ಕೆಲಸಕ್ಕೆ ಸೇರಲು ನಾನು ನಿರ್ಧರಿಸಿದ್ದೇನೆ."

ಸುಂದರರಾಯನಿಗೆ ಚಿತ್ತಶಾಂತಿ ಉಳಿಯಲಿಲ್ಲ. ಸುನಂದೆ ವಿನಾಕಾರಣ ಹಟಮಾಡುತ್ತಿರುವಳೆಂಬ ಭಾವನೆ ಅವನಿಗೆ ಬಂದಿತು.

"ನೀನು ಕೆಲಸಕ್ಕೆ ಸೇರುವುದು ನನಗಿಷ್ಟವಿಲ್ಲ."

"ಆ ವಿಷಯದಲ್ಲಿ ನನ್ನ ನಿರ್ಧಾರ ನಾನು ಬದಲಿಸುವುದಿಲ್ಲ."

"ಇದು ಹಟಮಾರಿತನ."

"ಹೌದು : ನಾನು ಹಟಮಾರಿ."

"ನನ್ನ ಇಚ್ಛೆಗೆ ವಿರುದ್ಧವಾಗಿ ನೀನು ಕೆಲಸಕ್ಕೆ ಸೇರಿದರೆ ನಮ್ಮಿಬ್ಬರಿಗೂ ತುಂಬ ಮನಸ್ತಾಪ ಬರುತ್ತದೆ."

"ಬಂದರೆ ಬರಲಿ."

"ಸಂಸಾರ ಒಡೆದು ಹೋದರೆ ಮತ್ತೆ ಕೂಡಿಸುವುದು ಕಷ್ಟ"

"ಕೂಡದಿದ್ದರೆ ಬೇಡ."

"ನಾನು ನಿನಗೇನು ಅನ್ಯಾಯಮಾಡಿದ್ದೇನೆ."

"ಅನವಶ್ಯಕ ಚರ್ಚೆಯಿಂದೇನು ಪ್ರಯೋಜ."

"ಈ ಮನೋಭಾವದಿಂದ ವಿಶ್ವಾಸ ಬೆಳೆಯುವುದಿಲ್ಲ. ವೈಮನಸ್ಯ ಬೆಳೆಯುತ್ತದೆ."

"ಪ್ರಪಂಚವೇ ನನಗೆ ಬೇಡವಾಗಿದೆ."

"ನಿಮ್ಮಣ್ಣ ಬರುವುದಕ್ಕೆ ಮುಂಚೆ ನೀನು ಹೀಗೆ ಮಾತನಾಡು ತ್ತಿರಲಿಲ್ಲ."

"ಪುನಃ ನಮ್ಮಣ್ಣನ ಸುದ್ದಿ ತೆಗೆಯುತ್ತಿರುವಿರಲ್ಲಾ."

"ನಿಮ್ಮಣ್ಣನ ಸುದ್ದಿ ತೆಗೆದು ಅವರನ್ನು ಆಕ್ಷೇಪಿಸಬೇಕೆಂಬುದು ನನ್ನಿಚ್ಛೆಯಲ್ಲ. ಆದರೆ ನಿನ್ನ ವಿಚಿತ್ರ ನಡೆವಳಿಕೆಗೆ ಕಾರಣವಿರಬೇಕಷ್ಟೆ."

"ಕಾರಣ ಹೇಳಿದೆನಲ್ಲ. ನನಗೆ ಪ್ರಪಂಚ ಬೇಡವಾಗಿದೆ."

"ನೀನು ಯಾವುದನ್ನು ಪ್ರಪಂಚ ಎನ್ನುವೆಯೋ ಅದು ಕೇವಲ ನಿನ್ನ ದಾಗಿಲ್ಲ - ನನ್ನದೂ ಆಗಿದೆ."

"ಸುಮ್ಮನೆ ವಾದಮಾಡಿ ಏನು ಪ್ರಯೋಜನ ?"

"ನಿನ್ನ ಮನಸ್ಸಿನಲ್ಲೇನಿದೆ, ಅದನ್ನಾದರೂ ಸ್ಪಷ್ಟವಾಗಿ ಹೇಳು."

"ಹೇಳಿದೆನಲ್ಲ. ನಾನು ಮೈಸೂರಿಗೆ ಹೋಗಬೇಕು - ಅಲ್ಲಿ ಕೆಲಸ ಸೇರಬೇಕು."

"ಇದೇ ನಿನ್ನ ಕೊನೆಯ ನಿರ್ಧಾರವೇ ?"

"ಹೌದು" ಎಂದಳು.

ಸುಂದರರಾಯನ ಮೇಲೆ ಆಕಾಶವೇ ಕಳಚಿಬಿದ್ದಂತಾಯಿತು. ಸುನಂದೆಯ ಮನೋವಿಕಲ್ಪದ ಕಾರಣವೇನಿರಬಹುದೆಂದು ಆಲೋಚಿಸಿದ್ದೇ ಆಲೋಚಿಸಿದ - ಬಗೆಹರಿಯದಾಯಿತು.

ಲ್ಯಾಬೊರೇಟರಿಗೆ ಬಂದು ಕುಳಿತು ಗಫೂರನನ್ನು ಕರೆದು ಅವನಿಗೆ ಸೂಕ್ಷ್ಮವಾಗಿ ತನ್ನ ಭವಿಷ್ಯವನ್ನು ತಿಳಿಸಿದ. ಸುನಂದೆಯ ಮನಃಸ್ಥಿತಿಯ ಬಗ್ಗೆ ಗಫೂರ್ ಬೆಳಕುಚೆಲ್ಲಬಹುದೆಂಬ ನಂಬಿಕೆ ಸುಂದರರಾಯನಿಗಿತ್ತು. ಗಫೂರನೇ ಕೇಳಿದ

"ನೀವು ಶೀಮೆಗೆ ಹೋದ್ರೆ ಅಮ್ಮಾಜಿ ಎಲ್ಲಿರುವುದು ಸರ್ಕಾರ್ ?"

"ಇಲ್ಲೇ ಇರುತ್ತಾರೆ. ಏಕೆ ಹಾಗೆ ಕೇಳುವೆ ?"

"ಇಲ್ಲಿರುವುದಿಲ್ಲ - ಮೈಸೂರ್‍ಗೆ ಒಲ್ಟುಹೋಗುತ್ತೀನಿಂತ ಹೇಳ್ತಾಅವ್ರೆ."

"ನಾನು ಊರಿನಲ್ಲಿಲ್ಲದಿದ್ದಾಗ ಅಮ್ಮಾವರು ಹೇಗಿರುತ್ತಿದ್ದರು ಗಫೂರ್ - ಏನು ಮಾಡುತ್ತಿದ್ದರು ?"

"ಭಾಳ ಮಂಕಾಗಿರ್‍ತಾರೆ ಸರ್ಕಾರ್ - ಯಾವಾಗ ನೋಡಿದ್ರೂ ಕಸೂತಿ ಹಾಕ್ತಾ ಇರ್‍ತಾರೆ. ಈಚೆಗಂತೂ ನನ್ನ ಸಂಗಡ ಮಾತೇ ಆಡುವುದಿಲ್ಲ."

"ಇದಕ್ಕೆ ನೀನೇನು ಹೇಳುತ್ತೀ ?"

"ಮೈಸೂರಿಗೆ ಹೋಗಿ ಬರಲಿ ಬಿಡಿ ಸರ್ಕಾರ್."

"ಮೈಸೂರಿಗೆ ಹೋಗಿ ಅಲ್ಲಿ ಕೆಲಸ ಸೇರುತ್ತಾರಂತೆ !"

ಗಫೂರನಿಗೂ ಆಶ್ಚರ್ಯವಾಯಿತು. ಅವನೂ ಯೋಚನೆ ಮಾಡುತ್ತ ನಿಂತುಬಿಟ್ಟ.

ಸುನಂದೆಯ ಮನೋರೋಗದ ಕಾರಣವನ್ನರಿಯಲು ಸುಂದರರಾಯ ಮಾಡಿದ ಪ್ರಯತ್ನ ಸಂಪೂರ್ಣವಾಗಿ ನಿಷ್ಫಲವಾಯಿತು. ದಿನಗಳೆದಂತೆ ಸುನಂದ ಹೆಚ್ಚುಹೆಚ್ಚು ಅಸಹನೆ ತೋರಲಾರಂಭಿಸಿದಳು. ಮನಸ್ಸು ಬಂದರೆ ಅಡಿಗೆ ಮಾಡುವಳು - ಬೇಡವಾದರೆ ತೆಪ್ಪಗೆ ಕುಳಿತುಬಿಡುವಳು.

ಸಂದಿಗ್ಧಪರಿಸ್ಥಿತಿಯನ್ನು ಹೋಗಲಾಡಿಸಲು ಸುಂದರರಾಯ ನಿರ್ಧರಿಸಿ ಒಂದು ದಿನ

"ಸುನಂದಾ, ನೀನು ಮೈಸೂರಿಗೆ ಹೋಗು, ನಾನು ಬೇಡವೆನ್ನುವುದಿಲ್ಲ. ಆದರೆ ಕೆಲಸಕ್ಕೆ ಮಾತ್ರ ಸೇರಬೇಡ."

ಸುನಂದಾ ಕೆಣಕಿದ ಸರ್ಪಿಣಿ ಹೆಡೆಯೆತ್ತಿ ನಿಲ್ಲುವಂತೆ ನಿಂತು

"ನನ್ನೇಕೆ ಹೀಗೆ ಗೋಳು ಹುಯ್ದುಕೊಳ್ಳುವಿರಿ. ನಾನು ಕೆಲಸವಾದರೂ ಸೇರುತ್ತೇನೆ - ಹಾಳಾಗಿಯಾದರೂ ಹೋಗುತ್ತೇನೆ. ನನ್ನ ಗೊಡವೆಗೆ ಬರಬೇಡಿ" ಎಂದು ಅಬ್ಬರಿಸಿದಳು.

ಸುಂದರರಾಯನಿಗೆ ಬೇರೆ ಮಾರ್ಗವೇ ಉಳಿಯಲಿಲ್ಲ. ಗಫೂರನ ಜತೆಮಾಡಿ ಸುನಂದೆಯನ್ನು ಮೈಸೂರಿಗೆ ಕಳುಹಿಸಿಕೊಟ್ಟ.

ಗಫೂರ್ ಸುನಂದೆಯನ್ನು ಬಿಟ್ಟು ಊರಿಗೆ ಹಿಂದಿರುಗಿದ ಮೇಲೆ

"ಏನು ಹೇಳಿದರು ಗಫೂರ್" ಎಂದು ಕೇಳಿದ.

''ಸುಮ್ಮನೆ ಅಳುತ್ತಿದ್ದರು ಸರ್ಕಾರ್.''

''ದೊಡ್ಡ ಅಮ್ಮಾವರಿಗೆ ಈ ವಿಷಯ ತಿಳಿಸಲಿಲ್ಲವೇ ?''

''ತಿಳಿಸಿದೆ. ಕೆಲವು ದಿವಸ ಹೋಗಲಿ ಎಂದವರು ಹೇಳಿದರು.''

''ಗಫೂರ್ . . . ''

''ಸರ್ಕಾರ್.''

''ಈ ಮನೆ, ಮಠ ಕಟ್ಟಿಕೊಂಡು ನನಗಾಗಬೇಕಾದದ್ದೇನು ? ನಿನ್ನ ವಶದಲ್ಲಿ ಬಿಟ್ಟು ಹೋಗುತ್ತೇನೆ. ಮನೆ ಮಾರಿಬಿಟ್ಟು ಬರುವ ಹಣವನ್ನು ಸುನಂದನಿಗೆ ಕಳುಹಿಸಿಕೊಟ್ಟುಬಿಡು.''

''ನೀವು ಸರ್ಕಾರ್.''

''ವಿಲಾಯಿತಿಯಲ್ಲಿಯೇ ಉಳಿದುಕೊಳ್ಳುತ್ತೇನೆ. ಇಲ್ಲಿಗೆ ಯಾವ ಸೌಖ್ಯಕ್ಕಾಗಿ ಬರಬೇಕು.''

ಗಫೂರನ ಬಿಳಿಯ ದಾಡಿಯ ಮೇಲೆ ಒಂದೊಂದೇ ಹನಿ ಬಿದ್ದು ಅದನ್ನು ತೋಯಿಸಿತು. ಗಫೂರ್ ಎದ್ದುಬಂದು ಸುಂದರರಾಯನ ಕಾಲು ಹಿಡಿದುಕೊಂಡು.

''ಸರ್ಕಾರ್, ನನ್ನ ಮಾತು ಕೇಳ್ತೀರಾ ?''

''ಹೇಳು ಗಫೂರ್.''

''ನಿಮ್ಮ ಕೆಲಸದಿಂದ ಪರಪಂಚಕ್ಕೆ ಕ್ಷೇಮ ಆಗ್ತೈತೆ ಎಂದು ಹೇಳ್ತಿದ್ರಿ ಜ್ಞಾಪ್ತಿ ಐತೇ ?''

''ಇದೆ ಗಫೂರ್.''

''ಬಡವರ ಉದ್ಧಾರ ಆಗ್ತೈತೆ ಎಂತಾ ಹೇಳ್ತಿದ್ರಿ.''

''ಹೌದು.''

''ನೀವು ಮನಸ್ಸು ಕೆಡಿಸ್ಕೊಂಡ್ರೆ ಖುದಾ ಮೆಚ್ತಾನಾ ಸರ್ಕಾರ್.''

''ನಿನ್ನ ಖುದಾ ನನಗೇನು ಮಾಡಿದ್ದಾನೆ ನೋಡು.''

''ಪರವರ್ದಿಗಾರ್ ಅನ್ಯಾಯ ಮಾಡಾಕಿಲ್ಲ ಸರ್ಕಾರ್. ನೀವು ಸೀಮೆಗೆ ಹೋಗಿಬನ್ನಿ. ಅಷ್ಟೊತ್ತಿಗೆ ಅಮ್ಮಾವ್ರಿಗೆ ತಬ್ಬಿಯತ್ ಚೆಂದಾಕಿ ಆಗಿರ್ತೈತೆ - ನಾನೇ ಅವರನ್ನು ಇಲ್ಲಿಗೆ ಕರ್ಕೊಂಡು ಬತ್ತೇನಿ.''

''ಇಲ್ಲ ಗಫೂರ್, ಅವಳನ್ನು ಯಾವದೋ ಭೂತ ಹಿಡಿದುಕೊಂಡಿದೆ.''

"ಆ ಬೂತ ನಾನು ಬಿಡಸ್ತೀನಿ ಸರ್ಕಾರ್. ನನ್ನ ಮ್ಯಾಕೆ ಭರೋಸಾ ಮಡಗಿ."

"ಗಫೂರ್ - ಯಾವ ಜನ್ಮದ ಬಂಧುವೋ ನೀನು"

ಎಂದವನೇ ಗಫೂರನ ಹೆಗಲಮೇಲೆ ತಲೆಯಿಟ್ಟು ಮಕ್ಕಳಂತೆ ಗಳಗಳನೆ ಅತ್ತುಬಿಟ್ಟ.

೨೪

ಪುಷ್ಪ ಬಾಗಿಲು ತೆಗೆದೊಡನೆಯೇ ಸಂಜೀವ ಹೋಗಿ ಅವಳ ರೂಮಿನಲ್ಲಿ ಕುಳಿತ. ಪುಷ್ಪ ಬಂದು ಸಮೀಪದಲ್ಲಿ ಗಂಭೀರವಾಗಿ ನಿಂತಳು. ಸಂಜೀವ ಅಸ್ತವ್ಯಸ್ತನಾಗಿದ್ದುದನ್ನು ಗ್ರಹಿಸಿ

"ನಿಮ್ಮ ಮೇಲೆ ನನಗೆ ತುಂಬ ಕೋಪ ಬಂದಿದೆ" ಎಂದಳು.

"ಬಂದಿರಬೇಕು."

"ಏಕೆ ಎಂದು ಕೇಳುವುದಿಲ್ಲವೇ ?"

"ಏಕೆ ?"

"ಮೂರು ದಿವಸದಿಂದ ಎಲ್ಲಿ ಮಾಯವಾಗಿದ್ದಿರಿ."

"ನಾನು ಊರಿನಲ್ಲಿರಲಿಲ್ಲ."

"ಒಂಟಿಕೊಪ್ಪಲಿಗೆ ಯಾತ್ರೆ ಮಾಡಿ ಮಾಡಿ ನನಗೆ ಸಾಕಾಯಿತು."

"ಐ ಆಮ್ ವೆರಿ ಸಾರಿ (I am Very Sorry)"

"ಯಾವ ಊರಿಗೆ ಹೋಗಿದ್ದಿರಿ ?"

"ಬೆಂಗಳೂರಿಗೆ."

"ಅದೇನು ಇಷ್ಟು ಅರ್ಜೆಂಟ್ (urgent) ನನಗೆ ಒಂದು ಮಾತು ಹೇಳಿ ಹೋಗಬಾರದಾಗಿತ್ತೇ ?"

"ನಿನಗೆ ಹೇಳಿ ಹೋಗುವ ಹಾಗಿರಲಿಲ್ಲ."

"ಏಕೆ ಹೀಗಿದ್ದೀರಿ ದೊರೆ."

ನೇವರಿಸಲು ಬಂದ ಅವಳ ಕೈಗಳನ್ನು ಮೆಲ್ಲನೆ ಸರಿಸಿ, ಅವಳನ್ನು ದಿಟ್ಟಿಸಿನೋಡಿ

"ಪುಷ್ಪಾ - ನಾನು ಒಂದೆರಡು ಪ್ರಶ್ನೆ ಕೇಳಬೇಕಾಗಿದೆ. ಕೇಳಲೇ ?"

"ಕೇಳಿ."

"ನೀನು ನನಗೇಕೆ ಸುಳ್ಳು ಹೇಳಿದೆ."

"-ಸುಳ್ಳು ! - ಸುಳ್ಳಿಲ್ಲಿ- ಹೇಳಿದೆ."

"ನನ್ನ ವಿಶ್ವಾಸದಲ್ಲಿ ಯಾವ ಕೊರತೆಯಿತ್ತು ?"

"ಯಾವ ಕೊರತೆಯೂ ಇರಲಿಲ್ಲವಲ್ಲ."

"ನಾನು ನಿನಗೆ ಮೋಸಮಾಡಿರುವೆನೇ ? "

"ಇಲ್ಲ."

"ನೀನು ನನಗೇಕೆ ಮೋಸಮಾಡಿದೆ ?"

"ನಾನೇನು ಮಾಡಿದೆ ?"

"ಈ 'ಅಂಕಲ್ ' ಯಾರು ?"

"ನನ್ನ ಅಂಕಲ್."

"ಅಲ್ಲ - ಈತ ಕೆ. ಜಿ. ಎಫ್‌ನಲ್ಲಿ ಗಣಿ ಕಂಟ್ರ್ಯಾಕ್ಟರ್. ನಿನ್ನ ಅಕ್ಕ ಜ್ಯಾಡಿಯ ಗೆಳೆಯನಾಗಿದ್ದ. ಜ್ಯಾಡಿಗೆ ಮದುವೆಯಾದ ಮೇಲೆ ನಿನ್ನ ಗೆಳೆಯನಾಗಿದ್ದ."

"ನಿಮಗಿಷ್ಟು ಸುಳ್ಳು ಹೇಳಿ ನಿಮ್ಮ ಹಾಲುಮನಸ್ಸಿನಲ್ಲಿ ವಿಷ ಹಿಂಡಿದವರು ಯಾರು ದೊರೆ."

"ಅಂಕಲ್ ಜತೆ ನೀನು ಬೆಂಗಳೂರಿಗೆ ಹೋದೆಯಲ್ಲ, ಆಗ ನಿನ್ನಕ್ಕ ಜ್ಯಾಡಿ ಕಾಹಿಲೆ ಮಲಗಿದ್ದಳೇ ?"

"ಅವಳನ್ನೇ ಕೇಳಿ ನೋಡಿ."

"ಕೇಳಿ ನೋಡಿದೆ - ಆಗ ನೀನು ಅವರ ಮನೆಯಲ್ಲಿರಲಿಲ್ಲ - ಸಿಲ್ವರ್ ಹೊಟೇಲಿನಲ್ಲಿ ಅಂಕಲ್ ಜತೆಗಿದ್ದೆ - ಹನ್ನೆರಡನೆಯ ನಂಬರು ರೂಮಿನಲ್ಲಿ!"

ತನ್ನ ಸುಳ್ಳಿನ ಕೋಟೆ ಕುಸಿದುಬಿದ್ದುದನ್ನು ಪುಷ್ಪ ಕಂಡುಕೊಂಡಳು. ಅವಳ ಜೀವನದಲ್ಲಿ ಮಹಾಪೂರ ಬಂದಂತಾಗಿತ್ತು. ಆದರೂ ಬದುಕಬೇಕೆಂಬ ಆಸೆ - ಮಹಾಪೂರಕ್ಕೆ ಸಿಕ್ಕಿದವನು ಜೊಂಡು ಹುಲ್ಲನ್ನು ಹಿಡಿದುಕೊಳ್ಳುವಂತೆ ಅವಳು ಸತ್ಯದ ಮರೆಹೊಕ್ಕಳು.

"ದೊರೆ - ನಾನು ಸುಳ್ಳು ಹೇಳಿದೆ. ನಿಮಗೆ ಮೋಸಮಾಡಿದೆ - ಆದರೆ ಉದ್ದೇಶಪೂರ್ವಕವಾಗಿ ಹಾಗೆ ಮಾಡಲಿಲ್ಲ."

"ಅಂಕಲ್ ಶ್ರೀಮಂತ !"

"ಅದಕ್ಕಲ್ಲ ಹೊರೆ. ನನ್ನ ಮನೆಯ ವಿಷಯ ನಿಮಗೆ ಮೊದಲೇ ತಿಳಿಸಿರುವೆನಲ್ಲ. ನಮ್ಮ ಸಂಸಾರ ಸಾಗಿಸುತ್ತಿದ್ದವನು ಅಂಕಲ್ - ಡ್ಯಾಡಿ ಲಗ್ನವಾದ ಮೇಲೆ ಶನಿ ನನಗೆ ಗಂಟುಬಿದ್ದಿತು"

"ಇವನ್ನು ನನಗೆ ಮೊದಲೇ ಹೇಳಬಹುದಾಗಿತ್ತಲ್ಲ."

"ಧೈರ್ಯವಾಗಲಿಲ್ಲ."

"ನಮ್ಮ ಲಗ್ನ ನಿಶ್ಚಯವಾದ ಮೇಲೂ ಅಂಕಲ್ ಜತೆ ಬೆಂಗಳೂರಿಗೆ ಹೋಗಲು ಧೈರ್ಯವಾಯಿತಲ್ಲವೇ ?"

"ನಡೆದ ಸಂಗತಿ ಹೇಳಲೇ ?"

"ಹೇಳು."

"ನೀವು ನಂಬುವಿರಾ ?"

"ಈಗ ಯಾವುದನ್ನೂ ನಂಬುವ ಸ್ಥಿತಿಯಲ್ಲಿ ನಾನಿಲ್ಲ - ಹೇಳು."

"ನಾವು ಬೆಂಗಳೂರಿಗೆ ಹೋಗಿ ಬಂದ ಕೆಲವೇ ದಿವಸಗಳಲ್ಲಿ ಅಂಕಲ್ ಬಂದ. ಅವನಿಗೆ ನಮ್ಮ ಎಂಗೇಜ್‌ಮೆಂಟ್ ವಿಷಯ ತಿಳಿಸಿ ನನ್ನನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸಿದೆ. ಬೆಂಗಳೂರಿಗೆ ಬಂದು ಮೂರು ದಿವಸ ಜತೆಯಲ್ಲಿ ನಾನಿದ್ದರೆ ಬಿಡುಗಡೆ ಮಾಡುವುದಾಗಿ ಅವನು ಹೇಳಿದ. ವಿಧಿಯಿಲ್ಲದೆ ನಾನು ಅವನ ಜತೆ ಹೋಗಬೇಕಾಗಿ ಬಂತು."

"ನನಗೆ ಕನಕಮ್ಮನ ಮನೆಯಲ್ಲಿ ಏನು ನಡೆಯುತ್ತಿತ್ತು ?"

"ನನ್ನ ಪತನಕ್ಕೆ ಅವಳೂ ಕಾರಣ - ಒಂದು ಪ್ರಾಣಿ ತಲೆಯೆತ್ತಿ ನಿಲ್ಲಲು ಯಾರೂ ಸಹಾಯ ಮಾಡುವುದಿಲ್ಲ, ಆ ಪ್ರಾಣಿಯನ್ನು ನರಕಕ್ಕೆ ತಳ್ಳಲು ಎಲ್ಲರೂ ಶಕ್ತಿಮೀರಿ ಸಹಾಯ ಮಾಡುತ್ತಾರ"

"ಕನಕಮ್ಮ ನಿನ್ನ ಮೈ ಇಳಿಸಿದ್ದು ನಿಜವೇ ?"

"ಅವಳೇ ಇದನ್ನೂ ನಿಮಗೆ ಹೇಳಿದಂತಿದೆ - ಸುಳ್ಳು ಎಂದು ಹೇಗೆ ಹೇಳಲಿ."

"ನಿನ್ನ ಪಾಪ ಮುಚ್ಚಲು ನಾನು ಬೇಕಾಯಿತಲ್ಲವೇ ?"

"ಅದನ್ನು ನಾನು ಒಪ್ಪಲಾರೆ ಹೊರೆ. ಪಾಪದ ನರಕಕೂಪದಿಂದ ನೀವು ನನ್ನನ್ನು ಮೇಲಕ್ಕೆತ್ತಿದಿರಿ. ನನಗೆ ಮನುಷ್ಯತ್ವ ಕೊಟ್ಟು ಕಾಪಾಡಿದಿರಿ.

ನಿಮ್ಮ ಹೆಸರನ್ನು ಅಡ್ಡವಾಗಿಟ್ಟುಕೊಂಡು ಪಾಪಜೀವನ ನಡೆಸಬೇಕೆಂದು ನಾನು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ."

"ಈಗ ನಾನೇನು ಮಾಡಬೇಕೆಂದು ಹೇಳುವೆ."

"ನನ್ನ ಅಪರಾಧಕ್ಕೆ ಬೇಕಾದ ಶಿಕ್ಷೆ ವಿಧಿಸಿ - ಆದರೆ ನನ್ನ ಕೈ ಬಿಡಬೇಡಿ."

"ಸುಳ್ಳಿನ ಜತೆ ಸಂಸಾರಮಾಡು ಎನ್ನುವೆಯಾ ? ಇನ್ನು ಮೇಲೆ ನಿನ್ನ ಯಾವ ಮಾತು ನಂಬಲು ನನಗೆ ಸಾಧ್ಯ ?"

"ದೊರೆ ನನ್ನ ಬಾಳು ಸುಳ್ಳು - ನಾನು ಸುಳ್ಳು - ಆದರೆ ಒಂದು ವಿಷಯ ಸುಳ್ಳಲ್ಲ."

"ಏನದು ?"

"ನಿಮ್ಮಲ್ಲಿ ನಾನಿಟ್ಟಿರುವ ಪ್ರೇಮ."

"ಪ್ರೇಮ ! ಅದು ಅಮೂಲ್ಯವೆಂದು ನಾನು ಭಾವಿಸಿದ್ದೆ."

"ನಿಮ್ಮನ್ನು ಬಿಟ್ಟು ನಾನು ಬದುಕಲಾರೆ"

"ನೀನು ಬದುಕಬಲ್ಲೆ ಪುಷ್ಪ."

"ನಾನು ನಿಮ್ಮ ಚರಣದಾಸಿಯಲ್ಲವೇ ?"

"ಇನ್ನಾದರೂ ಈ ನಾಟಕದ ಮಾತುಗಳನ್ನು ಸಾಕುಮಾಡು."

"ನನ್ನನ್ನು ಕ್ಷಮಿಸುವುದಿಲ್ಲವೇ ?"

"ಕ್ಷಮಿಸಲು ನಾನು ಯಾರು ?"

"ನಿಮ್ಮ ಕಣ್ಣಿನಲ್ಲಿ ನಾನಷ್ಟು ತುಚ್ಛವಸ್ತುವೇ ?"

"ನಾನು ಹಾಗೆ ಹೇಳಲಿಲ್ಲ - ಹೇಳುವುದೂ ಇಲ್ಲ. ನಾನು ತುಚ್ಛವಸ್ತು - ನಿನ್ನ ಹೃದಯ ಗೆಲ್ಲುವ ಯೋಗ್ಯತೆ ನನಗಿರಲಿಲ್ಲ."

"ನನ್ನನ್ನು ತೊರೆಯುತ್ತೀರಾ ?"

"ತೊರೆದಿರುವವಳು ನೀನು."

ಎಂದವನೇ ಎದ್ದುನಿಂತು, ಕಿಸೆಯಿಂದ ಪುಷ್ಪನ ಕಾಗದಗಳ ಕಟ್ಟನ್ನು ತೆಗೆದು

"ನಿನ್ನ ಕಾಗದಗಳು - ಪ್ರೇಮ ಪತ್ರಗಳು. ನನ್ನ ಕಾಗದಗಳನ್ನು ಸುಟ್ಟುಬಿಡು."

"ಇದೇ ಕೊನೆಯ ಮಾತೇ ?"

ಸಂಜೀವ ಅವಳ ಹಿಡಿತದಿಂದ ಬಿಡಿಸಿಕೊಂಡು ಹೊರಗೆ ಹೋಗ ಲೆತ್ನಿಸಿದ. ಪುಷ್ಪ ಬಾಗಿಲಿಗೆ ಅಡ್ಡವಾಗಿ ನಿಂತು

"ಹೋಗಬೇಡಿ ದೊರೆ" ಎಂದು ಚೀರಿದಳು.

ಸಂಜೀವ ಬಲಪ್ರಯೋಗಮಾಡಿ ಪುಷ್ಪನನ್ನು ಒಂದು ಪಕ್ಕಕ್ಕೆ ತಳ್ಳಿ ವೇಗವಾಗಿ ನಡೆದ. ಪುಷ್ಪನನ್ನು ಅವನನ್ನು ಹೆಬ್ಬಾಗಿಲವರೆಗೆ ಹಿಂಬಾಲಿಸಿ ದಳು. ಆದರೆ ಸಂಜೀವನನ್ನು ನಿಲ್ಲಿಸಲಾಗಲಿಲ್ಲ. ಬಾಗಿಲಿನ ಮೇಲೆ ಕುಸಿದು ಬಿದ್ದಳು. ಹಣೆಯಿಂದ ನೆತ್ತರು ಚಿಮ್ಮಿತು. 'ಅಮ್ಮಾ' ಎಂದು ಚೀರಿದಳು. ಒಳಗಿದ್ದ ಹೆಲನ್ ಅಮ್ಮ ಓಡಿಬಂದು ಮಗಳನ್ನೆತ್ತಿ ಒಳಕ್ಕೆ ಕರೆದೊಯ್ದಳು.

ಸಂಜೀವ ಪುಷ್ಪನ ಮನೆಯಿಂದ ಹುಚ್ಚನಂತೆ ಓಡಿದ.

ಹೆಲನ್ ಅಮ್ಮ ಮಗಳ ತಲೆಗೆ ಪಟ್ಟಿಕಟ್ಟಿ ಅವಳನ್ನು ಸಂತೈಸಲೆತ್ನಿಸಿ ದಳು. ತಾಯಿಯ ಕೈಬಿಡಿಸಿಕೊಂಡು ಪುಷ್ಪ ಓಡಿದಳು. ಹೆಲನ್ ಅಮ್ಮ ಅವಳನ್ನು ಹಿಂಬಾಲಿಸಿ ಹಿಡಿದು ನಿಲ್ಲಿಸಿದಳು.

"ನಾನು ಅವರ ಮನೆಗೆ ಹೋಗಬೇಕು."

"ಹುಚ್ಚಿ ಹಾಗೆ ಆಡಬೇಡ - ತಡೀ, ನಾನೂ ಬರುತ್ತೇನೆ. ಗಾಡಿ ಮಾಡಿಕೊಂಡು ಹೋಗೋಣ"

ಎಂದು ಸಮಾಧಾನ ಹೇಳಿದಳು.

ತಾಯಿ, ಮಗಳು ಒಂಟಿಕೊಪ್ಪಲಿಗೆ ಬಂದು ಸಂಜೀವನ ಮನೆಯ ಮೆಟ್ಟಿಲ ಮೇಲೆ ಕುಳಿತರು. ಮನೆಗೆ ಹಾಕಿದ ಬೀಗ ಹಾಗೇ ಇತ್ತು.

ಸಂಜೀವ ಮನೆಯ ಕಡೆ ಹೋಗಲು ತಿರುಗಿದ. 'ಪುಷ್ಪ ನನ್ನನ್ನು ಹುಡುಕಿಕೊಂಡು ಮನೆಗೆ ಬಂದರೂ ಬರಬಹುದು. ಅಲ್ಲಿಗೆ ಹೋಗುವುದು ಬೇಡ' ಎಂದುಕೊಂಡ. ಮನೆಯ ನೆನಪು ಬಂದೊಡನೆಯೇ ಅವನ ಮೈ ನಡುಗಿತು. 'ಅದು ಮನೆಯಲ್ಲ - ನನ್ನ ಪ್ರೇಮದ ಸಮಾಧಿಸ್ಥಳ' ಎಂಬ ಭಾವನೆ ಅವನ ಮನಸ್ಸಿನಲ್ಲಿ ನೆಟ್ಟಿತು.

'ಪುಷ್ಪ ಇರುವ ಈ ಮೈಸೂರೇ ಬೇಡ - ಸಕಲ ಸೌಭಾಗ್ಯವನ್ನೂ ಇಲ್ಲಿ ಕಂಡದ್ದಾಯಿತು. ಇನ್ನೂ ಯಾವ ಸೌಖ್ಯಾಭಿಲಾಷೆಯಿಂದ ಇಲ್ಲಿ ನಿಲ್ಲಬೇಕು'

ಎಂದುಕೊಂಡು ಸ್ಟೇಷನ್ ಮುಟ್ಟಿದ. ಬೆಂಗಳೂರು ಮೆಯಿಲ್ ಗಾಡಿ ಸಿದ್ಧವಾಗಿ ನಿಂತಿತ್ತು. ಟಿಕೆಟ್ ಕೊಂಡು ಅದರಲ್ಲಿ ತನ್ನ ದೇಹ ತುರುಕಿದ.

ಕೆಲವೇ ದಿವಸಗಳ ಹಿಂದೆ ಇದೇ ರೈಲಿನಲ್ಲಿ ಬೆಂಗಳೂರಿಗೆ ಹೋದ ನೆನವು ಬಂದಿತು. ಆಗ ಜತೆಯಲ್ಲಿ, ಪುಷ್ಪ ಇದ್ದಳು. - 'ನೆನಪು - ಹಾಳು ನೆನವೇಕೆ ಹೀಗೆ ಕಾಡುತ್ತಿದೆ.'

ಬೆಳಿಗ್ಗೆ ರೈಲು ಬೆಂಗಳೂರು ಮುಟ್ಟಿತು.

'ಹೌದು - ಅದೇ ಬೆಂಗಳೂರೇ - ತಾನೂ ಪುಷ್ಪ ಬಂದು ಸನ್‌ಷೈನ್ ಹೊಟೇಲಿನಲ್ಲಿ ಇಳಿದ ನೆನಪು - ಜತೆಯಲ್ಲಿ ಓಡಿಯಾಡಿದ ನೆನಪು - ಅಂಗಡಿ ಗಳಲ್ಲಿ ವ್ಯಾಪಾರ ಮಾಡಿದ ನೆನವು . ಮತ್ತೆ ನೆನಪಿನ ಕಾಟ.'

ಬೆಂಗಳೂರು ಬಿಟ್ಟು ದೂರ ಹೋಗಬೇಕೆನ್ನಿಸಿತು. ಮದರಾಸಿನ ಗಾಡಿ ಸಿದ್ಧವಾಗಿತ್ತು. 'ಮದರಾಸಿಗೆ ಹೋಗುವುದೇ ? - ಏಕೆ ಹೋಗಬಾರದು ? ಎಲ್ಲಿಗೆ ಹೋದರೆ ತಾನೆ ಕೇಳುವವರು ಯಾರು ? ಸ್ಟೇಷನ್ನಿನಲ್ಲಿ ಎಷ್ಟು ಜನ ಓಡಿಯಾಡುತ್ತಿದ್ದಾರೆ. ಒಬ್ಬರ ಚಿಂತೆ ಒಬ್ಬರಿಗಿಲ್ಲ. ಎಲ್ಲರಿಗೂ ಅವರವರ ಚಿಂತೆ ! ನನ್ನ ಚಿಂತೆ ಯಾರಿಗೆ ಬೇಕಾಗಿದೆ. ಕೋಟ್ಯಂತರ ಜನ ತುಂಬಿರುವ ಈ ಜಗತ್ತಿನಲ್ಲಿ ಸಂಜೀವನೆಂಬ ಒಂದು ಪ್ರಾಣಿ ಕಾಣೆಯಾದರೆ ಆಗುವ ನಷ್ಟ ವೇನು ? ಪ್ರತಿದಿನ ಎಷ್ಟು ಜನ ಹುಟ್ಟುತ್ತಾರೆ - ಎಷ್ಟು ಜನ ಸಾಯುತ್ತಾರೆ ! ಹುಟ್ಟು ಸಾವುಗಳಿಗಧೀನವಾಗದೆ ಜಗತ್ತಿನ ಕಾರ್ಯ ನಡದೇ ಇದೆ.'

ಪ್ರಾಣವೇಕೆ ಧರಿಸಿರಬೇಕು. ಬದುಕಬೇಕೆಂದೇಕೆ ಬಯಸಬೇಕು ? ಏತಕ್ಕಾಗಿ ಬದುಕಬೇಕು ? ಎನ್ನುವ ಘೋರಭಾವನೆ ಸಂಜೀವನನ್ನು ಒಂದೇ ಸಮನಾಗಿ ಕಾಡತೊಡಗಿದು.

ಸಂಜೀವನ ವಿಚಾರಲಹರಿಗೆ ಕೊನೆಯಿರದಿದ್ದರೂ ಅವನು ಪ್ರಯಾಣ ಮಾಡುತ್ತಿದ್ದ ರೈಲಿಗೆ ಕೊನೆಯಿತ್ತು. ನಾಲ್ಕು ಗಂಟೆಗೆ ರೈಲು ಮದರಾಸ್ ಸ್ಟೇಷನ್ ಮುಟ್ಟಿತು.

ಮತ್ತೆ ಅದೇ ಪ್ರಶ್ನೆ - ಹೋಗುವುದೆಲ್ಲಿಗೆ ?

ಥಟ್ಟನೆ ಸಮುದ್ರದ ನೆನಪಾಯಿತು.

ದಾರಿ ವಿಚಾರ ಮಾಡಿಕೊಂಡು ಸಮುದ್ರದ ದಂಡೆ ಸೇರಿದ. ಅಲ್ಲಿನ ಮರಳು ಹಾಸಿನ ಮೇಲೆ ಸೋತು, ಬೆಂಡಾಗಿ ಪವಡಿಸಿದ. ಸಮುದ್ರದ.

ದಂಡೆಗೆ ವಿಹಾರಕ್ಕೆಂದು ಬಂದಿದ್ದವರು ಬಗೆಬಗೆಯಾಗಿ ಟೀಕೆ ಮಾಡಿಕೊಂಡು ಹೋಗುತ್ತಿದ್ದರು.

'ಚೆನ್ನಾಗಿ ಕುಡಿದಿದ್ದಾನೆ. ಮೈಮೇಲೆ ಪ್ರಜ್ಞೆಯಿಲ್ಲದೆ ಬಿದ್ದಿದ್ದಾನೆ.'

'ರೋಗಗ್ರಸ್ತನಿರಬೇಕು - ಇಲ್ಲದಿದ್ದರೆ ಹೀಗೇಕೆ ಬಂದು ಬೀಳುತ್ತಿದ್ದ.'

'ಯಾವನೊ ಪರದೇಶಿ - ಸಮುದ್ರದ ದಂಡೆಯೇ ಅವನ ಮನೆಯಾಗಿರಬೇಕು.'

'ನಿರುದ್ಯೋಗಿಯಿರಬೇಕು.'

'ಯಾವನೋ ಸೋಮಾರಿ.'

ತಿಂಡಿ ತಿನಸು, ಶೇಂಗಾಯಿ, ಬಲೂನ್, ರಿಬ್ಬನ್ ಮಾರುವವರು ಕೂಗಿಕೊಳ್ಳುತ್ತಿದ್ದರು. ಕಾರ್ಪೊರೇಷನ್ ರೇಡಿಯೋದಲ್ಲಿ ಯಾರದೋ ಸಂಗೀತ - ಎದುರಿಗೆ ನೀಲಸಾಗರದ ಗಂಭೀರಘೋಷ.

ಅಲ್ಲಲ್ಲಿ ಕೆಲವು ಮಕ್ಕಳು ಮರಳಿನಲ್ಲಿ ಗುಬ್ಬಚ್ಚಿಗೂಡು ಕಟ್ಟಿ ಆಡುತ್ತಿದ್ದವು.

ಒಂದೆಡೆ ಪುಟ್ಟ ತಂಗಿ ಕಟ್ಟುತ್ತಿದ್ದ ಗುಬ್ಬಚ್ಚಿಗೂಡುಗಳನ್ನು ಅವಳ ತುಂಟ ಅಣ್ಣ ಕೆಡಿಸುತ್ತಿದ್ದ. ಮಗು ಅಳಲಾರಂಭಿಸಿತು. ಅವಳ ತಂದೆ ಬಂದು ಮಗನನ್ನು ಗದರಿಸಿಕೊಂಡು ಮಗಳಿಗೆ ಗೂಡು ಕಟ್ಟಿಕೊಡಲಾರಂಭಿಸಿದರು. ಅವರ ಪ್ರಯತ್ನ ವಿಫಲವಾದುದನ್ನು ಕಂಡು ಮಗ ನಗಲಾರಂಭಿಸಿದ - ಅಣ್ಣನೊಂದಿಗೆ ಸೇರಿಸಿಕೊಂಡು ಪುಟ್ಟ ತಂಗಿಯೂ ನಗಲಾರಂಭಿಸಿದ್ದಳು.

ಹಣ್ಣು ಹಣ್ಣು ಮುದುಕಿಯೊಬ್ಬಳು ತನ್ನ ಆರೇಳು ವರ್ಷದ ಮಗನ ಕೈಹಿಡಿದು ಭಿಕ್ಷೆ ಬೇಡುತ್ತಿದ್ದಳು. ಮುದುಕಿ ಧರಿಸಿದ್ದ ವಸ್ತ್ರಕ್ಕಿಂತಲೂ ಹೆಚ್ಚು ಜೀರ್ಣವಾಗಿತ್ತು ಅವಳ ಮೈ. ಚಕ್ಕಳದ ಚೀಲದಲ್ಲೊಂದು ಎಲುಬಿನಗೂಡು. ಆ ಮುದುಕಿ ಬದುಕಲು ಬಯಸುತ್ತಿದ್ದಳು. ಅದಕ್ಕಾಗಿ ಕಾಡಿಬೇಡಿ ಅನ್ನ ದೊರಕಿಸುತ್ತಿದ್ದಳು.

ತರುಣ ದಂಪತಿಗಳು ತಮ್ಮ ಮಗಳನ್ನು ಜತೆಯಲ್ಲಿ ಕರೆದು ಓಡಿಯಾಡುತ್ತಿದ್ದರು. ಮಗು ಬಲೂನ್ ಬಯಸಿತು. ಉಬ್ಬಿದ ಬಗೆಬಗೆ ಬಣ್ಣದ ಬಲೂನ್‌ಗಳನ್ನು ಕೊಂಡು ತಂದೆ ಮಗಳ ಕೈಯಲ್ಲಿಟ್ಟ.

ಮೂರು ಜನ ಲಾಯರುಗಳು ಗಟ್ಟಿಯಾಗಿ ಚರ್ಚೆ ಮಾಡಿಕೊಂಡು ಹೋಗುತ್ತಿದ್ದರು.

ಜೀವನ ನವಿಲಿನಂತೆ ಪುಕ್ಕಕೆದರಿಕೊಂಡು ಮಳಲುದಂಡೆಯ ಮೇಲೆ ನರ್ತಿಸುತ್ತಿತ್ತು.

ರೋಗ - ರುಜಿನ - ಸಾವು - ನೋವುಗಳೂ ಅಲ್ಲಿ ಮೂಡಿದ್ದವು, ನಗೆ - ನವಜೀವನ - ಬಾಲ್ಯದ ಮಾಧುರ್ಯ - ಜೀವಿತದ, ಬಯಕೆಗಳೂ ಅಲ್ಲಿ ವಿರಾಜಿಸುತ್ತಿತ್ತು.

ಪವಡಿಸಿದ್ದು ಸಾಕಾಗಿ ಸಂಜೀವ ಎದ್ದು ಸಮುದ್ರದ ಬಳಿಗೆ ಹೋಗಿ, ಅದರ ನೀರಿನಿಂದಲೇ ಮುಖತೊಳೆದ.

ಸಂಜೆ ಮುಗಿಯುತ್ತ ಬಂದಿತ್ತು ವಿಹಾರಕ್ಕೆ ಬಂದಿದ್ದವರ ಸಂಖ್ಯೆ ಕಡಿಮೆಯಾಗುತ್ತಿತ್ತು ನಿರಾಶ್ರಿತರು, ಕಾರ್ಮಿಕರು, ಮನೆಮಠವಿಲ್ಲದ ಭಿಕಾರಿಗಳು ಸಮುದ್ರದ ದಂಡೆಯನ್ನಾಶ್ರಯಿಸಲು ಬರುತ್ತಿದ್ದರು.

ಮಧ್ಯರಾತ್ರಿಯ ವೇಳೆಗೆ ಮಳಲುದಂಡೆ ಪ್ರಶಾಂತವಾಯಿತು. ಅಲ್ಲಲ್ಲಿ ಮಲಗಿದ್ದ ಒಬ್ಬಿಬ್ಬರನ್ನುಳಿದು ಜನಸಂದಣಿಯೆಲ್ಲಾ ಮಾಯವಾಗಿತ್ತು.

ನಭವೂ ನೀಲವಾಗಿತ್ತು - ಸಮುದ್ರವೂ ನೀಲವಾಗಿತ್ತು. ಉಭಯ ನೀಲಗಳ ಮಧ್ಯೆ ಚಂದ್ರ ತನ್ನ ಬೆಳ್ಳಿಯ ಬೆಳಕು ಬಿತ್ತರಿಸಿದ್ದ. ಸಮುದ್ರದ ಒಂದು ಕೊನೆಯಲ್ಲಿ ಬಿದ್ದಿದ್ದ ಚಂದ್ರನ ಬೆಳಕು, ದಂಡೆಯವರೆಗೆ ಹರಡಿ ಕೊಂಡಿತ್ತು.

ಪ್ರಕೃತಿಯಲ್ಲಿಯೇ ಅಪೂರ್ವ ಕಾಂತಿ, ಶಾಂತಿ ವ್ಯಾಪಿಸಿತ್ತು. ಆದರೆ ಸಂಜೀವನ ಹೃದಯ ಕಾಂತಿ, ಶಾಂತಿಗಳಿಗೆ ಪ್ರತಿಧ್ವನಿಸುವ ಸ್ಥಿತಿಯಲ್ಲಿರಲಿಲ್ಲ. ಚಂದ್ರನ ಬೆಳಕಿನ ಬಿತ್ತು 'ಅವನಿಗೆ ಲಾವಾರಸದಂತೆ ಕಂಡುಬಂದಿತು. ಚಂದ್ರನ ಗೋಳಾಕಾರ, ಯಜ್ಞಪಶುವಿಗೊತ್ತುವ ಕಾಸಿದ ಮುದ್ರೆಯಂತೆ ಕಂಡು ಬಂದಿತು.

ಆತ್ಮಹತ್ಯೆಯ ಚಿಂತೆ ಸಂಜೀವನನ್ನು ಎಡಬಿಡದೆ ಕಾಡುತ್ತಿತ್ತು. 'ಈಗ ನಾನು ಸಮುದ್ರ ಹೊಕ್ಕರೆ ಯಾರಿಗೇನು ತೊಂದರೆ. ನಾಳೆ ಹೆಣ ಸಿಕ್ಕಿದರೆ ನನ್ನ ಗುರುತೂ ಸಿಕ್ಕಲಾರದು. ಒಂದು ವೇಳೆ ಜಲಚರಗಳು

ತಿಂದರೆ, ಅದೂ ಒಳ್ಳೆಯದು. ಈ ನಿಷ್ಪ್ರಯೋಜಕ ದೇಹದಿಂದ ಅಷ್ಟಾದರೂ ಪ್ರಯೋಜನವಾಯಿತಲ್ಲ.'

ವೇಳೆಯು ಪ್ರಶಸ್ತವಾಗಿತ್ತು - ಸಂಜೀವನ ಮನಸ್ಸಿನ ಸ್ಥಿತಿಯೂ ಆತ್ಮ ಹತ್ಯೆಗೆ ಅನುಕೂಲವಾಗಿತ್ತು - ಆದರೆ ಬದುಕು ಇನ್ನೂ ತನ್ನ ಮೋಹದ ಬಲೆಯನ್ನು ಬೀಸುತ್ತಲೇ ಇತ್ತು. ಚಂದ್ರನ ಬೆಳಕು, ಮಗುವಿನ ನಗೆ, ನೀಲನಭದ ಚೇತೋಹಾರಿಯಾದ ಸೌಂದರ್ಯ ಅವನನ್ನು ಹಿಂದಕ್ಕೆ ಜಗ್ಗುತ್ತಿತ್ತು. ಆ ನಿರ್ಭಾಗ್ಯ - ನಿಷ್ಪ್ರಯೋಜಕ - ನಿರ್ಜೀವ ಮುದುಕಿಯೂ ಬದುಕಲಾಶಿಸುತ್ತಿದ್ದಳು, ಬಾಳಹೋರಾಟವನ್ನು ಸತತವಾಗಿ ಸಾಗಿಸಿದ್ದಳು. ಅವಳ ಬದುಕಿನಿಂದ ಯಾರಿಗೇನು ಪ್ರಯೋಜನ - ಅವಳಿಗೇನು ಪ್ರಯೋಜನ? ಆದರೂ ಅವಳು ಬದುಕಲು ಬಯಸುತ್ತಿದ್ದುದೇಕೆ?

ಮನಸ್ಸು ಗಟ್ಟಿಮಾಡಿಕೊಂಡು ಸಂಜೀವ ನೀರಿಗಿಳಿದ. ಅವನು ನೀರಿಗಿಳಿದಂತೆ ಅದು ಹಿಂದುಹಿಂದಕ್ಕೆ ಸರಿಯುತ್ತಿತ್ತು 'ಸಮುದ್ರಕ್ಕೂ ನಾನು ಬೇಡವಾದೆನೆ' ಎಂದುಕೊಂಡ. ಸಮುದ್ರದ ಅಸಹಕಾರ ಕಂಡು ಅವನು ಮನಸ್ಸು ಮತ್ತಷ್ಟು ಗಟ್ಟಿಯಾಯಿತು. ದೀರ್ಘನಿರ್ಧಾರ ತಳೆದು ಸಮುದ್ರದ ಒಳಗೆ ನಡೆಯುತ್ತ ಹೋದ. ಸ್ವಲ್ಪದೂರ ಹೋದ ಮೇಲೆ ಯಾವದೋ ನೆನಪುಮಾಡಿಕೊಂಡು ಕ್ಷಣಕಾಲ ನಿಂತ. ಸಮುದ್ರದ ಅಲೆಗಳು ಅವನ ಕಾಲುಗಳ ಮೇಲೆ ಅಪ್ಪಳಿಸುತ್ತಿದ್ದವು.

ಸಂಜೀವ ನೀರಿನ ಮಧ್ಯೆ ಏಕೆ ನಿಂತನೋ, ಎಷ್ಟು ಹೊತ್ತು ನಿಂತನೋ ಅವನಿಗೇ ಎಚ್ಚರವಿಲ್ಲ. ಕಾಲುಗಳು ನೆಲಕ್ಕೆ ನೆಟ್ಟಂತಾಗಿತ್ತು.

ಚಂದ್ರಮಂಡಲ ಕ್ರಮಕ್ರಮೇಣ ಬೇರೆ ರೂಪು ತಳೆಯಲಾರಂಭಿಸಿತು. ಅವನ್ನೇ ದಿಟ್ಟಿಸಿ ನೋಡಿದ. ಚಂದ್ರಮಂಡಲದಲ್ಲಿ ಮೂಡಿದ್ದ ಹರಿಣಿಯ ಛಾಯೆ ಮಾಯವಾಯಿತು, ಅದೇ ಸ್ಥಾನದಲ್ಲಿ ಪರಮಗುರು ಶ್ರೀ ರಾಮಕೃಷ್ಣರು - ಪರಮಪುರುಷ ಯೇಸು ಸ್ವಾಮಿ.

'ನನ್ನನ್ನೇಕೆ ತಡೆಯುತ್ತಿರುವಿರಿ' ಎಂದು ಸಂಜೀವ ಗರ್ಜಿಸಿದ.

ಗುರುದೇವನ ಮುಖದಲ್ಲಿ ಮುಗುಳ್ನಗೆ ಮಲ್ಲಿಗೆಯ ಮೊಗ್ಗೆಯಂತೆ ಅರಳಿತು.

'ನಿಮ್ಮ ಜೀವದಾನ ನನಗೆ ಬೇಕಿಲ್ಲ.'

'ನಿನಗೆ ಜೀವದಾನ ಮಾಡಬೇಕೆಂದಲ್ಲವೇ ನಾನು ಪಿಲಾತನ ಶಿಲುಬೆಯನ್ನೇರಿದ್ದು' ಎಂದು ಯೇಸುಸ್ವಾಮಿ ಉತ್ತರಿಸಿದ.

'ನಾನು ಬದುಕಿ ಆಗಬೇಕಾದದ್ದೇನು?'

ಪೂರ್ವದಿಗಂತದಲ್ಲಾಗಲೇ ಉಷಃಕಿರಣ ಮೂಡುತ್ತಿತ್ತು. ಶ್ರೀ ರಾಮಕೃಷ್ಣ ಅತ್ತ ಕೈ ಮಾಡಿ

'ಸೂರ್ಯ ಹುಟ್ಟಿ ಆಗಬೇಕಾದುದೇನು?' ಎಂದು ಕೇಳಿದರು.

'ಲೋಕಕ್ಕೆ ಸೂರ್ಯನ ಬೆಳಕು ಬೇಕು, ಕಾವು ಬೇಕು, ವಿದ್ಯುತ್ ಶಕ್ತಿ ಬೇಕು.'

'ಲೋಕಕ್ಕೆ ನಿನ್ನ ಬೆಳಕು - ಕಾವು - ಶಕ್ತಿಬೇಕು.'

'ನಾನು ಹುಲುಮನುಜ - ಸೂರ್ಯ ಸಾಕ್ಷಾತ್ ನಾರಾಯಣ.'

'ಅವನು ಸೂರ್ಯನಾರಾಯಣ - ನೀನೂ ನಾರಾಯಣನೇ, ಅವನು ಅಮೃತಪುತ್ರ - ನೀನು ಸಂಜೀವ.'

'ನಿಮ್ಮನ್ನು ನಂಬಿ ನಾನು ಕೆಟ್ಟೆ ಗುರುದೇವ.'

'ನಿಜವಾಗಿ ನೀನು ನನ್ನನ್ನು ನಂಬಿದ್ದೆಯಾ?'

'ಇಲ್ಲವೇ?'

'ಇಲ್ಲ - ನೀನು ಪ್ರೀತಿಸಿದ್ದು ನನ್ನನ್ನಲ್ಲ - ನಿನ್ನನ್ನೇ - ಪುಷ್ಪನನ್ನೂ ನೀನು ಪ್ರೀತಿಸಲಿಲ್ಲ.'

'ಈ ಮಾತು ನೀವು ಹೇಳಿದರೂ ನಾನು ಕೇಳಲು ಸಿದ್ಧನಾಗಿಲ್ಲ'

'ಕ್ಷಮೆಯಿಲ್ಲದ ಪ್ರೇಮ ಪ್ರೇಮವೇ - ಔದಾರ್ಯವಿಲ್ಲದ ಅನುರಾಗ ಅನುರಾಗವೇ. ನನ್ನ ಮಾತಿನಲ್ಲಿ ನಿನಗೆ ನಂಬಿಕೆ ಬಾರದಿದ್ದರೆ ಭಗವಾನ್ ಯೇಸು ಸ್ವಾಮಿಯನ್ನು ಕೇಳು. ವೇಶ್ಯೆಯನ್ನು ಸಂತಳನ್ನಾಗಿ ಮಾಡಿದುದು ಯಾವುದು ಬಲ್ಲೆಯಾ - ಭಗವಾನನ ಅವ್ಯಾಜ ಅಂತಃಕರಣ - ನಿಸ್ಸೀಮ ಪ್ರೇಮ!

'ನಾನೇನು ಮಾಡಲಿ ತಂದೆ?'

'ನನ್ನನ್ನು ತಂದೆಯೆಂದು ಒಪ್ಪಿಕೊಳ್ಳುವೆಯಾ?'

'ಒಪ್ಪಿಕೊಂಡೇ ಇರುವೆನಲ್ಲಾ!'

'ಈಗ ಹೇಳು - ದುಃಖದ ಮೂಸೆಯಲ್ಲಿ ಬೆಂದು ಅಪರಂಜಿಯಾಗಿರುವ ನಿನ್ನ ಹೃದಯವನ್ನು ನನಗೆ ಕೊಡುವೆಯಾ ?'

'ಕೊಡುವೆ ಗುರುಸ್ವಾಮಿ.'

'ನಿನ್ನಣ್ಣ ಮನೆ ಮಾಡಿಕೊಂಡು ನಿನಗಾಗಿ ಕಾಯುತ್ತಿದ್ದಾನೆ. ಅವನ ಬಳಿಗೆ ಹೋಗು. ಅವನು ಹೇಳಿದಂತೆ ಮಾಡು.'

'ನೀವೂ ಭಗವಾನರೂ ನನ್ನ ಕೈಬಿಡಬಾರದು.'

'ಮೂಢ - ನೀನು ಬಿಡು ಎಂದರೂ ನಾವು ಬಿಡುವುದಿಲ್ಲ'

ಅದೇ ಸಮಯಕ್ಕೆ ಬಲವಾದ ಅಲೆಯೊಂದು ಸಂಜೀವನನ್ನೆತ್ತಿಕೊಂಡು ಬಂದು ದಡದ ಮೇಲೆ ಚೆಲ್ಲಿತು. ಗುರುದೇವನೂ, ಯೇಸೂಸ್ವಾಮಿಯೂ ಮಾಯವಾಗಿದ್ದರು.

ಪೂರ್ವ ದಿಗಂತದಲ್ಲಿ ನಿತ್ಯನೂತನ, ನಿತ್ಯಸುಂದರ, ನಿತ್ಯನಿರ್ಮಲನಾದ ಅಮೃತಪುತ್ರ ಮೂಡಿದ್ದ. ಅವನ ಅಮೃತಕಿರಣ ಸಂಜೀವನನ್ನೆಚ್ಚರಗೊಳಿಸಿತು.

ಸಂಜೀವನಿಗೆ ನಿದ್ದೆಕಳೆದೆದ್ದಂತಾಗಿತ್ತು. ಹೆಗಲ ಮೇಲೆ ಹೊತ್ತಿದ್ದ - ಹೆಗಲು ಮುರಿಯುತ್ತಿದ್ದ ಭಾರವನ್ನು ಯಾರೋ ಇಳುಹಿದಂತಾಗಿತ್ತು. ದಾರಿತಪ್ಪಿದ್ದ ಅವನನ್ನು ಗುರುವಿನ ಕೃಪಾಹಸ್ತ ದಾರಿಗೆ ತಂದುಬಿಟ್ಟಿತ್ತು.

'ಯಾವದನ್ನು ನಾನು ಸೃಷ್ಟಿ ಮಾಡಲಾರೆನೋ ಅದನ್ನು ನಾಶಮಾಡುವ ಅಧಿಕಾರ ನನಗೇನಿದೆ. ಈ ದೇಹವನ್ನಿಂದು ನಾನು ಮಣ್ಣುಗೂಡಿಸಬಹುದು. ಆದರೆ ಆ ಮಣ್ಣಿನಿಂದಲೇ ಮತ್ತೆ ಮಾನವಾಕೃತಿಯನ್ನು ನಿರ್ಮಿಸಬಲ್ಲೆನೆ ?'

'ಯಾವ ನಿಮಿತ್ತಕ್ಕಾಗಿ ಈ ದೇಹ ನಿರ್ಮಿತವಾಯಿತು. ಲೋಕದಲ್ಲಿ ಸಹಸ್ರಾರು ಜನ ಹುಟ್ಟುತ್ತಾರೆ - ಸಾಯುತ್ತಾರೆ - ಸೃಷ್ಟಿ - ಲಯಗಳ ಚಕ್ರ ವಿಭ್ರಮಣದರ ರಹಸ್ಯವೇನು ?'

'ಜಗದ ಪ್ರತಿಯೊಂದು ಜೀವಿಯ ಬಾಳಿನಲ್ಲಿಯೂ ಒಂದು ಗುರಿ ಹುದುಗಿದೆಯೇ ? ಗುರಿಯನ್ನರಿತ ಜೀವಿ ಅದನ್ನು ಸಾಧಿಸುತ್ತಾನೆ - ಅರಿಯದವನು ? - ಅವನ ಜೀವನ ವ್ಯರ್ಥವೇ ?'

'ಅಣ್ಣ ಮನೆ ಮಾಡಿಕೊಂಡು ನನಗಾಗಿ ಕಾಯುತ್ತಿರುವನೆಂದು ಗುರುದೇವ ಅಪ್ಪಣೆ ಕೊಡಿಸಿದರು - ನನ್ನನ್ನೂ ಅಣ್ಣ, ಮನೆ ಇವುಗಳ ಬಂಧನದಲ್ಲಿ ಕೆಡವಬೇಕೆಂದು ಗುರುದೇವರೇತಕ್ಕೆ ಅಪೇಕ್ಷಿಸುತ್ತಾರೆ.'

ಗುರುದೇವ ಹೂಡಿದ್ದ ಸಂಚನ್ನು ಭೇದಿಸಲೆತ್ನಿಸುತ್ತಾ ಸಂಜೀವ ನಡೆದ. ದಾರಿ ಕೇಳಿಕೊಂಡು, ಬಸ್ಸು ಹತ್ತಿ ಬಸ್ಸು ಇಳಿದು ಕೊನೆಗೆ ಮೈಲಾಪುರಕ್ಕೆ ಬಂದ. ದಾರಿಯಲ್ಲಿ ಹೋಗುತ್ತಿದ್ದವರೊಬ್ಬರು ಶ್ರೀ ರಾಮಕೃಷ್ಣಾಶ್ರಮ ತೋರಿಸಿದರು.

'ಇದೇ ನನ್ನ ಅಣ್ಣನ ಮನೆಯಿರಬಹುದೇ ?'

ಎಂದುಕೊಂಡೇ ಆಶ್ರಮದ ಒಳಗೆ ಕಾಲಿಟ್ಟ. ಬ್ರಹ್ಮಚಾರಿಯೊಬ್ಬ ಸಂಜೀವನನ್ನು ಕೇಳಿದ

"ಯಾರು ಬೇಕಾಗಿತ್ತು ನಿಮಗೆ ?"

"ಸ್ವಾಮಿಜಿಯವರನ್ನು ಕಾಣಬೇಕಾಗಿತ್ತು."

"ಸ್ವಲ್ಪ ಕೂಡಿ - ಸ್ವಾಮಿಜಿಯವರಿಗೆ ತಿಳಿಸುತ್ತೇನೆ - ಈಗವರು ಪೂಜೆ ಯಲ್ಲಿದ್ದಾರೆ - ಬರುವುದು ಸ್ವಲ್ಪ ತಡವಾಗಬಹುದು."

"ದೇವಮಂದಿರ ತೋರಿಸುವಿರಾ ?"

"ನನ್ನ ಜತೆಯಲ್ಲಿ ಬನ್ನಿ."

ಬ್ರಹ್ಮಚಾರಿ ಸಂಜೀವನನ್ನು ದೇವಮಂದಿರದಲ್ಲಿ ಬಿಟ್ಟು ಸ್ವಾಮಿಜಿ ಯವರನ್ನು ಬರಮಾಡಲು ಹೋದ.

ವೇದಿಕೆಯ ಮೇಲೆ ಸೊಗಸಾದ ಮಂದಾಸನ, ಮಂದಾಸನದಲ್ಲಿ ಭಗವಾನ್ ಶ್ರೀ ರಾಮಕೃಷ್ಣರ ಪದ್ಮಾಸನಾಸೀನ ಅಮೃತಶಿಲಾಮೂರ್ತಿ. ಅತ್ತಿತ್ತ ಮಹಾಮಾತೆ ಶಾರದಾಮಣಿಯವರ, ಸ್ವಾಮಿ ವಿವೇಕಾನಂದರ ತೈಲ ಚಿತ್ರಗಳು. ಮಂದಾಸನದೆದುರು ನಂದಾದೀಪ. ದೇವಮಂದಿರದಲ್ಲಿ ಯಾವ ಆಡಂಬರವೂ ಇರಲಿಲ್ಲ. ಸ್ವಚ್ಛತೆಯೊಂದೇ ಅಲ್ಲಿದ್ದ ಅಲಂಕಾರ.

ಗುರುದೇವನ ಮೂರ್ತಿಯನ್ನು ನೋಡುತ್ತಾ ಸಂಜೀವ ಕುಳಿತ- ಬ್ರಹ್ಮಚಾರಿ ಹಿಂದಿರುಗಲು ತಡವಾಗಲಿಲ್ಲ. ತದೇಕಚಿತ್ತನಾಗಿ ಕುಳಿತಿದ್ದ ಸಂಜೀವನ ವಾಮಭುಜವನ್ನು ಮೃದುವಾಗಿ ಮುಟ್ಟಿ

"ಸ್ವಾಮಿಜಿ ದಯೆಮಾಡಿಸಿದ್ದಾರೆ."

ಸಂಜೀವ ದೀರ್ಘದಂಡ ಪ್ರಣಾಮಮಾಡಿದ. ಅಶ್ರುಧಾರೆ ಸ್ವಾಮಿಜಿ ಯವರ ಪಾದಗಳ ಮೇಲೆ ಪಾರಿಜಾತ ಕುಸುಮಗಳಂತೆ ಉದುರಿದವು.

ಸ್ವಾಮಿಜಿ ಸಂಜೀವನನ್ನು ಹಿಡಿದೆತ್ತಿ ಅಪ್ಪಿ ಜತೆಯಲ್ಲಿ ತಮ್ಮ ರೂಮಿಗೆ ಕರೆದೊಯ್ದರು.

ಸ್ವಾಮಿಜಿಯವರ ರೂಮಿನಲ್ಲಿದ್ದುದು ಒಂದು ಹೊರಸು ಮಂಚ. ಅದರ ಒಂದು ಬದಿಗೆ ಮೇಜು, ಒಂದು ಕಬ್ಬಿಣದ ಕುರ್ಚಿ. ಮೇಜಿನ ಮೇಲೆ ಪುಸ್ತಕಗಳ ಸಾಲು. ಗೋಡೆಯ ಮೇಲೆ ಶ್ರೀ ರಾಮಕೃಷ್ಣ, ಶಾರದಾಮಣಿ ದೇವಿ, ಸ್ವಾಮಿ ವಿವೇಕಾನಂದರ ಭಾವಚಿತ್ರಗಳು. ನೆಲದ ಮೇಲೆ ಜಿಂಕೆಯ ಚರ್ಮ ಹಾಸಲ್ಪಟ್ಟಿತು.

ಸ್ವಾಮಿಜಿ ಹೊರಸು ಮಂಚದ ಮೇಲೆ ಕುಳಿತು ಸಂಜೀವನನ್ನು ಪಕ್ಕದಲ್ಲಿ ಕೂಡಿಸಿಕೊಳ್ಳಲೆತ್ನಿಸಿದರು. ಸಂಜೀವ ಸ್ವಾಮಿಗಳ ಪಾದದ ಬಳಿ ಕುಳಿತ. ಸ್ವಾಮಿಜಿ ಮೃದುವಾಗಿ ಅವನ ತಲೆ ನೇವರಿಸುತ್ತಾ

"ಇಲ್ಲಿಗೆ ಬರಲು ಇಷ್ಟೇಕೆ ತಡಮಾಡಿದೆ ಕಂದಾ. ನಿನಗಾಗಿ ನಾನು ಕಾಯುತ್ತಿದ್ದೆ."

"ಕಾಯುತ್ತಿದ್ದಿರಾ ಸ್ವಾಮಿಜಿ."

"ಕಾಯುತ್ತಿದ್ದೇನೆ - ನಿನ್ನೆಯಿಂದ ಒಂದೇ ಸಮನಾಗಿ ಕಾಯುತ್ತಿದ್ದೇನೆ. ನೀನು ಬಂದ ಕೂಡಲೆ ತಿಳಿಸಬೇಕೆಂದು ಬ್ರಹ್ಮಚಾರಿಗೂ ಹೇಳಿದ್ದೆ."

ಎಂದು ಬ್ರಹ್ಮಚಾರಿಯನ್ನು ಕರೆದು

"ಹಾಲು ಹಣ್ಣು ತೆಗೆದುಕೊಂಡು ಬಾ" ಎಂದರು.

ಸಂಜೀವ ಮಾತನಾಡಲೆತ್ನಿಸಿದ. ದುಃಖ ಉಕ್ಕಿ ಬಂದು ಅವನ ಕಂಠ ಗದ್ಗದವಾಯಿತು

"ಸಾವಕಾಶವಾಗಿ ಮಾತನಾಡುವೆಯಂತೆ. ಆಯಾಸ ಮಾಡಿಕೊಳ್ಳಬೇಡ."

ಬ್ರಹ್ಮಚಾರಿ ಹಾಲು, ಹಣ್ಣು ತಂದು ಸಂಜೀವನ ಮುಂದಿಟ್ಟ. ಸ್ವಾಮಿಜಿ 'ತೆಗೆದುಕೋ' ಎಂದು ಸಂಜೀವನಿಗೆ ಹೇಳಿದರು.

"ನನಗೆ ಹಸಿವಿಲ್ಲ ಸ್ವಾಮಿಜಿ."

"ಇರಲಿ ತೆಗೆದುಕೋ"

ಎಂದು ತಾವೇ ಬಾಳೆಯ ಹಣ್ಣು ಕೈಗೆ ತೆಗೆದುಕೊಂಡು, ಸುಲಿದು ಸಂಜೀವನ ಕೈಗಿತ್ತರು.

ಸಂಜೀವನ ಗಂಟಲಲ್ಲಿ ಹಾಲು, ಹಣ್ಣು ಇಳಿಯದು. ಸ್ವಾಮಿಜಿಯವರ ಬಲವಂತಕ್ಕೆ ಫಲಾಹಾರ ಮುಗಿಸಿದ. ಬ್ರಹ್ಮಚಾರಿ ತಟ್ಟೆ, ಬಟ್ಟಲು ತೆಗೆದುಕೊಂಡು

"ಪೂಜೆಗೆ ವೇಳೆಯಾಗುವುದಿಲ್ಲವೇ ಸ್ವಾಮಿಜಿ" ಎಂದ.

"ಇದೂ ಪೂಜೆಯೇ ಬ್ರಹ್ಮಚಾರಿ"

ಎಂದು ಸ್ವಾಮಿಗಳು ಹೇಳಿದರು. ಬ್ರಹ್ಮಚಾರಿ ಬಾಗಿಲು ಮುಂದಕ್ಕೆ ಮಾಡಿಕೊಂಡು ಹೋದ ಮೇಲೆ ಸ್ವಾಮಿಜಿ ಕೇಳಿದರು

"ಈಗ ಏನು ಬೇಕಾದರೂ ಹೇಳು."

"ನೀವು ಪೂಜೆಗೆ ಕುಳಿತಿದ್ದರೇನೋ!"

"ಹೌದು ಕುಳಿತಿದ್ದೆ. ಗುರುದೇವರು ಬಂದು ಪೂಜಾಮಂದಿರದಿಂದ ಹೊರಗಟ್ಟಿದರು."

"ನನ್ನಿಂದ ನಿಮಗೆಷ್ಟು ತೊಂದರೆ ಸ್ವಾಮಿಜಿ."

"ತೊಂದರೆಯೆಲ್ಲಿಂದ ಬಂತು. ಹೂವಿನಿಂದ ಪೂಜೆಮಾಡಿಸಿಕೊಳ್ಳುವವನೂ ಅವನೇ - ಮಾತಿನಿಂದ ಪೂಜೆ ಸಲ್ಲಿಸಿಕೊಳ್ಳುವವನೂ ಅವನೇ - ಪತ್ರಂ ಪುಷ್ಪಂ ಫಲಂ ತೋಯಂ ಯೋಮೇಭಕ್ತ್ಯಾ ಪ್ರಯಚ್ಛತಿ."

"ನಾನು ಪಾಪಿ ಸ್ವಾಮಿಜಿ - ಪ್ರಾಣ ನೀಗಿಕೊಳ್ಳಲೆತ್ನಿಸಿದೆ."

"ಪ್ರಾಣವೇ ಬ್ರಹ್ಮಸ್ವರೂಪ. ಪ್ರಾಣಹತ್ಯೆ ಬ್ರಹ್ಮಹತ್ಯೆ."

"ಗುರುದೇವ ನನ್ನನ್ನು ಕಾಪಾಡಿದರು."

"ಕಾಪಾಡದೆ ಏನು ಮಾಡುತ್ತಾರೆ! ಗುರುದೇವ ದೊಡ್ಡ ಮೀನುಗಾರ. ನೂರಾರು ಗಾಳ ಹಾಕಿ ದಡದಲ್ಲಿ ಬಕಧ್ಯಾನಮಾಡುತ್ತಾ ಕುಳಿತೇ ಇರುತ್ತಾನೆ. ಅವನ ಅವತಾರದ ಕೆಲಸ ಮುಗಿದಿಲ್ಲ. ಅದನ್ನು ನರೇಂದ್ರನ ಕೈಯಿಂದ ಮುಂದುವರಿಸಿದ - ಅವನಿಗೆ ತೃಪ್ತಿಯಿದೆಯೆಂದು ಭಾವಿಸಿರುವೆಯಾ - ನಿತ್ಯ ಅತೃಪ್ತನವನು - ನನ್ನನ್ನು, ನಿನ್ನನ್ನು ಎಲ್ಲರನ್ನೂ ಅವನು ಉಪಯೋಗಿಸಿಕೊಳ್ಳುತ್ತಾನೆ."

"ನಾನೇನು ಮಾಡಬಲ್ಲೆ ಸ್ವಾಮಿಜಿ."

"ಮೀನುಗಾರನ ರಹಸ್ಯ ಮೀನುಗಾರನಿಗೆ ಗೊತ್ತಲ್ಲದೆ ನನಗೇನು ಗೊತ್ತು?"

"ಸ್ವಾಮಿಜಿ - ಲೋಕದಲ್ಲಿ ಸತ್ಯ, ಪ್ರೇಮ, ಅಹಿಂಸೆ ಇವೆಯೇ? ಸತ್ಯ - ಪ್ರೇಮ, ಅಹಿಂಸೆ ಎಂದು ನಾವು ಅಂದುಕೊಳ್ಳುವುದು ಬಯಲು ಭ್ರಾಂತಿಯಲ್ಲವೇ ?"

"ಸೂರ್ಯನಿದ್ದಾನೆ ಎಂದು ನೀನು ನಂಬುವೆಯಲ್ಲವೇ ?"

"ಹೌದು ನಂಬುತ್ತೇನೆ.'

"ಹೇಗೆ ನಂಬುತ್ತೀ ?"

"ಕಣ್ಣುಗಳಿಂದ ಅವನನ್ನು ನೋಡಬಲ್ಲೆ."

"ಕುರುಡನಿಗೆ ಅವನು ಕಾಣುವುದಿಲ್ಲವಾದ್ದರಿಂದ, ಕುರುಡನಿಗೆ ಸೂರ್ಯ ನಿಲ್ಲವೆಂದು ತರ್ಕವಾಡೋಣವೇ ?"

"ಸೂರ್ಯನನ್ನು ಕುರುಡ ಕಣ್ಣಿನಿಂದ ನೋಡದಿದ್ದರೂ, ಸೂರ್ಯ ಪ್ರಕಾಶವನ್ನನುಭವಿಸಬಲ್ಲ. ಆ ಅನುಭವದಿಂದ ಸೂರ್ಯನ ಇರುವನ್ನು ಅವನು ಅರಿಯಬಲ್ಲ"

"ಅದೇ ಅನುಭವದಿಂದಲೇ ನೀನೂ ಸತ್ಯ - ಪ್ರೇಮ - ಅಹಿಂಸೆಗಳ ಇರುವಿಕೆಯನ್ನೂ ಅರಿಯಬಲ್ಲೆ."

"ನನ್ನದು ಕಟುಅನುಭವ ಸ್ವಾಮಿಜಿ"

"ಹೇಳಬಹುದಾದರೆ ಹೇಳು"

ಸಂಜೀವ ಸ್ವಲ್ಪವೂ ಮುಚ್ಚುಮರೆಯಿಲ್ಲದೆ ತನ್ನ - ಪುಷ್ಪನ ಪರಿಚಯ ವಾದ ದಿನದಿಂದ ಆರಂಭಿಸಿ ಅಂದಿನವರೆಗೆ ನಡೆದಿದ್ದ ಸಮಸ್ತ ವಿಚಾರಗಳನ್ನೂ ಸ್ವಾಮಿಜಿಯವರಿಗೆ ಒಪ್ಪಿಸಿದ ಸ್ವಾಮಿಜಿ ಏಕಚಿತ್ತರಾಗಿ ಸಂಜೀವನ ಜೀವನಕಥೆಯನ್ನು ಕೇಳಿದರು ಸಂಜೀವನನ್ನು ಆಗೊಮ್ಮೆ ಈಗೊಮ್ಮೆ ಕರುಣಾಪೂರಿತ ದೃಷ್ಟಿಯಿಂದ ನೋಡುತ್ತಿದ್ದರು. ಸಂಜೀವನಿಗೆ ದುಃಖತುಂಬಿ ಬಂದು ಆಗಾಗ್ಗೆ ಮಾತು ನಿಂತುಹೋಗುತ್ತಿತ್ತು ಸುದಾರಿಸಿಕೊಳ್ಳುತ್ತ ಅವನು ತನ್ನ ನಿರೂಪಣೆಯನ್ನು ಮುಂದುವರಿಸಿ ಕೊನೆಮುಟ್ಟಿದ.

ಸ್ವಾಮಿಜಿ ಯೋಚಿಸುತ್ತ ಕುಳಿತುಬಿಟ್ಟಿದ್ದರು.

"ಇಂಥ ಅನುಭವವಾದ ಮೇಲೂ ನಾನೂ ಬದುಕಿರಬೇಕೆ ಸ್ವಾಮಿಜಿ" ಎಂದು ಆರ್ತನಾಗಿ ಕೇಳಿದ.

'ಬದುಕಿರಬೇಕು ಮಗು ಬದುಕಿರಬೇಕು. ಹಣ್ಣಾಗುವ ಮುನ್ನ ಹುಳಿಯಾಗುವುದು ಪ್ರಕೃತಿಧರ್ಮ."

"ಪುಷ್ಪನಲ್ಲಿಯೇ ಇಷ್ಟು ಮೋಸ - ಇಷ್ಟು ವಂಚನೆ ಕಂಡಮೇಲೆ ಲೋಕದಲ್ಲಿ ಯಾರನ್ನು ನಂಬಲಿ."

"ಬೆಳಗಿನ ಸೊಗಸು ಅರ್ಥವಾಗಬೇಕಾದರೆ ರಾತ್ರಿಯ ಅನುಭವವಾಗಲೇ ಬೇಕು. ಮೋಸದ ಹಿಂದೆ ಋಜುತ್ವ, ಅಸತ್ಯದ ಹಿಂದೆ ಸತ್ಯ, ಸಾವಿನ ಹಿಂದೆ ಬದುಕು ಇದ್ದೇ ಇರುತ್ತದೆ."

"ಈ ಘಾಯ ಮುಚ್ಚಿಕೊಂಡು ನಾನು ಹೇಗೆ ಬಾಳಲಿ ?"

"ಘಾಯ ಮಾಗುತ್ತದೆ ಮಗೂ, ಭವವೈದ್ಯನಾದ ಗುರುದೇವ ನಿನ್ನ ಸಂಕಟ ಪರಿಹರಿಸುತ್ತಾನೆ."

"ನಾನು ಏನು ಮಾಡಲಿ."

"ಏನೂ ಮಾಡಬೇಡ - ಆಶ್ರಮದಲ್ಲಿ ಸುಖವಾಗಿರು. ಶಾಲೆ, ಅನಾಥಾಶ್ರಮ, ಪುಸ್ತಕಭಂಡಾರ, ವಾಚನಾಲಯ, ಪ್ರವಚನ ಸಭೆಗಳನ್ನು ಆಶ್ರಮ ನಡೆಸುತ್ತಿದೆ. ಈ ಚಟುವಟಿಕೆಗಳು ನಿನ್ನ ಮನಸ್ಸಿಗೆ ಬಂದರೆ ಇವುಗಳಲ್ಲಿ ಭಾಗವಹಿಸು. ಯಾವುದಕ್ಕೂ ಸಂಕೋಚಪಟ್ಟುಕೊಳ್ಳಬೇಡ. ಇದು ನಿನ್ನ ಮನೆ. ಇಲ್ಲಿರುವ ಆಶ್ರಮವಾಸಿಗಳು ನಿನ್ನ ಒಡಹುಟ್ಟಿದವರು. ನೀನು ಏಕಾಂಗಿ ಎಂದು ಭಾವಿಸಬೇಡ."

ಯಾರೋ ಬಾಗಿಲು ತಟ್ಟಿದ ಶಬ್ದವಾಯಿತು. 'ಬನ್ನಿ' ಎಂದರು ಸ್ವಾಮಿಜಿ. ಬ್ರಹ್ಮಚಾರಿ ಒಳಗೆ ಬಂದು

"ಸ್ನಾನಕ್ಕೆ ವೇಳೆಯಾಯಿತು" ಎಂದ.

ಸ್ವಾಮಿಜಿ ಎದ್ದು ನಿಂತು,

"ಬ್ರಹ್ಮಚಾರಿ, ಇವರ ಯೋಗಕ್ಷೇಮ ನೀನು ನೋಡಿಕೊಳ್ಳಬೇಕು. ನಿನ್ನ ರೂಮಿನಲ್ಲಿ ಇವರನ್ನು ಇಟ್ಟುಕೋ ಇವರ ಸ್ನಾನದ ವ್ಯವಸ್ಥೆ ಮಾಡಿ ಬೇರೆ ವಸ್ತ್ರಗಳನ್ನು ಕೊಡು." ಎಂದು ಹೇಳಿ ಹೋದರು.

ಅಂದಿನಿಂದ ಸಂಜೀವನಿಗೆ ಬ್ರಹ್ಮಚಾರಿಯ ರೂಮಿನಲ್ಲಿಯೇ ಬಿಡಾರವಾಯಿತು. ಸ್ವಾಮಿಜಿ ತಮ್ಮ ನಿತ್ಯಗೆಲಸಗಳ ಮೇಲೆ ಹೋಗುವಾಗ

ಸಂಜೀವನನ್ನು ಜತೆಯಲ್ಲಿ ಕರೆದೊಯ್ಯುತ್ತಿದ್ದರು. ಪ್ರಸಾದ ಸ್ವೀಕರಿಸುವಾಗ ಸಂಜೀವನ್ನು ಜತೆಯಲ್ಲಿ ಕೂಡಿಸಿಕೊಳ್ಳುತ್ತಿದ್ದರು.

ಸಂಜೀವನಿಗೂ ಬ್ರಹ್ಮಚಾರಿಗೂ ಸ್ನೇಹ ಬೆಳೆಯಲಾರಂಭಿಸಿತು.

"ನಿಮ್ಮನ್ನು ನಾನು ಏನೆಂದು ಕರೆಯಬೇಕು." ಎಂದು ಕೇಳಿದ.

"ನನ್ನ ಹೆಸರು ಸತ್ಯೇಂದ್ರನಾಥ. ಸತ್ಯೇನ್ ಎಂದು ಕರೆಯಿರಿ."

"ನೀವು ಆಶ್ರಮಕ್ಕೆ ಬಂದು ಎಷ್ಟು ದಿನಗಳಾದವು"

"ಆರು ವರ್ಷಗಳಾದವು."

"ಸನ್ಯಾಸ ಸ್ವೀಕರಿಸಬೇಕೆಂದಿರುವಿರಾ ?"

"ಅದಕ್ಕಾಗಿಯೇ ಬಂದೆ."

"ಎಂ. ಎ. ಪಾಸುಮಾಡಿದ್ದವರು ಯಾವದಾದರೂ ಕೆಲಸಕ್ಕೆ ಹೋಗದೆ ಆಶ್ರಮಜೀವನಕ್ಕೆ ಏಕೆ ಬಂದಿರಿ ?"

"ಮಾನವಸೇವೆಯಲ್ಲಿ ಈ ಜೀವ ಸವೆಸಬೇಕೆಂಬುದೇ ನನ್ನ ಆಕಾಂಕ್ಷೆಯಾಗಿತ್ತು. ಬೇಲೂರಿನ ಶ್ರೀ ರಾಮಕೃಷ್ಣಾಶ್ರಮದಲ್ಲಿ ಕೆಲವು ದಿನವಿದ್ದೆ. ಅಲ್ಲಿಯೇ ಸ್ವಾಮಿಜಿಯವರ ಪರಿಚಯವಾಯಿತು ಅವರೇ ನನ್ನನ್ನು ಇಲ್ಲಿಗೆ ಕರೆತಂದರು."

"ಆರು ವರ್ಷಗಳಾದರೂ ಸ್ವಾಮಿಜಿ ನಿಮಗೇಕೆ ಸನ್ಯಾಸ ಕೊಟ್ಟಿಲ್ಲ."

"ಮೂಸೆಯಲ್ಲಿ ಬಂಗಾರ ಕರಗಿಸುವ ಅಕ್ಕಸಾಲೆಗಲ್ಲವೇ ಅದರ ಹದ ಗೊತ್ತು."

"ನನಗೇನಾದರೂ ಕೆಲಸ ವಿಧಿಸಿ ಸತ್ಯೇನ್ ಬಾಬು. ಸುಮ್ಮನೆ ಕುಳಿತು ಕಾಲಹರಣ ಮಾಡಲು ಇಷ್ಟವಿಲ್ಲ."

"ಆಶ್ರಮದಲ್ಲಿ ಕೆಲಸಕ್ಕೇನೂ ಕೊರತೆಯಿಲ್ಲ ಅನಾಥಾಶ್ರಮದಲ್ಲಿ ದುಡಿಯುತ್ತಿರುವ ಬ್ರಹ್ಮಚಾರಿಗಳಿಗೆ ವಿಶ್ರಾಂತಿ ಇಲ್ಲವಾಗಿದೆ. ಅಲ್ಲಿ ಕೆಲಸ ಮಾಡುವಿರಾ ?"

"ನೀವು ಹೇಳಿದಲ್ಲಿ ಕೆಲಸಮಾಡುತ್ತೇನೆ." ಎಂದು ಸಂಜೀವ ಹೇಳಿದ.

ಅನಾಥಾಶ್ರಮದ ಕೆಲಸ ಮೊದಮೊದಲು ಸಂಜೀವನಿಗೆ ದಣಿವನ್ನುಂಟು ಮಾಡಿತು. ಅವರಲ್ಲಿದ್ದ ಕುಂಟು, ಕುರುಡು, ಮೂಕ ಮಕ್ಕಳು ಸಂಜೀವನ

ದಣಿವನ್ನು ಮರೆಸುತ್ತಿದ್ದರು. ಸನ್ನಿನುಡಿಯಾಡಿದವರೆ ಮಕ್ಕಳು ತೋರುತ್ತಿದ್ದ ಕೃತಜ್ಞತೆ - ತಮ್ಮ ಹೃದ್ಗತ ಭಾವವನ್ನುಚ್ಚರಿಸಲು ಮಕ್ಕಳು ಪಡುತ್ತಿದ್ದ ಪ್ರಯಾಸ ಸಂಜೀವನ ಮನಸ್ಸನ್ನು ಸೂರೆಗೊಂಡಿತ್ತು.

ಎಷ್ಟೇ ಕೆಲಸವಿರಲಿ ದಿನಕ್ಕೆ ಒಂದೆರಡು ಗಂಟೆಗಳಾದರೂ ಸ್ವಾಮಿಜಿ ಅನಾಥ ಶಿಶುಗಳ ಜತೆಯಲ್ಲಿ ಕಳೆಯುತ್ತಿದ್ದರು. ಮಕ್ಕಳು ಸ್ವಾಮಿಜಿಯ ಸುತ್ತ ನೆರೆಯುತ್ತಿದ್ದರು ಒಂದು ಅವರ ಉತ್ತರೀಯವನ್ನೆಳೆದೊಯ್ಯುತ್ತಿತ್ತು, ಮತ್ತೊಂದು ಅವರನ್ನು ಕುದುರೆ ಮಾಡಿಕೊಂಡು ಸವಾರಿ ಮಾಡುತ್ತಿತ್ತು, ಮಗದೊಂದು ಸ್ವಾಮಿಜಿ ತೊಡೆಯೇರಿ ಕಥೆ ಹೇಳಿ ಎಂದು ಪೀಡಿಸುತ್ತಿತ್ತು.

ಸ್ವಾಮಿಜಿ ಮಕ್ಕಳ ಜತೆ ಮಕ್ಕಳಾಗುತ್ತಿದ್ದರು. ಅವರ ಎಲ್ಲಾ ಕಾಟವನ್ನೂ ಸಹಿಸಿಕೊಂಡು ನಕ್ಕು ನಲಿಯುತ್ತಿದ್ದರು.

ಒಮ್ಮೆ ಒಂದು ಮೂಕ ಶಿಶುವನ್ನು ಹಿಡಿದೆತ್ತಿಕೊಂಡು ಅಪ್ಪಿ ಮುದ್ದಾಡುತ್ತ

"ಈ ಕಂದ ಹೆತ್ತವರಿಗೆ ಬೇಡವಾಯ್ತು. ಇದನ್ನು ಯಾರೋ ಪುಣ್ಯಾತ್ಮರು ಆಶ್ರಮದ ಬಾಗಿಲಲ್ಲಿ ಬಿಟ್ಟು ಹೋಗಿದ್ದರು" ಎಂದರು

ಪ್ರತಿಯೊಂದು ಮಗುವಿನ ಕರುಣಾಜನಕ ಚರಿತ್ರೆಯನ್ನು ಹೇಳುತ್ತ ಹೇಳುತ್ತಾ ಸ್ವಾಮಿಜಿಯ ಕಣ್ಣುಗಳಲ್ಲಿ ನೀರೂರುತ್ತಿತ್ತು.

ಅಚಲ ಮೇರುವಿನಂತಿದ್ದ ಸನ್ಯಾಸಿಯ ಹೃದಯರಾಜ್ಯದ ಮೇಲೆ ಆಶ್ರಮದ ಅನಾಥ ಶಿಶುಗಳು ಪ್ರಭುತ್ವ ಮಾಡುತ್ತಿದ್ದುದನ್ನು ಕಂಡು ಸಂಜೀವ ಬೆರಗಾಗಿದ್ದ.

ಒಮ್ಮೆ ಸ್ವಾಮಿಜಿಯವರೊಂದಿಗೆ ಮಾತನಾಡುತ್ತ ಸಂಜೀವ ಪರಿಹಾಸ್ಯಕ್ಕೆ

"ಇಷ್ಟು ದೊಡ್ಡ ಸಂಸಾರ ಕಟ್ಟಿಕೊಂಡಿರುವ ನಿಮಗೆ ಸ್ವರ್ಗದಲ್ಲಿ ಪ್ರವೇಶ ಸಿಕ್ಕುವುದಿಲ್ಲ ಸ್ವಾಮಿಜಿ" ಎಂದ.

ಸ್ವಾಮಿಜೀಯವರು ನಕ್ಕು

"ಸ್ವರ್ಗ ಎಲ್ಲಿಯೋ ಆಕಾಶದ ಮೇಲೆ ಇದೆಯೆಂದು ಭಾವಿಸಿರುವೆಯಾ ಮಗೂ - ಇದೇ ಸ್ವರ್ಗ. ಎಲ್ಲಿ ಹೃದಯಶುದ್ಧಿ ಇದೆಯೋ, ಎಲ್ಲಿ ಸತ್ಯ ತಿಳಿಯಾಗಿದೆಯೋ, ಎಲ್ಲಿ ಸನ್ನಿ ನೆಲಸಿದೆಯೋ ಅದೇ ಸ್ವರ್ಗ" ಎಂದರು.

## ೨೫

ಸಂಜೀವನ ಮನೆಯ ಬಾಗಿಲಿನಲ್ಲಿ ಕುಳಿತು ಕುಳಿತು ಹೆಲನ್ ಅಮ್ಮನಿಗೆ ಸಾಕುಸಾಕಾಯಿತು. ಪುಷ್ಪ ಜಾಗಬಿಟ್ಟೇಳುವ ಸೂಚನೆಯನ್ನೇ ಕೊಡ ಲೊಲ್ಲಳು. ರೈಲ್ವೆ ಸ್ಟೇಷನ್ನಿಗೆ ಹೋಗಿದ್ದ ಜಟಕಾ ಗಾಡಿಗಳೂ ಹಿಂದಿರುಗುತ್ತಿದ್ದವು.

"ಹೀಗೆ ಸುಮ್ಮನೆ ಕುಳಿತರೆ ಏನರ್ಥ ಪುಷ್ಪ" ಎಂದು ತಾಯಿ ಕೇಳಿದಳು.

"ಅವರು ಬರಲಮ್ಮ."

"ಹನ್ನೊಂದಾಯಿತು - ಇನ್ನೆಲ್ಲಿ ಬರುತ್ತಾರೆ."

ಇನ್ನೂ ಒಂದು ಗಂಟೆಯಾಯಿತು.

"ಏಳು ಮನೆಗೆ ಹೋಗೋಣ. ನೋಡಿದವರು ನಕ್ಕಾರು."

"ಅವರನ್ನು ನೋಡದೆ ನಾನು ಮನೆಗೆ ಬರಲಾರೆ."

"ಬೆಳಿಗ್ಗೆ ಅವರೇ ಮನೆಗೆ ಬರಬಹುದು - ಅವರು ಬಾರದಿದ್ದರೆ ನಾವೇ ಇಲ್ಲಿ ಬರೋಣ."

"ಅವರು ಬರುವುದಿಲ್ಲಮ್ಮ."

"ಇಲ್ಲಿ ಇನ್ನೂ ಎಷ್ಟು ಹೊತ್ತು ಕುಳಿತಿರಬೇಕೆಂದು ನಿನ್ನ ಇಚ್ಛೆ"

"ನೀನು ಮನೆಗೆ ಹೋಗಮ್ಮ - ನಾನು ನಿಧಾನವಾಗಿ ಬರುತ್ತೇನೆ."

"ನಿನ್ನೊಬ್ಬಳನ್ನೇ ಬಿಟ್ಟು ಹೋಗಲೇ ? ನನ್ನ ಮಾತು ಕೇಳು ತಾಯಿ. ಇಷ್ಟು ಹೊತ್ತಾದ ಮೇಲೆ ಅವರು ಮನೆಗೆ ಬರಲಾರರು. ನಡೀ ಹೋಗೋಣ"

ಎಂದು ಮಗಳನ್ನು ಬಲವಂತದಿಂದ ಎಬ್ಬಿಸಿಕೊಂಡು ಹೊರಟಳು. ಸ್ಟೇಷನ್‌ವರೆವಿಗೂ ಇಬ್ಬರೂ ನಡೆದೇ ಬರಬೇಕಾಯಿತು. ಸಿನೀಮಾ ಮುಗಿಸಿ ಕೊಂಡು ಬರುತ್ತಿದ್ದ ಗಾಡಿಯೊಂದು ಎದುರಿಗೆ ಬಂತು. ಹೆಲನ್ ಅಮ್ಮ ಗಾಡಿಯವನನ್ನು ಗೋಗರೆದುಕೊಂಡು, ಮಗಳೊಂದಿಗೆ ಮನೆಸೇರಿದಳು.

ಪುಷ್ಪನ ಸಂಕಟ ಅಸಹನೀಯವಾಯಿತು. ತಾಯಿಯ ಸಮಾಧಾನದ ನುಡಿಗಳು ನಿರರ್ಥಕವಾದವು

"ನನ್ನ ಭಾಗದ ದೈವ ನನ್ನ ಕೈಬಿಟ್ಟಿತು"

ಎಂದು ಪುಷ್ಪ ಹಲುಬಿದಳು. ಹೆಲನ್ ಅಮ್ಮ ಮಗಳ ಮಗ್ಗಲು ಬಿಡಲಿಲ್ಲ.

ಮಾರನೆಯ ಬೆಳಿಗ್ಗೆ ಎದ್ದವಳೇ ಪುಷ್ಪ, ತಾಯಿಯೊಂದಿಗೆ ಒಂಟಿಕೊಪ್ಪಲಿಗೆ ಹೋದಳು.

ಸಂಜೀವನ ಮನೆಯ ಬೀಗ ಹಾಕಿದಂತೆಯೇ ಇತ್ತು. ತಾಯಿ ಮತ್ತೆ ಬಲವಂತಮಾಡಿ ಅವಳನ್ನು ಮನೆಗೆ ಕರೆತರಬೇಕಾಯಿತು.

ಬೆಳಿಗ್ಗೆ - ಸಂಜೆ ಸಂಜೀವನ ಮನೆಗೆ ಹೋಗಿ ಅಲ್ಲಿ ಕಾದು ಕುಳಿತಿದ್ದು ಬರುವುದೇ ತಾಯಿ, ಮಗಳ ಕೆಲಸವಾಯಿತು.

ಮೂರು ದಿನ ಕಳೆಯುವಷ್ಟರಲ್ಲಿ ಪುಷ್ಪ ಜ್ವರಪೀಡಿತಳಾದಳು. ದಿನ ದಿನಕ್ಕೆ ಜ್ವರವೇರುತ್ತ ಹೋಯಿತು. ಒಮ್ಮೆಲೇ ಜ್ವರ ಸಾಧಾರಣ ಸ್ಥಿತಿಗೆ (Normal) ಬಂದು ಬಿಡುತ್ತಿತ್ತು.

ಪುಷ್ಪನ ಬಾಯಲ್ಲಿ ಅಸ್ಪಷ್ಟ ಮಾತುಗಳು - 'ಅವರು ಬರುವುದಿಲ್ಲ ನಾನು ಪಾಪಿ - ನನ್ನ ದೇವರಿಗೆ ಅನ್ಯಾಯ ಮಾಡಿದೆ - ನಾನು ಮೋಸಗಾತಿ ನನಗೆ ಕ್ಷಮೆಯಿಲ್ಲ.'

ರಾತ್ರಿ ಎದ್ದೆದ್ದು ಹೊರಗೆ ಹೋಗುವಳು. ಅವಳನ್ನು ಕಾಯುವುದೇ ಹೆಲನ್ ಅಮ್ಮನಿಗೆ ದೊಡ್ಡ ಕೆಲಸವಾಯಿತು. ಮಲಗುವ ಮುನ್ನ ಎಲ್ಲ ಬಾಗಿಲುಗಳಿಗೆ ಬೀಗ ಹಾಕಲಾರಂಭಿಸಿದಳು.

ಪುಷ್ಪ ಜ್ವರದ ತಾಪದಲ್ಲಿ ಬಡಬಡಿಸುತ್ತ

'ಕೋಪ ಬಿಡಿ ದೊರೆ. ಸತ್ಯವಾಗಿ ನಿಮ್ಮನ್ನಲ್ಲದೆ ನಾನು ಯಾರನ್ನೂ ಪ್ರೀತಿಸಲಿಲ್ಲ. ನನ್ನ ಸಂತೋಷಕ್ಕಾಗಿ ನಾನು ಅಂಕಲ್ ಜತೆ ಹೋಗಲಿಲ್ಲ. ಕರ್ಮ ಕಳೆದುಕೊಳ್ಳುವುದಕ್ಕೆ ಹೋದೆ. ನೀವೇ ನನ್ನನ್ನು ನಿರಾಕರಿಸಿದರೆ ನನಗೆ ಯಾರು ದಿಕ್ಕು. ಒಮ್ಮೆ ನಿಮ್ಮ ಮನಸ್ಸಿನ ತುಂಬ ನನ್ನನ್ನು ತುಂಬಿ ಕೊಂಡಿದ್ದಿರಿ. ಈಗಲ್ಲಿ ನನಗೆ ಸೂಜಿಯ ಮೊನೆಯಷ್ಟು ಸ್ಥಳವಿಲ್ಲವೇ ?'

ಮಗಳ ಸಂಕಟ ನೋಡಲಾರದೆ ಹೆಲನ್ ಅಮ್ಮ ಮೊಣಕಾಲೂರಿ ಯೇಸುಸ್ವಾಮಿಯ ಮೂರ್ತಿಯ ಮುಂದೆ ಪ್ರಾರ್ಥನೆಗೆ ಕುಳಿತುಬಿಡುತ್ತಿದ್ದಳು.

ಪುಷ್ಪನ ಈ ಸ್ಥಿತಿಗೆ ತನ್ನ ಜೀವನವೇ ಕಾರಣವೆಂಬುದನ್ನರಿಯಲು ಹೆಲನ್ ಅಮ್ಮನಿಗೆ ಬಹಳ ಕಾಲ ಹಿಡಿಸಲಿಲ್ಲ. ಮಗಳಿಗೆ ಗುಣವಾದರೆ ಸಾಕು

ಎನ್ನುವುದೊಂದೇ ಅವಳ ಆಶಯವಾಯಿತು. ಕೃಷ್ಣರಾಜೇಂದ್ರ ಆಸ್ಪತ್ರೆಯ ದಕ್ಷರಾದ ಡಾಕ್ಟರುಗಳನ್ನು ಕರೆದುಕೊಂಡು ಬಂದು ರೋಗದ ನಿಧಾನ ಮಾಡಿಸಿದಳು.

ಡಾಕ್ಟರುಗಳಿಗೆ ಪುಷ್ಪನ ದೇಹಾಲಸ್ಯ ಮಹಾಸಮಸ್ಯೆಯಾಯಿತು. ದೇಹದ ಪ್ರಕ್ರಿಯೆಯಲ್ಲಿ ಯಾವ ಹೆಚ್ಚು ಕಡಿಮೆಯೂ ಆಗಿರಲಿಲ್ಲ. ಹೃದಯ, ಶ್ವಾಸಕೋಶಗಳ ಆರೋಗ್ಯಸ್ಥಿತಿಗೆ ಎಕ್ಸ್–ರೇ (X–Ray) ಫೋಟೋ ಸಾಕ್ಷ್ಯ ಒದಗಿಸಿತ್ತು. ಮೆದುಳಿನಲ್ಲಿಯೂ ವಿಕಲ್ಪವಾಗಿರಲಿಲ್ಲ. ಪುಷ್ಪ ಸುಸಂಬದ್ಧ ವಾಗಿಯೇ ಮಾತನಾಡುತ್ತಿದ್ದಳು. ಆದರೂ ಅವಳ ಮೈ ಒಣಗುತ್ತಿತ್ತು, ರಕ್ತ ನೀರಾಗುತ್ತಿತ್ತು ; ಕಣ್ಣುಗಳು ಕಾಂತಿಹೀನವಾಗಿ ಗುಳಿಬಿದ್ದವು. ಜ್ವರ ಚೆಲ್ಲಾಟವಾಡತೊಡಗಿತು. ಡಾಕ್ಟರುಗಳು ದಿನಕ್ಕೆ ಎರಡೆರಡು ಪೆನ್ಸಿಲಿನ್ ಇನ್‌ಜಕ್ಷನ್ ಚುಚ್ಚತೊಡಗಿದರು. ಅದರ ಜತೆಗೆ ವಿಟಮಿನ್, ಕ್ಯಾಲ್‌ಷಿಯಂ, ಲಿವರ್ ಇನ್‌ಜಕ್ಷನ್ನುಗಳು - ಗುಳಿಗೆಗಳು.

ಪುಷ್ಪನ ದೇಹಸ್ಥಿತಿ ಸ್ವಲ್ಪವೂ ಸುಧಾರಿಸಲಿಲ್ಲ.

ಹೆಲನ್ ಅಮ್ಮನಿಗೆ ಗಾಬರಿಯಾಯಿತು. ಬೆಂಗಳೂರಿಗೆ ಬರೆದು ಮಗಳು, ಅಳಿಯನನ್ನು ಕರೆಸಿಕೊಂಡಳು. ಸ್ಯಾಮ್ಯುಯಲ್ ಒಂದು ದಿನವಿದ್ದು ನಾದಿನಿಯ ಯೋಗಕ್ಷೇಮ ವಿಚಾರಿಸಿಕೊಂಡು ಊರಿಗೆ ಹೋದ.

ಪುಷ್ಪ ಸಂಜೀವ ಬೆಂಗಳೂರಿಗೆ ಬಂದಿದ್ದಾಗ ನಡೆದುದನ್ನೂ ತರುವಾಯ ಅವಳು 'ಅಂಕಲ್' ಜತೆ ಬಂದಿದ್ದಾಗ ನಡೆದಿದ್ದುದನ್ನೂ ಜ್ಯೂಡಿ ತಾಯಿಗೆ ವರದಿ ಮಾಡಿದಳು. ಮುಂದೇನು ಮಾಡುವುದೆಂದು ತಾಯಿ, ಮಗಳು ಲೆಕ್ಕ ಹಾಕಿಯೇ ಹಾಕಿದರು. ಜ್ಯೂಡಿ ಕೊನೆಗೆ ಹೇಳಿದ್ದಳು

"ಮಿ. ಸಂಜೀವ ಅವರನ್ನು ಪತ್ತೆಮಾಡಿ ಇಲ್ಲಿ ಕರೆತರದಿದ್ದರೆ ಮೇರಿ ಬದುಕುವುದಿಲ್ಲಮ್ಮ."

"ಅವರನ್ನು ಎಲ್ಲಿ ಹುಡುಕುವುದು ಜ್ಯೂಡಿ- ಒಂದು ದಿನ ತಪ್ಪದಂತೆ ನಾನು ಒಂಟಿಕೊಪ್ಪಲಿಗೆ ಹೋಗಿಬರುತ್ತಿದ್ದೇನೆ. ಅವರೆಲ್ಲಿದ್ದಾರೆ ಎಂದು ತಿಳಿಯುವುದೇ ಸಾಧ್ಯವಿಲ್ಲವಾಗಿದೆ. ಈ ಊರಿನಲ್ಲಿಲ್ಲವೆಂಬುದಂತೂ ಖಂಡಿತ."

"ಮೇರಿಯ ಜೀವನಕ್ಕೆ ಯಾರಮ್ಮ ವಿಷಹಿಂಡಿದವರು ?"

"ಯಾರು ಎಂದು ಹೇಳಲಿ ಜ್ಯೂಡಿ. ನನ್ನ ಪರಮ ಸ್ನೇಹಿತೆಯೆಂದು

ನಟಿಸುತ್ತಿದ್ದ ಕನಕಮ್ಮ ನನ್ನ ಮನೆಗೆ ಕಿಚ್ಚಿಟ್ಟಿದ್ದಾಳೆ. ಅವಳೇ ಸಂಜೀವ ರಾಯರಿಗೆ ಎಲ್ಲವನ್ನೂ ತಿಳಿಸಿದ್ದಾಳೆ."

"ಕನಕಮ್ಮನೇ! - ನಿನ್ನನ್ನು ನನ್ನನ್ನು ಕಿತ್ತುಕೊಂಡು ತಿಂದದ್ದು ಸಾಲದೆಂದು ಅವಳು ಈ ಉಪಕಾರವನ್ನೂ ಮಾಡಿವಳೇ ?"

"ದುರದೃಷ್ಟ ಗಂಟುಬಿದ್ದರೆ, ಹುಣ್ಣಿನ ಮೇಲೆ ಬೊಕ್ಕೆ ಎದ್ದಂತೆ ಅಪಘಾತಗಳು ಒಂದರ ಮೇಲೊಂದು ಸಂಭವಿಸುತ್ತವೆ. ನಿನ್ನ ಯಜಮಾನ ರಿಗೂ ಹೇಳು ಜ್ಯಾಡಿ - ಸಂಜೀವರಾಯರು ಬಂದ ಹೊರತೂ ಮೇರಿ ಗುಣ ವಾಗುವ ಸಂಭವವಿಲ್ಲ."

ಜ್ಯಾಡಿ ತಂಗಿಯು ಹಾಸಿಗೆ ಬಿಟ್ಟು ಕದಲುತ್ತಿರಲಿಲ್ಲ ಪುಷ್ಪ ಅಕ್ಕನ ಕೈಹಿಡಿದು

"ಅವರು ಬರುತ್ತಾರೆಯೇ ಜ್ಯಾಡಿ" ಎಂದು ಅಂಗಲಾಚುವಳು.

"ಬಂದೇ ಬರುತ್ತಾರೆ ಮೇರಿ. ನಮ್ಮ ಸಂಸಾರದ ನಿಜಸ್ಥಿತಿ ತಿಳಿದ ಮೇಲೆ ಅವರ ಮನಸ್ಸು ಕೆಟ್ಟುಹೋಗಿದೆ. ಹಾಗಾಗುವುದು ಸ್ವಾಭಾವಿಕ ವಲ್ಲವೇ ?"

"ಹೌದು - ಅವರು ಹಸು ಮಗುವಿನಂಥವರು. ನಾನು ಹೇಳುತ್ತಿದ್ದ ಸುಳ್ಳನ್ನ ಅಕ್ಷರಶಃ ನಂಬುತ್ತಿದ್ದರು."

"ನೀನು ಅವರನ್ನೆಷ್ಟು ಪ್ರೀತಿಸುವೆಯೋ ಅವರೂ ನಿನ್ನನ್ನು ಅಷ್ಟೇ ಪ್ರೀತಿಸುತ್ತಾರೆ. ದೊಡ್ಡ ಮನಸ್ಸುಮಾಡಿ ಅವರು ನಿನ್ನನ್ನು ಕ್ಷಮಿಸುತ್ತಾರೆ."

"ನಿಜವೇ ಅಕ್ಕ - ನಿಜವೇ! ನನ್ನ ಸ್ವಾಮಿ ಪುನಃ ನನ್ನ ಬಳಿಗೆ ಬರುವರೇ ? ಈ ಪಾಪಿಯ ಮಹಾಪರಾಧವನ್ನು ಕ್ಷಮಿಸುವರೇ ?"

"ನೀನು ಯೋಚನೆ ಬಿಡು ಮೇರಿ. ನಾನೂ ನಿಮ್ಮ ಭಾವ ಎಲ್ಲಾ ಪ್ರಯತ್ನಮಾಡಿ ಅವರನ್ನು ಹುಡುಕುತ್ತೇವೆ. ಅವರು ಎಲ್ಲಿದ್ದರೂ ನಿನ್ನ ಬಳಿಗೆ ಕರೆದುಕೊಂಡು ಬರುತ್ತೇವೆ"

"ಜ್ಯಾಡಿ - ಜ್ಯಾಡೀ . . ."

"ನೀನು ಹಾಸಿಗೆ ಹಿಡಿದು ಮಲಗಿ, ಕೊರಗಿ ಕೊರಗಿ, ಹೀಗೆ ಸಿಕ್ಕಟ್ಟಿಗೆ ಯಾದರೆ ಅವರಿಗೆ ಸಂತೋಷವಾಗುವುದೇ ? ನಿನ್ನ ಸ್ಥಿತಿ ನೋಡಿ ಅವರಿಗೆಷ್ಟು ಸಂಕಟವಾಗುವುದು ವಿಚಾರಮಾಡು. ಅವರ ಸಲುವಾಗಿಯಾದರೂ ನೀನು

ನಿನ್ನ ಆರೋಗ್ಯ ನೋಡಿಕೊಳ್ಳಬೇಡವೇ? ನಿನ್ನ ದೇಹ - ಪ್ರಾಣ ಎರಡೂ ಅವರದಲ್ಲವೇ? ಅವರ ವಸ್ತು ನಾಶಮಾಡುವ ಅಧಿಕಾರ ನಿನಗಿದೆಯೇ?''

"ಅವರ ಪವಿತ್ರದೇಹ ಮುಟ್ಟಿ ಅಶುಚಿಮಾಡಿದೆ ಜ್ಯಾಡಿ. ಬೇರೆ ಹೆಣ್ಣನ್ನು ಕಣ್ಣೆತ್ತಿಯೂ ಅವರು ನೋಡಿದವರಲ್ಲ. ಒಮ್ಮೆ ನಿನ್ನ ವಿಷಯ ಮಾತು ಬಂತು. ನಿನ್ನರೂಪ ನೋಡಿ ಮೆಚ್ಚಿಕೊಂಡರು - ಅಕ್ಕನನ್ನು ಮೋಹಿಸಿದಿರಾ ಎಂದು ಕೇಳಿದೆ - ಯಾಕಾಗಬಾರದು ಎಂದರು. ನಾನು ಹುಸಿ ಮುನಿಸು ತೋರಿದೆ. ಅದಕ್ಕೆ ಅವರೇನು ಹೇಳಿದರು ಬಲ್ಲೆಯಾ - 'ಚರ್ಚು ಗಳಲ್ಲಿರುವ ಮೇರಿಯಮ್ಮನ ಮೂರ್ತಿ, ದೇವಸ್ಥಾನಗಳಲ್ಲಿರುವ ಅಮ್ಮನವರ ವಿಗ್ರಹಗಳೂ ತುಂಬಾ ಸುಂದರವಾಗಿರುತ್ತವೆ. ಆ ಸೌಂದರ್ಯ ನೋಡಿ ನಮಗೆ ಬಯಕೆಯಾಗುವುದಿಲ್ಲ, ಭಕ್ತಿ ಹುಟ್ಟುತ್ತದೆ. ಹಾಗೇ ಜ್ಯಾಡಿ ಸುಂದರಿಯೆಂದು ನಾನು ಹೇಳಿದರೆ ಆಕೆಯಲ್ಲಿ ಅನುರಕ್ತನಾದೆನೆಂದು ಭಾವಿಸು ವುದು ಯಾವ ನ್ಯಾಯ' ಎಂದರು.''

"ಅವರು ದೊಡ್ಡವ್ಯಕ್ತಿ ಮೇರಿ. ಅವರ ದೊಡ್ಡಸ್ತಿಕೆಯೇ ನಿನ್ನನ್ನು ಕಾಪಾಡುತ್ತದೆ.''

"ನಿನಗೆ ಹೃದ್ರೋಗವೆಂದು ಸುಳ್ಳು ಹೇಳಿದೆ. ಅದನ್ನು ಅಕ್ಷರಶಃ ನಂಬಿದರು. ಯೇಸುಸ್ವಾಮಿ, ಶ್ರೀ ರಾಮಕೃಷ್ಣ, ಸ್ವಾಮಿ ವಿವೇಕಾನಂದರ ಪಟಗಳಿಗೆ ಹೂವೇರಿಸಿ, ನಿನಗೆ ಗುಣವಾಗಲೆಂದು ಪ್ರಾರ್ಥಿಸುತ್ತಿದ್ದರು - ನನ್ನ ಜೀವನದ ನಿಜಸ್ಥಿತಿಯನ್ನವರಿಗೆ ಅರುಹಿ ಅವರ ಪಾದಗಳ ಮೇಲೆ ಬಿದ್ದು ಕ್ಷಮೆಕೇಳಿಕೊಳ್ಳಬೇಕೆಂದು ಮನಸ್ಸಾಯಿತು - ಧೈರ್ಯವಾಗಲಿಲ್ಲ - ಎಲ್ಲಿ ನನ್ನನ್ನು ನಿರಾಕರಿಸಿಬಿಡುವರೋ ಎಂದು ಹೆದರಿದೆ.''

"ಪಶ್ಚಾತ್ತಾಪದ ಉರಿಯಲ್ಲಿ ನೀನು ಬೇಯಬೇಕೆಂದು ಭಗವದ್ಸಂಕಲ್ಪ ವಿರುವಾಗ ಯಾರೇನು ಮಾಡಲು ಶಕ್ಯ ಮೇರಿ. ಆಗಲಿ - ಬಂದದ್ದು ಅನುಭವಿಸಬೇಕು - ಧೈರ್ಯಗೆಡಬಾರದು.''

"ಅವರನ್ನು ಹುಡುಕಿಸುತ್ತೀಯಾ ಜ್ಯಾಡಿ.''

''ಅವರಿಗೆ ರಜಾ ತೆಗೆದುಕೊಳ್ಳಲು ಹೇಳಿ ಅವೇ ಕೆಲಸ ಮಾಡಿಸುತ್ತೇನೆ - ನೀನು ನಿಶ್ಚಿಂತಳಾಗಿರು. ನಾನು ನಾಳೆ ಹೊರಡುತ್ತೇನೆ.''

''ಇಷ್ಟು ಬೇಗ ಹೊರಡಬೇಕೇ?''

"ಮನೆಯಲ್ಲಿ ಯಾರೂ ಇಲ್ಲ. ಪುನಃ ಬರುತ್ತೇನೆ."

ಎಂದು ತಂಗಿಯನ್ನಪ್ಪಿ ಮುದ್ದಿಟ್ಟಳು.

ಜ್ಯೂಡಿಯ ಧೈರ್ಯದ ಮಾತು ಪುಷ್ಪನ ಜೀವನದ ಹಣತೆಗೆ ತೈಲ ಎರೆಯಿತು.

೨೬

ಸುನಂದ ಬಂದು ತೌರುಮನೆಯಲ್ಲಿ ನೆಲಸಿದಳು. ಸುಂದರ ವಿಲಾಯಿತಿಗೆ ಹೊರಡುವವರೆಗೂ ಅವನ ಜತೆಯಲ್ಲಿರದೆ ಮೈಸೂರಿಗೆ ಓಡಿಬಂದುದಕ್ಕೆ ಇಂದಿರಮ್ಮನವರು ಅಸಂತುಷ್ಟರಾದರು. ಗಂಡನಿಗೂ ತನಗೂ ಬಂದ ವೈಮನಸ್ಯದ ವಿಷಯ ಸುನಂದ ತಾನಾಗಿಯೇ ವಿವರಿಸಲೆತ್ನಿಸಲಿಲ್ಲ. ಸುಂದರ, ಸುನಂದ ಇವರ ಸಂಬಂಧದಲ್ಲಿ ಏನೋ ಒಡಕುಹುಟ್ಟಿದೆಯೆಂದು ಇಂದಿರಮ್ಮ ಊಹಿಸಿಕೊಂಡರು- ಆದರೆ ನಿಜವಾದ ಕಾರಣವೇನೆಂಬುದು ಅವರಿಗೆ ಗೊತ್ತಾಗಲಿಲ್ಲ. ಜಾನಕಮ್ಮನ ಸ್ಥಿತಿಯೂ ಅದೇ ಆಗಿತ್ತು. ವಿನಾಕಾರಣ ಸುಂದರ ಅಸಮಾಧಾನಗೊಳ್ಳುವವನಲ್ಲವೆಂಬುದೂ ಇಂದಿರಮ್ಮನವರಿಗೆ ತಿಳಿದೇ ಇತ್ತು.

ಮಗಳ ಬಾಯಿಬಿಡಿಸಿ ಅವಳಿಂದ ಸತ್ಯಸಂಗತಿ ತಿಳಿಯಲು ಇಂದಿರಮ್ಮನವರು ನಿರ್ಧರಿಸಿದರು. ಒಂದು ದಿನ ಸಂಜೆ ಕ್ರೋಷಾಹಿಡಿದು ವೆರಾಂಡಾದಲ್ಲಿ ಸುನಂದ ಕುಳಿತಿದ್ದಳು. ಜಾನಕಮ್ಮ ಯಾವದೋ ಕಾದಂಬರಿ ಓದುತ್ತ ಕುಳಿತಿದ್ದಳು. ಇಂದಿರಮ್ಮನವರೂ ಬಂದು ಅವರ ಜತೆ ಕುಳಿತುಕೊಂಡರು. ಆ ಮಾತು ಈ ಮಾತು ತೆಗೆದು ಕೊನೆಗೆ

"ನಿನ್ನ ಯಜಮಾನರು ವಿಲಾಯಿತಿಗೆ ಹೋಗಿ ಮೂರು ತಿಂಗಳಾಯಿತಲ್ಲವೇ ಸುನಂದ" ಎಂದು ಕೇಳಿದರು.

"ಹೌದಮ್ಮ."

"ಮೂರು ತಿಂಗಳಾದರೂ ಒಂದು ಕಾಗದ ಬರೆಯಬೇಡವೇ ?"

ಸುನಂದ ಉತ್ತರಕೊಡಲಿಲ್ಲ.

"ನೀನೂ ಅವರಿಗೆ ಬರೆದ ಹಾಗೆ ಕಾಣುವುದಿಲ್ಲ."

"ಬರೆಯಲಿಲ್ಲ."

"ಅವರು ಬರೆಯಲಿಲ್ಲವೆಂದು ನೀನು ಮುನಿಸಿಕೊಂಡರೆ ಆಗು ತ್ತದೆಯೇ ?"

"ನಾನು ಬರೆಯಬೇಕಾದದ್ದು ಏನೂ ಇಲ್ಲಮ್ಮ."

"ಹಾಗಂದರೇನೇ ?"

"ನಾನು ಪುನಃ ಬೆಂಗಳೂರಿಗೆ ಹೋಗುವುದಿಲ್ಲ. ಇಲ್ಲೇ ಇದ್ದು ಯಾವ ದಾದರೂ ಕೆಲಸ ಸೇರುತ್ತೇನೆ."

"ನಿನಗೂ ಅವರಿಗೂ ಏನಾದರೂ ಮಾತು ಬಂತೇ ?"

"ಬೇಕಾದಷ್ಟು ಬಂತು. ಅಣ್ಣಯ್ಯನನ್ನು ನಿಕೃಷ್ಟವಾಗಿ ಅವರು ಕಂಡದ್ದು ನನಗೆ ಸರಿಬೀಳಲಿಲ್ಲ."

"ಮಾತು ಬರುತ್ತದೆ, ಮಾತು ಹೋಗುತ್ತದೆ, ಅದನ್ನಷ್ಟು ದೊಡ್ಡದು ಮಾಡಿಕೊಳ್ಳುವುದೇ ?"

"ಅವರ ಜತೆ ಸಂಸಾರ ಮಾಡುವುದು ನನಗೆ ಸಾಧ್ಯವಿಲ್ಲ."

"ಏಕೆ ?"

"ಅವರು ತಾಳಿಕಟ್ಟಿರುವುದು ವಿಜ್ಞಾನಕ್ಕೇ ವಿನಾ ನನಗಲ್ಲ, ಅವರ ಲ್ಯಾಬೊರೇಟರಿ ನೋಡಿಕೊಳ್ಳುವ ಆಳು ಗಫೂರ್ ಅವರಿಗೆ ಹೆಚ್ಚು ಬೇಕಾ ದವನೇ ವಿನಾ ನಾನಲ್ಲ. ಗಫೂರನ ಜತೆಯಲ್ಲಿಯೇ ಸಂಸಾರ ಮಾಡಿಕೊಂಡು ಅವರು ಸುಖವಾಗಿರಲಿ."

"ನಿನ್ನ ಮಾತೇ ನನಗೆ ಅರ್ಥವಾಗುವುದಿಲ್ಲ ಸುನಂದ. ಗಂಡಸರು ಅವರ ಕೆಲಸ ಅವರು ಮಾಡಿಕೊಳ್ಳಬೇಡವೇ ? ಸದಾ ಹೆಂಡತಿಯ ಮುಂದೆ ಕುಳಿತು ಚಕ್ಕಂದವಾಡುವುದಕ್ಕಾಗುತ್ತದೆಯೇ ? ಗಂಡ ಹೆಂಡತಿ ಓರ್ಗಿಕೊಂಡು ಹೋಗ ದಿದ್ದರೆ ಸಂಸಾರ ಸಾಗುವುದು ಹೇಗಮ್ಮ !"

"ಏನು ಸಂಸಾರವೋ - ಹಾಳು ಸಂಸಾರ." ಎಂದಳು.

ಅವಳ ಮಾತು ಕೇಳಿ ಇಂದಿರಮ್ಮನವರ ಮನಸ್ಸಿಗೆ ವಿಶೇಷ ನೋವಾ ಯಿತು. ಒಂದೇ ಕ್ಷಣದಲ್ಲಿ ತಮ್ಮ ಸಂಸಾರದ ಎಲ್ಲ ಚಿತ್ರಗಳೂ ಅವರ ಕಣ್ಣು ಮುಂದೆ ಬಂದುನಿಂತವು.

"ನನ್ನ ಹೊಟ್ಟೆ ಪುಣ್ಯ ಎಷ್ಟು ಎಂದು ಹೇಳಲಿ. ಮೂರು ಮಕ್ಕಳು ಮೂರು ತೀರು - ಈ ಸುಖ ಬೇಡವೆಂದೋ ಏನೋ ಮಹಾರಾಯರು ಕಣ್ಣು

ಮುಚ್ಚಿಕೊಂಡರು. ಅವರ ಮುಕ್ತಿ ಅವರು ಕಂಡುಕೊಂಡರು - ನನಗೆ ಕಾದಿದೆಯಲ್ಲಾ ಕರ್ಮ."

ಎಂದು ಗೊಣಗಿಕೊಂಡು ಒಳಗೆ ಹೋದರು.

ಜಾನಕಮ್ಮ ಪುಸ್ತಕವನ್ನು ಕೆಳಗಿಟ್ಟು ಸುನಂದನ ಪಕ್ಕಕ್ಕೆ ಬಂದು ಕುಳಿತು

"ಏನಾಯಿತು ಸುನೂ - ನಿಜವಾದ ಸಮಾಚಾರ ನನ್ನಲ್ಲಾದರೂ ಹೇಳು." ಎಂದಳು.

"ಹೇಳುವುದಕ್ಕೆ ಏನೂ ಇಲ್ಲ ಅಕ್ಕ."

"ನೀನು ಮಾತು ಹಾರಿಸಿದರೆ ನಾನು ಕೇಳುವವಳಲ್ಲ."

"ನಿಜವಾಗಿ ಏನೂ ಇಲ್ಲ - ಇದ್ದದ್ದು ಹೇಳಿರುವೆನಲ್ಲಾ."

"ಗಂಡನೆಂದರೆ ಕುಣಿದು ಕುಪ್ಪಳಿಸುತ್ತಿದ್ದೆ."

"ಹೌದು."

"ನಿನ್ನ ಕಾನ್ವೋಕೇಷನ್ನಿಗೆ ಬರಲಿಲ್ಲವೆಂದು ಅತ್ತುಗೋಳಾಡಿದೆ."

"ಹೌದು."

"ಗಂಡನ ಮನೆಗೆ ಸಂತೋಷವಾಗಿಯೇ ಹೋದೆ."

"ಹೌದು."

"ಈಗೇನಾಯಿತು.?"

"ಅಮ್ಮನಿಗೆ ಹೇಳುವುದಿಲ್ಲವೆಂದು ಮಾತುಕೊಟ್ಟರೆ ಹೇಳುತ್ತೇನೆ."

"ಅಮ್ಮನಿಗೆ ಹೇಳುವುದಿಲ್ಲ."

"ಅವರು ಮಕ್ಕಳಾಗಲೆಂದು ಇಷ್ಟಪಟ್ಟರು."

"ನ್ಯಾಯವೇ! ಅದರಲ್ಲಿ ತಪ್ಪೇನು?"

"ನನಗೆ ಮಕ್ಕಳು ಬೇಕಿಲ್ಲ."

"ನನ್ನ ಜೀವನದ ಕಪ್ಪುನೆರಳು ನಿನ್ನ ಮೇಲೂ ಬಿತ್ತೇನೇ?"

"ನಾನು ಕಾಣೆ. ಗಂಡನ ಅಡಿಯಾಳಾಗಿ ಬಾಳುವುದು ನನಗೆ ಬೇಡವಾಯಿತು."

"ನಿನ್ನ ಯಜಮಾನರು ಕೆಟ್ಟವರಲ್ಲವಲ್ಲ!"

"ಕೆಟ್ಟವರು ಎಂದು ನಾನು ಹೇಳಲಿಲ್ಲ. ಆದರೆ ಅವರ ಮರ್ಜಿ ಹಿಡಿಯುವುದು ನನಗೆ ಸಾಧ್ಯವಾಗಲಿಲ್ಲ."

ಜಾನಕಮ್ಮ ಹೆಚ್ಚು ತನಿಖೆ ಮಾಡಲೆತ್ನಿಸಲಿಲ್ಲ.

ಸುನಂದ ಕೆಲಸಕ್ಕೆ ವಿನಂತಿ ಪತ್ರ (application) ಹಿಡಿದು ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರ್ (District Educational officer), ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರ ಕಛೇರಿಗಳಿಗೆ ಯಾತ್ರೆ ಮಾಡಲಾರಂಭಿಸಿದಳು.

ಕೆಲಸ ಸಿಕ್ಕುವುದು ಸುನಂದ ನಿರೀಕ್ಷಿಸಿದಷ್ಟು ಸುಲಭವಾಗಿರಲಿಲ್ಲ. ಆದರೂ ಅವಳು ನಿರಾಶೆಗೊಂಡಿರಲಿಲ್ಲ. ಹೆಣ್ಣು ಮಕ್ಕಳ ಕಾಲೇಜಿನ ಉಪಾಧ್ಯಾಯಿನಿಯೊಬ್ಬಳು ಮೂರು ತಿಂಗಳು ಹೆರಿಗೆ ರಜದ ಮೇಲೆ ಹೋಗುವವಳಿದ್ದಳು. ಹಂಗಾಮಿಯಾಗಿ ಆ ಕೆಲಸ ಕೊಡುವುದಾಗಿ ರಿಜಿಸ್ಟ್ರಾರರು ಆಶ್ವಾಸನ ಕೊಟ್ಟಿದ್ದರು. ಮೂರು ತಿಂಗಳ ಅವಧಿ ಮುಗಿದ ಮೇಲೂ ಉಪಾಧ್ಯಾಯಿನಿ ತನ್ನ ಕಲಸಕ್ಕೆ ಹಿಂತಿರುಗುವಂತಿರಲಿಲ್ಲ. ತನ್ನ ಹಂಗಾಮಿ ಕೆಲಸ ಖಾಯಂ ಆಗಬಹುದೆಂದು ಸುನಂದ ನಿರೀಕ್ಷಿಸಿದಳು.

ಒಂದು ದಿನ ಅಂಚೆಯಾಳು ಒಂದು ಕಾಗದ, ಒಂದು ರಿಜಿಸ್ಟರ್ಡ್ ಪುಸ್ತಕ ತಂದು ಸುನಂದನ ಕೈಗಿತ್ತು. ಸುನಂದ ಕಾಗದವನ್ನೊಡೆದು ಓದಿಕೊಂಡಳು.

ಇಂಡಿಯನ್ ಸ್ಟೂಡೆಂಟ್ಸ್ ಹಾಸ್ಟೆಲ್
ಲಂಡನ್

ಚಿ|| ಸೌ|| ಸುನಂದನಿಗೆ.

ನನ್ನ ಸಂಶೋಧನೆ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಿಂದ ಸ್ವೀಕೃತವಾಯಿತು. ನನಗೆ ಡಿ. ಎಸ್‌ಸಿ ದೊರಕಿತೆಂದು ತಿಳಿಸಲು ಸಂತೋಷಿಸುತ್ತೇನೆ. ನನ್ನ ವಿಜ್ಞಾನ ಗ್ರಂಥವನ್ನು "ಕೆಮಿಕಲ್ ಏಜ್'' ಸಂಸ್ಥೆಯವರೇ ಪ್ರಕಟಿಸಿದ್ದಾರೆ. ಅದರ ಪ್ರತಿಯೊಂದನ್ನು ಕಳುಹಿಸಿದ್ದೇನೆ.

ನಾನೂ ಇನ್ನೂ ಒಂದು ವರ್ಷ ಇಲ್ಲೇ ಇರಬೇಕಾಗಿದೆ. ಅನಂತರ ಬೆಂಗಳೂರಿಗೆ ಹೋಗುತ್ತೇನೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ನನಗೆ ಪ್ರೊಫೆಸರ್‌ಷಿಪ್ ಕೊಡಲೊಪ್ಪಿದ್ದಾರೆ.

ನಾನು ಬರುವ ವೇಳೆಗೆ ನೀನು ಬೆಂಗಳೂರಿಗೆ ಹಿಂದಿರುಗುತ್ತೀಯೆಂದು ನಂಬಿದ್ದೇನೆ. ನನ್ನನ್ನು ಬೀಳ್ಕೊಡುವುದಕ್ಕೂ ನೀನು ಬರಲಿಲ್ಲ – ಚಿಂತೆಯಿಲ್ಲ.

ನಿನ್ನ ತಾಯಿ, ಅಕ್ಕಾವರಿಗೆ ನನ್ನ ನಮಸ್ಕಾರ ತಿಳಿಸು.

ಇಂತು ನಿನ್ನ 'ಸುಂದರ'

ಸುನಂದ ಪುಸ್ತಕದ ಪ್ಯಾಕೆಟ್ ಒಡೆದು, ಅದರ ಹಾಳೆಗಳನ್ನು ತಿರುವಿದಳು. ಅದರಲ್ಲಿದ್ದ 'ಅರ್ಪಣ ಪುಟ' ಅವಳ ಗಮನ ಸೆಳೆಯಿತು.

'ನನ್ನ ಸೇವಕನಾಗಿ – ಮಿತ್ರನಾಗಿ
ಸಂಶೋಧನೆಗಳಲ್ಲಿ ನೆರವಾದ
**ಗಫೂರನಿಗೆ**
ಪ್ರೀತಿಪುರಸ್ಸರವಾಗಿ ಅರ್ಪಿಸಿದ್ದೇನೆ.'

'ಅರ್ಪಣ ಪುಟ' ಕಂಡಕೂಡಲೆ ಸುನಂದೆಯ ಮೈಯ್ಯಲ್ಲಿ ಉರಿಯೆದ್ದಿತು. ತಾಯಿಯನ್ನೂ ಅಕ್ಕನನ್ನೂ ಕರೆದು ಅದನ್ನು ತೋರಿಸಿ

"ಈಗಲಾದರೂ ನನ್ನ ಮಾತು ನಂಬುವಿರಾ - ಅವರು ತಾಳೀ ಕಟ್ಟಿರುವುದು ನನಗಲ್ಲ - ಗಫೂರನಿಗೆ" ಎಂದಳು.

## ೨೭

ಆಶ್ರಮಜೀವನ ಕ್ರಮಕ್ರಮೇಣ ಸಂಜೀವನ ಮನಸ್ಸಿಗೆ ಒಗ್ಗುತ್ತಬಂತು. ಆಶ್ರಮದ ಎಲ್ಲ ಚಟುಚಟಿಕೆಗಳಲ್ಲಿಯೂ ಅವನು ಭಾಗವಹಿಸುತ್ತಿದ್ದ. ಬೆಳಿಗ್ಗೆ ಐದು ಗಂಟೆಗೆದ್ದರೆ ರಾತ್ರಿ ಹತ್ತರವರೆವಿಗೂ ಕೆಲಸವಾಗುತ್ತಿತ್ತು. ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಸ್ವಾಮಿಜಿಯವರ 'ಗೀತಾ - ಉಪನಿಷತ್ತು'ಗಳ ಪ್ರವಚನಕ್ಕೆ ಹೋಗುತ್ತಿದ್ದ. ಎಂಟರಿಂದ ಒಂದು ಗಂಟೆಯವರೆಗೆ ಅನಾಥ ಶಿಶುಗಳ ಸೇವೆಯಾಗುತ್ತಿತ್ತು. ತರುವಾಯ ಪ್ರಸಾದ ಸ್ವೀಕರಿಸಿ ನಾಲ್ಕರವರೆಗೆ ವೃತ್ತ ಪತ್ರಿಕೆಗಳು, ಗ್ರಂಥಗಳನ್ನೋದುತ್ತಿದ್ದ. ನಾಲ್ಕರಿಂದ ಆರರವರೆಗೆ ಶಿಶುಪಾಲನೆ. ಹತ್ತು ಗಂಟೆಗೆ ಪ್ರಸಾದ ಸ್ವೀಕರಿಸಿ, ಸತ್ಯೇಂದ್ರನೊಂದಿಗೆ ಸ್ವಲ್ಪ ಹರಟೆ ಹೊಡೆಯುತ್ತಿದ್ದು ಮಲಗಿದರೆ ಬೆಳಿಗ್ಗೆ ಐದರವರೆಗೆ ನಗಾರಿ ಬಾರಿಸಿದರೂ ಅವನಿಗೆ ಎಚ್ಚರವಾಗುತ್ತಿರಲಿಲ್ಲ.

ತನ್ನ ವೈಯಕ್ತಿಕ ಸಮಸ್ಯೆಯನ್ನು ಕುರಿತು ಚಿಂತೆ ಮಾಡುವುದಕ್ಕೆ ಈ ಸೇವಾದೀಕ್ಷೆ ಅವಕಾಶವೇ ಕೊಡುತ್ತಿರಲಿಲ್ಲ. ಆದರೂ ಒಂದೊಂದು ದಿನ ಅವನ ಮನಸ್ಸಿನ ಪದ್ಮವ್ಯೂಹ ಭೇದಿಸಿ ಚಿಂತೆ ಒಳಕ್ಕೆ ಪ್ರವೇಶಿಸುತ್ತಿತ್ತು.

'ಪುಷ್ಪ ಈಗ ಸುಖವಾಗಿರಬಹುದು. ಅಂಕಲ್ ಜತೆ ತನ್ನ ಕ್ರೀಡೆಯನ್ನು ಅವ್ಯಾಹತವಾಗಿ ಸಾಗಿಸಿರಬಹುದು.' ಎಂದುಕೊಳ್ಳುವನು.

ಪುಷ್ಪನ ನೆನಪು ಬಂದೊಡನೆಯೇ ಮೈ, ಮನಸ್ಸು ಕಂಪಿಸುತ್ತಿತ್ತು. ಅಷ್ಟು ಸೋತ ದೇಹಕ್ಕೂ ಅಂದಿನ ರಾತ್ರಿ ನಿದ್ರೆಬರುತ್ತಿರಲಿಲ್ಲ.

ಸತ್ಯೇಂದ್ರ ಸಂಜೀವನ ಧ್ರುವತಾರೆಯಾಗಿದ್ದ. ಸ್ವಾಮಿಜಿ ತನ್ನನ್ನು ಎಷ್ಟು ಹತ್ತಿರ ಬರಮಾಡಿಕೊಂಡಿದ್ದರೂ, ಅವರಿಗೂ ತನಗೂ ಏನೋ ಅಂತರ ವಿದೆಯೆನ್ನುವ ಭಾವನೆ ಸಂಜೀವನ ಮನಸ್ಸಿನಿಂದ ಅಳಿಯಲೊಲ್ಲದು. ಸ್ವಾಮಿಜಿಯವರ ವಯಸ್ಸೋ - ತಪಸ್ಸೋ - ಹಿಮಾಲಯಸದೃಶ ಗಾಂಭೀರ್ಯವೋ ಕಾರಣವಾಗಿರಬಹುದು. ಆದ್ದರಿಂದಲೇ ಸತ್ಯೇಂದ್ರ ಅವನ ಹೃದಯಕ್ಕೆ ಹೆಚ್ಚು ಸಮೀಪಗತನಾದ.

ಎಷ್ಟೇ ಆಯಾಸವಾಗಿದ್ದರೂ ರಾತ್ರಿ ಒಂದು ಗಳಿಗೆ ಸತ್ಯೇಂದ್ರನೊಂದಿಗೆ ಮಾತನಾಡದೆ ಸಂಜೀವ ಮಲಗುತ್ತಿರಲಿಲ್ಲ. ಒಂದು ರಾತ್ರಿ ಅವನ ಹಾದಿ ನೋಡುತ್ತ ಕುಳಿತಿದ್ದ. ಸತ್ಯೇಂದ್ರ ಬರುವವೇಳೆಗೆ ರಾತ್ರಿ ಹನ್ನೊಂದಾಗುತ್ತ ಬಂದಿತ್ತು. ಸಂಜೀವ ತೂಕಡಿಸಿಕೊಂಡೇ ಕುಳಿತಿದ್ದ.

ಅಂದು ಸತ್ಯೇಂದ್ರನ ಮುಖದ ಮೇಲೆ ದೈವಿಕಪ್ರಭೆ ವಿರಾಜಿಸುತ್ತಿತ್ತು. ಅವನು ದೇವಲೋಕಕ್ಕೆ ಹೋಗಿ ಅಮೃತಪಾನಮಾಡಿ ಬಂದಿರುವಂತೆ ಕಂಡು ಬರುತ್ತಿತ್ತು. ಅರ್ಧನಿಮೀಲಿತವಾಗಿದ್ದ ಅವನ ನೇತ್ರದ್ವಯಗಳು ಶಾಂತಿ, ಪ್ರೇಮ, ದಯೆಯ ಕಾರಂಜಿಯಾಗಿತ್ತು. ಸಂಜೀವ ತನ್ನ ಮಿತ್ರನನ್ನು ದಿಟ್ಟಿಸಿನೋಡಿ

"ಧ್ಯಾನದಲ್ಲಿದ್ದಿರಾ ಸತ್ಯೇನ್‌ಬಾಬು."

"ಸ್ವಾಮಿಜಿಯವರ ಸನ್ನಿಧಿಯಲ್ಲಿದ್ದೆ."

"ಇವತ್ತೇನೋ ವಿಶೇಷ ನಡೆದಿದೆ."

"ಏನು ನಡೆದಿದೆ ಬಾಬು."

"ಕನಕ ಕದ್ದು ಮುಚ್ಚಿಟ್ಟುಕೊಳ್ಳಬಹುದು - ಕಸ್ತೂರಿ ಕದ್ದು ಮುಚ್ಚಿಟ್ಟುಕೊಳ್ಳಲು ಸಾಧ್ಯವಿಲ್ಲ."

"ಬಾಬು, ನಿಮಗೆ ಯಾವಾಗಲಾದರೂ ದೊಡ್ಡ ನಿಧಿ ದೊರಕಿದೆಯೇ?"

"ಇಲ್ಲ."

"ನಿಧಿ ದೊರಕಿದರೆ ಆಗುವ ಅನುಭವ ಬಲ್ಲಿರಾ?"

"ಬಲ್ಲೆ"

"ಆ ಅನುಭವ ನನಗೆ ಇಂದಾಗಿದೆ."

"ಏನಾಯಿತು ಬಾಬು."

"ಈ ರಹಸ್ಯ ನಮ್ಮಿಬ್ಬರಲ್ಲೇ ಇರಬೇಕು."

"ಅವಶ್ಯಕವಾಗಿ ಆಗಲಿ."

"ಸ್ವಾಮಿಜಿ ಸಮಾಧಿಸ್ಥರಾಗಿದ್ದರು. ನಾನೂ ಅವರ ಬಳಿ ಹೋಗಿ ಕುಳಿತು ಧ್ಯಾನಾರೂಢನಾದೆ. ನನಗೆ ಅರಿವಾಗದಂತೆ ಸ್ವಾಮೀಜಿ ತಮ್ಮ ಕಾಲುಬೆರಳಿನಿಂದ ನನ್ನ ಭ್ರೂಮಧ್ಯಭಾಗವನ್ನು ಸ್ಪರ್ಶಮಾಡಿದರು - ಆಗ ನನಗಾದ ಅನುಭವ ಹೇಗೆ ವಿವರಿಸಲಿ. ಆ ಆನಂದವನ್ನು ವರ್ಣಿಸುವ ಶಬ್ದ ಯಾವದು? - ನಾನು ರಸಸಾಗರದಲ್ಲಿ ಮಿಂದಾಯುತ್ತಿದ್ದಾಗ ಸ್ವಾಮಿಜಿ 'ಸತ್ಯೇನ್ - ಶಾಶ್ವತವಾಗಿ ಈ ಸ್ಥಿತಿಯಲ್ಲಿರಲು ಬಯಸುವೆಯಾ' ಎಂದು ಕೇಳಿದರು."

"ನೀವೇನು ಹೇಳಿದಿರಿ?"

"ಗುರುದೇವಾ, ಆಶ್ರಮದ ಮಕ್ಕಳನ್ನು ಹೇಗೆ ಬಿಟ್ಟುಹೋಗಲಿ ಎಂದೆ."

"ಧನ್ಯ ಸತ್ಯೇನ್ ಬಾಬು - ಸ್ವಾಮಿಜಿ ಏನು ಹೇಳಿದರು."

"ನನ್ನನ್ನು ಬಹಿರ್ಮುಖನನ್ನಾಗಿ ಮಾಡಿ, ಅಪ್ಪಿ, ನೇವರಿಸಿ 'ಶ್ರೀ ರಾಮಕೃಷ್ಣರ ಶಿಷ್ಯನಾದುದಕ್ಕೆ ಸಾರ್ಥಕವಾಯಿತು. ಸತ್ಯೇನ್ - ಪರಮ ಗುರುವಿನ ಜಯಂತಿಯ ಶುಭದಿವಸ ನಿನಗೆ ಸನ್ಯಾಸಕೊಡುತ್ತೇನೆ' ಎಂದರು.

ಸಂಜೀವನ ದೇಹದಲ್ಲಿ ವಿದ್ಯುತ್ - ಸಂಚಾರವಾದಂತಾಯಿತು. ಸತ್ಯೇನ್ ಬಾಬುವಿಗೆ ದೀರ್ಘದಂಡ ಪ್ರಣಾಮಮಾಡಿದ.

"ಇದೇನು ಬಾಬು - ನೀವು ನನ್ನ ಗೆಳೆಯರಲ್ಲವೇ? ನಾವಿಬ್ಬರೂ ಗುರು - ಭಾಯ್‌ಗಳು (ಗುರು ಸೋದರರು)"

"ಸ್ವಾಮಿ ಸತ್ಯಾನಂದರಿಗೆ ನನ್ನ ಪ್ರಣಾಮ ಸಲ್ಲಿಸಿದೆ ಸತ್ಯೇನ್."

"ಸ್ವಾಮಿಯೂ ಸ್ನೇಹಾಭಿಲಾಷಿ."

"ಸತ್ಯೇನ್ ನಿಮ್ಮ ಸ್ನೇಹ, ಸ್ವಾಮಿಜಿಯವರ ಕಟಾಕ್ಷ ನನ್ನನ್ನು ಒಬ್ಬ ಮನುಷ್ಯನನ್ನಾಗಿ ಮಾಡಿದೆ. ಅದನ್ನು ಎಂದಿಗೆ ಮರೆಯಬಲ್ಲೆ - ನಿಮ್ಮ ಋಣ ಯಾವ ಜನ್ಮದಲ್ಲಿ ತೀರಿಸಬಲ್ಲೆ."

"ಭಗವಾನ್ ರಾಮಕೃಷ್ಣರು ನಮ್ಮೆಲ್ಲರನ್ನೂ ಋಣಿಗಳನ್ನಾಗಿ ಮಾಡಿದ್ದಾರೆ."

"ಸತ್ಯೇನ್‌ಬಾಬು ನನಗೊಂದು ಉಪಕಾರ ಮಾಡುವಿರಾ?"

"ಹೇಳಿ."

"ನನ್ನ ಮಾಯೆಯ ಸಂಕೋಲೆಗಳನ್ನು ಕತ್ತರಿಸಲು ಸ್ವಾಮಿಜಿಯವರನ್ನು ಪ್ರಾರ್ಥಿಸುವಿರಾ?"

"ಹಾಗೆಂದರೇನು?"

"ಸನ್ಯಾಸಪ್ರದಾನ."

"ಸ್ವಾಮಿಜಿ ನನ್ನ ಮಾತು ಕೇಳುವರೆಂದು ತಿಳಿದಿರುವಿರಾ?"

"ನನ್ನ ಪರವಾಗಿ ಯಾವಾಗಲಾದರೂ ಒಂದು ಮಾತು ಸ್ವಾಮಿಜಿಯವರಲ್ಲಿ ಅರಿಕೆಮಾಡಿರಿ."

"ಆಗಲಿ - ಮಾಡುತ್ತೇನೆ."

ಎಂದು ಸತ್ಯೇನ್‌ಬಾಬು ಹೇಳಿದ. ಸಂಜೀವ ಸಂತೃಪ್ತನಾಗಿ ಮಲಗಿ ನಿದ್ರಿಸಿದ.

ಕೆಲವು ದಿನಗಳು ಕಳೆದವು. ಒಂದು ದಿನ ಸ್ವಾಮಿಜಿ ತೋಟದ ಕೆಲಸ ಮಾಡುತ್ತಿದ್ದರು. ಸಂಜೀವ ಅವರಿಗೆ ಸಹಾಯಕನಾಗಿ ನಿಂತಿದ್ದ. ಸ್ವಾಮಿಜಿ ಕೆಲಸ ನಿಲ್ಲಿಸಿ ಮಲ್ಲಿಗೆಯ ಬಳ್ಳಿಯಿಂದ ಕೆಲವು ಮೊಗ್ಗೆ, ಹೂಗಳನ್ನು ಬಿಡಿಸಿಕೊಂಡು ಗಿಡಕ್ಕೆ ಪಾತಿಮಾಡುತ್ತ ಕುಳಿತಿದ್ದ ಸಂಜೀವನನ್ನು ಹತ್ತಿರ ಕರೆದು

'ಕೈ ತೆಗೆ' ಎಂದು ಅವನ ಕೈಯಲ್ಲಿ ಒಂದು ಮಲ್ಲಿಗೆಯ ಮೊಗ್ಗೆಯನ್ನಿಟ್ಟು 'ಇದನ್ನು ಅರಳಿಸು' ಎಂದರು. ಸ್ವಾಮಿಜಿ ಹೇಳಿದಂತೆ ಸಂಜೀವ ಮಾಡಿದ. ಅವನ ಕೈಗೆ ಪೂರ್ಣ ವಿಕಾಸಗೊಂಡಿದ್ದ ಒಂದು ಹೂವನ್ನಿತ್ತು

"ಅದೂ ಹೂವೇ - ಇದೂ ಹೂವೇ - ಇವುಗಳಲ್ಲಿ ಯಾವದು ಚೆನ್ನ" ಎಂದರು.

"ಪೂರ್ತಿ ಅರಳಿರುವ ಹೂ ಚೆನ್ನ ಸ್ವಾಮಿಜಿ" ಎಂದ.

ಸ್ವಾಮಿಜಿ ಮುಂದೆ ಮಾತನಾಡಲಿಲ್ಲ- ತಮ್ಮ ಕೆಲಸ ಮುಂದುವರಿಸಿದರು.

ಸತ್ಯೇನ್‌ಬಾಬು ಪ್ರಾರ್ಥನೆಗೆ ಸ್ವಾಮಿಜಿ ಕೊಟ್ಟ ಉತ್ತರ ಕಂಡು ಸಂಜೀವ ಅಪ್ರತಿಭನಾದ. ಸತ್ಯೇನ್‌ಬಾಬು ಹಿಂದೆ ಹೇಳಿದ್ದ ಮಾತು ಜ್ಞಾಪಕಕ್ಕೆ ಬಂತು. 'ಒರೆದು, ತಿಕ್ಕಿ, ಪರೀಕ್ಷೆ ಮಾಡಿನೋಡಿ, ತಮ್ಮ ಮನಸ್ಸಿಗೆ ಖಚಿತ ಮಾಡಿಕೊಂಡಲ್ಲದೆ ಸ್ವಾಮಿಜಿ ಸನ್ಯಾಸ ಕೊಡುವುದಿಲ್ಲವೆನ್ನುವುದನ್ನು ನೆನೆದು, ಅದರ ಚಿಂತೆಯನ್ನೇ ಬಿಟ್ಟುಬಿಟ್ಟ.

'ಮನೆಬೇಕು, ಐಶ್ವರ್ಯಬೇಕು, ಪದವಿಬೇಕು ಎಂದು ಬಯಸಿ ಅವುಗಳಿಗಾಗಿ ಹಂಬಲಿಸುವುದು ಎಷ್ಟು ತಪ್ಪೋ ಅಷ್ಟೇ ತಪ್ಪಲ್ಲವೇ ಸನ್ಯಾಸ ಬೇಕು – ಮೋಕ್ಷಬೇಕು – ಬ್ರಹ್ಮದರ್ಶನವಾಗಬೇಕೆಂದು ಬಯಸುವುದು. ಅನಾಸಕ್ತನೂ, ನಿರ್ಮೋಹಿಯೂ ಆದ ಸಾಧಕನಿಗೆ ಸನ್ಯಾಸಾಕಾಂಕ್ಷೆಯೂ ಒಂದು ಪ್ರಾರಬ್ಧಕರ್ಮವೇ. ಅದನ್ನಾ ನಾನು ಬಯಸಬಾರದೆಂದು ಸ್ವಾಮಿಜಿಯವರ ಇಚ್ಛೆ' ಎಂದು ವಿಚಾರ ಮಾಡಿದ.

ನಿತ್ಯಗೆಲಸ ನಿರ್ವಹಿಸುವುವಕ್ಕೆ ಸಂಜೀವನಲ್ಲಿ ಹೊಸ ಹುರುಪುಹುಟ್ಟಿತು. ಎಷ್ಟು ದುಡಿದರೂ ಅವನಿಗೆ ದಣಿವೇ ಆಗಲೊಲ್ಲದು. ಒಮ್ಮೊಮ್ಮೆ ಸ್ವಾಮಿಜಿಯವರೇ ಅವನ ಕೆಲಸ ಬಿಡಿಸಿ

"ಹೋಗು ಮಗೂ - ಸಮುದ್ರದ ದಂಡೆಯಲ್ಲಿ ತಿರುಗಾಡಿಕೊಂಡು ಬಾ" ಎಂದು ಕಳುಹಿಸುತ್ತಿದ್ದರು.

ಆಶ್ರಮವಾಸಿಗಳು ಯಾರಾದರೂ ಪ್ರವಾಸ ಹೊರಟರೆ, ಕಾಹಿಲೆಯಾಗಿ ಮಲಗಿದರೆ ಅವರ ಭಾಗದ ಕೆಲಸವೂ ಸಂಜೀವನ ಹೆಗಲ ಮೇಲೆ ಬೀಳುತ್ತಿತ್ತು. ಆ ದಿನಗಳಲ್ಲಿ ಅವನ ಮಧ್ಯಾಹ್ನಾನಂತರದ ವಿಶ್ರಾಮ, ಪತ್ರಿಕಾಪಠನ ನಿಂತು ಹೋಗುತ್ತಿತ್ತು. ನಾಲ್ಕೈದು ದಿನಗಳ ವೃತ್ತಪತ್ರಿಕೆಗಳನ್ನು ಶೇಖರಿಸಿಟ್ಟುಕೊಂಡಿದ್ದು ಒಂದುದಿನ ಅವುಗಳನ್ನು ಓದುತ್ತಿದ್ದ.

ಆಸಾಮಿನಲ್ಲಿ ಬಂದ ನೆರೆಯಿಂದ ಸಾವಿರಾರು ಮಂದಿ ನಿರಾಶ್ರಿತರಾದರು. ಅವರ ಸೇವೆಗೆ ದೇಶದ ಎಲ್ಲ ಶ್ರೀ ರಾಮಕೃಷ್ಣಾಶ್ರಮಗಳಿಂದ ಸ್ವಯಂಸೇವಕ ರನ್ನು ಕಳುಹಿಸಲಾಯಿತು. ಮದರಾಸಿನಿಂದ ಮಣಿ, ಚಿನ್ನತಂಬಿ ಇಬ್ಬರೂ ಹೋಗಬೇಕಾಯಿತು. ಅವರ ಕೆಲಸವನ್ನು ಸತ್ಯೇನ್‌ಬಾಬು ಸಂಜೀವ ಹಂಚಿ ಕೊಂಡರು.

ಹೆಚ್ಚಿನ ಕೆಲಸವೂ ಮೈಗೂಡಿದ ಮೇಲೆ ಸಂಜೀವ ಒಂದು ದಿನ ಮಧ್ಯಾಹ್ನ ಹಿಂದಿನ ವಾರದ 'ಹಿಂದೂ' ಪತ್ರಿಕೆಯ ಸಂಚಿಕೆಗಳನ್ನು ನೋಡುತ್ತ ಕುಳಿತಿದ್ದ. 'ದಪ್ಪ ಅಕ್ಷರಗಳಲ್ಲಿ ಅಚ್ಚಾಗಿದ್ದ ಒಂದು ಪ್ರಕಟನೆ ಅವನ ಗಮನವನ್ನು ಸೆಳೆಯಿತು.

"ನೀವು ಎಲ್ಲಿದ್ದರೂ ಸರಿ
ಏನು ಮಾಡುತ್ತಿದ್ದರೂ ಸರಿ
ಕೂಡಲೆ ಹೊರಟು ಮೈಸೂರಿಗೆ ಬನ್ನಿ.
ನಿಮ್ಮ .. ...ಮರಣಶಯ್ಯೆಯಲ್ಲಿದ್ದಾಳೆ."
—ಸ್ಯಾಮ್ಯುಯಲ್.

ಸಂಜೀವ ಅದೇ ಪ್ರಕಟನೆಯನ್ನು ಪುನಃ ಪುನಃ ಓದಿದ. ಆ ವಾರದ ಪತ್ರಿಕೆಯ ಸಂಚಿಕೆಗಳನ್ನು ಹುಡುಕಿನೋಡಿದ. ಅದೇ ಪ್ರಕಟನೆ ಪ್ರತಿ ದಿನವೂ ಅಚ್ಚಾಗಿತ್ತು.

ಸಂಜೀವನ ಮನಸ್ಸಿನಲ್ಲಿ ತುಮುಲ ವಿಪ್ಲವವುಂಟಾಯಿತು. 'ನಿಮ್ಮ.... ಮರಣಶಯ್ಯೆಯಲ್ಲಿದ್ದಾಳೆ.—'. 'ಪುಷ್ಪ ಮರಣಶಯ್ಯೆಯಲ್ಲಿದ್ದಾಳೆಯೇ?' ಅಯ್ಯೋ! . . . . .

ಏನು ಮಾಡಲಿ. ಇಲ್ಲಿಂದ ಕೂಡಲೆ ಹೊರಡಲೇ! ಆಶ್ರಮದ ಕೆಲಸಕ್ಕೆ ಇರುವ ಜನ ಸಾಲದು. ನಾನೂ ಹೊರಟು ಹೋದರೆ!

ಮತ್ತೆ ಈ ಸಂಸಾರದ ಶರಪಂಜರದಲ್ಲಿ ಸಿಲುಕಲೇ! ಆ ಮಾಯಗಾತಿಯ ಮೋಹಾಸ್ತ್ರಕ್ಕೆ ಬಲಿಯಾಗಲೇ!

ಈ ಪ್ರಕಟನೆ ಸತ್ಯವೇ! ಪುಷ್ಪ ನಿಜವಾಗಿ ಮರಣಶಯ್ಯೆಯಲ್ಲಿದ್ದಾಳೆಯೇ? ನನ್ನ ಬರಮಾಡಿಕೊಳ್ಳಲು ಅವಳು ಹೂಡಿರುವ ಸಂಚೇಕಾಗಿರ ಬಾರದು!

ತನ್ನ ಅಂತಸ್ತಾಪವನ್ನು ತೋರಗೊಡದೆ ನಿತ್ಯಗೆಲಸಗಳಲ್ಲಿ ಉದ್ಯುಕ್ತ ನಾದ. ಎರಡು ದಿನಗಳ ತರುವಾಯ ಪ್ರಕಟವಾದ ಸುದ್ದಿ ಮತ್ತಷ್ಟು ಭಯೋತ್ಪಾದಕವಾಗಿತ್ತು.

"ನಿಮ್ಮ ಅಂತಿಮದರ್ಶನ ಪಡೆದು
ನಿಶ್ಚಿಂತೆಯಿಂದ . . . ಸಾಯಲು ಬಯಸುತ್ತಾಳೆ,
ಅವಳಿಗೆ ದರ್ಶನಭಾಗ್ಯ ಕರುಣಿಸಿ."

—ಸ್ಯಾಮ್ಯುಯಲ್

'ಸಂಜೀವನ ಮನಸ್ಸಿನಲ್ಲಿ ದೇವಾಸುರ ಕಾಳಗವಾರಂಭವಾಯಿತು. ಅವಳ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಅನುಭವಿಸುತ್ತಿದ್ದಾಳೆ' ಎಂಬ ಧ್ವನಿಯೊಂದು ಕಡೆ. 'ದಯೆಯೇ ಪ್ರೇಮ - ದಯೆಯೇ ಧರ್ಮ' ಎನ್ನುವ ಘೋಷ ಇನ್ನೊಂದುಕಡೆ.

ಸ್ವಾಮಿಜಿಯವರ ಸೂಕ್ಷ್ಮದೃಷ್ಟಿಯಿಂದ ಸಂಜೀವ ತನ್ನ ಆಂಹತಿಯನ್ನು ಮರೆಮಾಜಲಾಗಲಿಲ್ಲ.

"ಏನು ಚಿಂತೆಮಾಡುತ್ತಿರುವೆ ಮಗೂ" ಎಂದವರು ಕೇಳಿದರು.

"ಏನೂ ಇಲ್ಲ ಸ್ವಾಮಿಜಿ."

ಎಂದು ಸಂಜೀವ ಮಾತು ಹಾರಿಸಿದ.

ಮೂರನೆಯ ದಿನ ಪ್ರಕಟವಾದ ಮೂರನೆಯ ಜಾಹೀರಾತು ಸಂಜೀವನ ಚಿತ್ತಸ್ವಾಸ್ಥ್ಯವನ್ನು ನುಚ್ಚುನೂರುಮಾಡಿತು. ಸಾವಿರ ಸರ್ಪಗಳು ಒಮ್ಮೆಲೇ ಅವನನ್ನು ಕಚ್ಚಿದಂತಾಯಿತು. ಒಡಲಿನಲ್ಲಿ ದಳ್ಳುರಿ ಎದ್ದಿತು.

"ನಿಮ್ಮಲ್ಲಿ ಮಾನವಗುಣ ಅಲ್ಪಸ್ವಲ್ಪವಾದರೂ ಉಳಿದಿದ್ದರೆ
ಕೂಡಲೆ.... . ನನ್ನು ನೋಡಿ.
ಉದಾಸೀನಕ್ಕೆ ಇದು ವೇಳೆಯಲ್ಲ

—ಸ್ಯಾಮ್ಯುಯಲ್.

ಸಂಜೀವನಿಗೆ ತಡೆಯಲಾಗಲಿಲ್ಲ. ವೃತ್ತಪತ್ರಿಕೆಯನ್ನು ಕೈಯಲ್ಲಿ ಹಿಡಿದು ಸ್ವಾಮಿಜಿಯವರನ್ನು ಕಾಣಲು ಹೋದ. ಸಂಜೀವನ ಧಾವತಿಕಂಡು ಸ್ವಾಮಿಜಿ

"ಏನು ಮಗೂ - ಬಹಳ ಗಾಬರಿಗೊಂಡಿರುವೆ ?"

ಸ್ವಾಮಿಜಿಯವರ ಮುಂದೆ ಪ್ರಕಟನೆಗಳನ್ನು ಹಿಡಿದ. ಸ್ವಾಮಿಜಿ ಸಾವಕಾಶವಾಗಿ ಅವುಗಳನ್ನೋದಿಕೊಂಡು

"ಮೊದಲನೆಯ ಪ್ರಕಟನೆ ಎಂದು ಬಂದಿತು ?"

"ಸುಮಾರು ಹತ್ತು ದಿನಗಳ ಕೆಳಗೆ."

"ಇಲ್ಲಿಯವರೆಗೆ ಸುಮ್ಮನೆ ಕುಳಿತಿರುವೆಯಾ. ಶ್ರೀರಾಮಕೃಷ್ಣರು ಮೆಚ್ಚುವ ಕೆಲಸವೇ ಇದು."

"ನಾನು ಹೋಗಬೇಕೇ ಸ್ವಾಮಿಜಿ."

"ವಿಚಾರಮಾಡು. ನಿನ್ನ ಅಂತರಾತ್ಮ ಹೇಗೆ ಹೇಳುತ್ತದೆ ಹಾಗೆ ಮಾಡು."

"ನನ್ನದು ಅಪರಾಧವಾಯಿತು. ಕ್ಷಮಿಸಿ ಸ್ವಾಮಿಜಿ - ಬೆಳಿಗ್ಗೆ ಹೊರಡುತ್ತೇನೆ."

"ಬೆಳಿಗ್ಗೆ ಹೊರಟರೆ ಮೈಸೂರು ಯಾವಾಗ ಸೇರುತ್ತೀ."

"ನಾಡಿದ್ದು ಬೆಳಿಗ್ಗೆ ಸೇರುತ್ತೇನೆ."

"ಹೋಗಿಬಾ - ಶ್ರೀ ಗುರುದೇವ ಎಲ್ಲಾ ನೋಡಿಕೊಳ್ಳುತ್ತಾರೆ."

"ಹಿಂದಿರುಗಿ ನಾನು ಬರುತ್ತೇನೆ ಸ್ವಾಮಿಜಿ."

"ಆಗಲಿ - ಗುರುದೇವ ಪ್ರೇರಣೆ ಮಾಡಿದಂತೆ ಮಾಡು" ಎಂದು ಹೇಳಿದರು.

ಸ್ವಾಮಿಜಿಯವರನ್ನು, ಸತ್ಯೇಂದ್ರನನ್ನು, ಆಶ್ರಮವನ್ನು, ಆಶ್ರಮದ ಮಕ್ಕಳನ್ನು ಬಿಟ್ಟು ಹೋಗುವುದು ಸಂಜೀವನಿಗೆ ತುಂಬ ಕೆಡುಕೆನಿಸಿತು. ಆದರೆ ಯಾವದೊ ಅವ್ಯಕ್ತಶಕ್ತಿ ಅವನನ್ನು ಮೈಸೂರಿನ ಕಡೆ ಎಳೆಯುತ್ತಿತ್ತು. ಅಂದು ಸಮುದ್ರದ ದವಡೆಯಿಂದ ಯಾರು ಅವನನ್ನು ಹೊರಗೆಳೆದರೋ ಅವರೇ ಅವನನ್ನು ಮೈಸೂರಿನ ಕಡೆ ಎಳೆದೊಯ್ಯುತ್ತಿದ್ದರು.

ಆಶ್ರಮ ಬಿಟ್ಟು ಹೊರಡುವ ಮುನ್ನ ಸಂಜೀವ ತನ್ನ ರಕ್ಷಣೆಯಲ್ಲಿದ್ದ ಎಲ್ಲ ಮಕ್ಕಳನ್ನೂ ಮಾತಾಡಿಸಿ, ಅಪ್ಪಿ ಮುದ್ದಿಟ್ಟು, ಸ್ವಾಮಿಜಿಯವರ ಪಾದಗಳನ್ನಪ್ಪಿ ಅಶ್ರುಧಾರೆಯಿಂದ ತೊಳೆದ. ಸತ್ಯೇನ್ ಅವನ ಜತೆಯಲ್ಲಿ ಸ್ಟೇಷನ್ನಿಗೆ ಬಂದ. ರೈಲು ಹೊರಡುವ ವೇಳೆಯಾಗಲು ಸತ್ಯೇನ್‌ಬಾಬು ವನ್ನು ಅಪ್ಪಿ ಕಣ್ಣೀರುಗರೆದ.

ರೈಲು ಮುಂದಡಿ ಇಟ್ಟಿತು.

ಸಂಜೀವನಿಗೆ ಊಟ, ವಿಶ್ರಾಂತಿ ಒಂದೂ ಬೇಡವಾಯಿತು- 'ಬೇಗ ಮೈಸೂರು ಮುಟ್ಟಬೇಕು' ಎನ್ನುವ ಇಚ್ಛೆ ಅವನಿಗೆ ಲೋಕವನ್ನೇ ಮರೆಸಿತ್ತು.

ಬೆಳಿಗ್ಗೆ ಮೈಸೂರು ಸ್ಟೇಷನ್ನಿನಲ್ಲಿ ಇಳಿದವನೇ ತನ್ನ ಮನೆಗೆ ಹೋಗದೆ ನೇರವಾಗಿ ಪುಷ್ಪನ ಮನೆಗೆ ಹೋದ. ಗಾಡಿಯಿಂದಿಳಿದು ಅವನು ಒಳಕ್ಕೆ ಪ್ರವೇಶಿಸಿದ ಕೂಡಲೆ, ವೆರಾಂಡದಲ್ಲಿಯೇ ಕುಳಿತಿದ್ದ ಸ್ಯಾಮ್ಯುಯಲ್ ಸ್ವಾಗತ ಬಯಸಿ ಅವನನ್ನು ಒಳಗಿದ್ದ ಹೆಲನ್ ಅಮ್ಮನ ರೂಮಿಗೆ ಕರೆದೊಯ್ದ ಜ್ಯೂಡಿ, ಹೆಲನ್ ಅಮ್ಮನೂ ಒಳಕ್ಕೆ ಬಂದರು.

"ಎಲ್ಲಿಂದ ಬರುತ್ತಿರುವಿರಿ" ಎಂದು ಸ್ಯಾಮ್ಯುಯಲ್ ಕೇಳಿದ.

"ಮದರಾಸಿನಿಂದ. ನೀವು ಯಾವಾಗ ಬಂದಿರಿ."

"ಎರಡು ವಾರವಾಯಿತು. 'ಹಿಂದೂ' ಪ್ರಕಟನೆ ಕೂಡಲೆ ನಿಮ್ಮ ಕಣ್ಣಿಗೆ ಬೀಳಲಿಲ್ಲವೇ ?"

ಸ್ಯಾಮ್ಯುಯಲ್ ಪ್ರಶ್ನೆ ಸಂಜೀವನ ತಲೆ ತಗ್ಗಿಸುವಂತೆ ಮಾಡಿತು. ಅವನಿಗೆ ಉತ್ತರ ಹೇಳದೆ ಜ್ಯೂಡಿಯಕಡೆ ತಿರುಗಿ

"ಪುಷ್ಪ ಹೇಗಿದ್ದಾಳೆ."

ಜ್ಯೂಡಿ ಕಣ್ಣುತುಂಬಿ ಬಂತು. ಉತ್ತರಕೊಡಲು ಅವಳು ಅಸಮರ್ಥಳಾದಳು.

"ನೀವೇ ನೋಡುವಿರಂತೆ" ಎಂದು ಸ್ಯಾಮ್ಯುಯಲ್ ಹೇಳಿದ.

"ನಾನು ಪುಷ್ಪನನ್ನು ನೋಡಬಹುದೇ ?"

"ಸ್ವಲ್ಪ ತಡೆಯಿರಿ. ನೀವು ಬಂದಿರುವ ವಿಷಯ ಅವಳಿಗೆ ಸೂಕ್ಷ್ಮವಾಗಿ ತಿಳಿಸುತ್ತೇನೆ."

"ನಿದ್ದೆ ಮಾಡುತ್ತಿರುವಳೇ ?"

"ನಿದ್ದೆ ಎಲ್ಲಿಂದ ಬಂತು! ಮಂಪರು ಬಂದಂತಾಗಿದೆ - ಸ್ವಲ್ಪ ಹೊತ್ತು ಕಣ್ಣು ಮುಚ್ಚಿಕೊಂಡಿರುತ್ತಾಳೆ."

"ಪುಷ್ಪನ ಪ್ರಾಣ ನಿಮ್ಮ ಕೈಯಲ್ಲಿವೆ"

ಎಂದು ಹೇಳಿ ಹೆಲನ್ ಅಮ್ಮ ಒಳಗೆ ಹೋದಳು. ಅವಳನ್ನು ಜ್ಯೂಡಿ ಹಿಂಬಾಲಿಸಿದಳು.

"ಏಳಿ - ಸ್ನಾನಮಾಡಿ"

ಎಂದು ಸ್ಯಾಮ್ಯುಯಲ್ ಉಪಚರಿಸಿದ. ಜ್ಯೂಡಿ ಸ್ಯಾಮ್ಯುಯಲ್‌ಗೂ, ಸಂಜೀವನಿಗೂ ಕಾಫಿ ತಂದಿತ್ತಳು.

ಕಾಫಿ ಲೋಟ ಕೈಗೆ ತೆಗೆದುಕೊಳ್ಳುತ್ತಾ ಸಂಜೀವ

"ಪ್ರಾಣ ಭಯವಿಲ್ಲವಷ್ಟೆ ?" ಎಂದು ಕೇಳಿದ.

"ಡಾಕ್ಟರುಗಳು ಆಸೆ ಬಿಟ್ಟಿದ್ದಾರೆ"

ಎಂದು ಹೇಳಿ ಜ್ಯೂಡಿ ಒಳಗೆ ಹೋದಳು.

ಕಾಫಿಯನ್ನು ಒಂದೇ ಗುಟುಕಿಗೆ ಕುಡಿದು ಮುಗಿಸಿ ಸಂಜೀವ ಯೋಚಿಸುತ್ತ ಕುಳಿತುಬಿಟ್ಟ. ಸ್ಯಾಮ್ಯುಯಲ್ ಅವನ ಬಳಿಸಾರಿ ಸಂತೈಸುತ್ತ

"ಚಿಂತೆ ಮಾಡಬೇಡಿ - ಭಗವಂತನ ಕೃಪೆಯಿಂದ ಎಲ್ಲವೂ ಸರಿ ಹೋಗುತ್ತದೆ" ಎಂದ.

ಜ್ಯೂಡಿ ಮೆಲ್ಲನೆ ಪುಷ್ಪನ ರೂಮಿಗೆ ಹೋದಳು. ಪುಷ್ಪನ ಮುಂಪರು ಹರಿದಿದ್ದುದನ್ನು ಕಂಡು, ಅವಳನ್ನೆಬ್ಬಿಸಿ ಮುಖಕ್ಕೆ ನೀರುಕೊಟ್ಟು, ತಲೆಬಾಚಿ ಗಂಟು ಹಾಕಿದಳು. ಹೆಲನ್ ಅಮ್ಮ ಮಗಳಿಗೆ ಕಾಫಿ ತಂದುಕೊಟ್ಟಳು.

ಪುಷ್ಪ ಮಾತನಾಡಲೆತ್ನಿಸಿದಳು. ಅವಳ ಕ್ಷೀಣಸ್ವರದಿಂದ ಹೊರಡುತ್ತಿದ್ದ ಮಾತುಗಳನ್ನರ್ಥಮಾಡಿಕೊಳ್ಳಲು ಕಿವಿಗೊಟ್ಟು ಕೇಳಬೇಕಾಗಿತ್ತು. ಪುಷ್ಪನನ್ನು ಮಲಗಿಸಿ, ಮೈತುಂಬ ರಗ್ ಹೊದಿಸಿ, ಜ್ಯೂಡಿ ಅವಳ ಸಮೀಪದಲ್ಲಿ ಕುಳಿತು, ಮಾತನ್ನು ಆಲೈಸಿದಳು.

"ಇವತ್ತು ಯಾವ ವಾರ ಜ್ಯೂಡಿ"

"ಭಾನುವಾರ."

"ಭಾವ ಕೊಟ್ಟ ಪ್ರಕಟಣೆಯಿಂದಲೂ ಪ್ರಯೋಜನವಾಗಲಿಲ್ಲ."

"ಆಗೇ ಅಗುತ್ತದೆ. ನೀನು ಯೋಚನೆ ಬಿಡು."

"ಅವರು ಬರುವರೇ ?"

"ಪ್ರಕಟನೆ ಇನ್ನೂ ಅವರ ಕಣ್ಣಿಗೆ ಬಿದ್ದಿಲ್ಲವೆಂದು ಕಾಣುತ್ತದೆ. ಅದನ್ನು ಕಂಡಕೂಡಲೆ ಇಲ್ಲಿಗೆ ಧಾವಿಸಿ ಬರುವರು."

"ಜ್ಯಾಡಿ - ನನಗೆ ಬದುಕಬೇಕೆಂದು ಆಸೆಯಿಲ್ಲ."

"ಕೆಟ್ಟಮಾತು ಆಡಬೇಡ ಮೇರಿ."

"ಕೆಟ್ಟಮಾತಲ್ಲ - ಸತ್ಯಸಂಗತಿ ಆಡುತ್ತಿದ್ದೇನೆ. ಅವರು ನನ್ನನ್ನು ಕ್ಷಮಿಸಿ, ಮತ್ತೆ ನನ್ನನ್ನೆಲ್ಲಿ ಸ್ವೀಕರಿಸುವರೋ ಎಂದು ಭಯವಾಗುತ್ತಿದೆ."

"ಅದಕ್ಕೇಕೆ ಭಯ. ನೀನು ಬಯಸುತ್ತಿರುವುದೇ ಅದಲ್ಲವೇ ?"

"ಅಲ್ಲ ಜ್ಯಾಡಿ. ಯಾವ ಧೈರ್ಯದಿಂದ ನಾನು ಸ್ವಾಮಿಯನ್ನು ಮುಟ್ಟಲಿ. ಅವರನ್ನು ಮುಟ್ಟಿ ಮತ್ತೆ ಅಪವಿತ್ರಗೊಳಿಸಲಿಚ್ಛೆಯಿಲ್ಲ. ಒಮ್ಮೆ ಅವರನ್ನು ನೋಡಿ, ಅವರ ಪಾದಗಳ ಮೇಲೆ ಬಿದ್ದು ಕ್ಷಮೆಬೇಡಲು ಬಯಸುತ್ತೇನೆ. 'ಕ್ಷಮಿಸಿದ್ದೇನೆ' ಎಂದವರು ಹೇಳಿದರೆ ಸಾಕು - ನಿರಾತಂಕ ವಾಗಿ ಪ್ರಾಣಬಿಡುತ್ತೇನೆ."

"ನಿನ್ನನ್ನವರು ಎಷ್ಟು ಪ್ರೀತಿಸುತ್ತಾರೆಂಬುದನ್ನು ಬಲ್ಲೆಯಾ ?"

"ಏಕೆ?"

"ನೀನು ಕಣ್ಣುಮುಚ್ಚಿಕೊಂಡರೆ ಅವರು ಬದುಕಿರುತ್ತಾರೆಯೋ ?"

"ನನ್ನ ಸ್ವಾಮಿ ಚೆನ್ನಾಗಿರಬೇಕು ಜ್ಯಾಡಿ - ಹಾಗೆ ಹೇಳಬೇಡ."

"ನೀನು ಬದುಕಲು ಮನಸ್ಸುಮಾಡಬೇಕು. ನಿನಗೂ ಯಾವದೋ ಗ್ರಹಚಾರ ಕಾಡುತ್ತಿತ್ತು - ಅದು ಬಿಡುಗಡೆಯಾಗುವ ಕಾಲಬಂದಿದೆ."

"ಯಾವಾಗ ?"

"ಇಂದೋ ನಾಳೆಯೋ"

"ಇಷ್ಟು ಬೇಗನೆ !"

"ಹೌದು ಮೇರಿಗರ್ಲ್ - ಅಷ್ಟುಬೇಗ - ನಿನ್ನನ್ನು ನೋಡಲು ಈಗ ಯಾರು ಬಂದಿದ್ದಾರೆ ಹೇಳು . . . . ಊಹಿಸು ನೋಡೋಣ."

"ಯಾರು ಬಂದಿದ್ದಾರೆ - ನೀನು, ಭಾವ."

"ಅಲ್ಲ - ನಿನ್ನ ಪ್ರಾಣೇಶ್ವರನ ಕಡೆಯಿಂದ ಒಬ್ಬರು ಬಂದಿದ್ದಾರೆ."

"ನಿಜವೇ ? ನಿಜವೇ ಜ್ಯಾಡಿ"

ಎಂದು ಪುಷ್ಪ ಮೇಲಕ್ಕೇಳಲು ಪ್ರಯತ್ನಿಸಿದಳು. ಅವಳು ಏಳಲು ಜ್ಯಾಡಿ ಅವಕಾಶಕೊಡಲಿಲ್ಲ.

"ಅವರು ಹೇಗಿದ್ದಾರಂತೆ!"

"ಚೆನ್ನಾಗಿದ್ದಾರಂತೆ."

"ಬಂದಿರುವವರನ್ನು ಬೇಗ ಕಳುಹಿಸು ಜ್ಯಾಡಿ - ಬೇಗ . . . . ತಡಿ ಜ್ಯಾಡಿ . . . . ಸ್ವಲ್ಪ ತಡಿ . . . . ಮೇಜಿನ ಮೇಲೆ ಕೈಗನ್ನಡಿ ಇರಬಹುದು ಸ್ವಲ್ಪಕೊಡು."

ಜ್ಯಾಡಿ ಕೈಗನ್ನಡಿಯನ್ನು ಪುಷ್ಪನ ಕೈಗಿತ್ತಳು. ಪುಷ್ಪ ಅವರಲ್ಲಿ ತನ್ನ ಮುಖ ನೋಡಿಕೊಳ್ಳುತ್ತಾ

"ನನ್ನ ಮುಖ ತುಂಬ ಒಣಗಿಹೋಗಿದೆಯಲ್ಲವೇ ಜ್ಯಾಡಿ."

"ನೀನೇನು ಕಮ್ಮಿ ಅನುಭವಿಸಿರುವೆಯಾ ಡಾರ್ಲಿಂಗ್."

"ಸ್ವಾಮಿ ನನ್ನ ಸ್ಥಿತಿ ನೋಡಿದರೆ ತುಂಬ ದುಃಖಪಡುತ್ತಾರೆ."

"ಬೇಗ ಗುಣಮಾಡಿಕೊಂಡು ನೀನು ಚೆನ್ನಾಗಬೇಕೆಂದರೆ ನಮ್ಮ ಮಾತು ಕೇಳುವುದಿಲ್ಲ."

"ಜ್ಯಾಡಿ - ನನ್ನ ಹಣೆ ಬರಿದಾಗಿದೆ. ಕುಂಕುಮದ ಬೊಟ್ಟಿಡು."

ಜ್ಯಾಡಿ ಕುಂಕುಮದ ಬೊಟ್ಟಿಟ್ಟು

"ಅವರನ್ನು ಕಳುಹಿಸಲೇ" ಎಂದು ಕೇಳಿದಳು

"ಕಳುಹಿಸು."

ಪುಷ್ಪನಿಗೂ ತನಗೂ ಆದ ಸಂಭಾಷಣೆಯನ್ನು ಜ್ಯಾಡಿ ಒಳಗೆಹೋಗಿ ಸಂಜೀವನಿಗೆ ವರದಿಮಾಡಿ

"ಎಲ್ಲಾ ನಿಮ್ಮ ಕೈಯಲ್ಲಿದೆ" ಎಂದಳು.

ಸಂಜೀವ ಎದ್ದು ಮೆಲ್ಲನೆ ಪುಷ್ಪನ ರೂಮಿನೊಳಕ್ಕೆ ಬಂದ. ಕೂಡಲೆ ಪುಷ್ಪನಿಗೆ ಕಾಣಿಸಿಕೊಳ್ಳಲು ಅವನಿಗೆ ಧೈರ್ಯವಾಗದು. ಕಾಲಸಪ್ಪಳ ಕೇಳಿ ಪುಷ್ಪ 'ಯಾರು' ಎಂದಳು. ಸಂಜೀವ ಮೆಲ್ಲನೆ ಬಂದು ಅವಳ ಎದುರಿಗೆ ನಿಂತ.

ಪುಷ್ಪ ಅವನನ್ನೇ ಎವೆಯಿಕ್ಕದೆ ನೋಡಿದಳು. ಅವಳ ರಕ್ತರಹಿತ ನೇತ್ರಗಳಿಂದ ಹನಿಗಳು ಜಾರಿದವು. ಕ್ಷಯಿಸಿದ್ದ ಕೈಗಳನ್ನೆತ್ತಿ

"ಹತ್ತಿರ ಬನ್ನಿ ದೊರೆ" ಎಂದಳು.

ಸಂಜೀವ ಅವಳ ಕೈಹಿಡಿದುಕೊಂಡು, ಹಾಸಿಗೆಯ ಮೇಲೆ ಕುಳಿತ.

"ಇನ್ನೂ ಹತ್ತಿರ ಬನ್ನಿ" ಎಂದಳು.

ಸಂಜೀವ ಅವಳ ಸಮೀಪಕ್ಕೆ ಹೋದ. ಪುಷ್ಪ ತನ್ನ ದುರ್ಬಲ ಕೈಯನ್ನು ಅವನ ಮುಖದ ಮೇಲೆ ಆಡಿಸಿ, ನೇವರಿಸುತ್ತಾ

"ಎಷ್ಟು ಬಡವಾಗಿದ್ದೀರಿ - ಆರೋಗ್ಯವಾಗಿದ್ದೀರಾ ?"

"ಇದ್ದೇನೆ."

ಸಂಜೀವ ಪುಷ್ಪನ ಮುಖದ ಮೇಲೆ, ಮೈಮೇಲೆ ಕೈಯಾಡಿಸಿದ. ಅವಳ ದೇಹ ತಳೆದಿದ್ದ ರೂಪು ಕಂಡು ಅವನಿಗೆ ದುಃಖ ಉಕ್ಕಿಬಂದಿತು. ಪುಷ್ಪನ ಮುಖದ ಮೇಲೆ ಮುಖವಿಟ್ಟು ಕಂಬನಿಗರೆದ. ಪುಷ್ಪ ಅವನ ತಲೆ ನೇವರಿಸುತ್ತಾ

"ದುಃಖಿಸಬೇಡಿ"

ಎಂದು ಅವನ ಗಲ್ಲಹಿಡಿದೆತ್ತಿ ನೋಡುತ್ತಾ

"ನಿಜವಾಗಿ ನೀವೇ ಬಂದಿರುವಿರಾ ದೊರೆ. ಇದೇನು ಕನಸೋ ?"

"ನಾನೇ ಬಂದಿದ್ದೇನೆ - ಕನಸಲ್ಲ."

"ಇಷ್ಟು ದಿನ ಎಲ್ಲಿದ್ದಿರಿ ?"

"ಮದರಾಸಿನಲ್ಲಿ."

"ಮದರಾಸಿನಲ್ಲಿ ಲ್ಲಿ ?"

"ಶ್ರೀರಾಮಕೃಷ್ಣಾಶ್ರಮದಲ್ಲಿ."

"ನನ್ನ ಮರೆಯಲೆತ್ನಿಸಿದಿರಾ ?"

"ಯತ್ನಿಸಿದೆ - ಸಾಧ್ಯವಾಗಲಿಲ್ಲ."

"ನಿಮಗೆ ನಾನು ತಿರುಗಿ ತೊಂದರೆಕೊಟ್ಟೆ."

"ಹಾಗನ್ನಬೇಡ."

"ಇನ್ನು ಹೆಚ್ಚುಕಾಲ ತೊಂದರೆಕೊಡುವುದಿಲ್ಲ ಸ್ವಾಮಿ."

"ಅಮಂಗಳ ನುಡಿಯಬೇಡ."

"ನನ್ನ ಬಯಕೆ ಪೂರ್ಣವಾಯಿತು ದೊರೆ."

"ಏನು ಬಯಸಿದೆ."

"ನಿಮ್ಮನ್ನು ನೋಡಿದ ಹೊರತೂ ಪ್ರಾಣಬಿಡುವುದಿಲ್ಲವೆಂದು ಹಟ ತೊಟ್ಟಿದ್ದೆ."

"ನಿನ್ನ ಪ್ರಾಣಾಪಹರಣ ಮಾಡಲು ನಾನು ಬಂದಂತಾಯಿತು."

"ಅಲ್ಲ - ನನ್ನ ಉದ್ಧಾರಮಾಡುವುದಕ್ಕೆ ಬಂದಿರಿ."

"ನನಗೆ ಆ ಅಹಂಕಾರವಿಲ್ಲ."

"ನೀವೆಂದೂ ಅಹಂಕಾರಪಟ್ಟವರಲ್ಲ . . . . ನನ್ನ ಅಪರಾಧ ಕ್ಷಮಿಸಿರುವಿರಾ ?"

"ಕ್ಷಮೆ ಬೇಡಬೇಕಾದವಳು ನೀನಲ್ಲ - ನಾನು."

"ಎಂದಿಗೂ ಇಲ್ಲ. ನಾನು ಅಪರಾಧಿ - ಪಾಪಿ - ಮೋಸಗಾತಿ."

"ಯಾವದೂ ಅಲ್ಲ ಸ್ವೀಟ್."

"ಸ್ವೀಟ್ ಎಂದು ಕರೆದಿರಾ ನನ್ನ ಸ್ವಾಮಿ. ಈ ಮಾತು ನಿಮ್ಮ ಬಾಯಿಂದ ಕೇಳುವುದಕ್ಕೆ ಇಷ್ಟುದಿನ ಬದುಕಿದ್ದು ಸಾರ್ಥಕವಾಯಿತು. - ನನ್ನನ್ನೆಷ್ಟು ಪ್ರೀತಿಸುತ್ತಿದ್ದಿರಿ ದೊರೆ. ನನ್ನ ತಲೆ ಎಷ್ಟು ತಿರುಗುವಂತೆ ಮಾಡಿಬಿಟ್ಟಿದ್ದಿರಿ. ನಾನಷ್ಟು ಮೆರೆಯಬಾರದಾಗಿತ್ತು."

"ನೀನು ಮೆರೆಯದೆ ಇನ್ನು ಯಾರು ಮೆರೆಯಬೇಕಾಗಿತ್ತು "

"ನನ್ನನ್ನು ಬಿಟ್ಟುಹೋದ ದಿವಸದಿಂದ ಇಂದಿನವರೆಗೇನಾಯಿತು ವಿವರವಾಗಿ ಹೇಳಿ - ಆಶ್ರಮದಲ್ಲಿ ಏನು ಮಾಡುತ್ತಿದ್ದಿರಿ ?"

ಸಂಜೀವ ಆಶ್ರಮಕ್ಕೆ ಹೋದಂದಿನಿಂದ, ಆಶ್ರಮ ಬಿಟ್ಟುಬರುವವರೆಗೆ ನಡೆದಿದ್ದ ಎಲ್ಲ ಸಂಗತಿಗಳು, ಮಾತುಕತೆಗಳನ್ನು ವಿವರಿಸಿದ. ಪುಷ್ಪ ನಿಟ್ಟುಸಿರುಬಿಟ್ಟು

"ಸನ್ಯಾಸ ತೆಗೆದುಕೊಳ್ಳಬೇಕೆಂದಿದ್ದಿರಾ ?"

"ಹೇಗಾದರೂ ಜನ್ಮಸಾರ್ಥಕ್ಯ ಪಡೆಯುಕೊಳ್ಳಬೇಕಲ್ಲ."

"ದೊರೆ - ನೀವು ಸನ್ಯಾಸದ ಯೋಚನೆ ಮಾಡಕೂಡದು."

"ಏಕೆ ?"

"ನಿಮ್ಮ ಗುಣಕ್ಕೆ ತಕ್ಕವಳನ್ನು ನೀವು ಮದುವೆಯಾಗಬೇಕು."

ಸಂಜೀವನ ಮುಖದಲ್ಲಿ ವಿಕಟನಗೆಯೊಂದು ಮಿಂಚಿತು

"ನನಗಿನ್ನು ಮದುವೆಯೇ ?"

ಪುಷ್ಪ ಉತ್ತರಕೊಡದೆ ನೀರವಳಾದಳು.

"ನನ್ನ ಮದುವೆ ಎಂದೋ ಆಗಿಹೋಯಿತು ಪುಷ್ಪ."

"ನನ್ನ ಪಾಪಕ್ಕೆ ವಿಮೋಚನೆಯೇ ಇಲ್ಲ."

"ವಿಮೋಚನೆಯಾಗಿದೆಯಲ್ಲ."

"ನಿಜವಾಗಿ."

"ಸತ್ಯವಾಗಿ ಆಗಿವೆ ಡಾರ್ಲಿಂಗ್."

ಪುಷ್ಪನ ಕಣ್ಣುಗಳಿಂದ ಒಂದೆರಡು ಹನಿಗಳುದುರಿದವು. ಸಂಜೀವ. ಅವುಗಳನ್ನು ಮೃದುವಾಗಿ ತೊಡೆಯುತ್ತಾ

"ಕಣ್ಣೀರು ಹಾಕಬಾರದು."

"ದುಃಖಪಡುತ್ತಿಲ್ಲ ದೊರೆ. ಮನಸ್ಸಿಗೆ ಎಲ್ಲೂ ಇಲ್ಲದ ಸಂತೋಷವಾಗಿದೆ. ನಾನು ಅಪೇಕ್ಷಿಸಿದ್ದು ನನಗೆ ದೊರೆಯಿತು."

"ಏನದು ?"

"ನಿಮ್ಮ ಕ್ಷಮೆ. ಇನ್ನು ನಾನು ನಿರಾತಂಕವಾಗಿ ಪ್ರಾಣಬಿಡಬಲ್ಲೆ."

ಸಂಜೀವನ ಮನಸ್ಸಿಗೆ ನರಕಯಾತನೆಯಾಯಿತು.

"ಸಾಯುವ ಯೋಚನೆ ಮಾಡಬೇಡ ಸ್ವೀಟ್."

ಪುಷ್ಪ ಕ್ಷಣಕಾಲ ಕಣ್ಣುಮುಚ್ಚಿಕೊಂಡು ಮಲಗಿದಳು. ಸಂಜೀವ ಮೃದುಧ್ವನಿಯಲ್ಲಿ

"ತುಂಬ ಆಯಾಸವಾಯಿತೇ ?"

"ನಾನು ಇಷ್ಟು ಮಾತನಾಡಿ ಬಹಳ ದಿವಸಗಳಾಗಿದ್ದವು."

"ವಿಶ್ರಾಂತಿ ತೆಗೆದುಕೋ."

ಎಂದು ಅವಳಿಗೆ ರಗ್ ಹೊದೆಸಿ ಮೇಲಕ್ಕೇಳಲು ಯತ್ನಿಸಿದ. ಪುಷ್ಪ ಅವನ ಕೈ ಹಿಡಿದು

"ನನ್ನ ಬಿಟ್ಟು ಎಲ್ಲಿಗೂ ಹೋಗಬೇಡಿ."

"ಎಲ್ಲಿಗೂ ಹೋಗುವುದಿಲ್ಲ ಡಾರ್ಲಿಂಗ್ - ನೀನು ಸ್ವಲ್ಪ ವಿಶ್ರಾಂತಿ ಪಡೆಯುವುದೊಳ್ಳೆಯದು."

"ಆರು ತಿಂಗಳಿಂದ ಈ ವಿಶ್ರಾಂತಿಯನ್ನು ಒಂದೇ ಸಮನಾಗಿ ಅನುಭವಿಸುತ್ತಿದ್ದೇನೆ."

"ಸುಮ್ಮನೆ ಆಯಾಸಮಾಡಿಕೊಳ್ಳುತ್ತಿರುವೆ."

"ದೊರೆ - ನನಗೊಂದು ಉಪಕಾರಮಾಡುವಿರಾ ?"

"ಹೇಳು."

"ನನ್ನ ತಲೆದಿಂಬಿನ ಕೆಳಗೆ 'ಪವಿತ್ರ ಬೈಬಲ್' (Holy Bible) ಅದೆ. ಅದನ್ನು ತೆಗೆದುಕೊಂಡು 'ಪೇಟರ್‌ನಾಸ್ಟರ್' (Paternoster) ಓದಿ.'

ಪುಷ್ಪನ ವಿಚಿತ್ರ ಪ್ರಾರ್ಥನೆ ಕೇಳಿ ಸಂಜೀವನಿಗೆ ನೋಜಿಗವಾಯಿತು. ಮನಸ್ಸಿಗೆ ಭಯವೂ ಆಯಿತು. ಪುಷ್ಪನ ವಿನಂತಿಯನ್ನು ನಿರಾಕರಿಸುವ ಧೈರ್ಯವಾಗಲಿಲ್ಲ.

ಸಂಜೀವ ಕೈಗೆ ಬೈಬಲ್ ತೆಗೆದುಕೊಂಡು ಹಾಳೆ ತಿರುವಿಹಾಕಿದ. ಮತ್ತಾಯನ ಸುವಾರ್ತೆಯ ಪುಟಗಳಲ್ಲಿ ಒಂದು ಹೇರ್‌ಪಿನ್ ಇತ್ತು. ಆ ಪುಟ ನೋಡಿದ -

ತಕ್ಷಣವೇ ಸಂಜೀವನ ಮನಸ್ಸಿಗೆ ಪುಷ್ಪನ ಉದ್ದೇಶ ಭಾಸವಾಯಿತು. 'ಪಾದ್ರಿ ಮಾಡಬೇಕಾದ ಕೆಲಸವನ್ನು ನನ್ನಿಂದೇಕೆ ಮಾಡಿಸುತ್ತಿದ್ದಾಳೆ' ಎಂದುಕೊಂಡ.

"ಓದಿ ದೊರೆ" ಎಂದಳು.

ಪುಷ್ಪ ಕಣ್ಣುಮುಚ್ಚಿ, ಎದೆಯ ಮೇಲೆ ಕೈ ಜೋಡಿಸಿದಳು. ಸಂಜೀವ ಮೆಲ್ಲನೆ ಓದಲಾರಂಭಿಸಿದ.

"ಪರಲೋಕದಲ್ಲಿರುವ ನಮ್ಮ ತಂದೆಯೇ,
ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ.
ನಿನ್ನ ರಾಜ್ಯವು ಬರಲಿ.
ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ
ಭೂಲೋಕದಲ್ಲಿಯೂ ನೆರವೇರಲಿ.
ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ದಯಪಾಲಿಸು.
ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ
ನಮ್ಮ ತಪ್ಪುಗಳನ್ನು ಕ್ಷಮಿಸು.
ನಮ್ಮನ್ನು ಶೋಧನೆಯೊಳಗೆ ಸೇರಿಸದೆ, ಕೇಡಿನಿಂದ ತಪ್ಪಿಸು."

ಪುಷ್ಪನ ತುಟಿಗಳು ಮಾತ್ರ 'ಆಮೆನ್' ಎಂದು ಅಲುಗಾಡಿದವು.

ಬೈಬಲ್ ಕೈಯಿಂದ ಜಾರಿ ಕೆಳಗೆ ಬಿದ್ದುದನ್ನೂ ಸಂಜೀವ ಗಮನಿಸಲಿಲ್ಲ. ಉದ್ವೇಗಗೊಂಡು

"ಪುಷ್ಪಾ - ಪುಷ್ಪಾ ಸ್ವೀಟ್" ಎಂದು ಕೂಗಿದ.

ಪುಷ್ಪ ಮೆಲ್ಲನೆ ಕಣ್ತೆರೆದು

"ಏನು ದೊರೆ - ಕರೆದಿರಿ."

"ನನ್ನನ್ನು ಬಿಟ್ಟು ಎಲ್ಲಿಗೆ ಹೋಗುತ್ತಿರುವೆ."

"ಎಲ್ಲಿಗೋ ಕಾಣೆ ದೊರೆ."

ಸಂಜೀವ ಆರ್ತನಾಗಿ

"ಇಲ್ಲ ಪುಷ್ಪ - ನಿನ್ನನ್ನು ನಾನು ಬಿಡಲಾರೆ. ನಿನ್ನ ಸಾವನ್ನು ನೋಡುವುದಕ್ಕೆ ಸ್ವಾಮಿ ನನ್ನನ್ನು ಮೃತ್ಯುವಿನಿಂದ ಪಾರುಮಾಡಿರಲಾರ. ನೀನು ಬದುಕಬೇಕು - ನನ್ನ ಬಾಳು ಬೆಳಗಬೇಕು - ಬದುಕಬೇಕು - ಬದುಕ ಬೇಕು ಪುಷ್ಪ."

ಪುಷ್ಪನ ಮುಖ ಹೂ ಅರಳಿದಂತೆ ಅರಳಿತು. ಕಣ್ಣುಗಳಿಂದ ಆನಂದ ಭಾಷ್ಪಗಳು ತೊಟ್ಟಿಕ್ಕಿದವು.

"ಸ್ವಾಮಿಯೇ ಬಂದು ಸ್ವರ್ಗಕ್ಕೆ ಬಾರೆಂದು ಕರೆದರೂ ನಿಮ್ಮನ್ನುಬಿಟ್ಟು ಹೋಗುವುದಿಲ್ಲ ದೊರೆ. ನನ್ನ ದೇವರು ನನ್ನೆದುರಿಗಿರುವಾಗ ಬೇರೆ ದೇವರನ್ನು ಹುಡುಕಿಕೊಂಡು ಏಕೆ ಹೋಗಲಿ."

"ಗುರುದೇವ ಹೇಳಿದ ಮಾತು ನಿಜ ಪುಷ್ಪ - **ಪ್ರೇಮವೇ ದೇವರು – ಅನುಕಂಪವೇ ದೈವಪೂಜೆ – ಸೇವೆಯೇ ಜಪತಪ.**"

ಪುಷ್ಪ ನಸುನಗುತ್ತಾ 'ಅಮೆನ್' (Amen) ಎಂದಳು.

## ಅ. ನ. ಕೃ. ಅವರ ಹೊಸ ಕಾದಂಬರಿಗಳು

( ಅಚ್ಚಿನಲ್ಲಿವೆ )

**೧. ಗಾಜಿನ ಮನೆ :** ಕ್ರಿಯಾಶೀಲ ಸಾಹಿತಿ ಎದುರಿಸಬೇಕಾದ ಸಮಸ್ಯೆಗಳ ಚಿತ್ರ. ನಮ್ಮ ಸಾಹಿತ್ಯ - ವೃತ್ತಪತ್ರಿಕಾಲೋಕದ ಸ್ಥಿತಿಗತಿಗಳ ಮಾರ್ಮಿಕ ವಿವೇಚನೆ. ಈ ಕಾದಂಬರಿ 'ಸಾಹಿತ್ಯರತ್ನ'ದ ಪೂರಕವೂ ಹೌದು : ಸ್ವತಂತ್ರವೂ ಹೌದು.

**೨. ಕಾಮ್ರೇಡ್ ಗಣೇಶ :** ಮಾರ್ಕ್ಸ್‌ವಾದ ಇಂದು ಜಗತ್ತಿನ ಸ್ವರೂಪವನ್ನೇ ಬದಲಾಯಿಸುತ್ತಿದೆ. ಅದನ್ನು ಬಳಸಿಕೊಂಡು ಸೋವಿಯಟ್ ರಷ್ಯಾ ಮತ್ತು ಚೀಣ ಶ್ರಮಜೀವಿಗಳ ರಾಷ್ಟ್ರಗಳನ್ನು ಕಟ್ಟಿದವು. ಭಾರತಕ್ಕೆ ಮಾರ್ಕ್ಸ್‌ವಾದವನ್ನು ಬರಮಾಡಿಕೊಳ್ಳಬೇಕೆಂದು ಕಮ್ಯುನಿಸ್ಟರು ಬಯಸುತ್ತಿದ್ದಾರೆ. ಭಾರತಸಂಸ್ಕೃತಿಗೆ ಸಮರಸವಾಗುವಂತೆ ಮಾರ್ಕ್ಸ್‌ವಾದವನ್ನು ಬರಮಾಡಿಕೊಳ್ಳಬೇಕೆಂದು ಒಂದು ಪಕ್ಷ, ಸೋವಿಯಟ್ ರಷ್ಯಾ ಅನುಸರಿಸಿದ ಮಾರ್ಕ್ಸ್‌ವಾದವನ್ನು ಭಾರತಕ್ಕೆ ತಂದುಕೊಳ್ಳಬೇಕೆಂದು ಇನ್ನೊಂದು ಪಕ್ಷ. ಈ ಪಕ್ಷ ವಿಪಕ್ಷಗಳ ಕಾದಾಟ - ಮಾರ್ಕ್ಸ್ ವಿಚಾರವಾದದ ದುರುಪಯೋಗ - ಹಿಂಸಾವಾದಿಗಳಾದ ಕಮ್ಯುನಿಸ್ಟರ ಒಂದು ತಂಡ ಪ್ರತಿಪಕ್ಷಗಳನ್ನು ನಿಶ್ಶೇಷ ಗೊಳಿಸಲು ಉಪಯೋಗಿಸುವ ಅಸತ್ಯ, ಅಪಪ್ರಚಾರ, - ಅವರ ಜೀವನ, ಕಾರ್ಯವಿಧಾನದ ರೀತಿ ನೀತಿಗಳ ಸಮಗ್ರಚಿತ್ರ.

**೩. ಶೋಕಚಕ್ರ :** ೧೯೪೭ ರಿಂದ ಈಚೆಗೆ - ನಮಗೆ ಸ್ವಾತಂತ್ರ್ಯ ಬಂದ ತರುವಾಯ ಭಾರತದ ರಾಜಕೀಯ ಜೀವನದಲ್ಲಾಗಿರುವ ನೈತಿಕಪತನದ ದಾರುಣಚಿತ್ರ.

ಆ ನಂ ದ್ ಬ್ರ ದ ರ್ಸ್

ಬೆಂಗಳೂರು ೨.

# ಅ. ನ. ಕೃ. ಅವರ ಗ್ರಂಥಗಳು

## ನಮ್ಮ ಪ್ರಕಟನೆಗಳು

| | | |
|---|---|---|
| ಶ್ರೀಮತಿ | ... | ಕಾದಂಬರಿ |
| ಚಿತ್ರವಿಚಿತ್ರ | .. | ,, |
| ಅರುಳು ಮರುಳು | . | ,, |
| ತಾಯಿಯ ಕರುಳು | .. | ,, |
| ಅಮರ ಆಗಸ್ಟ್ | . | ,, |
| ಹೊಸಲುದಾಟಿದ ಹೆಣ್ಣು | .. | ,, |
| ಸಂಧ್ಯಾರಾಗ | ... | ,, |
| ಉದಯರಾಗ | ... | ,, |
| ಜೀವನಯಾತ್ರೆ | | ,, |
| ಸಾಹಿತ್ಯರತ್ನ | .. | ,, |
| ಮುಯಿಗೆ ಮುಯ್ಯಿ | ... | ,, |
| ಕಣ್ಣೀರು | ... | ,, |
| ಕಾಲಚಕ್ರ | .. | ,, |
| ಮಿಂಚು | ... | ಕಥಾಸಂಗ್ರಹ |
| ಶಿ[illegible] | .. | ,, |
| ಶಿಲ್ಪಿ | .. | ,, |
| ಅಗ್ನಿಕನ್ಯೆ | ... | ,, |
| ಮದುವೆಯೋ ಮನೆಹಾಳೋ | ... | ನಾಟಕ |
| ಧನಪ್ರಾಪ್ತ ಲಕ್ಷ್ಮಿ | .. | ,, |
| ಗೋಮುಖವ್ಯಾಘ್ರ | ... | ,, |
| ಸ್ವರ್ಣಮೂರ್ತಿ | . | ,, |
| ಹಿರಣ್ಯಕಶಿಪು | .... | ,, |
| ಕಿತ್ತೂರರಾಣಿ ಚೆನ್ನಮ್ಮ | ... | ರೇಡಿಯೋ ನಾಟಕ |
| ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ (ಭಾಗ ೨) | ... | ಪ್ರಬಂಧಗಳು |
| ಸಾಹಿತ್ಯ ಮತ್ತು ಯುಗಧರ್ಮ | ... | ,, |
| ಕನ್ನಡಕುಲ ರಸಿಕರು | ... | ಸಾಹಿತಿಗಳ ಪರಿಚಯ |
| ಕರ್ನಾಟಕ ಕಲಾವಿದರು (ಭಾಗ ೨) | .... | ಕಲಾವಿದರ ಪರಿಚಯ |

ಆನಂದ್ ಬ್ರದರ್ಸ್ : ಪ್ರಕಾಶಕರು : ಬೆಂಗಳೂರು–೨.

'ನಾವು ಭಾರತವನ್ನು ಬಲಿಕೊಡಬಾರದೆಂಬುದೇ 'ಶ್ರೀಮತಿ' ಕಾದಂಬರಿಯ ಸಂದೇಶ'

ಎಂದು ಅ. ನ. ಕೃ ಮುನ್ನುಡಿಯಲ್ಲಿ ಹೇಳಿದ್ದಾರೆ. ಕಾದಂಬರಿಯಲ್ಲಿ ಒಂದು ಪ್ರಧಾನಪಾತ್ರ ಹೇಳುವ ಮಾತು ಗಮನಾರ್ಹವಾದುದಾಗಿದೆ

'ಲೆನಿನ್ ಮಹಾಶಯರು ಜಗತ್ತಿಗೆ ಕೊಟ್ಟ ಸಂದೇಶ - ದ್ವೇಷ (Hate); ಟ್ರೂಮನ್ ಮಹಾಶಯರು ಜಗತ್ತಿಗೆ ಕೊಟ್ಟ ಸಂದೇಶ ಪರಪೀಡನೆ; ಗಾಂಧೀಜಿ ಜಗತ್ತಿಗೆ ಕೊಟ್ಟ ಸಂದೇಶ ಪ್ರೇಮ (Love). ಇವುಗಳಲ್ಲಿ ನಮಗೆ ಯಾವುದು ಬೇಕು - ಜಗತ್ತಿಗೆ ಯಾವುದು ಬೇಕು ಜಗತ್ತಿನ ಇತಿಹಾಸ ನೋಡಿದರೆ ಜಗತ್ತಿನ ಶಾಂತಿಯನ್ನು ಸಾಧಿಸಿದ ದೇಶ ಭಾರತವೆನ್ನುವುದು ಸ್ವತಃಸಿದ್ಧವಾಗುತ್ತದೆ. ನಮಗೆ - ಹಾಗೂ ಜಗತ್ತಿಗೆ ಬೇಕಾದುದು ಅಮೆರಿಕನ್ ಜೀವನ ಕ್ರಮವೂ (American way of Life) ಅಲ್ಲ; ಕಮ್ಯೂನಿಸ್ಟ್ ಜೀವನಕ್ರಮವೂ (Communist way of Life) ಅಲ್ಲ; ಭಾರತದ ಜೀವನಕ್ರಮ (Indian way of Life) - ಉಪನಿಷತ್ತಿನ ಋಷಿಗಳು ತೋರಿಸಿಕೊಟ್ಟಿರುವ ರಾಜಮಾರ್ಗ.'

ವೈವಾಹಿಕ ಜೀವನದ ಅಸ್ತಿಭಾರ ಯಾವುದು? ಲೈಂಗಿಕಾಕರ್ಷಣೆಯೇ ಏಕತ್ರವಾದ ಆದರ್ಶವೇ? ಜೀವನಸಮರದ ಸಮಯೋಧತ್ವವೇ? ವಿವಾಹ ದೇಹಗಳ ಮಿಳನವಲ್ಲ - ಅಭಿರುಚಿ, ಆದರ್ಶ, ಆನಂದಗಳ ಸಮನ್ವಯ. ದಂಪತಿಗಳು ಜೀವನರಥದ ಎರಡೂ ಮಹಾಶ್ವಗಳು. ಎರಡೂ ಒಂದತ್ತ ಎಳೆದರೆ ವಿವಾಹ ಬೆಲ್ಲ – ಅವರ ಬಾಳು ಬೆಳದಿಂಗಳು; ಎರಡೂ ಬೇರೆ ಬೇರೆ ಮಾರ್ಗ ಅರಸಿಕೊಂಡರೆ ವಿವಾಹ ಬೇವು - ಅವರ ಬಾಳು ನರಕಸದೃಶ. 'ಶ್ರೀಮತಿ' ಹಲವು ವ್ಯಕ್ತಿಗಳ ಮನೋವ್ಯಾಪಾರವನ್ನು ವಿಶ್ಲೇಷಿಸುವ ಕಾದಂಬರಿಯಾಗಿದೆ.

ಈ ಸುದೀರ್ಘ ಕಾದಂಬರಿಯಲ್ಲಿ ನಲವತ್ತು ಮೂರು ಪಾತ್ರಗಳನ್ನು ಸೃಜಿಸಿ ಕಲೆ ಹಾಗೂ ವಿಶ್ಲೇಷಣೆಯ ಮಧುರಮೈತ್ರಿಯನ್ನು ಅ. ನ. ಕೃ